ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೪೨



ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀ

ಆನಂದರಾಮಾಯಣಂ

ಏಳನೆಯ ಭಾಗ

(ಸಂಸ್ಕೃತಮೂಲ, ಕನ್ನಡದ ಅರ್ಥಾನುವಾದ ವಿವರಣೆಗಳೊಡನೆ)

ಮನೋಹರಕಾಂಡ (೧೦—೧೮ ಸರ್ಗಗಳು)

ಪೂರ್ಣಕಾಂಡ (೧—೯ ಸರ್ಗಗಳು)

ಅನುವಾದಕ :

ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ,

ಸಾಹಿತ್ಯ [illegible]

ಕನ್ನಡ ಪಂಡಿತ (ಮೈಸೂರು) ಕನ್ನಡ ವಿದ್ವಾನ್ (ಮದ್ರಾಸ್)

೧೯೫೦

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೪೨



ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀ
ಆನಂದರಾಮಾಯಣಂ

ಏಳನೆಯ ಭಾಗ

(ಸಂಸ್ಕೃತಮೂಲ, ಕನ್ನಡದ ಅರ್ಥಾನುವಾದ ವಿವರಣೆಗಳೊಡನೆ)

ಮನೋಹರಕಾಂಡ (೧೦—೧೮ ಸರ್ಗಗಳು)

ಪೂರ್ಣಕಾಂಡ (೧—೯ ಸರ್ಗಗಳು)

ಅನುವಾದಕ :

ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ,

ಸಾಹಿತ್ಯ ವಿದ್ವಾನ್

ಕನ್ನಡ ಪಂಡಿತ (ಮೈಸೂರು) ಕನ್ನಡ ವಿದ್ವಾನ್ (ಮದ್ರಾಸ್)

೧೯೫೦

॥ ಶ್ರೀರಸ್ತು ॥

ಮುನ್ನುಡಿ

ಇದು ಆನಂದರಾಮಾಯಣದ ಏಳನೆಯಭಾಗವು. ಇಲ್ಲಿಗೆ ಆನಂದ ರಾಮಾಯಣದ ಅನುವಾದವು ಪೂರ್ತಿಯಾಯಿತು. ಇದರಲ್ಲಿ ಮನೋಹರಕಾಂಡ ಪೂರ್ಣಕಾಂಡಗಳೆರಡೂ ಅಡಕವಾಗಿವೆ.

ಇದರಲ್ಲಿ ಸಾರರಾಮಾಯಣವೆಂಬ ಸಂಗ್ರಹರಾಮಾಯಣವು ಉಕ್ತವಾಗಿರುವುದಲ್ಲದೆ ಶ್ರೀರಾಮನು ಪ್ರಜೆಗಳಿಗೂ ಗುರುಜನಕ್ಕೂ ಯಥೋಚಿತವಾಗಿ ಉಪದೇಶಿಸಿರುವ ಆತ್ಮನಿರೂಪಣೆಯು ಬೋಧಪ್ರದವೂ ಯುಕ್ತಿ ಯುಕ್ತವೂ ಆಗಿ ಶಾಸ್ತ್ರಸಮ್ಮತವೆನ್ನಿಸಿಕೊಂಡಿದೆ.

ಅಂತಃಪೂಜೆ ಬಹಿಃಪೂಜೆಗಳು ಕಲ್ಪದಲ್ಲಿರುವಂತೆ ವಿಶದವಾಗಿವೆ. ನವವಿಪ್ರರಿಗೆ ಒಂದೇ ಕಾಲದಲ್ಲಿ ಅವರವರ ಉಪಾಸನಾನುರೂಪವಾಗಿ ಶ್ರೀರಾಮನು ಪ್ರತ್ಯಕ್ಷವಾದ ರೀತಿಯು ಹರ್ಷದಾಯಕವಾಗಿದೆ.

ರಾಮತೋಭದ್ರ ಲಿಂಗತೋಭದ್ರಗಳು ಬಹು ಪ್ರಕಾರವಾಗಿ ವಿವೃತವಾಗಿರುವುದಲ್ಲದೆ ಕಲ್ಪಿಸುವವನಿಗೆ ಮಾರ್ಗದರ್ಶಕವಾಗಿವೆ. ಶ್ರೀರಾಮಪೂಜಾ ವಿಧಾನ ಉದ್ಯಾಪನಾವಿಧಾನಗಳನ್ನು ವಿಶದವಾಗಿ ಹೇಳಿ ಕೇರಳದೇಶದ ವಿಪ್ರನ ಕಥಾಭಾಗವನ್ನು ತೆಗೆದುಕೊಂಡು ಆ ದೇಶದಲ್ಲಿ ಹೆಣ್ಣು ಸಂತಾನವೇ ಹೆಚ್ಚಾಗಿ ಆಗುವ ಕಾರಣವನ್ನು ಪೌರಾಣಿಕ ರೀತಿಯಿಂದ ವಿವರಿಸಿರುವನು

ಕಪಿಸ್ವರೂಪನಾದ ಹನುಮಂತನಿಗೆ ಶೂರನಾದ ರಾವಣನನ್ನು ಜಯಿಸುವ ಶಕ್ತಿಯನ್ನು ರಾಮೋಪದೇಶ ಮಂತ್ರವಾದ ರಾಮನಾಮವು ಕೊಟ್ಟಿತೆಂಬುದನ್ನು ವಿವರಿಸುತ್ತ ಅನೇಕ ವಿಧವಾದ ಗೇಯಮಂತ್ರಗಳನ್ನು ವಿವರಿಸಿರುವನು.

ಶ್ರೀರಾಮನವಮಿಯು ಬಹು ಪುಣ್ಯಕರವಾದ ದಿವಸವೆಂದು ವಿವರಿಸಿ "ರಕಾರ" "ಮಕಾರ"ಗಳ ಶ್ರೇಷ್ಠತೆಯನ್ನು ವರ್ಣಿಸಿರುವನು. ರಾಮಾಯಣವನ್ನು ಪಾರಾಯಣಮಾಡಲು ಕಾಲವು ವಿಶೇಷರೀತಿಯಿಂದ ಉಕ್ತವಾಗಿರುವುದು.

ಶ್ರೀರಾಮನು ಹುಟ್ಟಿದ ಚೈತ್ರಮಾಸದ ಮಹಿಮೆಯೂ ಅವನಿರುವ ಅಯೋಧ್ಯೆಯ ಮಹಿಮೆಯೂ ಶಂಭುವಿನ ಕಥೆಯಿಂದ ಎತ್ತಿಹಿಡಿಯಲ್ಪಟ್ಟಿರುವುವು.

ಶ್ರೀರಾಮನು ಬೇಟೆಯಾಡಲು ಕಾಡಿಗೆ ಹೋಗಿ ಅಲ್ಲಿ ದಾರಿತಪ್ಪಿ ಕಾಡಿನಲ್ಲಿ ಬಳಲಿರುವಾಗ ದುರ್ಗೆಯ ಪೂಜೆಗೆ ಬಂದ ಹೆಂಗಸರು ಉಪಚಾರಮಾಡಿದಾಗ

ಶಿವನೂ ರಾಮನೂ ಒಂದೇ, ದುರ್ಗೆಯೂ ಸೀತೆಯೂ ಒಂದೇ, ಎಂದು ಅದ್ವೈತಭಾವವನ್ನು ಎಲ್ಲರಿಗೂ ತೋರಿಸಿರುವುದು ಸರ್ವಮತೀಯರಿಗೂ ಉಪಾದೇಯವು.

ಶ್ರೀರಾಮ, ಸೀತೆ, ಲಕ್ಷ್ಮಣ, ಭರತ, ಶತ್ರುಘ್ನರ ಕವಚಗಳು ಸರ್ವ ಬಾಧಾಪರಿಹಾರಕವಾಗಿ ಗ್ರಾಹ್ಯವಾದುವು. ಅರ್ಜುನನಿಗೆ ಕಪಿಧ್ವಜನೆಂಬ ಹೆಸರು ಬರುವುದಕ್ಕೆ ಕಾರಣವನ್ನು ಹೇಳುತ್ತ ಹನುಮಂತನಿಗೆ ರಾಮದರ್ಶನವು ಹಿಂದಿನ ವರಪ್ರಾಪ್ತವೆಂಬುದನ್ನು ಹೇಳಿ ಕವಿಯು ತನ್ನ ಗ್ರಂಥದಲ್ಲಿ ಅವಾಪೋದ್ವಾಪಗಳಾಗದಂತೆ ಶ್ಲೋಕಗಳನ್ನು ಸಂಖ್ಯಾಕರಣ ಮಾಡಿರುವನು.

ಶ್ರೀರಾಮನಿಗೆ ತನ್ನ ವಂಶೀಕರಿಂದಲೇ ಮತ್ತೆ ಯುದ್ಧವು ನೇರಿಟ್ಟಿತೆಂದು ಹೇಳಲುಜ್ಜುಗಿಸಿ ಸೋಮವಂಶದ ಕಥೆಯನ್ನು ಹೇಳುತ್ತ ಅವರಿಗೂ ರಾವಣನಿಗೂ ಉಂಟಾದ ಸಂಬಂಧವನ್ನು ತಿಳಿಸಿ ನಳನ ಕಾಲವನ್ನು ಗೊತ್ತುಮಾಡಿ ರಾಮನ ವಯಸ್ಸೂ ಅವನು ಇರಬೇಕಾದುದೂ ಹನ್ನೊಂದುಸಾವಿರದ ಹನ್ನೊಂದು ವರ್ಷಗಳು ಹನ್ನೊಂದುತಿಂಗಳು ಹನ್ನೊಂದುದಿನ ಹನ್ನೊಂದು ಘಳಿಗೆಯೆಂದು ಗೊತ್ತಾಗುವುದು. ಶ್ರೀರಾಮನು ತನ್ನ ಪೂರ್ವಿಕರೊಡನೆ ಯುದ್ಧಮಾಡಲು ಹೊರಟು ಅವರು ಲವಕುಶಾದಿಗಳಿಂದಲೇ ಜಿತರಾಗಲು ಲವಕುಶಾದಿಗಳನ್ನು ರಾಜ್ಯದಲ್ಲಿಟ್ಟು ತಾನೂ ಈ ಪೂರ್ವಿಕರೊಡನೆಯೂ ಅನುಜರೊಡನೆಯೂ ಪೌರರೊಡನೆಯೂ ವೈಕುಂಠಕ್ಕೆ ತೆರಳುವನು.

ಮತ್ತು ಮುಂದೆ ಕೃಷ್ಣಾವತಾರಮಾಡುವಾಗ ಯಾರು ಯಾರು ಏನಾಗಿ ಆಗಬೇಕೆಂಬುದಕ್ಕೆ ತಳಹದಿಯನ್ನು ಹಾಕಿ ಅದನ್ನು ಅನುಗ್ರಹರೂಪದಲ್ಲಿ ಮಾರ್ಪಡಿಸಿರುವುದು ಒಂದು ಯುಕ್ತಿಯೆಂಬುದರಲ್ಲಿ ಸಂದೇಹವೇ ಇರುವುದಿಲ್ಲ.

ನಮ್ಮನ್ನಾಳುವ ಮಹಾಸ್ವಾಮಿಯವರು ಗೀರ್ವಾಣಭಾಷೆಯಲ್ಲಿನ ಗ್ರಂಥಗಳನ್ನು ಈ ರೀತಿಯಾಗಿ ತಿಳಿಗನ್ನಡದಲ್ಲಿ ಎಲ್ಲರಿಗೂ ತಿಳಿಯುವಂತೆ ಅನುವದಿಸುವಂತೆ ಮಾಡಿ ಉಪಕಾರಮಾಡಿಯೂ ಮಾಡುತ್ತಲೂ ಇರುವರು. ಇಂತಹವರನ್ನು ಒಡೆಯರನ್ನಾಗಿ ಹೊಂದಿರುವ ನಾವೇ ಧನ್ಯರು. ಇಂತಹ ಶ್ರೀಮನ್ಮಹಾರಾಜರಾಗಿರುವ ಶ್ರೀ **ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್., ಐ.** ಮಹಾಪ್ರಭುಗಳವರಿಗೆ ಪರಮೇಶ್ವರನು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಟ್ಟು ಸಲಹಲೆಂದು ನಿಶ್ಚಲಭಕ್ತಿಯಿಂದ ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

ಮೈಸೂರು. ⎫ ಅನುವಾದಕ,
26—8—1950 ⎭ ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ.

|| ಶ್ರೀರಸ್ತು ||

ಶ್ರೀ ಮದಾನಂದರಾಮಾಯಣದ ಮನೋಹರಕಾಂಡದ

ವಿಷಯಾನುಕ್ರಮಣಿಕೆ

ಪುಟಸಂಖ್ಯೆ

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಪೂರ್ಣಕಾಂಡದ

ವಿಷಯಾನುಕ್ರಮಣಿಕೆ

ಪುಟಸಂಖ್ಯೆ

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಮನೋಹರಕಾಂಡೇ ದಶಮಸ್ಸರ್ಗಃ

॥ ರಾಮದಾಸ ಉವಾಚ ॥

ಏವಂ ಶಿಷ್ಯ ತ್ವಯಾ ಪೂರ್ವಂ ಯೇ ಯೇ ಪ್ರಶ್ನಾಃ ಕೃತಾಶ್ಶುಭಾಃ ।
ಶ್ರೀರಾಮವಿಷಯೇ ತೇ ತೇ ಮಯೋಕ್ತಾಃ ಪರಮಾದರಾತ್ ॥ ೧ ॥

ಇದಾನೀಂ ತೇ ಪುನಃ ಶ್ರೋತುಮಿಚ್ಛಾಸ್ತಿ ತಾಂ ವದಸ್ವ ಮಾಂ ।
ಯದ್ಯತ್ಪೃಚ್ಛಸಿ ಭೋ ವತ್ಸ ತತ್ಸರ್ವಂ ಪ್ರವದಾಮ್ಯಹಂ ॥ ೨ ॥

॥ ಮಹಾದೇವ ಉವಾಚ ॥

ಏವಂ ಗುರೋರ್ವಚಃ ಶ್ರುತ್ವಾ ವಿಷ್ಣುದಾಸೋ ಬ್ರವೀತ್ಪುನಃ ।

॥ ವಿಷ್ಣುದಾಸ ಉವಾಚ ॥

ಗುರೋ ತ್ವಯಾ ತ್ವಯೋಧ್ಯಾಯಾಂ ಚೈತ್ರಮಾಸಫಲಂ ಮಹತ್ ॥ ೩ ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹತ್ತನೆಯ ಸರ್ಗವು

೧. ರಾಮದಾಸನು ಹೇಳಿದನು—ಎಲೈ ಶಿಷ್ಯನೇ! ನೀನು ರಾಮನ ವಿಷಯದಲ್ಲಿ ಹಿಂದೆ ಯಾವ ಯಾವ ಪ್ರಶ್ನೆಗಳನ್ನು ಕೇಳಿದೆಯೋ ಅವೆಲ್ಲವನ್ನೂ ಕೂಡ ವಿಶ್ವಾಸದಿಂದ ನಿನಗೆ ಹೇಳಿದೆನು.

೨. ಇನ್ನೂ ಏನನ್ನಾದರೂ ಕೇಳಬೇಕೆಂಬ ಇಚ್ಛೆಯಿದ್ದರೆ ಹೇಳು ಆ ವಿಷಯವನ್ನೂ ಕೇಳು. ನೀನು ಏನೇನನ್ನು ಕೇಳುವೆಯೋ ಅವೆಲ್ಲವನ್ನೂ ಹೇಳುತ್ತೇನೆ.

೩-೪. ಮಹಾದೇವನು ಹೇಳಿದನು—ಗುರುವು ಹೀಗೆಂದುದನ್ನು ಕೇಳಿ ವಿಷ್ಣುದಾಸನು ಮತ್ತೆ ಇಂತೆಂದು ಕೇಳಿದನು.

ವಿಷ್ಣುದಾಸನು ಹೇಳಿದನು--ಎಲೈ ಗುರುವೇ! ಅಯೋಧ್ಯೆಯಲ್ಲಿ ಚೈತ್ರ ಮಾಸದ ಫಲವು ಬಹುವಾದುದೆಂದು ಹೇಳಿದೆಯಷ್ಟೆ! ಅದನ್ನು ಈಗ ನನಗೆ

ಪ್ರೋಕ್ತಂ ತದ್ವಿಸ್ತರೇಣಾದ್ಯ ಕಥಯಸ್ವ ಮಮಾಂತಿಕೇ ।
ಕಿಂ ದಾನಂ ಕಿಂ ಫಲಂ ತತ್ರ ಕಮುದ್ದಿಶ್ಯ ಚರೇದ್ವ್ರತಂ ॥ ೪ ॥

ಕೋ ವಿಧಿಶ್ಚ ಕದಾರಂಭಸ್ಸರ್ವಂ ವಿಸ್ತರತೋ ವದ ।
ಯಚ್ಚರಯ್ವಾಂ ರಾಮತೀರ್ಥೇ ಸ್ನಾತವ್ಯಂ ಚೇತಿ ಕೀರ್ತಿತಂ ॥ ೫ ॥

॥ ರಾಮದಾಸ ಉವಾಚ ॥

ಸಾಧು ಸಾಧು ಮಹಾಪ್ರಾಜ್ಞ ಶುಭಃ ಪ್ರಶ್ನಃ ಕೃತಸ್ತ್ವಯಾ ।
ಅಧುನಾ ಚೈತ್ರಮಾಸಸ್ಯ ಮಹಿಮಾ ಪ್ರೋಚ್ಯತೇ ಮಯಾ ॥ ೬ ॥

ಮಾಸಾನಾಂ ಪ್ರಥಮೋ ಮಾಸಶ್ಚೈತ್ರಮಾಸಃ ಪ್ರಕೀರ್ತ್ಯತೇ ।
ಮಾತೇವ ಸರ್ವಜೀವಾನಾಂ ಸದೈವೇಷ್ಟಫಲಪ್ರದಃ ॥ ೭ ॥

ವಿಸ್ತಾರವಾಗಿ ಹೇಳು. ಅಲ್ಲಿ ಯಾವ ದಾನವನ್ನು ಮಾಡಬೇಕು? ಅದರಿಂದ ಬರುವ ಫಲವೇನು? ಯಾರನ್ನು ಉದ್ದೇಶಿಸಿ ವ್ರತವನ್ನು ಮಾಡಬೇಕು?

೫. ಅದನ್ನು ಯಾವಾಗ ಆರಂಭಿಸಬೇಕು? ಅದರ ವಿಧಿಯೇನು? ಸರಯೂ ನದಿಯಲ್ಲಿರುವ ರಾಮತೀರ್ಥದಲ್ಲಿ ಸ್ನಾನಮಾಡಬೇಕೆಂದು ಹೇಳಿದೆಯಷ್ಟೆ. ಅದೆಲ್ಲವನ್ನೂ ವಿಸ್ತಾರವಾಗಿ ಹೇಳು.

೬. ರಾಮದಾಸನು ಹೇಳಿದನು–ಎಲೈ ಶಿಷ್ಯನೇ! ನೀನು ಕೇಳಿದುದು ಚೆನ್ನಾಗಿದೆ. ಮಂಗಳಕರವಾದ ಪ್ರಶ್ನೆಯನ್ನು ನೀನು ಕೇಳಿದ್ದೀಯೆ. ಈವಾಗ ಆ ಚೈತ್ರ ಮಾಸದ ಮಹಿಮೆಯನ್ನು ಹೇಳುತ್ತೇನೆ ಕೇಳು.

೭. ಚೈತ್ರ ಮಾಸವು ಮಾಸಗಳಲ್ಲೆಲ್ಲಾ ಮೊದಲನೆಯದೆಂಬುದಾಗಿ ಹೇಳಿಸಿಕೊಳ್ಳುತ್ತದೆ. ತಾಯಿಯು ಮಕ್ಕಳಿಗೆ ಸಮಸ್ತ ಇಷ್ಟಗಳನ್ನೂ ಕೊಡುವಂತೆ ಎಲ್ಲಾ ಪ್ರಾಣಿಗಳಿಗೂ ಸಮಸ್ತ ಇಷ್ಟವನ್ನೂ ಕೊಡುತ್ತದೆ.

ದಾನಯಜ್ಞವ್ರತಸಮಸ್ಸರ್ವಪಾಪವಿನಾಶನಃ ।
ಧರ್ಮಸಾರಃ ಕ್ರಿಯಾಸಾರಸ್ತಪಸ್ಸಾರಸ್ಸದಾರ್ಚಿತಃ ॥ ೮ ॥

ವಿದ್ಯಾನಾಂ ವೇದವಿದ್ಯೇವ ಮಂತ್ರಾಣಾಂ ಪ್ರಣವೋ ಯಥಾ ।
ಭೂರುಹಾಣಾಂ ಸುರತರುರ್ಧೇನೂನಾಂ ಕಾಮಧೇನುವತ್ ॥ ೯ ॥

ಶೇಷವತ್ಸರ್ವನಾಗಾನಾಂ ಪಕ್ಷಿಣಾಂ ಗರುಡೋ ಯಥಾ ।
ದೇವಾನಾಂ ತು ಯಥಾ ವಿಷ್ಣುಃ ವರ್ಣಾನಾಂ ಬ್ರಾಹ್ಮಣೋ ಯಥಾ ॥

ಪ್ರಾಣವತ್ಪ್ರಿಯವಸ್ತೂನಾಂ ಭಾರ್ಯೇವ ಸುಹೃದಾಂ ಯಥಾ ।
ಆಪಗಾನಾಂ ಯಥಾ ಗಂಗಾ ತೇಜಸಾಂ ತು ರವಿರ್ಯಥಾ ॥ ೧೧ ॥

ಆಯುಧಾನಾಂ ಯಥಾ ವಜ್ರಂ ಧಾತೂನಾಂ ಕಾಂಚನಂ ಯಥಾ ।
ವೈಷ್ಣವಾನಾಂ ಯಥಾ ರುದ್ರೋ ರತ್ನಾನಾಂ ಕೌಸ್ತುಭೋ ಯಥಾ ॥

---

೮. ಆ ಚೈತ್ರ ಮಾಸವು ದಾನ ಯಜ್ಞಗಳ ವ್ರತಕ್ಕೆ ಸಮವಾದುದು. ಎಲ್ಲಾ ಪಾಪಗಳನ್ನೂ ನಾಶಮಾಡುತ್ತದೆ. ಧರ್ಮಗಳಿಗೆ ಸಾರಭೂತವಾದುದು. ಕ್ರಿಯೆಗಳಿಗೆ ಸಾಧನಭೂತವಾದುದು. ತಪಸ್ಸಿಗೆ ಸಾರಭೂತವಾದುದು. ಬಹು ಪೂಜ್ಯವಾದುದು.

೯-೧೩. ಈ ಚೈತ್ರ ಮಾಸವು ವಿದ್ಯೆಗಳಲ್ಲಿ ವೇದವಿದ್ಯೆಯಂತೆ ಶ್ರೇಷ್ಠ ವಾದುದು. ಮಂತ್ರಗಳಲ್ಲಿ ಪ್ರಣವ (ಓಂಕಾರ) ದಂತೆ ಉತ್ತಮವಾದುದು. ಮರ ಗಳಲ್ಲಿ ಕಲ್ಪವೃಕ್ಷದಂತಿರುವುದು. ಹಸುಗಳೊಳಗೆ ಕಾಮಧೇನುವಿನಂತೆ ಕೇಳಿ ದುದನ್ನು ಕೊಡತಕ್ಕದ್ದು. ಸರ್ಪಗಳೊಳಗೆ ಶೇಷನಂತಿರುವುದು. ಪಕ್ಷಿಗಳಲ್ಲಿ ಗರುಡನಂತೆ ಶ್ರೇಷ್ಠವಾದುದು. ದೇವತೆಗಳಲ್ಲಿ ವಿಷ್ಣುವಿನಂತೆಯೂ, ವರ್ಣಗಳಲ್ಲಿ ಬ್ರಾಹ್ಮಣನಂತೆಯೂ, ಪ್ರಿಯವಸ್ತುಗಳಲ್ಲಿ ಪ್ರಾಣದಂತೆಯೂ, ಸ್ನೇಹಿತರೊಳಗೆ ಹೆಂಡತಿಯಂತೆಯೂ, ನದಿಗಳೊಳಗೆ ಗಂಗೆಯಂತೆಯೂ, ತೇಜಸ್ಸುಗಳಲ್ಲಿ ಸೂರ್ಯ ನಂತೆಯೂ, ಆಯುಧಗಳಲ್ಲಿ ವಜ್ರಾಯುಧದಂತೆಯೂ, ಧಾತುಗಳೊಳಗೆ

ಪುಷ್ಪೇಷು ಚ ಯಥಾ ಪದ್ಮಂ ಸರಸಾಂ ಮಾನಸಂ ಯಥಾ ।
ಮಾಸಾನಾಂ ಧರ್ಮಹೇತೂನಾಂ ಚೈತ್ರಮಾಸಸ್ತಥಾಸ್ಮೃತಃ ॥ ೧೩ ॥

ನಾನೇನ ಸದೃಶೋ ಲೋಕೇ ವಿಷ್ಣುಪ್ರೀತಿವಿಧಾಯಕಃ ।
ಚೈತ್ರಸ್ನಾನೇ ಚ ನಿರತೇ ಮೀನೇ ಪ್ರಾಗರುಣೋದಯಾತ್ ॥ ೧೪ ॥

ಲಕ್ಷ್ಮೀಸಹಾಯೋ ಭಗವಾನ್ ಪ್ರೀತಿಂ ತಸ್ಮಿನ್ ಕರೋತ್ಯಲಂ ।
ಜಂತೂನಾಂ ಪ್ರೀಣನಂ ಯದ್ವದನ್ನೇನೈವ ಹಿ ಜಾಯತೇ ॥ ೧೫ ॥

ತದ್ವಚ್ಚೈತ್ರೇ ಚ ಸ್ನಾನೇನ ವಿಷ್ಣುಃ ಪ್ರೀಣಾತ್ಯಸಂಶಯಃ ।
ಯಶ್ಚೈತ್ರಸ್ನಾನನಿರತಾನ್ ಜನಾನ್ ದೃಷ್ಟ್ವಾನುಮೋದತೇ ॥ ೧೬ ॥

ಚಿನ್ನದಂತೆಯೂ, ವಿಷ್ಣುಭಕ್ತರೊಳಗೆ ರುದ್ರನಂತೆಯೂ, ರತ್ನಗಳಲ್ಲಿ ಕೌಸ್ತುಭರತ್ನದಂತೆಯೂ, ಪುಷ್ಪಗಳಲ್ಲಿ ಪದ್ಮದಂತೆಯೂ, ಸರೋವರಗಳಲ್ಲಿ ಮಾನಸ ಸರೋವರದಂತೆಯೂ, ಶ್ರೇಷ್ಠವಾದುದು. ಧರ್ಮಕ್ಕೆ ಕಾರಣವಾದ ಮಾಸಗಳೊಳಗೆ ಚೈತ್ರ ಮಾಸವು ಈ ರೀತಿಯಾಗಿ ಶ್ರೇಷ್ಠವಾದುದು.

೧೪-೧೫ ವಿಷ್ಣುವಿಗೆ ಪ್ರೀತಿಕರವಾದ ಮಾಸವು ಈ ಚೈತ್ರ ಮಾಸದಂತೆ ಮತ್ತೊಂದಿಲ್ಲ. ಸೂರ್ಯನು ಮೀನರಾಶಿಯಲ್ಲಿದ್ದು ಚೈತ್ರಮಾಸವು ಬಂದಿದ್ದಾಗ ಆ ಸ್ನಾನವನ್ನು ಅರುಣೋದಯಕ್ಕೆ ಮುಂಚೆ ಮಾಡಿದರೆ ಆಗ ಆ ಲಕ್ಷ್ಮೀನಾರಾಯಣಸ್ವಾಮಿಯು ಬಹುವಾಗಿ ಪ್ರೀತಿಯನ್ನು ಮಾಡುತ್ತಾನೆ. ಪ್ರಾಣಿಗಳು ಅನ್ನದಿಂದಲೇ ಹೇಗೆ ಪ್ರೀತಿಯಿಂದ ತೃಪ್ತಿಯನ್ನು ಪಡೆಯುತ್ತವೆಯೋ ಹಾಗೆ ವಿಷ್ಣುವು ಚೈತ್ರ ಸ್ನಾನದಿಂದ ಬಹುವಾಗಿ ತೃಪ್ತಿಯನ್ನು ಹೊಂದುತ್ತಾನೆ. ಸಂಶಯವಿಲ್ಲ.

೧೬. ಚೈತ್ರ ಸ್ನಾನದಲ್ಲಿ ಆಸಕ್ತರಾದ ಜನರನ್ನು ಯಾರು ನೋಡಿ ಅನುಮೋದಿಸುತ್ತಾರೆಯೋ ಅದರಿಂದಲೇ ಅವರು ಪಾಪವನ್ನು ಕಳೆದುಕೊಂಡು ವಿಷ್ಣುಲೋಕದಲ್ಲಿ ಸುಖಿಸುತ್ತಾರೆ

ತಾವತಾಪಿ ವಿಮುಕ್ತಾಘೋ ವಿಷ್ಣೋರ್ಲೋಕೇ ಮಹೀಯತೇ ।
ಸಕೃತ್ಸ್ನಾತ್ವಾ ಮೀನಸಂಸ್ಥೇ ಸೂರ್ಯೇ ಪ್ರಾತಃ ಕೃತಾಹ್ನಿಕಃ ॥ ೧೭ ॥

ಮಹಾಪಾಪೈರ್ವಿನಿರ್ಮುಕ್ತೋಽಸೌ ವಿಷ್ಣುಸಾಯುಜ್ಯಮಾಪ್ನುಯಾತ್ ।
ಸ್ನಾನಾರ್ಥಂ ಚೈತ್ರಮಾಸೇ ಯಃ ಪಾದಮೇಕಂ ಚರೇದ್ಯದಿ ॥ ೧೮ ॥

ಸೋಽಶ್ವಮೇಧಾಯುತಾನಾಂ ಚ ಫಲಂ ಪ್ರಾಪ್ನೋತ್ಯಸಂಶಯಃ ।
ಅಥವಾ ಕೂಟಚಿತ್ತಸ್ತು ಕುರ್ಯಾತ್ಸಂಕಲ್ಪಮಾತ್ರಕಃ ॥ ೧೯ ॥

ಸೋಽಪಿ ಕ್ರತುಶತಂ ಪುಣ್ಯಂ ಲಭತ್ಯೇವ ನ ಸಂಶಯಃ ।
ಯೋ ಗಚ್ಛೇದ್ಧನುರಾಯಾಮಂ ಸ್ನಾತುಂ ಮೀನಗತೇ ರವೌ ॥ ೨೦ ॥

ಸರ್ವಬಂಧವಿನಿರ್ಮುಕ್ತೋ ವಿಷ್ಣೋಃ ಸಾಯುಜ್ಯಮಾಪ್ನುಯಾತ್ ।
ತ್ರೈಲೋಕ್ಯೇ ಯಾನಿ ತೀರ್ಥಾನಿ ಬ್ರಹ್ಮಾಂಡಾಂತರ್ಗತಾನಿ ಚ ॥ ೨೧ ॥

---

೧೭. ಮೀನ ಚೈತ್ರದಲ್ಲಿ ಪ್ರಾತಃಸ್ನಾನವನ್ನು ಒಂದುಸಾರಿ ಮಾಡಿ ಆಹ್ನಿಕಗಳನ್ನು ಮಾಡಿದರೆ ಅವನು ಮಹಾಪಾಪಗಳನ್ನು ಕಳೆದುಕೊಳ್ಳುತ್ತಾನೆ. ಮತ್ತು ವಿಷ್ಣುವಿನ ಸಾಯುಜ್ಯವನ್ನು ಹೊಂದುತ್ತಾನೆ.

೧೮. ಸ್ನಾನಕ್ಕೋಸ್ಕರವಾಗಿ ಚೈತ್ರ ಮಾಸದಲ್ಲಿ ಒಂದೇ ಒಂದು ಹೆಜ್ಜೆಯನ್ನು ಎತ್ತಿಟ್ಟರೂ ಅವನು ಹತ್ತು ಸಾವಿರ ಅಶ್ವಮೇಧಗಳ ಫಲವನ್ನು ಹೊಂದುತ್ತಾನೆ. ಸಂಶಯವಿಲ್ಲ.

೧೯. ಯಾವನಾದರೂ ಕಪಟವಾದ ಮನಸ್ಸಿಂದ ಸಂಕಲ್ಪವನ್ನು ಮಾಡಿದರೂ ಕೂಡ ಅವನಿಗೂ ನೂರು ಯಾಗಗಳನ್ನು ಮಾಡಿದಷ್ಟು ಪುಣ್ಯವು ಬರುವುದರಲ್ಲಿ ಸಂಶಯವಿಲ್ಲ.

೨೦-೨೧. ರವಿಯು ಮೀನರಾಶಿಯಲ್ಲಿದ್ದು ಚೈತ್ರಮಾಸ ಬಂದು ಇರುವಾಗ ಸ್ನಾನಕ್ಕೆಂದು ಯಾವನು ಒಂದು ಧನುಸ್ಸಿನಷ್ಟು ಎಂದರೆ ಎರಡು ಮಾರುಗಳಷ್ಟು ಹೋಗುವನೋ ಅವನಿಗೆ ಎಲ್ಲ ಬಂಧನಗಳೂ ಹೋಗಿ ವಿಷ್ಣು ಸಾಯುಜ್ಯವನ್ನು ಹೊಂದುವನು. ಬ್ರಹ್ಮಾಂಡದಲ್ಲಿರುವ ಮೂರು ಲೋಕಗಳಲ್ಲಿನ ತೀರ್ಥಗಳು ಎಲ್ಲವೂ ಅಲ್ಪವಾದ ಹೊರಗಿನ ನೀರಿನಲ್ಲೂ ಬಂದು ಇರುತ್ತವೆ.

ತಾನಿ ಸರ್ವಾಣಿ ಭೋ ಶಿಷ್ಯ ಸಂತಿ ಬಾಹ್ಯಜಲೇಲ್ಪಕೇ ।
ತಾವಲ್ಲಿಖಂತಿ ಪಾಪಾನಿ ಗರ್ಜಂತಿ ಯಮಶಾಸನೇ ॥ ೨೨ ॥

ಯಾವನ್ನ ಕುರುತೇ ಜಂತುಃ ಚೈತ್ರೇ ಮಾಸಿ ಜಲಾಶಯೇ ।
ತೀರ್ಥಾಧಿದೇವತಾಸ್ಸರ್ವಾಃ ಚೈತ್ರೇ ಮಾಸಿ ದ್ವಿಜೋತ್ತಮ ॥ ೨೩ ॥

ಬಹಿರ್ಜಲಂ ಸಮಾಶ್ರಿತ್ಯ ಸದಾ ಸನ್ನಿಹಿತಾಃ ಶಿಶೋ ।
ಸೂರ್ಯೋದಯಂ ಸಮಾರಭ್ಯ ಯಾವತ್ ಷಟ್ ಘಟಿಕಾವಧಿಃ ॥ ೨೪ ॥

ತಿಷ್ಠಂತಿ ಚಾಜ್ಞಯಾ ವಿಷ್ಣೋರ್ನರಾಣಾಂ ಹಿತಕಾಮ್ಯಯಾ ।
ತತ್ರಾಸ್ಪಕುರುತಾಂ ಸ್ನಾನಂ ಶಾಪಂ ದತ್ವಾ ಸುದಾರುಣಂ ॥ ೨೫ ॥

ಸ್ವಸ್ಥಾನಂ ಯಾಂತಿ ಭೋ ಶಿಷ್ಯ ತಸ್ಮಾತ್ಸ್ನಾನಂ ಸಮಾಚರೇತ್ ।
ನ ಹಿ ಚೈತ್ರ ಸಮೋ ಮಾಸೋ ನ ಕೃತೇನ ಸಮಂ ಯುಗಂ ॥ ೨೬ ॥

---

೨೨. ಚೈತ್ರ ಮಾಸದಲ್ಲಿ ಹೊರಗಿನ ನೀರಿನಲ್ಲಿ ಪ್ರಾಣಿಯು ಎಲ್ಲಿಯವರೆಗೆ ಸ್ನಾನಮಾಡುವುದಿಲ್ಲವೋ ಅಲ್ಲಿಯವರೆಗೂ ಪಾಪಗಳು ಯಮನ ಅಪ್ಪಣೆಯಂತೆ ಈ ಪ್ರಾಣಿಯ ಮೇಲೆ ಗರ್ಜಿಸುತ್ತಿರುತ್ತವೆ.

೨೩-೨೪. ಚೈತ್ರ ಮಾಸದಲ್ಲಿ ತೀರ್ಥ ದೇವತೆಗಳೆಲ್ಲವೂ ಹೊರಗಿನ ನೀರಿಗೆ ಹೋಗಿ ಅದನ್ನೇ ಆಶ್ರಯಿಸಿಕೊಂಡಿರುತ್ತವೆ. ಆ ತೀರ್ಥ ದೇವತೆಗಳೆಲ್ಲವೂ ವಿಷ್ಣುವಿನ ಅಪ್ಪಣೆಯಂತೆ ನರರಿಗೆ ಹಿತವನ್ನು ಮಾಡುವ ಅಪೇಕ್ಷೆಯಿಂದ ಸೂರ್ಯೋದಯವನ್ನು ಮೊದಲು ಮಾಡಿಕೊಂಡು ಆರು ಘಳಿಗೆಗಳವರೆಗೂ ನೀರಿನಲ್ಲಿ ಇರುತ್ತವೆ.

೨೫-೨೬. ಆಗಲೂ ಕೂಡ ಅವರು ಸ್ನಾನ ಮಾಡದೆ ಹೋದರೆ ಅವರಿಗೆ ದಾರುಣವಾದ ಶಾಪವನ್ನು ಕೊಟ್ಟು ಅವೆಲ್ಲವೂ ಕೂಡ ಸ್ವಸ್ಥಾನಕ್ಕೆ ಹೊರಟು ಹೋಗುತ್ತವೆ. ಆದ್ದರಿಂದ ಸ್ನಾನವನ್ನು ಮಾಡಿಯೇ ಮಾಡಬೇಕು. ಚೈತ್ರ ಮಾಸಕ್ಕೆ ಸಮವಾದ ಮಾಸವೂ ಇಲ್ಲ. ಕೃತಯುಗಕ್ಕೆ ಸಮವಾದ ಯುಗವೂ ಇಲ್ಲ.

ನ ಚ ವೇದ ಸಮಂ ಶಾಸ್ತ್ರಂ ನ ತೀರ್ಥಂ ಗಂಗಯಾ ಸಮಂ ।
ನ ಜಲೇನ ಸಮಂ ದಾನಂ ನ ಸುಖಂ ಭಾರ್ಯಯಾ ಸಮಂ ॥ ೨೭ ॥

ನ ಹಿ ತೀರ್ಥ ಸಮಂ ಲೋಕೇ ಪವಿತ್ರಂ ಕವಯೋ ವಿದುಃ ।
ತಸ್ಮಾದಯಂ ಚೈತ್ರಮಾಸಃ ಶೇಷಶಾಯಿ ಪ್ರಿಯಃ ಸದಾ ।
ಅವ್ರತೇನ ನಯೇದ್ಯಸ್ತು ಚಾಂಡಾಲಶ್ಚ ಸ ಜಾಯತೇ ॥ ೨೮ ॥

ಯಥಾ ಗೃಹಂ ಸರ್ವಗುಣೋಪಪನ್ನಂ ।
ಪರಿಚ್ಛದೈರ್ಹೀನಮಶೋಭತೇ ಯಥಾ ॥
ಯಥೈವ ಕನ್ಯಾ ಸಕಲೈಸ್ತು ಲಕ್ಷಣೈಃ ।
ಯುಕ್ತಾಪಿ ಜೀವತ್ಪತಿ ಲಕ್ಷಣೋಜ್ಝಿತಾ ॥ ೨೯ ॥

೨೭-೨೮. ವೇದಕ್ಕೆ ಸಮವಾದ ಶಾಸ್ತ್ರವಿಲ್ಲ. ಗಂಗೆಗೆ ಸಮವಾದ ತೀರ್ಥವಿಲ್ಲ. ಜಲದಾನಕ್ಕೆ ಸಮವಾದ ದಾನವಿಲ್ಲ. ಹೆಂಡತಿಗಿಂತಲೂ ಬೇರೆ ಸುಖದಾಯಕರಿಲ್ಲ. ತೀರ್ಥಕ್ಕೆ ಸಮವಾದ ಪವಿತ್ರವಾದ ವಸ್ತುವು ಲೋಕದಲ್ಲಿಲ್ಲವೆಂದು ಮುನಿಗಳು ಹೇಳಿದ್ದಾರೆ. ಆದ್ದರಿಂದಲೇ ಈ ಚೈತ್ರಮಾಸವು ಶೇಷಶಾಯಿಯಾದ ವಿಷ್ಣುವಿಗೆ ಪ್ರಿಯವಾದುದು. ಈ ಚೈತ್ರ ಮಾಸವನ್ನು, ವ್ರತವನ್ನು ಹಿಡಿಯದೆ ಯಾವನು ಕಳೆಯುವನೋ ಅವನು ಚಂಡಾಲನಾಗಿ ಹುಟ್ಟುವನು.

೨೯-೩೦. ಮನೆಯು ಸರ್ವ ಗುಣಗಳಿಂದ ಪೂರ್ಣವಾಗಿದ್ದರೂ ಅದಕ್ಕೆ ಮೇಲುಹೊದಿಕೆಯಿಲ್ಲದಿದ್ದರೆ ಹೇಗೆ ಪ್ರಕಾಶಿಸುವುದಿಲ್ಲವೋ, ಕನ್ಯೆಯು ಸಕಲ ಗುಣಗಳಿಂದಲೂ ಕೂಡಿದ್ದರೂ ಗಂಡನು ಬದುಕಿಲ್ಲದಿದ್ದರೆ ಹೇಗೆ ಶೋಭಿಸುವುದಿಲ್ಲವೋ, ಊಟಕ್ಕೆ ಬೇಕಾದ ಹುಳಿ, ಸಾರು, ಪಲ್ಯಗಳು, ಎಲ್ಲಾ ಸಂಸ್ಕಾರಗಳನ್ನು ಹೊಂದಿದ್ದರೂ ಉಪ್ಪಿಲ್ಲದಿದ್ದರೆ ಹೇಗೆ ರುಚಿಸುವುದಿಲ್ಲವೋ, ಅಧ್ಯಕ್ಷರಿಲ್ಲದಿದ್ದರೆ ಸಭೆಯು ಹೇಗೆ ಪ್ರಕಾಶಿಸುವುದಿಲ್ಲವೋ, ಕನ್ಯೆಯು ಎಲ್ಲಾ ಅಲಂಕಾರಗಳನ್ನು ಹೊಂದಿದ್ದರೂ ವಸ್ತ್ರವನ್ನುಡದಿದ್ದರೆ ಹೇಗೆ ಶೋಭಿಸುವುದಿಲ್ಲವೋ

ಪಾಕಂ ತು ಯದ್ವಲ್ಲವಣೇನ ಹೀನಂ ।
ನ ಶೋಭತೇ ಸರ್ವಗುಣೋಪಪನ್ನಂ ।
ಯಥಾ ಲಲಾಮೈಶ್ಚ ವಿನಾ ಸಭಾ ತೈಃ ।
ವಸ್ತ್ರೇಣ ಹೀನಾ ಲಲನಾ ಚ ಶಿಷ್ಯ ।
ತಥಾನ್ಯಮಾಸೇಷು ಕೃತೋ ಹಿ ಧರ್ಮಃ ।
ಚೈತ್ರೇಣ ಹೀನಶ್ಚ ವೃಥೈವ ಯಾತಿ ॥ ೩೦ ॥

ತಸ್ಮಾತ್ಸರ್ವಪ್ರಯತ್ನೇನ ಯೇನ ಕೇನಾಪಿ ದೇಹಿನಾ ।
ಚೈತ್ರಮಾಸಸ್ಯ ಯೋ ಧರ್ಮಃ ಕರ್ತವ್ಯ ಇತಿ ನಿಶ್ಚಯಃ ॥ ೩೧ ॥

ನ ನಂದಸೂನೋಃ ಪೃಥಗಸ್ತಿ ರಾಮೋ ।
ನ ರಾಮತೋನ್ಯೋ ವಸುದೇವಸೂನುಃ ॥
ಅತಸ್ತ್ವಯೋಧ್ಯಾಪುರಪಾಲಕಸ್ಯ ।
ಚೈತ್ರೇ ತು ಕಾರ್ಯಂ ವಿಧಿವತ್ಪ್ರಪೂಜನಂ ॥ ೩೨ ॥

ಜಾನಕೀಕಾಂತಮುದ್ದಿಶ್ಯ ಮೀನಸಂಸ್ಥೇ ದಿವಾಕರೇ ।
ಪ್ರಾತಃ ಸ್ನಾತ್ವಾ ಜಪೇದ್ರಾಮಮನ್ಯಥಾ ನರಕಂ ವ್ರಜೇತ್ ॥ ೩೩ ॥

ಆ ರೀತಿಯಾಗಿ ಇತರ ಮಾಸಗಳಲ್ಲಿ ಮಾಡಿದ ಧರ್ಮವು ಚೈತ್ರದಲ್ಲಿ ಧರ್ಮವನ್ನು ಮಾಡದಿದ್ದರೆ ಶೋಭಿಸುವುದಿಲ್ಲ. ಅವು ವ್ಯರ್ಥವಾಗುತ್ತವೆ.

೩೧. ಆದ್ದರಿಂದ ಯಾವ ಪ್ರಾಣಿಯೇ ಆಗಲಿ, ಎಷ್ಟೇ ಕಷ್ಟ ಬಂದರೂ ಎಲ್ಲಾ ಪ್ರಯತ್ನಗಳಿಂದಲೂ ಕೂಡ ಚೈತ್ರ ಮಾಸದಲ್ಲಿ ಮಾಡತಕ್ಕ ಧರ್ಮವನ್ನು ಮಾಡಿಯೇ ತೀರಬೇಕು. ಇದು ನಿಶ್ಚಯವು.

೩೨. ನಂದನ ಮಗನಾದ ಕೃಷ್ಣನಿಗಿಂತಲೂ, ರಾಮನು ಬೇರೆಯಾದವನಲ್ಲ. ರಾಮನಿಗಿಂತಲೂ ವಸುದೇವನ ಮಗನಾದ ಕೃಷ್ಣನೂ ಬೇರೆಯಲ್ಲ. ಆದ್ದರಿಂದ ಅಯೋಧ್ಯಾಪಾಲಕನಾದ ರಾಮನಿಗೆ ಚೈತ್ರ ಮಾಸದಲ್ಲಿ ವಿಧಿವತ್ತಾಗಿ ಪೂಜೆಯನ್ನು ಮಾಡಬೇಕು.

೩೩. ಸೂರ್ಯನು ಮೀನರಾಶಿಯಲ್ಲಿದ್ದು ಚೈತ್ರ ಮಾಸವು ಬಂದಾಗ ಜಾನಕೀ ಕಾಂತನಾದ ರಾಮನನ್ನು ಉದ್ದೇಶಿಸಿ ಪ್ರಾತಃಕಾಲದಲ್ಲಿ ಸ್ನಾನವನ್ನು ಮಾಡಿ ರಾಮತಾರಕ ಮಂತ್ರವನ್ನು ಜಪಿಸಬೇಕು. ಹಾಗಿಲ್ಲದಿದ್ದರೆ ಅವನು ನರಕಕ್ಕೆ ಹೋಗುವನು.

ಚೈತ್ರಮಾಸೋ ಹಿ ಸಕಲಃ ಸೀತಾರಾಘವದೈವತಃ ।
ಯದ್ಯತ್ಕರ್ಮ ಹಿ ತತ್ಸರ್ವಂ ತಮುದ್ದಿಶ್ಯ ಚರೇನ್ನರಃ ॥ ೩೪ ॥

ಜಾನಕೀಕಾಂತ ಹೇ ರಾಮ ಚೈತ್ರಮೀನಗತೇ ರವೌ ।
ಪ್ರಾತಃಸ್ನಾನಂ ಕರಿಷ್ಯಾಮಿ ನಿರ್ವಿಘ್ನಂ ಕುರು ರಾಘವ ॥ ೩೫ ॥

ಚೈತ್ರೇದ್ಯ ಮೀನಗೇ ಭಾನೌ ಪ್ರಾತಃಸ್ನಾನಪರಾಯಣಃ ।
ಅರ್ಘ್ಯಂ ತೇಹಂ ಪ್ರದಾಸ್ಯಾಮಿ ಗೃಹಾಣ ರಘುನಾಯಕ ॥ ೩೬ ॥

ಗಂಗಾದ್ಯಾಃ ಸರಿತಃ ಸರ್ವಾಃ ತೀರ್ಥಾನಿ ಜಲದಾ ನದಾಃ ।
ಪ್ರತಿಗೃಹ್ಯ ಮಯಾ ದತ್ತಮರ್ಘ್ಯಂ ಸಮ್ಯಕ್ಪ್ರಸೀದಥ ॥ ೩೭ ॥

ಬ್ರಹ್ಮಾದ್ಯಾಸ್ಸರಿತಃ ಸರ್ವಾ ಋಷಯೋ ಯೇ ಚ ವೈಷ್ಣವಾಃ ।
ತೇ ಗೃಹ್ಣಂತು ಮಯಾ ದತ್ತಂ ಪ್ರಸೀದಂತ್ವರ್ಘ್ಯದಾನತಃ ॥ ೩೮ ॥

---

೩೪. ಚೈತ್ರಮಾಸಕ್ಕೆಲ್ಲವೂ ಆ ಶ್ರೀರಾಮನೇ ದೇವತೆಯು. ಆದ್ದರಿಂದ ನಾವು ಆಗ ಯಾವ ಯಾವ ಕರ್ಮಗಳನ್ನು ಮಾಡುತ್ತೇವೆಯೋ ಅವೆಲ್ಲವನ್ನೂ ಅವನನ್ನು ಉದ್ದೇಶಿಸಿಯೇ ಮಾಡಬೇಕು.

೩೫. ಜಾನಕೀ ಕಾಂತನಾದ ಎಲೈ ರಾಮನೇ! ಸೂರ್ಯನು ಮೀನರಾಶಿಯಲ್ಲಿದ್ದು ಚೈತ್ರಮಾಸ ಬಂದಿರುವಾಗ ಪ್ರಾತಸ್ನಾನವನ್ನು ಮಾಡುತ್ತೇನೆ. ಎಲೈ ರಾಘವನೇ! ಅದನ್ನು ನಿರ್ವಿಘ್ನವಾಗಿ ನಡೆಸು.

೩೬. ಸೂರ್ಯನು ಮೀನರಾಶಿಯಲ್ಲಿದ್ದು ಚೈತ್ರಮಾಸ ಬಂದಿರುವಾಗ ಪ್ರಾತಃಸ್ನಾನವನ್ನು ಮಾಡುತ್ತ ನಿನಗೆ ಅರ್ಘ್ಯವನ್ನು ಕೊಡುತ್ತೇನೆ, ಎಲೈ ರಘುನಾಯಕನೇ! ಅದನ್ನು ನೀನು ಸ್ವೀಕರಿಸು.

೩೭. ಗಂಗೆಯೇ ಮುಂತಾದ ಎಲ್ಲಾ ನದಿಗಳೂ ತೀರ್ಥಗಳೂ ಮತ್ತು ನದಿಗಳೂ ನಾನು ಕೊಟ್ಟ ಅರ್ಘ್ಯವನ್ನು ತೆಗೆದುಕೊಂಡು ನನಗೆ ಪ್ರಸನ್ನರಾಗಿ ಆಗಲಿ.

೩೮. ಬ್ರಹ್ಮನೇ ಮುಂತಾದ ದೇವತೆಗಳೂ, ಎಲ್ಲಾ ನದಿಗಳೂ, ಋಷಿಗಳೂ, ವೈಷ್ಣವರೂ ಎಲ್ಲರೂ ಕೂಡ ನಾನು ಕೊಟ್ಟ ಅರ್ಘ್ಯವನ್ನು ತೆಗೆದು ಕೊಂಡು ನನಗೆ ಪ್ರಸನ್ನರಾಗಲಿ.

ಋಷಯಃ ಪಾಪಿನಾಂ ಶಾಸ್ತಾ ಯಮ ತ್ವಂ ಸಮದರ್ಶನಃ ।
ಗೃಹಾಣಾರ್ಘ್ಯಂ ಮಯಾ ದತ್ತಂ ಯಥೋಕ್ತಫಲದೋ ಭವ ॥ ೩೯ ॥

ಇತಿ ಚಾರ್ಘ್ಯಂ ಸಮರ್ಪ್ಯಾಥ ಪಶ್ಚಾತ್ಸ್ನಾನಂ ಸಮಾಚರೇತ್ ।
ವಾಸಸೀ ಪರಿಧಾಯಾಥ ಕೃತ್ವಾ ಕರ್ಮಾಣಿ ಸರ್ವಶಃ ॥ ೪೦ ॥

ಜಾನಕೀಕಾಂತಮಭ್ಯರ್ಚ್ಯ ಪ್ರಸೂನೈರ್ಮಧುಸಂಭವೈಃ ।
ಶ್ರುತ್ವಾ ರಾಮಕಥಾಂ ದಿವ್ಯಾಮೇತನ್ಮಾಸಪ್ರಶಂಸಿನೀಂ ॥ ೪೧ ॥

ಕೋಟಿಜನ್ಮಾರ್ಜಿತಾತ್ಪಾಪಾನ್ಮುಕ್ತೋ ಮೋಕ್ಷಮವಾಪ್ನುಯಾತ್ ।
ಚೈತ್ರೇ ಯಃ ಕಾಂಸ್ಯಭೋಜೀ ಹಿ ತಥಾ ಚಾಶ್ರುತಸತ್ಕಥಃ ॥ ೪೨ ॥

---

೩೯. ಎಲೈ ಯಮನೇ! ನೀನು ಶ್ರೇಷ್ಠನು. ಪಾಪಿಗಳನ್ನು ಶಿಕ್ಷಿಸತಕ್ಕವನು. ಎಲ್ಲರಲ್ಲಿಯೂ ಸಮವಾಗಿರತಕ್ಕವನು. ನಾನು ನಿನಗೆ ಕೊಡುವ ಅರ್ಘ್ಯವನ್ನು ತೆಗೆದುಕೊಂಡು ನನಗೆ ಯಥೋಕ್ತವಾದ ಫಲವನ್ನು ಕೊಡು.

೪೦. ಈ ರೀತಿಯಾಗಿ ಎಲ್ಲರಿಗೂ ಅರ್ಘ್ಯವನ್ನು ಕೊಟ್ಟು ಅನಂತರ ಮತ್ತೆ ಸ್ನಾನವನ್ನು ಮಾಡಬೇಕು. ಅನಂತರ ಮಡಿಯಾದ ಬಟ್ಟೆಗಳನ್ನು ಧರಿಸಿಕೊಂಡು ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ಮಾಡಬೇಕು.

೪೧ ಅನಂತರ ಜಾನಕೀ ಕಾಂತನಾದ ರಾಮನನ್ನು ಒಳ್ಳೆಯ ಹೂವುಗಳನ್ನು ತಂದು ಪೂಜಿಸಬೇಕು. ಆಗ ರಾಮ ಕಥೆಯನ್ನೂ ಚೈತ್ರ ಮಾಹಾತ್ಮ್ಯೆಯನ್ನೂ ಕೇಳಬೇಕು.

೪೨. ಹೀಗೆ ಮಾಡಿದರೆ ಕೋಟಿ ಜನ್ಮಗಳಿಂದಲೂ ಮಾಡಿದ ಪಾಪಗಳನ್ನು ಕಳೆದುಕೊಂಡು ಮೋಕ್ಷವನ್ನು ಹೊಂದುತ್ತಾನೆ. ಚೈತ್ರ ಮಾಸದಲ್ಲಿ ಕಂಚಿನ ಪಾತ್ರೆಯಲ್ಲಿ ಭೋಜನ ಮಾಡಕೂಡದು. ಆ ಸ್ವಾಮಿಯ ಕಥೆಯನ್ನು ಕೇಳಬೇಕು

ನ ಸ್ನಾತೋ ಚಾಪ್ಯದಾತಾ ಚ ನರಕಾನೇವ ವಿಂದತಿ।
ಯಥಾ ಮಾಘಃ ಪ್ರಯಾಗೇ ಹಿ ಸ್ನಾತವ್ಯಃ ಸುಖಮಿಚ್ಛತಾ ॥ ೪೩ ॥

ಕಾರ್ತಿಕೋಽಪಿ ಯಥಾ ಕಾಶ್ಯಾಂ ಪಂಚಗಂಗಾಜಲೇ ಸ್ಮೃತಃ।
ದ್ವಾರಕಾಯಾಂ ಯಥಾ ಪ್ರೋಕ್ತೋ ವೈಶಾಖೋ ಮಾಧವಪ್ರಿಯಃ ॥

ಅಯೋಧ್ಯಾಯಾಂ ರಾಮತೀರ್ಥೇ ತಥಾ ಚೈತ್ರಃ ಪ್ರಕೀರ್ತಿತಃ।
ಪ್ರಯಾಗೇ ಮಾಸಮಾತ್ರೇಣ ಯತ್ಫಲಂ ಪ್ರಾಪ್ಯತೇ ನರೈಃ ॥ ೪೫ ॥

ಅಯೋಧ್ಯಾಯಾಂ ರಾಮತೀರ್ಥೇ ಸಕೃತ್ಸ್ನಾನೇನ ತತ್ಫಲಂ।
ವೈಶಾಖದ್ವಾದಶಭವಂ ಪುಣ್ಯಂ ಯದ್ಗೋಮತೀಜಲೇ ॥ ೪೬ ॥

---

೪೩. ಚೈತ್ರ ಮಾಸದಲ್ಲಿ ಕಂಚಿನ ಪಾತ್ರೆಯಲ್ಲಿ ಊಟ ಮಾಡಿಕೊಂಡು ಆ ಸ್ವಾಮಿಯ ಕಥೆಗಳನ್ನು ಕೇಳದೆ, ಚೈತ್ರ ಸ್ನಾನವನ್ನು ಮಾಡದೆ, ದಾನವನ್ನೂ ಮಾಡದೆ ಇದ್ದರೆ ಅವನು ನರಕಕ್ಕೆ ಹೋಗುತ್ತಾನೆ.

೪೪-೪೫. ಸುಖವನ್ನು ಅಪೇಕ್ಷಿಸುವವನು ಮಾಘ ಮಾಸದಲ್ಲಿ ಕಾಶಿಯಲ್ಲಿ ಸ್ನಾನ ಮಾಡಿದರೆ ಎಷ್ಟು ಪುಣ್ಯವು ಬರುವುದೋ, ಕಾರ್ತಿಕ ಮಾಸದಲ್ಲಿ ಕಾಶಿಯಲ್ಲಿ, ಪಂಚಗಂಗೆಯಲ್ಲ ಸ್ನಾನ ಮಾಡಿದರೆ ಯಾವ ಫಲವುಂಟೋ, ವೈಶಾಖದಲ್ಲಿ ದ್ವಾರಕೆಯಲ್ಲಿ ಸ್ನಾನಮಾಡಿದರೆ ಯಾವ ಪುಣ್ಯವು ಬರುವುದೋ ಅದೇ ರೀತಿಯಾದ ಪುಣ್ಯವು ಅಯೋಧ್ಯೆಯ ರಾಮತೀರ್ಥದಲ್ಲಿ ಚೈತ್ರ ಸ್ನಾನದಿಂದ ಬರುವುದು.

೪೬-೪೭. ಪ್ರಯಾಗದಲ್ಲಿ ಒಂದು ತಿಂಗಳಕಾಲ ಸ್ನಾನ ಮಾಡಿದರೆ ಜನರಿಗೆ ಯಾವ ಪುಣ್ಯ ಬರುವುದೋ, ಆ ಫಲವು ಅಯೋಧ್ಯೆಯಲ್ಲಿ ಒಂದು ಬಾರಿ ಸ್ನಾನಮಾಡುವುದರಿಂದಲೇ ಬರುತ್ತದೆ. ಗೋಮತಿಯಲ್ಲಿ ಹನ್ನೆರಡು ವೈಶಾಖ ಮಾಸಗಳಲ್ಲಿ ಸ್ನಾನ ಮಾಡಿದರೆ ಯಾವ ಫಲವು ಬರುವುದೋ ಆ ಫಲವು

ತತ್ಪುಣ್ಯಂ ಶರಯೂತೋಯೇಯೋಧ್ಯಾಯಾಂ ಪ್ರಾಪ್ಯತೇ ನರೈಃ ।
ಚೈತ್ರೇ ಮಾಸಿ ತ್ರಿಭಿಃ ಸ್ನಾನೈಃ ರಾಮತೀರ್ಥೇ ನ ಸಂಶಯಃ ॥ ೪೭ ॥

ಕಾರ್ತಿಕೇ ಪಂಚಗಂಗಾಯಾಂ ಯೈಃ ಸ್ನಾನಂ ದ್ವಾದಶಾಬ್ದಕಂ ।
ಯೋಧ್ಯಾಯಾಂ ರಾಮತೀರ್ಥೇ ಚೈತ್ರೇ ಪಕ್ಷೇಣ ತತ್ಫಲಂ ॥ ೪೮ ॥

ಅಯೋಧ್ಯಾ ದುರ್ಲಭಾ ಲೋಕೇ ನರಾಣಾಂ ಪಾಪಕಾರಿಣಾಂ ।
ತಾವದ್ಗರ್ಜಂತಿ ಪಾಪಾನಿ ಯಾವದ್ದೃಷ್ಟಾ ನ ಸಾ ಪುರೀ ॥ ೪೯ ॥

ಅಯೋಧ್ಯಾಯಾಂ ಯಥಾ ಭಾವೋ ತಥಾ ರಾಮಕೃತಾನಿ ಚ ।
ಜಗತ್ಯಾಂ ಯಾನಿ ತೀರ್ಥಾನಿ ತತ್ರ ಸ್ನಾನಂ ವಿಧೀಯತಾಂ ॥ ೫೦ ॥

ಅಯೋಧ್ಯೆಯ ಸರಯೂ ನದಿಯ ರಾಮ ತೀರ್ಥದಲ್ಲಿ ಚೈತ್ರ ಮಾಸದಲ್ಲಿ ಮೂರು ಸ್ನಾನಗಳನ್ನೂ ಮಾಡುವುದರಿಂದಲೇ ಬರುತ್ತದೆ.

೪೮. ಗಂಗಾನದಿಯಲ್ಲಿ ಹನ್ನೆರಡು ವರ್ಷಗಳ ಕಾಲ ಕಾರ್ತಿಕ ಮಾಸದಲ್ಲಿ ಸ್ನಾನ ಮಾಡಿದರೆ ಯಾವ ಫಲವು ಬರುವುದೋ ಅದನ್ನು ಅಯೋಧ್ಯೆಯ ರಾಮ ತೀರ್ಥದಲ್ಲಿ ಚೈತ್ರ ಮಾಸದಲ್ಲಿ ಒಂದು ಪಕ್ಷದ ಸ್ನಾನದಿಂದಲೇ ಹೊಂದುತ್ತಾನೆ.

೪೯. ಪಾಪಿಗಳಾದ ನರರಿಗೆ ಲೋಕದಲ್ಲಿ ಅಯೋಧ್ಯೆಯು ಸಿಕ್ಕುವುದು ದುರ್ಲಭವು. ಆ ಅಯೋಧ್ಯೆಯನ್ನು ನೋಡುವವರೆಗೂ ಪಾಪಗಳು ನಾನು ಹೆಚ್ಚು ತಾನು ಹೆಚ್ಚು ಎಂದು ಗರ್ಜಿಸುತ್ತವೆ.

೫೦. ರಾಮನು ಇತರ ಕಡೆಗಳಲ್ಲಿ ಮಾಡಿರುವ ತೀರ್ಥಗಳಲ್ಲಿ ಅಯೋಧ್ಯೆಯಲ್ಲಿಟ್ಟಿರುವ ಭಾವವನ್ನೇ ಇಟ್ಟುಕೊಂಡು ಸ್ನಾನವನ್ನು ಮಾಡಿರಿ. ಅಯೋಧ್ಯೆಗೆ ಹೋಗುವುದಕ್ಕಾಗದಿದ್ದರೆ ಆಗ ಇತರ ಅವನ ತೀರ್ಥಗಳಲ್ಲಿ ಆ ರೀತಿಯಾಗಿ ಸ್ನಾನವನ್ನು ಮಾಡಿರಿ.

ಯತ್ರಾಯೋಧ್ಯಾ ಪುರೀ ನಾಸ್ತಿ ಸ್ನಾನಾರ್ಥಂ ಸರಯೂರ್ನ ಚ ।
ರಾಮತೀರ್ಥಂ ನ ಯತ್ರಾಸ್ತಿ ತದಾ ತೀರ್ಥೇಷು ಕಾರಯೇತ್ ॥ ೫೧ ॥

ತೈಲಾಭ್ಯಂಗಂ ದಿವಾಸ್ವಾಪಂ ತಥಾ ವೈ ಕಾಂಸ್ಯಭೋಜನಂ ।
ಖಟ್ವಾನಿದ್ರಾ ಗೃಹೇ ಸ್ನಾನಂ ನಿಷಿದ್ಧಸ್ಯ ಚ ಭಕ್ಷಣಂ ॥ ೫೨ ॥

ಚೈತ್ರೇ ತು ವರ್ಜಯೇದಷ್ಟೌ ದ್ವಿಭುಕ್ತಂ ನಕ್ತಭೋಜನಂ ।
ಚೈತ್ರಮಾಸೇ ತು ಮಧ್ಯಾಹ್ನೇ ಶ್ರಾಂತಾನಾಂ ಚ ದ್ವಿಜನ್ಮನಾಂ ॥ ೫೩ ॥

ಪಾದಾವನೇಜನಂ ಕುರ್ಯಾತ್ತದ್ವ್ರತಂ ತು ವ್ರತೋತ್ತಮಂ ।
ಮಾರ್ಗೇಧ್ವಗಾನಾಂ ಯೋ ಮರ್ತ್ಯಃ ಪ್ರಪಾದಾನಂ ಚ ಚೈತ್ರಕೇ ॥ ೫೪ ॥

---

೫೧. ಸ್ನಾನಕ್ಕೆ ಅಯೋಧ್ಯೆಗೆ ಹೋಗಲಾಗದಿದ್ದರೆ ಸರಯೂ ನದಿಯಿರುವಲ್ಲಿಯಾದರೂ ಸ್ನಾನವನ್ನು ಮಾಡಿರಿ. ಆ ಸರಯೂ ನದಿಯಲ್ಲಿಯೂ ಆಗದಿದ್ದರೆ ಇತರ ಕಡೆಯಲ್ಲಿರುವ ರಾಮತೀರ್ಥದಲ್ಲಿ ಸ್ನಾನವನ್ನು ಮಾಡಿರಿ. ಆ ರಾಮತೀರ್ಥವೂ ಅಲ್ಲಿಲ್ಲದಿದ್ದರೆ ಆಗ ಇತರ ತೀರ್ಥಗಳಲ್ಲಿಯಾದರೂ ಸ್ನಾನವನ್ನು ಮಾಡಬೇಕು.

೫೨. ಎಣ್ಣೆ ಹಚ್ಚಿಕೊಂಡು ಸ್ನಾನ ಮಾಡುವುದು, ಹಗಲು ಮಲಗುವುದು, ಕಂಚಿನ ಪಾತ್ರೆಯಲ್ಲಿ ಭೋಜನ ಮಾಡುವುದು, ಮಂಚದ ಮೇಲೆ ಮಲಗುವುದು, ಮನೆಯಲ್ಲಿಯೇ ಸ್ನಾನ ಮಾಡುವುದು, ನಿಷಿದ್ಧವಾದ ಪದಾರ್ಥಗಳನ್ನು ತಿನ್ನುವುದು, ಎರಡು ಬಾರಿ ಊಟ ಮಾಡುವುದು, ರಾತ್ರಿಯಲ್ಲಿ ಭೋಜನ ಇವೆಂಟನ್ನೂ ಚೈತ್ರ ಮಾಸದಲ್ಲಿ ಬಿಡಬೇಕು. ನಿಷಿದ್ಧವು.

೫೩-೫೪. ಚೈತ್ರ ಮಾಸದಲ್ಲಿ ಮಧ್ಯಾಹ್ನ ಕಾಲದಲ್ಲಿ ಶ್ರಾಂತರಾಗಿರುವ ಬ್ರಾಹ್ಮಣರಿಗೆ ಕಾಲುಗಳನ್ನು ತೊಳೆಯಬೇಕು. ಇದು ಉತ್ತಮವಾದ ವ್ರತವು. ಈ ಚೈತ್ರ ಮಾಸದಲ್ಲಿ ದಾರಿಯಲ್ಲಿ ನಡೆಯುವವರಿಗೆ ಅರವಟ್ಟಿಗೆಗಳನ್ನಿಡಸಬೇಕು.

ಮಾರ್ಗೇ ಛಾಯಾಂ ತು ಯಃ ಕುರ್ಯಾತ್ಸ ಸ್ವರ್ಗೇ ಚ ಮಹೀಯತೇ ।
ಸಲಿಲಂ ಸಲಿಲಾಕಾಂಕ್ಷೀ ಛಾಯಾಂ ಛಾಯಾಮಪೀಚ್ಛತಿ ॥ ೫೫ ॥

ವ್ಯಜನಂ ವ್ಯಜನಾಕಾಂಕ್ಷೀ ದಾನಮೇತತ್ತು ಚೈತ್ರಕೇ ।
ಜಲಂ ಛತ್ರಂ ತು ವ್ಯಜನಂ ದಾನಂ ಮೀನೇ ವಿಶಿಷ್ಯತೇ ॥ ೫೬ ॥

ಚೈತ್ರೇ ಮಾಸೇ ತು ಸಂಪ್ರಾಪ್ತೇ ಬ್ರಾಹ್ಮಣಾಯ ಕುಟುಂಬಿನೇ ।
ಅದತ್ವೋದಕಕುಂಭಂ ತು ಚಾತಕೋ ಭುವಿ ಜಾಯತೇ ॥ ೫೭ ॥

ಚೈತ್ರೇ ದೇಯಂ ಜಲಂ ಚಾನ್ನಂ ದೇಯಾ ಶಯ್ಯಾ ಮನೋರಮಾ ।
ಆದರ್ಶದಾನಂ ತಾಂಬೂಲಗುಡದಾನೇ ಪ್ರಕಾರಯೇತ್ ॥ ೫೮ ॥

ಗೋಧೂಮತುವರೀದಾನಂ ದಾನಂ ದಧ್ಯೋದನಸ್ಯ ಚ ।
ಘೃತಯುಕ್ತಂ ಕಾಂಸ್ಯಪಾತ್ರಂ ದಾನಮಿಕ್ಷುರಸಸ್ಯ ಚ ॥ ೫೯ ॥

೫೫-೫೬. ದಾರಿ ನಡೆಯುವವರಿಗೆ ನೆರಳು ಸಿಕ್ಕುವಂತೆ ಏರ್ಪಡಿಸಬೇಕು. ಇಂತಹವನು ಸ್ವರ್ಗದಲ್ಲಿ ಸುಖಿಸುತ್ತಾನೆ. ನೀರು ಬೇಕೆಂದಿರುವವನು ನೀರನ್ನೂ ನೆರಳು ಬೇಕೆಂದಿರುವವನು ನೆರಳನ್ನೂ, ವ್ಯಜನವು ಬೇಕೆಂದಿರುವವನು ವ್ಯಜನವನ್ನೂ ಈ ಚೈತ್ರ ಮಾಸದಲ್ಲಿ ದಾನ ಮಾಡಿದರೆ ಅವನವನು ಅದದನ್ನು ಹೊಂದುತ್ತಾನೆ ಜಲ ದಾನವೂ, ಛತ್ರಿ ದಾನವೂ, ವ್ಯಜನ ದಾನವೂ ಈ ಮೀನ ಚೈತ್ರದಲ್ಲಿ ಬಹು ವಿಶೇಷವಾದ ಫಲವನ್ನು ಕೊಡುತ್ತವೆ.

೫೭. ಚೈತ್ರ ಮಾಸವು ಬಂದಾಗ ಕುಟುಂಬಿಯಾದ ಬ್ರಾಹ್ಮಣನಿಗೆ ಉದಕುಂಭವನ್ನು ದಾನ ಮಾಡಬೇಕು. ಹಾಗೆ ದಾನ ಮಾಡದಿದ್ದರೆ ಅವನು ಲೋಕದಲ್ಲಿ ಚಾತಕಪಕ್ಷಿಯಾಗಿ ಹುಟ್ಟುತ್ತಾನೆ.

೫೮-೬೦. ಚೈತ್ರ ಮಾಸದಲ್ಲಿ ನೀರು, ಅನ್ನ, ಉತ್ತಮವಾದ ಹಾಸಿಗೆ, ಕನ್ನಡಿ, ತಾಂಬೂಲ, ಬೆಲ್ಲ (ಪಾನಕ) ಈ ದಾನಗಳನ್ನು ಮಾಡಬೇಕು. ಗೋಧಿ, ತೊಗರಿ, ಮೊಸರನ್ನ, ತುಪ್ಪವನ್ನು ತುಂಬಿದ ಕಂಚಿನ ಪಾತ್ರೆ, ಕಬ್ಬಿನ ಹಾಲು,

ತಥಾ ಶ್ರೀಫಲದಾನಂ ಚ ದಾನಂ ಚೂತಫಲಸ್ಯ ಚ ।
ಸೂಕ್ಷ್ಮವಸ್ತ್ರಮುಂಚಕಯೋಃ ಪಾನಪಾತ್ರಂ ಕಮಂಡಲುಂ ॥ ೬೦ ॥

ಯತೀನಾಂ ದಂಡದಾನಂ ಚ ತೈಲದಾನಂ ಮಠೇಷು ಚ ।
ಜೀರ್ಣೋದ್ಧಾರಂ ಮಠಾನಾಂ ಚ ಘಂಟಾನಾಂ ಕರಣಂ ತಥಾ ॥ ೬೧ ॥

ಪ್ರಾಸಾದಕರಣಂ ಚೈವ ವಾಪೀಕೂಪಾದಿಕಂ ತಥಾ ।
ಮಾರ್ಗಸ್ಥಾನಾಂ ಛತ್ರದಾನಂ ಮಧ್ಯಾಹ್ನೇಽತಿಥಿಪೂಜನಂ ॥ ೬೨ ॥

ಕರಪಾತ್ರಂ ಯತೀನಾಂ ಚ ಗೋಗ್ರಾಸಂ ತು ಗವಾಮಪಿ ।
ಏತಾನಿ ಚೈತ್ರಮಾಸೇ ತು ದಾನಾನಿ ಕಥಿತಾನಿ ಹಿ ॥ ೬೩ ॥

ಫಲಂ ಶಾಕಂ ತು ಮೂಲಂ ಚ ಕಂದಂ ಪುಷ್ಪಂ ತು ಚಂದನಂ ।
ಉಶೀರಃ ಶೀತಲಂ ದ್ರವ್ಯಂ ಕರ್ಪೂರಂ ಕಸ್ತುರೀಂ ಶುಭಾಂ ॥ ೬೪ ॥

ದೀಪದಾನಂ ಧೇನುದಾನಂ ಗೇಹದಾನಂ ತಥಾ ಸ್ಮೃತಂ ।
ಗೋರಸಾನಾಂ ಪೃಥಗ್ದಾನಂ ಯತಿಬ್ರಾಹ್ಮಣ ಭೋಜನಂ ॥ ೬೫ ॥

ಬೇಲದ ಹಣ್ಣು, ಮಾವಿನ ಹಣ್ಣು, ಸೂಕ್ಷ್ಮವಾದ ಬಟ್ಟೆಗಳು, ಮಂಚ, ಕುಡಿಯು ವುದಕ್ಕೆ ಅನುಕೂಲವಾದ ಪಾತ್ರೆ, ಕಮಂಡಲು ಇವುಗಳನ್ನು ದಾನ ಮಾಡಬೇಕು.

೬೧-೬೩. ಯತಿಗಳಿಗೆ ದಂಡದ ದಾನ, ಮಠಗಳಿಗೆ ತೈಲ ದಾನ, ಮಠಗಳ ಜೀರ್ಣೋದ್ಧಾರ, ಘಂಟೆಗಳನ್ನು ಮಾಡಿಸಿ ಕೊಡುವುದು, ಮನೆಗಳನ್ನು ಕಟ್ಟಿಸಿ ಕೊಡುವುದು, ಬಾವಿ ಕೊಳಗಳನ್ನು ಕಟ್ಟಿಸುವುದು, ಪ್ರಯಾಣಿಕರಿಗೆ ಛತ್ರಿಯನ್ನು ಕೊಡುವುದು, ಮಧ್ಯಾಹ್ನದಲ್ಲಿ ಅತಿಥಿ ಸತ್ಕಾರ, ಯತಿಗಳಿಗೆ ಕರಪಾತ್ರೆಯನ್ನು ಕೊಡುವುದು, ಗೋವುಗಳಿಗೆ ಗೋಗ್ರಾಸವನ್ನು ಹಾಕುವುದು, ಈ ದಾನ ಗಳೆಲ್ಲವನ್ನೂ ಚೈತ್ರಮಾಸದಲ್ಲಿ ಮಾಡಬೇಕೆಂದು ಹೇಳಲ್ಪಟ್ಟಿದೆ.

೬೪. ಫಲ, ಶಾಕ, ಮೂಲ, ಕಂದ, ಪುಷ್ಪ, ಚಂದನ, ಲಾಮಂಚ, ಶೀತಕರವಾದ ಪದಾರ್ಥಗಳು, ಕರ್ಪೂರ, ಕಸ್ತೂರಿಗಳನ್ನು ದಾನ ಮಾಡಬೇಕು.

೬೫-೬೬. ದೀಪದಾನ, ಧೇನುದಾನ, ಗೃಹದಾನ, ಬಂದವರೆಲ್ಲರಿಗೂ ಮಜ್ಜಿಗೆಯನ್ನು ದಾನಮಾಡುವುದು, ಯತಿಗಳಿಗೂ ಬ್ರಾಹ್ಮಣರಿಗೂ

ಸುವಾಸಿನೀಪೂಜನಂ ಚ ರಾಮನಾಮಪ್ರಲೇಖನಂ ।
ಪುಸ್ತಕಾನಾಂ ತಥಾ ದಾನಂ ತಥಾ ಕುಂಕುಮಕೇಶರೇ ॥ ೬೬ ॥

ಜಾತೀಫಲಂ ಲವಂಗಾಶ್ಚ ಜಾತೀಪತ್ರಿ ವರಾಂಗಕೇ ।
ಧಾತಕೀನಾಗರಂ ಧೂಪಂ ಬೀಜಪೂರಂ ಕಳಿಂಗಕಂ ॥ ೬೭ ॥

ಜಂಬೀರಂ ಪನಸಂ ಚೈವ ಕಪಿತ್ಥಂ ಮಾತುಲಿಂಗಕಂ ।
ಕೂಷ್ಮಾಂಡದಾನಮಾರಾಮಕರಣಂ ಮಾರ್ಗಸ್ಯ ಶೋಧನಂ ॥ ೬೮ ॥

ತಥೋಪಾನಹದಾನಂ ಚ ಗಜವಾಜಿಭವಂ ತಥಾ ।
ಏತಾನಿ ಚೈತ್ರಮಾಸೇ ತು ದಾನಾನಿ ಕಥಿತಾನಿ ಹಿ ॥ ೬೯ ॥

ಯಾನಿ ಚೈತ್ರೇ ತು ವರ್ಜ್ಯಾನಿ ತಾನಿ ತೇ ಚ ವದಾಮ್ಯಹಂ ।
ಸರ್ವಾಣ್ಯೇತಾನಿ ಮಾಂಸಾನಿ ಕ್ಷೌದ್ರಂ ಸೌವೀರಕಂ ತಥಾ ॥ ೭೦ ॥

ರಾಜಮಾಷಾದಿಕಂ ಚಾಪಿ ಚೈತ್ರಸ್ನಾಯೀ ಪ್ರವರ್ಜಯೇತ್ ।
ಪರಾನ್ನಂ ಚ ಪರದ್ರೋಹಂ ಪರದಾರಾಗಮಂ ತಥಾ ॥ ೭೧ ॥

ಭೋಜನದಾನ, ಸುವಾಸಿನೀ ಪೂಜೆ, ರಾಮನಾಮದ ಲೇಖನ, ಪುಸ್ತಕಗಳ ದಾನ ಅಂತೆಯೇ ಕುಂಕುಮ ಮತ್ತು ಕೇಸರಿಯ ದಾನ ಇವು ಉತ್ತಮ ಫಲವನ್ನ ಕೊಡುತ್ತವೆ.

೬೭-೬೮. ಜಾಯಿಕಾಯಿ, ಲವಂಗ, ಜಾಯಿಪತ್ರೆ, ಲವಂಗಚಕ್ಕೆ ನೆಲ್ಲಿಕಾಯಿ, ಶುಂಠಿ, ಧೂಪ, ಕೊಡಶೀಪಾಲದ ಬೀಜ, ಮಾದಳದ ಹಣ್ಣು, ಬೇಲದ ಹಣ್ಣು, ನಿಂಬೆಹಣ್ಣು, ಹಲಸಿನ ಹಣ್ಣು, ಮಾದಳದ ಹಣ್ಣು, ಕುಂಬಳಕಾಯಿ ಇವನ್ನು ದಾನ ಮಾಡಬೇಕು. ತೋಪುಗಳನ್ನು ಹಾಕಿಸಬೇಕು. ದಾರಿಗಳನ್ನು ಸರಿಪಡಿಸಬೇಕು.

೬೯. ಕೆರಗಳನ್ನು ದಾನಮಾಡುವುದು, ಆನೆ ಕುದುರೆಗಳನ್ನು ದಾನ ಮಾಡುವುದು ಇವೆಲ್ಲ ದಾನಗಳನ್ನೂ ಚೈತ್ರಮಾಸದಲ್ಲಿ ಮಾಡಬೇಕು. ಎಂದು ನಿಯಮಿಸಿದ್ದಾರೆ.

೭೦-೭೧. ಚೈತ್ರ ಮಾಸದಲ್ಲಿ ಬಿಡಬೇಕಾದ ಪದಾರ್ಥಗಳನ್ನು ಹೇಳುತ್ತೇನೆ. ಕೇಳು. ಎಲ್ಲಾ ಮಾಂಸಗಳನ್ನೂ ಬಿಟ್ಟುಬಿಡಬೇಕು. ಜೇನುತುಪ್ಪವನ್ನು ಬಿಡಬೇಕು. ಎಗಚಿ ಹಣ್ಣು, ಹಲಸಂದೆ, ಪರಾನ್ನ ಪರದ್ರೋಹಿ ಪರರ ಹೆಂಡಿರಲ್ಲಿ ರಮಿಸುವುದು ಇವನ್ನು ಚೈತ್ರಸ್ನಾನ ಮಾಡುವವನು ಬಿಡಬೇಕು.

ತೀರ್ಥಘ್ನಾನಿ ಸದೈವೇಹ ಚೈತ್ರಸ್ನಾಯೀ ಪ್ರವರ್ಜಯೇತ್ |
ದ್ವಿದಳಂ ತಿಲತೈಲಂ ಚ ತಥಾನ್ನಂ ಶಲ್ಯದೂಷಿತಂ || ೨೨ ||

ಭಾವದುಷ್ಟಂ ಶಬ್ದದುಷ್ಟಂ ಚೈತ್ರಸ್ನಾಯೀ ತು ವರ್ಜಯೇತ್ |
ದೇವವೇದದ್ವಿಜಾನಾಂ ಚ ಗುರುಗೋವ್ರತಿನಾಂ ತಥಾ || ೨೩ ||

ಸ್ತ್ರೀರಾಜಮಹತಾಂ ನಿಂದಾಂ ಚೈತ್ರಸ್ನಾಯೀ ವಿವರ್ಜಯೇತ್ |
ಪ್ರಾಣ್ಯಂಗಮಾಮಿಷಂ ಚೂರ್ಣಂ ಫಲೇ ಜಂಬೀರಮಾಮಿಷಂ || ೨೪ ||

ಧಾನ್ಯೇ ಮಸೂರಿಕಾ ಪ್ರೋಕ್ತಾ ಚಾನ್ನಂ ಪರ್ಯುಷಿತಂ ತಥಾ |
ಬ್ರಹ್ಮಚರ್ಯಮಧಸ್ಸುಪ್ತಿಃ ಪತ್ರಾವಳ್ಯಾಂ ಚ ಭೋಜನಂ || ೨೫ ||

---

೨೨. ಇವು ತೀರ್ಥಸ್ನಾನದ ಫಲವನ್ನು ನಾಶ ಮಾಡುತ್ತವೆ. ಆದ್ದರಿಂದ ಇವನ್ನು ಬಿಟ್ಟುಬಿಡಬೇಕು. ದ್ವಿದಳ ಧಾನ್ಯಗಳು, ಎಂದರೆ ಹೆಸರು, ಅವರೆ ಮುಂತಾದ ಎರಡು ಪಪ್ಪಾಗುವ ಧಾನ್ಯಗಳು, ಇವನ್ನೂ, ಎಳ್ಳೆಣ್ಣೆ, ಎಳ್ಳು ಇವನ್ನೂ ಬಿಡಬೇಕು. ಪಾಪಿಗಳ ಅನ್ನ, ವಿಕಾರವನ್ನು ಹೊಂದಿದ ಅನ್ನ ದೂಷಿತಾನ್ನಗಳು ಕೂಡದು.

೨೩. ಕೆಟ್ಟ ಅಭಿಪ್ರಾಯದಿಂದ ಹಾಕುವವರಲ್ಲಿನ ಅನ್ನವನ್ನು ಊಟಮಾಡಕೂಡದು. ಶಬ್ದವನ್ನು ಕೇಳುವಾಗಲೇ ಕೆಟ್ಟದ್ದೆಂದು ತೋರುವ ಪದಾರ್ಥಗಳನ್ನು ಬಿಡಬೇಕು. ಇವು ಚೈತ್ರವ್ರತವುಳ್ಳವನಿಗೆ ವಿಘ್ನಕಾರಿಗಳು. ದೇವತೆಗಳನ್ನೂ, ವೇದಗಳನ್ನೂ, ಬ್ರಾಹ್ಮಣರನ್ನೂ ಗುರುಗಳನ್ನೂ, ಗೋವುಗಳನ್ನೂ, ವ್ರತಮಾಡುವವರನ್ನೂ, ಸ್ತ್ರೀಯರನ್ನೂ, ರಾಜರನ್ನೂ ಮಹಾತ್ಮರನ್ನೂ, ಚೈತ್ರಸ್ನಾನಮಾಡುವವನು ನಿಂದಿಸಬಾರದು.

೨೪–೨೫. ಪ್ರಾಣಿಯ ಅವಯವಗಳು ಮಾಂಸಗಳು, ಚೂರ್ಣವೂ ಮಾಂಸವು, ಹಣ್ಣುಗಳಲ್ಲಿ ನಿಂಬೆಯ ಹಣ್ಣು ಮಾಂಸವು. ಧಾನ್ಯಗಳಲ್ಲಿ ಕಿರುಗಡಲೆಯೂ ಮಾಂಸವು. ಅನ್ನವು ಹಳಸಿದ್ದರೆ (ತಂಗಳನ್ನ) ಅದು ಮಾಂಸವು. ಇವನ್ನು ತಿನ್ನಬಾರದು. ಬ್ರಹ್ಮಚರ್ಯದಿಂದಿರಬೇಕು. ನೆಲದಮೇಲೆ ಮಲಗಬೇಕು. ಎಲೆಯಲ್ಲಿ ಊಟ ಮಾಡಬೇಕು.

ಚತುರ್ಥಕಾಲೇ ಭುಂಜೀತ ಕುರ್ಯಾದೇವಂ ಸದಾ ವ್ರತೀ ।
ಸಂವತ್ಸರಪ್ರತಿಪದಿ ತೈಲಾಭ್ಯಂಗಂ ತು ಕಾರಯೇತ್ ॥ ೭೬ ॥

ಚೈತ್ರಸ್ನಾಯೀ ನರೋಽನ್ಯತ್ರ ತೈಲಾಭ್ಯಂಗಂ ನ ಕಾರಯೇತ್ ।
ಅಲಾಬೂಂ ಚಾಪಿ ವೃಂತಾಕಂ ಕೂಷ್ಮಾಂಡಂ ಬೃಹತೀಫಲಂ ॥ ೭೭ ॥

ಶ್ಲೇಷ್ಮಾತಕಂ ಕಳಿಂಗಂ ಚ ಕಪಿತ್ಥಂ ಚೈವ ವರ್ಜಯೇತ್ ।
ರಜಸ್ವಲಾಂತ್ಯಜಮ್ಲೇಚ್ಛಪತಿತವ್ರಾತ್ಯಕೈಸ್ಸಹ ॥ ೭೮ ॥

ದ್ವಿಜದ್ವಿಡ್ವೇದಬಾಹ್ಯೈಶ್ಚ ನ ವದೇತ್ಸರ್ವದಾ ವ್ರತೀ ।
ಪಲಾಂಡುಂ ಲಶುನಂ ಚೈವ ಛತ್ರಾಕಂ ಗೃಂಜನಂ ತಥಾ । ॥ ೭೯ ॥

---

೭೬. ಹಗಲಿನ ನಾಲ್ಕನೇ ಜಾವದಲ್ಲಿ ಊಟ ಮಾಡಬೇಕು. ವ್ರತ ಮಾಡುವವನು ಹೀಗೆ ಯಾವಾಗಲೂ ಮಾಡುತ್ತಿರಬೇಕು ಸಂವತ್ಸರದ ಆದಿಯ ಪ್ರತಿಪತ್ತಿನ ದಿವಸ ಎಣ್ಣೆಯನ್ನು ಹಚ್ಚಿಕೊಂಡು ಸ್ನಾನವನ್ನು ಮಾಡಬೇಕು. ಎಂದರೆ ಯುಗಾದಿಯ ಹಬ್ಬದ ದಿವಸ ಅಭ್ಯಂಜನ ಮಾಡಬೇಕು.

೭೭. ಚೈತ್ರಸ್ನಾನ ಮಾಡುವವನು ಆ ದಿನ ಹೊರತಾಗಿ ಬೇರೆಯ ದಿನದಲ್ಲಿ ತೈಲಾಭ್ಯಂಜನವನ್ನು ಮಾಡಬಾರದು ಸೋರೆಕಾಯಿ, ಬದನೆಕಾಯಿ, ಕುಂಬಳಕಾಯಿ, ಗುಳ್ಳದಕಾಯಿ, ಶ್ಲೇಷ್ಮಾತಕ, ಕಳಿಂಗ, ಬೇಲದ ಹಣ್ಣು ಇವನ್ನು ಆ ತಿಂಗಳು ಪೂರ್ತಿಯಾಗಿ ಬಿಟ್ಟುಬಿಡಬೇಕು.

೭೮. ವ್ರತಮಾಡತಕ್ಕವನು ಮುಟ್ಟಾದವರೊಡನೆ ಮಾತನಾಡಬಾರದು. ಮ್ಲೇಚ್ಛರು, ಪತಿತರು, ವೇದಗಳನ್ನೂ ಬ್ರಾಹ್ಮಣರನ್ನೂ, ದ್ವೇಷಿಸುವವರು, ವೇದಬಾಹ್ಯರು ಇವರೊಡನೆ ಮಾತನಾಡಬಾರದು.

೭೯–೮೦. ಈರುಳ್ಳಿ, ಬೆಳ್ಳುಳ್ಳಿ, ಅಣಬೆ, ತಾವರೆಗೆಡ್ಡೆ, ನಾಳಿಕ್ಕೆ ಮೂಲಂಗಿ, ನುಗ್ಗೆ ಇವನ್ನು ಚೈತ್ರಸ್ನಾನ ಮಾಡುವವನು ಬಿಡಬೇಕು. ಅನ್ನಕ್ಕೆ

ನಾಳಿಕಾಮೂಲಕಂ ಶಿಗ್ರುಂ ಚೈತ್ರಸ್ನಾಯೀ ವಿವರ್ಜಯೇತ್ ।
ಏಭಿಃ ಸ್ಪೃಷ್ಟಂ ಶ್ವಕಾಕೈಶ್ಚ ಸೂತಿಕಾನ್ನಂ ಚ ವರ್ಜಯೇತ್ ॥ ೮೦ ॥

ದ್ವಿಪಾಚಿತಂ ಚ ದಗ್ಧಾನ್ನಂ ಚೈತ್ರಸ್ನಾಯೀ ವಿವರ್ಜಯೇತ್ ।
ಏತಾನಿ ವರ್ಜಯೇನ್ನಿತ್ಯಂ ವ್ರತೀ ಸರ್ವವ್ರತೇಷ್ವಪಿ ॥ ೮೧ ॥

ಕೃಚ್ಛ್ರಾದ್ಯಂ ಚ ಪ್ರಕುರ್ವೀತ ಸ್ವಶಕ್ತ್ಯಾ ರಾಮತುಷ್ಟಯೇ ।
ಕ್ರಮಾತ್ಕೂಷ್ಮಾಂಡಬೃಹತೀಛತ್ರಾಕಂ ಮೂಲಕಂ ತಥಾ ॥ ೮೨ ॥

ಶ್ರೀಫಲಂ ಚ ಕಳಿಂಗಂ ಚ ಫಲಂ ಧಾತ್ರೀಭವಂ ತಥಾ ।
ನಾರಿಕೇಳಮಲಾಬುಂ ಚ ಪಟೋಲಂ ಬದರೀಫಲಂ ॥ ೮೩ ॥

ಚರ್ಮವೃಂತಾಕಕಂ ವಲ್ಲೀಶಾಕಂ ತುಲಸಿಜಂ ತಥಾ ।
ಶಾಕಾನ್ಯೇತಾನಿ ವರ್ಜ್ಯಾನಿ ಕ್ರಮಾತ್ಪ್ರತಿಪದಾದಿಷು ॥ ೮೪ ॥

ಈ ಪದಾರ್ಥಗಳ ಸಂಪರ್ಕವಿದ್ದರೂ ನಾಯಿ ಕಾಗೆಗಳು ಆ ಅನ್ನವನ್ನು ಮುಟ್ಟಿದ್ದರೂ ಬಿಡಬೇಕು. ಸೂತಕಾನ್ನವನ್ನು ಭೋಜನ ಮಾಡಬಾರದು.

೮೧. ಎರಡು ಸಾರಿ ಬೇಯಿಸಿದ ಪದಾರ್ಥಗಳನ್ನೂ, ಸೀದುಹೋದ ಅನ್ನವನ್ನೂ, ಚೈತ್ರಸ್ನಾನ ಮಾಡುವವನು ಬಿಟ್ಟುಬಿಡಬೇಕು. ವ್ರತ ಮಾಡ ತಕ್ಕವನು ಚೈತ್ರ ಮಾಸದಲ್ಲಿ ಇವನ್ನು ಬಿಡುವುದಲ್ಲದೆ ಸಾಧ್ಯವಾದರೆ ನಿತ್ಯದಲ್ಲಿಯೂ ಅವನ್ನು ತಿನ್ನುವುದನ್ನೇ ಬಿಟ್ಟುಬಿಡಬೇಕು.

೮೨-೮೪. ಶ್ರೀರಾಮನ ತೃಪ್ತಿಗೋಸ್ಕರವಾಗಿ ತನ್ನ ಶಕ್ತಿಗನುಗುಣವಾಗಿ ಕೃಛ್ರಗಳನ್ನು ಮಾಡುತ್ತಿರಬೇಕು. ಕುಂಬಳ, ಬೃಹತಿ, ಅಣಬೆ, ಮೂಲಂಗಿ, ಬಿಲ್ವದಕಾಯಿ, ಕಳಿಂಗ, ನೆಲ್ಲಿಕಾಯಿ, ತೆಂಗಿನಕಾಯಿ, ಸೋರೇಕಾಯಿ, ಪಡವಲ ಕಾಯಿ, ಎಗಚಿ ಹಣ್ಣು, ದಪ್ಪಬದನೆಕಾಯಿ ಹಂಬಿನಂತಿರುವುದರಿಂದ ಮಾಡುವ ಪದಾರ್ಥಗಳು, ತುಲಸಿಯಿಂದ ಮಾಡತಕ್ಕವು, ಈ ಪದಾರ್ಥಗಳಿಂದ ಮಾಡಿ ಅಡಿಗೆಯನ್ನು ಕ್ರಮದಿಂದ ಪಾಡ್ಯದಿಂದ ಮೊದಲು ಮಾಡಿಕೊಂಡು ಒಂದೊಂದು ದಿನ ಒಂದೊಂದನ್ನು ಕ್ರಮವಾಗಿ ಬಿಟ್ಟುಬಿಡುತ್ತ ಬರಬೇಕು.

ಧಾತ್ರೀಫಲಂ ರವೌ ತದ್ವದ್ವರ್ಜಯೇತ್ಸರ್ವದಾ ಗೃಹೀ ।
ಏಭ್ಯೋನ್ಯದ್ವರ್ಜಯೇತ್ಕಿಂಚಿತ್ತದ್ರಾಮಪ್ರೀತಯೇ ನರಃ ॥ ೮೫ ॥

ದತ್ವಾ ವ್ರತಾಂತೇ ವಿಪ್ರಾಯ ಭಕ್ಷಯೇತ್ಸರ್ವದೈವ ಹಿ ।
ಫಾಲ್ಗುನೀಪೌರ್ಣಿಮಾರಭ್ಯ ಯಾವಚ್ಚೈತ್ರೀ ತು ಪೌರ್ಣಿಮಾ ॥ ೮೬ ॥

ಚೈತ್ರಸ್ನಾನಂ ತು ತಾವದ್ಧಿ ನರೈಃ ಕಾರ್ಯಂ ಚ ಭಕ್ತಿತಃ ।
ಅಥವಾ ಮೀನಗೋಭಾನುರ್ಯಾವತ್ತಾವತ್ಪ್ರಕಾರಯೇತ್ ॥ ೮೭ ॥

ದಶಮೀಂ ಫಾಲ್ಗುನೀಂ ಶುದ್ಧಾಂ ಸಮಾರಭ್ಯ ಮಧೋಃ ಸಿತಾ ।
ಯಾವದ್ಭವೇತ್ತು ದಶಮೀ ತಾವತ್ಸ್ನಾನಂ ಪ್ರಕಾರಯೇತ್ ॥ ೮೮ ॥

---

೮೫. ವ್ರತಮಾಡುವವನು ನೆಲ್ಲಿಕಾಯನ್ನು ಭಾನುವಾರದ ದಿವಸ ಯಾವಾಗಲೂ ತಿನ್ನಬಾರಲೇಬಾರದು. ಇದಲ್ಲದೆ ಮತ್ತಾವುದನ್ನಾದರೂ ರಾಮ ಪ್ರೀತಿಗೋಸ್ಕರವಾಗಿ ಬಿಟ್ಟುಬಿಡಬಹುದು.

೮೬–೮೭. ವ್ರತಮಾಡುವವರು ಈ ಪದಾರ್ಥಗಳನ್ನು ಬಿಟ್ಟದ್ದು ವ್ರತ ಮುಗಿದ ಮೇಲೆ ಬಿಟ್ಟಿರುವ ಪದಾರ್ಥಗಳನ್ನು ಬ್ರಾಹ್ಮಣನಿಗೆ ದಾನಮಾಡಿ ಆಮೇಲೆ ಅವನ್ನು ಯಾವಾಗ ಬೇಕಾದರೂ ತಿನ್ನಬಹುದು. ಪಾಲ್ಗುಣ ಮಾಸದ ಪೂರ್ಣಿಮಾ ಮೊದಲುಗೊಂಡು ಚೈತ್ರ ಮಾಸದ ಹುಣ್ಣಿಮೆಯವರೆಗೆ ಚೈತ್ರ ಸ್ನಾನವನ್ನು ವ್ರತಮಾಡತಕ್ಕವರು ಮಾಡಬೇಕು. ಆದಿಲ್ಲದಿದ್ದರೆ ಸೂರ್ಯನು ಮೀನ ರಾಶಿಗೆ ಬಂದಂದಿನಿಂದ ಮೊದಲು ಮಾಡಿಕೊಂಡು ಅವನು ಆ ಮೀನರಾಶಿ ಯನ್ನು ಬಿಡುವವರೆಗೂ ಮಾಡಬಹುದು.

೮೮. ಅದಿಲ್ಲದಿದ್ದರೆ ಪಾಲ್ಗುಣ ಮಾಸದ ಶುದ್ಧ ದಶಮಿಯನ್ನು ಮೊದಲು ಮಾಡಿಕೊಂಡು ಚೈತ್ರ ಮಾಸದ ಶುದ್ಧ ದಶಮಿಯು ಪೂರ್ತಿಯಾಗುವವರೆಗೂ ಚೈತ್ರಸ್ನಾನವನ್ನು ಮಾಡಬಹುದು.

ಸ್ನಾನಸ್ಯೈವಂ ತ್ರಯೋ ಭೇದಾಃ ಶಿಷ್ಯೈತೇ ಸಮುದೀರಿತಾಃ ।
ಚೈತ್ರಶುಕ್ಲತೃತೀಯಾಯಾ ಯಾವದ್ವೈಶಾಖಸಂಭವಾ ॥ ೮೯ ॥

ತೃತೀಯಾ ಶುಕ್ಲಪಕ್ಷಸ್ಯ ಹ್ಯಕ್ಷಯ್ಯೇತಿ ಸ್ಮೃತಾ ತ್ರಯಾ ।
ತಾವಚ್ಚ ಸೀತಲಾಗೌರೀ ಸ್ನಾತವ್ಯಾ ಸುಖಲಬ್ಧಯೇ ॥ ೯೦ ॥

ಸೀತಾತೀರ್ಥೇ ತು ನಾರೀಭಿಃ ಪೂಜನೀಯಾ ಚ ಜಾನಕೀ ।
ತೃತೀಯಾ ಯಾ ತು ಚೈತ್ರಸ್ಯ ಸಿತಪಕ್ಷೋದ್ಭವಾ ತಥಾ ॥ ೯೧ ॥

ವೈಶಾಖಶುಕ್ಲಪಕ್ಷೇ ಯಾ ತೃತೀಯಾಕ್ಷಯ್ಯಸಂಜ್ಞಿಕಾ ।
ನಾರೀ ಯಾ ಸೀತಲಾಗೌರೀ ವ್ರತಸ್ನಾನಪರಾಯಣಾ ॥ ೯೨ ॥

ಅಭ್ಯಂಗಂ ಸಾ ಕರೋತ್ವಸ್ಯೋಸ್ತಿಥ್ಯೋರ್ನಾನ್ಯದಿನೇ ಕದಾ ।
ತ್ರಿಂಶಚ್ಚ ತಿಥಯಃ ಪುಣ್ಯಾಃ ಚೈತ್ರಮಾಸೇ ಮಹತ್ತಮಾಃ ॥ ೯೩ ॥

೮೯-೯೦. ಎಲೈ ಶಿಷ್ಯನೇ! ಈ ರೀತಿಯಾಗಿ ಚೈತ್ರಸ್ನಾನವು ಮೂರು ಬಗೆಯಾಗಿರುವುದು. ಅವನ್ನು ವಿವರಿಸಿದ್ದೇನೆ. ಚೈತ್ರ ಶುದ್ಧ ತದಿಗೆ, ಬಹುಳ ತದಿಗೆ, ವೈಶಾಖ ಶುದ್ಧ ತದಿಗೆ ಇವು ಮೂರೂ ಅಕ್ಷ ತದಿಗೆ ಎಂದೆನಿಸಿಕೊಳ್ಳುತ್ತವೆ. ಚೈತ್ರ ಶುದ್ಧ ತದಿಗೆಯಿಂದ ಮೊದಲು ಮಾಡಿಕೊಂಡು ವೈಶಾಖ ಶುದ್ಧ ತದಿಗೆ ಯವರೆಗೂ ಶೀತಳಾ ಎಂಬ ಗೌರಿಯನ್ನು ಸ್ನಾನಮಾಡಿ ಪೂಜಿಸಬೇಕು. ಈ ಪೂಜೆಯನ್ನು ಮಾಡಿದರೆ ಸುಖವುಂಟಾಗುತ್ತದೆ.

೯೧. ಸೀತಾ ತೀರ್ಥದಲ್ಲಿ ಸ್ನಾನಮಾಡಿಕೊಂಡು ಮೇಲೆ ಹೇಳಿದ ಆ ಕಾಲದಲ್ಲಿ ಜಾನಕಿಯನ್ನು ಪೂಜಿಸಬೇಕು. ಚೈತ್ರ ಶುದ್ಧ ತದಿಗೆಯೂ ಅಂತೆಯೇ ವೈಶಾಖ ಶುದ್ಧ ತದಿಗೆಯೂ ಎರಡೂ ಅಕ್ಷಯ ತದಿಗೆಗಳು. ಈ ಅಕ್ಷಯ ತದಿಗೆಗಳ ಮಧ್ಯದಲ್ಲಿ ಶೀತಲಾ ಗೌರಿಯ ವ್ರತವನ್ನು ಹಿಡಿದಿರಬೇಕು.

೯೨-೯೩. ಹೀಗೆ ಸ್ನಾನಮಾಡಿ ವ್ರತಮಾಡುವವರು ಈ ಅಕ್ಷಯ ತದಿಗೆಗಳ ದಿನ ಅಭ್ಯಂಜನವನ್ನು ಮಾಡಬೇಕೇ ಹೊರತು ಮಿಕ್ಕ ದಿನದಲ್ಲಿ ಮಾಡ ಕೂಡದು. ಚೈತ್ರ ಮಾಸದಲ್ಲಿ ಮೂವತ್ತು ದಿನದ ಮೂವತ್ತು ತಿಥಿಗಳೂ ಬಹು ಪುಣ್ಯಕರವಾದುವುಗಳು. ಬಹು ಉತ್ಕೃಷ್ಟವಾದುವುಗಳು.

ತಥಾಪಿ ಹಿ ವಿಶೇಷೋತ್ರ ತಿಥೀನಾಂ ವರ್ಣ್ಯತೇ ಮಯಾ ।
ಚೈತ್ರಮಾಸೇ ಕೃಷ್ಣಪಕ್ಷೇ ಪಂಚಮೀ ದಶಮೀ ತಥಾ ॥ ೯೪ ॥

ಏಕಾದಶೀ ದ್ವಾದಶೀ ಚ ಶಿವರಾತ್ರಿಸ್ತ್ವಮಾ ತಥಾ ।
ಏತಾಶ್ಶುಭಾಶ್ಚೈತ್ರಕೃಷ್ಣೇ ಮಹಾಪಾತಕನಾಶನಾಃ ॥ ೯೫ ॥

ಇದಾನೀಂ ಚೈತ್ರಮಾಸಸ್ಯ ಸಿತಪಕ್ಷೋದ್ಭವಾಶ್ಶುಭಾಃ ।
ವರ್ಣ್ಯಂತೇ ತಿಥಯಃ ಶ್ರೇಷ್ಠಾಃ ನರಾಣಾಂ ಹಿತಕಾಮ್ಯಯಾ ॥ ೯೬ ॥

ಸಾವಂತ್ಸರಪ್ರತಿಪದಮಾರಭ್ಯ ದಶಮೀದಿನಂ ।
ಯಾವತ್ತಾವಚ್ಛುಭಾಸ್ಸರ್ವಾಃ ಸ್ನಾನದಾನಾದಿಕರ್ಮಣಿ ॥ ೯೭ ॥

ಯತ್ಕೃತಂ ಚ ಪ್ರತಿಪದಿ ಸ್ನಾನದಾನವ್ರತಾದಿಕಂ।
ದ್ವಿತೀಯಾಯಾಂ ಚ ತತ್ಪ್ರೋಕ್ತಂ ದ್ವಿಗುಣಂ ನಾತ್ರಸಂಶಯಃ ॥ ೯೮ ॥

೯೪-೯೫. ಆದರೂ ಕೂಡ ಆ ತಿಥಿಗಳಲ್ಲಿನ ವಿಶೇಷವನ್ನು ಹೇಳುತ್ತೇನೆ. ಚೈತ್ರಮಾಸದ ಕೃಷ್ಣಪಕ್ಷದಲ್ಲಿ ಪಂಚಮಿ, ದಶಮಿ, ಏಕಾದಶಿ, ದ್ವಾದಶೀ, ಚತುರ್ದಶಿ, ಅಮಾವಾಸ್ಯೆ ಇವು ಶುಭವಾದುವು. ಮಹಾಪಾಪಗಳನ್ನು ನಾಶ ಮಾಡುತ್ತವೆ.

೯೬. ಈಗ ಚೈತ್ರ ಶುದ್ಧದ ತಿಥಿಗಳಲ್ಲಿ ಶುಭವಾದುವುಗಳನ್ನು ಹೇಳುತ್ತೇನೆ ಇವು ನರರಿಗೆ ಬಹು ಅನುಕೂಲವನ್ನುಂಟುಮಾಡತಕ್ಕವುಗಳು.

೯೭. ಚೈತ್ರ ಶುದ್ಧ ಪಾಡ್ಯವು ವರ್ಷಾರಂಭದ ದಿನವು. ಅದೇ ಯುಗಾದಿ ಎನ್ನಿಸಿಕೊಳ್ಳುತ್ತದೆ. ಅಂದಿನಿಂದ ಮೊದಲುಗೊಂಡು ದಶಮಿಯು ದಿನದವರೆಗೂ ಪೂರ್ತಿಯಾಗಿ ಎಲ್ಲವೂ ಸ್ನಾನಕರ್ಮಕ್ಕೂ, ದಾನಕರ್ಮಕ್ಕೂ ಬಹು ಶುಭ ವಾದುವು-

೯೮. ಆ ಯುಗಾದಿಯು ಪಾಡ್ಯದಲ್ಲಿ ಮಾಡುವ ಸ್ನಾನದಿಂದಲೂ, ಕೊಡುವ ದಾನದಿಂದಲೂ ಯಾವ ಪುಣ್ಯವು ಬರುತ್ತದೆಯೋ ಮಾರನೆಯದಾದ ದ್ವಿತೀಯೆಯ ದಿವಸ ಮಾಡುವ ಸ್ನಾನದಿಂದಲೂ ದಾನದಿಂದಲೂ ಆ ಪ್ರತಿಪತ್ತಿನ ಪುಣ್ಯದ ಎರಡರಷ್ಟು ಪುಣ್ಯವು ಬರುತ್ತದೆ. ಸಂಶಯವಿಲ್ಲ.

ಯತ್ಕೃತಂ ಚ ದ್ವಿತೀಯಾಯಾಂ ಭಕ್ತ್ಯಾ ಸ್ನಾನಾದಿಕಂ ನರೈಃ ।
ದ್ವಿಗುಣಂ ತತ್ತೃತೀಯಾಯಾಂ ಚೈತ್ರಮಾಸೇ ನೃಪೋತ್ತಮ ॥ ೯೯ ॥

ಏವಂ ಸರ್ವಾಸು ತಿಥಿಷು ಯಾವತ್ಸ್ಯಾನ್ನವಮೀ ಶುಭಾ ।
ಏವಂ ವಿಶೇಷೋ ಜ್ಞಾತವ್ಯೋ ಯಥಾಗ್ರಾದಿಕ್ಷುಚರ್ವಣಾತ್ ॥ ೧೦೦ ॥

ಯಥಾ ಕ್ಷೀರಾದ್ದಧಿ ಪ್ರೋಕ್ತಂ ದಧ್ನಸ್ತು ನವನೀತಕಂ ।
ನವನೀತಾದ್ಘೃತಂ ಯದ್ವತ್ತಥಾತ್ರ ತಿಥಿನಿರ್ಣಯಃ ॥ ೧೦೧ ॥

ಚೈತ್ರಮಾಸಸ್ತು ಮಾಸಾನಾಂ ತತ್ರ ಪಕ್ಷಸ್ಸಿತೋವರಃ ।
ಸಿತಪಕ್ಷೇ ಕ್ರಮೇಣೈವ ಯಾವತ್ಸ್ಯಾ ನವಮೀತಿಥಿಃ ॥ ೧೦೨ ॥

---

೯೯. ದ್ವಿತೀಯೆಯ ದಿವಸ ಭಕ್ತಿಯಿಂದ ಮಾಡುವ ಆ ಸ್ನಾನದಾನಗಳಿಂದ ಯಾವ ಫಲವು ಬರುತ್ತದೆಯೋ ಅದರ ಎರಡರಷ್ಟು ಫಲವು ತದಿಗೆಯ ದಿವಸ ಮಾಡುವ ಸ್ನಾನದಾನಗಳಿಂದ ಬರುತ್ತದೆ.

೧೦೦. ಈರೀತಿಯಾಗಿ ನವಮಿಯವರಿಗೆ ಇರುವ ತಿಥಿಗಳು ಹಿಂದಿನ ದಿನಕ್ಕಿಂತಲೂ ಮುಂದಿನ ದಿನವು, ಎರಡರಷ್ಟು ಹೆಚ್ಚು ಫಲವನ್ನು ಕೊಡತಕ್ಕವು. ಒಂದು ಕಬ್ಬಿನ ಜಲ್ಲೆಯನ್ನು ತೆಗೆದುಕೊಂಡರೆ ಅದು ಬುಡದಲ್ಲಿ ಬಲಿತು ಮುಂದು ಮುಂದಕ್ಕೆ ಹೋದಂತೆಲ್ಲಾ ಬಲಿಕೆ ಕಡಿಮೆಯಾಗಿ ತೊಂಡೆಯಾಗುತ್ತ ರುಚಿ ಕಡಿಮೆಯಾಗುತ್ತದೆ. ಇಂತಹ ಕಬ್ಬನ್ನು ತುದಿಯಿಂದ ತಿನ್ನುತ್ತ ಬಂದಾಗ ಮುಂದೆಹೋದಂತೆಲ್ಲಾ ಹೇಗೆ ಹೆಚ್ಚು ಹೆಚ್ಚು ಸಿಹಿಯಾಗಿ, ಗಿಣ್ಣು ಗಿಣ್ಣಿಗೂ ರುಚಿಯಾಗಿರುತ್ತದೆಯೋ ಅಂತೆಯೇ ಈ ತಿಥಿಗಳಲ್ಲಿಯೂ ಕೂಡ ಪಾಡ್ಯದಿಂದ ಮುಂದೆ ಹೋದಂತೆಲ್ಲಾ ಪುಣ್ಯವು ದಿನದಿನಕ್ಕೂ ಹೆಚ್ಚುತ್ತದೆ.

೧೦೧. ಹಾಲಿನಿಂದ ಮೊಸರೂ, ಮೊಸರಿನಿಂದ ಬೆಣ್ಣೆಯೂ, ಬೆಣ್ಣೆಯಿಂದ ತುಪ್ಪವೂ ಹೇಗೆ ಒಂದಕ್ಕಿಂತ ಮತ್ತೊಂದು ಶ್ರೇಷ್ಠವಾಗಿರುತ್ತವೆಯೋ ಹಾಗೆ ಮುಂದೆ ಮುಂದೆ ಹೋದಂತೆಲ್ಲಾ ತಿಥಿಗಳಲ್ಲಿ ಪುಣ್ಯವು ಹೆಚ್ಚೆಂಬುದಾಗಿ ತಿಥಿಗಳ ನಿರ್ಣಯವನ್ನು ತಿಳಿಯತಕ್ಕದ್ದು.

೧೦೨. ಮಾಸಗಳಲ್ಲಿ ಚೈತ್ರಮಾಸವು ಉತ್ತಮೋತ್ತಮವಾದುದು ಆ ಮಾಸದಲ್ಲಿಯೂ ಕೂಡ ಶುಕ್ಲ ಪಕ್ಷವು ಇನ್ನೂ ಶ್ರೇಷ್ಠವಾದುದು. ಆ ಶುಕ್ಲ ಪಕ್ಷದಲ್ಲಿಯೂ ಕೂಡ ಪಾಡ್ಯದಿಂದ ಹಿಡಿದು ನವಮಿಯ ಪೂರ್ತಿಯಾಗಿ ಮುಂದು ಮುಂದಕ್ಕೆ ಒಂದಕ್ಕಿಂತ ಒಂದು ಶ್ರೇಷ್ಠವಾದುವು.

ತಾವದೇಕೈಕಶಃ ಶ್ರೇಷ್ಠಾಃ ಸರ್ವಾಸು ನವಮೀ ವರಾ ।
ಯಸ್ಯಾಂ ಜಾತಂ ರಾಮಜನ್ಮ ಧರ್ಮಸಂಸ್ಥಾಪನಾಯ ಹಿ ॥ ೧೦೩ ॥

ತಸ್ಮಾತ್ತಿಥಿಸ್ತು ಸಾ ಜ್ಞೇಯಾ ಕರ್ಮನಿರ್ಮೂಲನಕ್ಷಮಾ ।
ತಸ್ಯಾಂ ದತ್ತಂ ಹುತಂ ಜಪ್ತಂ ಯತ್ಕಿಂಚಿಚ್ಚ ಕೃತಂ ಶುಭಂ ॥ ೧೦೪ ॥

ಸರ್ವಂ ತದಕ್ಷಯಂ ವಿದ್ಯಾನ್ನಾತ್ರ ಕಾರ್ಯಾ ವಿಚಾರಣಾ ।
ಪ್ರತಿಪದ್ದಿನಮಾರಭ್ಯ ನವರಾತ್ರಮುಪೋಷಯೇತ್ ॥ ೧೦೫ ॥

ಪ್ರತ್ಯಹಂ ರಘುವೀರಸ್ಯ ಪೂಜನಂ ಚೈವ ಕಾರಯೇತ್ ।
ಸಂವತ್ಸರಪ್ರತಿಪದಿ ಧ್ವಜಾಃ ಸೌಧೋಪರಿ ಸ್ಥಿತಾಃ ॥ ೧೦೬ ॥

---

೧೦೩. ಇವುಗಳಲ್ಲಿಯೂ ಚೈತ್ರ ಶುದ್ಧ ನವಮಿಯು ಎಲ್ಲಕ್ಕಿಂತಲೂ ಶ್ರೇಷ್ಠ ವಾದುದು. ಆ ನವಮಿಯಲ್ಲಿಯೇ ರಾಮನು ಧರ್ಮವನ್ನು ಸ್ಥಾಪಿಸಲು ಜನ್ಮ ವನ್ನೆತ್ತಿದನು.

೧೦೪-೧೦೫. ಚೈತ್ರಶುದ್ಧ ನವಮಿಯು ಹಿಂದೆ ಹೇಳಿದ ರೀತಿಯಲ್ಲಿ ಶ್ರೇಷ್ಠ ವಾದುದರಿಂದಲೂ ಶ್ರೀರಾಮನು ಅದರಲ್ಲಿ ಜನ್ಮವೆತ್ತಿದುದರಿಂದಲೂ ಮನುಷ್ಯನ ಕರ್ಮವನ್ನು ಕ್ಷಯಿಸಿ ಅವನಿಗೆ ಮೋಕ್ಷವನ್ನು ಕೊಡುತ್ತದೆ. ಈ ನವಮಿಯ ದಿವಸ ಮಾಡಿದ ದಾನವೂ ಹೋಮವೂ ಜಪವೂ, ಮತ್ತಾವ ಶುಭ ಕರ್ಮವಾದರೂ ಸರಿಯೆ ಅದೂ ಕೊಡ ಸ್ವಲ್ಪವಾಗಿದ್ದರೂ ಅಕ್ಷಯವಾಗಿ ಆಗುತ್ತದೆ. ಈ ವಿಷಯ ದಲ್ಲಿ ಚರ್ಚಿಸಲೇ ಬೇಕಾಗಿಲ್ಲ. ಆ ಚೈತ್ರ ಶುದ್ಧ ಪಾಡ್ಯಮಿಯಿಂದ ನೊದಲು ಗೊಂಡು ನವಮಿಯವರೆಗೂ ಒಂಭತ್ತು ದಿನಗಳೂ ಉಪವಾಸವಿರಬೇಕು.

೧೦೬. ಆ ನವರಾತ್ರಿಯಲ್ಲಿ ಪ್ರತಿದಿನವೂ ಶ್ರೀರಾಮನನ್ನು ಪೂಜಿಸುತ್ತಿರ ಬೇಕು. ಆ ವರ್ಷದ ಆದಿಯಾದ ಪಾಡ್ಯದ ದಿವಸ ಮನೆಗಳ ಮೇಲೆ ಧ್ವಗಳನ್ನು ಎತ್ತಿ ಕಟ್ಟಬೇಕು.

ದಿವ್ಯವಸ್ತ್ರೈಶ್ಚ ಮಾಲ್ಯೈಶ್ಚ ಮಂಡಿತಾಶ್ಚ ಮನೋರಮಾಃ ।
ರಾಮಜನ್ಮಸೂಚನಾರ್ಥಂ ಪ್ರೀತ್ಯರ್ಥಂ ರಾಘವಸ್ಯ ಚ ॥ ೧೦೭ ॥

ಗೃಹೇ ಗೃಹೇ ಸರ್ವೈಃ ಕಾರ್ಯಾಃ ಪೂಜನೀಯಾಶ್ಚ ಭಕ್ತಿತಃ ।
ಗೃಹೇ ದೇವಾಲಯೇ ವಾಥ ಗೋಷ್ಠೇ ಬೃಂದಾವನೇ ಶುಭೇ ॥ ೧೦೮ ॥

ಸಂಮಾರ್ಜನಾದಿಕಂ ನಿತ್ಯಂ ಕಾರ್ಯಂ ಚಂದನವಾರಿಭಿಃ ।
ತತಃ ಪಾಷಾಣಚೂರ್ಣೈಶ್ಚ ನಾನಾ ಪದ್ಮಾದಿಕಾನಿ ಹಿ ॥ ೧೦೯ ॥

ಲೇಖನೀಯಾನಿ ಭೂಮ್ಯಾಂ ತು ನೀಲಪೀತಾದಿವರ್ಣಕೈಃ ।
ಅಷ್ಟೋತ್ತರಸಹಸ್ರಾಖ್ಯಂ ರಾಮತೋಭದ್ರಮುತ್ತಮಂ ॥ ೧೧೦ ॥

ಶತಾಖ್ಯಂ ವಾ ಲಿಖೇದ್ಭದ್ರಂ ಅಥವಾನ್ಯನ್ಮನೋರಮಂ ।
ತಸ್ಯೋಪರಿ ಮಹಾನ್ ರಮ್ಯಶ್ಚಿತ್ರವರ್ಣಶ್ಚ ಮಂಡಪಃ ॥ ೧೧೧ ॥

---

೧೦೭. ಅವುಗಳಿಗೆ ಉತ್ತಮವಾದ ಬಟ್ಟೆಗಳನ್ನು ಕಟ್ಟಿ ಹೂಮಾಲೆಗಳನ್ನು ಹಾಕಿ ಮನೋಹರವಾಗಿರುವಂತೆ ಅಲಂಕರಿಸಬೇಕು. ಹೀಗೆ ಮಾಡುವುದು ರಾಮಜನ್ಮಕ್ಕೆ ಸೂಚನೆಯಾಗಿರುತ್ತದಲ್ಲದೆ ಅವನಿಗೆ ಪ್ರೀತಿಯನ್ನೂ ಉಂಟು ಮಾಡುತ್ತದೆ.

೧೦೮-೧೧೧. ಜನಗಳು ಈ ರೀತಿಯಾಗಿ ಪ್ರತಿಯೊಬ್ಬರ ಮನೆಯಲ್ಲಿಯೂ ಮಾಡಬೇಕು. ಆ ಧ್ವಜವನ್ನು ಪೂಜಿಸಬೇಕು. ಮನೆ ಯಲ್ಲಾಗಲಿ, ದೇಸ್ಥಾನ ದಲ್ಲಾಗಲಿ, ದನಗಳ ಕೊಟ್ಟಿಗೆಯಲ್ಲಾಗಲಿ, ಬೃಂದಾವನದಲ್ಲಿಯಾಗಲಿ, ಚೆನ್ನಾಗಿ ಗುಡಿಸಿ ಚಂದನದ ನೀರಿನಿಂದ ಸಾರಿಸಬೇಕು. ಅನಂತರ ನೀಲಿ, ಹಳದಿ ಮುಂತಾದ ರಂಗೋಲಿಯಿಂದ ಬಗೆ ಬಗೆಯ ಪದ್ಮಗಳನ್ನು ರಚಿಸಬೇಕು. ಸಾವಿರದ ನೂರ ಎಂಟು ರಮತೋಭದ್ರಾಸನವನ್ನು ಬರೆಯುವುದು ಉತ್ತಮವು. ಶತ ರಾಮತೋ ಭದ್ರವನ್ನಾದರೂ ರಚಿಸಬಹುದು. ಮತ್ತೆ ಯಾವುದಾದರೂ ಮನೋಹರವಾದ ಆಸನವನ್ನಾದರೂ ಬರೆಯಬಹುದು. ಅದರ ಮೇಲೆ ದೊಡ್ಡದಾಗಿಯೂ ಮನೋ ಹರವಾಗಿಯೂ ಇರುವ ಚಿತ್ರವರ್ಣದ ಮಂಟಪವನ್ನು ಕಟ್ಟಬೇಕು.

ದೇಯೋ ದ್ವಾರಾಣಿ ಚತ್ವಾರಿ ಕಾರ್ಯಾಣಿ ತೋರಣಾನಿ ಚ ।
ಕದಳೀ ಸ್ತಂಭಯುಕ್ತಾನಿ ಇಕ್ಷುದಂಡಯುತಾನಿ ಚ ॥ ೧೧೨ ॥

ನಾನಾಘಂಟಾಕಿಂಕಿಣೀಭಿರ್ಧ್ವನಿತಾನ್ಯುಜ್ಜ್ವಲಾನಿ ಚ ।
ರಮ್ಯಾದರ್ಶೈರ್ಮಂಡಿತಾನಿ ವಿಚಿತ್ರಾಣಿ ಶುಭಾನಿ ಚ ॥ ೧೧೩ ॥

ನಾನಾಚಿತ್ರವಿತಾನೈಶ್ಚ ಮುಕ್ತಾಹಾರೈರ್ಯುತಾನಿ ಚ ।
ತಸ್ಮಿನ್ ಹೇಮಮಯಃ ಕಾರ್ಯೋ ಮಂಚಕೋ ರತ್ನಮಂಡಿತಃ ॥ ೧೧೪ ॥

ತಸ್ಯೋಪರಿ ಮಹಾವಸ್ತ್ರೈಃ ಶಯ್ಯಾ ಕಾರ್ಯಾ ಮನೋರಮಾ ।
ತಸ್ಯಾಂ ಷೋಡಶ ಮಾಷೈಸ್ತು ಪ್ರತಿಮಾ ಕಾಂಚನೋದ್ಭವಾ ॥ ೧೧೫ ॥

ದ್ವಿಭುಜಾ ರಾಮಚಂದ್ರಸ್ಯ ಸರ್ವಲಕ್ಷಣಲಕ್ಷಿತಾ ।
ಚತುರ್ವಿಂಶತಿಮಾಷೈಶ್ಚ ಪ್ರತಿಮಾ ರಜತೋದ್ಭವಾ ॥ ೧೧೬ ॥

೧೧೨-೧೧೩. ಆ ಮಂಟಪಕ್ಕೆ ನಾಲ್ಕು ಬಾಗಿಲುಗಳನ್ನು ಇಡಬೇಕು. ಅವಕ್ಕೆ ತೋರಣಗಳನ್ನು ಕಟ್ಟಬೇಕು. ಬಾಳೆಯ ಕಂಬಗಳನ್ನೂ ಕಬ್ಬಿನ ಜಲ್ಲೆಗಳನ್ನೂ ಕಟ್ಟಬೇಕು. ಆ ತೋರಣಗಳಿಗೆ ಅನೇಕವಾಗಿ ಗಂಟೆಗಳನ್ನೂ ಗೆಜ್ಜೆಗಳನ್ನೂ ಕಟ್ಟಬೇಕು. ಅವೆಲ್ಲವೂ ಧ್ವನಿಯನ್ನು ಮಾಡುತ್ತಿರಬೇಕು. ಪ್ರಕಾಶವಾಗಿಬೆಳಗುತ್ತಿರಬೇಕು. ಅವುಗಳಲ್ಲಿ ಚಿತ್ರವಿಚಿತ್ರವಾಗಿಯೂ ಮಂಗಳಕರವಾಗಿಯೂ ಇರುವ ಕನ್ನಡಿಗಳನ್ನಿಟ್ಟು ಅಲಂಕರಿಸಬೇಕು.

೧೧೪. ಬಣ್ಣದ ಮೇಲ್ಕಟ್ಟುಗಳನ್ನು ಕಟ್ಟಬೇಕು. ಮುತ್ತಿನ ಹಾರಗಳನ್ನು ಹಾಕಿರಬೇಕು. ಆ ಮಂಟಪದೊಳಗೆ ಚಿನ್ನದ ಮಂಚವನ್ನು ಮಾಡಿಡಬೇಕು. ಅದಕ್ಕೆ ರತ್ನಗಳಿಂದ ಅಲಂಕರಿಸಬೇಕು.

೧೧೫. ಆ ಮಂಚದ ಮೇಲೆ ಉತ್ತಮವಾದ ಬಟ್ಟೆಯಿಂದ ಕೂಡಿದ ಒಂದು ಹಾಸಿಗೆಯನ್ನು ನಿರ್ಮಿಸಬೇಕು. ಅದರ ಮೇಲೆ ರಾಮಚಂದ್ರನ ಪ್ರತಿಮೆಯನ್ನು ಮಾಡಿ ಇಡಬೇಕು.

೧೧೬-೧೧೭. ಆ ಪ್ರತಿಮೆಯು ಹದಿನಾರು ಮಾಷ ಗುಲಗಂಜಿಗಳ ತೂಕವುಳ್ಳದ್ದಾಗಿರಬೇಕು. ಆ ರಾಮಚಂದ್ರನ ಪ್ರತಿಮೆಯು ಎರಡು ತೋಳುಗಳುಳ್ಳದಾಗಿ ಮನೋಹರವಾಗಿ ಎಲ್ಲಾ ಲಕ್ಷಣಗಳಿಂದಲೂ ಕೂಡಿರಬೇಕು.

ಕೌಸಲ್ಯಾಯಾಃ ಶುಭಾ ಕಾರ್ಯಾ ಪೂಜನೀಯಾ ಮನೋರಮಾ ।
ಯಥಾವಿತ್ತಾನುಸಾರೇಣ ಪೂಜಯೇತ್ಪ್ರತ್ಯಹಂ ನರಃ ॥ ೧೧೭ ॥

ಭೇರೀಮೃದಂಗತೂರ್ಯೈಶ್ಚ ಗೀತನೃತ್ಯಾದಿ ಕಾರಯೇತ್ ।
ನಾನಾಪಕ್ವಾನ್ನನೈವೇದ್ಯೈರುಪಚಾರೈಃ ಸುಪೂಜಯೇತ್ ॥ ೧೧೮ ॥

ಪ್ರತಿಪದ್ದಿನಮಾರಭ್ಯ ಯಾವತ್ತು ನವಮೀದಿನಂ ।
ರಾಮಾಯಣಂ ತಾವದೇವ ಪಠನೀಯಮಿದಂ ಶುಭಂ ॥ ೧೧೯ ॥

ಯದ್ವೈ ವಾಲ್ಮೀಕಿನಾ ಗೀತಂ ಶ್ರವಣಾನ್ಮಂಗಳಪ್ರದಂ ।
ಆನಂದಸಂಜ್ಞಕಂ ರಮ್ಯಂ ಪಠನೀಯಂ ಮನೋರಮಂ ॥ ೧೨೦ ॥

ನವಕಾಂಡಾನಿ ನವಭಿರ್ದಿನೈರೇವ ಪಠೇನ್ನರಃ ।
ದಿವಸೇ ದಿವಸೇ ಕಾಂಡಂ ಪಠನೀಯಂ ಪ್ರಯತ್ನತಃ ॥ ೧೨೧ ॥

ಮತ್ತು ಇಪ್ಪತ್ತುನಾಲ್ಕು ಮಾಷಗಳ ತೂಕದ ಬೆಳ್ಳಿಯಲ್ಲಿ ಕೌಸಲ್ಯೆಯ ಪ್ರತಿಮೆ ಯನ್ನು ಮಾಡಿಸಬೇಕು. ಈ ಪ್ರತಿಮೆಗಳನ್ನು ಹಾಸಿಗೆಯ ಮೇಲಿಟ್ಟು ತನ್ನ ಸಂಪತ್ತಿಗೆ ಅನುಗುಣವಾಗಿ ನಿತ್ಯವೂ ಪೂಜಿಸಬೇಕು.

೧೧೮. ಭೇರಿ ಮೃದಂಗ ಮುಂತಾದ ವಾದ್ಯಧ್ವನಿಗಳನ್ನೂ ನೃತ್ಯಗಳನ್ನೂ ಮಾಡಬೇಕು. ಬಗೆಬಗೆಯಾದ ಪಕ್ವಾನ್ನಗಳನ್ನೂ ಮಾಡಿ ನಿವೇದನ ಮಾಡ ಬೇಕು. ವಿಧ ವಿಧವಾದ ಉಪಚಾರಗಳಿಂದ ಪೂಜಿಸಬೇಕು.

೧೧೯-೨೦. ಚೈತ್ರಮಾಸದ ಪಾಡ್ಯದಿಂದ ಮೊದಲುಗೊಂಡು ನವಮಿಯ ಪೂರ್ತಿಯಾಗಿ ಶುಭಕರವಾದ ವಾಲ್ಮೀಕಿಯು ಗಾನಮಾಡಿರುವ ಮತ್ತು ಕೇಳು ವುದರಿಂದಲೇ ಮಂಗಳವನ್ನುಂಟು ಮಾಡುವ ಆನಂದವೆಂಬ ಹೆಸರುಳ್ಳ ಮನೋ ಹರವಾದ ರಾಮಾಯಣವನ್ನು ಎಂದರೆ ಆನಂದರಾಮಾಯಣವನ್ನು ಪಾರಾಯಣ ಮಾಡಬೇಕು.

೧೨೧. ಅದರಲ್ಲಿರುವ ಒಂಭತ್ತು ಕಾಂಡಗಳನ್ನು ದಿನಕ್ಕೊಂದರಂತೆ ಒಂಭತ್ತು ದಿನಗಳವರೆಗೂ ಪಾರಾಯಣ ಮಾಡಬೇಕು. ಒಂದನೇ ದಿವಸ ಒಂದನೇ ಕಾಂಡವನ್ನೂ, ಎರಡನೆಯದಿವಸ ಎರಡನೆಯ ಕಾಂಡವನ್ನೂ ಈ ರೀತಿ ಯಾಗಿ ಒಂಭತ್ತು ದಿನಗಳಲ್ಲಿ ಒಂಭತ್ತು ಕಾಂಡಗಳನ್ನೂ ಪ್ರಯತ್ನಪಟ್ಟು ಪಾರಾ ಯಣಮಾಡಿ ಮುಗಿಸಬೇಕು.

ಅಥವಾ ಪ್ರತ್ಯಹಂ ಸರ್ಗಾಃ ಪಠಿತವ್ಯಾಸ್ತು ದ್ವಾದಶ ।
ಶೇಷಸ್ತ್ವೇಕಃ ಕದಾ ಮಧ್ಯೇಧಿಕಃ ಸೋಽಪಿ ಪಠೇನ್ನರಃ ॥ ೧೨೨ ॥

ಅಷ್ಟೋತ್ತರಶತೈಸ್ಸರ್ಗೈ ರಾಮಕೀರ್ತನಮಾಲಿಕಾ ।
ಮೇರುಯುಕ್ತಾ ಪಠೇದೇವಂ ರಾಮಾಗ್ರೇ ನವಭಿರ್ದಿನೈಃ ॥ ೧೨೩ ॥

ಸರ್ವತೀರ್ಥೇಷು ಯತ್ಪುಣ್ಯಂ ಸರ್ವದಾನೇಷು ಯತ್ಫಲಂ ।
ರಾಮಾಯಣಸ್ಯ ಪಠನಾತ್ ತತ್ಫಲಂ ನವರಾತ್ರಕೇ ॥ ೧೨೪ ॥

ಶ್ಲೋಕಂ ವಾ ಶ್ಲೋಕಪಾದಂ ವಾ ಯದ್ರಾಮಾಯಣಸಂಭವಂ ।
ನವರಾತ್ರೇ ಪಠಿಷ್ಯಂತಿ ಚೈತ್ರೇ ತೇ ಮೋಕ್ಷಭಾಗಿನಃ ॥ ೧೨೫ ॥

---

೧೨೨. ಹೀಗೆ ದಿನಕ್ಕೆ ಒಂದು ಕಾಂಡವನ್ನು ಪಾರಾಯಣ ಮಾಡಲಾಗ ದಿದ್ದರೆ ದಿನಒಂದಕ್ಕೆ ಹನ್ನೆರಡು ಸರ್ಗಗಳನ್ನಾದರೂ ಪಾರಾಯಣ ಮಾಡಬೇಕು. ಒಂಬತ್ತು ದಿನಗಳಲ್ಲಿ ನೂರೊಂಭತ್ತು ಸರ್ಗವನ್ನು ಪಾರಾಯಣ ಮಾಡಬೇಕಾ ಗಿರುವುದರಿಂದ ಈ ದಿನಗಳಲ್ಲಿ ಯಾವುದಾದರೂ ಒಂದು ದಿನದಲ್ಲಿ ಒಂದು ಸರ್ಗ ವನ್ನು ಹೆಚ್ಚಾಗಿ ಪಾರಾಯಣ ಮಾಡಬೇಕು.

೧೨೩. ಈ ನೂರೆಂಟು ಸರ್ಗಗಳನ್ನು ಪಾರಾಯಣ ಮಾಡಿದರೆ ಇದು ರಾಮ ಕೀರ್ತನ ಮಾಲಿಕೆ ಎಂದೆನಿಕೊಳ್ಳುತ್ತದೆ. ಹೆಚ್ಚಾದ ಒಂದು ಸರ್ಗಕ್ಕೆ ಮೇರು ಸರ್ಗವೆಂದು ಹೆಸರು. ಈ ರೀತಿಯಾಗಿ ಒಂಭತ್ತು ದಿನಗಳಲ್ಲಿ ನೂರ ಒಂಭಂತ್ತು ಸರ್ಗಗಳನ್ನೂ ರಾಮನ ಮುಂದೆ ಪಾರಾಯಣ ಮಾಡಬೇಕು.

೧೨೪. ಈ ನವರಾತ್ರಿಯಲ್ಲಿ ರಾಮಾಯಣವನ್ನು ರಾಮನ ಮುಂದೆ ಪಾರಾಯಣ ಮಾಡಿದರೆ ಎಲ್ಲಾ ತೀರ್ಥಗಳಲ್ಲಿಯೂ ಸ್ನಾನ ಮಾಡಿದರೆ ಯಾವ ಪುಣ್ಯವು ಬರುವುದೋ ಆ ಪುಣ್ಯವು ಬರುತ್ತದೆ. ಎಲ್ಲಾ ದಾನಗಳನ್ನೂ ಮಾಡಿ ದರೆ ಯಾವ ಫಲವು ಬರುತ್ತದೆಯೋ ಆ ಫಲವು ಬರುತ್ತದೆ.

೧೨೫. ಈ ಚೈತ್ರ ನವರಾತ್ರಿಯಲ್ಲಿ ರಾಮಾಯಣದ ಒಂದು ಶ್ಲೋಕವ ನ್ನಾಗಲಿ ಅಥವಾ ಕೊನೆಗೆ ಒಂದು ಶ್ಲೋಕದ ಪಾದವನ್ನಾಗಲಿ ಪಾರಾಯಣ ಮಾಡಿದರೆ ಅವರು ಮೋಕ್ಷವನ್ನು ಖಂಡಿತವಾಗಿಯೂ ಹೊಂದುತ್ತಾರೆ.

ಏವಂ ಹಿ ಪ್ರತ್ಯಹಂ ಕಾರ್ಯಂ ಕೌಸಲ್ಯಾ ರಾಮಪೂಜನಂ ।
ಸಪುತ್ರಿಣೀನಾಂ ತು ನಾರೀಣಾಂ ತತ್ರ ಕಾರ್ಯಂ ಪ್ರಪೂಜನಂ ॥ ೧೨೬ ॥

ಸಪುತ್ರದ್ವಿಜವರ್ಯಾಣಾಂ ವಿಶೇಷಾತ್ಪೂಜನಂ ಸ್ಮೃತಂ ।
ವಸ್ತ್ರಾದ್ಯಲಂಕಾರಯುತಂ ಚಿತ್ರಭೋಜನಭೋಜಿತಂ ॥ ೧೨೭ ॥

ಏವಂ ಕೃತ್ವಾ ವಿಧಿಂ ಸರ್ವಂ ನವಮ್ಯಾಂ ಚ ವಿಶೇಷತಃ ।
ಪೂಜಯಿತ್ವಾ ರಾಮಚಂದ್ರಂ ವಾಹನಾರೂಢಮುತ್ತಮಂ ॥ ೧೨೮ ॥

ಭೇರೀಮೃದಂಗಘೋಷೈಶ್ಚ ತೂರ್ಯದುಂದುಭಿನಿಸ್ವನೈಃ ।
ವಾರಸ್ತ್ರೀನೃತ್ಯಕೃತ್ಯೈಶ್ಚ ಗಾಯಕಾನಾಂ ಚ ಗಾಯನೈಃ ॥ ೧೨೯ ॥

ಏವಂ ನಾನಾಸಮುತ್ಸಾಹೈಃ ಮಂಡಿತಂ ಛತ್ರಶೋಭಿತಂ ।
ಚಾಮರೈರ್ವೀಜ್ಯಮಾನಂ ಚ ಪುಷ್ಪಕೇ ಸಂಸ್ಥಿತಂ ವರಂ ॥ ೧೩೦ ॥

೧೨೬-೧೨೭. ಇದೇ ರೀತಿಯಾಗಿ ಈ ಚೈತ್ರ ನವರಾತ್ರಿಯಲ್ಲಿ ನಿತ್ಯವೂ ಕೌಸಲ್ಯೆ ರಾಮರ ಪೂಜೆಯನ್ನು ಮಾಡುತ್ತಿರಬೇಕು. ಇದಕ್ಕೋಸ್ಕರವಾಗಿ ಮಕ್ಕಳಿರುವ ಮುತ್ತೈದೆಯರನ್ನು ಕರೆದು ಅವರಿಗೆ ಭಕ್ಷ್ಯಭೋಜ್ಯಗಳನ್ನು ಹಾಕಿ ತೃಪ್ತಿಪಡಿಸಬೇಕು. ಹೆಂಡತಿ ಮಕ್ಕಳುಗಳುಳ್ಳ ಬ್ರಾಹ್ಮಣರಿಗೆ ವಸ್ತ್ರಗಳನ್ನು ಕೊಟ್ಟು ಭೋಜನ ಮಾಡಿಸುವುದು ಉತ್ತಮವು.

೧೨೮. ಈ ರೀತಿಯಾಗಿ ನಿತ್ಯ ಪೂಜೆ ಮಾಡುತ್ತ ಬಂದು ನವಮಿಯ ದಿವಸ ಆ ರಾಮಚಂದ್ರನನ್ನು ವಿಶೇಷರೀತಿಯಿಂದ ಪೂಜಿಸಿ ಉತ್ತಮವಾದ ವಾಹನದ ಮೇಲೆ ಕೂರಿಸಬೇಕು.

೧೨೯. ಭೇರಿ, ಮೃದಂಗಗಳನ್ನು ಧ್ವನಿ ಮಾಡಿಸುತ್ತ ನರ್ತಕಿಯರಿಂದ ನರ್ತನ ಮಾಡಿಸುತ್ತ, ಗಾಯಕರಿಂದ ಗಾಯನ ಮಾಡಿಸುತ್ತ ಮೆರವಣಿಗೆ ಮಾಡಿಸಬೇಕು.

೧೩೦. ಆ ಸ್ವಾಮಿಗೆ ಶ್ವೇತಛತ್ರಿಯನ್ನು ಹಿಡಿದಿರಬೇಕು. ಚಾಮರಗಳಿಂದ ಬೀಸುತ್ತಿರಬೇಕು. ಪುಷ್ಪ ವಿಮಾನದಲ್ಲಿ ಕೂರಿಸಬೇಕು.

ರಾಮತೀರ್ಥಾಂತಿಕಂ ನೀತ್ವಾ ಪಂಚಾಮೃತಘಟೈರ್ವರೈಃ ।
ಸ್ನಾಪಯೇದ್ರಘುವೀರಂ ಹಿ ಪುಣ್ಯತೋಯೈಸ್ತತಃ ಪರಂ ॥ ೧೩೧ ॥

ರುದ್ರಸೂಕ್ತೈರ್ವಿಷ್ಣುಸೂಕ್ತೈ ಸ್ಸಹಸ್ರೈರ್ನಾಮಭಿಸ್ತಥಾ ।
ಮಾಂಗಲ್ಯದ್ರವ್ಯಸಂಮಿಶ್ರೈರ್ಜಲೈಸ್ತಮಭಿಷೇಚಯೇತ್ ॥ ೧೩೨ ॥

ಮಾಂಗಲ್ಯವರದ್ರವ್ಯೈಶ್ಚ ನಾನಾ ತನ್ಮಂಗಳಾಭಿದಂ ।
ಪ್ರೋಚ್ಯತೇ ಮಂಗಳ ಸ್ನಾನಂ ತಚ್ಚೈತ್ರೇ ದುರ್ಲಭಂ ನೃಣಾಂ ॥ ೧೩೩ ॥

ತತ್ಪಂಚಾಮೃತತೀರ್ಥಂ ತು ತೀರ್ಥಮಧ್ಯೇ ವಿನಿಕ್ಷಿಪೇತ್ ।
ತತ್ರ ಸರ್ವೈರ್ಜನೈಶ್ಶೀಘ್ರಂ ಸ್ನಾತವ್ಯಂ ತದನಂತರಂ ॥ ೧೩೪ ॥

ಸಹಸ್ರಾವಭೃತೈಃ ಸ್ನಾನೈರ್ಯತ್ಫಲಂ ಪ್ರಾಪ್ಯತೇ ನರೈ ।
ತತ್ಫಲಂ ರಾಮಚಂದ್ರಸ್ಯ ಮಂಗಳಸ್ನಾನಕಾರಣಾತ್ ॥ ೧೩೫ ॥

---

೧೩೧. ಹೀಗೆ ಶೃಂಗರಿಸಿಕೊಂಡು ಮೆರವಣಿಗೆ ಮಾಡುತ್ತ ರಾಮತೀರ್ಥದ ಬಳಿಗೆ ಕರೆದುಕೊಂಡು ಹೋಗಬೇಕು. ಮೊದಲು ಪಂಚಾಮೃತಗಳಿಂದ ಸ್ನಾನ ಮಾಡಿಸಬೇಕು ಅನಂತರ ಉತ್ತಮವಾದ ತೀರ್ಥದಿಂದ ಸ್ನಾನ ಮಾಡಿಸಬೇಕು.

೧೩೨. ಹೀಗೆ ಸ್ನಾನ ಮಾಡಿಸುವಾಗ ರುದ್ರ ಸೂಕ್ತಗಳನ್ನೂ, ವಿಷ್ಣು ಸೂಕ್ತವೇ ಮುಂತಾದ ಸೂಕ್ತಗಳನ್ನೂ, ಹೇಳಬೇಕು. ಸಹಸ್ರನಾಮಗಳನ್ನಾದರೂ ಕಡೆಗೆ ಹೇಳಿ ಮಂಗಳ ದ್ರವ್ಯಗಳಿಂದಲೂ ಶುದ್ಧೋದಕದಿಂದಲೂ ಸ್ನಾನ ಮಾಡಿಸಬೇಕು.

೧೩೩. ಮಂಗಳ ದ್ರವ್ಯವನ್ನು ನೀರಿಗೆ ಹಾಕಿ ಮಂಗಳಕರವಾದ ಸೂಕ್ತಗಳನ್ನು ಹೇಳಿ ಸ್ನಾನಮಾಡಿಸುವುದೇ ಮಂಗಳ ಸ್ನಾನವೆನಿಸುವುದು. ಇದು ಮನುಷ್ಯರಿಗೆ ಲಭಿಸುವುದು ದುರ್ಲಭವು.

೧೩೪. ಆ ಸ್ವಾಮಿಗೆ ಅಭಿಷೇಕ ಮಾಡಿ ಸ್ನಾನ ಮಾಡಿಸಿದ ಪಂಚಾಮೃತವೇ ಮುಂತಾದುವನ್ನು ಆ ತೀರ್ಥರೂಪವಾದ ನೀರಿನ ಮಧ್ಯಕ್ಕೆ ಹಾಕಬೇಕು. ಅನಂತರ ಆ ನೀರಿನಲ್ಲಿ ಎಲ್ಲರೂ ಇಳಿದು ಸ್ನಾನ ಮಾಡಬೇಕು.

೧೩೫. ಯಜ್ಞಗಳಲ್ಲಿ ಕೊನೆಯದಾದ ಅವಭೃತ ಸ್ನಾನಗಳನ್ನು ಸಾವಿರವನ್ನು ಮಾಡಿದರೆ ಯಾವಪುಣ್ಯವು ಬರುವುದೆಂದು ಹೇಳುವರೋ ಆ ಫಲವು ರಾಮಚಂದ್ರನಿಗೆ ಈ ರೀತಿಯಾಗಿ ಮಂಗಳ ಸ್ನಾನ ಮಾಡಿಸುವುದರಿಂದ ಬರುತ್ತದೆ.

ಪುಷ್ಕರಾದಿಷು ತೀರ್ಥೇಷು ಗಂಗಾದ್ಯಾಸು ಸರಿತ್ಸು ಚ ।
ಪ್ರಾಪ್ಯತೇ ಯತ್ಫಲಂ ಸ್ನಾನಾತ್ ಮಂಗಳಸ್ನಾನಕೃಚ್ಚ ತತ್ ॥ ೧೩೬ ॥

ಏವಂ ರಾಮಂ ತು ಸಂಸ್ನಾಪ್ಯ ಸೀತಾಯುಕ್ತಂ ಪ್ರಪೂಜ್ಯ ಚ ।
ಪುನಃ ಪೂರ್ವೋಕ್ತವಾದ್ಯಾದಿ ಮಂಗಳೈರಾನಯೇದ್ಗೃಹಂ ॥ ೧೩೭ ॥

ಗೃಹೇ ರಾಮಂ ಪುನಃ ಪೂಜ್ಯ ರಾಮಾಯಣಕೃತಂ ವರಂ ।
ಪಾರಾಯಣಂ ಸಮಾಪ್ಯಾಥ ಪುಸ್ತಕಂ ಪೂಜಯೇಚ್ಛುಭಂ ॥ ೧೩೮ ॥

ನಾನೋತ್ಸವೈರ್ದಿನಂ ನೀತ್ವಾ ಕಾರ್ಯಂ ಜಾಗರಣಂ ನಿಶಿ ।
ದಶಮ್ಯಾಂ ಪ್ರಾತರುತ್ಥಾಯ ಭೋಜಯಿತ್ವಾ ದ್ವಿಜಾನ್ ಬಹೂನ್ ॥ ೧೩೯ ॥

---

೧೩೬. ಪುಷ್ಕರವೇ ಮುಂತಾದ ತೀರ್ಥಗಳಲ್ಲಿಯೂ ಗಂಗೆಯೇ ಮುಂತಾದ ಪುಣ್ಯ ನದಿಗಳಲ್ಲಿಯೂ ಸ್ನಾನ ಮಾಡಿಸುವುದರಿಂದ ಯಾವ ಫಲವು ಬರುವುದೋ ಆ ಫಲವು ರಾಮಚಂದ್ರನಿಗೆ ಈ ಮಂಗಳವನ್ನು ಮಾಡಿಸಿ ಅದರಲ್ಲಿ ನಾವು ಸ್ನಾನ ಮಾಡಿಸುವುದರಿಂದ ಬರುತ್ತದೆ.

೧೩೭. ಶ್ರೀರಾಮನಿಗೆ ಈ ರೀತಿಯಾಗಿ ಸ್ನಾನ ಮಾಡಿಸಿ ಅನಂತರ ಸೀತೆಯೊಡನೆ ಇರುವ ರಾಮನನ್ನು ಪೂಜಿಸಬೇಕು. ಅನಂತರ ಹಿಂದೆ ಹೇಳಿದಂತೆ ವಾದ್ಯಗಳೇ ಮುಂತಾದ ವೈಭವಗಳಿಂದ ಮನೆಗೆ ಕರೆತರಬೇಕು.

೧೩೮. ಮತ್ತೆ ಮನೆಯಲ್ಲಿ ಶ್ರೀರಾಮನನ್ನು ಪೂಜಿಸಿ ತಾನು ಮಾಡುತ್ತಿದ್ದ ರಾಮಾಯಣದ ಪಾರಾಯಣವನ್ನು ಪೂರ್ತಿಮಾಡಬೇಕು. ಅನಂತರ ಆ ರಾಮಾಯಣದ ಪುಸ್ತಕವನ್ನು ಪೂಜಿಸಬೇಕು.

೧೩೯. ಆ ದಿನದ ಹಗಲನ್ನೆಲ್ಲಾ ಈ ರೀತಿಯಾಗಿ ವಿಧವಿಧವಾದ ಉತ್ಸವಗಳಿಂದ ಕಳೆದು ರಾತ್ರಿಯಲ್ಲಿ ಜಾಗರಣೆಯನ್ನೂ ಮಾಡಬೇಕು. ದಶಮಿಯ ದಿವಸ ಅನೇಕ ಜನ ಬ್ರಾಹ್ಮಣರಿಗೆ ಭೋಜನಕ್ಕೆ ಹೇಳಿ ಅವರಿಗೆಲ್ಲರಿಗೂ ಭೋಜನ ಮಾಡಿಸಬೇಕು.

ಪೂಜಯಿತ್ವಾ ಪುನಸ್ಸರ್ವಂ ಗುರವೇ ತದ್ವಿಸರ್ಜಯೇತ್ ।
ತತಃ ಸ್ವಯಂ ಸುಹೃನ್ಮಿತ್ರೈಃ ಕುರ್ಯಾದ್ಭೋಜನಮುತ್ತಮಂ ॥ ೧೪೦ ॥

ಏವಂ ವ್ರತಂ ಸಮಾಖ್ಯಾತಂ ಚೈತ್ರಸ್ಯ ನವರಾತ್ರಕೇ ।
ಅತಸ್ತನ್ನವರಾತ್ರಂ ಹಿ ಶ್ರೇಷ್ಠಂ ಚೈತ್ರೇ ಮಹತ್ತಮಂ ॥ ೧೪೧ ॥

ನವರಾತ್ರೇಽಪಿ ಸಾ ರಾಮನವಮೀ ಪರಮಾರ್ಥದಾ ।
ತತ್ಸಮಾನಾ ತಿಥಿರ್ನಾನ್ಯಾ ಚೈತ್ರಮಾಸೇ ಶುಭಪ್ರದಾ ॥ ೧೪೨ ॥

ಅತಃ ಪರಂ ಪ್ರವಕ್ಷ್ಯಾಮಿ ಚೈತ್ರೋದ್ಯಾಪನಕಂ ವಿಧಿಂ ।
ಯತ್ಕೃತ್ವಾ ಸಫಲಂ ಸರ್ವಂ ಚೈತ್ರಸ್ನಾನಂ ತು ಜಾಯತೇ ॥ ೧೪೩ ॥

ಚೈತ್ರೇ ಮಾಸಿ ಸಿತೇ ಪಕ್ಷೇ ಯಾ ವೈ ಹ್ಯೇಕಾದಶೀತಿಥಿಃ ।
ಸರ್ವಾಸು ತಿಥಿಷು ಶ್ರೇಷ್ಠಾ ಚೋಪೋಷ್ಯಾ ವಿಧಿಕಾರಿಭಿಃ ॥ ೧೪೪ ॥

---

೧೪೦. ಮತ್ತೆ ಆ ದಶಮಿಯ ದಿವಸ ಶ್ರೀರಾಮನನ್ನು ನಿತ್ಯದಂತೆಯೇ ಪೂಜಿಸಿ ಗುರುವಿಗೆ ಅದೆಲ್ಲವನ್ನೂ ಕೊಟ್ಟು ಬಿಡಬೇಕು. ಅನಂತರ ತಾನು ಮಿತ್ರರೊಡನೆಯೂ, ಬಂಧು ಗಳೊಡನೆಯೂ ಭೋಜನ ಮಾಡಬೇಕು.

೧೪೧. ಚೈತ್ರ ನವರಾತ್ರೆಯಲ್ಲಿ ಈ ರೀತಿಯಾದ ವ್ರತವನ್ನು ಮಾಡಬೇಕು ಆದ್ದರಿಂದಲೇ ಈ ಚೈತ್ರ ನವರಾತ್ರೆಯು ಬಹು ಉತ್ತಮೋತ್ತಮವಾದುದು ಎನಿಸಿ ಕೊಂಡಿದೆ.

೧೪೨. ಈ ಚೈತ್ರ ನವರಾತ್ರೆಯಲ್ಲಿಯೂ ಕೂಡ ಆ ರಾಮ ನವಮಿಯು ಉತ್ತಮೋತ್ತಮವಾದುದು. ಈ ತಿಥಿಗಿಂತಲೂ ಉತ್ತಮವಾದ ತಿಥಿಯು ಚೈತ್ರ ಮಾಸದಲ್ಲಿ ಇಲ್ಲವೇ ಇಲ್ಲವು.

೧೪೩. ಇನ್ನು ಮೇಲೆ ಚೈತ್ರಮಾಸದ ಉದ್ಯಾಪನಾ ವಿಧಿಯನ್ನು ಹೇಳುತ್ತೇನೆ ಕೇಳು. ಈ ಉದ್ಯಾಪನೆಯನ್ನು ಮಾಡಿದರೇನೇ ಚೈತ್ರಸ್ನಾನವು ಫಲವುಳ್ಳದ್ದಾಗಿ ಆಗುತ್ತದೆ.

೧೪೪. ಚಿತ್ರಮಾಸದ ಶುಕ್ಲಪಕ್ಷದಲ್ಲಿ ಬರುವ ಏಕಾದಶಿಯು ಉತ್ತಮೋತ್ತಮವಾದುದು. ಈ ವ್ರತಗಳನ್ನು ಮಾಡುವವರು ಆ ದಿವಸ ಉಪವಾಸವಿರಬೇಕು.

ಶ್ರೇಷ್ಠಾ ಸಾ ದ್ವಾದಶೀ ಜ್ಞೇಯಾ ತಸ್ಯಾಂ ತು ರಾಮಪೂಜನಂ ।
ಕಾರ್ಯಂ ದಧ್ಯೋದನಂ ದತ್ವಾ ಜಲಕುಂಭಃ ಪ್ರದೀಯತಾಂ ॥ ೧೪೫ ॥

ತಿಸ್ರಶ್ಚ ತಿಥಯಶ್ಶ್ರೇಷ್ಠಾಃ ಚೈತ್ರೇ ಮಾಸಿ ಮಹತ್ತಮಾಃ ।
ತ್ರಯೋದಶೀ ತಥಾಭೂತಾ ಪೌರ್ಣಮಾಸೀ ತಥೈವ ಚ ॥ ೧೪೬ ॥

ಯಾಸು ಸ್ನಾನಂ ಚ ದಾನಂ ಚ ಸರ್ವವಾಂಛಿತದಾಯಕಂ ।
ಯೈರ್ನ ಸ್ನಾತಂ ಚೈತ್ರಮಾಸೇ ನ ಸ್ನಾತಂ ನವರಾತ್ರಕೇ ॥ ೧೪೭ ॥
ತೈಸ್ತು ಚಾಂತ್ಯದಿನೇ ಸ್ನಾತ್ವಾ ಚೈತ್ರಸ್ನಾನಫಲಂ ಲಭೇತ್ ।
ತಾಸು ಶ್ರೇಷ್ಠಾ ಪೌರ್ಣಿಮಾ ಹಿ ಸರ್ವಪಾತಕನಾಶಿನೀ ॥ ೧೪೮ ॥

ತಸ್ಯಾಮುದ್ಯಾಪನಂ ಪ್ರೋಕ್ತಂ ಚೈತ್ರಸ್ನಾನಫಲಾಪ್ತಯೇ ।
ಉಪೋಷ್ಯ ಚ ಚತುರ್ದಶ್ಯಾಂ ಪೂರ್ವವನ್ಮಂಡಪಾದಿಕಂ ॥ ೧೪೯ ॥

---

೧೪೫. ಆ ಚೈತ್ರಶುದ್ಧ ದ್ವಾದಶಿಯೂ ಕೂಡ ಶ್ರೇಷ್ಠವಾದುದು. ಆ ದಿನದಲ್ಲಿಯೂ ರಾಮ ಪೂಜೆಯನ್ನು ಮಾಡಬೇಕು. ಆ ದಿನ ಮೊಸರನ್ನವನ್ನೂ ಜಲಕುಂಭವನ್ನೂ ದಾನ ಮಾಡಬೇಕು.

೧೪೬. ಚೈತ್ರ ಮಾಸದಲ್ಲಿ ಶುದ್ಧ ದ್ವಾದಶಿ, ತ್ರಯೋದಶಿ, ಪೂರ್ಣಿಮೆಗಳು ಇವು ಮೂರೂ ಬಹು ಶ್ರೇಷ್ಠವಾದುವು. ಇವುಗಳಲ್ಲಿ ಸ್ನಾನಗಳನ್ನೂ, ದಾನಗಳನ್ನೂ ಮಾಡಿದರೆ ಎಲ್ಲಾ ಇಷ್ಟಾರ್ಥಗಳನ್ನೂ ಕೊಡುತ್ತದೆ.

೧೪೭-೧೪೮. ಯಾರು ಚೈತ್ರಮಾಸದಲ್ಲಿ ಸ್ನಾನ ಮಾಡುವುದಿಲ್ಲವೋ ಅವರು ಈ ಪೂರ್ಣಿಮೆಯ ದಿವಸ ಸ್ನಾನ ಮಾಡಿದರೆ ಚೈತ್ರ ಸ್ನಾನದ ಫಲವನ್ನು ಹೊಂದುತ್ತಾರೆ. ಈ ಚೈತ್ರ ಮಾಸದಲ್ಲೇ ಪೂರ್ಣಿಮೆಯು ಬಹು ಶ್ರೇಷ್ಠವಾದುದು. ಎಲ್ಲಾ ಪಾಪಗಳನ್ನೂ ಹೋಗಲಾಡಿಸುತ್ತದೆ.

೧೪೯. ಈ ಚೈತ್ರಮಾಸದ ಹುಣ್ಣಿಮೆಯ ದಿವಸ ಉದ್ಯಾಪನೆಯನ್ನು ಮಾಡಬೇಕು. ಹಾಗೆ ಮಾಡಿದರೇನೆ ಚೈತ್ರಮಾಸ ಸ್ನಾನದ ಫಲವು ದೊರಕುತ್ತದೆ. ಚೈತ್ರ ಶುದ್ಧ ಹುಣ್ಣಿಮೆಯ ದಿವಸ ಉಪೋಷ್ಯವಿರಬೇಕು. ಮತ್ತು ಹಿಂದೆ ಹೇಳಿದ ರೀತಿಯಲ್ಲಿ ಮಂಟಪವನ್ನು ಕಟ್ಟಿ ಅದಕ್ಕೆ ಅಲಂಕರಿಸಬೇಕು.

ಕೃತ್ವಾ ತಸ್ಮಿನ್ ಧಾನ್ಯರಾಶೌ ಕಲಶಂ ವಾರಿಪೂರಿತಂ ।
ಸ್ಥಾಪಯಿತ್ವಾ ತದುಪರಿ ಹೇಮಪಾತ್ರಂ ಸುವಿಸ್ತರಂ ॥ ೧೫೦ ॥

ಪಂಚರತ್ನಯುತಂ ಸ್ಥಾಪ್ಯ ವಸ್ತ್ರೇಣಾಚ್ಛಾದಯೇಚ್ಚ ತತ್ ।
ತಸ್ಮಿನ್ ಸೀತಾಯುತಂ ರಾಮಂ ಸೌವರ್ಣಂ ವಿಧಿಪೂರ್ವಕಂ ॥ ೧೫೧ ॥

ಭ್ರಾತೃಭಿರ್ವಾಯುಪುತ್ರೇಣ ಸುಗ್ರೀವೇಣ ಸಮನ್ವಿತಂ ।
ವಿಭೀಷಾಂಗದಾಭ್ಯಾಂ ತು ಜಾಂಬವತ್ಸಹಿತಂ ತಥಾ ॥ ೧೫೨ ॥

ಪೂಜಯೇದ್ದೇವದೇವೇಶಂ ಪರಮಂ ಗುರ್ವನುಜ್ಞಯಾ ।
ಉಪಚಾರೈಃ ಷೋಡಶಭಿರ್ನಾನಾಭಕ್ಷಸಮನ್ವಿತೈಃ ॥ ೧೫೩ ॥

ರಾತ್ರೌ ಜಾಗರಣಂ ಕುರ್ಯಾದ್ಗೀತವಾದ್ಯಾದಿಮಂಗಳೈಃ ।
ತತಸ್ತು ಪೌರ್ಣಮಾಸ್ಯಾಂ ಚ ಸಪತ್ನೀಕಾನ್ ದ್ವಿಜೋತ್ತಮಾನ್ ॥ ೧೫೪ ॥

---

೧೫೦. ಆ ಮಂಟಪದೊಳಗೆ ಧಾನ್ಯದ ರಾಶಿಯನ್ನು ಹಾಕಬೇಕು. ಅದರ ಮೇಲೆ ನೀರಿನಿಂದ ತುಂಬಿದ ಕಲಶವನ್ನಿಡಬೇಕು. ಆ ಕಲಶವು ಚಿನ್ನದಿಂದ ಮಾಡಿದ ದೊಡ್ಡ ಪಾತ್ರೆಯಾಗಿರಬೇಕು.

೧೫೧-೧೫೨. ಆ ಕಲಶದೊಳಕ್ಕೆ ಪಂಚರತ್ನಗಳನ್ನು ಹಾಕಬೇಕು. ಮತ್ತು ಆ ಕಲಶಕ್ಕೆ ಬಟ್ಟೆಯನ್ನು ಹೊದ್ದಿಸಬೇಕು. ಸೀತೆ, ರಾಮ, ಲಕ್ಷ್ಮಣ, ಭರತ ಶತ್ರುಘ್ನ, ಹನುಮಂತ, ಸುಗ್ರೀವ, ವಿಭೀಷಣ, ಅಂಗದ ಜಾಂಬವ ಇವರುಗಳ ರೂಪವಾದ ಚಿನ್ನದ ಪ್ರತಿಮೆಗಳನ್ನು ಮಾಡಿಸಿ ಆ ಕಲಶದೊಳಕ್ಕೆ ಹಾಕಿ ಆ ಕಲಶದಲ್ಲಿ ಅವರೆಲ್ಲರನ್ನೂ ವಿಧಿ ಪೂರ್ವಕವಾಗಿ ಆವಾಹನೆ ಮಾಡಬೇಕು.

೧೫೩. ಗುರುವಿನ ಅಪ್ಪಣೆಯನ್ನು ಪಡೆದು ಆ ಸ್ವಾಮಿಯನ್ನು ಆ ಕಲಶದಲ್ಲಿ ಪೂಜಿಸಬೇಕು. ಷೋಡಶೋಪಚಾರಗಳಿಂದ ಪೂಜಿಸಿ ಬಗೆಬಗೆಯಾದ ಭಕ್ಷ್ಯಗಳನ್ನು ನಿವೇದನ ಮಾಡಬೇಕು.

೧೫೪-೧೫೫. ರಾತ್ರಿಯಲ್ಲಿ ಜಾಗರಣೆಯನ್ನೂ ಮಾಡಬೇಕು. ಮಂಗಳ ವಾದ್ಯಗಳನ್ನೂ, ಗೀತಗಳನ್ನೂ ಮಾಡಿಸುತ್ತಿರಬೇಕು. ಅನಂತರ ಹುಣ್ಣಿಮೆಯ ದಿವಸ ಬ್ರಾಹ್ಮಣ ದಂಪತಿಗಳನ್ನೂ ಮೂವತ್ತು ಜನರನ್ನು ಭೋಜನಕ್ಕೆ ಕರೆಯು

ತ್ರಿಂಶನ್ಮಿತಾನಥೈಕಂ ವಾ ಸ್ವಶಕ್ತ್ಯಾ ವಾ ನಿಮಂತ್ರಯೇತ್ ।
ತತಸ್ತಾನ್ಭೋಜಯೇದ್ವಿಪ್ರಾನ್ ಪಾಯಸಾನ್ನಾದಿನಾ ವ್ರತೀ ॥ ೧೫೫ ॥

ಅತೋ ದೇವಾ ಇತಿ ದ್ವಾಭ್ಯಾಂ ಜುಹುಯಾತ್ತಿಲಸರ್ಪಿಷಾ ।
ಪ್ರೀತ್ಯರ್ಥಂ ದೇವದೇವಸ್ಯ ದೇವಾನಾಂ ಚ ಪೃಥಕ್ ಪೃಥಕ್ ॥ ೧೫೬ ॥

ದಕ್ಷಿಣಾಂ ಚ ಯಥಾಶಕ್ತ್ಯಾ ಪ್ರದದ್ಯಾಚ್ಚ ತತೋ ನಮೇತ್ ।
ಪುನರ್ದೇವಂ ಸಮಭ್ಯರ್ಚ್ಯ ದೇವಾಂಶ್ಚ ತುಲಸೀಂ ತಥಾ ॥ ೧೫೭ ॥

ತತೋ ಗಾಂ ಕಪಿಲಾಂ ತತ್ರ ಪೂಜಯೇದ್ವಿಧಿನಾ ವ್ರತೀ ।
ಗುರುಂ ವ್ರತೋಪದೇಷ್ಟಾರಂ ವಸ್ತ್ರಾಲಂಕಾರಮಂಡನೈಃ ॥ ೧೫೮ ॥

ಬೇಕು. ಕೊನೆಗೆ ಒಂದು ದಂಪತಿಗಾದರೂ ಹೇಳಬೇಕು. ಅವರೆಲ್ಲರಿಗೂ ಉತ್ತಮವಾದ ಭೋಜನವನ್ನು ಮಾಡಿಸಬೇಕು. ತನ್ನ ಶಕ್ತಿಗನುಗುಣವಾಗಿ ಆ ಬ್ರಾಹ್ಮಣರನ್ನು ಕರೆಯಬೇಕು.

೧೫೬. ಅತೋದೇವಾ ಅವಂತುನಃ ಎಂಬ ಋಕ್ಕಿನ ಎರಡು ಮಂತ್ರಗಳನ್ನು ಹೇಳಿಕೊಂಡು ಎಳ್ಳು ತುಪ್ಪಗಳಿಂದ ಆ ದೇವ ದೇವನ ಪ್ರೀತಿಗೋಸ್ಕರವಾಗಿ ಹೋಮವನ್ನೂ ಮಾಡಬೇಕು. ಅನಂತರ ಬೇರೆಬೇರೆಯಾಗಿ ಬೇರೆಯ ದೇವತೆಗಳಿಗೂ ಹೋಮಮಾಡಬೇಕು.

೧೫೭. ಅನಂತರ ಅವರಿಗೆ ಶಕ್ತಿಗುಣವಾಗಿ ದಕ್ಷಿಣೆಯನ್ನು ಕೊಟ್ಟು ನಮಸ್ಕರಿಸಬೇಕು. ಮತ್ತೆ ಆ ಸ್ವಾಮಿಯನ್ನು ಪೂಜಿಸಬೇಕು. ದೇವತೆಗಳನ್ನೂ ತುಲಸಿಯನ್ನೂ ಪೂಜಿಸಬೇಕು.

೧೫೮. ಅನಂತರ ಆ ವ್ರತಮಾಡುವವನು ಕಪಿಲೆಯ ಹಸುವನ್ನು ಶಾಸ್ತ್ರದ ರೀತಿಯಿಂದ ಪೂಜಿಸಬೇಕು. ಅನಂತರ ತನಗೆ ಈ ವ್ರತವನ್ನು ಉಪದೇಶ ಮಾಡಿದ ಗುರುವನ್ನು ಪೂಜಿಸಬೇಕು. ವಸ್ತ್ರಗಳಿಂದಲೂ, ಒಡವೆಗಳಿಂದಲೂ ಅವನನ್ನು ಅಲಂಕರಿಸಬೇಕು.

ಸಪತ್ನೀಕಂ ಸಮಭ್ಯರ್ಚ್ಯ ತತೋ ವಿಪ್ರಾನ್ ಕ್ಷಮಾಪಯೇತ್ ।
ಯುಷ್ಮತ್ಪ್ರಸಾದಾದ್ದೇವೇಶಃ ಸುಪ್ರಸನ್ನೋಽಸ್ತು ವೈ ಮಮ ॥ ೧೫೯ ॥

ವ್ರತಾದಸ್ಮಾಚ್ಚ ಯತ್ಪಾಪಂ ಸಪ್ತಜನ್ಮಕೃತಂ ಮಯಾ ।
ತತ್ಸರ್ವಂ ನಾಶಮಾಯಾತು ಸ್ಥಿರಾ ಮೇ ಚಾಸ್ತು ಸಂತತಿಃ ॥ ೧೬೦ ॥

ಮನೋರಥಾಸ್ತು ಸಫಲಾಃ ಸಂತು ನಿತ್ಯಂ ಮಮಾರ್ಚನಾತ್ ।
ದೇಹಾಂತೇ ವೈಷ್ಣವಸ್ಥಾನಂ ಮಮ ಚಾಸ್ತ್ವತಿ ದುರ್ಲಭಂ ॥ ೧೬೧ ॥

ಇತಿ ಕ್ಷಮಾಪ್ಯ ತಾನ್ ವಿಪ್ರಾನ್ ಪ್ರಸಾದ್ಯ ಚ ವಿಸರ್ಜಯೇತ್ ।
ತಾಮರ್ಚಾಂ ಗುರವೇ ದದ್ಯಾದ್ರತ್ನಯುಕ್ತಾಂ ಸದಾ ವ್ರತೀ ॥ ೧೬೨ ॥

---

೧೫೯. ಅವನನ್ನು ಪೂಜಿಸಿ ಅವನ ಹೆಂಡತಿಯನ್ನೂ ಅಂತೆಯೇ ಪೂಜಿಸ ಬೇಕು. ಅನಂತರ ಆ ಬ್ರಾಹ್ಮಣನನ್ನು ಕ್ಷಮಿಸುವಂತೆ ಕೇಳಿಕೊಳ್ಳಬೇಕು. ಮತ್ತು ಎಲೈ ಬ್ರಾಹ್ಮಣರಿರಾ ! ನಿಮ್ಮ ಅನುಗ್ರಹದಿಂದ ದೇವೇಶನಾದ ಆ ಸ್ವಾಮಿಯು ನನಗೆ ಪ್ರಸನ್ನನಾಗಲಿ.

೧೬೦-೧೬೧. ನಾನು ಏಳು ಜನ್ಮಗಳಲ್ಲಿ ಮಾಡಿದ ಯಾವ ಯಾವ ಪಾಪಗಳಿವೆಯೋ ಅವೆಲ್ಲವೂ ಕೂಡ ಈ ವ್ರತದಿಂದ ನಾಶವಾಗಲಿ. ನನಗೆ ಆ ಶ್ರೀರಾಮನಲ್ಲಿ ಭಕ್ತಿಯು ಸ್ಥಿರವಾಗಿರಲಿ. ಈ ನನ್ನ ಪೂಜೆಯಿಂದ ನನ್ನ ಇಷ್ಟಾರ್ಥವೆಲ್ಲವೂ ಸಫಲವಾಗಲಿ. ನನಗೆ ಈ ದೇಹವನ್ನು ಬಿಟ್ಟನಂತರ ಶಾಶ್ವತವು ದುರ್ಲಭವೂ ಆದ ವೈಷ್ಣವ ಸ್ಥಾನವಾದ ವೈಕುಂಠವು ಪ್ರಾಪ್ತವಾಗಲಿ ಎಂಬದಾಗಿ ಕೇಳಿಕೊಳ್ಳಬೇಕು.

೧೬೨. ಈ ರೀತಿಯಾಗಿ ಅವರನ್ನು ಕೇಳಿಕೊಂಡು ಅವರ ಅನುಗ್ರಹವನ್ನು ಹೊಂದಿ ಕಳುಹಿಸಿ ಕೊಡಬೇಕು. ತಾನು ಮಾಡಿದ ಆ ಸ್ವಾಮಿಯ ಪೂಜೆಗೆ ಸಂಬಂಧಪಟ್ಟ ಪದಾರ್ಥಗಳನ್ನು, ಆ ಕುಶಲವನ್ನೂ ಗುರುವಿಗೆ ಕೊಡಬೇಕು. ಅನಂತರ ಸ್ನೇಹಿತರು ಬಂಧುಗಳು ಇವರೊಡನೆ ಭೋಜನವನ್ನು ಮಾಡಬೇಕು.

ತತಃ ಸುಹೃತ್ಪ್ರಿಯೈರ್ಯುಕ್ತಃ ಸ್ವಯಂ ಭುಂಜೀತ ಭಕ್ತಿಮಾನ್ ।
ಏವಮುದ್ಯಾಪನವಿಧಿಶ್ಚೈತ್ರಸ್ನಾನಫಲಾಪ್ತಯೇ ॥ ೧೬೩ ॥

ಸವಿಸ್ತರಶ್ಚ ಕರ್ತವ್ಯಃ ಚೈತ್ರಸ್ನಾನಪರಾಯಣೈಃ ।
ಏವಂ ಯಃ ಕುರುತೇ ಸಮ್ಯಕ್ಚೈತ್ರಸ್ನಾನವ್ರತಂ ನರಃ ॥ ೧೬೪ ॥

ಸರ್ವಪಾಪೈರ್ವಿನಿರ್ಮುಕ್ತೋ ವಿಷ್ಣುಸಾಯುಜ್ಯಮಾಪ್ನುಯಾತ್ ।
ಸರ್ವವ್ರತೈಃ ಸರ್ವತೀರ್ಥೈಸ್ಸರ್ವದಾನೈಶ್ಚ ಯತ್ಫಲಂ ॥ ೧೬೫ ॥

ತತ್ಕೋಟಿಗುಣಿತಂ ಪುಣ್ಯಂ ಸಮ್ಯಗಸ್ಯ ವಿಧಾನತಃ ।
ದೇಹಸ್ಥಿತಾನಿ ಪಾಪಾನಿ ನಾಶಮಾಯಾಂತಿ ತದ್ಭಯಾತ್ ॥ ೧೬೬ ॥

ಕ್ವ ಯಾಸ್ಯಾಮೋ ವದಂತ್ಯೇವಂ ಯಚ್ಚೈತ್ರವ್ರತಕೃನ್ನರಃ ।
ತಸ್ಮಾದವಶ್ಯಮೇವೈತತ್ ಚೈತ್ರಸ್ನಾನಂ ಸಮಾಚರೇತ್ ॥ ೧೬೭ ॥

೧೬೩–೧೬೪. ಈ ರೀತಿಯಾಗಿ ಚೈತ್ರಸ್ನಾನದ ಫಲವನ್ನು ಹೊಂದಲು ಉದ್ಯಾಪನ ವಿಧಿಯನ್ನು ಹೇಳಿದ್ದೇನೆ. ಚೈತ್ರಸ್ನಾನವನ್ನು ಮಾಡುವವರು ಇದನ್ನು ವಿಸ್ತಾರವಾಗಿ ಮಾಡಬೇಕು. ಯಾವನು ಈ ರೀತಿಯಾಗಿ ಚೈತ್ರ ಸ್ನಾನವನ್ನೂ ಅದರ ವಿಧಿಯನ್ನೂ ಮಾಡುವನೋ ಅವನು ಪಾಪಗಳನ್ನು ಕಳೆದುಕೊಂಡು ವಿಷ್ಣುವಿನ ಸಮೀಪಕ್ಕೆ ಹೋಗುತ್ತಾನೆ.

೧೬೫–೧೬೬ ಎಲ್ಲಾ ವ್ರತಗಳಿಂದಲೂ, ಎಲ್ಲಾ ದಾನಗಳಿಂದಲೂ ಎಲ್ಲಾ ತೀರ್ಥ ಸ್ನಾನಗಳಿಂದಲೂ ಯಾವ ಫಲವು ಬರುವುದೋ ಅವುಗಳ ಫಲಗಳೆಲ್ಲಕ್ಕೂ ಕೋಟಿಯಷ್ಟು ಹೆಚ್ಚಾಗಿ ಈ ಚೈತ್ರಸ್ನಾನದ ವ್ರತವನ್ನು ಆಚರಿಸಿದರೆ ಬರುತ್ತದೆ. ಈ ವ್ರತದ ಭಯದಿಂದ ದೇಹದಲ್ಲಿರುವ ಪಾಪಗಳೆಲ್ಲವೂ ನಾಶವಾಗುತ್ತವೆ.

೧೬೭. ಆ ಪಾಪವೆಲ್ಲವೂ ಕೂಡ ಈ ಮನುಷ್ಯನು ಚೈತ್ರವ್ರತವನ್ನು ಮಾಡುವನಲ್ಲ! ನಾವೆಲ್ಲರೂ ಎಲ್ಲಿ ಹೋಗೋಣ? ಎಂದೆನ್ನುತ್ತವೆ. ಆದ್ದರಿಂದ ಈ ಚೈತ್ರಸ್ನಾನವನ್ನು ಆವಶ್ಯಕವಾಗಿಯೂ ಮಾಡಿಯೇ ತೀರಬೇಕು.

ಶ್ರೀ ಚೈತ್ರವ್ರತಕಥನಂ ಪಠಂತಿ ಭಕ್ತ್ಯಾ।
ಯೇ ವೈ ತದ್ದ್ವಿಜವರ ವೈಷ್ಣವಾನ್ ವದಂತಿ ॥
ತೇ ಸಮ್ಯಗ್ವ್ರತಕರಣಾತ್ಫಲಂ ಲಭಂತೇ।
ತತ್ಸರ್ವಂ ಕಲುಷವಿನಾಶನಂ ಲಭೇತ ॥ ೧೬೮ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಮನೋಹರಕಾಂಡೇ ಚೈತ್ರ ಮಹಿಮಾವರ್ಣನಂ ನಾಮ ದಶಮಸ್ಸರ್ಗಃ ಸಮಾಪ್ತಃ

---

೧೬೮. ಯಾರು ಈ ಚೈತ್ರವ್ರತವನ್ನು ಭಕ್ತಿಯಿಂದ ಓದುವರೋ ಇದನ್ನು ಯಾರು ದ್ವಿಜರಿಗೂ, ವೈಷ್ಣವರಿಗೂ ಹೇಳುವರೋ ಅವರು ಈ ಚೈತ್ರವ್ರತವನ್ನು ವಿಧಿವತ್ತಾಗಿ ಮಾಡಿದ ಫಲವನ್ನು ಹೊಂದುತ್ತಾರೆ. ಅವರ ಪಾಪವೆಲ್ಲವೂ ಹೋಗುತ್ತದೆ.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಆದಿಕಾವ್ಯವಾದ ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಚೈತ್ರಮಹಿಮಾಭಿವರ್ಣನವೆಂಬ ಹತ್ತನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹತ್ತನೆಯ ಸರ್ಗದ ಸಾರಾಂಶವು

ಚೈತ್ರಮಾಸದ ಸ್ನಾನವು ಬಹು ಉತ್ತಮವಾದುದು. ಅದರಲ್ಲಿಯೂ ತುಲಾಮಾಸವು ಸೇರಿದ್ದರೆ ಮತ್ತೂ ಉತ್ತಮವು. ಚೈತ್ರಸ್ನಾನಮಾಡಲು ಒಂದು ಹೆಜ್ಜೆಯನ್ನಿಟ್ಟರೆ ಅವನಿಗೆ ಅಶ್ವಮೇಧಯಾಗದ ಪುಣ್ಯವು ಬರುತ್ತದೆ. ಈ ಚೈತ್ರಸ್ನಾನಕ್ಕೆ ಎಲ್ಲಾ ನೀರುಗಳೂ ತೀರ್ಥಗಳಾಗಿರುತ್ತವೆ.

ಚೈತ್ರಮಾಸದಲ್ಲಿ ಸ್ನಾನಮಾಡಿ ಸೀತಾರಾಮರನ್ನು ಪೂಜಿಸಬೇಕು. ಈ ಚೈತ್ರಸ್ನಾನವು ಅಯೋಧ್ಯೆಯಲ್ಲಿ ರಾಮತೀರ್ಥದಲ್ಲಿ ಬಹು ಫಲಪ್ರದವು. ಈ ಚೈತ್ರಮಾಸದಲ್ಲಿ ದಾರಿಯಲ್ಲಿ ಅರವಟ್ಟಿಗೆಗಳನ್ನಿಡಬೇಕು. ಜಲಕುಂಭವೇ ಮುಂತಾದುವನ್ನು ದಾನಮಾಡಬೇಕು. ಯಾವ ಯಾವ ದಾನಗಳನ್ನು ಕೊಟ್ಟರೂ ಅವೆಲ್ಲವೂ ಬಹು ಸಾರ್ಥಕವಾಗುತ್ತವೆ. ಈ ಚೈತ್ರಸ್ನಾನವನ್ನು ಫಾಲ್ಗುಣ ಹುಣ್ಣಿಮೆಯಿಂದ ಚೈತ್ರದ ಹುಣ್ಣಿಮೆಯವರೆಗೆ ಮಾಡಬೇಕು.

ಚೈತ್ರಶುದ್ಧ ತದಿಗೆಯು ಅಕ್ಷಯ್ಯ ತದಿಗೆ ಅಂದಿನಿಂದ ಮೊದಲುಗೊಂಡು ವೈಶಾಖಶುದ್ಧ ತದಿಗೆಯವರೆಗೆ ಸ್ನಾನಮಾಡುವುದು ಸೀತಳಾಗೌರೀ ಸ್ನಾನವೆನ್ನಿಸಿಕೊಳ್ಳುತ್ತದೆ. ಚೈತ್ರ ಶುದ್ಧದಲ್ಲಿ ಪಾಡ್ಯದಿಂದ ಮೊದಲುಗೊಂಡು ನವಮಿಯವರೆಗೆ ಮುಂದು ಮುಂದಿನ ತಿಥಿಗಳು ಉತ್ತಮವಾದುವು ಇದಕ್ಕೆ ರಾಮನವರಾತ್ರೆ ಎಂದು ಹೆಸರು, ಈ ನವರಾತ್ರೆಯಲ್ಲಿ ರಾಮಪೂಜೆಯನ್ನು ಬಹು ವಿಜೃಂಭಣೆಯಿಂದ ಮಾಡಬೇಕು. ರಾಮಾಯಣವನ್ನು ಪಾರಾಯಣಮಾಡಬೇಕು. ರಾಮೋತ್ಸವವನ್ನು ವಿಜೃಂಭಣೆಯಿಂದ ಮಾಡುತ್ತ ವಸಂತಸ್ನಾನವನ್ನೂ ತೀರ್ಥಸ್ನಾನವನ್ನೂ ಮಾಡಿಸಬೇಕು. ಈ ಚೈತ್ರಸ್ನಾನದ ಅನಂತರ

ಉದ್ಯಾಪನೆಯನ್ನು ಮಾಡಬೇಕು. ಇದು ಸಂಪೂರ್ಣಫಲವನ್ನು ಕೊಡುತ್ತದೆ. ಈ ಉದ್ಯಾಪನೆಯಲ್ಲಿ ಸಪರಿವಾರನಾದ ರಾಮನನ್ನು ಪೂಜಿಸಿ ದಂಪತಿಗಳಿಗೂ ಬ್ರಾಹ್ಮಣರಿಗೂ ಭೋಜನಮಾಡಿಸಿ ದಾನಾದಿಗಳನ್ನು ಕೊಟ್ಟು ಕಳುಹಿಸಿ ಗುರುವನ್ನು ಪೂಜಿಸಿ ಅವನಿಗೆ ಆ ಪೂಜೆಯದೆಲ್ಲವನ್ನೂ ದಾನಮಾಡಿ ಗೋದಾನವನ್ನು ಮಾಡಬೇಕು. ಹೀಗೆ ಮಾಡಿದರೆ ಜನ್ಮಜನ್ಮಾಂತರದ ಪಾಪಗಳೆಲ್ಲವೂ ಹೋಗುತ್ತವೆ.



|| ಶ್ರೀರಸ್ತು ||

ಅಥ ಶ್ರೀಮದಾನಂದರಾಮಾಯಣೇ ಮನೋಹರಕಾಂಡೇ ಏಕಾದಶಸ್ಸರ್ಗಃ

|| ವಿಷ್ಣುದಾಸ ಉವಾಚ ||

ಕಿಮರ್ಥಂ ಸರ್ವಮಾಸೇಷು ಚೈತ್ರಮಾಸಃ ಸ್ಮೃತೋ ವರಃ ।
ತತ್ಕಾರಣಂ ವದಸ್ವಾದ್ಯ ಗುರೋ ಸಂತೋಷಹೇತವೇ || ೧ ||

|| ಶ್ರೀರಾಮದಾಸ ಉವಾಚ ||

ಶೃಣು ಶಿಷ್ಯ ಮಹಾಬುದ್ಧೇ ಸಮ್ಯಕ್ಪೃಷ್ಟಂ ತ್ವಯಾ ಮಮ ।
ಬ್ರಹ್ಮಪ್ರಾರ್ಥನಯಾ ವಿಷ್ಣುರ್ಯದಾ ಭೂಮ್ಯಾಂ ದ್ವಿಜೋತ್ತಮ || ೨ ||

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹನ್ನೊಂದನೆಯ ಸರ್ಗವು

೧. ವಿಷ್ಣುದಾಸನು ಹೇಳಿದನು.—ಎಲೈ ಗುರುವೇ ! ಈ ಚೈತ್ರಮಾಸವು ಮಾಸಗಳೊಳಗೆಲ್ಲಾ ಶ್ರೇಷ್ಠವಾದುದೆಂಬುದಾಗಿ ಆಗಲು ಕಾರಣವೇನು ? ಅದನ್ನು ಕೇಳಿ ನಾನು ಸಂತೋಷಪಡಬೇಕಾಗಿದೆ. ಅದರ ಕಾರಣವನ್ನು ದಯವಿಟ್ಟು ಹೇಳು.

೨. ಶ್ರೀರಾಮದಾಸನು ಹೇಳಿದನು—ಮಹಾ ಬುದ್ಧಿಯುಳ್ಳ ಎಲೈ ಶಿಷ್ಯನೇ ! ನೀನು ಕೇಳಿದುದು ಚೆನ್ನಾಗಿದೆ. ಅದೆಲ್ಲವನ್ನೂ ಹೇಳುತ್ತೇನೆ ಕೇಳು. ಬ್ರಹ್ಮನ ಪ್ರಾರ್ಥನೆಯಂತೆ ವಿಷ್ಣುವು ಭೂಮಿಯಲ್ಲಿ ಅವತರಿಸಿದನಷ್ಟೆ !

ಅಯೋಧ್ಯಾಪಾಲಕಸ್ಯಾಥ ರಾಜ್ಞೋ ದಶರಥಸ್ಯ ಹಿ।
ಕೌಸಲ್ಯಾಯಾಸ್ತು ಭಾರ್ಯಾಯಾ ಜಠರಾಗ್ನಿರ್ಗತೋ ಬಹಿಃ ॥ ೩ ॥

ಚೈತ್ರಮಾಸಿ ಸಿತೇ ಪಕ್ಷೇ ನವಮ್ಯಾಂ ಪರಮೇ ದಿನೇ।
ಪುನರ್ವಸ್ವೃಕ್ಷನಕ್ಷತ್ರೇ ಪ್ರೋಚ್ಚಸ್ಥೇ ಗ್ರಹಪಂಚಕೇ ॥ ೪ ॥

ಮಧ್ಯಾಹ್ನೇ ಪ್ರಕಟೋ ಜಾತಃ ಶ್ರೀರಾಮೋ ರಾಜಸದ್ಮನಿ।
ಆನಂದಶ್ಚ ತದಾ ಜಾತಃ ಸರ್ವತ್ರ ಜಗತೀತಲೇ ॥ ೫ ॥

ದೇವದುಂದುಭಯೋ ನೇದುಃ ಪುಷ್ಪವೃಷ್ಟಿಃ ಶುಭಾಪತತ್।
ರಾಜಸದ್ಮನಿ ವಾದ್ಯಾನಾಂ ಸಂಘಾ ನೇದುಃ ಪೃಥಕ್ ಪೃಥಕ್ ॥ ೬ ॥

ನನೃತುರ್ವಾರನಾರ್ಯಶ್ಚ ಜಗುರ್ಗೀತಂ ಮನೋರಮಂ।
ತದಾ ಸರ್ವೇ ಹಿ ಭೂಮಿಸ್ಥಾಃ ಜನಾ ದ್ರಷ್ಟುಂ ಶಿಶುಂ ಶುಭಂ ॥ ೭ ॥

---

೩. ಆ ವಿಷ್ಣುವು ಅಯೋಧ್ಯಾಧಿಪತಿಯಾದ ದಶರಥನಿಗೆ ಅವನ ಹೆಂಡತಿಯಾದ ಕೌಸಲ್ಯೆಯಲ್ಲಿ ಮಗನಾಗಿ ಅವತರಿಸಿದನು.

೪–೫. ಚೈತ್ರಮಾಸದ ಶುದ್ಧ ನವಮಿಯ ದಿನ ಪುನರ್ವಸು ನಕ್ಷತ್ರದಲ್ಲಿ ಹುಟ್ಟಿದನು. ಆಗ ಐದು ಗ್ರಹಗಳು ಉಚ್ಚಸ್ಥಾನದಲ್ಲಿದ್ದುವು. ಮಧ್ಯಾಹ್ನವಾಗಿದ್ದಿತು. ಈ ರಾಮನು ಅವತರಿಸಿದಾಗ ಪ್ರಪಂಚದಲ್ಲಿ ಎಲ್ಲಾ ಕಡೆಯಲ್ಲಿಯೂ ಆನಂದವಾಗಿದ್ದಿತು.

೬. ದೇವದುಂದುಭಿಗಳು ಮೊಳಗಿದವು. ಅಂತರಿಕ್ಷದಿಂದ ಪುಷ್ಪವೃಷ್ಟಿಯಾಯಿತು ಅರಮನೆಯಲ್ಲಿ ವಾದ್ಯಗಳು ಬೇರೆಬೇರೆಯಾಗಿ ಮೊಳಗುತ್ತಿದ್ದುವು.

೭. ವಾರನಾರಿಗಳು ಕುಣಿಯುತ್ತಿದ್ದರು. ಮನೋಹರವಾದ ಗೀತಗಳನ್ನು ಹಾಡುತ್ತಿದ್ದರು. ಆಗ ಉತ್ತಮವಾದ ಮಗುವನ್ನು ನೋಡಲು ಜನಗಳು ಅಲ್ಲಿಗೆ ಗುಂಪುಗುಂಪಾಗಿ ಬರುತ್ತಿದ್ದರು.

ಪ್ರಯಯುರ್ನೃಪಜಂ ಬಾಲಂ ದೃಷ್ಟ್ವಾ ಮುದಮವಾಪ್ನುಯುಃ |
ನಾನಾವಿಮಾನಮಾರೂಢಾಃ ದಿವಿ ದೇವಾಸ್ಸವಾಸವಾಃ　　॥ ೮ ॥

ಮಿಳಿತಾ ರಾಘವಂ ದ್ರಷ್ಟುಂ ಕೌಸಲ್ಯಾ ಜಠರೋದ್ಭವಂ |
ಬ್ರಹ್ಮಾ ರುದ್ರಶ್ಚ ಸೂರ್ಯಶ್ಚ ದೇವೇಂದ್ರಾದಿಸುರಾಃ ಶುಭಾಃ　　॥ ೯ ॥

ಉತ್ಸವಾನ್ ವಿದಧುಃ ಸರ್ವೇ ತದಾ ಶ್ರೀರಾಮಜನ್ಮನಿ |
ಏವಮುತ್ಸಾಹಸಮಯೇ ಹರ್ಷಾದ್ದೇವಾ ದಿವಿ ಸ್ಥಿತಾಃ　　॥ ೧೦ ॥

ನಮಸ್ಕೃತ್ವಾ ರಾಮಚಂದ್ರಂ ತುಷ್ಟುವುರ್ವಿವಿಧೈಃ ಸ್ತವೈಃ |
ಪ್ರೋಚುಸ್ತದಾ ಸುರಾಃ ಸರ್ವೇ ಹರ್ಷಾದ್ದೇವಂ ರಘೂತ್ತಮಂ　　॥ ೧೧ ॥

ಅದ್ಯ ಧನ್ಯಾ ವಯಂ ದೇವ ಮುಕ್ತಾಶ್ಚಾಸುರಜಾದ್ಭಯಾತ್ |
ಯನ್ನಿಮಿತ್ತಂ ತ್ವಯಾ ದೇವ ಹ್ಯವತಾರಃ ಕೃತೋ ಭುವಿ　　॥ ೧೨ ॥

---

೮. ಅವರೆಲ್ಲರೂ ಆ ರಾಜಪುತ್ರನನ್ನು ನೋಡಿ ಬಹಳವಾಗಿ ಸಂತೋಷ ಗೊಂಡರು. ಇಂದ್ರನೇ ಮುಂತಾದ ದೇವತೆಗಳು ಅನೇಕ ವಿಮಾನಗಳಲ್ಲಿ ಕುಳಿತು ಕೌಸಲ್ಯೆಯಲ್ಲಿ ಜನ್ಮ ತಾಳಿರುವ ಸ್ವಾಮಿಯನ್ನು ನೋಡಲು ಬಂದರು.

೯-೧೦. ಬ್ರಹ್ಮ, ರುದ್ರ, ಸೂರ್ಯ, ಇಂದ್ರ ಮುಂತಾದ ದೇವತೆಗಳು ಆ ರಾಮನು ಅವತರಿಸಿದಾಗ ಅನೇಕ ವಿಧವಾದ ಉತ್ಸವಗಳನ್ನು ಮಾಡಿದರು. ಈ ರೀತಿಯಾದ ಸಂತೋಷದ ಕಾಲದಲ್ಲಿ ದೇವತೆಗಳೆಲ್ಲರೂ ಅಂತರಿಕ್ಷದಲ್ಲಿದ್ದರು.

೧೧. ಆ ರಾಮಚಂದ್ರನಿಗೆ ನಮಸ್ಕರಿಸಿ ಅನೇಕ ವಿಧವಾದ ಸ್ತೋತ್ರ ಗಳಿಂದ ಹೊಗಳಿದರು. ಆಗ ಆ ದೇವತೆಗಳೆಲ್ಲರೂ ಹರ್ಷದಿಂದ ರಾಮಚಂದ್ರ ನನ್ನು ಕುರಿತು ಇಂತೆಂದರು.

೧೨ ಎಲೈ ಸ್ವಾಮಿಯೇ! ಈಗ ನಾವು ಧನ್ಯರಾದೆವು. ಅಸುರನ ಭಯವು ನಮಗೆ ತಪ್ಪಿತು. ಅದರ ನಿಮಿತ್ತವಾಗಿಯೇ ನೀನು ಭೂಮಿಯಲ್ಲಿ ಅವತರಿಸಿ ದ್ದೀಯೆ.

ಅಸ್ಮಾಕಂ ಹರ್ಷಕಾಲೋಽಯಂ ದೇವದೇವ ಕೃಪಾನಿಧೇ ।
ತಸ್ಮಾದಯಂ ಸದಾ ಪುಣ್ಯಃ ಶ್ರೇಷ್ಠಃ ಕಾಲೋ ಭವಿಷ್ಯತಿ ॥ ೧೩ ॥

ತ್ವಂ ಚಾಪ್ಯಂಗೀಕುರುಷ್ವಾದ್ಯ ದೇಹ್ಯಸ್ಮೈ ಸುಬಹೂನ್ ವರಾನ್ ।
ಇತಿ ತೇಷಾಂ ವಚಃ ಶ್ರುತ್ವಾ ದೇವಾನಾಂ ರಾಘವಶ್ಶುಭಂ ॥ ೧೪ ॥

ತುತೋಷ ನಿತರಾಂ ತೇಷು ದೇವೇಷು ಭಗವಾನ್ ಹರಿಃ ।
॥ ಶ್ರೀರಾಮ ಉವಾಚ ॥
ಸಮ್ಯಕ್ಪ್ರೋಕ್ತಂ ಸುರಾಸ್ಸರ್ವೇ ಯತ್ತ್ರೈಲೋಕ್ಯೋಪಕಾರಕಂ ॥ ೧೫ ॥

ಭವದ್ಭಿಃ ಪ್ರಾರ್ಥಿತೋಽಹಂ ತು ಹರ್ಷಕಾಲೇ ಮಹತ್ತಮೇ ।
ಶ್ರುಣುಧ್ವಂ ವಚನಂ ಮೇಽದ್ಯ ಯದ್ಧರ್ಷಾತ್ಪ್ರೋಚ್ಯತೇ ಮಯಾ ॥ ೧೬ ॥

---

೧೩. ಎಲೈ ಸ್ವಾಮಿಯೇ! ನಮಗೆ ಇದು ಹರ್ಷದ ಸಮಯವು. ಆದ್ದರಿಂದ ಈ ಕಾಲವು ಯಾವಾಗಲೂ ಪುಣ್ಯಕಾಲವಾಗಿ ಶ್ರೇಷ್ಠವಾದುದಾಗಿ ಆಗುತ್ತದೆ.

೧೪. ಇದನ್ನು ನೀನು ಅಂಗೀಕರಿಸು. ನಮಗೂ ಕೂಡ ಬಹು ವಿಧವಾದ ವರಗಳನ್ನುಕೊಡು. ದೇವತೆಗಳು ಇಂತೆಂದು ಕೇಳಿಕೊಂಡುದನ್ನು ರಾಘವನು ಕೇಳಿದನು.

೧೫. ಆಗ ಆ ಸ್ವಾಮಿಗೆ ದೇವತೆಗಳ ವಿಷಯದಲ್ಲಿ ಬಹುವಾಗಿ ಸಂತೋಷವಾಯಿತು.

ಶ್ರೀರಾಮನು ಹೇಳಿದನು:— ಎಲೈ ದೇವತೆಗಳಿರಾ! ನೀವು ಕೇಳಿದುದು. ಚೆನ್ನಾಗಿದೆ. ಇದು ಮೂರು ಲೋಕಗಳಿಗೂ ಉಪಕಾರವಾದುದು.

೧೬. ಈ ಮಹತ್ತಮವಾದ ಹರ್ಷಕಾಲದಲ್ಲಿ ನೀವೆಲ್ಲರೂ ನನ್ನನ್ನು ಕೇಳಿಕೊಂಡಿರುವಿರಿ. ನಾನು ಈ ಹರ್ಷದ ಸಮಯದಲ್ಲಿ ಹೇಳತಕ್ಕ ಸಂತೋಷದ ಮಾತನ್ನು ಕೇಳಿರಿ.

ಸರ್ವೇಷಾಮೇವ ಮಾಸಾನಾಂ ಶ್ರೇಷ್ಠಶ್ಚಾಯಂ ಭವಿಷ್ಯತಿ ।
ವೈಶಾಖಾತ್ಕಾರ್ತಿಕಃ ಶ್ರೇಷ್ಠಃ ಕಾರ್ತಿಕಾನ್ಮಾಘ ಏವ ಚ ॥ ೧೭ ॥

ಮಾಘಮಾಸಾದ್ವರಶ್ಚಾಯಂ ಚೈತ್ರಮಾಸೋ ಭವಿಷ್ಯತಿ ।
ಚೈತ್ರಮಾಸೇ ಕೃತಂ ದತ್ತಂ ಹುತಂ ಸ್ನಾತಂ ವಿಚಿಂತಿತಂ ॥ ೧೮ ॥

ಸರ್ವಂ ಕೋಟಿಗುಣಂ ಪ್ರೋಕ್ತಮಯೋಧ್ಯಾಯಾಂ ವಿಶೇಷತಃ ।
ಯಚ್ಚೈತ್ರೇಯಶ್ಚಾಶ್ವಮೇಧೇನ ಯದ್ಗೋಮೇಧೇನ ವೈ ಫಲಂ ॥ ೧೯ ॥

ಯತ್ಫಲಂ ಸೋಮಪಾನೇನ ತಚ್ಚೈತ್ರೇ ಸ್ನಾನಮಾತ್ರತಃ ।
ಸೂರ್ಯಗ್ರಹೇ ಕುರುಕ್ಷೇತ್ರೇ ಯಚ್ಚೈತ್ರೇಯಃ ಸ್ನಾನದಾನತಃ ॥ ೨೦ ॥

---

೧೭. ನಾನು ಅವತರಿಸಿದ ಈ ಚೈತ್ರಮಾಸವು ಎಲ್ಲಾ ಮಾಸಗಳಿಗಿಂತಲೂ ಶ್ರೇಷ್ಠವಾದುದಾಗಿ ಆಗುತ್ತದೆ. ವೈಶಾಖ ಮಾಸಕ್ಕಿಂತಲೂ ಕಾರ್ತಿಕ ಮಾಸವು ಶ್ರೇಷ್ಠವಾದುದು. ಆ ಕಾರ್ತಿಕ ಮಾಸಕ್ಕಿಂತಲೂ ಮಾಘ ಮಾಸವು ಶ್ರೇಷ್ಠವಾದುದು.

೧೮. ಆ ಮಾಘಮಾಸಕ್ಕಿಂತಲೂ ಈ ಚೈತ್ರಮಾಸವು ಬಹು ಶ್ರೇಷ್ಠವಾಗಿ ಆಗುತ್ತದೆ. ಈ ಚೈತ್ರಮಾಸದಲ್ಲಿ ಮಾಡಿದ ಸ್ನಾನ, ಜಪ, ಇನ್ನೂ ಅನೇಕ ಉತ್ತಮವಾದ ಕೆಲಸಗಳೆಲ್ಲವೂ ಕೋಟಿ ಪಾಲಿನಷ್ಟು ಹೆಚ್ಚು ಫಲವನ್ನು ಕೊಡುತ್ತವೆ. ಅಯೋಧ್ಯೆಯಲ್ಲಿ ಇವನ್ನು ಮಾಡಿದರೆ ಇನ್ನೂ ವಿಶೇಷ ಫಲವುಳ್ಳವಾಗುತ್ತವೆ.

೧೯-೨೦. ಅಶ್ವಮೇಧಯಾಗವನ್ನು ಮಾಡಿದರೆ ಯಾವ ಪುಣ್ಯವು ಬರುತ್ತದೆಯೋ, ಗೋಮೇಧವನ್ನು ಮಾಡಿದರೆ ಯಾವ ಫಲವು ಬರುತ್ತದೆಯೋ, ಸೋಮಪಾನ ಮಾಡಿದರೆ ಯಾವ ಫಲವು ಬರುತ್ತದೆಯೋ, ಸೂರ್ಯ ಗ್ರಹಣದಲ್ಲಿ ಕುರುಕ್ಷೇತ್ರದಲ್ಲಿ ಸ್ನಾನ ಮಾಡಿದರೆ ಯಾವ ಫಲವು ಬರುತ್ತದೆಯೋ ಆ ಫಲವು ಚೈತ್ರ ಮಾಸದಲ್ಲಿ ಸ್ನಾನಮಾಡುವುದರಿಂದ ಮಾತ್ರವೇ ಲಭಿಸುತ್ತದೆ.

ತಚ್ಛ್ರೇಯಸ್ಸ್ಯಾನ್ಮಧೌ ಸ್ನಾನಾದಯೋಧ್ಯಾಯಾಂ ಸುರೋತ್ತಮಾಃ ।
ಅತ್ರ ವೈ ಸರಯೂತೀರೇ ರಾವಣಂ ಲೋಕರಾವಣಂ ॥ ೨೧ ॥

ಹತ್ವಾ ತತ್ಪಾಪಶಾಂತ್ಯರ್ಥಂ ಕರಿಷ್ಯಾಮಿ ಕ್ರತುಂ ಶುಭಂ ।
ಯತ್ರ ಯಾಗಸಮಾಪ್ತಿರ್ಹಿ ಭವಿಷ್ಯತಿ ಸುರೋತ್ತಮಾಃ ॥ ೨೨ ॥

ತತ್ತೀರ್ಥಂ ಮಮ ನಾಮ್ನಾ ಹಿ ಖ್ಯಾತಿಂ ಶ್ರೇಷ್ಠಾಂ ಗಮಿಷ್ಯತಿ ।
ಅಯೋಧ್ಯಾಯಾಂ ರಾಮತೀರ್ಥೇ ಸರಯೂಜಲಮಧ್ಯಗೇ ॥ ೨೩ ॥

ಚೈತ್ರಸ್ನಾನಂ ಪ್ರಕುರ್ವಾಣಾಸ್ತೇ ನರಾ ಮೋಕ್ಷಭಾಗಿನಃ ।
ಯಥಾ ಮಾಘಃ ಪ್ರಯಾಗೇ ಹಿ ಸ್ನಾತವ್ಯಸ್ಸುಖಮಿಚ್ಛತಾ ॥ ೨೪ ॥

ಕಾರ್ತಿಕೋಽಪಿ ಯಥಾ ಕಾಶ್ಯಾಂ ಪಂಚಗಂಗಾಜಲೇ ಸ್ಮೃತಃ ।
ದ್ವಾರಕಾಯಾಂ ಯಥಾ ಪ್ರೋಕ್ತೋ ವೈಶಾಖೋ ಮಾಧವಪ್ರಿಯಃ ॥ ೨೫ ॥

---

೨೧. ಈ ಫಲಗಳೆಲ್ಲವೂ ಅಯೋಧ್ಯೆಯಲ್ಲಿ ಸ್ನಾನ ಮಾಡಿದರೆ ವಿಶೇಷವಾಗಿ ಲಭಿಸುತ್ತವೆ. ಲೋಕ ಕಂಟಕನಾದ ರಾವಣನನ್ನು ಕೊಂದು ಆ ಪಾಪ ಶಾಂತಿಗೋಸ್ಕರವಾಗಿ ಈ ಸರಯೂ ನದಿಯ ದಡದಲ್ಲಿ ಯಾಗವನ್ನು ಮಾಡುತ್ತೇನೆ.

೨೨-೨೩. ಯಾಗ ಸಮಾಪ್ತಿಯು ಆಗುವ ಆ ಸ್ಥಳವೂ ಆ ತೀರ್ಥವೂ ನನ್ನ ಹೆಸರಿನಿಂದ ಪ್ರಸಿದ್ಧಿಯಾಗಿ ಶ್ರೇಷ್ಠವೆಂದೆನಿಸಿಕೊಳ್ಳುತ್ತವೆ. ಅಯೋಧ್ಯೆಯಲ್ಲಿರುವ ಸರಯೂ ನದಿಯ ಮಧ್ಯದ ರಾಮತೀರ್ಥದಲ್ಲಿ ಚೈತ್ರಸ್ನಾನವನ್ನು ಮಾಡಿದವರು ಮೋಕ್ಷವನ್ನು ಹೊಂದುತ್ತಾರೆ.

೨೪--೨೬. ಸುಖವನ್ನು ಅಪೇಕ್ಷಿಸುವವನು ಮಾಘಮಾಸದಲ್ಲಿ ಪ್ರಯಾಗದಲ್ಲಿ ಸ್ನಾನಮಾಡುವಂತೆಯೂ, ಕಾರ್ತಿಕದಲ್ಲಿ ಪಂಚಗಂಗೆಯಲ್ಲಿ ಸ್ನಾನಮಾಡುವಂತೆಯೂ ಮಾಧವನಿಗೆ ಪ್ರಿಯವಾದ ವೈಶಾಖದಲ್ಲಿ ದ್ವಾರಕೆಯಲ್ಲಿ ಸ್ನಾನವೂ ಶುಭಪಲ್ಯವನ್ನು ಕೊಡುವಂತೆಯೂ ಅಯೋಧ್ಯೆಯಲ್ಲಿ ರಾಮತೀರ್ಥದಲ್ಲಿ ಚೈತ್ರ

ಅಯೋಧ್ಯಾಯಾಂ ರಾಮತೀರ್ಥೇ ತಥಾ ಚೈತ್ರೋ ಭವಿಷ್ಯತಿ।
ಸರ್ವೇಷಾಮೇವಮಾಸಾನಾಮಾದೌ ಶ್ರೇಷ್ಠೋ ಭವಿಷ್ಯತಿ ॥ ೨೬ ॥

ಚೈತ್ರಮಾಸೇ ತು ಸಂಪ್ರಾಪ್ತೇ ಸರ್ವೇ ದೇವಾಸ್ಸವಾಸವಾಃ।
ಬಹಿರ್ಜಲಂ ಸಮಾಶ್ರಿತ್ಯ ತಿಷ್ಠಧ್ವಂ ಹಿ ಮಮಾಜ್ಞಯಾ ॥ ೨೭ ॥

ಏವಂ ಹರಿಸ್ತಾರ್ತ ಮಘವಾದಿಕಾನ್ ಸುರಾ
ನುಕ್ತ್ವಾ ಸುರೈಸ್ತೈಶ್ಚ ನಮಸ್ಕೃತೋ ಬಭೌ।
ವೃಷೇಂದ್ರಮಾರುಹ್ಯ ಶಿವೋ ನಿಜಸ್ಥಲಂ
ಯಯೌ ಸುರಾಸ್ತೇಪಿ ಯಯುರ್ನಿಜಂ ಸ್ಥಲಂ ॥ ೨೮ ॥

ತಸ್ಮಾತ್ಸರ್ವೇಷು ಮಾಸೇಷು ಮುಖ್ಯಶ್ಚೈತ್ರಃ ಪ್ರಕೀರ್ತ್ಯತೇ।
ಮಾಸಾದೌ ಪ್ರಥಮಃ ಸರ್ವೈಃ ಪ್ರೋಚ್ಯತೇ ಹಿ ವರಾದ್ಧರೇಃ ॥ ೨೯ ॥

ಸ್ನಾನವು ಶುಭ ಫಲವನ್ನು ಕೊಡುತ್ತದೆ. ಈ ಚೈತ್ರವು ಎಲ್ಲಾ ಮಾಸಗಳಿಗೂ ಆದಿಯಾಗಿ ಶ್ರೇಷ್ಠವೆಂದೆನಿಸಿಕೊಳ್ಳುತ್ತದೆ.

೨೭. ಚೈತ್ರಮಾಸವು ಬಂದರೆ ಇಂದ್ರನೇ ಮುಂತಾದ ಎಲ್ಲಾ ದೇವತೆಗಳೂ ಹೊರಗಿರುವ ನೀರನ್ನು ಆಶ್ರಯಿಸಿಕೊಂಡು ಇದ್ದುಕೊಂಡಿರಿ. ಇದು ನನ್ನ ಅಪ್ಪಣೆಯು.

೨೮. ಹರಿಯು ಈ ರೀತಿಯಾಗಿ ಇಂದ್ರನೇ ಮುಂತಾದ ದೇವತೆಗಳಿಗೆ ಅಪ್ಪಣೆಮಾಡಿದನು. ಆ ದೇವತೆಗಳು ಆ ಹರಿಯನ್ನು ನಮಸ್ಕರಿಸಿದರು. ಅನಂತರ ಹರನು ಬಸವನ ಮೇಲೆ ಕುಳಿತುಕೊಂಡು ತನ್ನ ಸ್ಥಳಕ್ಕೆ ಹೋದನು. ಅಂತೆಯೇ ದೇವತೆಗಳೂ ಕೂಡ ತಮ್ಮ ತಮ್ಮ ಸ್ಥಳಗಳಿಗೆ ಹೋದರು.

೨೯. ಆದ್ದರಿಂದ ಎಲ್ಲಾ ಮಾಸಗಳಲ್ಲಿಯೂ ಚೈತ್ರಮಾಸವು ಮುಖ್ಯವಾದುದೆನಿಸಿಕೊಂಡಿದೆ. ಆದ್ದರಿಂದಲೇ ಈ ಹರಿಯ ವರದಿಂದ ಚೈತ್ರವು ಮಾಸಗಳಲ್ಲಿ ಮೊದಲನೆಯದು ಎಂದೆನಿಸಿಕೊಂಡಿದೆ.

ಏವಂ ಶಿಷ್ಯ ಯಥಾ ಪೃಷ್ಟಂ ತಥಾ ತೇ ವಿನಿವೇದಿತಂ ।
ಕಾರಣಂ ಚೈತ್ರಮಾಸಸ್ಯ ರಾಮಚಂದ್ರವರಾದಿಕಂ ॥ ೩೦ ॥

॥ ವಿಷ್ಣುದಾಸ ಉವಾಚ ॥

ಸ್ವಾಮಿನ್ ಗುರೋ ತ್ವಯಾ ಚೈತ್ರಸ್ನಾನಂ ಪುಣ್ಯಕರಂ ಸ್ಮೃತಂ ।
ತತ್ಕೇನ ಚರಿತಂ ಪೂರ್ವಂ ಕಾ ಸಿದ್ಧಿಸ್ತತ್ಪ್ರಭಾವತಃ ॥ ೩೧ ॥

ತತ್ಸರ್ವಂ ವಿಸ್ತರೇಣೈವ ಮಮಾಗ್ರೇ ತ್ವಂ ನಿವೇದಯ ।

॥ ರಾಮದಾಸ ಉವಾಚ ॥

ಸಮ್ಯಕ್ ಪೃಷ್ಟಂ ಸ್ವಸ್ಥಮನಾಃ ಶೃಣು ತ್ವಂ ಯನ್ಮಯೋಚ್ಯತೇ ॥ ೩೨ ॥

ಮಮ ತಾತೋ ನೃಸಿಂಹಾಖ್ಯಃ ಪುರಾ ತ್ವಾಸೀದ್ದ್ವಿಜೋತ್ತಮ ।
ತಸ್ಯೈಕೋ ನಿಯಮಶ್ಚಾಸೀತ್ತೃತ್ಯಹಂ ಭೂಸುರೋತ್ತಮಂ ॥ ೩೩ ॥

---

೩೦. ಎಲೈ ಶಿಷ್ಯನೇ ! ನೀನು ಕೇಳಿದುದನ್ನು ಈ ರೀತಿಯಾಗಿ ವಿವರಿಸಿದ್ದೇನೆ. ಈ ಚೈತ್ರಮಾಸವು ಶ್ರೇಷ್ಠವಾಗಲು ರಾಮಚಂದ್ರನ ವರವೇ ಕಾರಣವು.

೩೧. ವಿಷ್ಣುದಾಸನು ಹೇಳಿದನು.—ಎಲೈ ಸ್ವಾಮಿಯೇ ! ಚೈತ್ರಸ್ನಾನವು ಬಹು ಪುಣ್ಯವನ್ನು ಕೊಡುತ್ತದೆಂದು ನೀನು ಹೇಳಿದೆಯಷ್ಟೆ ! ಇದನ್ನು ಹಿಂದೆ ಯಾರಾದರೂ ಆಚರಿಸಿದವರು ಇದ್ದಾರೆಯೇ? ಆ ಚೈತ್ರಸ್ನಾನದ ಪ್ರಭಾವದಿಂದ ಅವರಿಗೆ ಯಾವ ಸಿದ್ಧಿಯುಂಟಾಗುತ್ತದೆ?

೩೨. ಅದೆಲ್ಲವನ್ನೂ ವಿಸ್ತಾರವಾಗಿ ನನಗೆ ತಿಳಿಯುವಂತೆ ವಿವರಿಸಿ ಹೇಳು. ರಾಮದಾಸನು ಹೇಳಿದನು--ಎಲೈ ಶಿಷ್ಯನೇ ! ನೀನು ಕೇಳಿದುದು ಬಹು ಚೆನ್ನಾಗಿದೆ. ಮನಸ್ಸಿಟ್ಟು ಕೇಳು. ಅದೆಲ್ಲವನ್ನೂ ವಿವರಿಸಿ ಹೇಳುತ್ತೇನೆ.

೩೩. ಎಲೈ ಬ್ರಾಹ್ಮಣಶ್ರೇಷ್ಠನೇ ! ನರಸಿಂಹನೆಂದು ಹೆಸರುಳ್ಳ ನನ್ನ ತಂದೆಯೊಬ್ಬನಿದ್ದನು. ಅವನಿಗೆ ಒಂದು ಮಹತ್ತರವಾದ ವ್ರತವಿದ್ದಿತು.

ಏಕಮಜ್ಜಕಕ್ಷೇತ್ರಸ್ಥಂ ದ್ವಿಜಮನ್ನಾರ್ಥಿನಂ ತ್ವಪಿ ।
ಸ್ನುಷಾಸ್ತ್ರೀಪುತ್ರತನಯದಾಸೀದಾಸಾದಿಭಿರ್ಯುತಂ ॥ ೩೪ ॥

ಕುಟುಂಬಭೋಜನಂ ತಸ್ಮೈ ಸಂಪೂಜ್ಯಾನ್ನೈರ್ವಿಧೀಯತಾಂ ।
ಲಕ್ಷ್ಮೀನಾಮ್ನೀ ತು ಮನ್ಮಾತಾ ತಾವುಭೌ ರಾಮತತ್ಪರೌ ॥ ೩೫ ॥

ಪುತ್ರೋತ್ಪತ್ತಿಮದೃಷ್ಟ್ವೈವ ತೌ ವೃದ್ಧೌ ಪುತ್ರಾರ್ಥಮುದ್ಯತೌ ।
ಸ್ವದೋಷಪರಿಹಾರಾರ್ಥಮುಪಾಯಂ ಕರ್ತುಮುದ್ಯತೌ ॥ ೩೬ ॥

ನಿವಾಸಾಖ್ಯೇ ಪುರೇ ಗತ್ವಾ ದಂಪತೀ ಮೋಹಿನೀಂ ಶುಭಾಂ ।
ಸ್ವೀಯೇಷ್ಟದೇವತಾಮಂಬಾಂ ಪ್ರವರಾತೀರವಾಸಿನೀಂ ॥ ೩೭ ॥

---

೩೪. ಅಜ್ಜಕ ಕ್ಷೇತ್ರದಲ್ಲಿ ಅನ್ನಾರ್ಥಿಯಾಗಿರುವ ಒಬ್ಬ ಬ್ರಾಹ್ಮಣನನ್ನು ಅವನ ಕುಟುಂಬ ಮಕ್ಕಳು, ಸೊಸೆ, ದಾಸಿ ದಾಸರು ಇವರನ್ನು ಎಂದರೆ ಒಟ್ಟಿನಲ್ಲಿ ಆವನ ಮನೆಯವರನ್ನೆಲ್ಲ ಪೂಜಿಸಿ ಗೌರವಿಸಿ ಭೋಜನವನ್ನು ಮಾಡಿಸಬೇಕು ಎಂಬುದೇ ಆ ವ್ರತವಾಗಿದ್ದಿತು.

೩೫. ಅವನಿಗೆ ಲಕ್ಷ್ಮೀಯೆಂಬ ಹೆಸರಿನ ಹೆಂಡತಿಯಿದ್ದಳು ಅವಳೇ ನನ್ನ ತಾಯಿಯು. ನನ್ನ ತಂದೆಯು ಯಾವಾಗಲೂ ರಾಮನನ್ನೇ ಧ್ಯಾನಿಸುತ್ತ ಅವನಲ್ಲಿಯೇ ಆಸಕ್ತನಾಗಿದ್ದನು.

೩೬. ಹೀಗಿರುತ್ತಿರಲು ಅವರಿಗೆ ಮಕ್ಕಳೇ ಆಗಲಿಲ್ಲ. ಅವರಿಬ್ಬರೂ ಮುದುಕರಾಗುತ್ತ ಬಂದರು. ಆಗ ಮಕ್ಕಳಾಗಬೇಕೆಂದು ಪ್ರಯತ್ನ ಪಡುತ್ತ ಬಂದರು. ಮಕ್ಕಳಾಗಲು ಪ್ರತಿಬಂಧಕವಾಗಿರುವ ದೋಷದ ಪರಿಹಾರಕ್ಕೋಸ್ಕರವಾಗಿ ಉಪಾಯವನ್ನು ಹುಡುಕಲು ಪ್ರಯತ್ನಪಡಲು ಮೊದಲು ಮಾಡಿದರು.

೩೭-೩೮. ಪ್ರವರಾನದಿಯ ದಡದಲ್ಲಿರುವ ಸಿವಾಸವೆಂಬ ಪಟ್ಟಣದಲ್ಲಿರುವ ತಮ್ಮ ಇಷ್ಟ ದೇವತೆಯಾದ ಮೋಹಿನಿಯನ್ನು ದರ್ಶನ ಮಾಡಿ ನಿತ್ಯವೂ ಆಕೆಯ

ದೃಷ್ಟ್ವಾ ದೇವ್ಯಾಶ್ಚ ತೌ ಸೇವಾಂ ನಿತ್ಯಂ ತತ್ರ ಪ್ರಚಕ್ರತುಃ ।
ಗತೇ ಬಹುತಿಥೇ ಕಾಲೇ ವರದಾ ಸಾ ಮಹಾಲಯಾ ॥ ೩೮ ॥

ಪ್ರಸನ್ನಾ ತಂ ದ್ವಿಜಂ ಭೂತ್ವಾ ಪ್ರಾಹ ತದ್ದೋಷಶಾಂತಯೇ ।
ಹೇ ನೃಸಿಂಹ ಮಹಾ ಬುದ್ಧೇ ಗಚ್ಛಾಯೋಧ್ಯಾಪುರೀಂ ಪ್ರತಿ ॥ ೩೯ ॥

ತತ್ರ ವೈ ಸರಯೂತೋಯೇ ರಾಮತೀರ್ಥೇ ಮಹತ್ತಮೇ ।
ಚೈತ್ರೇ ಮಾಸಿ ವಸಂತರ್ತೌ ಯದಾ ಸ್ಯಾನ್ಮೀನಗೋ ರವಿಃ ॥ ೪೦ ॥

ಚೈತ್ರಸ್ನಾನಂ ಮಾಸಮೇಕಂ ಕುರು ತತ್ರ ದ್ವಿಜೋತ್ತಮ ।
ಪಾತಕಂ ಸಕಲಂ ತ್ಯಕ್ತ್ವಾ ಪುತ್ರಂ ಪ್ರಾಪ್ಸ್ಯಸ್ಯನುತ್ತಮಂ ॥ ೪೧ ॥

ಇತಿ ದೇವ್ಯಾ ವಚಃ ಶ್ರುತ್ವಾ ದ್ವಿಜಶ್ಚಿಂತಾಪರಸ್ತದಾ ।
ಯಯೌ ಮಾರ್ಗೇ ಹೃದಿ ಧ್ಯಾಯನ್ನಯೋಧ್ಯಾಂ ತಾಂ ಪುರೀಂ ಶುಭಾಂ॥

ಸೇವೆಯನ್ನು ಮಾಡಲು ಮೊದಲಿಟ್ಟರು. ಬಹು ದಿನಗಳು ಸೇವೆ ಮಾಡಿದ ನಂತರ ಆಕೆಯು ಪ್ರಸನ್ನಳಾಗಿ ವರವನ್ನು ಕೊಡಲು ಮನಸ್ಸನ್ನು ಮಾಡಿದಳು.

೩೯–೪೧. ಆಗ ಆ ಬ್ರಾಹ್ಮಣನಿಗೆ ಆಕೆಯು ಪ್ರಸನ್ನಳಾಗಿ ಆ ಮಕ್ಕಳಾಗದ ದೋಷದ ಶಾಂತಿಗೋಸ್ಕರವಾಗಿ ಇಂತೆಂದಳು. ಎಲೈ ಮಹಾ ಬುದ್ಧಿಯುಳ್ಳ ನರಸಿಂಹನೇ! ಅಯೋಧ್ಯಾ ಪುರಿಗೆ ಹೋಗು. ಅಲ್ಲಿರುವ ಸರಯೂ ನದಿಯ ಉತ್ತಮವಾದ ರಾಮತೀರ್ಥದಲ್ಲಿ ವಸಂತ ಋತುವಿನ ಚೈತ್ರಮಾಸದಲ್ಲಿ, ಮೀನ ರಾಶಿಯಲ್ಲಿ ಸೂರ್ಯನಿರುವಾಗ್ಗೆ ಚೈತ್ರಸ್ನಾನವನ್ನು ಆ ಒಂದು ತಿಂಗಳು ಮಾಡು. ಆಗ ನಿನ್ನ ಪಾಪಗಳೆಲ್ಲವೂ ಹೋಗುತ್ತವೆ. ನಿನಗೆ ಮಗನು ಹುಟ್ಟುವನು.

೪೨. ಇಂತೆಂದ ದೇವಿಯ ಮಾತನ್ನು ಕೇಳಿ ಆ ಬ್ರಾಹ್ಮಣನು ಅದನ್ನೇ ಯೋಚಿಸುತ್ತ ಅಯೋಧ್ಯೆಯನ್ನೇ ದಾರಿ ಉದ್ದಕ್ಕೂ ಚಿಂತಿಸುತ್ತಾ ಹೊರಟನು.

ಚಿಂತಯಾ ಪರಯಾ ವ್ಯಾಪ್ತಃ ಕಥಂ ಗಂತುಂ ಹಿ ಶಕ್ಯತೇ ।
ಮಯಾಯೋಧ್ಯಾಪುರೀ ದೂರಮಿತಃ ಕಷ್ಟಂ ಚ ಜೀವಿತಂ ॥ ೪೩ ॥

ಇತಿ ಚಿಂತಾಯುತೋ ಮಾರ್ಗೇ ಕ್ವಚಿತ್ತಿಷ್ಠನ್ ಕ್ವಚಿತ್ಸ್ಖಲನ್ ।
ಭಾರ್ಯಾಯಾಶ್ಚ ಕರಂ ಧೃತ್ವಾ ವೃದ್ಧಶ್ಚೈವಂ ಯಯೌ ದ್ವಿಜಃ ॥ ೪೪ ॥

ಏವಂ ಗೋದಾವರೀತೀರಂ ಗತ್ವಾ ಸ್ನಾತ್ವಾ ದ್ವಿಜೋತ್ತಮಃ ।
ರಾಮಮೂರ್ತಿಂ ಪುರಃ ಸ್ಥಾಪ್ಯ ಪೂಜಯಾಮಾಸ ಭಕ್ತಿತಃ ॥ ೪೫ ॥

ತಾವತ್ತಸ್ಮೈ ಪ್ರಸನ್ನೋಽಭೂದ್ರಾಮೋ ದೇವ್ಯಾಃ ಪ್ರಸಾದತಃ ।
ದ್ವಿಜಂ ಪ್ರಾಹ ರಘುಶ್ರೇಷ್ಠೋ ಭೋ ನೃಸಿಂಹ ದ್ವಿಜೋತ್ತಮ ॥ ೪೬ ॥

ಮಾಯೋಧ್ಯಾಂ ತ್ವಮಿತೋ ಗಚ್ಛ ಶೃಣು ಮೇ ವಚನಂ ಶುಭಂ ।
ಇತಃ ಪೂರ್ವೇ ಹ್ಯದೂರಂ ಹಿ ಯೋಜನತ್ರಯ ಸಂಮಿತಂ ॥ ೪೭ ॥

---

೪೩. ಆ ಅಯೋಧ್ಯೆಯು ಇಲ್ಲಿಗೆ ಬಹುದೂರವಿರುವುದು. ಅಲ್ಲಿಗೆ ಹೋಗಲು ಹೇಗೆ ಸಾಧ್ಯವು? ನನ್ನ ಜೀವಿತವೇ ಬಹು ಕಷ್ಟಕರವಾಗಿರುವುದು ಎಂದು ಯೋಚಿಸುತ್ತಿದ್ದನು.

೪೪. ಈ ರೀತಿಯಾಗಿ ಯೋಚಿಸುತ್ತ ದಾರಿಯಲ್ಲಿ ಹೋಗುತ್ತ ಮುದುಕನಾಗಿರುವುದರಿಂದ ಮುಗ್ಗರಿಸುತ್ತ, ಎಡವುತ್ತ ಕುಳಿತುಕೊಳ್ಳುತ್ತ ಹೆಂಡತಿಯ ಕೈಯನ್ನು ಹಿಡಿದುಕೊಂಡು ಹೊರಟನು.

೪೫. ಹೀಗೆ ಹೋಗುತ್ತಿರಲು ದಾರಿಯಲ್ಲಿ ಗೋದಾವರಿ ನದಿಯು ಸಿಕ್ಕಿತು. ಅಲ್ಲಿ ಅವನು ಸ್ನಾನವನ್ನು ಮಾಡಿದನು. ಅಲ್ಲಿ ರಾಮನ ಮೂರ್ತಿಯನ್ನು ಎದುರಿಗಿಟ್ಟುಕೊಂಡು ಭಕ್ತಿಯಿಂದ ಪೂಜಿಸಿದನು.

೪೬. ಆಗ ರಾಮನು ಅವನ ಭಕ್ತಿಗೆ ಮೆಚ್ಚಿ ಆ ದೇವಿಯ ಅನುಗ್ರಹದಿಂದ ಪ್ರಸನ್ನನಾದನು. ಆಗ ಅವನನ್ನು ಕುರಿತು ಶ್ರೀರಾಮನು ಇಂತೆಂದನು.

೪೭-೪೮. ಎಲೈ ದ್ವಿಜೋತ್ತಮನಾದ ನರಸಿಂಹನೇ! ನೀನು ಅಯೋಧ್ಯೆಗೆ ಹೋಗಬೇಡ. ನಾನು ಹೇಳುವ ಮಾತನ್ನು ಕೇಳು. ಇಲ್ಲಿಂದ ಪೂರ್ವಕ್ಕೆ

ಪ್ರತಿಷ್ಠಾನಾಭಿದಂ ಕ್ಷೇತ್ರಂ ಗೋದಾಯಾ ಉತ್ತರೇ ತಟೇ ।
ತತ್ರಾಸ್ತಿ ರಾಮತೀರ್ಥಂ ಹಿ ಮನ್ನಾಮ್ನಾ ಚ ಮಯಾ ಕೃತಂ ॥ ೪೮ ॥

ತತ್ರ ತ್ವಂ ಗಚ್ಛ ವಿಪ್ರೇಂದ್ರ ಸ್ನಾನಂ ಶೀಘ್ರಂ ಹಿ ಭಾರ್ಯಯಾ ।
ಚೈತ್ರಮಾಸೇ ವಸಂತರ್ತೌ ಯದಾ ಸ್ಯಾನ್ಮೀನಗೋ ರವಿಃ ॥ ೪೯ ॥

ತದಾ ಕುರು ವಿಶೇಷೇಣ ಪೂಜಯಿತ್ವಾ ಚ ಮಾಂ ಶುಭಂ ।
ಪಾಪಕ್ಷಯಃ ಪುತ್ರಲಾಭೋ ಭವಿಷ್ಯತಿ ನ ಸಂಶಯಃ ॥ ೫೦ ॥

ಇತ್ಯುಕ್ತ್ವಾ ರಘುವೀರಸ್ತು ತತ್ರೈವಾಂತರಧೀಯತ ।
ಯತ್ರ ಗಂಗಾಹ್ರದೇ ರಾಮಃ ಪ್ರಸನ್ನೋ ಭೂದ್ವಿಜಾಯ ಹಿ ॥ ೫೧ ॥

ತಸ್ಮಾತ್ಸ ವೈ ರಾಮಹ್ರದೋ ನಾಮ್ನಾ ಸರ್ವತ್ರ ಕೀರ್ತ್ಯತೇ ।
ತದ್ರಾಮವಚನಾ ದ್ವಿಪ್ರಃ ಪ್ರತಿಷ್ಠಾನಂ ಪುರಂ ಯಯೌ ॥ ೫೨ ॥

ಸ್ವಲ್ಪ ದೂರದಲ್ಲಿ ಎಂದರೆ ಮೂರು ಯೋಜನಗಳ ದೂರದಲ್ಲಿ ಗೋದಾವರಿಯ ಉತ್ತರದಡದಲ್ಲಿ ಪ್ರತಿಷ್ಠಾನವೆಂಬ ಕ್ಷೇತ್ರ ವೊಂದಿರುವುದು. ಅಲ್ಲಿ ನನ್ನ ಹೆಸರಿನ ರಾಮತೀರ್ಥವಿರುವುದು. ಅದು ನನ್ನಿಂದಲೇ ಮಾಡಲ್ಪಟ್ಟದ್ದು. ಶುಭವಾದುದು.

೪೯-೫೦. ಎಲೈ ವಿಪ್ರೇಂದ್ರನೇ ! ನೀನು ಬೇಗನೆ ಅಲ್ಲಿಗೆ ಹೋಗು. ಅಲ್ಲಿ ನೀನು ಹೆಂಡತಿಯೊಡನೆ ಸ್ನಾನವನ್ನು ಮಾಡು. ವಸಂತ ಋತುವಿನ ಚೈತ್ರ ಮಾಸದಲ್ಲಿ ಸೂರ್ಯನು ಮೀನರಾಶಿಯಲ್ಲಿರುವಾಗ ನೀನು ಭಕ್ತಿಯಿಂದ ಸ್ನಾನವನ್ನು ಮಾಡಿ ನನ್ನನ್ನು ಪೂಜಿಸು. ಆದರಿಂದ ಪಾಪವು ನಾಶವಾಗಿ ಪುತ್ರಲಾಭವಾಗುತ್ತದೆ. ಸಂಶಯವಿಲ್ಲ.

೫೧-೫೨. ಶ್ರೀರಾಮನು ಅವನಿಗೆ ಇಂತೆಂದು ಹೇಳಿ ಅಂತರ್ಧಾನನಾದನು. ಆ ಬ್ರಾಹ್ಮಣನು ಸ್ನಾನಮಾಡಿದ ಗೋದಾವರಿಯ ಹ್ರದದಲ್ಲಿ ಶ್ರೀರಾಮನು ಪ್ರತ್ಯಕ್ಷನಾಗಿ ಅಂತರ್ಧಾನನಾದುದರಿಂದ ಅದಕ್ಕೆ ರಾಮಹ್ರದವೆಂದು ಹೆಸರಾಯಿತು. ರಾಮನ ಈ ಮಾತಿನಂತೆಯೆ ಬ್ರಾಹ್ಮಣನು ಪ್ರತಿಷ್ಠಾನ ನಗರಕ್ಕೆ ಹೋದನು.

ಮಾಸಮೇಕಂ ಚ ನ್ಯೈ ಸ್ಥಿತ್ವಾ ಚೈತ್ರಸ್ನಾನಂ ಚಕಾರ ಹ ।
ಸೂರ್ಯೋದಯೇ ಸಮುತ್ಥಾಯ ಕೃತಶೌಚಾದಿಸತ್ಕ್ರಿಯಃ ॥ ೫೩ ॥

ಸ್ನಾತ್ವಾ ತಸ್ಮಿನ್ ರಾಮತೀರ್ಥೇ ಸರಯೂಸಂಗಮಾನ್ವಿತೇ ।
ರಾಮಚಂದ್ರಂ ಸ್ವರ್ಣಗಿರೌ ಪೂಜಯಾಮಾಸ ಭಕ್ತಿತಃ ॥ ೫೪ ॥

ಪ್ರದಕ್ಷಿಣಾಸ್ಸ್ವರ್ಣಗಿರೇಶ್ಚಕಾರ ನವ ಪ್ರತ್ಯಹಂ ।
ನವಪುಷ್ಪೈಶ್ಚ ನೈವೇದ್ಯೈಃ ಪೂಜಯಾಮಾಸ ರಾಘವಂ ॥ ೫೫ ॥

ಚೈತ್ರಶುಕ್ಲತೃತೀಯಾಯಾ ಯಾವದ್ವೈಶಾಖಸಂಭವಾ ।
ತೃತೀಯಾ ಸೀತಲಾಗೌರೀ ಸ್ನಾನಂ ಚಕ್ರೇ ದ್ವಿಜಪ್ರಿಯಾ ॥ ೫೬ ॥

---

೫೩. ಅಲ್ಲಿ ಒಂದು ತಿಂಗಳವರೆಗೂ ಇದ್ದುಕೊಂಡು ಚೈತ್ರಸ್ನಾನವನ್ನು ಮಾಡಿದನು. ಆಗ ಬೆಳಗ್ಗೆ ಹೊತ್ತಿಗೆ ಮುಂಚೆಯೇ ಎದ್ದು ಬಾಹ್ಯಾದಿಶೌಚಾಚಾರಗಳನ್ನು ಮಾಡಿಕೊಂಡು ಸೂರ್ಯೋದಕ್ಕೆ ಸರಿಯಾಗಿ ಚೈತ್ರಸ್ನಾನವನ್ನು ಮಾಡುತ್ತಿದ್ದನು.

೫೪. ಸರಯೂ ಸಂಗಮದಿಂದ ಕೂಡಿದ ಆ ರಾಮತೀರ್ಥದಲ್ಲಿ ಸ್ನಾನ ಮಾಡಿ ಅಲ್ಲಿರುವ ಸ್ವರ್ಣಗಿರಿಯಲ್ಲಿ ಆ ರಾಮಚಂದ್ರನನ್ನು ಭಕ್ತಿಯಿಂದ ಪೂಜಿಸುತ್ತಿದ್ದನು.

೫೫. ಆ ಸ್ವರ್ಣಗಿರಿಗೆ ನಿತ್ಯವೂ ಒಂಭತ್ತು ನಮಸ್ಕಾರಗಳನ್ನು ಮಾಡುತ್ತಿದ್ದನು. ಒಂಭತ್ತು ಬಗೆಯ ಹೂಗಳಿಂದ ಆ ಶ್ರೀರಾಮನನ್ನು ಪೂಜಿಸುತ್ತಾ ವಿಧವಿಧವಾದ ನೈವೇದ್ಯಗಳನ್ನು ಸಮರ್ಪಿಸುತ್ತಿದ್ದನು.

೫೬. ಚೈತ್ರಶುದ್ಧ ತೃತೀಯೆ ಮೊದಲುಗೊಂಡು ವೈಶಾಖ ಶುದ್ಧ ತೃತೀಯೆಯವರೆಗೆ ಸೀತಾಖ್ಯ ಗೌರಿಯ ಸ್ನಾನವನ್ನು ಕೂಡ ಆತನ ಹೆಂಡತಿಯು ಮಾಡುತ್ತಿದ್ದಳು. ಮತ್ತು ಆ ಗೌರಿಯನ್ನೂ ಪೂಜಿಸುತ್ತಿದ್ದಳು.

ಏವಂ ಮಾಸಂ ವ್ರತಂ ಕೃತ್ವಾ ಸ ದ್ವಿಜಸ್ತುಷ್ಟಮಾನಸಃ ।
ಅಜ್ಜಕಂ ಪ್ರತಿ ಮಾರ್ಗೇಣ ಯಯೌ ಲಕ್ಷ್ಮ್ಯಾ ಸಮನ್ವಿತಃ ॥ ೫೭ ॥

ಯಾವನ್ಮಾರ್ಗೇ ದ್ವಿಜೋ ಗಚ್ಛತ್ತಾವದ್ದೃಷ್ಟಸ್ತ್ರಿಭಿರ್ವರೈಃ ।
ಪಿಶಾಚೈಃ ಕ್ಷುತ್ತೃಷಾಕ್ರಾಂತೈಸ್ತಾನುದ್ಧಾರ್ಯ ಸ ಭಾರ್ಯಯಾ ॥ ೫೮ ॥

ಯಯೌ ಸ್ವನಗರಂ ರಮ್ಯಂ ಗೋದಾನಾಭಿವಿರಾಜಿತಂ ।
ಚೈತ್ರಸ್ನಾನಪ್ರಭಾವೇಣ ಜಾತಸ್ತಸ್ಮಾತ್ಸುತಸ್ತ್ವಹಂ ॥ ೫೯ ॥

ತಸ್ಮಾನ್ಮಯಾ ತೇ ಕಥಿತಂ ವರಂ ಹಿ
ಸ್ನಾನಂ ಮಧೌ ತೇ ಸರಯೂಜಲೇ ನೈ ।
ಸಾಕೇತಪುರ್ಯಾಂ ವರರಾಮತೀರ್ಥೇ
ಭುಕ್ತಿಪ್ರದಂ ಮೋಕ್ಷದಮುತ್ತಮಂ ಚ ॥ ೬೦ ॥

---

೫೭. ಆ ಬ್ರಾಹ್ಮಣನು ಈ ರೀತಿಯಾಗಿ ಒಂದು ತಿಂಗಳವರೆವಿಗೂ ಸ್ನಾನ ಮಾಡಿ ಸಂತೋಷಗೊಂಡು ತನ್ನ ಹೆಂಡತಿಯಾದ ಲಕ್ಷ್ಮಿಯೊಡನೆ ಕೂಡಿಕೊಂಡು ಆಜ್ಜಕ ಕ್ಷೇತ್ರಕ್ಕೆ ಹೋಗಲು ದಾರಿಯಲ್ಲಿ ಹೊರಟನು.

೫೮. ಈತನು ಹೆಂಡತಿಯೊಡನೆ ದಾರಿಯಲ್ಲಿ ಹೋಗುತ್ತ ಇದ್ದಾಗ ಅವನ ಕಣ್ಣಿಗೆ ಮೂರು ಪಿಶಾಚಿಗಳು ಕಾಣಿಸಿಕೊಂಡುವು. ಅವು ಹಸಿವು ಬಾಯಾರಿಕೆಗಳಿಂದ ಕೂಡಿಕೊಂಡಿದ್ದುವು. ಆವಕ್ಕೆ ಆ ಪಿಶಾಚ ಜನ್ಮವನ್ನು ಹೋಗಲಾಡಿಸಿ ಹೆಂಡತಿಯೊಡನೆ ಮುಂದಕ್ಕೆ ಹೊರಟನು.

೫೯. ಅಲ್ಲಿಂದ ಹೊರಟು ಗೋದಾವರಿ ಎಂಬ ನದಿಯ ಮಧ್ಯದಲ್ಲಿರುವ ರಮ್ಯವಾದ ತನ್ನ ಪಟ್ಟಣಕ್ಕೆ ಹೋದನು. ಅನಂತರ ಈ ಚೈತ್ರಸ್ನಾನದ ಪ್ರಭಾವದಿಂದ ನಾನು ಅವನಿಗೆ ಮಗನಾಗಿ ಹುಟ್ಟಿದೆನು.

೬೦. ಆದ್ದರಿಂದಲೇ ಈ ವಸಂತ ಋತುವಿನ ಚೈತ್ರ ಮಾಸದಲ್ಲಿ ಸರಯೂ ನದಿಯಲ್ಲಿ ಸ್ನಾನಮಾಡುವುದು ಶ್ರೇಷ್ಠವಾದುದೆಂದು ಹೇಳಿದೆನು. ಅಯೋಧ್ಯೆಯ ಸರಯೂ ನದಿಯಲ್ಲಿನ ರಾಮತೀರ್ಥದ ಸ್ನಾನವು ಜನರಿಗೆ ಭುಕ್ತಿಯನ್ನೂ ಮುಕ್ತಿಯನ್ನೂ ಕೊಡುತ್ತದೆ.

॥ ವಿಷ್ಣುದಾಸ ಉವಾಚ ॥

ಕಥಂ ಪಿಶಾಚಯೋನ್ಯಾಸ್ತೇ ಮುಕ್ತಾ ವಿಪ್ರೇಣ ವೈ ತ್ರಯಃ ।
ಕಸ್ಮಾತ್ಪಾಪಾಚ್ಚ ತೇ ಸರ್ವೇ ಪೈಶಾಚೀಂ ಯೋನಿಮಾಶ್ರಿತಾಃ ॥ ೬೧ ॥

ತತ್ಸರ್ವಂ ವಿಸ್ತರೇಣೈವ ಶ್ರೋತುಮಿಚ್ಛಾಮಿ ತ್ವನ್ಮುಖಾತ್ ।

॥ ಶ್ರೀರಾಮದಾಸ ಉವಾಚ ॥

ಶೃಣು ಶಿಷ್ಯ ಪ್ರವಕ್ಷ್ಯಾಮಿ ರಂಭಾನಾಮ್ನೀ ವರಾಪ್ಸರಾ ॥ ೬೨ ॥

ಚೈತ್ರೇ ಸ್ನಾತ್ವಾ ವರಾಯೋಧ್ಯಾಶರಯೂನಿರ್ಮಲೇ ಜಲೇ ।
ಆರ್ದ್ರವಸ್ತ್ರಯುತಾ ಚಾರುಹಾಸ್ಯಾಲಂಕಾರಮಂಡಿತಾ ॥ ೬೩ ॥

ಗೃಹೀತ್ವಾ ಶರಯೂತೋಯಂ ರತ್ನಕಾಂಚನನಿರ್ಮಿತೇ ।
ಪಾತ್ರೇ ರಾಮೇಶ್ವರಂ ಸೇತೌ ದ್ರಷ್ಟುಂ ಮೌನೇನ ಸಾ ಜವಾತ್ ॥ ೬೪ ॥

---

೬೧. ವಿಷ್ಣುದಾಸನು ಹೇಳಿದನು—ಎಲೈ ಗುರುವೇ ! ಪಿಶಾಚಿ ಜನ್ಮದಲ್ಲಿರುವ ಆ ಮೂರು ಪಿಶಾಚಿಗಳನ್ನು ಆ ಬ್ರಾಹ್ಮಣನು ಹೇಗೆ ಬಿಡುಗಡೆಯನ್ನು ಮಾಡಿದನು. ಯಾವ ಪಾಪದಿಂದ ಆ ಮೂರೂ ಕೂಡ ಪಿಶಾಚ ಜನ್ಮವನ್ನು ಹೊಂದಿದ್ದುವು.

೬೨. ಅದೆಲ್ಲವನ್ನೂ ಕೂಡ ನಿನ್ನ ಬಾಯಿಂದ ವಿಸ್ತಾರವಾಗಿ ಕೇಳಬೇಕೆಂದಿದ್ದೇನೆ. ಎಂದೆನಲು ಅದಕ್ಕೆ ರಾಮದಾಸನು ಇಂತೆಂದನು.

ರಾಮದಾಸನು ಹೇಳಿದನು—ಎಲೈ ಶಿಷ್ಯನೇ ! ಕೇಳು. ರಂಭೆಯೆಂಬ ಒಬ್ಬ ಉತ್ತಮಳಾದ ಅಪ್ಸರ ಸ್ತ್ರೀಯು ಇರುವಳು.

೬೩. ಅವಳು ಒಂದು ಸಾರಿ ಅಯೋಧ್ಯೆಯ ಉತ್ತಮವಾದ ಸರಯೂ ನದಿಯ ತೀರ್ಥದಲ್ಲಿ ಸ್ನಾನಮಾಡಿ ಒದ್ದೆ ಬಟ್ಟೆಯನ್ನು ಉಟ್ಟುಕೊಂಡು ಅಲಂಕಾರ ಮಾಡಿಕೊಂಡು ಮುಗುಳುನಗೆಯನ್ನು ಬೀರುತ್ತ ಹೊರಟಳು.

೬೪. ಅವಳು ಹೋಗುವಾಗ ಒಂದು ರತ್ನದಿಂದ ಕೂಡಿದ ಚಿನ್ನದ ಕಮಂಡಲುವಿನಲ್ಲಿ ಸರಯೂ ನದಿಯ ತೀರ್ಥವನ್ನು ತೆಗೆದುಕೊಂಡು ಸೇತುವಿನಲ್ಲಿರುವ ರಾಮೇಶ್ವರನನ್ನು ನೋಡಲು ಬೇಗನೆ ಹೋಗುತ್ತಿದ್ದಳು. ಆಗ ಅವಳು ಮಾತನಾಡದೆ ಮೌನದಿಂದ ಇದ್ದಳು.

ಯಯಾವಾಕಾಶಮಾರ್ಗೇಣ ಪಿಶಾಚಾ ಯತ್ರ ತೇ ತ್ರಯಃ ।
ತದಾರ್ದ್ರವಸ್ತ್ರಚಾಂಚಲ್ಯಾದ್ಬಿಂದುಭಿಃ ಪ್ರೋಕ್ಷಿತಾಶ್ಚ ತೇ ॥ ೬೫ ॥

ಕ್ರೂರಸ್ವಭಾವಮುತ್ಸೃಜ್ಯ ಚಾಶ್ಚರ್ಯಂ ಪರಮಂ ಯಯುಃ ।
ಪೂರ್ವಜನ್ಮಾನುಸ್ಮರಣಮಭೂತ್ತೇಷಾಂ ತದಾ ನೃಪ ॥ ೬೬ ॥

ವಿಸ್ಮಯಾವಿಷ್ಟಚಿತ್ತಾಸ್ತೇ ತಾಂ ದೃಷ್ಟ್ವಾಪ್ಸರಸಂ ದಿವಿ ।
ಬಹುಧಾ ಪ್ರಾರ್ಥಯಾಮಾಸುಸ್ತಾಂ ಸಾ ಪಪ್ರಚ್ಛ ಸಂಜ್ಞಯಾ ॥ ೬೭ ॥

ಕಸ್ಮಾದ್ಯೂಯಂ ಪಿಶಾಚಾ ಹಿ ಜಾತಾಸ್ತತ್ಕಥ್ಯತಾಂ ಮಮ ।
ಇತಿ ತತ್ಕರಕೃತ್ಸಂಜ್ಞಾಪ್ರೇರಿತಾಸ್ತೇ ತ್ರಯಸ್ತದಾ ॥ ೬೮ ॥

---

೬೫. ಆಕೆಯು ಈ ಮೂರು ಪಿಶಾಚಗಳಿದ್ದ ದಾರಿಯಲ್ಲಿ ಆಕಾಶ ಮಾರ್ಗದಿಂದ ಹೋಗುತ್ತಿದ್ದಳು. ರಂಭೆಯು ಇಂತು ಹೋಗುತ್ತಿರಲು ಆಕೆಯು ಉಟ್ಟಿದ್ದ ಬಟ್ಟೆಯು ಅಲ್ಲಾಡುತ್ತಿದ್ದುದರಿಂದ ಅದರಲ್ಲಿದ್ದ ನೀರಿನ ತುಂತುರಗಳು ಆ ಪಿಶಾಚಗಳಮೇಲೆ ಚುಮುಕಿಸಿದಂತೆ ಬಿದ್ದುವು.

೬೬ ಒಡನೆಯೇ ಅವು ತಮ್ಮ ಕ್ರೂರಸ್ವಭಾವವನ್ನು ಬಿಟ್ಟು ಬಿಟ್ಟುವು. ಆದರಿಂದ ಅವಕ್ಕೆ ಬಹುವಾದ ಆಶ್ಚರ್ಯವುಂಟಾಯಿತು. ಒಡನೆಯೇ ಅವಕ್ಕೆ ಹಿಂದಿನ ಜನ್ಮದ ಸ್ಮರಣೆಯುಂಟಾಯಿತು.

೬೭. ಇಂತು ಅವೆಲ್ಲವೂ ಆಶ್ಚರ್ಯಗೊಂಡು ಆಕಾಶದಲ್ಲಿ ಹೋಗುತ್ತಿದ್ದ ಆ ರಂಭೆಯನ್ನು ನೋಡಿ ಬಹು ವಿಧದಿಂದ ಪ್ರಾರ್ಥಿಸಿಕೊಳ್ಳಲು ಆಕೆಯು ಮೌನದಿಂದ ಇದ್ದುದರಿಂದ ಸಂಜ್ಞೆಯಿಂದಲೇ ಇಂತೆಂದು ಕೇಳಿದಳು.

೬೮. ಎಲೈ ಪಿಶಾಚಗಳಿರ! ನೀವು ಪಿಶಾಚಗಳಾಗಲು ಕಾರಣವೇನು? ಆ ಕಾರಣವನ್ನು ನನಗೆ ಹೇಳಿರಿ ಎಂಬುದಾಗಿ ಕೇಳೆ ಅವು ಹೇಳಿದುದನ್ನು ಆಕೆಯು ತಿಳಿದುಕೊಂಡು ಕೈಸಂಜ್ಞೆಯಿಂದ ಹೇಳುವುದಕ್ಕೆ ಮೊದಲು ಮಾಡಿದಳು.

ಶೇಷು ದೃಷ್ಟ್ವಾ ವರ್ತಮಾನಂ ಹಿ ಕಥಯಾಮಾಸತುಶ್ಚ ತಾಂ ।
ಶೃಣು ಭಾಮಿನಿ ಚಾವಾಂ ಹಿ ಪೂರ್ವಜನ್ಮನಿ ಭೂಸುರಾತ್ ॥ ೬೯ ॥

ವಿರಜಾಯಾಂ ಸಮುತ್ಪನ್ನೌ ಶ್ರೋತ್ರಿಯಾದ್ಧರಶರ್ಮಣಃ ।
ಉಭಾವಧ್ಯಯನಂ ಕರ್ತುಂ ಕಂಚಿನ್ನಾರಾಯಣಾಹ್ವಯಂ ॥ ೭೦ ॥

ಶುಶ್ರೂಷಯಾ ತೋಷಯಿತ್ವಾ ಗುರುಂ ತತ್ರೈವ ತಸ್ಥತುಃ ।
ನಾರಾಯಣಸುತಾಂ ಚಾರುಹಾಸಾಂ ಚಂದ್ರನಿಭಾನನಾಂ ॥ ೭೧ ॥

ದೃಷ್ಟ್ವಾ ಪರಸ್ಪರಂ ಮೈತ್ರ್ಯಂ ಬಹುಧಾ ಪ್ರಾರ್ಥ್ಯ ತಾಂ ಸ್ತ್ರಿಯಂ ।
ಆವಾಭ್ಯಾಂ ಚ ಹಿ ಸಾ ಭುಕ್ತಾ ತತ್ ಜ್ಞಾನಂ ಗುರುಣಾ ಚಿರಾತ್ ॥ ೭೨ ॥

ಆವಾಭ್ಯಾಂ ಚ ದದೌ ಶಾಪಂ ತಸ್ಯೈ ಚಾಪ್ಯಶಪತ್ಕ್ರುಧಾ ।
ಯುವಾಂ ಚಾಪಿ ಕುಮಾರೀಯಂ ಪಿಶಾಚತ್ವಂ ಗಮಿಷ್ಯಥ ॥ ೭೩ ॥

---

೬೯. ಅವುಗಳಲ್ಲಿ ಎರಡು ಪಿಶಾಚಗಳು ಆಕೆಯನ್ನು ಕುರಿತು ಇಂತೆಂದು ಹೇಳಿದುವು. ಎಲೈ ಭಾಮಿನಿಯೇ! ಕೇಳು. ನಾವಿಬ್ಬರೂ ಪೂರ್ವದಲ್ಲಿ ವಿರಜೆ ಎಂಬವಳಲ್ಲಿ ಹರಶರ್ಮನೆಂಬ ಶ್ರೋತ್ರಿಯನಿಂದ ಉತ್ಪನ್ನರಾದೆವು.

೭೦. ಅನಂತರ ನಾವಿಬ್ಬರೂ ಅಧ್ಯಯನವನ್ನು ಮಾಡಲು ನಾರಾಯಣನೆಂಬ ಹೆಸರುಳ್ಳ ಒಬ್ಬ ಗುರುವನ್ನು ಶುಶ್ರೂಷೆ ಮಾಡುತ್ತ ಅಲ್ಲಿಯೇ ಇದ್ದುಕೊಂಡಿದ್ದೆವು. ಅವನಿಗೆ ಒಬ್ಬಳು ಮಗಳಿದ್ದಳು.

೭೧-೭೨. ಚಂದ್ರನಂತೆ ಮುಖವುಳ್ಳ ಆ ನಾರಾಯಣ ಗುರುವಿನ ಮಗಳನ್ನು ನೋಡಿ ನಾವಿಬ್ಬರೂ ಸ್ನೇಹದಿಂದ ಇದ್ದುಕೊಂಡು ಆಕೆಯನ್ನು ಬಹು ವಿಧವಾಗಿ ಪ್ರಾರ್ಥಿಸಿಕೊಂಡು ಒಪ್ಪಿಸಿ ಆಕೆಯನ್ನು ಅನುಭವಿಸಿದೆವು ಇದನ್ನು ಗುರುವು ಸ್ವಲ್ಪಕಾಲವಾದಮೇಲೆ ತಿಳಿದುಕೊಂಡನು.

೭೩. ಇದರಿಂದ ಕೋಪಗೊಂಡು ಆತನು ನೀವೂ ಆಕೆಯೂ ಪಿಶಾಚಗಳಾಗಿರಿ ಎಂದು ನಮಗೂ ಆಕೆಗೂ ಶಾಪವನ್ನು ಕೊಟ್ಟನು.

ತತೋಽಸ್ಮಾಭಿಸ್ತ್ರಿಭಿಸ್ತಂ ತು ಮುನಿಂ ನತ್ವಾ ಪುನಃ ಪುನಃ ।
ಶಾಪಸ್ಯಾಂತಸ್ತತೋ ಲಬ್ಧಸ್ತಚ್ಛೃಣುಷ್ವ ಮನೋರಮೇ ॥ ೭೪ ॥

ಚೈತ್ರಮಾಸೇ ನೃಸಿಂಹಾಖ್ಯಃ ಕಶ್ಚಿದ್ವಿಪ್ರಶ್ಚ ಕಾನನೇ ।
ದದಾತಿ ಸ್ನಾನಜಂ ಪುಣ್ಯಂ ತದೋದ್ಧಾರೋ ಭವಿಷ್ಯತಿ ॥ ೭೫ ॥

ಏವಂ ಜಾತಾಃ ಪಿಶಾಚಾ ಹಿ ವಯಂ ತ್ವದ್ವಸ್ತ್ರಬಿಂದುಭಿಃ ।
ಪ್ರೋಕ್ಷಿತಾಸ್ತ್ವೋದ್ಯ ತೈರ್ಜಾತಾ ಪೂರ್ವಜನ್ಮಸ್ಮೃತಿ ಶ್ಶುಭಾ ॥ ೭೬ ॥

ತತ್ತೇಷಾಂ ವಚನಂ ಶ್ರುತ್ವಾ ಜ್ಞಾತ್ವಾ ಶಾಪಸ್ಯ ಮೋಕ್ಷಣಂ ।
ಸಾಂತ್ವಯಿತ್ವಾ ಕರೇಣೈವ ಶೀಘ್ರಂ ಸ ನೃಹರಿಃ ಸ್ತ್ರಿಯಾ ॥ ೭೭ ॥

---

೭೪. ಆಗ ನಾವು ಮೂವರೂ ಆ ಗುರುವನ್ನು ಅನೇಕಬಾರಿ ನಮಿಸಿ ಕೇಳಿಕೊಳ್ಳಲು ಆತನು ಶಾಪದ ವಿಮೋಚನೆಯನ್ನು ಹೇಳಿದನು. ಅದನ್ನು ಹೇಳುತ್ತೇನೆ. ಕೇಳು.

೭೫. ಎಲೈ ಪಿಶಾಚಿಗಳಿರ! ಚೈತ್ರಮಾಸದಲ್ಲಿ ನೃಸಿಂಹನೆಂಬ ಒಬ್ಬ ಬ್ರಾಹ್ಮಣನು ಕಾಡಿನಲ್ಲಿರುವ ನಿಮಗೆ ಆ ಚೈತ್ರಮಾಸದ ಸ್ನಾನದ ಪುಣ್ಯವನ್ನು ಕೊಡುವನು. ಆಗ ನೀವುಗಳು ಈ ಪಿಶಾಚತನದಿಂದ ಬಿಡುಗಡೆಯನ್ನು ಹೊಂದುತ್ತೀರಿ.

೭೬. ಈ ರೀತಿಯಾದ ಶಾಪದಿಂದ ಪಿಶಾಚಿಗಳಾದ ನಾವು ಮೂವರೂ ನಿನ್ನ ಒದ್ದೆಯ ಬಟ್ಟೆಯ ಬಿಂದುಗಳಿಂದ ಚುಮುಕಿಸಲ್ಪಟ್ಟವರಾಗಿ ಈಗ ಪೂರ್ವ ಜನ್ಮದ ಜ್ಞಾನವನ್ನು ಹೊಂದಿದವರಾದೆವು.

೭೭. ಆ ರಂಭೆಯು ಆ ಪಿಶಾಚಿಗಳ ಮಾತನ್ನು ಕೇಳಿ ಇವುಗಳ ಶಾಪದ ಮೋಕ್ಷವನ್ನು ತಿಳಿದು ಅವುಗಳನ್ನು ಕೈಸಂಜ್ಞೆಯಿಂದಲೇ ಸಮಾಧಾನಪಡಿಸಿ ಎಲೈ ಪಿಶಾಚಿಗಳಿರಾ! ಆ ನರಸಿಂಹನು ಬೇಗನೇ ಅವನ ಹೆಂಡತಿಯೊಡನೆ ಇಲ್ಲಿಗೆ ಬರುವನು.

ಆಗಮಿಷ್ಯತಿ ಮಾ ಚಿಂತಾಂ ಕುರುತೇತಿ ವರಾಂಗನಾ ।
ಯಯೌ ರಾಮೇಶ್ವರಂ ಶೀಘ್ರಂ ಪೂಜಯಿತ್ವಾ ಗತಾ ದಿವಂ ॥ ೭೮ ॥

ಚೈತ್ರಮಾಸೇ ಹ್ಯತಿಕ್ರಾಂತೇ ಮಾರ್ಗೇ ಸ ನೃಹರಿರ್ದ್ವಿಜಃ ।
ಭಾರ್ಯಯಾ ಸಹಿತೋ ದೃಷ್ಟಃ ಪಿಶಾಚೈಸ್ತ್ರೈಃ ಪಿತಾ ಮಮ ॥ ೭೯ ॥

ಸ್ಥಿತ್ವಾ ದೂರಂ ಚ ತೇ ಸರ್ವೇ ತಮೂಚುರ್ನೃಹರಿಂ ದ್ವಿಜಂ ।
ನೈಜಂ ವೃತ್ತಂ ಸಮಸ್ತಂ ಹಿ ಶಾಪಸ್ಯಾಪಿ ವಿಮೋಕ್ಷಣಂ ॥ ೮೦ ॥

ತಚ್ಛ್ರುತ್ವಾ ನೃಹರಿರ್ವಿಪ್ರಸ್ತಾನ್ ಪ್ರೋವಾಚ ಮುದಾನ್ವಿತಃ ।
ಮಾ ಭೇತವ್ಯಂ ಪಿಶಾಚತ್ವಾದ್ಯಥಾಶಂಭುರ್ದ್ವಿಜೇನ ಸಃ ॥ ೮೧ ॥

---

೭೮. ನೀವು ಚಿಂತಿಸಬೇಡಿರಿ ಎಂಬದಾಗಿ ಆ ರಂಭೆಯು ಆಶ್ವಾಸನೆಯನ್ನು ಕೈಸಂಜ್ಞೆಯಿಂದ ತೋರಿಸಿ ಬೇಗನೆ ರಾಮೇಶ್ವರಕ್ಕೆ ಹೋಗಿ ಅಲ್ಲಿ ಆ ರಾಮೇಶ್ವರನನ್ನು ಪೂಜಿಸಿ ಸ್ವರ್ಗಕ್ಕೆ ಹೊರಟು ಹೋದಳು.

೭೯. ಚೈತ್ರಮಾಸವು ಕಳೆಯಲು ಮಾರ್ಗದಲ್ಲಿ ಆ ನರಸಿಂಹನೆಂಬ ನನ್ನ ತಂದೆಯಾದ ಬ್ರಾಹ್ಮಣನು ಹೆಂಡತಿಯೊಡನೆ ಬರುವುದನ್ನು ಆ ಮೂರು ಪಿಶಾಚಗಳೂ ನೋಡಿದುವು.

೮೦. ಆಗ ಅವೆಲ್ಲವೂ ಕೂಡ ದೂರದಲ್ಲಿಯೇ ನಿಂತುಕೊಂಡು ಆ ಬ್ರಾಹ್ಮಣನಾದ ನರಸಿಂಹನನ್ನು ಕುರಿತು ತಾವು ಮಾಡಿದ ನಿಜವಾದ ವಿಷಯವನ್ನೂ ಅದರಿಂದ ಶಾಪಬಂದುದನ್ನೂ ಅದರ ಮೋಕ್ಷವನ್ನೂ ಕೂಡ ಹೇಳಿದುವು.

೮೧. ಅದನ್ನು ಕೇಳಿ ಆ ನರಸಿಂಹನು ಸಂತೋಷದಿಂದ ಅವನ್ನು ಕುರಿತು ಇಂತೆಂದನು. ಎಲೈ ಪಿಶಾಚಿಗಳಿರ ! ನೀವು ಈ ಪಿಶಾಚತನದ ದೆಸೆಯಿಂದ ಹೆದರಬೇಡಿರಿ. ಶಂಭುಶರ್ಮನೆಂಬ ಬ್ರಾಹ್ಮಣನು ಪೂರ್ವದಲ್ಲಿ ರಾಕ್ಷಸನನ್ನು ಆ ಜನ್ಮದಿಂದ ಪಾರುಮಾಡಿದಂತೆ ನಾನು ನಿಮ್ಮನ್ನು ಪಾರುಮಾಡುತ್ತೇನೆ. ಎಂದನು.

ರಾಕ್ಷಸೋ ಮೋಚಿತಃ ಪೂರ್ವಂ ಮೋಚಯಿಷ್ಯಾಮ್ಯಹಂ ತಥಾ ।

॥ ಪಿಶಾಚ ಉವಾಚ ॥

ಶಂಭುಶರ್ಮಾ ಕದಾ ಮುಕ್ತೋ ರಾಕ್ಷಸಃ ಕಸ್ಸವಿಸ್ತರಂ ॥ ೮೨ ॥

ಕಥಯಸ್ವ ದ್ವಿಜಶ್ರೇಷ್ಠ ಕೃಪಾಂ ಕೃತ್ವಾ ತು ಕೌತುಕಾತ್ ।

॥ ನೃಸಿಂಹ ಉವಾಚ ॥

ಶೃಣುಧ್ವಂ ಕಥಯಿಷ್ಯಾಮಿ ಯದ್ವೃತ್ತಂ ಚ ಪುರಾತನಂ ॥ ೮೩ ॥

ಶಿವಕಾಂಚೀಪುರೇ ಮಧ್ಯೇ ಕಶ್ಚಿದ್ವಿಪ್ರಶ್ಶುಚಿವ್ರತಃ ।
ಶಂಭುನಾಮಾ ಚಿರಂ ಕಾಲಂ ತಸ್ಥೌ ಸಹ ಸ್ವಭಾರ್ಯಯಾ ॥ ೮೪ ॥

ಸ ಕಸ್ಮಿಂಶ್ಚಿದ್ವನೇ ವಿಪ್ರಶ್ಚೈಕಾಂಬರಶಿವಾಂತಿಕೇ ।
ಪೌರಾಣಿಕಮುಖಾಚ್ಚೈತ್ರಮಾಸಮಾಹಾತ್ಮ್ಯವರ್ತಿನೀಂ ॥ ೮೫ ॥

ಕಥಾಂ ಶ್ರೋತುಂ ಸಮಾಯಾತಸ್ತತ್ರ ಶ್ರುತ್ವಾ ಮಹತ್ಫಲಂ ।
ಅಯೋಧ್ಯಾಯಾಂ ಹಿ ಚೈತ್ರಸ್ಯ ಸ್ನಾನಾತ್ಕೈವಲ್ಯದಾಯಕಂ ॥ ೮೬ ॥

೮೨-೮೩ ಪಿಶಾಚಿಗಳು ಹೇಳಿದುವು--ಎಲೈ ಬ್ರಾಹ್ಮಣನೆ! ಆ ಶಂಭುಶರ್ಮ ನೆಂಬುವನಾರು? ಆ ರಾಕ್ಷಸನು ಯಾರು? ಅದನ್ನು ವಿಸ್ತಾರವಾಗಿ ಹೇಳು. ನಮ್ಮಲ್ಲಿ ಕೃಪೆಮಾಡಿ ಅದೆಲ್ಲವನ್ನೂ ವಿಸ್ತರಿಸು.

೮೪. ನರಸಿಂಹನು ಹೇಳಿದನು—ಎಲೈ ಪಿಶಾಚಿಗಳಿರಾ! ಕೇಳಿರಿ. ಹಿಂದೆ ನಡೆದ ಆ ಕಥೆಯನ್ನು ಹೇಳುತ್ತೇನೆ. ಮನಸ್ಸಿಟ್ಟು ಕೇಳಿರಿ. ಶಿವಕಾಂಚಿ ಎಂಬುದೊಂದು ಪಟ್ಟಣವಿರುವುದು. ಅದರಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಅವನು ಶುಚಿಯಾದ ಆಚಾರವುಳ್ಳವನು. ಅವನ ಹೆಸರು ಶಂಭುಶರ್ಮನೆಂಬುದಾಗಿದ್ದಿತು. ಅವನು ಬಹುಕಾಲ ತನ್ನ ಹೆಂಡತಿಯೊಡನೆ ಇದ್ದುಕೊಂಡಿದ್ದನು.

೮೫-೮೬. ಅವನು ಒಂದು ಸಾರಿ ಒಂದು ತೋಟದಲ್ಲಿ ಏಕಾಂಬರ ಶಿವನ ಬಳಿಯಲ್ಲಿ ಪೌರಾಣಿಕನ ಮುಖದಿಂದ ಚೈತ್ರಮಾಸದ ಸಂಬಂಧವಾದ ಕಥೆಯನ್ನು ಕೇಳಲು ಬಂದನು. ಆಗ ಅವನು ಅಯೋಧ್ಯೆಯಲ್ಲಿ ಚೈತ್ರಸ್ನಾನವನ್ನು ಮಾಡಿದರೆ ಕೈವಲ್ಯವು ಸಿಕ್ಕುವುದೆಂದು ಆ ಚೈತ್ರದ ಮಹಿಮೆಯನ್ನು ಕೇಳಿದನು.

ತತೋ ಬಹುಗತೇ ಕಾಲೇ ಸಂಸ್ಮರನ್ ತಾಂ ಕಥಾಂ ಶುಭಾಂ ।
ಜ್ಞಾತ್ವಾ ಸಮಾಗತಂ ಚೈತ್ರಂ ಸ್ವಗೃಹಾನ್ನಿರ್ಗತಸ್ತದಾ ॥ ೮೭ ॥

ಭಾರ್ಯಯಾ ಸಹಿತೋ ವಿಪ್ರಶ್ಶನೈರ್ಮಾರ್ಗೇಣ ವೈ ಯಯೌ ।
ತೀರ್ತ್ವಾ ತಾಂ ಜಾಹ್ನವೀಂ ರಮ್ಯಾಂ ಯಾವದಗ್ರೇ ಸ ಗಚ್ಛತಿ ॥ ೮೮ ॥

ತಾವದ್ದೃಷ್ಟೋ ಹಿ ಭಿಲ್ಲೇನ ಕರ್ಕಶಾಖ್ಯೇನ ಕಾನನೇ ।
ಗೃಹೀತ್ವಾ ಸಶರಂ ಚಾಪಂ ಧರ್ಷಯಿತ್ವಾ ಚ ಭೂಸುರಂ ॥ ೮೯ ॥

ಲುಲುಂಠ ಕರ್ಕಶಃ ಕ್ರೂರೋ ವಸ್ತ್ರೇಣೈಕೇನ ತಂ ದ್ವಿಜಂ ।
ಮುಮೋಚ ತಸ್ಯ ಪಾಥೇಯಂ ಗೃಹೀತ್ವಾ ಸಕಲಂ ಶುಭಂ ॥ ೯೦ ॥

ದ್ವಿಜೋಪಿ ಪ್ರಾರ್ಥಯಾಮಾಸ ಕರ್ಕಶಂ ಚ ಪುನಃ ಪುನಃ ।
ವಸ್ತ್ರಾದಿಕಂ ಗೃಹಾಣ ತ್ವಂ ಭಕ್ಷ್ಯಪಿಷ್ಟಂ ದದಸ್ವ ಮಾಂ ॥ ೯೧ ॥

೮೭-೮೮. ಹೀಗೆ ಕೇಳಿದ ಮೇಲೆಯೂ ಬಹು ದಿನಗಳು ಕಳೆದವು. ಅನಂತರ ಈ ಕಥೆಯನ್ನು ಜ್ಞಾಪಿಸಿಕೊಂಡು ಚೈತ್ರಮಾಸವು ಬರುವುದನ್ನು ತಿಳಿದು ತನ್ನ ಮನೆಯಿಂದ ಹೆಂಡತಿಯೊಡನೆ ಹೊರಟು ಮಾರ್ಗದಲ್ಲಿ ಮೆಲ್ಲಗೆ ಹೋಗುತ್ತಿದ್ದನು ದಾರಿಯಲ್ಲಿ ಸಿಕ್ಕಿದ ಜಾಹ್ನವಿಯನ್ನು ದಾಟಿ ಮುಂದಕ್ಕೆ ಹೋಗುತ್ತಿದ್ದನು.

೮೯. ಹೀಗೆ ಹೋಗುತ್ತಿರುವಾಗ ಕರ್ಕಶನೆಂಬ ಒಬ್ಬ ಕ್ರೂರಿಯಾದ ಭಿಲ್ಲರವನು ಆ ಕಾಡಿನಲ್ಲಿ ಅವನನ್ನು ನೋಡಿದನು. ಒಡನೆಯೇ ಬಿಲ್ಲುಬಾಣಗಳನ್ನು ಹಿಡಿದು ಆ ಬ್ರಾಹ್ಮಣನನ್ನು ಹೆದರಿಸಿದನು.

೯೦. ಅನಂತರ ಅವನ ಬಳಿ ಇರುವುದನ್ನೆಲ್ಲಾ ಕೊಳ್ಳೆ ಹೊಡೆದು ಕಿತ್ತುಕೊಂಡು ಅವನಿಗೆ ಬಟ್ಟೆಯನ್ನು ಮಾತ್ರ ಕೊಟ್ಟುಬಿಟ್ಟನು. ಅವನ ಬಳಿಯಲ್ಲಿದ್ದ ಅನ್ನದ ಬುತ್ತಿ ಮತ್ತು ಉಪಯುಕ್ತವಾದ ಪದಾರ್ಥಗಳು ಇವೆಲ್ಲವನ್ನೂ ಕಿತ್ತುಕೊಂಡನು.

೯೧. ಆಗ ಬ್ರಾಹ್ಮಣನು ಆ ಭಿಲ್ಲನಾದ ಕರ್ಕಶನನ್ನು ನೋಡಿ ಎಲೈ ಬಿಲ್ಲನೆ! ನೀನು ನನ್ನ ಬಟ್ಟೆ ಮುಂತಾದುವನ್ನು ತೆಗೆದುಕೊ. ಆದರೆ ನನಗೆ ತಿಂಡಿಯನ್ನು ಮಾಡಿಕೊಳ್ಳಲನುಕೂಲವಾಗಿರುವ ಆ ಹಿಟ್ಟನ್ನು ಕೊಡು. ಎಂಬುದಾಗಿ ಅನೇಕ ಬಾರಿ ಕೇಳಿಕೊಂಡನು.

ತತ್ತಸ್ಯ ವಚನಂ ಶ್ರುತ್ವಾ ಮುಕ್ತ್ವಾ ತದ್ವಸ್ತ್ರಬಂಧನಂ ।
ಸರ್ವಂ ದದರ್ಶ ಪಾಥೇಯಂ ನಾನಾವಿಧಮನುತ್ತಮಂ ॥ ೯೨ ॥

ತಸ್ಮಿನ್ ದದರ್ಶ ಸ ವ್ಯಾಧೋ ದಶ ರಂಭಾಫಲಾನಿ ವೈ ।
ಅಪಕ್ವಾನ್ಯತಿಶುಷ್ಕಾಣಿ ತತಶ್ಚಿತ್ತೇ ವಿಚಾರಯತ್ ॥ ೯೩ ॥

ಏತೈಃ ಫಲೈರ್ನ ಮೇ ಕಾರ್ಯಂ ಜಾನಾಮಿ ಬ್ರಾಹ್ಮಣೋತ್ತಮಂ ।
ತರ್ಹಿ ದಾಸ್ಯಾಮ್ಯಹಂ ದೀನಂ ಕ್ಷುಧಾ ಕ್ರಾಂತಂ ಚ ಸಸ್ತ್ರಿಕಂ ॥ ೯೪ ॥

ಇತಿ ನಿಶ್ಚಿತ್ಯ ಸ ವ್ಯಾಧೋ ದದೌ ತಾನಿ ದ್ವಿಜನ್ಮನೇ ।
ಗೃಹೀತ್ವಾಭಕ್ಷಯದ್ವಿಪ್ರಃ ಪ್ರಾರಂಭೇ ಭಾರ್ಯಯಾ ಮಧೌ ॥ ೯೫ ॥

---

೯೨. ಭಿಲ್ಲನು ಆ ಬ್ರಾಹ್ಮಣನ ಮಾತನ್ನು ಕೇಳಿ ಅವನ ಆ ಬಟ್ಟೆಯ ಗಂಟನ್ನು ಬಿಚ್ಚಿ ಅದರೊಳಗಿರುವ ಉತ್ತಮವಾದ ಪದಾರ್ಥಗಳೆಲ್ಲವನ್ನೂ ನೋಡಿದನು.

೯೩. ಆ ಗಂಟನೊಳಗೆ ಆ ಭಿಲ್ಲನು ಹತ್ತು ಬಾಳೆಯ ಹಣ್ಣುಗಳಿದ್ದುದನ್ನು ನೋಡಿದನು. ಅವು ಹಣ್ಣಾಗಿ ಕಳಿತಿರಲಿಲ್ಲ. ಆದರೆ ಒಣಗಿ ಹೋಗಿದ್ದುವು. ಇದನ್ನು ನೋಡಿ ಮನಸ್ಸಿನಲ್ಲಿ ಯೋಚಿಸಿದನು.

೯೪. ಆ ಹಣ್ಣುಗಳು ನನಗೆ ಬೇಕಾಗಿರುವುದಿಲ್ಲ. ಇವನಾದರೋ ಬ್ರಾಹ್ಮಣೋತ್ತಮನೆಂಬುದನ್ನು ತಿಳಿದಿದ್ದೇನೆ. ಆದ್ದರಿಂದ ಇದನ್ನು ಇವನಿಗೇ ಕೊಟ್ಟು ಬಿಡುತ್ತೇನೆ. ಇವನಾದರೋ ಹಸಿವಿನಿಂದ ಕೂಡಿಕೊಂಡು ಕಷ್ಟಪಡುತ್ತಿರುವನು. ಜೊತೆಯಲ್ಲಿ ಹೆಂಡತಿಯೂ ಇರುವಳು.

೯೫. ಹೀಗೆಂಬುದಾಗಿ ಆ ವ್ಯಾಧನು ನಿಶ್ಚಯಿಸಿಕೊಂಡು ಅವರಿಗೆ ಆ ಬಾಳೆಯ ಹಣ್ಣುಗಳನ್ನು ಕೊಟ್ಟನು. ಅದನ್ನು ತೆಗೆದುಕೊಂಡು ಆ ಬ್ರಾಹ್ಮಣನು ಚೈತ್ರಮಾಸದ ಆರಂಭದಲ್ಲಿ ತಿಂದನು.

ತದ್ರಂಭಾಫಲದಾನೇನ ಕರ್ಕಶಸ್ಯ ತದಾ ಶುಭಾ ।
ಜಾತಾ ಬುದ್ಧಿಃ ಕ್ಷಣಾದೇವ ಸಾತ್ವಿಕೀ ಕ್ರೂರತಾ ಗತಾ ॥ ೯೬ ॥

ಏವಂ ಪಿಶಾಚಾಸ್ಸಕಲಾಸ್ತತಃ ಪರಂ
ಭಿಲ್ಲಾಯ ತಸ್ಮೈ ಶುಭಬುದ್ಧಿರಾಸೀತ್ ।
ಸಮಾಗತಂ ಚಾತ್ರ ಕುತಸ್ಸ ಪೃಷ್ಟವಾನ್
ವಿಪ್ರಂ ಸ ವೈ ಪ್ರಾಹ ವನೇ ಚ ಕರ್ಕಶಂ ॥ ೯೭ ॥

॥ ಶಂಭುರುವಾಚ ॥

ಕಾಂಚೀಪುರ್ಯಾಸ್ಸಮಾಯಾತಂ ಗಮ್ಯತೇಯೋಧ್ಯಕಾಪುರೀ ।
ಚೈತ್ರಮಾಸೇವಗಾಹಾರ್ಥಂ ಸರಯೂನಿರ್ಮಲೇ ಜಲೇ ॥ ೯೮ ॥

ಇತಿ ವಿಪ್ರವಚಶ್ಶ್ರುತ್ವಾ ಪುನಃ ಪಪ್ರಚ್ಛ ಕರ್ಕಶಃ ।
ಕಿಂ ಲಭ್ಯತೇ ಹಿ ಸ್ನಾನೇನ ತನ್ಮೇ ವದ ಸವಿಸ್ತರಂ ॥ ೯೯ ॥

---

೯೬. ಈ ಬಾಳೆಯ ಹಣ್ಣುಗಳನ್ನು ದಾನಮಾಡಿದುದರಿಂದ ಆ ವ್ಯಾಧನಿಗೆ ಆ ಕ್ಷಣದಲ್ಲಿಯೇ ಆ ಕ್ರೂರವಾಗಿದ್ದ ಬುದ್ಧಿಯು ಸಾತ್ವಿಕವಾಗಿ ಪರಿಣಮಿಸಿತು.

೯೭. ಎಲೈ ಪಿಶಾಚಿಗಳಿರಾ! ಅದು ಮೊದಲುಗೊಂಡು ಆ ಭಿಲ್ಲನಬುದ್ಧಿಯು ಶುಭಬುದ್ಧಿಯಾಗಿ ಪರಿಣಮಿಸಿ ಹೋಯಿತು. ಅನಂತರ ಭಿಲ್ಲನು ಆ ಬ್ರಾಹ್ಮಣನನ್ನು ಎಲ್ಲಿಂದ ಬರುತ್ತಿರುವೆ? ಎಂದು ಕೇಳಲು ಅದಕ್ಕೆ ಬ್ರಾಹ್ಮಣನು ಕರ್ಕಶನಿಗೆ ಇಂತೆಂದು ಎಲ್ಲ ವಿಷಯವನ್ನೂ ಹೇಳತೊಡಗಿದನು.

೯೮. ಶಂಭುವು ಹೇಳಿದನು:—ನಾನು ಕಾಂಚೀಪಟ್ಟಣದಿಂದ ಬಂದೆನು. ಅಯೋಧ್ಯಾ ಪಟ್ಟಣಕ್ಕೆ ಹೋಗುತ್ತೇನೆ. ಅಲ್ಲಿರುವ ಸರಯೂ ನದಿಯ ನಿರ್ಮಲವಾದ ನೀರಿನಲ್ಲಿ ಚೈತ್ರಮಾಸದಲ್ಲಿ ಸ್ನಾನಮಾಡಲು ಹೋಗುತ್ತೇನೆ.

೯೯. ಆ ಬ್ರಾಹ್ಮಣನು ಹೀಗೆ ಹೇಳಿದುದನ್ನು ಕೇಳಿ ಕರ್ಕಶನು ಮತ್ತೆ ಇಂತೆಂದು ಕೇಳಿದನು. ಎಲೈ ಬ್ರಾಹ್ಮಣನೇ! ಆ ಸ್ನಾನದಿಂದ ಏನು ಸಿಕ್ಕುತ್ತದೆ ಎಂಬುದನ್ನು ವಿಸ್ತಾರವಾಗಿ ನನಗೆ ಹೇಳು.

ಪುನಃ ಪ್ರಾಹ ಸ ವಿಪ್ರೇಂದ್ರಃ ಕರ್ಕಶಂ ಭಕ್ತಿತಃ ಫಲಂ ।
ಸ್ನಾನೇನ ಮಧುಮಾಸೇ ಹಿ ರಘುನಾಥಃ ಪ್ರಸೀದತಿ ॥ ೧೦೦ ॥

ಪ್ರಸಾದಾತ್ಸಕಲಾನ್ ಭೋಗಾನ್ ಲಭಂತೇ ಮಾನವಾ ಭುವಿ ।
ಅಂತೇ ಮೋಕ್ಷೋಽಪಿ ಭೋ ಭಿಲ್ಲ ಲಭ್ಯತೇ ನಾತ್ರ ಸಂಶಯಃ ॥ ೧೦೧ ॥

ಇತಿ ವಿಪ್ರವಚಶ್ಶ್ರುತ್ವಾ ಪುನಃ ಪಪ್ರಚ್ಛ ಕರ್ಕಶಃ ।
ಮೋಕ್ಷಸ್ವರೂಪಂ ಕಥಯ ಕೃಪಾಂ ಕೃತ್ವಾ ಮಮೋಪರಿ ॥ ೧೦೨ ॥

ತತ್ತಸ್ಯ ವಚನಂ ಶ್ರುತ್ವಾ ಪತ್ನೀಂ ಪ್ರಾಹ ದ್ವಿಜೋತ್ತಮಃ ।
ಪಶ್ಯ ಪಶ್ಯ ವರಾರೋಹೇ ಕೌತುಕಂ ಮಹದದ್ಭುತಂ ॥ ೧೦೩ ॥

---

೧೦೦. ಅನಂತರ ಆ ಬ್ರಾಹ್ಮಣನು ಕರ್ಕಶನನ್ನು ಕುರಿತು ಮತ್ತೆ ಇಂತೆಂದು ಅದರ ಫಲವನ್ನು ಭಕ್ತಿಯಿಂದ ಹೇಳಿದನು. ಎಲೈ ವ್ಯಾಧನೆ ! ಈ ಚೈತ್ರಮಾಸದ ಸ್ನಾನದಿಂದ ಶ್ರೀರಾಮನು ಪ್ರಸನ್ನನಾಗುವನು.

೧೦೧. ಆ ಶ್ರೀರಾಮನ ಪ್ರಸಾದದಿಂದ ಜನರು ಲೋಕದಲ್ಲಿ ಸಕಲಭೋಗಗಳನ್ನೂ ಹೊಂದುತ್ತಾರೆ. ಎಲೈ ಭಿಲ್ಲನೆ! ಮರಣಾನಂತರದಲ್ಲಿ ಮೋಕ್ಷವೂ ಕೂಡ ಸಿಕ್ಕುತ್ತದೆ. ಇದರಲ್ಲಿ ಸಂಶಯವೇ ಇರುವುದಿಲ್ಲ.

೧೦೨. ಆ ಬ್ರಾಹ್ಮಣನು ಹೀಗೆ ಹೇಳಿದುದನ್ನು ಕೇಳಿ ಕರ್ಕಶನು ಮತ್ತೆ ಇಂತೆಂದು ಕೇಳಿದನು. ಎಲೈ ಬ್ರಾಹ್ಮಣನೆ ! ನನ್ನ ಮೇಲೆ ದಯವಿಟ್ಟು ಆ ಮೋಕ್ಷದ ಸ್ವರೂಪವನ್ನು ವಿವರಿಸು.

೧೦೩. ಆ ಕರ್ಕಶನು ಇಂತೆಂದುದನ್ನು ಕೇಳಿ ಬ್ರಾಹ್ಮಣನು ಹೆಂಡತಿಯನ್ನು ಕುರಿತು ಎಲೈ ಮನೋಹರಳೇ ! ಈ ಅದ್ಭುತವನ್ನು ನೋಡು. ಬಹು ಆಶ್ಚರ್ಯವನ್ನುಂಟು ಮಾಡುವುದಾಗಿರುವುದು.

ಯದ್ರಂಭಾಫಲದಾನೇನ ಚೈತ್ರಮಾಸಿ ವರಾನನೇ ।
ಅಯಂ ಕ್ವ ಭಿಲ್ಲಜಾತೀಯಃ ಕ್ವ ಪ್ರಶ್ನಶ್ಚೇದೃಶಶ್ಶುಭಃ　　॥ ೧೦೪ ॥

ಮೋಕ್ಷಸ್ವರೂಪಜ್ಞಾನಾರ್ಥಂ ತಸ್ಮಾದ್ದಾನಂ ಪ್ರಶಸ್ಯತೇ ।
ಇತ್ಯುಕ್ತ್ವಾ ತಾಂ ಪ್ರಿಯಾಂ ವಿಪ್ರಃ ಕರ್ಕಶಂ ಪ್ರಾಹ ಸಾದರಂ ॥ ೧೦೫ ॥

ಸಾಧು ಸಾಧು ಮಹಾವ್ಯಾಧ ಸಮ್ಯಕ್ ಪ್ರಶ್ನಃ ಕೃತಸ್ತ್ವಯಂ ।
ಇದಾನೀಂ ಪ್ರೋಚ್ಯತೇ ಮೋಕ್ಷಸ್ವರೂಪಂ ತನ್ನಿಶಾಮಯ　　॥ ೧೦೬ ॥

ಸ ಮೋಕ್ಷಸ್ತ್ವಂ ಹಿ ಜಾನೀಹಿ ಯತೋ ನಾಸ್ತಿ ಪುನರ್ಭವಃ ।
ಇತಿ ವಿಪ್ರವಚಃ ಶ್ರುತ್ವಾ ಪುನಃ ಪಪ್ರಚ್ಛ ಕರ್ಕಶಃ　　॥ ೧೦೭ ॥

---

೧೦೪. ಎಲೈ ವರಾನನೆಯೆ ! ಚೈತ್ರಮಾಸದಲ್ಲಿ ಬಾಳೆಯ ಹಣ್ಣುಗಳನ್ನು ದಾನ ಮಾಡಿದುದರಿಂದ ಉಂಟಾಗಿರುವ ಈತನ ಬುದ್ಧಿಯನ್ನು ನೋಡು. ಭಿಲ್ಲ ಜಾತಿಯ ದುಷ್ಟುಬುದ್ಧಿಯು ಎಲ್ಲಿ ? ಈತನು ಪ್ರಶ್ನೆಮಾಡುವ ಮೋಕ್ಷದ ಶುಭ ವಿಷಯವೆಲ್ಲಿ ?

೧೦೫. ಆದ್ದರಿಂದಲೇ ದಾನವು ಉತ್ತಮೋತ್ತಮವಾದುದೆಂದು ಹೊಗಳುತ್ತಾರೆ. ಹೀಗೆಂಬುದಾಗಿ ಆ ಬ್ರಾಹ್ಮಣನು ಹೆಂಡತಿಗೆ ಕೇಳಿ ಕರ್ಕಶನನ್ನು ಕುರಿತು ಇಂತೆಂದನು.

೧೦೬. ಎಲೈವ್ಯಾಧನೆ ! ಸಾಧು, ಸಾಧು, ನೀನು ಉತ್ತಮವಾದ ಪ್ರಶ್ನೆಯನ್ನು ಮಾಡಿದೆ. ಈಗ ಮೋಕ್ಷ ಸ್ವರೂಪವನ್ನು ಹೇಳುತ್ತೇನೆ. ಅದರ ಸ್ವರೂಪವನ್ನು-ಕೇಳು.

೧೦೭. ಯಾವ ಜಾಗವನ್ನು ಹೊಂದಿದಮೇಲೆ ಮನುಷ್ಯನಿಗೆ ಮತ್ತೆ ಜನ್ಮವೆತ್ತುವಿಕೆಯಿರುವುದಿಲ್ಲವೋ ಆದನ್ನು ಮೋಕ್ಷವೆಂದು ತಿಳಿ. ಎಂದೆನಲು ಬ್ರಾಹ್ಮಣನ ಈ ಮಾತನ್ನು ಕೇಳಿ ಕರ್ಕಶನು ಮತ್ತೆ ಇಂತೆಂದು ಕೇಳಿದನು.

ತಸ್ಯ ಪ್ರಾಪ್ತಿರ್ಯಥಾ ಸ್ಯಾನ್ಮೇ ತನ್ಮೇ ವದ ದ್ವಿಜೋತ್ತಮ ।
॥ ಶಂಭುರುವಾಚ ॥
ಶೃಣು ಕರ್ಕಶ ತತ್ಪ್ರಾಪ್ತಿರ್ಯಥಾ ಸ್ಯಾತ್ತದ್ವದಾಮಿ ತೇ ॥ ೧೦೮ ॥

ದಾರಪುತ್ರಗೃಹಾದೀನಾಂ ಪ್ರೀತಿಂ ಮುಕ್ತ್ವಾ ಜನಾರ್ದನಂ ।
ದಿವಾರಾತ್ರಂ ಚಿಂತಯಿತ್ವಾ ಸರ್ವದೇಹಸ್ಯ ಚಾಲಕಂ ॥ ೧೦೯ ॥

ಆತ್ಮಾನಂ ಬಹುಪುಣ್ಯೌಘೈರ್ನಿರ್ಮಲೀಕೃತ್ಯ ಮಾನಸಂ ।
ತತ್ಸ್ವರೂಪೇ ಯದಾ ತಿಷ್ಠೇತ್ಸ ಮುಕ್ತೋ ನೇತರೋ ಜನಃ ॥ ೧೧೦ ॥

ಏವಂ ವದತಿ ವಿಪ್ರೇಂದ್ರೇ ವ್ಯಾಧೋ ಮುಕ್ತ್ವಾ ಶರಂ ಧನುಃ ।
ಶಂಭುಪಾದೌ ಜವಾನ್ನತ್ವಾ ತ್ರಾಹಿ ತ್ರಾಹೀತಿ ವೈ ವದ ॥ ೧೧೧ ॥

---

೧೦೮. ಎಲೈ ದ್ವಿಜೋತ್ತಮನೆ ! ಅಂತಹ ಮೋಕ್ಷದ ಪ್ರಾಪ್ತಿಯು ನನಗೆ ಯಾವಾಗ ಉಂಟಾಗುತ್ತದೆ ಎಂಬುದನ್ನು ಹೇಳು.

ಶಂಭುವು ಹೇಳಿದನು. ಎಲೈ ಕರ್ಕಶನೆ! ಆ ಮೋಕ್ಷದ ಪ್ರಾಪ್ತಿಯಾಗುವ ರೀತಿಯನ್ನು ವಿಸ್ತಾರವಾಗಿ ಹೇಳುತ್ತೇನೆ ಕೇಳು.

೧೦೯-೧೧೦. ಮನುಷ್ಯನು ಹೆಂಡತಿ ಮಕ್ಕಳು ಮನೆಗಳ ಮೇಲೆ ಆಸೆಯನ್ನು ಬಿಟ್ಟು ಆ ಸ್ವಾಮಿಯಾದ ಎಲ್ಲಾ ದೇಹಕ್ಕೂ ಚಾಲಕನಾಗಿ ಆತ್ಮ ಸ್ವರೂಪನಾದ ಜನಾರ್ದನನನ್ನು ಹಗಲೂ ರಾತ್ರಿಯೂ ಧ್ಯಾನಿಸುತ್ತಾ ಬಹುವಾದ ಪುಣ್ಯಗಳಿಂದ ಮನಸ್ಸನ್ನು ನಿರ್ಮಲವನ್ನಾಗಿ ಮಾಡಿಕೊಂಡು ಈ ಮನಸ್ಸನ್ನು ಆ ಸ್ವಾಮಿಯ ಸ್ವರೂಪದಲ್ಲಿಯೇ ನಿಲ್ಲುವಂತೆ ಮಾಡಿಕೊಂಡಾಗ ಪ್ರಾಣಿಯು ಮುಕ್ತನಾಗುವನು. ಹಾಗೆ ಮಾಡದವನು ಖಂಡಿತವಾಗಿಯೂ ಮುಕ್ತನಾಗುವುದಿಲ್ಲ.

೧೧೧. ಆ ಬ್ರಾಹ್ಮಣನು ಇಂತೆಂದು ಹೇಳುತ್ತಿರುವಾಗಲೇ ಆ ವ್ಯಾಧನು ಬಿಲ್ಲುಬಾಣಗಳನ್ನು ಬಿಸುಟು ಆ ಬ್ರಾಹ್ಮಣನಾದ ಶಂಭಶರ್ಮನ ಪಾದಗಳಿಗೆ ಬೇಗನೆ ನಮಸ್ಕರಿಸಿ ತ್ರಾಹಿ ತ್ರಾಹಿ, ಕಾಪಾಡು ಕಾಪಾಡು ಎಂಬದಾಗಿ ಹೇಳಿದನು.

ಪ್ರೋವಾಚ ದ್ವಿಜವರ್ಯಂ ಸ ವ್ಯಾಧೋ ಮಾಮುದ್ಧರೇತಿ ಚ ।
ಏತಸ್ಮಿನ್ನಂತರೇ ತತ್ರ ರಾಕ್ಷಸೋ ಘೋರದರ್ಶನಃ ॥ ೧೧೨ ॥

ಪುದ್ರಾವ ದೀರ್ಘಶಬ್ದೇನ ಯತ್ರಾಸಂಸ್ತೇ ತ್ರಯೋ ವನೇ ।
ಆಯಾಂತಂ ರಾಕ್ಷಸಂ ದೃಷ್ಟ್ವಾ ಚಕ್ರುಸ್ತೇ ತು ಪಲಾಯನಂ ॥ ೧೧೩ ॥

ತಾವಜ್ಜವೇನ ತಾನ್ ಧರ್ತುಂ ನಿಕಟಂ ರಾಕ್ಷಸೋ ಯಯೌ ।
ತಂ ದೃಷ್ಟ್ವಾ ನಿಕಟಂ ಶಂಭುಸ್ತುಂಬಿಕಾಂ ಸಜಲಾಂ ನಿಜಾಂ ॥ ೧೧೪ ॥

ಕೃತ್ವೋಚ್ಚಾಂ ಪ್ರಾಕ್ಷಿಪತ್ತಸ್ಮಿನ್ ರಾಮಚಂದ್ರಂ ಸ್ಮರನ್ ಮುಖೇ ।
ಮಂತ್ರಿತಂ ರಾಮನಾಮ್ನಾ ಚ ಯತ್ತೋಯಂ ಮಧುಮಾಸಿ ವೈ ॥ ೧೧೫ ॥

---

೧೧೨. ಮತ್ತು ಆ ಬ್ರಾಹ್ಮಣನನ್ನು ಕುರಿತು ನನ್ನನ್ನು ಉದ್ಧಾರಮಾಡಬೇಕೆಂದೂ ಕೇಳಿಕೊಂಡನು. ಇಷ್ಟರಲ್ಲಿ ಅಲ್ಲಿಗೊಬ್ಬ ಘೋರಸ್ವರೂಪಿಯಾದ ರಾಕ್ಷಸನು ಓಡಿಬಂದನು.

೧೧೩. ಆ ರಾಕ್ಷಸನು ಘೋರವಾಗಿ ಗರ್ಜಿಸುತ್ತ ಶಂಭು ಶರ್ಮನೂ ಆತನ ಹೆಂಡತಿಯೂ ವ್ಯಾಧನೂ ಇದ್ದಲ್ಲಿಗೆ ಬರುತ್ತಿದ್ದನು. ಆ ರಾಕ್ಷಸನು ಬರುತ್ತಿರುವುದನ್ನು ನೋಡಿ ಅವರು ಮೂವರೂ ಓಡಿಹೋದರು.

೧೧೪–೧೧೫. ಅವರು ಓಡಿಹೋಗುವಷ್ಟರಲ್ಲಿಯೇ ಅವರನ್ನು ಹಿಡಿಯಲು ಆ ರಾಕ್ಷಸನು ಬೇಗನೆ ಓಡಿದನು. ಆ ರೀತಿಯಲ್ಲಿ ಓಡಿ ಬರುತ್ತಿರುವ ಅವನನ್ನು ಶಂಭುವು ನೋಡಿ ನೀರು ತುಂಬಿರುವ ಆ ಗಿಂಡಿಯನ್ನು ಮೇಲಕ್ಕೆತ್ತಿ ಬಾಯಲ್ಲಿ ರಾಮಚಂದ್ರನ ಹೆಸರನ್ನು ಹೇಳುತ್ತ ಅವನ ಮೇಲೆ ಎಸೆದನು. ಆ ರಾಮನ ಹೆಸರನ್ನು ಹೇಳಿದುದರಿಂದ ಚೈತ್ರಮಾಸದಲ್ಲಿ ಆ ನೀರು ಮಂತ್ರಿಸಿದಂತಾಗಿ ಆ ರಾಕ್ಷಸನ ಮೇಲೆ ಬಿದ್ದಿತು.

ತತ್ಸೇಕಾತ್ತತ್ರ ಶ್ರಕ್ಷಸಸ್ಯಾಪಿ ಜಾತಾಪೂರ್ವಭವಸ್ಮೃತಿಃ ।
ತತಸ್ಸ ರಾಕ್ಷಸೋ ದೂರಂ ಸ್ಥಿತ್ವಾ ಶಂಭುಂ ವ್ಯಜಿಜ್ಞಪತ್ ॥ ೧೧೬ ॥

ಮಾಮುದ್ಧರ ಮುನಿಶ್ರೇಷ್ಠ ಘೋರಾತ್ರಾಕ್ಷಸದೇಹತಃ ।
ಶರಣಂ ತೇ ಗತೋಽಸ್ಮ್ಯದ್ಯ ಜಾತಾ ಪೂರ್ವಸ್ಮೃತಿರ್ಮಮ ॥ ೧೧೭ ॥

ಇತಿ ತತ್ಕೌತುಕಂ ದೃಷ್ಟ್ವಾ ರಾಕ್ಷಸಂ ಪ್ರಾಹ ಸ ದ್ವಿಜಃ ।
ಕಸ್ಮಾತ್ತೇ ರಾಕ್ಷಸತ್ವಂ ಹಿ ಜಾತಂ ತತ್ತ್ವಂ ವದಾಧುನಾ ॥ ೧೧೮ ॥

ರಾಕ್ಷಸಃ ಪ್ರಾಹ ವೇಗೇನ ಶಂಭುಂ ವೃತ್ತಂ ನಿಜಂ ತದಾ ।
ಜನಸ್ಥಾನೇ ಪುರಾ ಚಾಹಂ ವಿಪ್ರಃ ಕರ್ಮಪರಾಙ್ಮುಖಃ ॥ ೧೧೯ ॥

---

೧೧೬. ಆ ನೀರು ಆ ರಾಕ್ಷಸನ ಮೇಲೆ ಬಿದ್ದೊಡನೆಯೇ ಆವನಿಗೆ ಹಿಂದಿನ ಜನ್ಮದ ಜ್ಞಾನ ಉಂಟಾಯಿತು. ಒಡನೆಯೇ ಆ ರಾಕ್ಷಸನು ದೂರದಲ್ಲಿಯೇ ನಿಂತುಕೊಂಡು ಆ ಶಂಭುಶರ್ಮನನ್ನು ಇಂತೆಂದು ವಿಜ್ಞಾಪಿಸಿಕೊಂಡನು.

೧೧೭. ಎಲೈ ಮುನಿಶ್ರೇಷ್ಠನೇ ! ನೀನು ಈ ನನ್ನ ಘೋರವಾದ ರಾಕ್ಷಸ ಜನ್ಮದಿಂದ ನನ್ನನ್ನು ಬಿಡುಗಡೆ ಮಾಡು. ನಿನ್ನನ್ನು ಮರೆಹೊಕ್ಕಿದ್ದೇನೆ. ಈಗ ನನಗೆ ಪೂರ್ವಜನ್ಮದ ಜ್ಞಾನವು ಬಂದಿರುವುದು.

೧೧೮. ಆ ಬ್ರಾಹ್ಮಣನು ಈ ಆಶ್ಚರ್ಯವನ್ನು ನೋಡಿ ಆ ರಾಕ್ಷಸನನ್ನು ಕುರಿತು ಎಲೈ ರಾಕ್ಷಸನೇ ! ನಿನಗೆ ಈ ರಾಕ್ಷಸ ಜನ್ಮವು ಬರಲು ಕಾರಣವೇನು ? ಹೇಳು ಎಂಬುದಾಗಿ ಕೇಳಿದನು.

೧೧೯. ಆಗ ರಾಕ್ಷಸನು ಶಂಭುಶರ್ಮನನ್ನು ಕುರಿತು ತನ್ನ ನಿಜ ವೃತ್ತಾಂತವನ್ನು ಇಂತೆಂದು ಹೇಳತೊಡಗಿದನು. ಎಲೈ ಬ್ರಾಹ್ಮಣನೇ ! ನಾನು ಪೂರ್ವದಲ್ಲಿ ಜನಸ್ಥಾನ ನಿವಾಸಿಯಾದ ಬ್ರಾಹ್ಮಣನು. ಬ್ರಾಹ್ಮಣ ಕರ್ಮವನ್ನು ಮಾಡದೆ ಅದರಲ್ಲಿ ಪರಾಙ್ಮುಖನಾಗಿದ್ದೆನು.

ಪ್ರತಿಗ್ರಹಪರಃ ಪಾಪೀ ದುರ್ಮಾರ್ಗವ್ಯಸನೀ ಸದಾ ।
ಏತಸ್ಮಿನ್ನಂತರೇ ಚೈತ್ರೇ ಮಮ ಭಾರ್ಯಾ ಸತೀ ಶುಭಾ ॥ ೧೨೦ ॥

ಸ್ನಾನಾರ್ಥಂ ರಾಮತೀರ್ಥಂ ಸಾ ಮಾಮಪೃಷ್ಟ್ವಾ ಗೃಹಾದ್ಯಯೌ ।
ಸಾ ಮಾರ್ಗೇ ಚ ಮಯಾ ದೃಷ್ಟಾ ಧೃತ್ವಾಮಾರ್ಗೇ ಚ ತಾಂ ಶುಭಾಂ ॥

ಪ್ರೋಕ್ತಾ ಕ್ರೋಧಾನ್ಮಯಾ ರಂಡೇ ಮಾಮಪೃಷ್ಟ್ವಾ ಕ್ವ ಯಾಸ್ಯಸಿ ।
ಸಾ ಪ್ರಾಹ ಭಯಭೀತಾ ತು ರಾಮತೀರ್ಥಂ ಪ್ರಗಮ್ಯತೇ ॥ ೧೨೨ ॥

ಮಧುಮಾಸೇವಗಾಹಾರ್ಥಂ ನ ಮಯಾ ದುಷ್ಕೃತಂ ಕೃತಂ ।
ಏವಂ ಶ್ರುತ್ವಾಪಿ ತದ್ವಾಕ್ಯಂ ತಾಡಿತಾ ಸಾ ಮಯಾ ಬಲಾತ್ ॥ ೧೨೩ ॥

---

೧೨೦. ಯಾವಾಗಲೂ ದಾನವನ್ನು ತೆಗೆದುಕೊಳ್ಳುತ್ತಿದ್ದೆನು. ಪಾಪ ಕರ್ಮವನ್ನು ಮಾಡುತ್ತಲಿದ್ದೆನು. ಯಾವಾಗಲೂ ಕೆಟ್ಟದಾರಿಯನ್ನೇ ಹುಡುಕಿದ್ದೆನು. ಈ ಮಧ್ಯದಲ್ಲಿ ಚೈತ್ರಮಾಸ ಬಂದಿತು.

೧೨೧. ಆಗ ಪತಿವ್ರತೆಯೂ, ಮಂಗಳಕರಳೂ ಆದ ನನ್ನ ಹೆಂಡತಿಯು, ನನ್ನನ್ನು ಕೇಳದೆ ಚೈತ್ರಮಾಸದಲ್ಲಿ ರಾಮತೀರ್ಥದಲ್ಲಿ ಸ್ನಾನಮಾಡಲು ಹೋದಳು. ಅವಳು ದಾರಿಯಲ್ಲಿ ಹೋಗುತ್ತಿರುವಾಗ ನಾನು ಕಂಡು ಆಕೆಯನ್ನು ಹಿಡಿದು ಕೊಂಡೆನು.

೧೨೨-೧೨೩. ಆಗ ನಾನು ಎಲೈ ರಂಡೆಯೇ ! ನನ್ನನ್ನು ಕೇಳದೆ ಎಲ್ಲಿಗೆ ಹೋಗುತ್ತಿದ್ದೀಯೆ ? ಎಂದು ಕೋಪದಿಂದ ಕೇಳಿದೆನು. ಆಗ ಆಕೆಯು ಬಹು ವಾಗಿ ಹೆದರಿಕೊಂಡು ನಡಗುತ್ತಾ ಈಗ ಚೈತ್ರಮಾಸವು ಬಂದಿರುವುದು. ರಾಮ ತೀರ್ಥಕ್ಕೆ ಸ್ನಾನಕ್ಕೆ ಹೋಗುತ್ತಿರುವೆನು. ನಾನು ಮತ್ತೇನೂ ಕೆಟ್ಟಕೆಲಸವನ್ನು ಮಾಡಲಿಲ್ಲ ಎಂಬುದಾಗಿ ಹೇಳುತ್ತಿದ್ದರೂ ನಾನು ಬಲಾತ್ಕಾರದಿಂದ ಹೊಡೆದೆನು.

ಪ್ರೇಷಿತಾ ಸ್ವಗೃಹಂ ಮಾರ್ಗಾತ್ತತಃ ಕಾಲಾಂತರೇ ಗತೇ ।
ಮೃತೋಽಹಂ ಚ ತದಾ ನೀತೋ ಯಮಲೋಕಂ ಯಮಾನುಗೈಃ ॥

ಚಿತ್ರಗುಪ್ತೋಽಪಿ ದೃಷ್ಟ್ವಾ ಮಾಂ ಧಿಕ್ಕೃತ್ವಾಪಿ ಪುನಃ ಪುನಃ ।
ಯಮರಾಜಂ ಸ ವೈ ಪ್ರಾಹ ಧರ್ಷಯನ್ಮಾಂ ಸ್ವಗರ್ಜಿತೈಃ ॥ ೧೨೫ ॥

ಭೋ ಧರ್ಮರಾಜ ಪಾಪೋಽಯಂ ಚೈತ್ರಸ್ನಾನನಿವಾರಕಃ ।
ಭುಕ್ತ್ವಾದೌ ರಾಕ್ಷಸೀಂ ಯೋನಿಂ ನಿರಯಾನ್ ಭೋಕ್ತುಮರ್ಹತಿ ॥೧೨೬॥

ಇತಿ ತದ್ವಚನಂ ಶ್ರುತ್ವಾ ಯಮಃ ಪ್ರಾಹಾನುಗಾಂಸ್ತದಾ ।
ಭೋ ಭಟಾ ರಾಕ್ಷಸೀಯೋನಿರ್ದೀಯತಾಂ ನಿರ್ಜನೇ ವನೇ ॥ ೧೨೭ ॥

ಪಾಪಿನೇಽಸ್ಮೈ ಚ ಮದ್ವಾಕ್ಯಾತ್ತತಸ್ತೈಶ್ಚ ಯಮಾನುಗೈಃ ।
ದತ್ತ್ವಾ ಮೇ ರಾಕ್ಷಸೀಂ ಯೋನಿಂ ತ್ಯಕ್ತ್ವಾ ಚಾತ್ರ ಗತಾ ಯಮಂ ॥೧೨೮॥

---

೧೨೪. ಬಲಾತ್ಕಾರದಿಂದ ಹಿಂದಿರುಗಿಸಿ ಮನೆಗೆ ಕಳುಹಿಸಿದನು. ಇಂತು ಕೆಲವು ದಿನಗಳು ಕಳೆದವು. ಅನಂತರ ನಾನು ಸತ್ತುಹೋದೆನು. ಯಮ ಕಿಂಕರರು ನನ್ನನ್ನು ಯಮನ ಬಳಿಗೆ ಕರೆದುಕೊಂಡು ಹೋದರು.

೧೨೫. ಅಲ್ಲಿ ಚಿತ್ರಗುಪ್ತನು ನನ್ನನ್ನು ಬಹುವಾಗಿ ಧಿಕ್ಕಾರ ಮಾಡಿದನು ಮತ್ತು ನನ್ನನ್ನು ಗದ್ದರಿಸಿ ಬಯ್ಯುತ್ತಲೇ ಆತನು ಯಮರಾಜನನ್ನು ಕುರಿತು ಇಂತೆಂದು ಹೇಳಿದನು.

೧೨೬. ಎಲೈ ಧರ್ಮರಾಜನೇ ! ಇವನು ಪಾಪಿಯು, ಚೈತ್ರ ಸ್ನಾನವನ್ನು ಮಾಡದಂತೆ ತಡೆದವನು. ಇವನು ಮೊದಲು ರಾಕ್ಷಸ ಜನ್ಮದಲ್ಲಿ ಹುಟ್ಟಿ ಅದನ್ನು ಅನುಭವಿಸಿ ಅನಂತರ ಅನೇಕವಾದ ನರಕಗಳನ್ನು ಅನುಭವಿಸಬೇಕು.

೧೨೭. ಎಂಬುದಾಗಿ ಚಿತ್ರಗುಪ್ತನು ಹೇಳಿದ ಮಾತನ್ನು ಧರ್ಮರಾಜನು ಕೇಳಿ ತನ್ನ ಭಟರಿಗೆ ಎಲೈ ಭಟರಿರಾ ! ಇವನಿಗೆ ನಿರ್ಜನವಾದ ಕಾಡಿನಲ್ಲಿ ರಾಕ್ಷಸ ಜನ್ಮವನ್ನು ಕೊಡಿರಿ. ಇವನು ಪಾಪಿಯು ಎಂದು ಅಪ್ಪಣೆ ಮಾಡಿದನು.

೧೨೮. ಅನಂತರ ಯಮನ ಭಟರು ನನ್ನನ್ನು ಕಾಡಿಗೆ ಕರೆದುಕೊಂಡು ಬಂದು ಇಲ್ಲಿ ನನಗೆ ರಾಕ್ಷಸ ಜನ್ಮವನ್ನು ಕೊಟ್ಟು ಬಿಟ್ಟು ಬಿಟ್ಟು ಹೊರಟು ಹೋದರು.

ತದಾರಭ್ಯ ವನೇ ಚಾಹಂ ಕ್ಷುತ್ತೃಷಾ ಪರಿಪೀಡಿತಃ ।
ಪಂಚತ್ರಿಂಶತ್ಸಹಸ್ರಾಣಿ ವರ್ಷಾಣ್ಯತ್ರ ಸ್ಥಿತಶ್ಚಿರಂ ॥ ೧೨೯ ॥

ಕಿಂ ಮಯಾ ಸುಕೃತಂ ಪೂರ್ವಂ ಕೃತಂ ಯಸ್ಮಾದ್ವನೇ ತವ ।
ಸಂಗತಿಶ್ಚಾದ್ಯ ವೈ ಜಾತಾ ಸಾಧುಸಂಗೋ ಗತಿಪ್ರದಃ ॥ ೧೩೦ ॥

ಇತಿ ತದ್ವಚನಂ ಶ್ರುತ್ವಾ ಶಂಭುರ್ಧ್ಯಾತ್ವಾ ಕ್ಷಣಂ ಹೃದಿ ।
ಜ್ಞಾತ್ವಾ ತತ್ಸುಕೃತಂ ಪೂರ್ವಂ ರಾಕ್ಷಸಾಯ ನ್ಯವೇದಯೇತ್ ॥ ೧೩೧ ॥

ಶ್ರುಣು ರಾಕ್ಷಸ ಯತ್ಪೂರ್ವಂ ಕೃತಂ ವೈ ಸುಕೃತಂ ತ್ವಯಾ ।
ಯಸ್ಮಾಜ್ಜಾತಾ ಸಂಗತಿರ್ನೌ ವನೇ ನಿರ್ಮಾನುಷೇ ಶುಭಾ ॥ ೧೩೨ ॥

ಏಕಾದಶ್ಯಾಂ ಚೈತ್ರಶುಕ್ಲೇ ಕೃತ್ವಾನ್ಯಶ್ರಾದ್ಧಭೋಜನಂ ।
ತಾಂಬೂಲೋ ದಕ್ಷಿಣಾಯುಕ್ತಃ ಕಟ್ಯಾಂ ವಸ್ತ್ರೇ ತ್ವಯಾಧೃತಃ ॥ ೧೩೩ ॥

---

೧೨೯. ಅಂದಿನಿಂದ ಮೊದಲುಗೊಂಡು ನಾನು ಹಸಿವು ಬಾಯಾರಿಕೆಗಳಿಂದ ಪೀಡಿತನಾಗಿ ಮೂವತ್ತೈದು ಸಾವಿರ ವರ್ಷಗಳಿಂದಲೂ ಇಂತೆಯೇ ಅಲೆದಾಡುತ್ತಿರುವೆನು. ಬಹುಕಾಲಗಳಾದುವು.

೧೩೦. ನಾನು ಪೂರ್ವದಲ್ಲಿ ಯಾವುದೋ ಪುಣ್ಯವನ್ನು ಮಾಡಿರುವೆನ್ನು ಅದರಿಂದಲೇ ಈ ಕಾಡಿನಲ್ಲಿಯೂ ಕೂಡ ನಿನ್ನ ಸಹವಾಸವು ಉತ್ತಮ ಗತಿಯನು. ಕೊಡುತ್ತಿದೆ.

೧೩೧. ಆ ರಾಕ್ಷಸನು ಹೀಗೆ ಹೇಳಿದುದನ್ನು ಕೇಳಿ ಶಂಭುಶರ್ಮನು ಕ್ಷಣಕಾಲ ಧ್ಯಾನದಿಂದ ಯೋಚಿಸಿ ಆ ರಾಕ್ಷಸನು ಮಾಡಿರುವ ಪುಣ್ಯ ಕೆಲಸವನ್ನು ತಿಳಿದು ಅವನಿಗೆ ಇಂತೆಂದು ಅದನ್ನು ಹೇಳಿದನು.

೧೩೨. ಎಲೈ ರಾಕ್ಷಸನೇ ! ನೀನು ಪೂರ್ವದಲ್ಲಿ ಮಾಡಿದ ಸುಕೃತವನ್ನು ಕೇಳು. ನೀನು ನನ್ನ ಸಹವಾಸ ಹೊಂದುವುದಕ್ಕೆ ಆ ಪುಣ್ಯವೇ ಕಾರಣವಾಗಿರುವುದು. ನಿಶ್ಚಯವು.

೧೩೩. ನೀನು ಒಂದು ಸಾರಿ ಚೈತ್ರ ಶುಕ್ಲ ಏಕಾದಶಿಯ ದಿವಸ ಬೇರೊಬ್ಬರ ಮನೆಯಲ್ಲಿ ಶ್ರಾದ್ಧದ ಊಟವನ್ನು ಮಾಡಿ ದಕ್ಷಿಣೆ ತಾಂಬೂಲಗಳನ್ನು ಒಟ್ಟಿಗೆ ಸೇರಿಸಿ ಸೊಂಟದಲ್ಲಿ ಸಿಕ್ಕಿಸಿಕೊಂಡೆ.

ದ್ವಾದಶ್ಯಾಂ ಪ್ರಾತರುತ್ಥಾಯ ಗತ್ವಾ ಸ್ನಾನಂ ತ್ವಯಾ ಕೃತಂ ।
ಪತಿತಸ್ಸ ಹಿ ತಾಂಬೂಲೋ ವಿಸ್ಮೃತ್ಯಾಗೌತಮೀತಟೇ ॥ ೧೩೪ ॥

ದಕ್ಷಿಣಾ ಸಹಿತೋ ದೃಷ್ಟಸ್ಸಕೇನಾಪಿ ದ್ವಿಜೇನ ವೈ ।
ಗೃಹೀತಸ್ಸ ಹಿ ದ್ವಾದಶ್ಯಾಂ ನ ಜ್ಞಾತಶ್ಚ ತ್ವಯಾ ಪುನಃ ॥ ೧೩೫ ॥

ತಾಂಬೂಲದಾನಾದ್ವರಚೈತ್ರಮಾಸೇ
ಜಾತಾವನೇ ಮೇದ್ಯಹಿ ಸಂಗತಿಸ್ತೇ ।
ತಸ್ಮಾನ್ಮಧೌ ರಾಕ್ಷಸ ಮಾನವೈರ್ಹಿ
ತಾಂಬೂಲದಾನಂ ಕರಣೀಯಮೇತತ್ ॥ ೧೩೬ ॥

ಇತ್ಯುಕ್ತ್ವಾ ರಾಕ್ಷಸಂ ಶಂಭುಶ್ಚೈತ್ರಮಾಹಾತ್ಮ್ಯಮುತ್ತಮಂ ।
ಉಭಾಭ್ಯಾಂ ಶ್ರಾವಯಿತ್ವಾಥ ಕರ್ಕಶಂ ವಾಕ್ಯಮಬ್ರವೀತ್ ॥ ೧೩೭ ॥

---

೧೩೪. ದ್ವಾದಶಿಯ ದಿವಸ ಬೆಳಗ್ಗೆ ಎದ್ದು ಹೋಗಿ ನೀನು ಗೌತಮಿಯಲ್ಲಿ ಸ್ನಾನವನ್ನು ಮಾಡಿದೆ. ಆ ದಕ್ಷಿಣೆ ತಾಂಬೂಲಗಳನ್ನು ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದುದನ್ನು ಮರೆತು ಬಿಟ್ಟೆ, ಆ ದಕ್ಷಿಣೆ ತಾಂಬೂಲಗಳು ಬಿದ್ದುಹೋದುವು.

೧೩೫. ದಕ್ಷಿಣೆಯೊಡನೆ ಕೂಡಿರುವ ಆ ತಾಂಬೂಲವನ್ನು ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ಬ್ರಾಹ್ಮಣನು ನೋಡಿ ಅದನ್ನು ಆ ದ್ವಾದಶಿಯ ದಿವಸ ತೆಗೆದುಕೊಂಡನು. ಅದು ನಿನಗೆ ಜ್ಞಾಪಕಕ್ಕೆ ಬರಲೇ ಇಲ್ಲ.

೧೩೬. ಆ ಚೈತ್ರಶುದ್ಧದ್ವಾದಶಿಯ ದಿವಸ ತಾಂಬೂಲ ದಾನವನ್ನು ಮಾಡಿದುದರಿಂದ ಇಲ್ಲಿ ನನ್ನ ಸಹವಾಸವುಂಟಾಯಿತು. ಎಲೈ ರಾಕ್ಷಸನೇ ! ಆದ್ದರಿಂದ ವಸಂತ ಋತುವಿನ ಚೈತ್ರಮಾಸದಲ್ಲಿ ಮಾನವರು ತಾಂಬೂಲ ದಾನವನ್ನು ಮಾಡಬೇಕು.

೧೩೭. ಶಂಭುಶರ್ಮನು ರಾಕ್ಷಸನಿಗೆ ಇಂತೆಂದು ಹೇಳಿ ಚೈತ್ರಮಾಸದ ಮಹಿಮೆಯನ್ನು ವರ್ಣಿಸಿದನು. ಅದನ್ನೇ ಆ ಕರ್ಕಶಭಿಲ್ಲನಿಗೂ ಹೇಳಿ ಕರ್ಕಶನನ್ನು ಕುರಿತು ಮತ್ತೆ ಇಂತೆಂದನು.

ಭೋಃ ಕರ್ಕಶ ಮಹಾಬುದ್ಧೇ ಶೃಣುಷ್ವ ವಚನಂ ಮಮ।
ಆಗಚ್ಛ ತ್ವಂ ಸಹೈವಾದ್ಯ ಮಯಾಯೋಧ್ಯಾಪುರೀಂ ಪ್ರತಿ ॥ ೧೪೮ ॥

ಸರಯೂಸ್ನಾನಮಾತ್ರೇಣ ಮಧೌ ಪಾಪಾದ್ವಿಮೋಕ್ಷ್ಯಸೇ ।
ಇತ್ಯುಕ್ತ್ವಾ ಕರ್ಕಶಂ ಶಂಭುಸ್ತತಃ ಪ್ರೋವಾಚ ರಾಕ್ಷಸಂ ॥ ೧೪೯ ॥

ಭೋಃ ರಾಕ್ಷಸ ತ್ವಮತ್ರೈವ ಮಾಸಮಾತ್ರಂ ಸ್ಥಿರೋ ಭವ ।
ಅಯೋಧ್ಯಾಯಾಂ ಪ್ರವೇಶಶ್ಚ ರಾಕ್ಷಸಾನಾಂ ನ ವಿದ್ಯತೇ ॥ ೧೫೦ ॥

ಅಥೋಽಹಂ ಮಧುಮಾಸೇ ಹಿ ಸ್ನಾತ್ವಾನೇನ ಪಥಾ ಪುನಃ।
ಯದಾಗಚ್ಛಾಮಿ ಕಾಂಚೀಂ ತ್ವಾಂ ಚೋದ್ಧರಿಷ್ಯಾಮ್ಯಹಂ ತದಾ ॥ ೧೫೧ ॥

ಮಾ ಸಂದೇಹೋಽಸ್ತು ತೇ ಚಿತ್ತೇ ಶಪಥೇನ ಬ್ರವೀಮ್ಯಹಂ ।
ಯತ್ಪಾಪಂ ಬ್ರಹ್ಮಹತ್ಯಾಯಾಸ್ತಥಾ ಗೋಯತಿನಿಂದನಾತ್ ॥ ೧೫೨ ॥

---

೧೪೮. ಮಹಾ ಬುದ್ಧಿಯುಳ್ಳ ಎಲೈ ಕರ್ಕಶನೇ! ನನ್ನ ಮಾತನ್ನು ಕೇಳು. ನೀನು ನನ್ನೊಡನೆಯೇ ಬಾ. ನಾನು ಅಯೋಧ್ಯೆಗೆ ಹೋಗುತ್ತೇನೆ. ಅಲ್ಲಿಗೂ ಬಾ.

೧೪೯. ಆ ಅಯೋಧ್ಯೆಯಲ್ಲಿ ಸರಯೂ ನದಿಯಲ್ಲಿ ಚೈತ್ರಮಾಸದಲ್ಲಿ ಸ್ನಾನ ಮಾಡಿದ ಮಾತ್ರದಿಂದಲೇ ನಿನ್ನ ಪಾಪವೆಲ್ಲವೂ ಹೋಗುತ್ತವೆ ಎಂದು ಶಂಭು ಶರ್ಮನು ಕರ್ಕಶನಿಗೆ ಹೇಳಿ ರಾಕ್ಷಸನನ್ನು ಕುರಿತು ಇಂತೆಂದನು.

೧೫೦. ಎಲೈ ರಾಕ್ಷಸನೇ! ನೀನು ಒಂದು ತಿಂಗಳವರೆಗೂ ಇಲ್ಲಿಯೇ ಇದ್ದುಕೊಂಡಿರು. ರಾಕ್ಷಸರಿಗೆ ಅಯೋಧ್ಯೆಯಲ್ಲಿ ಪ್ರವೇಶವಿಲ್ಲವು.

೧೫೧. ನಾನು ಆ ಚೈತ್ರಮಾಸದಲ್ಲಿ ಅಯೋಧ್ಯೆಯ ಸರಯೂ ನದಿಯಲ್ಲಿ ಸ್ನಾನಮಾಡಿಕೊಂಡು ಮತ್ತೆ ಇದೇ ದಾರಿಯಲ್ಲಿ ನನ್ನ ಊರಾದ ಕಾಂಚಿಗೆ ಹೋಗಲು ಬರುತ್ತೇನೆ. ಆಗ ನಿನ್ನನ್ನು ಆ ರಾಕ್ಷಸ ಜನ್ಮದಿಂದ ಉದ್ಧಾರ ಮಾಡುತ್ತೇನೆ.

೧೫೨-೧೫೩. ನೀನು ಮನಸ್ಸಿನಲ್ಲಿ ಸಂದೇಹವನ್ನು ಹೊಂದಬೇಡ. ನಾನು ಆಣೆಯಿಟ್ಟು ಹೇಳುತ್ತೇನೆ. ಬ್ರಹ್ಮಹತ್ಯೆಯನ್ನು ಮಾಡಿದರೆ ಯಾವ ಪಾಪವು

ನೋದ್ಧೃತ್ಯ ತ್ವಾಂ ಹಿ ಗಚ್ಛಾಮಿ ತರ್ಹಿ ತನ್ಮಯಿ ತಿಷ್ಠತು ।
ಮದ್ಯಪಾನೇ ಚ ಯತ್ಪಾಪಂ ಹೇಮಸ್ತೇಯಾದಿಕಂ ಚ ಯತ್ ॥ ೧೪೩ ॥

ನೋದ್ಧೃತ್ಯ ತ್ವಾಂ ಹಿ ಗಚ್ಛಾಮಿ ತರ್ಹಿ ತನ್ಮಯಿ ತಿಷ್ಠತು ।
ಯತ್ಪಾಪಂ ಭ್ರೂಣಹತ್ಯಾಯಾಸ್ತಥಾ ಚೈತ್ರೇ ಹ್ಯಮಜ್ಜನಾತ್ ॥ ೧೪೪ ॥

ನೋದ್ಧೃತ್ಯ ತ್ವಾಂ ಹಿ ಗಚ್ಛಾಮಿ ತರ್ಹಿ ತನ್ಮಯಿ ತಿಷ್ಠತು ।
ಇತ್ಯಾತಿಶಪಥೈಸ್ತರ್ಹಿ ರಾಕ್ಷಸಂ ಹರ್ಷಯನ್ ದ್ವಿಜಃ ॥ ೧೪೫ ॥

ಯಾವತ್ಪಶ್ಯತಿ ಸರ್ವತ್ರ ತಾವಜ್ಜಾತಂ ಹಿ ಕೌತುಕಂ ।
ವ್ಯಾಧಾಯ ಚೈತ್ರಮಾಸಸ್ಯ ಮಹಾತ್ಮ್ಯಸ್ಯೋಪದೇಶನಾತ್ ॥ ೧೪೬ ॥

ತರವಃ ಫಲಿನೋ ಜಾತಾಃ ಪರಿತೋ ದಶಯೋಜನಂ ।
ಪತ್ರೈಃ ಪುಷ್ಪೈರ್ನವಾಶ್ಚ ಸೌಗಂಧಃ ಪವನೋ ವವೌ ॥ ೧೪೭ ॥

ಬರುವುದೋ ಅಂತೆಯೇ ಗೋವನ್ನೂ, ಯತಿಯನ್ನೂ ಸಿಂದೆ ಮಾಡಿದರೆ ಯಾವ ಪಾಪವು ಬರುವುದೋ ಆ ಪಾಪವು ನಿನ್ನನ್ನು ನಾನು ಉದ್ಧರಿಸದೆ ಹೋದರೆ ನನಗೆ ಬರಲಿ. ಭ್ರೂಣಹತ್ಯೆಯನ್ನು ಮಾಡಿದರೆ ಯಾವ ಪಾಪವು ಬರುವುದೋ ಅಂತೆಯೇ ಚೈತ್ರಮಾಸದಲ್ಲಿ ಸ್ನಾನ ಮಾಡದಿದ್ದರೆ ಯಾವ ಪಾಪವು ಬರುವುದೋ ಆ ಪಾಪವು ನಿನ್ನನ್ನು ನಾನು ಉದ್ಧರಿಸದೆ ಹೋದರೆ ಬರಲಿ. ಇವೇ ಮುಂತಾದ ಶಪಥಗಳಿಂದ ಆ ರಾಕ್ಷಸನಿಗೆ ನಂಬುಗೆಯನ್ನುಂಟುಮಾಡುತ್ತ ಸಂತೋಷ ಪಡಿಸಿದನು.

೧೪೬. ವ್ಯಾಧನಿಗೆ ಶಂಭುಶರ್ಮನು ಈ ಚೈತ್ರ ಮಹಾತ್ಮೆಯನ್ನು ಉಪದೇಶ ಮಾಡುತ್ತಿದ್ದುದರಿಂದ ಆ ಕಾಲದಲ್ಲಿ ಸುತ್ತಲೂ ನೋಡಲು ಬಹುವಾದ ಆಶ್ಚರ್ಯವು ಕಂಡುಬಂದಿತು.

೧೪೭. ಹತ್ತುಯೋಜನಗಳ ಸುತ್ತಳತೆಯಲ್ಲಿರುವ ಹಣ್ಣು ಬಿಡದಿದ್ದ ಮರ ಗಿಡಗಳು ಹಣ್ಣುಗಳನ್ನು ಬಿಟ್ಟುವು. ಆ ಮರಗಳು ಹಣ್ಣುಗಳಿಂದಲೂ, ಹೂವು ಗಳಿಂದಲೂ, ಕೂಡಿ ಅವುಗಳ ಭಾರದಿಂದ ಬಗ್ಗಿದ್ದುವು ಸುವಾಸನೆಯಾಗಿ ಗಾಳಿ ಬೀಸಲು ಮೊದಲಿಟ್ಟಿತು.

ನದ್ಯಸ್ತೋಯಯುತಾಹಂತ್ಯಶ್ಚ ನನೃತುರ್ಬರ್ಹಿಣೋ ವನೇ ।
ತದ್ದೃಷ್ಟ್ವಾ ಕರ್ಕಶಶ್ಚಾಪಿ ಚೈತ್ರಮಾಹಾತ್ಮ್ಯಕೀರ್ತನಾತ್ ॥ ೧೪೮ ॥

ದುರ್ವನಂ ಸುವನಂ ಜಾತಂ ಚೈತ್ರಶ್ರೈಷ್ಠ್ಯಮಮನ್ಯತ ।
ತತಸ್ತೇ ಹಿ ತ್ರಯಸ್ತಸ್ಮಾದ್ವನಾನ್ಮಾರ್ಗೇಣ ನಿರ್ಗತಾಃ ॥ ೧೪೯ ॥

ಶನೈಶ್ಶನೈರಯೋಧ್ಯಾಯಾಃ ಪಥ್ಯಪಶ್ಯನ್ ವನಸ್ಥಲೀಂ ।
ತಾವಚ್ಛಬ್ದೋ ಮಹಾನ್ ಜಾತಸ್ಸಿಂಹಮಾತಂಗಸಂಭವಃ ॥ ೧೫೦ ॥

ಧಾವನ್ನಗ್ರೇ ತು ಮಾತಂಗಃ ಪೃಷ್ಠೇ ಧಾವಂಶ್ಚ ಕೇಸರೀ ।
ಏವಂ ತೌ ಶಂಭುಸಾನ್ನಿಧ್ಯಂ ಪ್ರಾಪ್ತೌ ಕಲಹಕಾರಿಣೌ ॥ ೧೫೧ ॥

---

೧೪೮. ನೀರಿಲ್ಲದಿದ್ದ ನದಿಗಳೂ ಕೂಡ ಪ್ರವಾಹದಿಂದ ತುಂಬಿಹರಿದುವು. ಆ ಕಾಡಿನಲ್ಲಿ ನವಿಲುಗಳು ಕುಣಿಯುತ್ತಿದ್ದುವು. ಅವೆಲ್ಲವನ್ನೂ ಈ ಕರ್ಕಶನು ನೋಡಿದನು.

೧೪೯. ಆಗ ಅವನು ಈ ಚೈತ್ರಮಾಸದ ಮಹಿಮೆಯನ್ನು ಹೇಳಿದುದರಿಂದಲೇ ಈ ಕೆಟ್ಟ ವನವೂ ಕೂಡ ಒಳ್ಳೆಯ ವನವಾದುದರಿಂದ ಚೈತ್ರವು ಶ್ರೇಷ್ಠವೆಂದು ತಿಳಿದನು. ಅನಂತರ ಅವರೆಲ್ಲರೂ ಆ ದಾರಿಯಲ್ಲಿ ಮುಂದಕ್ಕೆ ಹೊರಟರು.

೧೫೦. ಮೆಲ್ಲಮೆಲ್ಲಗೆ ಮುಂದುವರಿಯುತ್ತ ಅಯೋಧ್ಯೆಯ ವನದ ಸ್ಥಳಗಳನ್ನು ನೋಡುತ್ತ ಹೊರಟರು. ಆಗ ಸಿಂಹವೂ, ಆನೆಯೂ ಗರ್ಜಿಸುತ್ತಿರುವ ಶಬ್ದವು ಕೇಳಿ ಬಂದಿತು.

೧೫೧. ಮುಂದುಗಡೆಯಲ್ಲಿ ಆನೆಯು ಓಡಿ ಹೋಗುತ್ತಲಿದ್ದಿತು. ಹಿಂದುಗಡೆಯಿಂದ ಸಿಂಹವು ಅದನ್ನು ಓಡಿಸಿಕೊಂಡು ಬರುತ್ತಿದ್ದಿತು. ಈ ರೀತಿಯಾಗಿ ಜಗಳವಾಡುತ್ತಿದ್ದ ಆ ಆನೆ ಸಿಂಹಗಳು ಆ ಶಂಭು ಶರ್ಮನ ಬಳಿಗೆ ಬಂದುವು.

ಮಾರ್ಗರೋಧಕರೌ ದುಷ್ಟೌ ತೌ ದೃಷ್ಟ್ವಾ ಶಂಭುರಬ್ರವೀತ್ ।
ಪಶ್ಯ ಕರ್ಕಶ ವಿಘ್ನಾನಿ ಚೈತ್ರಸ್ನಾನೇ ಪದೇ ಪದೇ ॥ ೧೫೨ ॥

ಸಂಭವಂತೀತಿ ವೈ ಬುಧ್ವಾ ಚೈತ್ರಸ್ನಾನಂ ನ ಲಂಘಯೇತ್ ।
ಕಾಶ್ಯಾಂ ವಿವಾಹೇ ಗೀತಾಯಾಂ ಗಯಾಯಾಂ ರಾಮಚಿಂತನೇ ॥ ೧೫೩ ॥

ಚೈತ್ರಸ್ನಾನೇ ಮಹಾದಾನೇ ವಿಘ್ನಾನಿ ಸಂಭವಂತಿ ಹಿ ।
ಏವಂ ವದತಿ ವಿಪ್ರೇಂದ್ರೇ ತೌ ದುಷ್ಟೌ ಕರಿಕೋಹಲೌ ॥ ೧೫೪ ॥

ಚೈತ್ರರಾಮಶ್ರವಾತ್ಪೂರ್ವಜನ್ಮಸ್ಮೃತ್ಯಾತಿವಿಸ್ಮಿತಾ ।
ಭೂತ್ವಾ ವೈ ತ್ರಾಹಿ ತ್ರಾಹೀತಿ ಕೃತ್ವಾ ಧೀರ್ಘಂ ಮಹಾರವಂ ॥ ೧೫೫ ॥

---

೧೫೨. ಅವೆರಡೂ ಆ ಶಂಭುಶರ್ಮನು ಹೋಗುತ್ತಿದ್ದ ದಾರಿಯನ್ನು ಅಡ್ಡಗಟ್ಟಿದುವು. ಅವೆರಡೂ ಕ್ರೂರ ಮೃಗಗಳಾಗಿದ್ದುವು. ಅವೆರಡನ್ನೂ ಈ ಶಂಭುಶರ್ಮನು ನೋಡಿ ಇಂತೆಂದನು. ಎಲೈ ಕರ್ಕಶನೇ ! ಚೈತ್ರಸ್ನಾನಕ್ಕೆ ವಿಘ್ನಗಳು ಹೆಜ್ಜೆ ಹೆಜ್ಜೆಗೆ ಹೇಗೆ ಬರುತ್ತಿವೆ ಎಂಬುದನ್ನು ನೋಡು.

೧೫೩–೧೫೪. ಇದನ್ನು ತಿಳಿದುಕೊಂಡು ಚೈತ್ರಸ್ನಾನವನ್ನು ಮಾಡದೆ ಬಿಡಲೇ ಬಾರದು. ಕಾಶಿಗೆ ಹೋಗುವ ವಿಷಯದಲ್ಲಿಯೂ, ಗಯೆಗೆ ಹೋಗುವುದರಲ್ಲಿಯೂ, ರಾಮ ಧ್ಯಾನದಲ್ಲಿಯೂ ಚೈತ್ರಸ್ನಾನದಲ್ಲಿಯೂ, ಮಹಾದಾನಗಳನ್ನು ಮಾಡುವಾಗಲೂ ಅನೇಕವಾದ ವಿಘ್ನಗಳು ಬರುತ್ತವೆ ಎಂದು ಆ ಶಂಭುಶರ್ಮನು ಹೇಳುತ್ತಾ ಇದ್ದನು.

೧೫೫. ಇದನ್ನು ಆ ಆನೆ ಸಿಂಹಗಳು ಕೇಳಿದುವು. ಈ ಚೈತ್ರ ರಾಮ ಎಂಬ ಶಬ್ದಗಳನ್ನು ಕೇಳಿದೊಡನೆಯೇ ಪೂರ್ವಜನ್ಮದ ಸ್ಮರಣೆಯುಂಟಾಗಲು ಅವು ಬಹು ಆಶ್ಚರ್ಯಗೊಂಡುವು. ಅನಂತರ ಕಾಪಾಡು ಎಂಬುದಾಗಿ ಗಟ್ಟಿಯಾಗಿ ಕೂಗುತ್ತ ಆ ಬ್ರಾಹ್ಮಣನನ್ನು ಶರಣು ಹೊಂದಿದುವು.

ಶರಣಂ ದ್ವಿಜವರ್ಯಾಯ ಜಗ್ಮತುಶ್ಶಂಭುಶರ್ಮಣೇ ।
ಸೋಽಪಿ ಶಂಭುಶ್ಚ ತಾಭ್ಯಾಂ ಹಿ ಪೃಷ್ಟವಾನ್ ತತ್ಕೃಪಾನ್ವಿತಃ ॥ ೧೫೬ ॥

ಕಿಮರ್ಥಂ ದುಷ್ಟಜಾತಿರ್ಹಿ ಪ್ರಾಪ್ತಾ ತತ್ಕಥ್ಯತಾಂ ಮಮ ।
ಇತಿ ವಿಪ್ರವಚಃ ಶುತ್ವಾ ಕೇಸರೀ ವಾಕ್ಯಮಬ್ರವೀತ್ ॥ ೧೫೭ ॥

ಸೇತೌ ರಾಮೇಶ್ವರಕ್ಷೇತ್ರೇ ಪೂರ್ವಜನ್ಮನ್ಯಹಂ ದ್ವಿಜಃ ।
ನಿಂದಕಸ್ಸಧರ್ಮಾಣಾಂ ಪಾಷಂಡೋಕ್ತ್ಯೇಕತತ್ಪರಃ ॥ ೧೫೮ ॥

ಕದಾಚಿಚ್ಚೈತ್ರಮಾಸೇ ತು ತತ್ರ ಶ್ರೀರಾಮಸಂಜ್ಞಿಕೇ ।
ತೀರ್ಥೇ ಜನಸಮಾಹೇ ಚ ಶ್ರುತ್ವಾ ಪೌರಾಣಿಕೀಂ ಕಥಾಂ ॥ ೧೫೯ ॥

ಪೌರಾಣಿಕೇನ ಕಥಿತಾಂ ಚೈತ್ರಮಾಹಾತ್ಮ್ಯಸೂಚಿಕಾಂ ।
ಕೃತವಾನ್ನಿಂದನಂ ಚಾಹಂ ವಾರಂ ವಾರಂ ಪುನಃ ॥ ೧೬೦ ॥

---

೧೫೬. ಅವೆರಡೂ ತನ್ನನ್ನು ಶರಣು ಹೊಕ್ಕುದನ್ನು ನೋಡಿ ಶಂಭುಶರ್ಮನು ಕೃಪೆಯುನ್ನು ಹೊಂದಿ ಅವುಗಳ ವಿಷಯುವನ್ನು ಇಂತೆಂದು ಕೇಳಿದನು.

೧೫೭. ಎಲೈ ಪ್ರಾಣಿಗಳಿರಾ! ನಿಮ್ಮಿಬ್ಬರಿಗೂ ಈ ದುಷ್ಟಜಾತಿಯಲ್ಲಿ ಜನ್ಮವು ಬರಲು ಕಾರಣವೇನು? ಶಂಭುಶರ್ಮನ ಈ ಮಾತನ್ನು ಕೇಳಿ ಸಿಂಹವು ಅವನನ್ನು ಕುರಿತು ಇಂತೆಂದು ಹೇಳಿತು.

೧೫೮. ಎಲೈ ಬ್ರಾಹ್ಮಣನೇ! ನಾನು ಒಬ್ಬ ಬ್ರಾಹ್ಮಣನು. ಸೇತುವಿನ ಬಳಿಯಲ್ಲಿರುವ ರಾಮೇಶ್ವರ ಕ್ಷೇತ್ರದಲ್ಲಿದ್ದುಕೊಂಡಿದ್ದೆನು. ಆ ಸೇತುವಿನಲ್ಲಿಯೂ ರಾಮೇಶ್ವರದಲ್ಲಿಯೂ, ಧರ್ಮಗಳೆಲ್ಲವನ್ನೂ ನಿಂದಿಸುತ್ತ ಎಲ್ಲರೊಡನೆಯೂ ಪಾಷಂಡ ವಾದವನ್ನೇ ಮಾಡುತ್ತಿದ್ದೆನು.

೧೫೯. ಒಂದು ಸಾರಿ ಆ ಸೇತುವಿನ ಬಳಿ ಇರುವ ರಾಮತೀರ್ಥದಲ್ಲಿ ಚೈತ್ರ ಮಾಸದಲ್ಲಿ ಜನಗಳ ಗುಂಪು ಕೂಡಿದ್ದಿತು. ಅಲ್ಲಿ ಪುರಾಣವು ನಡೆಯುತ್ತಿರಲು ಕೇಳಿದೆನು.

೧೬೦. ಆ ಪುರಾಣಿಕನು ಚೈತ್ರಮಾಸದ ಮಹಿಮೆಯುನ್ನು ಹೇಳುತ್ತಿದ್ದನು ಅದನ್ನು ಕೇಳಿ ನಾನು ಆಗಾಗ್ಗೆ ಅದರ ನಿಂದೆಯುನ್ನು ಮಾಡುತ್ತ ಬಂದೆನು.

ತಸ್ಮತ್ಕೃತಂ ನಿಂದನಂ ಚ ಕಶ್ಚಿದ್ವಿಪ್ರ ಸ್ತಪಸ್ಥಿತಃ ।
ಶುಶ್ರಾವ ಸಕಲಂ ದುಷ್ಟಂ ತೇನ ಶಪ್ತೋಽಸ್ಮ್ಯಹಂ ತದಾ ॥ ೧೬೧ ॥

ಕ್ರೂರಾಂ ಜಾತಿಂ ತ್ವರಂ ಗಚ್ಛ ಯದಾ ಚೈತ್ರೇಶಕೀರ್ತನಂ ।
ಭವಿಷ್ಯತಿ ಮಹಾರಣ್ಯೇ ಶಾಪಶಾಂತಿಸ್ತದೇತಿ ಚ ॥ ೧೬೨ ॥

ಏವಂ ಪ್ರೋಕ್ತಂ ಮಯಾ ಸರ್ವಂ ಪೂರ್ವಜನ್ಮನಿ ಯತ್ಕೃತಂ ।
ತೇನ ಶಾಪೇನ ಜಾತೋಽಸ್ಮಿ ಕೇಸರೀ ಭಯಕಾರಕಃ ॥ ೧೬೩ ॥

ಚೈತ್ರರಾಮಶ್ರವಾಜ್ಜಾತಾ ಪೂರ್ವಸ್ಮೃತಿರನುತ್ತಮಾ ।
ಇದಾನೀಂ ರಕ್ಷ ಮಾಂ ವಿಪ್ರ ತ್ವಂ ಚೈತತ್ಸಿಂಹದೇಹತಃ
ಇತಿ ಸಿಂಹಸ್ಯ ವೃತ್ತಂ ತು ಜ್ಞಾತ್ವೋವಾಚ ಗಜಂ ದ್ವಿಜಃ । ॥ ೧೬೪ ॥

---

೧೬೧. ನಾನು ಹೀಗೆ ನಿಂದೆಮಾಡುತ್ತಿದ್ದುದೆಲ್ಲವನ್ನೂ ತಪಸ್ವಿಯಾದ ಒಬ್ಬ ಬ್ರಾಹ್ಮಣನು ಕೇಳಿದನು. ಆಗ ಅವನು ಈ ರೀತಿಯಾಗಿ ದುಷ್ಟಮಾತುಗಳನ್ನು ಆಡುತ್ತಿದ್ದ ನನ್ನನ್ನು ಶಪಿಸಿದನು.

೧೬೨. ಎಲೈ ದುಷ್ಟನೇ ! ನೀನು ಧರ್ಮವನ್ನು ನಿಂದಿಸುತ್ತಿರುವುದರಿಂದ ಬೇಗನೆ ಕ್ರೂರಜಾತಿಯನ್ನು ಹೊಂದು, ಮಹಾರಣ್ಯದಲ್ಲಿ ಚೈತ್ರೇಶನಾದ ರಾಮನ ಕೀರ್ತನವು ಆದಾಗ ನಿನಗೆ ಈ ಶಾಪವು ಕೊನೆಗಾಣಲಿ ಎಂದನು.

೧೬೩. ಎಲೈ ಬ್ರಾಹ್ಮಣನೇ ! ಪೂರ್ವಜನ್ಮದಲ್ಲಿ ನಾನು ಮಾಡಿದ ಕೃತ್ಯವನ್ನು ನಿನಗೆ ವಿವರಿಸಿದ್ದೇನೆ. ಆ ಶಾಪದಿಂದ ನಾನು ಈ ಕಾಡಿನಲ್ಲಿ ಸಿಂಹವಾಗಿ ಹುಟ್ಟಿ ಎಲ್ಲರಿಗೂ ಭಯವನ್ನುಂಟುಮಾಡುತ್ತಿದ್ದೆನು.

೧೬೪. ನೀನು ಹೇಳಿದ "ಚೈತ್ರ" "ರಾಮ" ಎಂಬ ಶಬ್ದಗಳನ್ನು ಕೇಳಿದುದರಿಂದ ನನಗೆ ಹಿಂದಿನ ಜನ್ಮದ ಸ್ಮರಣೆಯುಂಟಾಯಿತು. ಎಲೈ ವಿಪ್ರನೇ ಈಗ ನೀನು ನನ್ನನ್ನು ಈ ಸಿಂಹದ ಜನ್ಮದಿಂದ ಪಾರುಗಾಣಿಸುವವನಾಗು.

ಕಸ್ಮಾಚ್ಚ ಮಾತಂಗ ಗತೋಸಿ ದುಷ್ಟ
ಜಾತೌ ವದಸ್ವಾದ್ಯ ಮಹಾಘಸಂಘಾತ್ ।
ಸ ಚಾಪಿ ಮಾತಂಗವರಸ್ಸಮಸ್ತಂ ।
ವೃತ್ತಂ ನಿಜಂ ಚಾಕಥಯಚ್ಚ ಜೀರ್ಣಂ ॥ ೧೬೫ ॥

॥ ಮಾತಂಗ ಉವಾಚ ॥

ಶೃಣು ವಿಪ್ರ ಪ್ರವಕ್ಷ್ಯಾಮಿ ಪೂರ್ವವೃತ್ತಂ ಮಯಾ ಕೃತಂ ।
ರಾಮನಾಥಪುರೇ ಚಾಹಂ ಕಾವೇರ್ಯಾ ಉತ್ತರೇ ತಟೇ ॥ ೧೬೬ ॥

ವಿಪ್ರಃ ಪರಮದುರ್ವೃತ್ತಸ್ಸರ್ವಶಾಸ್ತ್ರಪರಾಙ್ಮುಖಃ
ಲಕ್ಷ್ಮೀಭರಮದಾಕ್ರಾಂತಃ ಪುಣ್ಯಸ್ತ್ರೀಭೋಗಕಾರಕಃ ॥ ೧೬೭ ॥

ಏಕದಾ ಸುಹೃದಾ ಚಾಹಂ ಭೋಜನಾರ್ಥಂ ನಿಮಂತ್ರಿತಃ ।
ಶ್ರಾದ್ಧಾಹೇ ಮಧುಮಾಸೇ ಹಿ ಶುಕ್ಲೇ ಶ್ರೀನವಮೀದಿನೇ ॥ ೧೬೮ ॥

---

೧೬೫. ಸಿಂಹವು ಹೀಗೆ ಹೇಳಿದುದನ್ನು ಕೇಳಿ ಆ ಶಂಭಶರ್ಮನು ಆನೆಯನ್ನು ಕುರಿತು ಎಲೈ ಆನೆಯೇ ! ನೀನು ಯಾವ ಪಾಪದ ದೆಸೆಯಿಂದ ಈ ರೀತಿಯಾದ ಆನೆಯ ಜನ್ಮವನ್ನು ಹೊಂದಿದೆ ? ಎಂದನು. ಅದನ್ನು ಕೇಳಿ ಆನೆಯು ತನ್ನ ವಿಷಯವನ್ನು ಸ್ವಲ್ಪವೂ ಬಿಡದಂತೆ ವಿಸ್ತಾರವಾಗಿ ಹೇಳಿತು.

೧೬೬. ಆನೆಯು ಹೇಳಿತು ಎಲೈ ಬ್ರಾಹ್ಮಣನೇ ! ಪೂರ್ವದಲ್ಲಿ ನಾನು ಮಾಡಿದುದನ್ನು ಹೇಳುತ್ತೇನೆ ಕೇಳು. ನಾನು ಒಬ್ಬ ಬ್ರಾಹ್ಮಣನು ಕಾವೇರಿಯ ಉತ್ತರದಲ್ಲಿರುವ ರಾಮನಾಥ ಪುರದವನು.

೧೬೭. ನಾನು ಶಾಸ್ತ್ರಗಳೊಂದನ್ನೂ ಓದದೆ ಬಹುವಾಗಿ ಕೆಟ್ಟಕೆಲಸಗಳಲ್ಲಿ ಆಸಕ್ತನಾಗಿದ್ದೆನು. ನನಗೆ ಹಣವು ಬಹುವಾಗಿದ್ದುದರಿಂದ ಐಶ್ವರ್ಯ ಮದದಿಂದ ವೇಶ್ಯಾಸ್ತ್ರೀಯರಲ್ಲಿ ಯಾವಾಗಲೂ ಲೋಲುಪನಾಗಿದ್ದೆನು.

೧೬೮. ಒಂದು ಸಾರಿ ನನ್ನ ಸ್ನೇಹಿತನು ನನ್ನನ್ನು ಶ್ರಾದ್ಧದ ನಿಮಂತ್ರಣದ ಊಟಕ್ಕೆ ಬರಬೇಕೆಂದು ಹೇಳಿದನು. ಆ ದಿನ ಚೈತ್ರಮಾಸದ ಶುಕ್ಲ ಪಕ್ಷದ ನವಮಿಯಾಗಿದ್ದಿತು.

ಮಯಾ ಭುಕ್ತಂ ಸುಹೃದ್ಗೇಹೇ ನವಮ್ಯಾಂ ದ್ವಿಜಸತ್ತಮ ।
ತೇನ ಪಾಪೇನ ಜಾತೋಽಸ್ಮಿ ಕರಿಜಾತೌ ನ ಸಂಶಯಃ ॥ ೧೬೯ ॥

ಸರ್ವದಾ ಪ್ರತಿಮಾಸೇಽಪಿ ನವಮ್ಯಾಂ ನ ಹಿ ಭೋಜನಂ ।
ಕಾರ್ಯಂ ವಿಶೇಷತೋ ರಾಮನವಮ್ಯಾಂ ನಿಂದಿತಂ ಚ ತತ್ ॥ ೧೭೦ ॥

ಇದಾನೀಂ ನ ಹಿ ಜಾನಾಮಿ ಕೇನ ಪುಣ್ಯೇನ ತೇಽತ್ರ ವೈ ।
ಸಂಗತಿಶ್ಚ ವನೇ ಜಾತಾ ಸರ್ವೇಷಾಂ ಪರಮಾರ್ತಿಹೃತ್ ॥ ೧೭೧ ॥

ಇತಿ ತಸ್ಯ ವಚಃ ಶ್ರುತ್ವಾ ಶಂಭುರ್ಧ್ಯಾನೇ ವಿಚಾರಯನ್ ।
ಜ್ಞಾತ್ವಾ ಮಾತಂಗಪುಣ್ಯಂ ತು ಪ್ರೋವಾಚ ಕರಿಣಂ ದ್ವಿಜಃ ॥ ೧೭೨ ॥

ಶೃಣು ಮಾತಂಗ ವಕ್ಷ್ಯಾಮಿ ಯತ್ಪುಣ್ಯಂ ಚ ತ್ವಯಾ ಕೃತಂ ।
ಪೂರ್ವಜನ್ಮನಿ ತತ್ಸರ್ವಂ ಯೇನ ಮೇ ಸಂಗತಿರ್ವನೇ ॥ ೧೭೩ ॥

---

೧೬೯. ಆ ಸ್ನೇಹಿತನ ಮನೆಯಲ್ಲಿ ಆ ಶ್ರೀರಾಮನವಮಿಯ ದಿನ ಶ್ರಾದ್ಧದ ಊಟವನ್ನು ಮಾಡಿದೆನು. ಆ ಪಾಪದಿಂದ ಈ ಆನೆಯ ಜನ್ಮದಲ್ಲಿ ಹುಟ್ಟಿರುವೆನು. ಇದರಲ್ಲಿ ಸಂಶಯವಿಲ್ಲ.

೧೭೦. ಪ್ರತಿ ತಿಂಗಳಿನಲ್ಲಿಯೂ ಕೂಡ ನವಮಿಯ ದಿವಸ ಭೋಜನವನ್ನು ಮಾಡಲೇ ಕೂಡದು. ಚೈತ್ರಶುದ್ಧದಲ್ಲಿ ಬರುವ ಶ್ರೀರಾಮನವಮಿಯ ದಿವಸವಂತೂ ಭೋಜನವನ್ನು ಮಾಡಲೇ ಕೂಡದು.

೧೭೧. ಈವಾಗ ನಾವುಗಳು ಯಾವ ಪುಣ್ಯದಿಂದ ನಿನ್ನೊಡನೆ ಇಲ್ಲಿ ಸೇರಿರುವೆವೆಂಬುದನ್ನು ನಾನು ಕಾಣೆನು. ನಾವೆಲ್ಲರೂ ಇಲ್ಲಿ ಸೇರಿರುವಿಕೆಯು ನಮ್ಮ ಕಷ್ಟವನ್ನು ಹೋಗಲಾಡಿಸತಕ್ಕದ್ದಾಗಿದೆ.

೧೭೨. ಆ ಆನೆಯು ಇಂತೆಂದು ಹೇಳಿದುದನ್ನು ಕೇಳಿ ಶಂಭುಶರ್ಮನು ಧ್ಯಾನಮಾಡಿ ಅದನ್ನು ಯೋಚಿಸಿದನು. ಅನಂತರ ಆ ಆನೆಯ ಪುಣ್ಯವು ತಿಳಿಯಬರಲು ಆ ಆನೆಯನ್ನು ಕುರಿತು ಇಂತೆಂದನು.

೧೭೩. ಎಲೈ ಆನೆಯೇ ! ನೀನು ಯಾವ ಪುಣ್ಯವನ್ನು ಮಾಡಿದ್ದೀಯೋ ? ಎಂಬುದನ್ನು ಹೇಳುತ್ತೇನೆ. ಕೇಳು. ಪೂರ್ವಜನ್ಮದಲ್ಲಿ ಮಾಡಿರುವ ಆ ಪುಣ್ಯದಿಂದಲೇ ನಮ್ಮುಗಳೊಡನೆ ನೀನು ಇಲ್ಲಿ ಸೇರಿದ್ದೀಯೆ.

ಜಾತಾ ತ್ವಾಮುದ್ಧರಿಷ್ಯಾಮಿ ಮಾ ಚಿಂತಾಂ ಕುರು ಸರ್ವಥಾ ।
ರಾಮನಾಥಪುರೇ ರಮ್ಯೇ ಕಾವೇರೀತಟಶೋಭಿತೇ ॥ ೧೭೪ ॥

ರಾಮಾಯಣಕಥಾಂ ಚೈತ್ರೇ ಶ್ರುತ್ವಾ ಶ್ರೀನವಮೀದಿನೇ ।
ರಾಮತೀರ್ಥೇ ತ್ವಯಾ ಸ್ನಾತಂ ದೃಷ್ಟೋ ರಾಮೇಶ್ವರಶ್ಶಿವಃ ॥ ೧೭೫ ॥

ತೇನ ಪುಣ್ಯೇನ ತೇ ಜಾತಾ ಸಂಗತಿರ್ಮಮ ಕಾನನೇ ।
ಇದಾನೀಂ ಶ್ರುಣು ಸಿಂಹ ತ್ವಂ ಶ್ರುಣೋತು ಚ ಕರೀ ಮಹಾನ್ ॥ ೧೭೬ ॥

ಸಾಕೇತೇ ಮಧುಮಾಸೇ ಹಿ ಸ್ನಾತ್ವಾ ತೇನ ಪಥಾ ಪುನಃ ।
ಯದಾ ಗಚ್ಛಾಮಿ ತಾಂ ಕಾಂಚೀಂ ಯುವಾಮುದ್ಧಾರಯಾಮ್ಯಹಂ ॥

---

೧೭೪. ನಾನು ನಿನ್ನನ್ನು ಈ ಆನೆಯ ಜನ್ಮದಿಂದ ಪಾರು ಮಾಡುತ್ತೇನೆ. ನೀನು ಈ ವಿಷಯದಲ್ಲಿ ಚಿಂತಿಸಬೇಡ. ಕಾವೇರಿಯ ನದಿಯ ಉತ್ತರದಡದಲ್ಲಿ ರಾಮನಾಥಪುರವೆಂಬ ಒಂದು ರಮ್ಯವಾದ ಊರಿರುವುದು.

೧೭೫. ನೀನು ಒಂದು ಸಾರಿ ಚೈತ್ರಮಾಸದ ನವಮಿಯ ದಿವಸ ಆ ಶ್ರೀ ರಾಮ ತೀರ್ಥದಲ್ಲಿ ಸ್ನಾನ ಮಾಡಿ ರಾಮೇಶ್ವರನೆಂಬ ಶಿವನ ದರ್ಶನವನ್ನು ಮಾಡಿ ಅಲ್ಲಿಯೇ ರಾಮಾಯಣದ ಕಥೆಯನ್ನು ಕೇಳಿದೆ.

೧೭೬. ಆ ಪುಣ್ಯದಿಂದ ನೀನು ಈ ಕಾಡಿನಲ್ಲಿ ನಮ್ಮೊಡನೆ ಸೇರಿದ್ದೀಯೆ. ಈವಾಗ ಎಲೈ ಸಿಂಹವೇ ! ನಾನು ಹೇಳುವುದನ್ನು ಕೇಳು. ಆನೆಯೂ ಕೂಡ ಕೇಳಲಿ.

೧೭೭. ನಾನು ಈಗ ಆಯೋಧ್ಯಾ ಪಟ್ಟಣಕ್ಕೆ ಹೋಗುತ್ತೇನೆ. ಅಲ್ಲಿ ಚೈತ್ರ ಮಾಸದಲ್ಲಿ ಚೈತ್ರಸ್ನಾನವನ್ನು ಮಾಡಿಕೊಂಡು ಮತ್ತೆ ಇದೇ ದಾರಿಯಲ್ಲಿ ಶಿವ ಕಾಂಚಿಗೆ ಹೋಗಲು ಬರುತ್ತೇನೆ. ಆಗ ನಾನು ನಿಮ್ಮಿಬ್ಬರನ್ನೂ ಈ ಜನ್ಮದಿಂದ ಉದ್ಧಾರ ಮಾಡುತ್ತೇನೆ.

ಮಾ ಸಂದೇಹೋತ್ರ ಕರ್ತವ್ಯಶ್ಯಪಥೈಃ ಪ್ರಬ್ರವೀಮ್ಯಹಂ ।
ಸಂತೋಷಾರ್ಥಂ ಯುವಾಭ್ಯಾಂ ಹಿ ಪ್ರೋಚ್ಯಂತೇ ಶಪಥಾ ಮಯಾ ೧೭೮

ಪರಸ್ತ್ರೀಗಮನಾತ್ಪಾಪಂ ತಥಾ ಮಿತ್ರವಧಾದಿಕಂ ।
ಯುವಾಂ ನೋದ್ಧೃತ್ಯ ಗಚ್ಛಾಮಿ ತರ್ಹಿ ತನ್ಮಯಿ ತಿಷ್ಠತು ॥ ೧೭೯ ॥

ಬ್ರಹ್ಮಸ್ವಹರಣಾತ್ಪಾಪಂ ಯತ್ಸ್ಮೃತಂ ಮಾತೃನಿಂದನಾತ್।
ಯುವಾಂ ನೋದ್ಧೃತ್ಯ ಗಚ್ಛಾಮಿ ತರ್ಹಿ ತನ್ಮಯಿ ತಿಷ್ಠತು ॥ ೧೮೦ ॥

ಇತ್ಯುಕ್ತ್ವಾ ದ್ವಿಜವರ್ಯಸ್ಸ ಸ್ತ್ರಿಯಾ ಭಿಲ್ಲೇನ ಸಂಯುತಃ ।
ಕರಿಸಿಂಹೌ ವನೇ ಸ್ಥಾಪ್ಯ ಗಚ್ಛನ್ಮಾರ್ಗೇ ಶನೈಶ್ಶನೈಃ ॥ ೧೮೧ ॥

---

೧೭೮. ಈ ವಿಷಯದಲ್ಲಿ ಸಂದೇಹವನ್ನು ಹೊಂದಲೇ ಬೇಡಿ. ಪ್ರಮಾಣ ಮಾಡಿ ಹೇಳುತ್ತೇನೆ. ನಿಮ್ಮಗಳ ಸಂತೋಷಕ್ಕೂ ನೀವು ನಂಬುವುದಕ್ಕೂ ಕೂಡ ಆ ಪ್ರಮಾಣಗಳನ್ನು ಹೇಳುತ್ತೇನೆ. ಕೇಳಿರಿ.

೧೭೯. ಪರರ ಹೆಂಡಿರಲ್ಲಿ ರಮಿಸುವುದರಿಂದ ಯಾವ ಪಾಪವು ಬರುವುದೋ ಆ ಪಾಪಗಳು ನಿಮ್ಮನ್ನು ಉದ್ಧಾರ ಮಾಡದೆ ನಾನು ಹೊರಟು ಹೋದರೆ ನನಗೆ ಬರಲಿ.

೧೮೦. ಬ್ರಾಹ್ಮಣನ ಸ್ವತ್ತನ್ನು ಅಪಹರಿಸಿದರೆ ಯಾವ ಪಾಪವು ಬರುವುದೋ ತಾಯಿಯನ್ನು ನಿಂದಿಸಿದರೆ ಯಾವ ಪಾಪವು ಬರುವುದೋ ಆ ಪಾಪಗಳು ನಿಮ್ಮನ್ನೂ ಉದ್ಧಾರ ಮಾಡದೆ ನಾನು ಹೋದರೆ ನನಗೆ ಬರಲಿ.

೧೮೧. ಎಂಬುದಾಗಿ ಹೇಳಿ ಆ ಬ್ರಾಹ್ಮಣನಾದ ಶಂಭುಶರ್ಮನು ತನ್ನ ಹೆಂಡತಿಯೊಡನೆಯೂ, ಭಿಲ್ಲನೊಡನೆಯೂ ಕೂಡಿಕೊಂಡು ಆ ಆನೆ ಸಿಂಹಗಳನ್ನು ಕಾಡಿನಲ್ಲಿಯೇ ಇರಹೇಳಿ ದಾರಿಯಲ್ಲಿ ಪ್ರಯಾಣ ಮಾಡುತ್ತ ಮೆಲ್ಲಗೆ ಹೋಗುತ್ತಿದ್ದನು.

ದದರ್ಶಾನ್ಯಪಥಾಯಾಂತಂ ಶ್ರೇಷ್ಠಂ ಕಾರ್ಪಟಿಕೋತ್ತಮಂ ।
ವಹಂತಂ ರಾಮಲಿಂಗಾರ್ಥಂ ಶ್ರೇಷ್ಠಂ ಭಾಗೀರಥೀಜಲಂ ॥ ೧೮೨ ॥

ಶಂಭುಃ ಪಪ್ರಚ್ಛ ತಂ ನತ್ವಾ ನಮ್ರಃ ಕಾರ್ಪಟಿಕೋತ್ತಮಂ ।
ಕುತಸ್ಸಮಾಗತಂ ವಿಪ್ರ ಗಮ್ಯತೇ ಕ್ವಾಧುನಾ ವದ ॥ ೧೮೩ ॥

॥ ಕಾರ್ಪಟಿಕ ಉವಾಚ ॥

ಪ್ರಯಾಗಾದಾಗತಂ ವಿದ್ಧಿ ಮಾಂ ತ್ವಂ ಭೂಸುರಸತ್ತಮ ।
ಮಧುಮಾಸೇವಗಾಹಾರ್ಥಮಯೋಧ್ಯಾಂ ಪ್ರತಿ ಗಮ್ಯತೇ ॥ ೧೮೪ ॥

ಇದಾನೀಂ ತ್ವಂ ನಿಜಂ ವೃತ್ತಂ ವದ ಬ್ರಾಹ್ಮಣಸತ್ತಮ ।
ಕುತಸ್ಸಮಾಗತಂ ಚಾತ್ರ ಗಮ್ಯತೇ ಕ್ವಾಧುನಾ ವದ ॥ ೧೮೫ ॥

ಇತಿ ತದ್ವಚನಂ ಶ್ರುತ್ವಾ ಶಂಭುಃ ಪ್ರೋವಾಚ ತಂ ತದಾ ।
ಶಿವಕಾಂಚ್ಯಾಸ್ಸಮಾಯಾತಮಯೋಧ್ಯಾಂ ಪ್ರತಿ ಗಮ್ಯತೇ ॥ ೧೮೬ ॥

---

೧೮೨. ಆಗ ಮತ್ತೊಂದು ಕಡೆಯ ದಾರಿಯಿಂದ ಬರುತ್ತಿದ್ದ ರಾಮೇಶ್ವರದ ರಾಮಲಿಂಗವನ್ನು ಸ್ನಾನ ಮಾಡಿಸಲು ಅಡ್ಡೆಗಳಲ್ಲಿ ಗಂಗೆಯ ತೀರ್ಥವನ್ನು ತರುತ್ತಿದ್ದ ಒಬ್ಬ ಶ್ರೇಷ್ಠನಾದ ಕಾವಡೀ (ಅಡ್ಡೆ) ಯನ್ನು ಹೊತ್ತುಕೊಂಡಿರುವವನನ್ನು ನೋಡಿದನು.

೧೮೩. ಶಂಭುವು ಅವನನ್ನು ನೋಡಿದ ಕೂಡಲೇ ಅವನಿಗೆ ನಮಸ್ಕರಿಸಿ ಇಂತೆಂದು ಅವನನ್ನು ಪ್ರಶ್ನಿಸಿದನು. ಎಲೈ ಅಡ್ಡೆ ಹೊತ್ತುಕೊಂಡಿರುವ ಪ್ರಯಾಣಿಕನೇ! ನೀನು ಎಲ್ಲಿಂದ ಬರುತ್ತಿದ್ದೀಯೆ? ಎಲ್ಲಿಗೆ ಹೋಗುತ್ತಿದ್ದೀಯೆ? ಎಂಬುದನ್ನು ಹೇಳು.

೧೮೪. ಕಾರ್ಪಟಿಕನು ಹೇಳಿದನು–ನಾನು ಪ್ರಯಾಗದಿಂದ ಬಂದೆನು. ಈಗ ಚೈತ್ರಮಾಸದಲ್ಲಿ ಚೈತ್ರಸ್ನಾನವನ್ನುಮಾಡಲು ಅಯೋಧ್ಯೆಗೆ ಹೋಗುತ್ತಿರುವೆನು.

೧೮೫. ಎಲೈ ಬ್ರಾಹ್ಮಣನೇ! ಈಗ ನಿನ್ನ ಸಮಾಚಾರವನ್ನು ಕೇಳಬೇಕೆಂದಿದ್ದೇನೆ. ನೀನು ಎಲ್ಲಗೆ ಹೋಗುತ್ತಿದ್ದೀಯೆ? ಅದನ್ನು ಕೇಳು.

೧೮೬. ಅವನು ಇಂತೆಂದುದನ್ನು ಕೇಳಿ ಶಂಭುಶರ್ಮನು ಎಲೈ ಪ್ರಯಾಣಿಕನೇ! ನಾನು ಶಿವಕಾಂಚಿಯಿಂದ ಬಂದೆನು. ಅಯೋಧ್ಯೆಗೆ ಹೋಗುತ್ತಿದ್ದೇನೆ.

ಚೈತ್ರಮಾಸೇನಗಾಹಾರ್ಥಂ ಸಂತತೇಃ ಕಥಿತಂ ಮಯಾ ।
ಇತಿ ಶಂಭುವಚಶ್ಶ್ರುತ್ವಾ ಪುನಃ ಕಾರ್ಪಟಿಕೋತ್ತಮಃ ॥ ೧೮೭ ॥

ಪಪ್ರಚ್ಛ ದ್ವಿಜವರ್ಯಾಯ ಕೌತುಕಾವಿಷ್ಟಮಾನಸಃ ।
ಶಿವಕಾಂಚ್ಯಾಂ ಶಂಭುನಾಮಾ ಕಶ್ಚಿದ್ವಿಪ್ರೋಽಸ್ತಿ ಭೋ ದ್ವಿಜ ॥ ೧೮೮ ॥

ತತ್ತಸ್ಯ ವಚನಂ ಶ್ರುತ್ವಾ ಪುನಶ್ಶಂಭುಸ್ತಮಬ್ರವೀತ್ ।
ಬಹವಶ್ಶಂಭುನಾಮಾನೋ ವರ್ತಂತೇ ದ್ವಿಜ ತತ್ರ ಹಿ ॥ ೧೮೯ ॥

ಕಸ್ತ್ವಯಾ ಪೃಚ್ಛ್ಯತೇ ತಸ್ಯ ವದ ಗೋತ್ರೋಪನಾಮನೀ ।
ಇತಿ ವಿಪ್ರವಚಶ್ಶ್ರುತ್ವಾ ಪುನಃ ಕಾರ್ಪಟಿಕೋಬ್ರವೀತ್ ॥ ೧೯೦ ॥

ಭಾರದ್ವಾಜಕುಲೋತ್ಪನ್ನಂ ಚಕ್ರಗೋಪ್ಯುಪನಾಮಕಂ ।
ಮಹಾದೇವಸುತಂ ಸರ್ವವೇದಶಾಸ್ತ್ರವಿಶಾರದಂ ।
ಬ್ರಾಹ್ಮಣಂ ಶಂಭುನಾಮಾನಂ ಜಾನೀಷೇ ತ್ವಂ ನ ವಾ ವದ ॥ ೧೯೧ ॥

---

೧೮೭. ನನಗೆ ಸಂತತಿಯಾಗಬೇಕೆಂದು ಅಯೋಧ್ಯೆಗೆ ಚೈತ್ರಮಾಸದ ಸ್ನಾನಕ್ಕೋಸ್ಕರ ಹೋಗುತ್ತಿದ್ದೇನೆ. ಶಂಭುವು ಇಂತೆಂದುದನ್ನು ಕೇಳಿ ಆ ಪ್ರಯಾಣಿಕನು ಮತ್ತೆ ಶಂಭುವನ್ನು ಕುರಿತು ಇಂತೆಂದು ಕೇಳಿದನು.

೧೮೮. ಎಲೈ ಬ್ರಾಹ್ಮಣನೇ ! ಆ ಶಿವಕಾಂಚಿಯಲ್ಲಿ ಶಂಭು ಶರ್ಮನೆಂಬ ಒಬ್ಬ ಬ್ರಾಹ್ಮಣನಿರುವನೋ ? ಎಂದು ಆಶ್ಚರ್ಯದಿಂದ ಕೇಳಿದನು.

೧೮೯. ಆ ಪ್ರಯಾಣಿಕನ ಈ ಮಾತನ್ನು ಕೇಳಿ ಶಂಭುಶರ್ಮನು ಎಲೈ ಪ್ರಯಾಣಿಕನೇ ! ಆ ಶಿವಕಾಂಚಿಯಲ್ಲಿ ಶಂಭುಶರ್ಮನೆಂಬ ಹೆಸರುಳ್ಳವರು ಬಹಳ ಜನರಿದ್ದಾರೆ.

೧೯೦. ಅವರಲ್ಲಿ ನೀನು ಯಾವ ಶಂಭುಶರ್ಮನನ್ನು ಕೇಳುತ್ತಿದ್ದೀಯೆ ? ಅವನ ಗೋತ್ರ, ಅಡ್ಡ ಹೆಸರು ಮನೆಯ ಹೆಸರುಗಳನ್ನು ಹೇಳು. ಎಂದು ಕೇಳಲು ಆ ಪ್ರಯಾಣಿಕನು ಇಂತೆಂದು ಹೇಳಿದನು.

೧೯೧. ಎಲೈ ಬ್ರಾಹ್ಮಣನೆ ! ಆ ಶಂಭುಶರ್ಮನು ಭಾರದ್ವಾಜ ಕುಲದಲ್ಲಿ ಹುಟ್ಟಿದವನು. ಚಕ್ರಗೋಪರು ಎಂದು ಅವರ ಮನೆಯ ಹೆಸರು ಮಹದೇವನ ಮಗನು. ಅವನು ಸಮಸ್ತವಾದ ವೇದಶಾಸ್ತ್ರಗಳನ್ನು ತಿಳಿದವನು. ಇಂತಹ ಶಂಭುಶರ್ಮನನ್ನು ನೀನು ಬಲ್ಲೆಯಾ ? ಅಥವಾ ಇಲ್ಲವೆ ? ಹೇಳು ಎಂದನು.

ಏವಂ ಮಹಾಕಾರ್ಪಟಿಕೇನ ಸರ್ವಂ ।
ಗೋತ್ರೋಪನಾಮಾದಿಕ ಮಾದರೇಣ
ಪ್ರೋಕ್ತಂ ಯಥಾ ತಚ್ಚ ಸ ಭೂಸುರೋಽಪಿ ।
ಜ್ಞಾತ್ವಾ ನಿಜಂ ಸರ್ವಮಥಾವದತ್ತಂ ॥ ೧೯೨ ॥

ಭೋ ಭೋ ಕಾರ್ಪಟಿಕಶ್ರೇಷ್ಠ ಕಿಮರ್ಥಂ ತ್ವಂ ಹಿ ಪೃಚ್ಛಸಿ ।
ತದ್ವದಸ್ವ ಸವಿಸ್ತಾರಂ ಮಾ ಶಂಕಾಂ ಕುರು ಚಾತ್ರ ಹಿ ॥ ೧೯೩ ॥

॥ ಕಾರ್ಪಟಿಕ ಉವಾಚ ॥

ಶೃಣು ವಿಪ್ರ ಪ್ರವಕ್ಷ್ಯಾಮಿ ಯದರ್ಥಂ ಪೃಚ್ಛ್ಯತೇ ಮಯಾ ।
ಯದಾಹಂ ಗತವಾನ್ ಗಂಗಾಸಾಗರಂ ದ್ರಷ್ಟುಮಾದರಾತ್ ॥ ೧೯೪ ॥

ಸೀತಾಕುಂಡಸಮಾಪೇ ಹಿ ದೇಶೇ ಕೈಕಟನಾಮಕೇ ।
ದೃಷ್ಟೋಽಹಂ ಮಾರ್ಗಮಧ್ಯೇ ಚ ಪಿಶಾಚೇನೋಗ್ರರೂಪಿಣಾ ॥ ೧೯೫ ॥

---

೧೯೨. ಪ್ರಯಾಣಿಕನು ಈ ರೀತಿಯಾಗಿ ಗೋತ್ರ ಮನೆಯ ಹೆಸರು ಇವೆಲ್ಲವನ್ನೂ ಹೇಳಲು ಅದೆಲ್ಲವನ್ನೂ ಆತನು ತಿಳಿದುಕೊಂಡು ಇದು ನನ್ನದೇ ಎಂದು ನಿರ್ಧರಿಸಿಕೊಂಡು ಅವನನ್ನು ಕುರಿತು ಇಂತೆಂದನು.

೧೯೩. ಎಲೈ ಪ್ರಯಾಣಿಕನೆ! ಅವನನ್ನು ನೀನು ಯಾತಕ್ಕೋಸ್ಕರ ಕೇಳುತ್ತಿದ್ದೀಯೆ? ಅದೆಲ್ಲವನ್ನೂ ವಿಸ್ತಾರವಾಗಿ ಹೇಳು ಈ ವಿಷಯದಲ್ಲಿ ಸಂದೇಹ ಪಡಬೇಡ.

೧೯೪. ಆ ಪ್ರಯಾಣಿಕನು ಹೇಳಿದನು–ಎಲೈ ಬ್ರಾಹ್ಮಣನೆ! ನಾನು ಆತನನ್ನು ಏತಕ್ಕೆ ಕೇಳಿದೆನು? ಎಂಬುದನ್ನು ಹೇಳುತ್ತೇನೆ ಕೇಳು. ನಾನು ಗಂಗೆಯು ಸಾಗರವನ್ನು ಸೇರುವಲ್ಲಿಗೆ ಅದನ್ನು ನೋಡಲು ಹೋಗಿದ್ದೆನು.

೧೯೫. ಆ ಗಂಗಾ ಸಾಗರದ ಸಂಗಮದ ಸ್ಥಳದಲ್ಲಿ ಕೈಕಟವೆಂಬ ಪ್ರದೇಶದಲ್ಲಿ ಸೀತಾ ಕುಂಡವಿರುವುದು. ಅಲ್ಲಿ ಹೋಗುವಾಗ ದಾರಿಯ ಮಧ್ಯದಲ್ಲಿ ಒಂದು ಉಗ್ರರೂಪಿಯಾದ ಪಿಶಾಚವನ್ನು ಕಂಡೆನು.

ಮಾಂ ಹಂತುಂ ನಿಕಟಂ ಪ್ರಾಪ್ತಂ ತಂ ದೃಷ್ಟ್ವಾಹಂ ತದಾ ದ್ವಿಜ ।
ಶ್ರೀರಾಮಕೀರ್ತನಂ ದೀರ್ಘಂ ಕೃತವಾನ್ ಭಯಕಂಪಿತಃ ॥ ೧೯೬ ॥

ಕೀರ್ತನಾದ್ರಾಮಚಂದ್ರಸ್ಯ ಸ ಪಿಶಾಚಃ ಪಲಾಯನಂ ।
ಮುಕ್ತಃ ಕೃತ್ವಾ ದೂರದೇಶೇ ಸ್ಥಿತ್ವಾ ಶುಶ್ರಾವ ಕೀರ್ತನಂ ॥ ೧೯೭ ॥

ತಸ್ಮಾಜ್ಜಾತಾ ಪೂರ್ವಜನ್ಮಸ್ಮೃತಿಸ್ತಸ್ಯ ಶುಭಾವಹಾ ।
ತ್ರಾಹಿ ತ್ರಾಹೀತಿ ಮಾಂ ಪ್ರಾಹ ಮಯಾ ಪೃಷ್ಟಸ್ಸ ವೈ ಪುನಃ ॥ ೧೯೮ ॥

ಕಸ್ಮಾತ್ಪಿಶಾಚದೇಹೇ ತ್ವಂ ಜಾತಸ್ತದ್ವದ ಸತ್ವರಂ ।
ಇತಿ ಮೇ ವಚನಂ ಶ್ರುತ್ವಾ ಪಿಶಾಚಃ ಪ್ರಾಹ ಮಾಂ ಪುನಃ ॥ ೧೯೯ ॥

ಕಾಂಚೀಪುರ್ಯಾಂ ದ್ವಿಜಶ್ಚಾಹಂ ಧುಂಡಿಪುತ್ರಃ ಪುರಾ ಸ್ಥಿತಃ ।
ನಾನ್ನದಾನಂ ಮಯಾ ಪೂರ್ವಂ ಕೃತಂ ಸ್ವಲ್ಪಮಪಿ ಕ್ವಚಿತ್ ॥ ೨೦೦ ॥

---

೧೯೬. ಅದು ನನ್ನನ್ನು ನೋಡಿದ ಕೂಡಲೇ ನನ್ನನ್ನು ಕೊಲ್ಲಲು ಬಂದಿತು. ನಾನು ಅದನ್ನು ತಿಳಿದ ಕೂಡಲೇ ಭಯದಿಂದ ನಡಗುತ್ತಾ ಶ್ರೀರಾಮನ ಕೀರ್ತನವನ್ನು ಮಾಡಿದೆನು.

೧೯೭. ಶ್ರೀರಾಮ ಕೀರ್ತನವನ್ನು ಕೇಳಿದೊಡನೆಯೇ ಆ ಪಿಶಾಚವು ನನ್ನನ್ನು ಬಿಟ್ಟು ಓಡಿಹೋಯಿತು. ಅಲ್ಲದೆ ದೂರದಲ್ಲಿ ನಿಂತುಕೊಂಡು ನಾನು ಮಾಡುತ್ತಿದ್ದ ಶ್ರೀರಾಮ ಕೀರ್ತನೆಯನ್ನು ಕೇಳಿತು.

೧೯೮. ಇದರಿಂದ ಅದಕ್ಕೆ ತನ್ನ ಪೂರ್ವಜನ್ಮದ ಸ್ಮರಣೆಯು ಚೆನ್ನಾಗಿ ಬಂದಿತು. ಆಗ ಅದು ತ್ರಾಹಿ, ತ್ರಾಹಿ (ರಕ್ಷಿಸು ರಕ್ಷಿಸು) ಎಂಬುದಾಗಿ ಹೇಳುತ್ತಾ ನನ್ನನ್ನು ಶರಣುಹೊಕ್ಕಿತು. ಆಗ ನಾನು ಅದನ್ನು ಕುರಿತು ಇಂತೆಂದು ಕೇಳಿದೆನು.

೧೯೯. ಎಲೈ ಪಿಶಾಚವೇ ! ನೀನು ಈ ಪಿಶಾಚಿಯ ಜನ್ಮದಲ್ಲಿ ಹುಟ್ಟಲು ಕಾರಣವೇನು ? ಬೇಗನೆ ಹೇಳು ಎಂದೆನಲು ಆದು ನನ್ನನ್ನು ಕುರಿತು ಇಂತೆಂದಿತು.

೨೦೦. ಅಯ್ಯಾ ! ನಾನು ಕಾಂಚೀಪುರದವನು. ಪೂರ್ವಜನ್ಮದಲ್ಲಿ ಧುಂಡಿ ಎಂಬುವನ ಮಗನು. ನಾನು ಎಲ್ಲಿಯೂ ಯಾವಾಗಲೂ ಸ್ವಲ್ಪವಾದರೂ ಕೂಡ ಅನ್ನದಾನವನ್ನು ಮಾಡಿದವನೇ ಅಲ್ಲ.

ತಸ್ಮಾತ್ಪಿಶಾಚದೇಹತ್ವಂ ಪ್ರಾಪ್ತಂ ಕಾರ್ಪಟಿಕೋತ್ತಮ।
ಇತಿ ತಸ್ಯ ವಚಶ್ಶ್ರುತ್ವಾ ಪುನಃ ಪ್ರೋಕ್ತಸ್ಸ ವೈ ಮಯಾ ॥ ೨೦೧ ॥

ಕಥಂ ಪಿಶಾಚಯೋನ್ಯಾಸ್ತು ತೇ ಮುಕ್ತಿಶ್ಚ ಭವಿಷ್ಯತಿ।
ತತಃ ಪುನಸ್ಸ ಮಾಂ ಪ್ರಾಹ ಯದಿ ಮೇ ತನಯಶ್ಶುಚಿಃ ॥ ೨೦೨ ॥

ಚೈತ್ರೇ ದರ್ಶೇ ಮಮೋದ್ದೇಶಾದನ್ನದಾನಂ ಕರಿಷ್ಯತಿ।
ಭವಿಷ್ಯತಿ ಮಮೋದ್ಧಾರಸ್ತತ್‌ಕ್ಷಣಾನ್ನಾತ್ರ ಸಂಶಯಃ ॥ ೨೦೩ ॥

ಇತಿ ತದ್ವಚನಂ ಶ್ರುತ್ವಾ ಪುನಃ ಪ್ರೋಕ್ತಸ್ಸ ವೈ ಮಯಾ।
ವರ್ತತೇ ಕ್ವ ಸುತಸ್ತೇ ಹಿ ಕಿಂ ನಾಮಾ ವದ ಮಾಂ ಪ್ರತಿ ॥ ೨೦೪ ॥

ತತಸ್ತೇನ ಯಥಾ ಪ್ರೋಕ್ತಂ ಭಾರದ್ವಾಜಾದ್ಯಚಿಹ್ನಜಂ।
ತತ್ಪ್ರೋಕ್ತಂ ಚ ಮಯಾ ಸರ್ವಂ ನಿಕಟೇ ತವ ಭೋ ದ್ವಿಜ ॥ ೨೦೫ ॥

---

೨೦೧. ಆದ್ದರಿಂದಲೇ ನನಗೆ ಈ ಪಿಶಾಚ ಜನ್ಮವು ಬಂದಿತು. ಎಂದು ಹೇಳಿತು. ಅದು ಇಂತೆಂದುದನ್ನು ಕೇಳಿ ನಾನು ಮತ್ತೆ ಅದನ್ನು ಇಂತೆಂದು ಕೇಳಿದೆನು

೨೦೨-೨೦೩. ಎಲೈ ಪಿಶಾಚವೇ! ಈ ಪಿಶಾಚ ಜನ್ಮದಿಂದ ನಿನಗೆ ಬಿಡುಗಡೆಯಾಗಬೇಕಾದರೆ ಏನು ಮಾಡಬೇಕು? ಎಂದೆನಲು ಅದು ನನ್ನ ಮಗನು ಚೈತ್ರಮಾಸದ ಅಮಾವಾಸ್ಯೆಯ ದಿವಸ ಶುಚಿಯಾಗಿ ನನ್ನನ್ನು ಉದ್ದೇಶ ಮಾಡಿಕೊಂಡು ಅನ್ನದಾನವನ್ನು ಮಾಡಬೇಕು. ಹಾಗೆ ಮಾಡಿದರೆ ಒಡನೆಯೇ ನನಗೆ ಮುಕ್ತಿಯು ಬರುತ್ತದೆ. ಖಂಡಿತ. ಇದರಲ್ಲಿ ಸಂಶಯವಿಲ್ಲ ಎಂದು ಹೇಳಿತು.

೨೦೪. ಅದು ಇಂತೆನಲು ನಾನು ಮತ್ತೆ ಅದನ್ನು ಕುರಿತು ಅವನು ಎಲ್ಲಿರುವನು? ಅವನ ಹೆಸರೇನು? ಅದನ್ನು ನನಗೆ ಹೇಳು ಎಂದು ಕೇಳಿದೆನು.

೨೦೫. ಆಗ ಅದು ನನಗೆ ಈ ಭಾರಧ್ವಜ ಗೋತ್ರವೇ ಮುಂತಾದ ಗುರುತುಗಳನ್ನು ಹೇಳಿತು. ಎಲೈ ಬ್ರಾಹ್ಮಣನೇ! ಆ ಪಿಶಾಚವು ಹೇಳಿದ ಗುರುತುಗಳೆಲ್ಲವನ್ನೂ ನಾನು ನಿನ್ನ ಬಳಿಯಲ್ಲಿ ಹೇಳುತ್ತಿದ್ದೇನೆ.

ಪಿಶಾಚಂ ಚ ಪುನಶ್ಚಾಹಮುಕ್ತವಾನ್ ತದ್ವದಾಮ್ಯಹಂ ।
ರಾಮೇಶಾರ್ಥಂ ಭೋ ಪಿಶಾಚ ನೀಯತೇ ಜಾಹ್ನವೀಜಲಂ ॥ ೨೦೬ ॥

ಮಯಾ ಕರಂಡಮಧ್ಯೇ ಹಿ ಯದಾ ಗಚ್ಛಾಮಿ ದಕ್ಷಿಣಾಂ ।
ದಿಶಂ ಕಾಲೇನ ಕಾಂಚೀಂ ಹಿ ಪ್ರವೇಕ್ಷ್ಯಾಮಿ ಯದಾ ತದಾ ॥ ೨೦೭ ॥

ತವ ಪುತ್ರಾಯ ವೃತ್ತಂ ಹಿ ಕಥಯಿಷ್ಯಾಮ್ಯಹಂ ತದಾ ।
ಇತಿ ಮದ್ವಚನಂ ಶ್ರುತ್ವಾ ಸಂತೋಷಂ ಪರಮಂ ಗತಃ ॥ ೨೦೮ ॥

ಪಿಶಾಚಃ ಪ್ರಾಹ ಮಾಂ ವಿಪ್ರ ಸ್ತುತ್ವಾ ನತ್ವಾ ಪುನಃ ಪುನಃ ।
ಅವಶ್ಯಮೇವ ವಕ್ತವ್ಯಂ ಮೇ ವೃತ್ತಂ ಮಮ ಸೂನವೇ ॥ ೨೦೯ ॥

ಯಥಾ ದೃಷ್ಟಂ ತ್ವಯಾ ಪಾಂಥ ಯಥೋಕ್ತಂ ಚ ಮಯಾ ತವ ।
ಅನ್ಯಚ್ಚ ಕಥ್ಯತಾಂ ತಸ್ಮೈ ಮಮ ಪುತ್ರಾಯ ಸಾದರಂ ॥ ೨೧೦ ॥

---

೨೦೬. ಅನಂತರ ಆ ಪಿಶಾಚವನ್ನು ಕುರಿತು ನಾನು ಇಂತೆಂದು ಕೇಳಿದೆನು. ಅದನ್ನು ಹೇಳುತ್ತೇನೆ ಕೇಳು. ಎಲೈ ಪಿಶಾಚವೇ! ನಾನು ಈ ತೀರ್ಥವನ್ನು ರಾಮೇಶ್ವರದ ರಾಮೇಶ್ವರನಿಗೆ ತೆಗೆದುಕೊಂಡು ಹೋಗುತ್ತಿದ್ದೇನೆ.

೨೦೭-೨೦೮. ನಾನು ದಕ್ಷಿಣ ದೇಶದಲ್ಲಿರುವ ಆ ರಾಮೇಶ್ವರಕ್ಕೆ ಹೋದಾಗ ಆ ಕಾಂಚಿಗೆ ಹೋಗುತ್ತೇನೆ. ಆಗ ನಿನ್ನ ಮಗನಿಗೆ ಈ ವಿಷಯಗಳೆಲ್ಲವನ್ನೂ ತಿಳಿಸುತ್ತೇನೆ. ಎಂಬುದಾಗಿ ಹೇಳಲು ಆ ಪಿಶಾಚವು ಬಹು ಸಂತೋಷಗೊಂಡಿತು.

೨೦೯-೨೧೦. ಆಗ ಪಿಶಾಚವು ನನ್ನನ್ನು ನಮಸ್ಕರಿಸುತ್ತಾ, ಹೊಗಳುತ್ತಾ ಎಲೈ ಪ್ರಯಾಣಿಕನೇ! ನನ್ನ ಸಮಾಚಾರವನ್ನು ಅವಶ್ಯಕವಾಗಿಯೂ ನನ್ನ ಮಗನಿಗೆ ಹೇಳಿಯೇ ತೀರಬೇಕು. ನೀನು ನನ್ನನ್ನು ನೋಡಿದ ರೀತಿಯನ್ನೂ, ನಾನು ಮಾಡಿದ ಕೆಲಸವನ್ನೂ ನಾನು ನಿನಗೆ ಹೇಳಿದುದನ್ನೂ ಎಲ್ಲವನ್ನೂ ಕೂಡ ಒಂದನ್ನೂ ಬಿಡದೆ ಹೇಳಬೇಕು. ಇದೂ ಅಲ್ಲದೆ ಆ ನನ್ನ ಮಗನಿಗೆ ಮತ್ತೊಂದು ವಿಷಯವನ್ನು ದಯವಿಟ್ಟು ಹೇಳು.

ಮಧುದರ್ಶೇಽನ್ನದಾನಸ್ಯ ಮಹಿಮಾ ಶ್ರೂಯತೇ ದಿವಿ ।
ಅತಸ್ತ್ವಂ ಹಿ ಮಮೋದ್ದೇಶೇನಾನ್ನದಾನಂ ಮಧೌ ಕುರು　　॥ ೨೧೧ ॥

ಏವಮುಕ್ತ್ವಾ ಸ ಪಿಶಾಚಃ ಶಪಥಂ ಮಾಂ ಚಕಾರ ಹ ।
ನ ಬ್ರೂಷೇ ಸ್ಮರಣಂ ಕೃತ್ವಾ ಮಮ ಪುತ್ರಾಯ ತದ್ದ್ವಿಜ　　॥ ೨೧೨ ॥

ಭವಿಷ್ಯತಿ ವೃಥಾ ಸರ್ವಯಾತ್ರಾ ತವ ಮಹಾಮತೇ ।
ಇತಿ ತದ್ವಚನಂ ಶ್ರುತ್ವಾ ಸಾಂತ್ವಯಿತ್ವಾ ಚ ತಂ ಪುನಃ　　॥ ೨೧೩ ॥

ನಿರ್ಗತೋಽಸ್ಮಿ ಮಧೌ ಸ್ನಾತುಮಯೋಧ್ಯಾಂ ಗಂತುಮಾದರಾತ್ ।
ಕೃತ್ವಾಯೋಧ್ಯಾಪುರೀಮಧ್ಯೇ ಚೈತ್ರಸ್ನಾನಂ ಮಹಾಫಲಂ　　॥ ೨೧೪ ॥

ಯದಾ ಗಚ್ಛಾಮಿ ತಾಂ ಕಾಂಚೀಂ ತದಾ ತಸ್ಮೈ ವದಾಮ್ಯಹಂ ।
ಅತ ಏವ ಮಯಾ ಪೃಷ್ಟಸ್ತವ ಶಂಭುರ್ದ್ವಿಜೋತ್ತಮಃ　　॥ ೨೧೫ ॥

---

೨೧೧. ಎಲೈ ಪುತ್ರನೇ ! ಚೈತ್ರಮಾಸದ ಅಮಾವಾಸ್ಯೆಯ ದಿವಸ ಅನ್ನದಾನ ಮಾಡುವುದನ್ನು ದೇವತೆಗಳು ಸ್ವರ್ಗದಲ್ಲಿ ಬಹುವಾಗಿ ಹೊಗಳುತ್ತಿದ್ದಾರೆ. ಆದ್ದರಿಂದಲೇ ನೀನು ನನ್ನನ್ನು ಉದ್ದೇಶಿಸಿಕೊಂಡು ಚೈತ್ರದ ಅಮಾವಾಸ್ಯೆಯಲ್ಲಿ ಅನ್ನದಾನವನ್ನು ಮಾಡಬೇಕು ಎಂದು ಹೇಳಿದನು ಎಂದೂ ಹೇಳು.

೨೧೨-೨೧೩. ಆ ಪಿಶಾಚಿಯು ಇದೆಲ್ಲವನ್ನೂ ನನಗೆ ಹೇಳಿ ಇಂತೆಂದು ಆಣೆಯನ್ನಿಟ್ಟಿತು. ಎಲೈ ದ್ವಿಜನೇ ! ನೀನು ಇದನ್ನು ಜ್ಞಾಪಕದಲ್ಲಿಟ್ಟುಕೊಂಡು ನನ್ನ ಮಗನಿಗೆ ಹೇಳದೆ ಹೋದ ಪಕ್ಷದಲ್ಲಿ ನೀನು ಮಾಡಿದ ಈ ಮಹಾಯಾತ್ರೆಯು ಎಲ್ಲವೂ ಕೂಡ ಫಲವಿಲ್ಲದೆ ಹೋಗುತ್ತದೆ ಎಂದು. ಆದರ ಈ ಮಾತನ್ನು ಕೇಳಿ ಅದನ್ನು ಸಮಾಧಾನ ಪಡಿಸಿ ಅಲ್ಲಿಂದ ಹೊರಟೆನು.

೨೧೪-೨೧೫. ಅಲ್ಲಿಂದಲೇ ಹೊರಟು ಈ ಚೈತ್ರಮಾಸದಲ್ಲಿ ಅಯೋಧ್ಯೆಯಲ್ಲಿ ಸ್ನಾನಮಾಡಬೇಕೆಂಬುದಾಗಿ ಬರುತ್ತಿದ್ದೇನೆ. ಈ ಅಯೋಧ್ಯೆಯಲ್ಲಿ ಚೈತ್ರಸ್ನಾನವು ಮಹಾಫಲವನ್ನು ಕೊಡುತ್ತದೆ. ಈ ಸ್ನಾನವನ್ನು ಮಾಡಿಕೊಂಡು ರಾಮೇಶ್ವರಕ್ಕೆ ಹೋಗುತ್ತೇನೆ. ಹೋದಾಗ ಆ ಕಾಂಚಿಗೂ ಹೋಗಿ ಆತನನ್ನು ಕಂಡು ಅವನಿಗ ಇದೆಲ್ಲವನ್ನೂ ಹೇಳುತ್ತೇನೆ. ಆದ್ದರಿಂದಲೇ ಆ ಶಂಭುಶರ್ಮನೆಂಬುವವನಾರು ? ಎಂದು ನಿನ್ನನ್ನು ಕೇಳಿದೆನು.

ಪ್ರೋಕ್ತಂ ಗೋತ್ರಾದಿಭಿರ್ಲಿಂಗಂ ವರ್ತತೇ ಚೇದ್ವದಸ್ವ ಮಾಂ ।
ಇತಿ ಶಂಭುಃ ಪಿತೃವೃತ್ತಂ ಜ್ಞಾತ್ವಾ ಮೂರ್ಛಾಂ ಗತಸ್ತದಾ ॥ ೨೧೬ ॥

ಆಶ್ವಾಸಿತಶ್ಚ ಭಿಲ್ಲೇನ ವಿಪ್ರಃ ಪ್ರೋವಾಚ ತಂ ಪುನಃ ।
ಭೋ ಭೋ ಕಾರ್ಪಟಿಕಶ್ರೇಷ್ಠ ನ ಮತ್ತೋಽಸ್ತಿ ನರೋಽಧಮಃ ॥ ೨೧೭ ॥

ಯಸ್ತ್ವಯಾ ಪೃಚ್ಛ್ಯತೇ ಶಂಭುಸ್ಸೋಽಹಂ ವಿದ್ಧಿ ನ ಸಂಶಯಃ ।
ಮಯಾ ಪುತ್ರೇಣ ನ ಕೃತಂ ಸ್ವಪಿತುರ್ಮೋಕ್ಷದಾಯಕಂ ॥ ೨೧೮ ॥

ಅನ್ನದಾನಾದಿಕಂ ಕರ್ಮ ಧಿಗ್ಧಿಙ್ಮೇಯಂ ವೃಥಾ ಭವಃ ।
ಇದಾನೀಂ ತವ ವಾಕ್ಯೇನ ದಾಸ್ಯಾಮ್ಯನ್ನಂ ಮಧೌ ಪಿತುಃ ॥ ೨೧೯ ॥

---

೨೧೬ ಮತ್ತು ಅವನ ಹೆಸರು, ಮನೆಯ ಹೆಸರು, ಗೋತ್ರ ಮುಂತಾದುವು ಹೆಸರನ್ನೂ ಹೇಳಿದೆನು. ಅವನು ಇದ್ದರೆ ಆವನಾರು ಎಂಬುದನ್ನು ನನಗೆ ಹೇಳು ಎಂದೆನು. ಈ ರೀತಿಯಾಗಿ ಆ ಪ್ರಯಾಣಿಕನು ಹೇಳಿದ ತನ್ನ ತಂದೆಯ ವಿಷಯ ವನ್ನು ಕೇಳಿ ಆ ಶಂಭುಶರ್ಮನು ಒಡನೆಯೇ ಮೂರ್ಛೆ ಹೋದನು.

೨೧೭. ಆಗ ಅವನ ಬಳಿಯಲ್ಲಿದ್ದ ಬಿಲ್ಲನು ಆ ಶಂಭುಶರ್ಮನಿಗೆ ಗಾಳಿ ಯನ್ನು ಬೀಸಿ ಒಳ್ಳೆಯ ಮಾತುಗಳನ್ನಾಡಿ ಸಮಾಧಾನ ಪಡಿಸಿದನು. ಶಂಭು ಶರ್ಮನು ಎಚ್ಚೆತ್ತು ಆ ಪ್ರಯಾಣಿಕನನ್ನು ಕುರಿತು ಇಂತೆಂದನು. ಎಲೈ ಪ್ರಯಾಣಿ ಕನೇ! ಲೋಕದಲ್ಲಿ ನನಗಿಂತಲೂ ಅಧಮನಾದ ಮನುಷ್ಯನು ಇಲ್ಲ.

೨೧೮. ನೀನು ಹೆಸರು ಕುಲಗೋತ್ರಗಳನ್ನು ಹೇಳಿ ಯಾವ ಶಂಭುವನ್ನು ಕೇಳುತ್ತಿದ್ದೀಯೋ ಅವನೇ ನಾನು ಎಂದು ತಿಳಿ ? ಇದರಲ್ಲಿ ಸಂಶಯವಿಲ್ಲ. ನಾನು ನನ್ನ ತಂದೆಗೆ ಮೋಕ್ಷ ಬರುವ ಯಾವ ಕೆಲಸವನ್ನೂ ಮಾಡಲಿಲ್ಲವಲ್ಲಾ !

೨೧೯. ಅವನನ್ನು ಕುರಿತು ಅನ್ನವನ್ನೂ ಹಾಕಲಿಲ್ಲ. ದಾನವನ್ನೂ ಮಾಡ ಲಿಲ್ಲ. ನನಗೆ ಧಿಕ್ಕಾರವಿರಲಿ. ನನ್ನ ಜನ್ಮವು ವ್ಯರ್ಥವಾಗಿ ಆಯಿತಲ್ಲ ! ಈಗ ನಿನ್ನ ಮಾತಿನಂತೆ ಚೈತ್ರಮಾಸದಲ್ಲಿ ನನ್ನ ತಂದೆಯುನ್ನುದ್ದೇಶಿಸಿಕೊಂಡು ಅನ್ನದಾನ ವನ್ನು ಮಾಡುತ್ತೇನೆ.

ಏವಂ ಶಂಭುಃ ಕಾರ್ಪಟಿಕಾಯ ಚೋಕ್ತ್ವಾ
ಯೋಧ್ಯಾಂ ರಮ್ಯಾಂ ದೂರತೋ ವೈ ದದರ್ಶ ।
ಪ್ರಣೇಮುಸ್ತಾಂ ದಂಪತೀ ಪಾಂಥಭಿಲ್ಲಾಃ
ತತಶ್ಶಂಭುಶ್ಚಾವದತ್ಕರ್ಕಶಂ ಸಃ ॥ ೨೨೦ ॥

॥ ಶಂಭುರುವಾಚ ॥

ಪಶ್ಯ ಪಶ್ಯ ಮಹಾಭಿಲ್ಲ ಮಹಾಯೋಧ್ಯಾಪುರೀಂ ಶುಭಾಂ ।
ಯಸ್ಯಾಂ ಸ್ನಾತುಂ ಸಮಾಯಾತಾ ದೃಶ್ಯಂತೇ ಕೋಟಿಶೋ ಜನಾಃ ॥

ಜನೌಘಾನಾಂ ಧ್ವನಿಶ್ಚಾಯಂ ಶ್ರೂಯತೇ ಮೇಘಶಬ್ದವತ್ ।
ನಾನಾಧ್ವಜಪತಾಕಾಶ್ಚ ದೃಶ್ಯಂತೇ ಚೇಂದ್ರಚಾಪವತ್ ॥ ೨೨೨ ॥

ತಥಾ ವಾದ್ಯಧ್ವನಿಶ್ಚಾಯಂ ಶ್ರೂಯತೇ ಹಿ ಮನೋಹರಃ ।
ಅಗ್ನಿಹೋತ್ರಾಗ್ನಿಧೂಮೌಘೈರ್ವ್ಯಾಪ್ತಂ ಪಶ್ಯ ನಭೋಗಣಂ ॥ ೨೨೩ ॥

---

೨೨೦. ಎಂಬುದಾಗಿ ಶಂಭುವು ಆ ಅಡ್ಡೆಯನ್ನು ಹೊತ್ತಿರುವ ಪ್ರಯಾಣಿಕನಿಗೆ ಹೇಳಿ ಆ ರಮ್ಯವಾದ ಅಯೋಧ್ಯೆಯನ್ನು ದೂರದಿಂದಲೇ ನೋಡಿದನು. ಅನಂತರ ಆ ಶಂಭುವೂ ಅವನ ಹೆಂಡತಿಯೂ, ಭಿಲ್ಲನೂ ಅದಕ್ಕೆ ನಮಸ್ಕರಿಸಿದರು. ಮತ್ತು ಶಂಭುವು ಕರ್ಕಶನನ್ನು ಕುರಿತು ಇಂತೆಂದನು.

೨೨೧. ಶಂಭುವು ಹೇಳಿದನು—ಎಲೈ ಮಹಾ ಭಿಲ್ಲನಾದ ಕರ್ಕಶನೇ! ಅಯೋಧ್ಯೆಯನ್ನು ನೋಡು. ನೋಡು ಎಷ್ಟು ರಮ್ಯವಾಗಿದೆ! ಅದರಲ್ಲಿ ಸ್ನಾನ ಮಾಡುವುದಕ್ಕೋಸ್ಕರ ಕೋಟಿ ಸಂಖ್ಯೆಯಲ್ಲಿ ಜನರು ಬಂದಿರುವುದನ್ನು ನೋಡು.

೨೨೨. ಆ ಪಟ್ಟಣದಲ್ಲಿರುವ ಜನಗಳ ಗುಂಪಿನ ಕಲ ಕಲ ಧ್ವನಿಯು ಮೇಘದ ಗುಡುಗಿನಂತೆ ಕೇಳಿ ಬರುತ್ತಿರುವುದಲ್ಲ! ಆ ಊರಿನಲ್ಲಿ ಕಟ್ಟಿರುವ ಪತಾಕೆಗಳು ಕಾಮನ ಬಿಲ್ಲಿನಂತೆ ಕಾಣುಬರುತ್ತಿರುವುದನ್ನು ನೋಡು.

೨೨೩. ಆ ಊರಿನಲ್ಲಿ ಮೊಳಗುತ್ತಿರುವ ವಾದ್ಯದ ಧ್ವನಿಗಳು ಬಹು ಮನೋಹರವಾಗಿ ಕೇಳಿ ಬರುತ್ತಿವೆ. ಆ ಊರಿನ ಅಗ್ನಿಹೋತ್ರಗಳ ಅಗ್ನಿಯಿಂದ ಹೊರಡುತ್ತಿರುವ ಹೊಗೆಯು ಅಂತರಿಕ್ಷವನ್ನೆಲ್ಲಾ ಆವರಿಸಿಕೊಂಡಿದೆ.

ಕೈಲಾಸಗಿರಿಸಾಮ್ಯಾನಿ ಪಶ್ಯ ಸೌಧಾನಿ ಕರ್ಕಶ ।
ನವಪ್ರಕೋಳೀಪರಿಖಾಂ ವಲಯೀಕೃತಮೇಖಲಾಂ ॥ ೨೨೪ ॥

ಉತ್ತುಂಗಹರ್ಮ್ಯಾಗ್ರಂ ವಿಲಸತ್ಪತಾಕಶತಸಂಕುಲಾಂ ।
ಅಂಭ್ರಂಲಿಹಮಹಾಸೌಧಸುವರ್ಣಕಲಶೋಜ್ಜ್ವಲಾಂ ॥ ೨೨೫ ॥

ಪಶ್ಯಾಯೋಧ್ಯಾಪುರೀಂ ಶ್ರೇಷ್ಠಾಂ ಸರಯೂತೀರನಾದಿತಾಂ ।
ಹಾಟಕೋದ್ಘಾಟಿತೈ ರತ್ನಖಚಿತೈರ್ಯತ್ರ ಕಪಾಟಕೈಃ ॥ ೨೨೬ ॥

ಸುಸಂವೃತೈರ್ವಿವೃತ್ತೈಃ ಸ್ವೈರುನ್ಮಿಷಂತೀವ ಲಕ್ಷ್ಯತೇ ।
ದೋಧೂಯಮಾನೈರ್ಮರುತಾ ಪತಾಕಾಂಚಲಸೂಚಿತೈಃ ॥ ೨೨೭ ॥

ಆಹ್ವಯಂತೀವ ಪುರತೋ ಲಕ್ಷ್ಯತೇ ಪಥಿಕಾನ್ ಜನಾನ್ ।
ಅಧಃಕೃತಾಧೋಭುವನಾ ಜೇತುಮೇವಾಮರಾವತೀಂ ॥ ೨೨೮ ॥

---

೨೨೪. ಎಲೈ ಕರ್ಕಶನೇ! ಇಲ್ಲಿನ ಮಹಡಿಯ ಮನೆಗಳು ಕೈಲಾಸದ ಬೆಟ್ಟದಂತೆ ಕಾಣುತ್ತಿವೆ. ಅಲ್ಲಿನ ಕೋಟೆಯೂ, ಅಗಳುಗಳೂ ಆ ಪಟ್ಟಣಕ್ಕೆ ಒಡ್ಡಿಯಾಣದಂತೆ ಸುತ್ತುವರಿದುಕೊಂಡಿದೆ.

೨೨೫. ಮಹಡಿಯ ಮನೆಗಳು ಬಹು ಎತ್ತರವಾಗಿವೆ. ಅವುಗಳಲ್ಲಿ ಅನೇಕ ಪತಾಕೆಗಳು ಶೋಭಿಸುತ್ತಿವೆ. ಆ ಮನೆಗಳಿಗೆ ಹಾಕಿರುವ ಚಿನ್ನದ ಕಲಶಗಳು ಮುಗಿಲನ್ನು ಮುಟ್ಟುತ್ತಿರುವುವು. ಮತ್ತು ಪ್ರಕಾಶವಾಗಿರುವುವು.

೨೨೬ ಸರಯೂ ತೀರದಲ್ಲಿದ್ದುಕೊಂಡು ಧ್ವನಿಮಾಡುತ್ತಿರುವ ರಮ್ಯವಾದ ಈ ಅಯೋಧ್ಯಾ ಪಟ್ಟಣವನ್ನು ನೋಡು. ಅವುಗಳಲ್ಲಿರುವ ಬಾಗಿಲಿನ ಕದಗಳನ್ನು ಚಿನ್ನದ ತಗಡಿನಿಂದ ಮಾಡಿ ಅವಕ್ಕೆ ರತ್ನಗಳನ್ನು ಅಲ್ಲಲ್ಲಿಯೇ ಸೇರಿಸಿರುತ್ತಾರೆ.

೨೨೭-೨೨೮. ಈ ಕದಗಳನ್ನು ಆಗಾಗ್ಗೆ ತೆಗೆದು ಹಾಕಿ ಮಾಡುತ್ತಿರುವುದರಿಂದ ಕಣ್ಣುಗಳನ್ನು ಬಿಟ್ಟುಕೊಂಡಿರುವಂತೆ ಕಾಣುತ್ತದೆ. ಅದರಲ್ಲಿರುವ ಪತಾಕೆಗಳು ಆಲ್ಲಾಡುತ್ತಿರುವುದರಿಂದ ದೂರದಲ್ಲಿ ಹೋಗುತ್ತಿರುವ ಪ್ರಯಾಣಿಕರನ್ನು ಅವು ಕರೆಯುತ್ತಿರುವಂತೆ ಕಾಣುತ್ತಿದೆ. ಪಾತಾಳ ಲೋಕವನ್ನು ತಿರಸ್ಕರಿಸಿ ಕೆಳಗು ಮಾಡಿಕೊಂಡು ತನ್ನಲ್ಲಿ ನಿಲ್ಲಿಸಿರುವ ಶೂಲದ ನೆವದಿಂದ ಮೇಲಿರುವ ಸ್ವರ್ಗದ ಅಮರಾವತಿಯನ್ನು ಜಯಿಸಲು ಸಿದ್ಧವಾಗಿದೆಯೋ ಎಂಬಂತೆ ಕಾಣುತ್ತಿದೆ.

ಪ್ರಾಸಾದಶೂಲವ್ಯಾಜೇನ ಸನ್ನದ್ಧೇವಾದ್ಯ ದೃಶ್ಯತೇ ।
ಪವಿತ್ರೇಽಸ್ಮಿನ್ ಮಹಾಕ್ಷೇತ್ರೇ ನಿವಸಂತಿ ತಿರೋಹಿತಾಃ ॥ ೨೭೯ ॥

ಬ್ರಹ್ಮೇಶಹರಿಭಿಃ ಸರ್ವದೇವಾಸ್ತೇ ಋಷಯೋಽಮಲಾಃ ।
ಕುಬೇರಸ್ಪರ್ಧಯಾ ಯತ್ರ ಚಿನ್ವಂತಿ ವಸುಸಂಚಯಾನ್ ॥ ೨೮೦ ॥

ದಾತುಂ ಭೋಕ್ತುಂ ಸರ್ವಜನಾಃ ಸ್ವಧರ್ಮನಿರತಾಸ್ಸದಾ ।
ಗೇಹೇ ಗೇಹೇ ಸದಾನಂದ ಏವಾಸೀದ್ಯತ್ರ ವೈ ಪುರಿ ॥ ೨೮೧ ॥

ಯೇಷಾಂ ಪ್ರಕ್ಷಾಳಯಂತಿ ಸ್ಮ ಚರಣಾನ್ವಾಸವಾದಿಕಾಃ ।
ತೇ ದ್ವಿಜಾಃ ಕಸ್ಯ ನೋ ವಂದ್ಯಾ ಅಯೋಧ್ಯಾನಗರೀಸ್ಥಿತಾಃ ॥ ೨೮೨ ॥

ಔದಾರ್ಯೇ ಕಲ್ಪತರವೋ ಗಾಂಭೀರ್ಯೇ ಸಾಗರಾ ಇವ ।
ಕ್ಷಮಯಾ ಕ್ಷಮಯಾ ತುಲ್ಯಾ ಜಂಗಮಾ ನಿಗಮಾ ಇವ ॥ ೨೮೩ ॥

೨೭೯–೨೮೧ ಪವಿತ್ರವಾಗಿರುವ ಈ ಕ್ಷೇತ್ರದಲ್ಲಿ ಬ್ರಹ್ಮ, ರುದ್ರ, ಹರಿಗಳು ಕಣ್ಣಿಗೆ ಕಾಣದಂತಿದ್ದುಕೊಂಡು ವಾಸಿಸುತ್ತಿರುವರು. ಅಲ್ಲದೆ ಎಲ್ಲಾ ದೇವತೆಗಳೂ ಕೂಡ ಕಾಣದಂತಿರುತ್ತಾ ವಾಸಿಸುತ್ತಿರುವರು. ಅಂತೆಯೇ ಋಷಿಗಳೂ ಇದ್ದುಕೊಂಡಿರುವರು. ಕುಬೇರನ ಮೇಲಿನ ಸ್ಪರ್ಧೆಯಿಂದಲೋ ಎಂಬಂತೆ ಅಲ್ಲಿನ ಜನರು ಧನವನ್ನು ಶೇಖರಿಸುತ್ತಲಿರುವರು. ಅವರೆಲ್ಲರೂ ತಮ್ಮ ತಮ್ಮ ಧರ್ಮದಲ್ಲಿ ನಿರತರಾಗಿ ಆ ಹಣವನ್ನು ದಾನಮಾಡುವುದಕ್ಕೂ, ತಾವು ಭೋಗಿಸುವುದಕ್ಕೂ, ಉಪಯೋಗಿಸುತ್ತಿರುವರು. ಆ ಊರಿನಲ್ಲಿ ಮನೆಮನೆಯಲ್ಲಿಯೂ ಯಾವಾಗಲೂ ಆನಂದವೇ ಇದ್ದುಕೊಂಡಿರುತ್ತದೆ.

೨೮೨. ಅಯೋಧ್ಯೆಯಲ್ಲಿರುವ ಬ್ರಾಹ್ಮಣರ ಪಾದಗಳನ್ನು ಇಂದ್ರನೇ ಮುಂತಾದವರೂ ಕೂಡ ಬಂದು ತೊಳೆಯುತ್ತಿರುವರು. ಅಂತಹ ಬ್ರಾಹ್ಮಣರು ಯಾರಿಗೆ ತಾನೇ ಪೂಜ್ಯರಾಗಿರುವುದಿಲ್ಲಾ !

೨೮೩. ಆ ಬ್ರಾಹ್ಮಣರು ಉದಾರತನದಲ್ಲಿ ಕಲ್ಪವೃಕ್ಷಗಳಂತೆ ಇರುವರು. ಸಾಗರದಂತೆ ಗಂಭೀರವಾಗಿರುವರು. ಕ್ಷಮಾಗುಣದಲ್ಲಿ ಭೂಮಿಗೆ ಸಮವಾಗಿರುವರು. ಸಂಚರಿಸುವ ಕಲ್ಪವೃಕ್ಷಗಳಂತಿರುವರು.

ದೈನ್ಯಗ್ರಾಹಮಹಾಂಭೋಧಿಗ್ರಾಸಾಗಸ್ತ್ಯಮಹರ್ಷಯಃ ।
ನಿವಸಂತಿ ದ್ವಿಜಾ ಯತ್ರ ವಂದ್ಯಾಸ್ಸರ್ವಮಹೀಭುಜಾಂ ॥ ೨೩೪ ॥

ಚತುರ್ವರ್ಗಫಲೋಪೇತಂ ಚಾತುರಾಶ್ರಮ್ಯಮುಜ್ಜ್ವಲಂ
ಚಾತುರ್ವರ್ಣ್ಯಮಿಹೈವಾಸ್ತೇ ಚತುರಾಮ್ನಾಯಮಾರ್ಗಗಂ ॥ ೨೩೫ ॥

ಕ್ರಿಮಿಕೀಟಪತಂಗಾನಾಂ ವಿನಾ ಜ್ಞಾನಸಮಾಧಿಭಿಃ ।
ಅತ್ರ ನಿರ್ವಾಣಪದವೀ ಸುಲಭಾಸ್ತಿ ವನೇಚರ ॥ ೨೩೬ ॥

ಏನಃಪಾನಘಟೀರ್ಭೋಕ್ತುಂ ತರಂಗಾನಂಕುಶಾನಿವ ।
ಬಿಭರ್ತಿ ಸರಯೂತೋಯಂ ನಿಶ್ರೇಣಿರ್ಭೋಗಮೋಕ್ಷಯೋಃ ॥ ೨೩೭ ॥

---

೨೩೪. ಜನಗಳ ದೈನ್ಯವೆಂಬ ಮೊಸಳೆಯಿಂದ ಕೂಡಿರುವ ಮಹಾಸಮುದ್ರವನ್ನು ಕುಡಿಯುವುದರಲ್ಲಿ ಇವರು ಆಗಸ್ತ್ಯರುಗಳು. ಎಂದರೆ ಜನಗಳಿಗೆ ಸಹಾಯ ಮಾಡಿ ಅವರ ದೈನ್ಯವನ್ನು ನಾಶಮಾಡುವವರು ಎಲ್ಲಾ ರಾಜರುಗಳಿಗೂ ನಮಸ್ಕರಿಸಲು ಯೋಗ್ಯರಾದ ಬ್ರಾಹ್ಮಣರು ಆ ಅಯೋಧ್ಯೆಯಲ್ಲಿ ವಾಸಿಸುತ್ತಿರುವರು.

೨೩೫ ಈ ಪಟ್ಟಣವು ಚತುರ್ವರ್ಗವಾದ ಮೋಕ್ಷದ ಫಲವನ್ನು ಕೊಡುವುದರಿಂದ ಕೂಡಿಕೊಂಡಿರುವುದು. ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸನ್ಯಾಸವೆಂಬ ನಾಲ್ಕು ಆಶ್ರಮಗಳುಳ್ಳ ಜನಗಳಿಂದಲೂ ಕೂಡಿಕೊಂಡು ರಮ್ಯವಾಗಿರುವುದು. ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣಗಳಿಂದಲೂ ಕೂಡಿರುವುದು. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ ವೇದಗಳೆಂಬ ನಾಲ್ಕು ವೇದಗಳೂ ಇಲ್ಲಿ ಎಲ್ಲರಿಗೂ ದಾರಿಯನ್ನು ತೋರಿಸುತ್ತಿವೆ. ಎಂದರೆ ನಾಲ್ಕು ವೇದಗಳು ಈ ಪಟ್ಟಣದಲ್ಲಿ ಪಾಠಪ್ರವಚನಗಳಿಂದ ಕೂಡಿಕೊಂಡಿವೆ.

೨೩೬. ಅಜ್ಞಾನಿಗಳಾದ ಕ್ರಿಮಿಗಳು ಪಕ್ಷಿಗಳು, ಇವುಗಳಿಗೂ ಕೂಡ ಜ್ಞಾನದ ಅಥವಾ ಸಮಾಧಿಯ ಪ್ರಾಪ್ತಿಯಿಲ್ಲದೆ ಈ ಪಟ್ಟಣದಲ್ಲಿ ಮೋಕ್ಷವೆಂಬುದು ಸುಲಭವಾಗಿ ಸಿಕ್ಕುತ್ತದೆ.

೨೩೭. ಭೋಗ ಮತ್ತು ಮೋಕ್ಷಗಳಿಗೆ ಏಣಿಯಂತಿರುವ ಈ ಸರಯೂ ನದಿಯು ನೀರು ಪಾಪವೆಂಬ ನೀರಿನ ಬಿಂದಿಗೆಗಳನ್ನು ಕುಡಿಯಲು ತನ್ನಲ್ಲಿ ಅಲೆಗಳನ್ನು ಅಂಕುಶಗಳಂತೆ ಧರಿಸಿರುತ್ತದೆ.

ಪಶ್ಯ ಸ್ಫಾಟಿಕಸೋಪಾನನಿವಿಷ್ಟಮುನಿಸಂಸ್ತುತಾಂ ।
ಸರಯೂನದೀಮುತ್ತರೀಯಾಂ ಕೃತಾಮಿವ ಪುರಾನಯಾ ॥ ೨೩೮ ॥

ಇಂದ್ರನೀಲಮಹಾತುಂಗಪ್ರತೋಳೀಚಾರುದರ್ಶನಃ ।
ರಾಮಚಂದ್ರಸ್ಯ ದಿವ್ಯೋಽಯಂ ಪ್ರಾಸಾದಸ್ತುಂಗತೋರಣಃ ॥ ೨೩೯ ॥

ಪ್ರತೋಳೀ ಯಸ್ಯ ಘಟಿತಾ ಕಾಶ್ಮೀರೈರುಪಲೈರಲಂ ।
ಸೀತಾಯಾಶ್ಚ ಮಹಾನೇಷ ಪ್ರಾಸಾದೋ ರತ್ನತೋರಣಃ ॥ ೨೪೦ ॥

ನಾನಾರತ್ನೈರ್ಮಂಡಿತಶ್ಚ ಹೇಮಸ್ತಂಭವಿರಾಜಿತಃ ।
ಸ್ಫಾಟಿಕೈರುಪಲೈಶ್ಚಿತ್ರಸ್ಸರಯೂತೀರಸಂಶ್ರಿತಃ ॥ ೨೪೧ ॥

---

೨೩೮. ಸ್ಫಟಿಕ ಶಿಲೆಯ ಸೋಪಾನಗಳ ಮೇಲೆ ಕುಳಿತುಕೊಂಡು ಮುನಿಗಳಿಂದ ಹೊಗಳಿಸಿಕೊಳ್ಳುತ್ತಿರುವ ಉತ್ತರವಾಹಿನಿಯಾದ ಸರಯೂ ನದಿಯನ್ನು ನೋಡು. ಇಂತಹ ಸರಯೂ ನದಿಯನ್ನು ಪೂರ್ವದಲ್ಲಿ ಅಯೋಧ್ಯೆಯು ಹೊದ್ದುಕೊಂಡಿರುವಂತಿದೆ.

೨೩೯. ಇಂದ್ರ ನೀಲಮಣಿಗಳಿಂದ ರಾಜಿಸುವ ಕೋಟೆಗಳು ಪಟ್ಟಣದ ಸುತ್ತಲೂ ದಿವ್ಯವಾಗಿ ಕಾಣಿಸುತ್ತಿವೆ. ಮನೋಹರವಾದ ಶ್ರೀರಾಮಚಂದ್ರನ ಅರಮನೆಯ ಹೆಬ್ಬಾಗಿಲು ಸುಂದರವಾಗಿ ಕಾಣುತ್ತಿರುವುದು. ಅಲ್ಲಿ ನೋಡು.

೨೪೦. ಕಾಶ್ಮೀರದಿಂದ ತಂದ ಕಲ್ಲುಗಳಿಂದ ಚಿತ್ರಿತವಾಗಿ ಮಾಡಿರುವ ಈ ಕೋಟೆಯು ಕಾಣುತ್ತಿರುವುದು. ನೋಡು. ಈ ದೊಡ್ಡ ಅರಮನೆಯು ಸೀತಾದೇವಿಯದು. ಇದಕ್ಕೆ ರತ್ನದ ಹೆಬ್ಬಾಗಿಲಿರುವುದು. ಇದು ಸರಯೂ ನದಿಯವರೆಗೂ ಇರುವುದು.

೨೪೧. ಇದು ಅನೇಕ ರತ್ನಗಳಿಂದ ಅಲಂಕೃತವಾಗಿರುವುದು. ಚಿನ್ನದ ಕಂಬಗಳಿಂದ ಪ್ರಕಾಶಿತವಾಗಿರುವುದು. ಸ್ಫಟಿಕ ಶಿಲೆಯನ್ನು ಎಲ್ಲೆಯಲ್ಲಿಯೂ ರಮ್ಯವಾಗಿರುವಂತೆ ಸೇರಿಸಿರುವರು. ಇದರ ಉದ್ದವು ಸರಯೂ ನದಿಯವರೆಗೂ ಇರುವುದು.

ರಾಮತೀರ್ಥಸಮೀಪೇಯಂ ಸೀತಾರಾಮಸ್ಯ ವೈ ಪರಃ ।
ಪ್ರಾಸಾದೋ ವಿಮಲೋ ಭಾತಿ ತಪ್ತಕಾಂಚನನಿರ್ಮಿತಃ ॥ ೨೪೨ ॥

ಉತ್ತಪ್ತಜಾಂಬೂನದರತ್ನಕುಂಭಃ।
ಪ್ರವಾಲವೈಢೂರ್ಯನಿಬದ್ಧಭೂಮಿಃ
ಹೇಮಪ್ರತೋಳೀರಚಿತಸ್ಸ ಏಷ ।
ಪ್ರಾಸಾದವರ್ಯೋಽಸ್ತಿ ಹಿ ಲಕ್ಷ್ಮಣಸ್ಯ ॥ ೨೪೩ ॥

ಚಾತುರ್ಯಂ ಯತ್ರ ವಿಶ್ರಾಂತಂ ಸಕಲಂ ವಿಶ್ವಕರ್ಮಣಃ ।
ಸೋಽಯಂ ಭರತರಾಜಸ್ಯ ಪ್ರಾಸಾದೋ ಹೇಮತೋರಣಃ ॥ ೨೪೪ ॥

ತಥಾ ದೇದೀಪ್ಯಮಾನೋಽಯಂ ರತ್ನಭಿತ್ತಿವಿನಿರ್ಮಿತಃ ।
ಪ್ರಾಸಾದೋ ದೃಶ್ಯತೇ ರಮ್ಯಶ್ಶತ್ರುಘ್ನಸ್ಯ ಶುಭಾವಹಃ ॥ ೨೪೫ ॥

---

೨೪೨. ಸೀತಾರಾಮನ ಮತ್ತೊಂದು ಈ ಅರಮನೆಯು ರಾಮತೀರ್ಥಕ್ಕೆ ಹತ್ತಿರದಲ್ಲಿಯೇ ಇದ್ದುಕೊಂಡು ಪ್ರಕಾಶಿಸುತ್ತಿರುತ್ತದೆ. ಇದು ಬಹು ನಿರ್ಮಲವಾಗಿರುವುದು. ಇವುಗಳನ್ನು ಪರಿಶುದ್ಧವಾದ ಚಿನ್ನದಿಂದಲೇ ಮಾಡಿರುವರು. ವಿಚಿತ್ರವಾದ ಪತಾಕೆಗಳಿಂದಲೂ, ಕಲಶಗಳಿಂದ ಬಹು ರಮ್ಯವಾಗಿರುವುದು.

೨೪೩. ಇಲ್ಲಿ ನೋಡು ಇದು ಲಕ್ಷ್ಮಣಸ್ವಾಮಿಯ ಅರಮನೆಯು ಪರಿಶುದ್ಧವಾದ ಚಿನ್ನದ ಕಲಶವನ್ನು ಹಾಕಿರುವರು. ಅದಕ್ಕೆ ರತ್ನಗಳನ್ನು ಅಳವಡಿಸಿರುವರು. ನೆಲಕ್ಕೆ ಹವಳವನ್ನೂ, ವೈಡೂರ್ಯವನ್ನೂ ಹಾಕಿ ಚಿತ್ರಿತವಾಗಿ ಮಾಡಿರುವರು ಚಿನ್ನದ ಕೋಟೆಯು ಸುತ್ತಲೂ ಇರುವುದು.

೨೪೪. ಇಲ್ಲಿ ಕಾಣಿಸುತ್ತಿರುವುದು ಭರತನ ಅರಮನೆಯು ಇದರಲ್ಲಿ ವಿಶ್ವಕರ್ಮನ ಸಕಲವಾದ ಚಾತುರ್ಯವೂ ತೋರಿಸಲ್ಪಟ್ಟಿರುವುದು. ಚಿನ್ನದ ಹೆಬ್ಬಾಗಿಲು ಕಾಣಿಸುತ್ತಿರುವುದು.

೨೪೫. ಇಲ್ಲಿ ಕಾಣಿಸುತ್ತಿರುವುದು ಶತ್ರುಘ್ನನ ಅರಮನೆಯು. ಈ ಮನೆಯನ್ನೂ ರತ್ನದ ಕಲ್ಲುಗಳನ್ನು ಹಾಕಿದ ಗೋಡೆಗಳಿಂದ ಕಟ್ಟಿರುವರು ಬಹು ರಮ್ಯವಾಗಿರುವುದು.

ಸ್ಫಾಟಿಕೈರ್ಭಿತ್ತಿಭಿಶ್ಚಿತ್ರೈಃ ಪ್ರೋಚ್ಚೈಃ ಕನಕರೇಖಿತಃ ।
ಪ್ರಾಸಾದೋ ವಾಯುಪುತ್ರಸ್ಯ ದೃಶ್ಯತೇಯಂ ಮಹೋಜ್ಜ್ವಲಃ ॥ ೨೪೬ ॥

ಯ ಏಷ ಮುಕ್ತಾಫಲಜಾಲಶೋಭಿಸುದರ್ಶನಾಂಕಃ ಖಗರಾಜಕೇತುಃ ।
ಕುಶಸ್ಯ ರಮ್ಯಸ್ತ್ವಯಮಾವಿರಾಸ್ತೇ ಪ್ರಾಸಾದಕುಂಭಃ ಕಿಮು ಬಾಲಸೂರ್ಯಃ

ಪ್ರಾಸಾದೋಯಂ ಲವಸ್ಯಾತ್ರ ಬಹುರತ್ನವಿರಾಜಿತಃ ।
ಯತ್ರ ಚಿತ್ರಾಣ್ಯನೇಕಾನಿ ಮೋಹಯಂತಿ ಮೃಗೀದೃಶಾಂ ॥ ೨೪೮ ॥

ಚಕ್ಷೂಂಷಿ ಜಾತರಾಗಾಣಿ ಯೋಗಿನಾಮಪಿ ಮಾನಸಂ ।
ವಿನ್ಯಸ್ತರತ್ನವಿನ್ಯಾಸಂ ಶ್ಯಾತಕುಂಭಭುವೋ ಬಹಿಃ ॥ ೨೪೯ ॥

ಹೇಷಯಂತೀವ ಸತತಂ ರತ್ನಸಾನುಮಹಾಪ್ರಭಾಂ ।
ರತ್ನಪ್ರಾಸಾದಸಂಯುಕ್ತಾಮಯೋಧ್ಯಾಂ ಪಶ್ಯ ಸುಪ್ರಭಾಂ ॥ ೨೫೦ ॥

---

೨೪೬. ಇಲ್ಲಿ ಕಾಣಿಸುತ್ತಿರುವುದು ಹನುಮಂತನ ಮನೆಯು. ಇದರ ಗೋಡೆಗಳನ್ನೂ ಸ್ಫಟಿಕ ಶಿಲೆಗಳಿಂದ ಕಟ್ಟಿರುವರು. ಎತ್ತರವಾಗಿರುವುದು. ಅದಕ್ಕೆ ಅಲ್ಲಲ್ಲಿ ಚಿನ್ನದ ರೇಕುಗಳನ್ನು ಸೇರಿಸಿರುವರು. ಇದು ರಮ್ಯವಾಗಿರುವುದು.

೨೪೭. ಇಲ್ಲಿಕಾಣಿಸುತ್ತಿರುವ ಮನೆಯು ಕುಶನದು. ಇದು ಮುತ್ತಿನ ಸರಗಳಿಂದ ಕೂಡಿಕೊಂಡು ಇರುವುದು. ಗರುಡನ ಧ್ವಜವನ್ನುಎತ್ತಿ ಕಟ್ಟಿರುವರು. ಇದರ ಮೇಲಿರುವ ಕಲಶವು ಬಾಲಸೂರ್ಯನಂತೆ ಪ್ರಕಾಶಿಸುತ್ತಿರುವುದು.

೨೪೮. ಇದು ಲವನ ಅರಮನೆಯು. ರತ್ನಗಳಿಂದ ಕೂಡಿಕೊಂಡು ಪ್ರಕಾಶಿಸುತ್ತಿರುವುದು. ಇದರಲ್ಲಿ ಅನೇಕ ಬಗೆಯಾದ ಚಿತ್ರಗಳಿವೆ. ಇವು ಹೆಂಗಸರಿಗೆ ಬಹು ಸಂತೋಷಕರಗಳಾಗಿವೆ.

೨೪೯. ಇದರ ಹೊರಗಿರುವ ಚಿನ್ನದಿಂದ ರಚಿತವಾದ ಪ್ರದೇಶಗಳಲ್ಲಿ ಅಲ್ಲಲ್ಲಿಯೇ ರತ್ನವನ್ನು ಸೇರಿಸಿ ಕೆತ್ತಿರುವರು. ಇವುಗಳು ಕಣ್ಣುಗಳನ್ನು ತಮ್ಮ ಕಾಂತಿಯಿಂದ ಕೆಂಪಗೆ ಮಾಡುತ್ತವೆ. ಅಲ್ಲದೆ ಯೋಗಿಗಳ ಮನಸ್ಸನ್ನು ಕೂಡ ಕಲಕಿಸುತ್ತವೆ.

೨೫೦. ಇದು ರತ್ನದ ಕೋಟೆಗಳಿಂದಲೂ, ರತ್ನದ ತಪ್ಪಲುಗಳಿಂದಲೂ ಕೂಡಿ ಮಹಾ ಪ್ರಭೆಯುಳ್ಳ ಮೇರು ಪರ್ವತವನ್ನೂ ಕೂಡ ಹಾಸ್ಯಮಾಡುತ್ತಿರುವುದು.

ಯದಂಗಣಂ ಕ್ಷಾಳಯತೀ ನದೀಯಂ ।
ಸ್ವೀಯೈರ್ಜಲೈಃ ಸೋಯಮನರ್ಘ್ಯರತ್ನೈಃ
ಅಭ್ರಂಕಷೈರ್ಹೇಮಮಯೈಃ ಸ್ವಕುಂಭೈಃ
ವಿರಾಜಿತೋಯಂ ಖಲು ಚಿತ್ರಕೇತೋಃ ॥ ೨೫೧ ॥

ದಿವ್ಯಪ್ರವಾಳಘಟಿತೇ ಕಪಾಟೇ ಯತ್ರ ಚಂಚಲೇ ।
ಪ್ರಾಸಾದೋಯಮಂಗದಸ್ಯ ರುಕ್ಮಭಿತ್ತಿವಿನಿರ್ಮಿತಃ ॥ ೨೫೨ ॥

ಗರುಡೋದ್ಗಾರಘಟಿತಪ್ರತೋಳೀಪರಿಶೋಭಿತಃ ।
ಪ್ರಾಸಾದಃ ಪುಷ್ಕರಸ್ಯಾಯಂ ನಯನಾನಂದದೋ ನೃಣಾಂ ॥ ೨೫೩ ॥

ವಿಶುದ್ಧಜಾಂಬೂನದದಿವ್ಯ ಭೂಮಿಃ
ಸತ್ಪತಾಕಸ್ತ್ರಿದಶಾಭಿವಂದ್ಯಃ ।
ಪ್ರಾಸಾದ ಏಷಃ ಪರಮೋ ಮನೋಜ್ಞಃ
ತಕ್ಷಸ್ಯ ವೀರಸ್ಯ ಮಹಾರ್ಹ ವಿಭಾತಿ ॥ ೨೫೪ ॥

---

೨೫೧. ಇಲ್ಲಿ ಕಾಣುತ್ತಿರುವುದು ಚಿತ್ರಕೇತುವಿನ ಮನೆಯು. ಸರಯೂ ನದಿಯು ತನ್ನ ಅಲೆಗಳಿಂದ ಈ ಮನೆಯ ಅಂಗಳವನ್ನು ತೊಳೆಯುತ್ತಿರುವುದು. ಇಂತಹ ಈ ಚಿತ್ರಕೇತುವಿನ ಮನೆಯು ತನ್ನಲ್ಲಿರುವ ಪ್ರಕಾಶಮಾನವಾದ ರತ್ನಗಳಿಂದಲೂ, ಚಿನ್ನದ ಕಲಶಗಳಿಂದಲೂ ಆಕಾಶವನ್ನು ಚುಚ್ಚುತ್ತಿರುವಂತೆ ಕಾಣಿಸುತ್ತಿರುವುದು.

೨೫೨ ಇತ್ತ ಕಾಣುತ್ತಿರುವುದು. ಅಂಗದನ ಮುನೆಯು. ಇದರ ಕದಗಳು ಹವಳದಿಂದ ಕೂಡಿಕೊಂಡು ಯಾವಾಗಲೂ ಅಲ್ಲಾಡುತ್ತಲೇ ಇರುವುವು. ಇದರ ಗೋಡೆಗಳೂ ಕೂಡ ಚಿನ್ನದಿಂದಲೇ ನಿರ್ಮಿತವಾಗಿವೆ.

೨೫೩. .ಇತ್ತ ಕಾಣುತ್ತಿರುವುದು ಪುಷ್ಕರನ ಮನೆಯು ಇದರ ಸುತ್ತಲೂ ಗಾರುಡ ಮಣಿಯ ಪೌಳಿಯ ಗೋಡೆಗಳಿರುವುವು. ಜನಗಳ ಕಣ್ಣಿಗೆ ಮನೋಹರವಾಗಿ ಕಾಣುತ್ತಿರುವುದು.

೨೫೪. ಇದು ತಕ್ಷನ ಮನೆಯು. ಇದರ ನೆಲಕ್ಕೆಲ್ಲಾ ಶುದ್ಧವಾದ ಚಿನ್ನವನ್ನೇ ಹಾಕಿರುವರು. ಮನೆಯ ಮೇಲೆ ಪತಾಕೆಯು ಹಾರಿ ಆಡುತ್ತಿರುವುದು. ಇದು ದೇವತೆಗಳಿಗೂ ಗೌರವಾರ್ಹವಾಗಿರುವುದು. ಈ ಮನೆಯು ಬಹು ವಿಶಾಲವಾಗಿಯೂ ರಮ್ಯವಾಗಿಯೂ ಕಾಣುತ್ತಿರುವುದು.

ಯಸ್ಯಾಧಿಭೂಮಿಂ ನವರತ್ನಸಿಂಹಃ
ತ್ರಿಭಿಃಪದೈರ್ನೋ ವಿಜಿತಾಸ್ತ್ರಯೋಽಪಿ ।
ಲೋಕಶ್ಚತುರ್ಥೋ ನ ಹಿ ದೃಶ್ಯತೇತಃ
ಪದಂ ಸಮುದ್ಯಮ್ಯ ಕಿಮಾವಿರಾಸ್ತೇ ॥ ೨೫೫ ॥

ಅಘೌಘಮತ್ತಕರಿಣಾಂ ಘಟಾಂ ದಾರಯಿತುಂ ಕಿಮು ।
ಉದಸ್ತಚರಣೋ ಯಸ್ಯ ರತ್ನಸಿಂಹೋ ವಿರಾಜತೇ ॥ ೨೫೬ ॥

ಸೋಽಯಂ ಹೇಮಭಿತ್ತಿಮಯಃ ಪ್ರಾಸಾದಃ ಪ್ರೋನ್ನತಶ್ಶುಭಃ ।
ಸುಬಾಹೋಃ ಪಶ್ಯ ಭೋ ಭಿಲ್ಲ ರತ್ನಸಾನುವಿರಾಜಿತಃ ॥ ೨೫೭ ॥

ರತ್ನಪ್ರವಾಳಸ್ಫಟಿಕನೀಲಕಾಶ್ಮೀರನಿರ್ಮಿತಃ ।
ಪ್ರಾಸಾದೋಽಯಂ ಯೂಪಕೇತೋರ್ಮಹಾನ್ ದೀಪ್ತಿಮಯಶ್ಶುಭಃ ॥

---

೨೫೫. ಈ ಮನೆಯ ಮೇಲುಗಡೆಯಲ್ಲಿ ನವರತ್ನದಿಂದ ಮಾಡಿರುವ ಒಂದು ಸಿಂಹವಿರುವುದು. ಅದು ಮೂರು ಕಾಲುಗಳನ್ನು ಊರಿಕೊಂಡು ಒಂದು ಕಾಲನ್ನು ಮೇಲಕ್ಕೆತ್ತಿಕೊಂಡಿರುವುದು. ಇದನ್ನು ನೋಡಿದರೆ ಈ ಸಿಂಹವು ನನ ಮೂರುಕಾಲುಗಳಿಂದಲೂ ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಮೂರು ಲೋಕಗಳನ್ನೂ ಜಯಿಸಿ ತುಳಿದುಕೊಂಡು ನಾಲ್ಕನೆಯ ಕಾಲಿಗೆ ಯಾವ ಲೋಕವೂ ಇಲ್ಲವಲ್ಲ ಎಂದು ಆ ಕಾಲನ್ನು ಎತ್ತಿಕೊಂಡಿರುವುದು ಎಂಬಂತೆ ಕಾಣುತ್ತಿರುವುದು.

೨೫೬. ಅಲ್ಲದೆ ಪಾಪಗಳ ಗುಂಪೆಂಬ ಆನೆಗಳ ಗುಂಪನ್ನು ಸೀಳಲು ಕಾಲನ್ನು ಮೇಲಕ್ಕೆ ಎತ್ತಿದೆಯೋ ಎಂಬಂತೆ ಈ ರತ್ನಸಿಂಹವು ಕಾಲನ್ನು ಎತ್ತಿಕೊಂಡು ಪ್ರಕಾಶಿಸುತ್ತಿರುವುದು.

೨೫೭. ಎಲೈ ಭಿಲ್ಲನೆ ಇತ್ತ ಕಾಣುವುದು ಸುಬಾಹುವಿನ ಮನೆಯು. ಚಿನ್ನದ ಗೋಡೆಗಳಿಂದ ಕೂಡಿಕೊಂಡು ಬಹು ಮನೋಹರವಾಗಿರುವುದು, ಇದರ ಗೋಡೆಗಳ ಬುಡಕ್ಕೆಲ್ಲಾ ರತ್ನಗಳನ್ನು ಹಾಕಿರುವರು.

೨೫೮. ಇತ್ತ ಕಾಣಿಸುತ್ತಿರುವುದು ಯೂಪಕೇತುವಿನ ಮನೆಯು. ರತ್ನ, ಹವಳ, ಸ್ಫಟಿಕ, ನೀಲ, ಕೆಂಪು, ಮುಂತಾದ ರತ್ನಗಳಿಂದ ನಿರ್ಮಿತವಾಗಿ ಬಹು ಕಾಂತಿಯುಳ್ಳದ್ದಾಗಿರುವುದು.

ಕಲ್ಹಾರೈರುತ್ಪಲೈಃಶ್ಯೋಣೈರರವಿಂದೈಶ್ಶತಚ್ಛದೈಃ ।
ವಿರಾಜಿತಂ ಪಾಪಹರಂ ರಾಮತೀರ್ಥಂ ಪ್ರದೃಶ್ಯತೇ ॥ ೨೫೯ ॥

ಇಂದೂತ್ಪಲೈರವಿದಲೈರ್ನಿಬದ್ಧಾ ಯಸ್ಯ ಭೂಮಯಃ ।
ಹರಂತಿ ಗ್ರೀಷ್ಮಸಂತಾಪಂ ನಿಷ್ಯಂದತ್ಶೀಕರೋತ್ಕರೈಃ ॥ ೨೬೦ ॥

ಅಮಂದಕುರುವಿಂದಾನಾಂ ವಿನ್ಯಾಸೈರ್ಯತ್ರ ಚಾರುಭಿಃ ।
ಮುಹ್ಯಂತಿ ಶುಕಚೇತಾಂಸಿ ಮುದ್ಗದಾಡಿಮಶಂಕಯಾ ॥ ೨೬೧ ॥

ಏವಂ ಪಶ್ಯ ಶುಭಾಂ ರಮ್ಯಾಂ ಪತಾಕಾಭಿರ್ವಿರಾಜಿತಾಂ ।
ಭಿಲ್ಲಾಯೋಧ್ಯಾಂ ಮುಕ್ತಿಪುರೀಂ ದ್ವಿತೀಯಾಮಮರಾವತೀಂ ॥ ೨೬೨ ॥

---

೨೫೯. ಇತ್ತ ರಾಮತೀರ್ಥವು ಕಾಣುತ್ತಿರುವುದು. ನೋಡು, ಅದರಲ್ಲಿ ಕಲ್ಹಾರಗಳೂ, ಉತ್ಪಲಗಳೂ, ಅರವಿಂದಗಳೂ, ನೂರು ಎಸಳುಗಳುಳ್ಳ ಕುಶೇಶಯುಗಳೂ ಕಾಣುತ್ತಿರುವುವು. ಪಾಪಗಳನ್ನು ನಾಶಮಾಡತಕ್ಕದ್ದು.

೨೬೦. ಈ ರಾಮತೀರ್ಥದ ಸೋಪಾನಗಳನ್ನು ಚಂದ್ರಕಾಂತ ಶಿಲೆಗಳಿಂದಲೇ ಕಟ್ಟಿರುವರು. ಈ ಸೋಪಾನಗಳು ಗ್ರೀಷ್ಮಕಾಲದಲ್ಲಿ ಚಂದ್ರ ಕಿರಣಗಳಿಂದ ನೀರನ್ನು ಸ್ರವಿಸುತ್ತ ಆ ತುಂತುರುಗಳಿಂದ ಆ ಬೇಸಗೆಯ ತಾಪವನ್ನು ಹೋಗಲಾಡಿಸುವುದು.

೨೬೧. ಈ ಸೋಪಾನಗಳಿಗೆ ಕುರುವಿಂದ ರತ್ನಗಳನ್ನು ಅಲ್ಲಲ್ಲಿಯೇ ಸೇರಿಸಿರುವರು. ಇವು ಗಿಣಿಗಳಿಗೆ ದಾಳಿಂಬೆಯ ಮಣಿಗಳಂತೆ ಕಾಣುತ್ತ ಅವುಗಳ ಮನಸ್ಸನ್ನು ಸಂದೇಹಪಡಿಸಿ ಮೋಸಗೊಳಿಸುವಂತಿವೆ.

೧೬೨. ಎಲೈ ಭಿಲ್ಲನೆ! ಈ ರೀತಿಯಿಂದ ರಮ್ಯವಾಗಿಯೂ ಮಂಗಳಕರವಾಗಿಯೂ ಪತಾಕೆಗಳಿಂದ ಪ್ರಕಾಶಿಸುತ್ತಲೂ ಇರುವ ಮುಕ್ತಿಯನ್ನು ಕೊಡತಕ್ಕ ಈ ಅಯೋಧ್ಯೆಯು ಎರಡನೆಯ ಅಮರಾವತಿಯಂತೆ ಕಾಣುತ್ತಿರುವುದು.

ಯತ್ರ ಕಾರ್ತಸ್ವರಘಟಾಃ ಪ್ರತೋಳೀಶಿರಸಿ ಸ್ಥಿತಾಃ
ರಾಮಂ ದ್ರಷ್ಟುಮನಂತಾಸ್ತಂ ಪ್ರಾಪ್ತಾ ಸೂರ್ಯಾ ಇವಾಬಭುಃ ॥ ೨೬೩ ॥

॥ ನೃಸಿಂಹ ಉವಾಚ ॥

ಏವಮುಕ್ತ್ವಾ ಕರ್ಕಶೇನ ಪತ್ನ್ಯಾ ಕಾರ್ಪಟಿಕೇನ ಚ ।
ಸಹಿತಶ್ಚ ತದಾ ಶಂಭುಸ್ತಾಂ ಪುರೀಂ ಸಂವಿವೇಶ ಸಃ ॥ ೨೬೪ ॥

ರಾಮತೀರ್ಥಂ ತತೋ ಗತ್ವಾ ಕೃತ್ವಾ ಕ್ಷೌರಾದಿಕಂ ವಿಧಿಂ ।
ಉಪೋಷ್ಯ ದಿನಮೇಕಂ ಹಿ ತೀರ್ಥೇ ಶ್ರಾದ್ಧಂ ಚಕಾರ ಸಃ ॥ ೨೬೫ ॥

ಅಮಾವಾಸ್ಯಾಂ ಶುಭಾಂ ಚೈತ್ರೇ ಪ್ರಾಪ್ತಾಂ ಜ್ಞಾತ್ವಾ ದ್ವಿಜೋತ್ತಮಃ ।
ಮುಕ್ತ್ಯರ್ಥಂ ಸ್ವಪಿತುಶ್ಚಕ್ರೇ ಹ್ಯನ್ನದಾನಂ ಯಥಾವಿಧಿ ॥ ೨೬೬ ॥

---

೨೬೩. ಈ ಅಯೋಧ್ಯೆಯ ಕೋಟೆಯ ಗೋಡೆಗಳ ಮೇಲೆ ಅಲ್ಲಲ್ಲಿಯೇ ಅನೇಕವಾಗಿ ಚಿನ್ನದ ಕಲಶಗಳನ್ನು ಇಟ್ಟಿರುವರು. ಇವನ್ನು ನೋಡಿದರೆ ರಾಮನನ್ನು ನೋಡಲು ಬಂದಿರುವ ಬಹು ಮಂದಿ ಸೂರ್ಯರಂತೆ ಪ್ರಕಾಶಿಸುತ್ತಿರುವುವು.

೧೬೪. ನರಸಿಂಹನು ಹೇಳಿದನು:—ಆ ಶಂಭುಶರ್ಮನು ಈ ರೀತಿಯಾಗಿ ಹೇಳುತ್ತ ಹೆಂಡತಿಯೊಡನೆಯೂ ಆ ಭಿಲ್ಲನಾದ ಕರ್ಕಶನೊಡನೆಯೂ ಕೂಡಿಕೊಂಡು ಆ ಪಟ್ಟಣವನ್ನು ಪ್ರವೇಶಿಸಿದನು.

೨೬೫. ಅಲ್ಲಿಂದ ರಾಮತೀರ್ಥಕ್ಕೆ ಹೋಗಿ ಅಲ್ಲಿ ಕ್ಷೌರವೇ ಮುಂತಾದ ಕ್ಷೇತ್ರಕರ್ಮಗಳನ್ನು ಮಾಡಿಕೊಂಡು ಒಂದು ದಿವಸ ಉಪವಾಸವಿದ್ದು ಆ ತೀರ್ಥದಲ್ಲಿ ತೀರ್ಥಶ್ರಾದ್ಧವನ್ನು ಮಾಡಿದನು.

೨೬೬. ಆಗ ಚೈತ್ರಬಹುಳ ಅಮಾವಾಸ್ಯೆಯವರೆಗೂ ಇದ್ದು ತನ್ನ ತಂದೆಗೆ ಮುಕ್ತಿಯು ಬರುವುದಕ್ಕೋಸ್ಕರ ಶಾಸ್ತ್ರದಲ್ಲಿ ಹೇಳಿರುವಂತೆ ಅನ್ನದಾನವನ್ನು ಮಾಡಿದನು.

ತಚ್ಚೈತ್ರಮಾಸೇ ರಜನೀಶಸಂಕ್ಷಯೇ ।
ದತ್ತಂ ಪಿತುರ್ಯಚ್ಛುಭದಂ ಮನೋಹರಂ
ವಿಪ್ರೇಣ ಚಾನ್ನಂ ಪಥಿಕಸ್ಯ ವಾಕ್ಯತಃ
ತಸ್ತಸ್ಮಾತ್ಪಿಶಾಚಸ್ಸುರಸದ್ಮನಿ ಸ್ಥಿತಃ ॥ ೨೬೭ ॥

ಅಯೋಧ್ಯಾಯಾಂ ತತಶ್ಶಂಭುಃ ಕೃತ್ವಾ ಚೈತ್ರಾವಗಾಹನಂ ।
ಉದ್ಯಾಪನವಿಧಿಂ ಚಾಪಿ ಯಥೋಕ್ತಂ ಚ ಚಕಾರ ಸಃ ॥ ೨೬೮ ॥

ಕರ್ಕಶೋಽಪಿ ಮಧೌ ಸ್ನಾತ್ವಾ ಮುಕ್ತ್ವಾ ಪಾಪೌಘಮಾದರಂ ।
ಅಯೋಧ್ಯಾನಗರೀಮಧ್ಯೇ ಸಾಧುವೃತ್ತ್ಯಾವಸಚ್ಚಿರಂ ॥ ೨೬೯ ॥

ಶ್ರೀರಾಮಚಿಂತನಂ ಕುರ್ವನ್ನಿನಾಯಾಯುಷ್ಯಸಂಕ್ಷಯಂ ।
ತತಃ ಪ್ರಾಪ ಹರೇರ್ಲೋಕಮಯೋಧ್ಯಾಮರಣೇನ ಸಃ ॥ ೨೭೦ ॥

---

೨೬೭. ಚೈತ್ರಮಾಸದ ಅಮಾವಾಸ್ಯೆಯ ದಿವಸ ಪಿತೃಗಳಿಗೆ ಕೊಟ್ಟದ್ದು ಮನೋಹರವಾಗಿಯೂ ಶುಭವಾಗಿಯೂ ಆಗುವುದು. ಈ ಶಂಭುಶರ್ಮನು ಆ ಪ್ರಯಾಣಿಕನ ಮಾತಿನಂತೆ ಅನ್ನದಾನವನ್ನು ಮಾಡಲು ಆತನ ತಂದೆಯಾದ ಪಿಶಾಚಿಯು ಸ್ವರ್ಗವನ್ನು ಹೊಂದಿದನು.

೨೬೮. ಅನಂತರ ಶಂಭುವು ಅಯೋಧ್ಯೆಯಲ್ಲಿ ಚೈತ್ರಮಾಸದ ವ್ರತ ವನ್ನು ಮಾಡಿ ಉದ್ಯಾಪನ ವಿಧಿಯನ್ನು ಕೂಡ ಸರಿಯಾದ ರೀತಿಯಲ್ಲಿ ಮಾಡಿದನು.

೨೬೯. ಈ ಭಿಲ್ಲನಾದ ಕರ್ಕಶನೂ ಕೂಡ ಚೈತ್ರಮಾಸದ ಸ್ನಾನವನ್ನು ಆ ರಾಮ ತೀರ್ಥದಲ್ಲಿ ಮಾಡಿ ಪಾಪಗಳನ್ನು ಕಳೆದುಕೊಂಡು ಆ ಅಯೋಧ್ಯೆಯಲ್ಲಿಯೇ ಬಹುಕಾಲ ಸಾಧುವಾದ ವೃತ್ತಿಯಿಂದಿದ್ದನು.

೨೭೦. ಈ ರೀತಿಯಿರುತ್ತ ಶ್ರೀರಾಮನನ್ನೇ ಸ್ಮರಿಸುತ್ತ ತನ್ನ ಆಯುಸ್ಸನ್ನು ಕಳೆದನು. ಅನಂತರ ಆ ಅಯೋಧ್ಯೆಯಲ್ಲಿಯೇ ಈ ಪಾರ್ಥಿವ ಶರೀರವನ್ನು ಕಳೆದುಕೊಂಡು ವೈಕುಂಠವನ್ನು ಹೊಂದಿದನು.

ಶಂಭುಶ್ಚಾಪಿ ಮಧೌ ಸ್ನಾನಂ ಕೃತ್ವಾ ಕಾಂಚೀಪುರೀಂ ಪುನಃ ।
ಗಂತುಂ ಪ್ರತಸ್ಥೇ ಶ್ರೀರಾಮಂ ನತ್ವಾಯೋಧ್ಯಾಂ ಪುನಃ ಪುನಃ ॥ ೨೭೧ ॥

ಭಾರ್ಯಯಾಸಹಿತಶ್ಶಂಭುಸ್ತೇನ ಕಾರ್ಪಟಿಕೇನ ಚ ।
ಯಯೌ ಪೂರ್ವೇಣ ಮಾರ್ಗೇಣ ಯತ್ರ ತೌ ಕರಿಕೋಹಲೌ ॥ ೨೭೨ ॥

ಸ್ಥಾಪಿತೌ ಶಪಥೈಃ ಕೃತ್ವಾ ಶನೈಸ್ತತ್ರ ಸಮಾಗಮತ್ ।
ದತ್ವಾ ದಿನದ್ವಯಂ ಪುಣ್ಯಮುಭಾಭ್ಯಾಂ ಮಧುಮಾಸಜಂ ॥ ೨೭೩ ॥

ದತ್ವಾ ಸ್ವೀಯಕರಾಂಜಲೌ ತೋಯಂ ತಯೋರ್ಮುಕ್ತಿಂ ಚಕಾರ ಸಃ ।
ತತಸ್ತೌ ಕರಿಸಿಂಹೌ ಚ ದಿವ್ಯಮಾಲ್ಯಾನುಲೇಪಿತೌ ॥ ೨೭೪ ॥

ದಿವ್ಯಂ ವಿಮಾನಮಾರುಹ್ಯ ವಿಷ್ಣುಲೋಕಂ ಗತಾವುಭೌ ।
ತತೋಗ್ರೇ ದ್ವಿಜವರ್ಯಸ್ಸ ಯಯೌ ಮಾರ್ಗೇಣ ಭಾರ್ಯಯಾ ॥ ೨೭೫ ॥

---

೨೭೧ ಈ ಶಂಭುಶರ್ಮನೂ ಕೂಡ ಚೈತ್ರ ಸ್ನಾನವನ್ನು ಮಾಡಿಕೊಂಡು ಶ್ರೀರಾಮನಿಗೂ ಅಯೋಧ್ಯೆಗೂ ಅನೇಕಬಾರಿ ನಮಸ್ಕರಿಸುತ್ತ ಕಾಂಚಿಪಟ್ಟಣಕ್ಕೆ ಹೊರಟನು.

೨೭೨. ಜೊತೆಯಲ್ಲಿ ಆ ತೀರ್ಥದ ಅಡ್ಡೆಯನ್ನು ಹೊತ್ತಿರುವ ಪ್ರಯಾಣಿಕನೂ ತನ್ನ ಹೆಂಡತಿಯೂ ಹೊರಟರು. ತಾನು ಮೊದಲು ಮಾತುಕೊಟ್ಟ ಆನೆ ಸಿಂಹಗಳನ್ನು ನಿಲ್ಲಿಸಿದ್ದ ಆ ಮೊದಲಿನ ದಾರಿಯಲ್ಲಿಯೇ ಹೊರಟನು.

೨೭೩. ಮೆಲ್ಲಗೆ ಬರುತ್ತ ಭಾಷೆಗಳನ್ನು ಕೊಟ್ಟು ಆ ಆನೆಸಿಂಹಗಳನ್ನು ನಿಲ್ಲಿಸಿದ್ದ ಜಾಗಕ್ಕೆ ಬಂದನು. ಆಗ ಅಲ್ಲಿ ಅವುಗಳಿಗೆ ತಾನು ಚೈತ್ರಮಾಸದಲ್ಲಿ ಸ್ನಾನ ಮಾಡಿದಪುಣ್ಯದಲ್ಲಿ ಎಡಡು ದಿವಸದ ಪುಣ್ಯವನ್ನು ಅವೆರಡಕ್ಕೂ ಕೊಟ್ಟನು.

೨೭೪-೨೭೫. ಈ ಶಂಭುಶರ್ಮನನ್ನು ಕೈಯಲ್ಲಿ ನೀರನ್ನು ಹಿಡಿದು ಅವುಗಳಿಗೆ ಪುಣ್ಯವನ್ನು ಕೊಟ್ಟೊಡನೆಯೇ ಅವುಗಳಿಗೆ ಆ ಜನ್ಮದಿಂದ ಬಿಡುಗಡೆಯಾಯಿತು. ಒಡನೆಯೇ ದಿವ್ಯವಾದ ಮಾಲೆಗಳನ್ನು ಧರಿಸಿಕೊಂಡು ದಿವ್ಯವಾದ ವಿಮಾನವನ್ನು ಹತ್ತಿಕೊಂಡು ಅವರಿಬ್ಬರೂ ವೈಕುಂಠವನ್ನು ಹೊಂದಿದರು. ಅನಂತರ ಆ ಶಂಭುಶರ್ಮನು ಹೆಂಡತಿಯೊಡನೆ ಮುಂದಕ್ಕೆ ಹೊರಟನು.

ಸ ಯತ್ರ ರಾಕ್ಷಸಃ ಪೂರ್ವಂ ಸ್ಥಾಪಿತಶ್ಶಪಥೈರ್ವನೇ ।
ತಂ ದೃಷ್ಟ್ವಾ ರಾಕ್ಷಸಶ್ರೇಷ್ಠಂ ಭಾರ್ಯಾಂ ಪ್ರಾಹ ದ್ವಿಜೋತ್ತಮಃ ॥ ೨೭೬ ॥

ಅಯಿ ಕಾಶ್ಯಾಹ್ವಯೇ ರಮ್ಯೇ ಶ್ರುಣು ಮೇ ವಚನಂ ಶುಭಂ ।
ಯಾ ತ್ವಯಾ ಸೀತಲಾಗೌರೀಸ್ನಾತಾ ವೈ ಸರಯೂಜಲೇ ॥ ೨೭೭ ॥

ತಸ್ಯೈಕದಿವಸಸ್ಯಾದ್ಯ ದೇಹಿ ಪುಣ್ಯಂ ಶುಭಾವಹಂ ।
ರಾಕ್ಷಸಾಯ ಹಿ ಮದ್ವಾಕ್ಯಾದ್ಗೃಹ್ಣೀಷ್ವ ಜಲಮಂಜಲೌ ॥ ೨೭೮ ॥

ಇತಿ ಶಂಭುವಚಶ್ಶ್ರುತ್ವಾ ಪದ್ಮನೇತ್ರಾ ಕೃಶೋದರೀ ।
ಕಾಶೀನಾಮ್ನೀ ದ್ವಿಜಪತ್ನೀ ದದೌ ಪುಣ್ಯಂ ನಿಜಂ ತದಾ ॥ ೨೭೯ ॥

ತತಸ್ಸರಾಕ್ಷಸಶ್ರೇಷ್ಠಸ್ತ್ಯಕ್ತ್ವಾ ದೇಹಂ ಮಲೀಮಸಂ ।
ದಿವ್ಯಂ ವಿಮಾನಮಾರುಹ್ಯ ನತ್ವಾ ಭಾರ್ಯಾಯುತಂ ದ್ವಿಜಂ । ॥ ೨೮೦ ॥

---

೨೭೬. ಅಲ್ಲಿಂದ ಹೊರಟು ಬರುತ್ತಾ ಭಾಷೆ ಕೊಟ್ಟು ರಾಕ್ಷಸನನ್ನು ನಿಲ್ಲಿಸಿದ್ದ ಸ್ಥಳಕ್ಕೆ ಬಂದನು. ಆತನು ಆ ರಾಕ್ಷಸನನ್ನು ನೋಡಿ ಹೆಂಡತಿಯನ್ನು ಕುರಿತು ಇಂತೆಂದನು.

೨೭೭-೨೭೮. ಎಲೈ ಕಾಶಿಯೆಂಬ ಅಡ್ಡ ಹೆಸರುಳ್ಳವಳೇ! ನನ್ನ ಮಾತನ್ನು ಕೇಳು. ನೀನು ಸರಯೂ ನದಿಯಲ್ಲಿ ಸೀತಳಾ ಗೌರೀ ಸ್ನಾನವನ್ನು ಚೈತ್ರ ಮಾಸದಲ್ಲಿ ಮಾಡಿದೆಯಷ್ಟೆ! ಶುಭಕರವಾದ ಅದರ ಒಂದು ದಿವಸದ ಪುಣ್ಯವನ್ನು ರಾಕ್ಷಸನಿಗೆ ಕೊಡು. ಕೈಗೆ ನೀರನ್ನು ತೆಗೆದುಕೋ ಎಂದನು.

೨೭೯. ಶಂಭುವು ಇಂತು ಹೇಳಿದುದನ್ನು ಕೇಳಿ ಆಕೆಯು ತಾನು ಚೈತ್ರ ಮಾಸದಲ್ಲಿ ಸೀತಳಾ ಸ್ನಾನವನ್ನು ಮಾಡಿದ ಪುಣ್ಯದಲ್ಲಿ ಒಂದು ದಿನದ ಪುಣ್ಯವನ್ನು ಕೊಟ್ಟಳು.

೨೮೦. ಒಡನೆಯೇ ಆ ರಾಕ್ಷಸನು ತನ್ನ ಈ ಪಾಪಿಷ್ಠವಾದ ರಾಕ್ಷಸ ಶರೀರವನ್ನು ಬಿಟ್ಟು ದಿವ್ಯವಾದ ವಿಮಾನವನ್ನು ಹತ್ತಿಕೊಂಡು ಆ ಶಂಭುವಿಗೂ ಆತನ ಹೆಂಡತಿಗೂ ನಮಸ್ಕರಿಸಿದನು.

ದಿವ್ಯಮಾಲ್ಯಾಂಬರಧರೋ ಹರಿಲೋಕಂ ಜಗಾಮ ಸಃ ।
ಶಂಭುಶ್ಚಾಪಿ ಪ್ರಿಯಾಯುಕ್ತೋ ಮಧುಮಾಸಂ ವಿವರ್ಣಯನ್ ॥ ೨೮೧ ॥

ಯಯೌ ಕಾಂಚೀಪುರೀಂ ಶ್ರೇಷ್ಠಾಂ ಜನಾನ್ ವೃತ್ತಂ ನಿವೇದಯನ್ ।
ಭೋಃ ಪಿಶಾಚಾ ಯಥಾಪೃಷ್ಟಂ ಭವದ್ಭಿಶ್ಚ ಕಥಾನಕಂ ॥ ೨೮೨ ॥

ತತ್ಸರ್ವಂ ಚ ಮಯಾಖ್ಯಾತಂ ರಾಕ್ಷಸೋದ್ಧಾರಣಾದಿಕಂ ।

॥ ರಾಮದಾಸ ಉವಾಚ ॥

ಇತ್ಯುಕ್ತ್ವಾ ನೃಹರಿರ್ವಿಪ್ರೋ ಗೃಹೀತ್ವಾ ಸ್ವಾಂಜಲೌ ಜಲಂ ॥ ೨೮೩ ॥

ದದೌ ದಿನದ್ವಯಸ್ಯಾಥ ಪುಣ್ಯಂ ಚೈತ್ರಕೃತಂ ನಿಜಂ ।
ತತಃ ಪ್ರೋವಾಚ ಭಾರ್ಯಾಂ ತು ರಮ್ಯೇ ಚಂದ್ರಪ್ರಭೇ ಪ್ರಿಯೇ ॥ ೨೮೪ ॥

ಯಾ ತ್ವಯಾ ಸೀತಲಾಗೌರೀ ಸ್ನಾತಾ ಸೀತಾಕೃತೇ ವರೇ ।
ತೀರ್ಥೇ ತಸ್ಯಾ ದಿನೈಕಸ್ಯ ದೇಹಿ ಪುಣ್ಯಂ ಶುಭಾನನೇ ॥ ೨೮೫ ॥

---

೨೮೧. ದಿವ್ಯವಾದ ಮಾಲೆಯನ್ನು ಹಾಕಿಕೊಂಡು ಆ ವಿಮಾನದ ಮೇಲೆ ವೈಕುಂಠಕ್ಕೆ ಹೋದನು. ಶಂಭುವೂ. ಕೂಡ ಹೆಂಡತಿಯೊಡನೆ ಚೈತ್ರಮಾಸವನ್ನು ವರ್ಣಿಸುತ್ತಾ ಹೊರಟನು.

೨೮೨–೨೮೪. ಕೆಲವು ದಿನಗಳ ಮೇಲೆ ತನ್ನ ಸ್ಥಳವಾದ ಕಾಂಚಿಗೆ ಬಂದು ಸೇರಿ ಜನಗಳಿಗೆ ತನ್ನ ಪ್ರಯಾಣದ ವಿಷಯವನ್ನೂ ಅಯೋಧ್ಯೆಯನ್ನೂ ವರ್ಣಿಸಿ ಹೇಳುತ್ತ ಬಂದನು. ಎಲೈ ಪಿಶಾಚಿಗಳಿರಾ! ನೀವುಗಳು ಶಂಭುಶರ್ಮನ ಕಥೆಯನ್ನು ಹೇಳೆಂದು ಕೇಳಿದಿರಿ. ಅದರಂತೆ ಹೇಳಿದ್ದೇನೆ.

ರಾಮದಾಸನು ಹೇಳಿದನು--ಆ ಬ್ರಾಹ್ಮಣನು ಹೀಗೆಂದು ಹೇಳಿ ತನ್ನ ಬೊಗಸೆಯಲ್ಲಿ ನೀರನ್ನು ತೆಗೆದುಕೊಂಡು ತಾನು ಚೈತ್ರಸ್ನಾನ ಮಾಡಿದ ಪುಣ್ಯದಲ್ಲಿ ಎರಡು ದಿನಗಳ ಪುಣ್ಯವನ್ನು ಪಿಶಾಚಿಗಳಿಗೆ ಕೊಟ್ಟನು. ಅನಂತರ ಹೆಂಡತಿಯನ್ನು ಕುರಿತು ಇಂತೆಂದನು.

೨೮೫. ಎಲೈ ಪ್ರಿಯಳಾದ ಕಾಶಿಯೆ! ನೀನು ಸೀತಾ ತೀರ್ಥದಲ್ಲಿ ಸೀತಾ ಗೌರಿಯು ಸ್ನಾನವನ್ನು ಮಾಡಿದೆಯಷ್ಟೆ. ಅದರ ಒಂದು ದಿನದ ಪುಣ್ಯವನ್ನು ಕೊಡು.

ಪಿಶಾಚಿನ್ಯೈ ಸಮುದ್ಧರ್ಗಂ ಮಾ ವಿಚಾರೋಽಸ್ತು ತೇ ಹೃದಿ ।
ಇತಿ ಭರ್ತೃವಚಃ ಶ್ರುತ್ವಾ ರಮ್ಯಾ ಪಂಕಜಲೋಚನಾ ॥ ೨೮೬ ॥

ಲಕ್ಷ್ಮೀನಾಮ್ನೀ ಮಮ ಮಾತಾ ದದೌ ಪುಣ್ಯಂ ನಿಜಂ ತದಾ ।
ತತಃ ಪಿಶಾಚಾಸ್ತೇ ಸರ್ವೇ ಮುಕ್ತಾಶ್ಶೀಘ್ರಂ ಶುಭಾವಹಾಃ ॥ ೨೮೭ ॥

ನಿಜರೂಪಾಣಿ ನ್ಯೈ ಪ್ರಾಪುಃ ಪ್ರಣೇಮುರ್ನೃಹರಿಂ ಜವಾತ್ ।
ನತ್ವಾ ಸ್ತುತ್ವಾ ಪುನರ್ನತ್ವಾ ನೃಹರಿಂ ತಂ ಪ್ರಿಯಾಯುತಂ ॥ ೨೮೮ ॥

ಆಪೃಚ್ಛ್ಯ ಜಗ್ಮಿರೇ ಸರ್ವೇ ಸ್ವಗುರೋರಾಶ್ರಮಂ ಪ್ರತಿ ।
ಗುರುಶ್ಚಾಪಿ ಸುತಾಂ ಸ್ವೀಯಾಂ ತಾಂ ದದಾವತಿಹರ್ಷಿತಃ ॥ ೨೮೯ ॥

ತಯೋರ್ಜ್ಯೇಷ್ಠಾಯ ಶಿಷ್ಯಾಯ ಕನಿಷ್ಠಾಯಾಪರಾಂ ಸುತಾಂ ।
ಸ್ವೀಯೋದರಸಮುತ್ಪನ್ನಾಂ ದದಾವಪ್ರತಿಮಾಂ ವರಾಂ ॥ ೨೯೦ ॥

೨೮೬–೨೮೭. ಅದರಿಂದ ಆ ಹೆಣ್ಣು ಪಿಶಾಚಿಗೆ ಮೋಕ್ಷವು ಬರಲಿ. ಮನಸ್ಸಿನಲ್ಲಿ ಸ್ವಲ್ಪವೂ ಯೋಚಿಸಬೇಡ. ಎಂದೆನಲು ಗಂಡನ ಈ ಮಾತನ್ನು ಕೇಳಿ ಲಕ್ಷ್ಮಿ ಎಂಬ ಹೆಸರುಳ್ಳ ಆ ನನ್ನ ತಾಯಿಯು ತನ್ನ ಒಂದು ದಿನದ ಪುಣ್ಯವನ್ನು ಕೊಟ್ಟಳು. ಇದರಿಂದ ಆ ಪಿಶಾಚಗಳೆಲ್ಲವೂ ಬೇಗನೆ ಆ ಪಾಪ ಶರೀರದಿಂದ ಬಿಡುಗಡೆಯನ್ನು ಹೊಂದಿ ಮುಕ್ತಿಯನ್ನು ಹೊಂದಿದುವು.

೨೮೮. ತಮ್ಮ ಸರಿಯಾದ ರೂಪಗಳನ್ನು ಹೊಂದಿ ಬೇಗನೆ ಆ ನರಸಿಂಹನಿಗೆ ನಮಸ್ಕರಿಸಿದುವು. ಮತ್ತು ಅವನನ್ನೂ ಆತನ ಹೆಂಡತಿಯನ್ನೂ ಅನೇಕ ಬಾರಿ ಸ್ತುತಿಸಿದುವು. ಮತ್ತೆ ಮತ್ತೆ ನಮಸ್ಕರಿಸಿದುವು.

೨೮೯–೨೯೦. ಅವರ ಅಪ್ಪಣೆಯನ್ನು ಹೊಂದಿ ತಮ್ಮ ಗುರುವಿನ ಆಶ್ರಮಕ್ಕೆ ಹಿಂತಿರುಗಿ ಹೋದರು. ಅನಂತರ ಆ ಗುರುವೂ ಕೂಡ ಅವರನ್ನು ನೋಡಿ ಸಂತೋಷಗೊಂಡು ತನ್ನ ಮಗಳನ್ನು ಅವರಲ್ಲಿ ದೊಡ್ಡವನಾದ ಶಿಷ್ಯನಿಗೆ ಮದುವೆ ಮಾಡಿಕೊಟ್ಟನು.

ತತಸ್ತೌ ಸಸ್ತ್ರಿಯೌ ವಿಪ್ರೌ ಜಗ್ಮತುರ್ಹಿ ಮುದಾನ್ವಿತೌ ।
ಸ್ವಸ್ವಪಿತುಶ್ಚಾಶ್ರಮಂ ಹಿ ತಯೋಸ್ತೌ ಪಿತರಾವಪಿ ॥ ೨೯೧ ॥

ದೃಷ್ಟ್ವಾ ಪುತ್ರೌ ಸಮಾಯಾತೌ ಸ್ತ್ರಿಯೌ ತೋಷಮಾಪತುಃ ।
ನೃಹರಿಶ್ಚ ಪ್ರಿಯಾಯುಕ್ತೋಽಬ್ಜಕಂ ಪ್ರತಿ ಸಮಾಯಯೌ ॥ ೨೯೨ ॥

ಚೈತ್ರಸ್ನಾನೇನ ಸತ್ಪುತ್ರೋ ರಾಮದಾಸಾಭಿದಸ್ತ್ವಹಂ ।
ಜಾತಸ್ತತಸ್ತೌ ದೇಹಾಂತೇ ಜಗ್ಮತುರ್ವೈಷ್ಣವಂ ಪದಂ ॥ ೨೯೩ ॥

ಏವಂ ಶಿಷ್ಯ ಮಧುಸ್ನಾನಮಹಿಮಾ ಬಹುಭಿರ್ನರೈಃ ।
ದೇವೈಸ್ಸಿದ್ಧೈಶ್ಚ ಗಂಧರ್ವೈಸ್ಸದಾನುಭವಿತೋಽಸ್ತಿ ಹಿ ॥ ೨೯೪ ॥

ತಸ್ಮಾನ್ಮಧಾವವಶ್ಯಂ ಹಿ ಸ್ನಾತವ್ಯಂ ಮಾನವೋತ್ತಮೈಃ ।
ರಾಮತೀರ್ಥೇಷು ಸರ್ವತ್ರ ರಾಮಚಂದ್ರಂ ಪ್ರಪೂಜಯೇತ್ ॥ ೨೯೫ ॥

---

೨೯೧. ಅನಂತರ ಅವರಿಬ್ಬರೂ ತಮ್ಮ ತಮ್ಮ ತಂದೆಯವರ ಆಶ್ರಮಗಳಿಗೆ ಹೋದರು. ಅದರಂತೆಯೇ ಮಿಕ್ಕವರೂ ಹೊರಟುಹೋದರು.

೨೯೨. ಆ ತಂದೆತಾಯಿಗಳೂ ಕೂಡ ತಮ್ಮ ತಮ್ಮ ಮಕ್ಕಳನ್ನು ನೋಡಿ ಬಹುವಾಗಿ ಸಂತೋಷಗೊಂಡರು. ನರಸಿಂಹನು ಹೆಂಡತಿಯೊಡನೆ ಅಬ್ಜಕಕ್ಕೆ ಹೋದನು.

೨೯೩. ಅವರು ಅಲ್ಲಿ ಚೈತ್ರಸ್ನಾನವನ್ನು ಮಾಡಿದುದರ ಪುಣ್ಯದಿಂದ ರಾಮದಾಸನೆಂಬ ಹೆಸರುಳ್ಳ ನಾನು ಮಗನಾಗಿ ಹುಟ್ಟಿದೆನು. ಅವರು ಕೆಲವು ಕಾಲಗಳಿದ್ದು ಈ ಪಾರ್ಥಿವ ದೇಹವನ್ನು ಬಿಟ್ಟು ವೈಕುಂಠಕ್ಕೆ ಹೋದರು.

೨೯೪. ಎಲೈ ಶಿಷ್ಯನೆ ! ಈ ರೀತಿಯಾಗಿ ಈ ಚೈತ್ರಮಾಸದ ಮಹಿಮೆಯು ಫಲವು ಜನಗಳಿಂದಲೂ ದೇವತೆಗಳಿಂದಲೂ, ಸಿದ್ಧರಿಂದಲೂ, ಬಹು ವಿಧವಾಗಿ ಅನುಭವಿಸಲ್ಪಡುತ್ತಿರುವುದು. ಅದು ಸದಾ ಕಾಲದಲ್ಲಿಯೂ ಇರುತ್ತಿರುವುದು.

೨೯೫. ಆದ್ದರಿಂದ ಮನುಷ್ಯರಾದವರು ಚೈತ್ರಸ್ನಾನವನ್ನು ಖಂಡಿತವಾಗಿಯೂ ಮಾಡಿಯೇ ತೀರಬೇಕು. ಆ ಸ್ನಾನವನ್ನು ರಾಮತೀರ್ಥವು ಎಲ್ಲೆಲ್ಲಿರುವುದೋ ಅಲ್ಲಲ್ಲಿ ಮಾಡುವುದು ಶ್ರೇಷ್ಠವು. ಸ್ನಾನಾನಂತರದಲ್ಲಿ ರಾಮಚಂದ್ರನನ್ನು ಪೂಜಿಸಬೇಕು.

ಏವಂ ತ್ವಯಾ ಯಥಾ ಪೃಷ್ಟಂ ತಥಾ ಸರ್ವಂ ನಿವೇದಿತಂ ।
ಮಯಾ ಕಾನ್ಯಾ ಸ್ಪೃಹಾ ತೇಸ್ತಿ ಶ್ರೋತುಂ ತದ್ವದ ವಚ್ಮ್ಯಹಂ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಮನೋಹರಕಾಂಡೇ ಚೈತ್ರಸ್ನಾನ ಮಹಾತ್ಮ್ಯೇ ನಾಮ ಏಕಾದಶಸ್ಸರ್ಗಃ ಸಮಾಪ್ತಃ

---

೨೯೬. ಎಲೈ ಶಿಷ್ಯನೆ ! ಇಂತು ನೀನು ಕೇಳಿದುವನ್ನೆಲ್ಲಾ ವಿವರಿಸಿ ಹೇಳಿದ್ದೇನೆ. ನಿನಗೆ ಮತ್ತೇನನ್ನು ಕೇಳಬೇಕೆಂಬ ಇಚ್ಛೆಯಿದೆ? ಕೇಳು ಅವೆಲ್ಲವನ್ನೂ ಹೇಳುತ್ತೇನೆ.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಆದಿಕಾವ್ಯವಾದ ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಚೈತ್ರಸ್ನಾನದ ಮಹಿಮೆಯೆಂಬ ಹನ್ನೊಂದನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹನ್ನೊಂದನೆಯ ಸರ್ಗದ ಸಾರಾಂಶವು

ಬ್ರಹ್ಮನ ಪ್ರಾರ್ಥನೆಯಂತೆ ಶ್ರೀ ವಿಷ್ಣುವು ಅಯೋಧ್ಯೆಯಲ್ಲಿ ದಶರಥನ ಹೊಟ್ಟೆಯಲ್ಲಿ ಶ್ರೀರಾಮನೆಂಬ ಹೆಸರಿನಿಂದ ಅವತರಿಸಿದನು. ಆಗ ಚೈತ್ರಮಾಸದ ಶುದ್ಧ ನವಮಿಯಾಗಿದ್ದಿತು. ದೇವತೆಗಳೆಲ್ಲರೂ ಬಂದು ಆ ಸ್ವಾಮಿಯನ್ನು ಸ್ತುತಿಸಿದರು.

ಆಗ ಆ ಸ್ವಾಮಿಯು ತಾನು ಹುಟ್ಟಿದುದು ಚೈತ್ರಮಾಸವಾದುದರಿಂದ ಅದು ಉತ್ತಮವಾಗಲೆಂದು ವರವನ್ನು ಕೊಟ್ಟನು. ಈ ಚೈತ್ರಮಾಸದಲ್ಲಿ ಅಯೋಧ್ಯೆಯಲ್ಲಿನ ರಾಮತೀರ್ಥದಲ್ಲಿ ಸ್ನಾನಮಾಡಿದರೆ ಬಹು ಪುಣ್ಯವುಂಟು.

ನರಸಿಂಹನೆಂಬ ಬ್ರಾಹ್ಮಣನೊಬ್ಬನು ತನಗೆ ಮಕ್ಕಳಿಲ್ಲದುದರಿಂದ ಮೋಹಿನಿಯೆಂಬ ಶಕ್ತಿ ದೇವತೆಯನ್ನು ಆರಾಧಿಸಲು ಆ ದೇವತೆಯು ಚೈತ್ರಮಾಸದಲ್ಲಿ ಅಯೋಧ್ಯೆಯಲ್ಲಿ ಸ್ನಾನಮಾಡಿದರೆ ಮಕ್ಕಳಾಗುವುದೆಂದು ಹೇಳಲು ಅವನು ಅಂತೆಯೇ ಹೊರಟನು. ಹೋಗುತ್ತಾ ದಾರಿಯಲ್ಲಿ ಗೋದಾವರಿಯು ಸಿಕ್ಕಲು ಅಲ್ಲಿ ಸ್ನಾನಮಾಡಿ ರಾಮನನ್ನು ಪೂಜಿಸಲು ಶ್ರೀರಾಮನು ಈತನ ದೌರ್ಬಲ್ಯವನ್ನು ನೋಡಿ ಸಮೀಪದಲ್ಲಿನ ಪ್ರತಿಷ್ಠಾನ ಪುರದಲ್ಲಿರುವ ರಾಮತೀರ್ಥದಲ್ಲಿ ಸ್ನಾನ ಮಾಡುವಂತೆ ಹೇಳಿದನು. ಅಂತೆಯೇ ಅವನು ಅಲ್ಲಿ ಚೈತ್ರಸ್ನಾನವನ್ನು ಮಾಡಲು ಉತ್ತಮನಾದ ರಾಮದಾಸನು ಹುಟ್ಟಿದನು.

ಒಂದುಸಾರಿ ಅಪ್ಸರೆಯಾದ ರಂಭೆಯು ಅಯೋಧ್ಯೆಯಲ್ಲಿ ರಾಮತೀರ್ಥದಲ್ಲಿ ಚೈತ್ರಸ್ನಾನವನ್ನು ಮಾಡಿ ಒದ್ದೆಯ ಬಟ್ಟೆಯಿಂದಲೇ ಹೋಗಿ ರಾಮೇಶ್ವರನನ್ನು ಪೂಜಿಸಬೇಕೆಂದು ಹೋಗುತ್ತಿದ್ದಳು. ಒದ್ದೆಯ ಬಟ್ಟೆಯ ನೀರು ದಾರಿಯಲ್ಲಿದ್ದ

ಮೂರು ಪಿಶಾಚಗಳಮೇಲೆ ಬೀಳಲು ಅವಕ್ಕೆ ಹಿಂದಿನ ಜನ್ಮದ ಜ್ಞಾನವುಂಟಾಗಿ ಅವು ಆ ರಂಭೆಯನ್ನು ಕುರಿತು ತಮ್ಮ ದುಃಖವನ್ನು ನಿವೇದಿಸಿಕೊಂಡುವು. ಆಕೆಯು ಅಲ್ಲಿಗೆ ನರಸಿಂಹನು ಬರುವನೆಂದೂ ಅವನಿಂದ ಶಾಪವು ಹೋಗುವು ದೆಂದೂ ಹೇಳಿ ಹೊರಟು ಹೋದಳು.

ಹೀಗಿರುತ್ತಿರಲು ನರಸಿಂಹನೆಂಬ ಆ ಬ್ರಾಹ್ಮಣನು ಹೆಂಡತಿಯೊಡನೆ ಬರಲು ಪಿಶಾಚಗಳು ಅವನಿಗೆ ತಮ್ಮ ವಿಷಯಗಳನ್ನು ಹೇಳಿಕೊಂಡುವು. ಆಗ ಅವನು ಶಂಭುಶರ್ಮನು ರಾಕ್ಷಸನನ್ನು ಆ ಜನ್ಮದಿಂದ ಬಿಡುಗಡೆಮಾಡಿಸಿದಂತೆ ನಿಮ್ಮನ್ನು ಬಿಡುಗಡೆಮಾಡಿಸುತ್ತೇನೆಂದನು. ಆಗ ಅದು ಹೀಗೆಂದು ಅವು ಕೇಳಲು ಇಂತೆಂದು ಹೇಳತೊಡಗಿದನು.

ಶಿವಕಾಂಚಿಪುರಿಯಲ್ಲಿ ಶಂಭುಶರ್ಮನೊಬ್ಬ ಬ್ರಾಹ್ಮಣನಿದ್ದನು. ಅವನು ಪುರಾಣಿಕನು ಹೇಳಿದ "ಅಯೋಧ್ಯೆಯಲ್ಲಿ ಚೈತ್ರಸ್ನಾನವು ಕೈವಲ್ಯದಾಯಕವು" ಎಂಬುದನ್ನು ಕೇಳಿ ಅಯೋಧ್ಯೆಗೆ ಹೊರಡಲು ದಾರಿಯಲ್ಲಿ ಒಬ್ಬ ಕಳ್ಳನು ಅವನನ್ನು ಸೂರೆಮಾಡಿದನು. ಈ ಬ್ರಾಹ್ಮಣನು ಅವನನ್ನೇ ಮರೆಹೊಕ್ಕು ಅವನೊಡನೆ ಮುಂದೆ ಹೋಗುತ್ತಿರಲು ಕೊನೆಗೆ ಕಳ್ಳನು ಒಳ್ಳೆಯ ಬುದ್ಧಿಯನ್ನು ಹೊಂದಿ ತಾನೂ ಅಯೋಧ್ಯೆಗೆ ಬರುವುದಾಗಿ ಹೇಳಿ ಹೊರಟನು. ಮುಂದೆ ಹೋಗುತ್ತಿರಲು ಒಬ್ಬ ರಾಕ್ಷಸನು ಇವರನ್ನು ಹಿಡಿದು ತಿನ್ನಲು ಬಂದನು. ಆಗ ಶಂಭುಶರ್ಮನು ರಾಮನಾಮದಿಂದ ಮಂತ್ರಿತವಾದ ನೀರನ್ನು ಅವನಮೇಲೆ ಎರಚಲು ಅವನಿಗೆ ಸದ್ಬುದ್ಧಿಯುಂಟಾಯಿತು. ಆಗ ತನ್ನ ವಿಷಯವೆಲ್ಲವನ್ನೂ ತಿಳಿಸಿದನು. ಶಂಭುವು ತಾನು ಮತ್ತೆ ಅಲ್ಲಿಗೆ ಬರುವುದಾಗಿಯೂ ಅಲ್ಲಿಯವರೆಗೂ ರಾಕ್ಷಸನು ಅಲ್ಲಿಯೇ ಇರುವಂತೆಯೂ ಹೇಳಿ ಹೊರಟನು. ಮುಂದೆ ಒಂದು ಆನೆಯೂ ಒಂದು ಸಿಂಹವೂ ಇವರನ್ನು ಅಡ್ಡಗಟ್ಟಿದುವು. ಅವು ಕಾರಣಾಂತರ ದಿಂದ ಚೈತ್ರರಾಮಕಥೆಯನ್ನು ಕೇಳಿ ಪೂರ್ವದ ಸ್ಮೃತಿಯನ್ನು ಹೊಂದಿದುವು. ಈ ಶಂಭುವು ಅವನ್ನು ಅಲ್ಲಿರುವಂತೆ ಹೇಳಿ ಮುಂದೆ ಹೊರಟನು. ಎದುರಿ ಗೊಬ್ಬನು ಕಾವಡಿಯನ್ನು ಹೊತ್ತುತರುತ್ತಿದ್ದನು. ಅವನಿಂದ ಈ ಶಂಭುಶರ್ಮನು

ತನ್ನ ತಂದೆಯು ಪಿಶಾಚನಾಗಿರುವುದನ್ನು ತಿಳಿದುಕೊಂಡನು. ಅನಂತರ ಮುಂದೆ ಹೊರಟು ಅಯೋಧ್ಯೆಗೆ ಹೋದನು. ಅಲ್ಲಿ ಚೈತ್ರಮಾಸದಲ್ಲಿ ರಾಮತೀರ್ಥದಲ್ಲಿ ಸ್ನಾನಮಾಡಿ ಅಮಾವಾಸ್ಯೆಯ ದಿನ ಶ್ರಾದ್ಧಾದಿಗಳನ್ನು ಮಾಡಿ ತಂದೆಯ ಪಿಶಾಚತ್ವವನ್ನು ಬಿಡಿಸಿದನು. ಅನಂತರ ಊರಿಗೆ ಹೊರಟು ದಾರಿಯಲ್ಲಿ ಆನೆ ಸಿಂಹಗಳನ್ನು ನೋಡಿ ಅವುಗಳಿಗೆ ಚೈತ್ರಮಾಸದ ಎರಡು ದಿನದ ಪುಣ್ಯವನ್ನು ಕೊಟ್ಟು ಪಾರುಮಾಡಿದವು. ಮುಂದೆ ಹೊರಟು ರಾಕ್ಷಸನ ಬಳಿಗೆ ಬಂದನು. ಅಲ್ಲಿ ಅವನಿಗೂ ಒಂದು ದಿನದ ಧರ್ಮವನ್ನು ಕೊಟ್ಟುದರಿಂದ ಆ ರಾಕ್ಷಸನು ಮುಕ್ತನಾದನು ಎಂದು ವಿವರಿಸಿದನು.

ಅಂತೆಯೇ ನೃಸಿಂಹನೂ ಅವನ ಹೆಂಡತಿಯೂ ಆ ಪಿಶಾಚಗಳಿಗೆ ಚೈತ್ರಸ್ನಾನದ ಪುಣ್ಯವನ್ನು ಕೊಟ್ಟು ಆ ಜನ್ಮದಿಂದ ಮುಕ್ತಿಯನ್ನು ಹೊಂದಿಸಿದರು.

ಈ ರೀತಿಯಲ್ಲಿ ಚೈತ್ರಮಾಸವು ಸಕಲಮಾಸಗಳಿಗೂ ಶ್ರೇಷ್ಠವಾದುದು.



|| ಶ್ರೀರಸ್ತು ||

ಅಥ ಶ್ರೀಮದಾನಂದರಾಮಾಯಣೇ ಮನೋಹರಕಾಂಡೇ ದ್ವಾದಶಸರ್ಗಃ

|| ವಿಷ್ಣುದಾಸ ಉವಾಚ ||

ಗುರೋಽನ್ಯದ್ರಾಮಚಂದ್ರಸ್ಯ ಚರಿತ್ರಂ ವದ ಮಾಂ ಪ್ರತಿ |
ಶೃಣ್ವತೋ ಮೇ ಮುಹುರ್ನಾಸೀತ್ ತೃಪ್ತಿಶ್ಚೋತ್ತಮಂ ಸ್ಪೃಹೈಧತೇ ||

|| ಶ್ರೀರಾಮದಾಸ ಉವಾಚ ||

ಸಮ್ಯಕ್ಪೃಷ್ಟಂ ತ್ವಯಾ ಶಿಷ್ಯ ಸಾವಧಾನಮನಾಃ ಶೃಣು |
ಏಕದಾ ಹಯಮಾರೂಢೋ ಪುತ್ರಬಂಧುಬಲೈಸ್ಸಹ || ೨ ||

ವನಂ ಯಾತ್ರಾ ವಿಹಾರಾರ್ಥಂ ರಾಮಚಂದ್ರೋ ಮುದಾನ್ವಿತಃ |
ತತ್ರ ದೃಷ್ಟ್ವಾ ಮೃಗಂ ಶ್ರೇಷ್ಠಂ ತಂ ಹಂತುಂ ರಘುನಂದನಃ || ೩ ||

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹನ್ನೆರಡನೆಯ ಸರ್ಗವು

೧. ವಿಷ್ಣುದಾಸನು ಹೇಳಿದನು.— ಎಲೈ ಗುರುವೇ ! ರಾಮಚಂದ್ರನ ಮತ್ತಾವುದಾದರೂ ಚರಿತ್ರೆಯನ್ನು ನನಗೆ ಹೇಳು. ಅದನ್ನು ಕೇಳುತ್ತಿದ್ದರೆ ನನಗೆ ತೃಪ್ತಿಯೇ ಉಂಟಾಗುವುದಿಲ್ಲ. ಅಲ್ಲದೆ ಆಶೆಯೇ ಹೆಚ್ಚುತ್ತಿರುವುದು.

೨-೩. ಶ್ರೀರಾಮದಾಸನು ಹೇಳಿದನು. ಎಲೈ ಶಿಷ್ಯನೇ ! ನೀನು ಕೇಳಿದುದು ಸರಿಯಾಗಿದೆ. ಒಂದೇ ಮನಸ್ಸಿನಿಂದ ಕೇಳು. ಒಂದು ಸಾರಿ ರಾಮನು ಕುದುರೆಯ ಮೇಲೆ ಕುಳಿತುಕೊಂಡು ತಮ್ಮಂದಿರು ಮಕ್ಕಳು ಸೈನ್ಯಗಳಿಂದ ಕೂಡಿಕೊಂಡು ವಿಹಾರಕ್ಕೋಸ್ಕರ ಕಾಡಿಗೆ ಹೋದನು. ಅಲ್ಲಿ ಒಂದು ಮೃಗವನ್ನು ನೋಡಿ ಅದನ್ನು ಕೊಲ್ಲಲು ಮನಸ್ಸು ಮಾಡಿದನು.

ಬಾಣಮಾಕೃಷ್ಯ ತತ್ಪೃಷ್ಠೇ ಯಯೌ ವೇಗೇನ ಸಾದರಂ ।
ವನಾದ್ವನಾಂತರಂ ರಾಮೋ ಮೃಗಸ್ಯ ಚ ಪದಾನುಗಃ ॥ ೪ ॥

ಏಕಾಕೀ ಹಯಮಾರೂಢೋ ವಿವೇಶ ಗಹನಂ ವನಂ ।
ಪಶ್ಚಾದ್ದೂರಸ್ಥಿತಾಸ್ಸರ್ವೇ ಲಕ್ಷ್ಮಣಾದ್ಯಾ ಬಲೈಸ್ಸಹ ॥ ೫ ॥

ರಾಮೋಽಪಿ ನಿಜಬಾಣೇನ ಮೃಗಂ ಹತ್ವಾ ವನೇಽಹರತ್ ।
ನಿರ್ಜಲೇಽತಿತೃಷಾಕ್ರಾಂತಃ ಕ್ಷುಧಾ ವ್ಯಾಪ್ತೋಽಪ್ಯಭೂತ್ತದಾ ॥ ೬ ॥

ತತೋ ರಾಮೋ ವೃಕ್ಷತಲೇ ಕ್ಷಣಂ ತಸ್ಥೌ ಶ್ರಮಾನ್ವಿತಃ ।
ತಾವತ್ತಂ ಶಬರೀ ಕಾಚಿದ್ದೃಷ್ಟ್ವಾ ರಾಮಂ ಮುದಾನ್ವಿತಾ ॥ ೭ ॥

---

೪. ಒಡನೆಯೇ ಶ್ರೀರಾಮನು ಬಿಲ್ಲಿಗೆ ಬಾಣವನ್ನು ಹೂಡಿ ಆ ಮೃಗವನ್ನು ಹೊಡೆಯಲು ಅದರ ಹಿಂದೆ ಹೋಗುತ್ತಾ ಆ ರಾಮನು ಆ ಕಾಡಿನಿಂದ ಮತ್ತೊಂದು ಕಾಡಿಗೂ ಅದರಿಂದ ಮುಂದಿನ ಕಾಡಿಗೂ ಹೀಗೆ ಅದರ ಹಿಂದೆ ಹೊರಟು ಹೋದನು

೫. ಕೊನೆಗೆ ಒಬ್ಬೊಂಟಿಗನಾಗಿಯೇ ಬಹು ದೊಡ್ಡದಾದ ಗೊಂಡಾರಣ್ಯವನ್ನು ಸೇರಿದನು. ಲಕ್ಷ್ಮಣನೇ ಮುಂತಾದ ಅವನ ಜೊತೆಯವರೆಲ್ಲರೂ ಅವನ ಸೈನ್ಯದೊಡನೆ ಬಹುಹಿಂದೆಯೇ ನಿಂತು ಬಿಟ್ಟರು.

೬. ರಾಮನು ತನ್ನ ಬಾಣದಿಂದ ಆ ಮೃಗವನ್ನು ಕೊಂದು ಆ ಕಾಡಿನಲ್ಲಿ ಸುತ್ತುತ್ತಿದ್ದನು. ಕೊನೆಗೆ ನೀರು ಕೂಡ ಇಲ್ಲದಿರುವ ಆ ಕಾಡಿನಲ್ಲಿ ಅವನು ಬಾಯಾರಿಕೆಯಿಂದಲೂ, ಹಸಿವಿನಿಂದಲೂ ಬಹುವಾಗಿ ಬಳಲಿದನು.

೭. ಆಗ ಅವನಿಗೆ ಆಯಾಸವಾಗಲು ಅಲ್ಲಿರುವ ಒಂದು ಮರದ ಕೆಳಗೆ ಹಸಿವನ್ನು ತಾಳಲಾರದೆ ಕುಳಿತುಕೊಂಡನು. ಅಷ್ಟರಲ್ಲಿಯೇ ಒಬ್ಬ ಬೇಡಿತಿಯು ಅಲ್ಲಿಗೆ ಬಂದು ಅವನನ್ನು ನೋಡಿ ಸಂತೋಷಗೊಂಡಳು.

ನೃಪಂ ಜ್ಞಾತ್ವಾ ರಾಜಚಿಹ್ನೈಸ್ತಂ ಪ್ರಣಮ್ಯ ಪುರಃ ಸ್ಥಿತಾ ।
ತಾಂ ದೃಷ್ಟ್ವಾ ರಾಘವೋಽಪ್ಯಾಹ ವಾಕ್ಯಂ ಶಬರಿ ಮೇ ಶೃಣು ॥ ೮ ॥

ಲಕ್ಷ್ಮಣಾದ್ಯಾಸ್ಸ್ಥಿತಾ ದೂರಂ ಕ್ಷುತ್ತೃಷ್ಣಾಭ್ಯಾಂ ಪೀಡಿತೋಽಸ್ಮ್ಯಹಂ ।
ಕಿಂಚಿದ್ಯತ್ನಂ ಕುರುಷ್ವಾತ್ರ ಯೇನ ಮೇಽದ್ಯ ಸುಖಂ ಭವೇತ್ ॥ ೯ ॥

ತದ್ರಾಮವಚನಂ ಶ್ರುತ್ವಾ ಶಬರೀ ವಾಕ್ಯಮಬ್ರವೀತ್ ।
ಇತೋ ವಿದೂರೇ ಶ್ರೀರಾಮ ದುರ್ಗಾಽಸ್ತಿ ಸರಸಸ್ತಟೇ ॥ ೧೦ ॥

ಭೌಮವಾರೇಽದ್ಯ ನಾರ್ಯಶ್ಚ ಬಹವೋಽತ್ರ ಸಮಾಗತಾಃ ।
ತತ್ರ ತ್ವಂ ಚ ಮಯಾ ರಾಮ ಯದಿ ಯಾಸ್ಯಸಿ ಸಾಂಪ್ರತಂ ॥ ೧೧ ॥

---

೮. ಆವನ ಚಿಹ್ನೆಗಳನ್ನು ನೋಡಿ ಅದರಿಂದ ಅವನು ರಾಜನೆಂದು ತಿಳಿದು ಕೊಂಡಳು. ರಾಮನು ಆಕೆಯನ್ನು ನೋಡಿ ಎಲೈ ಶಬರಿಯೇ ! ನಾನು ಹೇಳು ವುದನ್ನು ಕೇಳು ಎಂದೆನ್ನುತ್ತಾ ಇಂತೆಂದು ಹೇಳಿದನು.

೯. ಎಲೈ ಶಬರಿಯೇ! ನನ್ನ ತಮ್ಮನಾದ ಲಕ್ಷ್ಮಣನೇ ಮುಂತಾದವರು ದೂರದಲ್ಲಿಯೇ ನಿಂತುಬಿಟ್ಟರು. ನನಗೆ ಹಸಿವು ಬಾಯಾರಿಕೆಗಳು ಬಹುವಾಗಿ ಅದ ರಿಂದ ಪೀಡಿತನಾಗಿದ್ದೇನೆ. ನನಗೆ ಆ ಹಸಿವು ಬಾಯಾರಿಕೆಗಳ ತೊಂದರೆಯು ಸ್ವಲ್ಪವಾದರೂ ಅಡಗುವಂತೆ ನಿನ್ನ ಕೈಲಾದ ಪ್ರಯತ್ನವನ್ನು ಮಾಡು.

೧೦. ರಾಮನು ಇಂತೆಂದುದನ್ನು ಕೇಳಿ ಶಬರಿಯು ಇಂತೆಂದಳು. ಎಲೈ ಶ್ರೀರಾಮನೇ ! ಇಲ್ಲಿಗೆ ಹತ್ತಿರದಲ್ಲಿಯೇ ಒಂದು ಸರೋವರವಿರುವುದು. ಅದರ ಬಳಿ ಯಲ್ಲಿ ಒಂದು ದುರ್ಗಿಯ ದೇವಸ್ಥಾನವಿರುವುದು.

೧೧-೧೨. ಈ ದಿನ ಮಂಗಳವಾರವಾದುದರಿಂದ ಅಲ್ಲಿರುವ ದುರ್ಗಿಯನ್ನು ಪೂಜಿಸಲು ಬಹು ಮಂದಿ ಹೆಂಗಸರು ಅಲ್ಲಿಗೆ ಬರುವರು ನೀನು ಅಲ್ಲಿಗೆ ನನ್ನ ಜೊತೆಯಲ್ಲಿ ಈಗ ಬಂದರೆ ನಿನಗೆ ಬಗೆ ಬಗೆಯ ಮೃಷ್ಟಾನ್ನಗಳು ಸಿಕ್ಕಿ ಕ್ಷಣಕಾಲ

ತರ್ಹಿ ತತ್ರ ವಿಚಿತ್ರಾನ್ನೈಸ್ತುಷ್ಟಿಂ ಪ್ರಾಪ್ಸ್ಯಸಿ ವೈ ಕ್ಷಣಾತ್ ।
ತತ್ತಸ್ಯಾ ವಚನಂ ಶ್ರುತ್ವಾ ಶಬರೀಂ ಪ್ರಾಹ ರಾಘವಃ ॥ ೧೨ ॥

ಅಹಮತ್ರೈವ ತಿಷ್ಠಾಮಿ ಪ್ರತೀಕ್ಷಾರ್ಥಂ ಕುಶಸ್ಯಚ ।
ಲವಸ್ಯ ಲಕ್ಷ್ಮಣಾದೀನಾಂ ಸೈನ್ಯಸ್ಯ ವನವಾಸಿನಿ ॥ ೧೩ ॥

ಗಚ್ಛ ತ್ವಮೇವ ತಾಂ ದುರ್ಗಾಂ ಸ್ತ್ರೀವರ್ಗೇ ವೃತ್ತಂ ನಿವೇದಯ ।
ತದ್ರಾಮವಚನಂ ಶ್ರುತ್ವಾ ತಥೇತ್ಯುಕ್ತ್ವಾ ತ್ವರಾನ್ವಿತಾ ॥ ೧೪ ॥

ಸ್ತ್ರೀವರ್ಗತ್ವಾ ಶಬರೀ ಪ್ರಾಹ ಶೃಣುಧ್ವಂ ವಚನಂ ಮಮ ।
ರಾಮೋ ರಾಜೀವಪತ್ರಾಕ್ಷೋ ಮೃಗಯಾಂ ಕರ್ತುಮಾಗತಃ ॥ ೧೫ ॥

ಅವಿದೂರೇ ವೃಕ್ಷಮೂಲೇ ಕ್ಷುಧಾ ಕ್ರಾಂತಃ ಸ್ಥಿತೋಸ್ತಿ ಹಿ ।
ತೇನಾಹಂ ಪ್ರೇಷಿತಾಸ್ಮ್ಯದ್ಯ ಸೂಚನಾರ್ಥಂ ವರಾನನಾಃ ॥ ೧೬ ॥

ದಲ್ಲಿಯೇ ತೃಪ್ತಿಯುಂಟಾಗುತ್ತದೆ. ಎನ್ನಲು ರಾಮನು ಈ ಶಬರಿಯ ಮಾತನ್ನು ಕೇಳಿ ಇಂತೆಂದನು.

೧೩-೧೪. ಎಲೈ ವನವಾಸಿನಿಯಾದ ಶಬರಿಯೇ! ನಾನು ಲವನಾಗಲಿ, ಕುಶನಾಗಲಿ, ಸೈನ್ಯಗಳೇ ಆಗಲಿ ಇಲ್ಲಿಗೆ ಬರುವುದೆಂದು ಅವರನ್ನು ನಿರೀಕ್ಷಿಸುತ್ತಾ ಇಲ್ಲಿಯೇ ಇರುವೆನು. ಆದ್ದರಿಂದ ನೀನೇ ಆ ದುರ್ಗಿಯ ಬಳಿಗೆ ಹೋಗು. ಅಲ್ಲಿನ ಹೆಂಗಸರಿಗೆ ನನ್ನ ವಿಷಯವನ್ನು ತಿಳಿಸು ಎನ್ನಲು ಆಕೆಯು ಹಾಗೆಯೇ ಆಗಲೆಂದು ಬೇಗನೆ ಹೊರಟಳು.

೧೫-೧೬. ಹೊರಟು ಆ ಹೆಂಗಸರ ಬಳಿಗೆ ಹೋಗಿ ಇಂತೆಂದು ಹೇಳಿದಳು. ಎಲೈ ಹೆಂಗಸರಿರಾ! ನನ್ನ ಮಾತನ್ನು ಕೇಳಿರಿ. ರಾಜೀವಾಕ್ಷನಾದ ರಾಮನು ಈ ಕಾಡಿಗೆ ಬಂದಿರುವನು. ಇಲ್ಲಿಗೆ ಹತ್ತಿರದಲ್ಲಿಯೇ ಒಂದು ಮರದ ಕೆಳಗೆ ಕುಳಿತಿರುವನು. ಅವನಿಗೆ ಬಹುವಾಗಿ ಹಸಿವಾಗುತ್ತಿರುವುದು. ಎಲೈ ವರಾನನೆಯರಾ! ಅದನ್ನು ಸೂಚಿಸುವುದಕೋಸ್ಕರವೇ ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದನು.

ಯುಷ್ಮಾಕಂ ಕಥಿತಂ ವೃತ್ತಂ ತಸ್ಯ ಗಚ್ಛಾಮ್ಯಹಂ ಪುನಃ ।
ಶಬರ್ಯಾಸ್ತದ್ವಚಶ್ಶ್ರುತ್ವಾ ತಾ ನಾರ್ಯಸ್ಸಂಭ್ರಮಾನ್ವಿತಾಃ ॥ ೧೭ ॥

ಅಭಿನಂದ್ಯ ನಿಜೈರ್ವಾಕ್ಯೈಶ್ಶಬರೀಂ ತಾಂ ಮುಹುರ್ಮುಹುಃ ।
ಪರಸ್ಪರಂ ತದಾ ಪ್ರೋಚುಸ್ತಾನಾರ್ಯಶ್ಶತಶೋ ಮುದಾ ॥ ೧೮ ॥

ಧನ್ಯೋಽದ್ಯ ದಿನಸೋಽಸ್ಮಾಕಂ ಯಸ್ಮಿನ್ ರಾಘವದರ್ಶನಂ ।
ಭವಿಷ್ಯತಿ ವರಾನ್ನೈಶ್ಚ ತೋಷಯಾಮೋ ರಘೂತ್ತಮಂ ॥ ೧೯ ॥

ಆದೌ ದುರ್ಗಾಂ ಪೂಜಯಿತ್ವಾ ನೈವೇದ್ಯಂ ತಾಂ ನಿವೇದ್ಯ ಚ ।
ತತಸ್ಸಮರ್ಪ್ಯ ರಾಮಾಯ ಭೋಕ್ಷ್ಯಾಮಶ್ಚ ವಯಂ ತತಃ ॥ ೨೦ ॥

ಇತಿ ಸಮ್ಮಂತ್ರ್ಯ ತಾ ನಾರ್ಯ್ಯಃ ರುಕ್ಮಾಲಂಕಾರಮಂಡಿತಾಃ ।
ಪೀತಕೌಶೇಯವಾಸಿನ್ಯೋ ವರಾಸ್ಯಾ ಮೃಗಲೋಚನಾಃ ॥ ೨೧ ॥

---

೧೭. ನಾನು ಇಲ್ಲಿಗೆ ಬಂದು ಅವನ ವಿಷಯವಾಗಿ ತಿಳಿಸಿದ್ದೇನೆ ಮತ್ತೆ ಅವನ ಬಳಿಗೆ ಹೋಗುತ್ತೇನೆ. ಎನ್ನಲು ಆ ಶಬರಿಯು ಈ ಮಾತನ್ನು ಕೇಳಿ ಆ ಹೆಂಗಸರೆಲ್ಲರೂ ಬಹುವಾಗಿ ಸಡಗರಗೊಂಡರು.

೧೮. ಮತ್ತು ತಾವೆಲ್ಲರೂ ತಮ್ಮ ತಮ್ಮ ಸಹಜವಾದ ಮಾತುಗಳಿಂದ ಆ ಶಬರಿಯನ್ನು ಶ್ಲಾಘಿಸಿ ಅನಂತರ ಅವರೆಲ್ಲರೂ ಒಬ್ಬರಿಗೊಬ್ಬರು ಸಂತೋಷದಿಂದ ಇಂತೆಂದು ಅನೇಕ ಬಗೆಯಾಗಿ ಮಾತನಾಡಿಕೊಂಡರು.

೧೯. ಈದಿವಸ ನಮಗೆ ಶ್ರೀರಾಮನ ಸುದರ್ಶನವಾಗುವುದರಿಂದ ಈ ದಿನ ಲೇಸುದಿನವು. ಉತ್ತಮವಾದ ಮೃಷ್ಟಾನ್ನಗಳಿಂದ ಆ ಶ್ರೀರಾಮನನ್ನು ತೃಪ್ತಿಗೊಳಿಸುತ್ತೇವೆ.

೨೦ ನಾವೆಲ್ಲರೂ ಮೊದಲು ಈ ದುರ್ಗೆಯನ್ನು ಪೂಜಿಸೋಣ. ಆ ತಾಯಿಗೆ ನೈವೇದ್ಯವಾದ ಮೃಷ್ಟಾನ್ನವನ್ನು ಶ್ರೀ ರಾಮನಿಗೆ ಸಮರ್ಪಿಸಿ ಅವನನ್ನು ತೃಪ್ತಿಪಡಿಸಿ ಆಮೇಲೆ ನಾವು ಊಟಮಾಡೋಣ.

೨೧-೨೨. ಅಲ್ಲಿಗೆ ಬಂದಿದ್ದ ಆ ಬ್ರಹ್ಮಕ್ಷತ್ರಿಯ ವೈಶ್ಯರ, ಶೂದ್ರರ ಹೆಂಗಸರೆಲ್ಲರೂ ಈ ರೀತಿಯಾಗಿ ಆಲೋಚಿಸಿಕೊಂಡು ಉತ್ತಮವಾದ ಬಟ್ಟೆಗಳನ್ನುಟ್ಟು

ವಿಪ್ರಕ್ಷತ್ರಿಯವೈಶ್ಯಾನಾಂ ಶೂದ್ರಾಣಾಂ ಚಾಪಿ ವೇಗತಃ ।
ನೈವೇದ್ಯಪಾತ್ರೈಸ್ತಾಂ ದುರ್ಗಾಂ ಯಯುರ್ನೂಪುರನಿಸ್ವನಾಃ ॥ ೨೨ ॥

ಏತಸ್ಮಿನ್ನಂತರೇ ದೇವೀ ಸ್ವಾಲಯಸ್ಯ ಸಮಂತತಃ ।
ಕಪಾಟಾನಿ ದೃಢಂ ಬದ್ಧ್ವಾ ತೂಷ್ಣೀಮಾಸೀದ್ಗಿರೀಂದ್ರಜಾ ॥ ೨೩ ॥

ತತಸ್ತಾ ದ್ವಾರಮಾಸಾದ್ಯ ದ್ವಾರಂ ಬದ್ಧಂ ನಿರೀಕ್ಷ್ಯ ಚ ।
ಬಭ್ರಮುಸ್ಸರ್ವದ್ವಾರಾಣಿ ನ ಮಾರ್ಗಂ ಲೇಭಿರೇ ಸ್ತ್ರಿಯಃ ॥ ೨೪ ॥

ತದಾಶ್ಚರ್ಯ ಮನಾಸ್ಸರ್ವಾ ದ್ವಾರದೇಶೇ ಸ್ಥಿತಾಃ ಕ್ಷಣಂ ।
ತಾವದ್ದೇವಾಲಯಾಚ್ಛಬ್ದೋ ನಿರ್ಗತಶ್ಶುಶ್ರುವುಸ್ತ್ರಿಯಃ ॥ ೨೫ ॥

ಅಹಮೇವಾತ್ರ ಸೀತಾಸ್ಮಿ ರಾಮಸ್ಸಾಕ್ಷಾನ್ಮಹೇಶ್ವರಃ ।
ಯೋ ಭಿನ್ನಂ ಮಾನಯಂತ್ಯತ್ರ ಮಾಂ ಸೀತಾಂ ರಾಘವಂ ಹರಂ ॥ ೨೬ ॥

ಅಲಂಕಾರಗಳನ್ನು ಮಾಡಿಕೊಂಡು ನೈವೇದ್ಯದ ಪಾತ್ರೆಯನ್ನು ತೆಗೆದುಕೊಂಡು ಆ ದುರ್ಗಾ ದೇವಿಯ ಬಳಿಗೆ ಹೋದರು.

೨೩ ಇಷ್ಟು ಹೊತ್ತಿಗೆ ಆ ದುರ್ಗಾದೇವಿಯು ತನ್ನ ಗುಡಿಯ ಸುತ್ತಲೂ ಇರುವ ಬಾಗಿಲಿನ ಕದಗಳನ್ನು ಬಿಗಿಯಾಗಿ ಹಾಕಿಕೊಂಡು ಒಳಗೆ ಸುಮ್ಮನೆ ಕುಳಿತು ಬಿಟ್ಟಿದ್ದಳು.

೨೪ ಅಲ್ಲಿಗೆ ಹೊರಟ ಆ ಹೆಂಗಸರೆಲ್ಲರೂ ದುರ್ಗೆಯ ದೇವಸ್ಥಾನದ ಬಳಿಗೆ ಹೋಗಿ ಅದರ ಬಾಗಿಲು ಹಾಕಿಕೊಂಡು ಇರುವುದನ್ನು ನೋಡಿ ಎಲ್ಲಾ ಬಾಗಿಲುಗಳ ಕಡೆಗೂ ಓಡಿಯಾಡಿ ನೋಡಿದರು. ಆದರೂ ಎಲ್ಲಿಯೂ ಒಳಗೆ ಹೋಗಲು ದಾರಿಯೇ ಸಿಕ್ಕಲಿಲ್ಲ.

೨೫. ಇದನ್ನು ನೋಡಿ ಅವರೆಲ್ಲರೂ ಬಹುವಾಗಿ ಆಶ್ಚರ್ಯ ಪಟ್ಟುಕೊಂಡು ಆ ಬಾಗಿಲಿನಲ್ಲಿಯೇ ಕ್ಷಣಕಾಲದ ವರೆಗೂ ಇದ್ದರು. ಆ ದೇವಸ್ಥಾನದಿಂದ ಒಂದು ಶಬ್ದವು ಕೇಳಿ ಬರಲು ಅದನ್ನು ಅವರೆಲ್ಲರೂ ಕೇಳಿದರು.

೨೬–೨೮ ಎಲೈ ಸುಂದರಿಯರಿರಾ! ದುರ್ಗೆಯಾದ ನಾನೇ ಸೀತೆಯಾಗಿರುವೆನು. ರಾಮನೇ ಪ್ರತ್ಯಕ್ಷನಾದ ಮಹೇಶ್ವರನು. ನಾನು ಸೀತೆಯೂ,

ತೇ ಕೋಟಿಕಲ್ಪಪರ್ಯಂತಂ ಪಚ್ಯಂತೇ ರೌರವೇಷು ಹಿ ।
ಅತೋ ಯೂಯಂ ಹಿ ಭೋ ನಾರ್ಯೋ ಮನ್ನಾಥಂ ಚ ಜಗತ್ಪ್ರಭುಂ ॥

ತೋಷಯಧ್ವಂ ವರಾನ್ನೈಶ್ಚ ತಚ್ಛೇಷೇಣ ತ್ವಹಂ ತತಃ ।
ತುಷ್ಟಾ ಭವಾಮಿ ಗಚ್ಛಧ್ವಂ ಕ್ಷುಧಿತಂ ತಂ ರಘೂತ್ತಮಂ ॥ ೨೮ ॥

ಇತಿ ನ್ಯಾರ್ಯೋ ವಚಶ್ಶ್ರುತ್ವಾ ದೇವ್ಯಾಸ್ತಾ ವಿಸ್ಮಯಾನ್ವಿತಾಃ ।
ದುದ್ರುವುರ್ಗಜಗಾಮಿನ್ಯಶ್ಚ ಬರಿಚರಣಾನುಗಾಃ ॥ ೨೯ ॥

ತತಸ್ಸಾ ಶಬರೀ ತಾಭ್ಯೋ ದರ್ಶಯಾಮಾಸ ರಾಘವಂ ।
ತಾ ನೇತ್ರಪಂಕಜೈಸ್ಸರ್ವಾ ದೃಷ್ಟ್ವಾ ನತ್ವಾ ರಘೂತ್ತಮಂ ॥ ೩೦ ॥

ಪರಮೇಶ್ವರನೂ ಶ್ರೀ ರಾಮನೂ ಬೇರೆ ಬೇರೆಯೆಂಬುದಾಗಿ ಯಾರು ಭೇದಬುದ್ಧಿಯನ್ನು ಹೊಂದುವರೋ ಅವರು ಕೋಟಿ ಕಲ್ಪಗಳವರೆಗೂ ರೌರವವೆಂಬ ನರಕದಲ್ಲಿ ತೊಂದರೆ ಪಡಿಸಲ್ಪಡುತ್ತಾರೆ. ಎಲೈ ಸ್ತ್ರೀಯರಿರಾ! ಆದ್ದರಿಂದ ನೀವುಗಳುನನ್ನ ಸ್ವಾಮಿಯೂ ಜಗತ್ಪ್ರಭುವೂ ಆದ ಶ್ರೀರಾಮನನ್ನು ಉತ್ತಮವಾದ ಅನ್ನಗಳನ್ನು ಸಮರ್ಪಿಸಿ ಸಂತೋಷ ಪಡಿಸಿರಿ. ಅವನು ತಿಂದು ಮಿಕ್ಕುದನ್ನು ನನಗೆ ಸಮರ್ಪಿಸಿರಿ. ಆದರಿಂದಲೇ ನಾನು ಸಂತೋಷಗೊಳ್ಳುತ್ತೇನೆ. ಹೋಗಿರಿ. ಮೊದಲು ಆ ಹಸಿದಿರುವ ಆ ರಾಮನ ಬಳಿಗೆ ಹೋಗಿ ಅವನನ್ನು ತೃಪ್ತಿಪಡಿಸಿರಿ.

೨೯. ಹೆಂಗಸರು ದೇವಿಯ ಈ ಮಾತನ್ನು ಕೇಳಿ ಆಶ್ಚರ್ಯಗೊಂಡು ಒಡನೆಯೇ ಆ ಶಬರಿಯ ಹೆಜ್ಜೆಯನ್ನು ನೋಡಿ ಅದನ್ನು ಅನುಸರಿಸಿಕೊಂಡು ರಾಮನ ಬಳಿಗೆ ಅವರೆಲ್ಲರೂ ಓಡಿ ಹೋದರು.

೩೦. ಆ ಶಬರಿಯು ಆ ಹೆಂಗಸರಿಗೆ ಶ್ರೀರಾಮನನ್ನು ತೋರಿಸಿದಳು. ಅವರೆಲ್ಲರೂ ತಮ್ಮ ಕಮಲದಂತಿರುವ ಕಣ್ಣುಗಳಿಂದ ಆ ಶ್ರೀರಾಮನನ್ನು ನೋಡಿ ಅತನಿಗೆ ನಮಸ್ಕರಿಸಿದರು.

ದಿವ್ಯಾನ್ನಾನಿ ಪುರಸ್ಥಾಪ್ಯ ಹೇಮಪಾತ್ರೈರ್ಜಲಾನ್ಯಪಿ ।
ತತಸ್ತಂ ಪ್ರಾರ್ಥಯಾಮಾಸುಸ್ಸ್ತ್ರಿಯಸ್ಸರ್ವಾಃ ಪುರಃ ಸಿತಾಃ ॥ ೩೧ ॥

ತ್ವಯಾದ್ಯ ತಾರಿತಾ ರಾಮ ವಯಂ ನಾರ್ಯಸ್ಸಹಸ್ರಶಃ ।
ಶಬರೀಂ ಪ್ರೇಷ್ಯ ಗಹನೇ ವನೇತ್ರ ಪರಮಾದರಾತ್ ॥ ೩೨ ॥

ಅನ್ನಾನಿ ಸ್ವೀಕುರುಷ್ವ ತ್ವಂ ದೇವ್ಯಾ ತ್ವಾಂ ಪ್ರೇಷಿತಾನಿ ಹಿ ।
ತತ್ತಾಸಾಂ ವಚನಂ ಶ್ರುತ್ವಾ ರಾಘವಃ ಪ್ರಾಹ ಸಸ್ಮಿತಃ ॥ ೩೩ ॥

ದೇವ್ಯಾ ಕಿಮುಕ್ತಂ ಭೋ ನಾರ್ಯಃ ಕಥನೀಯಂ ಮಮಾದ್ಯ ತತ್ ।
ತಾಃ ಪ್ರೋಚೂ ರಾಘವಂ ನಾರ್ಯೋ ದುರ್ಗಾವಾಕ್ಯಂ ಸವಿಸ್ತರಂ ॥

ದುರ್ಗಾವಾಕ್ಯಂ ಶ್ರುಣುಷ್ವಾದ್ಯ ತ್ವಹಮೇವಾತ್ರ ಜಾನಕೀ ।
ರಾಮಸ್ಸಾಕ್ಷಾನ್ಮಹಾದೇವೋ ನಾತ್ರ ಭೇದಃ ಕದಾಚನ ॥ ೩೫ ॥

---

೩೧. ಚಿನ್ನದ ಪಾತ್ರೆಯಲ್ಲಿ ತುಂಬಿರುವ ಆ ದಿವ್ಯಾನ್ನವನ್ನೂ, ನೀರನ್ನೂ ಆತನ ಮುಂದೆ ಇಟ್ಟರು. ಮತ್ತು ಆ ಹೆಂಗಸರೆಲ್ಲರೂ ಆತನ ಮುಂದುಗಡೆಯಲ್ಲಿ ನಿಂತುಕೊಂಡು ಇಂತೆಂದು ಕೇಳಿಕೊಂಡರು.

೩೨. ಎಲೈ ರಾಮನೇ! ನೀನು ಈಗ ಸಾವಿರಾರು ಜನ ಹೆಂಗಸರಾದ ಈ ನಮ್ಮನ್ನು ಈಜನ್ಮದಿಂದ ಪಾರುಗಾಣಿಸಿದೆ. ಪರಮಾದರಿಂದ ಈ ಶಬರಿಯನ್ನು ಈ ಕಾಡಿನಿಂದ ನಮ್ಮ ಬಳಿಗೆ ಕಳುಹಿಸಿ ನಮ್ಮಿಂದ ಅನ್ನಗಳನ್ನು ತರಿಸಿಕೊಂಡೆ.

೩೩. ಈ ಅನ್ನಗಳನ್ನು ನೀನು ತೆಗೆದುಕೋ. ದುರ್ಗಾದೇವಿಯೇ ಇದನು ನಿನಗೆ ಕಳುಹಿಸಿರುವಳು. ಎನ್ನಲು ರಾಘವನು ಅದನ್ನು ಕೇಳಿ ನಗುತ್ತ ಇಂತೆಂದನು.

೩೪. ಎಲೈ ನಾರಿಯರಿರಾ! ದೇವಿಯು, ನಿಮಗೆ ಏನೆಂದು ಹೇಳಿದಳು! ಈಗ ನನಗೆ ಹೇಳಿರಿ ಎನ್ನಲು ಅವರೆಲ್ಲರೂ ಆ ದುರ್ಗೆಯು ಹೇಳಿದುದನ್ನು ವಿಸ್ತಾರವಾಗಿ ವರ್ಣಿಸಿ ಹೇಳಿದರು.

೩೫. ಎಲೈರಾಮನೇ! ದುರ್ಗೆಯ ಮಾತನ್ನು ಕೇಳು. ಅವಳು ಎಲೈ ನಾರಿಯರಿರಾ! ನಾನೇ ಜಾನಕಿಯು, ರಾಮನೇ ಪ್ರತ್ಯಕ್ಷನಾದ ಮಹಾದೇವನು. ನಮ್ಮಗಳಿಗೆ ಭೇದವೆಂಬುದೇ ಇಲ್ಲ.

ಮಾನಯಂತ್ಯತ್ರ ಭೇದಂ ಯೇ ರೌರವೇಷು ಪತಂತಿ ತೇ ।
ಅತೋ ರಾಮಂ ತೋಷಯಿತ್ವಾ ತದುಚ್ಛಿಷ್ಟಂ ತ್ವಹಂ ತತಃ ॥ ೩೬ ॥

ಭೋಕ್ಷ್ಯಾಮಿ ನಾರ್ಯೋ ಗಚ್ಛಧ್ವಂ ಕ್ಷುಧಾರ್ತಂ ರಘುನಂದನಂ ।
ದೇವ್ಯೇತ್ಥಂ ಭಾಷಿತಂ ರಾಮ ತತಸ್ತ್ವಾಂ ಸಮುಪಾಗತಾಃ ॥ ೩೭ ॥

ಅಗ್ರೇ ತ್ವಂ ಪೂರ್ವಪುಣ್ಯೈರ್ನೋ ಭುಂಕ್ಷ್ವಾನ್ನಂ ರಘುನಂದನ ।
ತತಸ್ತಾಃ ಪ್ರಾಹ ಶ್ರೀರಾಮೋ ವಿಹಸ್ಯ ಮುದಿತಾನನಃ ॥ ೩೮ ॥

ಯದಿ ದೇವೀವಚಸ್ಸತ್ಯಂ ತರ್ಹ್ಯತ್ರ ಗಹನೇ ವನೇ ।
ಸೀತಾರೂಪೇಣ ಸಾ ದುರ್ಗಾ ಮಾಂ ಸಮಾಯಾತು ಸತ್ವರಂ ॥ ೩೯ ॥

ಯುಷ್ಮನ್ನಾರೀಸಮೂಹಾತ್ತು ಕಾಚಿನ್ನಾರೀ ಗಿರೀಂದ್ರಜಾಂ ।
ಗತ್ವಾ ಮದ್ವಚನಂ ದುರ್ಗಾಂ ಶ್ರಾವಯತ್ವದ್ಯ ಕೌತುಕಾತ್ ॥ ೪೦ ॥

---

೩೬. ನಮ್ಮುಗಳಿಗೆ ಯಾರು ಭೇದವನ್ನು ಕಲ್ಪಿಸಿ ತಿಳಿಯುವರೋ ಅವರು ರೌರವ ನರಕದಲ್ಲಿ ಬೀಳುತ್ತಾರೆ. ಆದರಿಂದ ಮೊದಲು ರಾಮನಿಗೆ ತೃಪ್ತಿಪಡಿಸಿ ಅನಂತರ ಆವನು ತಿಂದು ಮಿಕ್ಕುದನ್ನು ನನಗೆ ತಂದು ಕೊಡಿರಿ. ಆದನ್ನು ನಾನು ಭೋಜನ ಮಾಡುತ್ತೇನೆ.

೩೭. ಎಲೈ ನಾರಿಯರೆ ! ನೀವು ಹಸಿವು ಗೊಂಡಿರುವ ಆ ರಘುನಂದನನ ಬಳಿಗೆ ಹೋಗಿರಿ. ಎಂದು ದೇವಿಯು ಹೇಳಿದುದನ್ನು ಕೇಳಿ ನಿನ್ನ ಬಳಿಗೆ ಬಂದಿದ್ದೇವೆ.

೩೮. ನಮ್ಮ ಪೂರ್ವಪುಣ್ಯದಿಂದ ನೀನು ನಮಗೆ ಸಿಕ್ಕಿದ್ದೀಯೆ. ಇದನ್ನು ನೀನು ಮೊದಲು ಊಟಮಾಡು ಎಂದು ಅವರು ಹೇಳಲು ಆ ಮಾತನ್ನು ಕೇಳಿ ರಾಮನು ನಕ್ಕು ಸಂತೋಷದಿಂದ ಇಂತೆಂದನು.

೩೯. ಎಲೈ ನಾರಿಯರಿರಾ ! ಆ ದೇವಿಯು ಹೇಳುವುದು ನಿಶ್ಚಯವಾಗಿದ್ದ ಪಕ್ಷದಲ್ಲಿ ಈ ಗಹನವಾದ ವನದಲ್ಲಿ ಆ ದುರ್ಗೆಯು ಸೀತೆಯ ರೂಪದಿಂದ ನನ್ನ ಬಳಿಗೆ ಈಗಲೇ ಬರಲಿ.

೪೦. ಎಲೈ ನಾರಿಯರಿರಾ ! ನಿಮ್ಮೊಳಗೊಬ್ಬಳು ಆ ದುರ್ಗೆಯ ಬಳಿಗೆ ಬೇಗನೆ ಹೋಗಿ ನಾನು ಹೇಳಿದುದನ್ನು ನಮ್ರತೆಯಿಂದ ತಿಳಿಸಿರಿ. ಎಂದು ಹೇಳಿದನು.

ತದ್ರಾಮವಚನಂ ಶ್ರುತ್ವಾ ತ್ವೇಕಾ ಸ್ತ್ರೀ ಸ್ತ್ರೀಕದಂಬಕಾತ್ ।
ಗತ್ವಾ ದುರ್ಗಾಂ ರಾಮವಾಕ್ಯಂ ಶ್ರಾವಯಾಮಾಸ ಸಾದರಂ　　॥ ೪೧ ॥

ದುರ್ಗಾ ಶ್ರುತ್ವಾ ರಾಮವಾಕ್ಯಂ ತಥೇತ್ಯುಕ್ತ್ವಾ ತು ತಾಂ ಸ್ತ್ರಿಯಂ ।
ಕಿಂಚಿತ್ಕಪಾಟಮುದ್ಘಾಟ್ಯ ಸೀತಾರೂಪೇಣ ನಿರ್ಯಯೌ　　॥ ೪೨ ॥

ತತಃ ಪುನರ್ದೃಢಂ ಬಧ್ವಾ ಕಪಾಟಂ ಜಾನಕೀ ಜವಾತ್ ।
ತೋಯಪಾತ್ರಂ ಕರೇ ಧೃತ್ವಾ ಯಯೌ ರಾಮಂ ಸ್ಮಿತಾನನಾ　　॥ ೪೩ ॥

ನಮಸ್ಕೃತ್ವಾ ರಾಮಚಂದ್ರಂ ತತ್ಪಾರ್ಶ್ವೇ ಸಂಸ್ಥಿತಾಭವತ್ ।
ತದಾ ತಾಸ್ಸಕಲಾ ನಾರ್ಯಸ್ತ್ವಭೂವನ್ ವಿಸ್ಮಿತಾ ಹೃದಿ　　॥ ೪೪ ॥

---

೪೧. ರಾಮನ ಈ ಮಾತನ್ನು ಕೇಳಿ ಆ ಹೆಂಗಸರ ಮಧ್ಯದಿಂದ ಒಬ್ಬಳು ದುರ್ಗೆಯ ಬಳಿಗೆ ಹೋಗಿ ರಾಮನು ಹೇಳಿದ ಈ ಮಾದನ್ನು ನಮ್ರತೆಯಿಂದ ಕೈ ಮುಗಿದುಕೊಂಡು ಹೇಳಿದಳು.

೪೨. ಆ ದುರ್ಗೆಯು ಶ್ರೀರಾಮನ ಮಾತನ್ನು ಕೇಳಿ ಆ ಹೆಂಗಸಿಗೆ ಹಾಗೇ ಆಗಲೆಂದು ಹೇಳಿ ಬಾಗಿಲನ್ನು ಸ್ವಲ್ಪ ತೆಗೆದುಕೊಂಡು ಸೀತೆಯ ರೂಪಿನಿಂದ ಈಚೆಗೆ ಬಂದಳು.

೪೩. ಹಾಗೆ ಬಂದ ಜಾನಕಿಯು ಬಾಗಿಲನ್ನು ಮತ್ತೆ ಗಟ್ಟಿಯಾಗಿ ಹಾಕಿಕೊಂಡು ನೀರಿನ ಪಾತ್ರೆಯನ್ನು ಕೈಯಲ್ಲಿ ಹಿಡಿದು ಕೊಂಡು ನಗುತ್ತಾ ರಾಮನ ಬಳಿಗೆ ಬಂದಳು.

೪೪. ಅಲ್ಲಿ ರಾಮಚಂದ್ರನಿಗೆ ನಮಸ್ಕರಿಸಿ ಅವನ ಪಕ್ಕದಲ್ಲಿ ಕುಳಿತುಕೊಂಡಳು. ಅದನ್ನು ನೋಡಿ ಆ ಹೆಂಗಸರೆಲ್ಲರೂ ರಾಮನ ವಿಷಯದಲ್ಲಿ ಬಹುವಾಗಿ ಆಶ್ಚರ್ಯಗೊಂಡರು.

ತತೋ ರಾಮೋ ವರಾನ್ನಾನಿ ವಿಪ್ರಸ್ತ್ರೀಣಾಂ ತಥಾಪುನಃ ।
ಕ್ಷತ್ರಿಯಾಣಾಂ ಚ ನಾರೀಣಾಂ ಭೋಕ್ತುಂ ಸ್ನಾನಾರ್ಥಮುದ್ಯತಃ ॥ ೪೫ ॥

ತತಶ್ಚರಾಸನೇ ಬಾಣಂ ಸಂಧಾಯ ಜಗದೀಶ್ವರಃ ।
ಭುವಂ ಭಿತ್ವಾ ಪಾತಾಳಾಜ್ಜಲಂ ತತ್ರ ಸಮಾನಯತ್ ॥ ೪೬ ॥

ತತಸ್ಸಸ್ನಾ ರಾಮಚಂದ್ರಃ ಕೃತ್ವಾ ಮಾಧ್ಯಾಹ್ನಿಕಂ ತತಃ ।
ಯಾವದ್ಭೋಕ್ತುಂ ಮನಶ್ಚಕ್ರೇ ತಾವತ್ತೇಽಪಿ ಸಮಾಯಯುಃ ॥ ೪೭ ॥

ಕುಶಾದ್ಯಾಸ್ಸರ್ವಸೈನ್ಯೈಶ್ಚ ರಾಮವಾಜಿಪದಾನುಗಾಃ ।
ತೇ ಸರ್ವೇ ಜಾನಕೀಂ ದೃಷ್ಟ್ವಾ ವಿಸ್ಮಯಂ ಪರಮಂ ಯಯುಃ ॥ ೪೮ ॥

ತತಸ್ತೇ ಶಬರೀವಾಕ್ಯಾತ್ಸರ್ವೇ ಶ್ರುತ್ವಾ ಕುಶಾದಿಕಾಃ ।
ಗತಮೋಹಾ ರಾಮಚಂದ್ರಂ ಮೇನಿರೇ ಚಂದ್ರಶೇಖರಂ ॥ ೪೯ ॥

---

೪೫. ಆಗ ರಾಮನು ಅಲ್ಲಿಗೆ ಬ್ರಾಹ್ಮಣಸ್ತ್ರೀಯರೂ, ಕ್ಷತ್ರಿಯ ಸ್ತ್ರೀಯರೂ, ತಂದಿರುವ ಅನ್ನವನ್ನು ಊಟಮಾಡಬೇಕೆಂದು ಉದ್ದೇಶಿಸಿ ಸ್ನಾನ ಮಾಡಲು ಪ್ರಯತ್ನಪಟ್ಟನು.

೪೬. ಒಡನೆಯೇ ಬಿಲ್ಲಿನಲ್ಲಿ ಬಾಣವನ್ನು ಹೂಡಿ ಆ ಜಗದೀಶ್ವರನಾದ ರಾಮನು ಭೂಮಿಗೆ ಹೊಡೆದು ರಂಧ್ರವನ್ನು ಮಾಡಿ ಪಾತಾಳದಿಂದ ನೀರು ಬರುವಂತೆ ಮಾಡಿದನು.

೪೭–೪೮. ಅನಂತರ ಅದರಲ್ಲಿ ರಾಮನು ಸ್ನಾನಮಾಡಿದನು ಮಾಧ್ಯಾಹ್ನಿಕವನ್ನೂ ಅದರಲ್ಲಿಯೇ ಮಾಡಿದನು. ಅನಂತರ ಭೋಜನಮಾಡುವುದಕ್ಕೆ ಕುಳಿತುಕೊಳ್ಳಬೇಕೆನ್ನು ಅಷ್ಟರಲ್ಲಿ ಕುಶನೇ ಮುಂತಾದವರೆಲ್ಲರೂ ಸೈನ್ಯದೊಡನೆ ಆ ಶ್ರೀರಾಮಚಂದ್ರನ ಕುದುರೆಯ ಕಾಲಿನ ಹೆಜ್ಜೆಯನ್ನು ಅನುಸರಿಸಿಕೊಂಡು ಅಲ್ಲಿಗೆ ಬಂದರು. ಆದರೆ ಅಲ್ಲಿ ರಾಮನ ಬಳಿಯಲ್ಲಿ ಸೀತೆಯಿರುವುದನ್ನು ನೋಡಿ ಬಹುವಾಗಿ ಆಶ್ಚರ್ಯಗೊಂಡರು.

೪೯. ಅನಂತರ ಅವರೆಲ್ಲರೂ ಶಬರಿಯಿಂದ ಅಲ್ಲಿ ನಡೆದ ವಿಷಯವೆಲ್ಲವನ್ನೂ ತಿಳಿದುಕೊಂಡು ತಮ್ಮಲ್ಲಿದ್ದ ಅಜ್ಞಾನವನ್ನು ಬಿಟ್ಟು ಬಿಟ್ಟು ಆ ಶ್ರೀರಾಮನೇ ಚಂದ್ರಶೇಖರನೆಂದೂ, ರಾಮನಿಗೂ ಪರಮೇಶ್ವರನಿಗೂ ಭೇದವಿಲ್ಲವೆಂದೂ ತಿಳಿದುಕೊಂಡರು.

ಸೀತಾಂ ಗಿರೀಂದ್ರಜಾಂ ಚಾಪಿ ಮೇನಿರೇ ತೇ ವಿನಿಶ್ಚಯಾತ್ ।
ತತೋ ರಾಮಃ ಕುಶಾದ್ಯೈಶ್ಚ ಮುದಾ ಸೈನ್ಯೇನ ಸೀತಯಾ ॥ ೫೦ ॥

ಭುಕ್ತ್ವಾ ಪೀತ್ವಾ ಜಲಂ ಸ್ವಚ್ಛಂ ವಾಕ್ಯಂ ಸ್ತ್ರೀಃ ಪ್ರಾಹ ಸಾದರಂ ।
ವರಯಧ್ವಂ ವರಾನ್ ನಾರ್ಯೋ ಯುಷ್ಮಾಕಂ ಯತ್ತು ರೋಚತೇ ॥ ೫೧ ॥

ತದ್ರಾಮವಚನಂ ಶ್ರುತ್ವಾ ಸ್ತ್ರಿಯಃ ಪ್ರೋಚೂ ರಘೂತ್ತಮಂ ।
ಯೇನಾಸ್ಮಾಕಂ ಭವೇತ್ಕೀರ್ತಿಸ್ತಂ ವರಂ ದಾತುಮರ್ಹಸಿ ॥ ೫೨ ॥

ತತಃ ಪ್ರಾಹ ರಾಮಚಂದ್ರಸ್ತಾ ನಾರೀಸ್ತುಷ್ಟಮಾನಸಃ ।
ಮಮ ನಾಮಾಸ್ತು ಯುಷ್ಮಾಕಂ ರಾಮೇತಿ ಜಗತೀತಲೇ ॥ ೫೩ ॥

೫೦-೫೧. ಸೀತೆಯೇ ಪಾರ್ವತಿಯೆಂಬುದಾಗಿಯೂ ಕೂಡ ಅವರು ನಿಶ್ಚಯವಾಗಿಯೂ ತಿಳಿದು, ಸೀತೆಗೂ ಪಾರ್ವತಿಗೂ ರಾಮನಿಗೂ ಶಿವನಿಗೂ ಭೇದವೇ ಇಲ್ಲವೆಂದೂ ತಿಳಿದುಕೊಂಡರು. ಅನಂತರ ರಾಮನು ಸೀತೆ, ಕುಶ, ಸೈನ್ಯಗಳೊಡನೆ ಭೋಜನಮಾಡಿ, ಒಳ್ಳೆಯ ಪಾನೀಯಗಳನ್ನು ಕುಡಿದು ಅನಂತರದಲ್ಲಿ ಆ ಹೆಂಗಸರನ್ನು ಕುರಿತು ಎಲೈ ಸ್ತ್ರೀಯರಿರಾ! ನಿಮಗೆ ಬೇಕಾದ ವರಗಳನ್ನು ಕೇಳಿಕೊಳ್ಳಿರಿ. ಕೊಡುತ್ತೇನೆ ಎಂದನು.

೫೨. ರಾಮನು ಹೀಗೆಂದು ಹೇಳಿದುದನ್ನು ಆ ಹೆಂಗಸರು ಕೇಳಿ ಎಲೈ ರಾಮನೇ! ನಮಗೆ ಪ್ರಪಂಚದಲ್ಲಿ ಕೀರ್ತಿಬರುವ ರೀತಿಯಲ್ಲಿ ವರವನ್ನು ಕೊಡು. ನಮ್ಮ ಕೀರ್ತಿಯು ಲೋಕದಲ್ಲೆಲ್ಲಾ ಹರಡಬೇಕು. ಅಂತಹ ವರವನ್ನು ಕೊಡಬೇಕು. ಎಂದು ಕೇಳಿಕೊಂಡರು.

೫೩. ಆದರಿಂದ ರಾಮನು ಸಂತೋಷಗೊಂಡು ಎಲೈ ಸುಂದರಿಯರಿರಾ! ಇಲ್ಲಿಂದ ಮುಂದೆ ನಿಮ್ಮಗಳಿಗೆ ನನ್ನ ಹೆಸರೇ ಲೋಕದಲ್ಲೆಲ್ಲಾ ಪ್ರಸಿದ್ಧಿಯಾಗಲಿ ನೀಮ್ಮನ್ನೂ "ರಾಮಾ" ಎಂದೇ ಕೂಗಲಿ.

ಯುಷ್ಮಾಕಂ ಮಯಿ ಸದ್ಭಕ್ತಿಃ ಪುರುಷೇಭ್ಯೋಽಪಿ ಚಾಧಿಕಾ ।
ಭವಿಷ್ಯತಿ ತದಾ ನಾರ್ಯೋ ವರೇಣ ಮಮ ನಿಶ್ಚಯಾತ್ ॥ ೫೪ ॥

ದೇವೇ ವಿಪ್ರೇ ಕಥಾಯಾಂ ಚ ಧರ್ಮೇ ಭಕ್ತಿರ್ಭವಿಷ್ಯತಿ । .
ಸದಾ ಯೂಯಂ ಪವಿತ್ರಾಶ್ಚ ಭವದ್ಧ್ವಂ ಸಧವಾ ಸ್ತ್ರಿಯಃ ॥ ೫೫ ॥

ಮಾಂಗಲ್ಯೇ ಶಕುನೇ ಸರ್ವಕರ್ಮಸು ಚ ಪುರಸ್ಸರಾಃ ।
ಯೂಯಂ ಭವದ್ಧ್ವಂ ಸರ್ವತ್ರ ತ್ರಿವೇಣೀಧೃತಮಸ್ತಕಾಃ ॥ ೫೬ ॥

ಮಮ ಬಾಣಾತ್ಕೃತಂ ತೀರ್ಥಂ ಮನ್ನಾಮ್ನೇದಂ ಭವಿಷ್ಯತಿ ।
ಇತಿ ರಾಮವಚಶ್ಶ್ರುತ್ವಾ ಸ್ತ್ರಿಯಃ ಪ್ರೋಚೂ ರಘೂತ್ತಮಂ ॥ ೫೭ ॥

---

೫೪. ನಿಮ್ಮಗಳಿಗೆ ನನ್ನಲ್ಲಿ ಗಂಡಸರಿಡುವ ಭಕ್ತಿಗಿಂತಲೂ ಭಕ್ತಿಯು ಹೆಚ್ಚಾಗಿರಲಿ. ಈ ನಾನು ಕೊಡುವ ವರದಿಂದ ಇವೆಲ್ಲವೂ ನಿಮಗೆ ನಿಶ್ಚಯು ವಾಗಿಯೂ ಆಗುತ್ತವೆ.

೫೫. ನಿಮ್ಮಗಳಿಗೆ ದೇವರಲ್ಲಿಯೂ, ಬ್ರಾಹ್ಮಣರಲ್ಲಿಯೂ, ಕಥೆಗಳಲ್ಲಿಯೂ ಧರ್ಮಗಳಲ್ಲಿಯೂ, ಬಹುವಾಗಿ ಭಕ್ತಿಯು ಹೆಚ್ಚುತ್ತದೆ. ಗಂಡಂದಿರುಳ್ಳ ಮುತ್ತೈದೆಯ ರೆಂದೆನಿಸಿಕೊಳ್ಳುವ ಹೆಂಗಸರು ಯಾವಾಗಲೂ ಪವಿತ್ರರಾಗಿರುತ್ತಾರೆ. ಇದು ನಿಶ್ಚಯವು.

೫೬. ಮಂಗಳಗಳಲ್ಲಿಯೂ, ಶಕುನಗಳಲ್ಲಿಯೂ, ಎಲ್ಲಾ ಕೆಲಸಗಳಲ್ಲಿಯೂ ನೀವುಗಳು ಜಡೆಯನ್ನು ಹಾಕಿಕೊಂಡು ಮುಂದಾಳಾಗಿರಿ.

೫೭. ನಾನು ಸ್ನಾನಕೋಸ್ಕರವಾಗಿ ಇಲ್ಲಿ ಬಾಣದಿಂದ ಮಾಡಿರುವ ತೀರ್ಥವು ರಾಮತೀರ್ಥವೆಂದು ನನ್ನ ಹೆಸರಿನಿಂದಲೇ ಪ್ರಸಿದ್ಧಿಯಾಗಿ ಆಗುತ್ತದೆ. ಎಂಬುದಾಗಿ ಶ್ರೀರಾಮನು ಹೇಳಲು ಅದನ್ನು ಕೇಳಿ ಆ ಸ್ತ್ರೀಯರು ರಾಮನನ್ನು ಕುರಿತು ಮತ್ತೆ ಇಂತೆಂದರು.

ಜನ್ಮಾಂತರೇಪಿ ತ್ವಂ ರಾಮ ದರ್ಶನಂ ದೇಹಿ ನಃ ಪುನಃ ।
ತತ್ತಾಸಾಂ ವಚನಂ ಶ್ರುತ್ವಾ ರಾಘವೋ ವಾಕ್ಯಮಬ್ರವೀತ್ ॥ ೫೮ ॥

ದ್ವಾಪರೇ ಕೃಷ್ಣರೂಪೇಣ ಯುಷ್ಮಾಕಂ ದರ್ಶನಂ ಮಮ ।
ಭವಿಷ್ಯತಿ ವನೇ ಯಜ್ಞೇ ತ್ವನ್ನಯಾಚ್ನಾಪ್ರಸಂಗತಃ ॥ ೫೯ ॥

ದ್ವಿಜಪತ್ನ್ಯಸ್ತದಾ ಯೂಯಂ ಭವಿಷ್ಯಥ ಸ್ತ್ರಿಯೋ ವನೇ ।
ಇಯಂ ತು ಶಬರೀ ಪತ್ನೀ ವಿಪ್ರಸ್ಯೈವ ಭವಿಷ್ಯತಿ ॥ ೬೦ ॥

ಮದ್ದರ್ಶನಾರ್ಥಮುದ್ಯುಕ್ತಾಮೇನಾಮಸ್ಯಾಃ ಪತಿರ್ಯದಾ ।
ಸ್ತಂಭೇ ಬದ್ಧ್ವಾ ಮಹಾದಂಡಂ ಸ ಕರಿಷ್ಯತಿ ವೈ ಗೃಹೇ ॥ ೬೧ ॥

---

೫೮. ಎಲೈ ರಾಮನೆ! ನೀನು ನನಗೆ ಜನ್ಮಾಂತರದಲ್ಲಿಯೂ ಕೂಡ ಮತ್ತೆ ಮತ್ತೆ ದರ್ಶನವನ್ನು ಕೊಡುತ್ತಿರಬೇಕು. ಎಂದೆನಲು ರಾಮನು ಅವರನ್ನು ಕುರಿತು ಮತ್ತೂ ಇಂತೆಂದು ಹೇಳಿದನು.

೫೯. ಎಲೈ ರಮಣಿಯರಿರಾ! ದ್ವಾಪರಯುಗದಲ್ಲಿ ಕೃಷ್ಣಾವತಾರವನ್ನು ಮಾಡಿ ಮತ್ತೆ ನಿಮಗೆ ದರ್ಶನವನ್ನು ಕೊಡುತ್ತೇನೆ. ಆಗ ಕಾಡಿನಲ್ಲಿ ನಡೆಯುವ ಯಜ್ಞದಲ್ಲಿ ಅನ್ನವನ್ನು ಯಾಚಿಸುವುದರ ಮೂಲಕ ನನ್ನ ದರ್ಶನವು ನಿಮಗಾಗುತ್ತದೆ.

೬೦. ಆ ಕಾಲದಲ್ಲಿ ನೀವು ಕಾಡಿನಲ್ಲಿ ಬ್ರಾಹ್ಮಣ ಸ್ತ್ರೀಯರಾಗಿರುತ್ತೀರಿ. ಈ ಶಬರಿಯೂ ಕೂಡ ಒಬ್ಬ ಬ್ರಾಹ್ಮಣನ ಹೆಂಡತಿಯಾಗಿ ಇರುತ್ತಾಳೆ.

೬೧. ಆಗ ಈಕೆಯು ನನ್ನ ದರ್ಶನಕೋಸ್ಕರ ಪ್ರಯತ್ನಪಟ್ಟು ನನ್ನನ್ನೇ ಸ್ಮರಿಸುತ್ತಿರುವಳು. ಇದನ್ನು ನೋಡಿ ಆಕೆಯ ಗಂಡನು ಆಕೆಯನ್ನು ಮನೆಯಲ್ಲಿ ಕಂಬಕ್ಕೆ ಕಟ್ಟಿಹಾಕಿ ಬಹುವಾಗಿ ಶಿಕ್ಷಿಸುವನು.

ತದೇಯಂ ಮದ್ಗತಮನಾ ವನೇ ಯಾಸ್ಯತಿ ಮಾಂ ಪ್ರತಿ ।
ಭಿನ್ನದೇಹೇನ ಶಬರೀ ಕೌತುಕಂ ತದ್ಭವಿಷ್ಯತಿ ॥ ೬೨ ॥

ತದಾ ಯೂಯಂ ಸ್ತ್ರಿಯಸ್ಸರ್ವಾಸ್ತದ್ದೃಷ್ಟ್ವಾ ಕೌತುಕಂ ಮಹತ್ ।
ಭೂತ್ವಾತ್ರ ಮದ್ಗತಮನಾ ಮಾಂ ಧ್ಯಾತ್ವಾ ಸರ್ವದಾ ಹೃದಿ ॥ ೬೩ ॥

ಅಂತೇ ಮಲ್ಲೋಕಮಾಸಾದ್ಯ ಭೋಕ್ಷ್ಯಥ ಸುಖಮುತ್ತಮಂ ।
ರಾಮೇತಿ ತಾರಕಂ ನಾಮ ಮಮ ನಿತ್ಯಂ ಹಿ ಸರ್ವದಾ ॥ ೬೪ ॥

ಯುಷ್ಮಾಭಿರ್ಜಪನೀಯಂ ವೈ ತೇನಾಸ್ತು ಗತಿರುತ್ತಮಾ ।
ಇತಿ ದತ್ವಾ ವರಾನ್ ತಾಭ್ಯಸ್ಸೀತಾಮಾಹ ಪುರಸ್ಸ್ಥಿತಾಂ ॥ ೬೫ ॥

---

೬೨. ಅನಂತರವೂ ಇವಳು ನನ್ನಲ್ಲಿಯೇ ಮನಸ್ಸನ್ನು ಇಟ್ಟು ಕಾಡಿಗೆ ನನ್ನನ್ನು ಹುಡುಕಿ ಕೊಂಡು ಹೊರಡುವಳು. ಆಗ ಅವಳು ಮನೆಯಲ್ಲಿ ಒಂದು ದೇಹದಿಂದಿದ್ದರೆ ಕಾಡಿನಲ್ಲಿ ನನ್ನನ್ನು ಹುಡುಕುತ್ತಾ ಮತ್ತೊಂದು ದೇಹದಿಂದಿರುವಳು. ಇದು ಎಲ್ಲರಿಗೂ ಬಹು ಆಶ್ಚರ್ಯಕರವಾಗಿರುವುದು.

೬೩. ಆಗ ಅಲ್ಲಿರುವ ಹೆಂಗಸರಾದ ನೀವೆಲ್ಲರೂ ಈ ಆಶ್ಚರ್ಯವನ್ನು ನೋಡಿ ನನ್ನಲ್ಲಿಯೇ ಮನಸ್ಸನ್ನು ಇಟ್ಟುಕೊಳ್ಳುವಿರಿ. ಯಾವಾಗಲೂ ಮನಸ್ಸಿನಲ್ಲಿ ನನ್ನನ್ನೇ ಧ್ಯಾನಿಸುವಿರಿ.

೬೪. ಹೀಗೆ ನನ್ನನ್ನು ಧ್ಯಾನಿಸುತ್ತಲಿದ್ದುಕೊಂಡು ದೇಹವನ್ನು ಬಿಟ್ಟನಂತರ ಉತ್ತಮವಾದ ಸುಖವನ್ನು ನನ್ನ ಲೋಕದಲ್ಲಿ ಅನುಭವಿಸುವಿರಿ, ರಾಮ ಎಂಬ ತಾರಕ ಮಂತ್ರವನ್ನು ನೀವು ಹೃದಯದಲ್ಲಿ ಜಗಿಸುತ್ತಿರಬೇಕು.

೬೫. ಈ ರಾಮವೆಂಬ ತಾರಕ ಮಂತ್ರವನ್ನು ಯಾರು ಜಪಿಸುತ್ತಾರೆಯೋ ಅವರಿಗೆ ಉತ್ತಮ ಗತಿಯು ಉಂಟಾಗಲಿ. ಹೀಗೆಂಬುದಾಗಿ ರಾಮನು ಅವರಿಗೆ ವರಗಳನ್ನು ಕೊಟ್ಟು ಎದುರಿಗಿರುವ ಸೀತೆಯನ್ನು ಕುರಿತು ಇಂತೆಂದನು.

ಸುಖಂ ಯಾಹಿ ಸ್ಥಲಂ ಸ್ವೀಯಂ ತಥೇತ್ಯುಕ್ತ್ವಾ ವಿದೇಹಜಾ ।
ರಾಮಂ ಪ್ರಣಮ್ಯ ಸ್ತ್ರೀಯುಕ್ತಾ ಯಯೌ ದೇವಾಲಯಂ ಪುನಃ ॥ ೬೬ ॥

ದೇವಾಲಯಗತಾ ಭೂತ್ವಾ ದುರ್ಗಾರೂಪಂ ದಧಾರ ಸಾ ।
ತದಾತಿ ವಿಸ್ಮಯಂ ಪ್ರಾಪುಸ್ತಾ ನಾರ್ಯೋ ನಿಜಚೇತಸಿ ॥ ೬೭ ॥

ತಾಸ್ತಾಂ ದುರ್ಗಾಂ ಪ್ರಪೂಜ್ಯಾಥ ನಾರ್ಯೋ ಜಗ್ಮುಃ ಸ್ಥಲಂ ನಿಜಂ ।
ರಾಮೋಽಪಿ ಬಂಧುಪುತ್ರಾದ್ಯೈರ್ಯಯೌ ನಿಜಪುರೀಂ ಪ್ರತಿ ॥ ೬೮ ॥

ತತೋ ಗೇಹೇ ಕುಶಸ್ಸೀತಾಂ ಪಪ್ರಚ್ಛ ವನಚೇಷ್ಟಿತಂ ।
ದೃಷ್ಟವಚ್ಚ ಯಥಾವೃತ್ತಂ ತಥಾ ಸೀತಾ ನ್ಯವೇದಯತ್ ॥ ೬೯ ॥

---

೬೬. ಎಲೈ ಸೀತೆಯೇ! ನೀನು ನೀನಿರುವ ಸ್ಥಳಕ್ಕೆ ಸುಖವಾಗಿ ಹೊರಡು ಎಂದನಲು ಆ ಸೀತೆಯು ಹಾಗೆಯೇ ಆಗಲೆಂದು ಹೇಳಿ ರಾಮನಿಗೆ ನಮಸ್ಕರಿಸಿ ಆ ಹೆಂಗಸರನ್ನು ಜೊತೆಯಲ್ಲಿ ಕರೆದುಕೊಂಡು ಮತ್ತೆ ಆ ದೇವಾಲಯಕ್ಕೆ ಹೊರಟು ಹೋದಳು.

೬೭. ಆ ಸೀತೆಯು ದೇವಸ್ಥಾನಕ್ಕೆ ಹೋದಮೇಲೆ ದುರ್ಗೆಯ ರೂಪನ್ನೇ ಹೊಂದಿ ನೆಲಸಿದಳು. ಆಗ ಆ ಹೆಂಗಸರಿಗೆಲ್ಲಾ ಮನಸ್ಸಿನಲ್ಲಿ ಆಶ್ಚರ್ಯವಾಯಿತು.

೬೮. ಅನಂತರ ಆ ನಾರಿಯರೆಲ್ಲರೂ ದುರ್ಗೆಯನ್ನು ಪೂಜಿಸಿ ತಮ್ಮತಮ್ಮ ಮನೆಗಳಿಗೆ ಹೊರಟು ಹೋದರು. ಅತ್ತ ರಾಮನು ತಮ್ಮಂದಿರೊಡನೆಯೂ, ಮಕ್ಕಳೊಡನೆಯೂ ಕೂಡಿಕೊಂಡು ತನ್ನ ಪಟ್ಟಣಕ್ಕೆ ಹೋದನು.

೬೯. ಮನೆಗೆ ಹೋದ ಮೇಲೆ ಕುಶನು ವನದಲ್ಲಿ ಸೀತೆಯು ಮಾಡಿದ ಕೆಲಸಗಳನ್ನು ಕುರಿತು ಅವಳನ್ನು ಕೇಳಿದನು. ಸೀತೆಯೂ ಕೂಡ ಅದೆಲ್ಲವನ್ನೂ ತಾನು ನೋಡಿದಂತೆಯೇ ಹೇಳಿ ಬಿಟ್ಟಳು.

ತತಸ್ತೇ ಲಕ್ಷ್ಮಣಾದ್ಯಾಶ್ಚ ಮೇನಿರೇ ರಾಘವಂ ಹರಂ ।
ಸೀತಾಂ ಸಾಕ್ಷಾನ್ಮಹಾದುರ್ಗಾಂ ಮೇನಿರೇ ಗತವಿಭ್ರಮಾಃ ॥ ೭೦ ॥

ಏವಂ ಶಿಷ್ಯ ಜನಾನಾಂ ಚ ರಾಮೇಣ ಪರಮಾತ್ಮನಾ ।
ದ್ವೈತಬುದ್ಧಿಃ ಖಂಡಿತಾತ್ರ ವನೇ ಕೃತ್ವಾ ತು ಕೌತುಕಂ ॥ ೭೧ ॥

ಏವಂ ವರೇಣ ರಾಮಸ್ಯ ರಾಮಾ ನಾರ್ಯತ್ರ ಕಥ್ಯತೇ ।
ತಾಸಾಮಪಿ ಮನುಶ್ಚಾಯಂ ಸ್ಮೃತೋ ರಾಮೇತಿ ದ್ವ್ಯಕ್ಷರಃ ॥ ೭೨ ॥

ನಾನ್ಯೋ ಮಂತ್ರೋಽಸ್ತಿ ನಾರೀಣಾಂ ಶೂದ್ರಾಣಾಂ ಚಾಪಿ ಭೋ ದ್ವಿಜ ।
ಸರ್ವೇಭ್ಯೋ ಮಂತ್ರವರ್ಯೇಭ್ಯೋ ರಾಮಸ್ಯಾಯಂ ಮನುರ್ವರಃ ॥ ೭೩ ॥

---

೭೦. ಆ ಮೇಲೆ ಲಕ್ಷ್ಮಣನೇ ಮುಂತಾದವರೆಲ್ಲರೂ ರಾಘವನನ್ನು ಹರನೆಂದೇ ತಿಳಿದರು. ಸೀತೆಯನ್ನೂ ಕೂಡ ದುರ್ಗಾದೇವಿಯೆಂದೇ ಸ್ವಲ್ಪವೂ ಸಂದೇಹಪಡದೆ ತಿಳಿದುಕೊಂಡರು.

೭೧. ಎಲೈ ಶಿಷ್ಯನೇ! ರಾಮನು ಇವೇ ಮೊದಲಾದ ಅನೇಕ ರೀತಿಗಳಿಂದ ಜನಗಳಿಗೆ ದ್ವೈತಬುದ್ಧಿಯನ್ನು ಎಂದರೆ ತಾನು ಬೇರೆ ಹರನು ಬೇರೆ ಎಂಬ ಬುದ್ಧಿಯನ್ನು ನಾಶಪಡಿಸಿದನು.

೭೨. ರಾಮನು ಹೆಂಗಸರಿಗೆ ತನ್ನ ಹೆಸರಿರಲೆಂದು ವರವನ್ನು ಕೊಟ್ಟು ದರಿಂದ ಅವರನ್ನು "ರಾಮಾ"ಎಂದು ಕರೆಯುತ್ತಾರೆ. ಅವರು ರಾಮಾ ಎಂದು ಕೂಗಿದ ಆ ಅಕ್ಷರಗಳೇನೇ ಎರಡಕ್ಷರದ ಮಂತ್ರವಾಗಿ ಪರಿಣಮಿಸಿದೆ.

೭೩. ಎಲೈ ವಿಷ್ಣುದಾಸನೇ! ಹೆಂಗಸರಿಗಾಗಲಿ ಶೂದ್ರರಿಗಾಗಲಿ ಈ ರಾಮಾ ಎಂಬ ಎರಡಕ್ಷರದ ಮಂತ್ರವನ್ನು ಹೊರತು ಬೇರೊಂದನ್ನು ಸ್ಮರಿಸುವ ಮತ್ತು ಉಚ್ಚರಿಸುವ ಅಧಿಕಾರವಿರುವುದಿಲ್ಲ. ರಾಮನ ಮಂತ್ರಗಳೊಳಗೆಲ್ಲಾ ಈ ರಾಮ ಎಂಬ ಮಂತ್ರವೇ ಬಹು ಉತ್ತಮ ವಾದುದು.

ತ್ರಾಸೇ ಭಯೇ ಮಹಾ ಪಾಪೇ ಬಾಧಾಯಾಂ ಸರ್ವದಾ ನರೈಃ ।
ರಾಮೇತಿ ದ್ವ್ಯಕ್ಷರೋ ಮಂತ್ರಃ ಕೀರ್ತ್ಯತೇ ಜಗತೀತಲೇ ॥ ೭೪ ॥

ಕೃತ್ವಾ ಪಾಪಂ ಮಹಾಘೋರಂ ಪಶ್ಚಾತ್ತಾಪೇನ ಯೋ ನರಃ ।
ಸಕೃದ್ರಾಮೇತಿ ಮಂತ್ರಂ ಹಿ ಕೀರ್ತಯೇಚ್ಛುದ್ಧಿಮಾಪ್ನುಯಾತ್ ॥ ೭೫ ॥

ರಾಮೇತಿ ಮಂತ್ರರಾಜೋಽಯಂ ಗಮನೇ ಭೋಜನೇ ತಥಾ ।
ಶಯನೇ ಕ್ರೀಡನೇ ರಾತ್ರೌ ಸ್ಥಿತೇ ಕಾರ್ಯಾಂತರೇ ನರೈಃ ॥ ೭೬ ॥

ಜಪನೀಯಸ್ಸರ್ವದೈವ ಸಂಧ್ಯಯೋರುಭಯೋರಪಿ ।
ಚತುರ್ವರ್ಣೈಸ್ಸದಾ ಜಪ್ಯಶ್ಚತುರಾಶ್ರಮವಾಸಿಭಿಃ ॥ ೭೭ ॥

---

೭೪. ಜನಗಳಿಗೆ ಭಯವು ಬಂದಾಗಲೂ ತ್ರಾಸವುಂಟಾದಾಗಲೂ, ಮಹಾ ಪಾಪವು ಬಂದಾಗಲೂ, ದಾನವರಿಂದ ತೊಂದರೆ ಬಂದಾಗಲೂ, ಯಾವಾಗ ಲಾದರೂ ಸರಿಯೇ ರಾಮ ಎಂಬ ಎರಡಕ್ಷರದ ಮಂತ್ರವು ಉಚ್ಚರಿಸಲ್ಪಟ್ಟರೆ ಅವುಗಳನ್ನೂ ಹೋಗಲಾಡಿಸುತ್ತದೆ. ಜಗತ್ತಿನಲ್ಲಿ ಈ ಮಂತ್ರವೇ ಶ್ರೇಷ್ಠವೆಂದು ಹೇಳಲ್ಪಟ್ಟಿದೆ.

೭೫. ಯಾವನಾದರೂ ಮನುಷ್ಯನು ಮಹಾಪಾಪವನ್ನು ಮಾಡಿ ಅನಂತರ ಅದಕೋಸ್ಕರ ದುಃಖಿತನಾಗಿ ಒಂದೇ ಆವರ್ತಿ ರಾಮ ಎಂದು ಸ್ಮರಿಸಿದರೆ ಅವನು ಶುದ್ಧನಾಗುತ್ತಾನೆ.

೭೬-೭೭. ರಾಮ ಎಂಬುವ ಈ ಮಂತ್ರವು ಎಲ್ಲಾ ಮಂತ್ರಗಳಿಗೂ ರಾಜನು. ಪ್ರಯಾಣ, ಭೋಜನ, ಶಯನ, ಕ್ರೀಡನಗಳಲ್ಲಿಯೂ ಬೇರೆ ಕಾರ್ಯ ಕೋಸ್ಕರ ಹೋಗುವಾಗಲೂ, ಯಾವಾಗಲೂ ಇದನ್ನು ಜಪಿಸುತ್ತಿರಬೇಕು. ಇದನ್ನು ಬ್ರಹ್ಮ, ಕ್ಷತ್ರ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರೂ, ಬ್ರಹ್ಮ ಚಾರಿಗೃಹಸ್ಥ, ವಾನಪ್ರಸ್ಥ, ಸನ್ಯಾಸಿಗಳೆಂಬ ನಾಲ್ಕು ಆಶ್ರಮದವರೂ ಯಾವಾಗ ಬೇಕಾದರೂ ಜಪಿಸಬಹುದು.

ನಾತ್ರ ಮಂತ್ರಸ್ಯ ಕಾಲೋಽಸ್ತಿ ಜಪಾರ್ಥಂ ಕಾಲರೂಪಿಣಃ ।
ತಸ್ಮಾಜ್ಜನೈರ್ಜಪನೀಯಸ್ಸರ್ವದಾ ಮನುರುತ್ತಮಃ ॥ ೭೮ ॥

ರಾಮಮಂತ್ರೋ ಮುಖೇ ಯಸ್ಯ ದೇಹೋ ಮುದ್ರಾಂಕಿತಸ್ತಥಾ ।
ರಾಮಮುದ್ರಾಂಕಿತಂ ವಸ್ತ್ರಂ ಯಸ್ಯ ತಂ ನೇಕ್ಷಯೇದ್ಯಮಃ ॥ ೭೯ ॥

ರಾಮಮುದ್ರಾಂಕಿತಂ ವಸ್ತ್ರಂ ಸಮುದ್ರಾವಸ್ತ್ರಮುಚ್ಯತೇ ।
ಸರ್ವವಸ್ತ್ರೇಷು ತಚ್ಛ್ರೇಷ್ಠಂ ಪವಿತ್ರಂ ಪಾಪನಾಶನಂ ॥ ೮೦ ॥

ಸಮುದ್ರಾವಸನಂ ದೇಹೇ ಬಿಭ್ರತಂ ಮಾನವೋತ್ತಮಂ ।
ಕೃತಂ ಪಾಪಂ ನ ಲಿಪ್ಯೇತ ಪದ್ಮಪತ್ರಮಿವಾಂಭಸಾ ॥ ೮೧ ॥

---

೭೮. ಈ ಮಂತ್ರವನ್ನು ಜಪಿಸಲು ಕಾಲನಿಯಮ ವಿರುವುದಿಲ್ಲ. ಈ ರಾಮ ಮಂತ್ರವೇ ಕಾಲದ ಸ್ವರೂಪವಾದುದು ಆದ್ದರಿಂದ ಯಾರು ಬೇಕಾದರೂ ಯಾವ ಕಾಲದಲ್ಲಿ ಬೇಕಾದರೂ ಈ ರಾಮಮಂತ್ರವನ್ನು ಜಪಿಸಬಹುದು.

೭೯. ಯಾವನು ರಾಮ ಮಂತ್ರವನ್ನು ಬಾಯಲ್ಲಿ ಜಪಿಸುತ್ತ ದೇಹದಲ್ಲಿ ಶಂಖ, ಚಕ್ರರೂಪವಾದ ಮುದ್ರೆಗಳನ್ನು ಧರಿಸಿ ರಾಮಮುದ್ರಾಂಕಿತವಾದ ವಸ್ತ್ರಗಳನ್ನೇ ಹೊದೆದುಕೊಂಡಿರುವನೋ ಅವನನ್ನು ಯಮನು ನೋಡಲೂ ಕೂಡ ಸಮರ್ಥನಾಗಲಾರನು.

೮೦. ರಾಮಮುದ್ರಾಂಕಿತವಾಗಿರುವ ವಸ್ತ್ರವನ್ನು ಮುದ್ರಾಂಕಿತ ವಸ್ತ್ರವೆಂದು ಹೇಳುತ್ತಾರೆ. ಆ ವಸ್ತ್ರವೇ ಎಲ್ಲಾ ವಸ್ತ್ರಗಳಲ್ಲಿಯೂ ಶ್ರೇಷ್ಠ ವಾದುದು. ಪವಿತ್ರವಾದುದು. ಪಾಪನಾಶಕವಾದುದು.

೮೧. ಆ ಮುದ್ರೆಯಿಂದ ಕೂಡಿರುವ ವಸ್ತ್ರವನ್ನು ದೇಹದಲ್ಲಿ ಧರಿಸಿದರೆ ಮಾನವ ಯಾವ ಪಾಪವನ್ನು ಮಾಡಿದರೂ ಅದು ಅವನಿಗೆ ಅಂಟುವುದಿಲ್ಲ. ಪದ್ಮದ ಎಲೆಯಮೇಲೆ ಬಿದ್ದ ನೀರಿನಂತೆ ಜಾರಿಹೋಗುತ್ತವೆ.

ಸಮುದ್ರಾವಸ್ತ್ರಸಂಯುಕ್ತಂ ದೃಷ್ಟ್ವಾ ಭುವಿ ನರೋತ್ತಮಂ ।
ಯಮದೂತಾಃ ಪಲಾಯಂತೇ ಸಿಂಹಂ ದೃಷ್ಟ್ವಾ ಮೃಗಾ ಯಥಾ ॥ ೮೨ ॥

ಪುರೈಕದಾ ತು ಮುನಯಸ್ಸಂಮಂತ್ರ್ಯೋಚೂ ರಘೂತ್ತಮಂ ।
ರಾಮ ರಾಮ ಮಹಾಬಾಹೋ ಕಲಾವಗ್ರೇ ದ್ವಿಜೋತ್ತಮಾಃ ॥ ೮೩ ॥

ವ್ಯಗ್ರಚಿತ್ತಾ ಮಂದಧಯೋ ಭವಿಷ್ಯಂತ್ಯವನೀತಲೇ ।
ನಿಜಜಾಠರಪೂರ್ತ್ಯರ್ಥಂ ದ್ವಾರಾತ್ ದ್ವಾರಂ ಭ್ರಮಂತಿ ಹಿ ॥ ೮೪ ॥

ಕುತೋಽವಕಾಶಸ್ಸ್ಮರಣೇ ತವ ತೇಷಾಂ ಭವಿಷ್ಯತಿ ।
ಅತಸ್ತೇಷಾಂ ಹಿತಾರ್ಥಾಯ ತ್ವಾಂ ಯಾಚಾಮೋಽದ್ಯ ರಾಘವ ॥ ೮೫ ॥

ತೇಷಾಂ ಹಿತಾರ್ಥಂ ಕಿಂಚಿತ್ತ್ವಮುಪಾಯಂ ವಕ್ತುಮರ್ಹಸಿ ।
ತತ್ತೇಷಾಂ ವಚನಂ ಶ್ರುತ್ವಾ ಮುನೀನಾಂ ರಘುನಂದನಃ ॥ ೮೬ ॥

---

೮೨. ರಾಮಮುದ್ರೆಯಿಂದ ಕೂಡಿರುವ ವಸ್ತ್ರಗಳನ್ನು ಹೊದೆದುಕೊಂಡಿರುವ ಮನುಷ್ಯನನ್ನು ನೋಡಿದರೇನೇ ಯಮದೂತರು ಸಿಂಹವನ್ನು ಮೃಗಗಳು ನೋಡಿದರೆ ಓಡಿಹೋಗುವಂತೆ ಓಡಿಹೋಗುವರು.

೮೩–೮೪. ಹಿಂದೆ ಒಂದುಸಾರಿ ಮುನಿಗಳೆಲ್ಲರೂ ಸೇರಿಕೊಂಡು ರಾಮಚಂದ್ರನನ್ನು ಕುರಿತು ಇಂತೆಂದು ಕೇಳಿದರು. ಮಹಾಬಾಹುವಾದ ರಾಮನೆ! ಮುಂದೆ ಕಲಿಯುಗಬರುವುದು. ಅದರಲ್ಲಿ ಬ್ರಾಹ್ಮಣರು ಭೂಮಿಯಲ್ಲಿ ಎಲ್ಲಿ ನೋಡಿದರೂ ಚಂಚಲಚಿತ್ತರಾಗಿಯೂ, ದಡ್ಡರಾಗಿಯೂ ಆಗುವರು. ಅವರು ತಮ್ಮ ಹೊಟ್ಟೆಯನ್ನು ಹೊರೆದುಕೊಳ್ಳುವುದಕ್ಕಾಗಿಯೇ ಇತರರ ಮನೆಯ ಬಾಗಿಲಿನಲ್ಲಿ ಅಲೆಯುತ್ತಿರುವರು.

೮೫. ಅಂಥವರಿಗೆ ಆಗ ನಿನ್ನನಾಮ ಸ್ಮರಣೆ ಮಾಡಲು ಅವಕಾಶವೆಲ್ಲಿ ಸಿಕ್ಕೀತು? ಎಲೈ ರಾಘವನೆ! ಅದರಿಂದ ಅಂಥವರಿಗೆ ಅನುಕೂಲವಾಗಬೇಕೆಂಬ ಬುದ್ಧಿಯಿಂದ ನಿನ್ನನ್ನು ಕೇಳಿಕೊಳ್ಳುತ್ತೇವೆ.

೮೬. ಅವರ ಹಿತಕ್ಕೋಸ್ಕರ ನೀನು ಯಾವುದಾದರೂ ಒಂದು ಉಪಾಯವನ್ನು ಹೇಳು. ಎಂದು ಕೇಳಲು ಅವರ ಮಾತನ್ನು ಕೇಳಿ ಶ್ರೀರಾಮನು ಸಂತೋಷಗೊಂಡು ನಗುತ್ತಾ ಇಂತೆಂದನು.

ಉವಾಚ ವಾಕ್ಯಂ ಸಂತುಷ್ಟಸ್ತಾನ್ ಮುನೀನ್ ಪ್ರಹರ್ಷನ್ ಪ್ರಭುಃ ।
ಸಮ್ಯಗುಕ್ತಂ ಮುನಿಶ್ರೇಷ್ಠಾಶ್ಶ್ರುಣುಧ್ವಂ ವಚನಂ ಮಮ ॥ ೮೭ ॥

ಮಮ ಮುದ್ರಾಂಕಿತಂ ವಸ್ತ್ರಂ ಕಲೌ ಧಾರ್ಯಂ ಜನೈಸ್ಸುಖಂ ।
ಮಮ ಮುದ್ರಾಂಕಿತಂ ವಸ್ತ್ರಂ ಬಿಭ್ರಂತಂ ಮಾನವೋತ್ತಮಂ ॥ ೮೮ ॥

ನ ಸ್ಪೃಶೇತ್ಪಾತಕಂ ಕಿಂಚಿತ್ಕೃತಂ ಚಾಪಿ ನರೇಣ ಹಿ ।
ಶಂಖಚಕ್ರಗದಾಪದ್ಮರಾಮಮುದ್ರಾಂಕಿತಂ ಶುಭಂ ॥ ೮೯ ॥

ವಸ್ತ್ರಂ ಧಾರ್ಯಂ ನರೈರ್ಭಕ್ತ್ಯಾ ಮುದ್ರಯೈಕಾಂಕಿತಂ ತು ವಾ ।
ಶಂಖಾದಿಪಂಚಭಿರ್ಯುಕ್ತಂ ಸದಾ ವಸ್ತ್ರಂ ಮಮ ಪ್ರಿಯಂ ॥ ೯೦ ॥

ಮನ್ಮುದ್ರಯಾಂಕಿತಂ ವಾಪಿ ವಸ್ತ್ರಂ ಸಂತೋಷದಂ ಸ್ಮೃತಂ ।
ಸ್ನಾತ್ವಾ ಧಾರ್ಯಂ ಸದಾ ತಚ್ಚ ಜಪಕಾಲೇ ವಿಶೇಷತಃ ॥ ೯೧ ॥

---

೮೭. ಎಲೈ ಮುನಿಶ್ರೇಷ್ಠರಿರಾ! ನೀವು ಕೇಳಿದ ವಿಷಯವು ಸರಿಯಾಗಿಯೂ ಚೆನ್ನಾಗಿಯೂ ಇದೆ. ನಾನು ಹೇಳುವುದನ್ನು ಮನಸ್ಸಿಟ್ಟು ಕೇಳಿರಿ.

೮೮-೮೯-೯೦. ನನ್ನ ಮುದ್ರೆಯಿಂದ ಕೂಡಿದ ವಸ್ತ್ರವನ್ನು ಕಲಿಯುಗದಲ್ಲಿ ಜನಗಳು ಸುಖವಾಗಿ ಧರಿಸಲಿ. ನನ್ನ ಮುದ್ರೆಯಿಂದ ಕೂಡಿದ ವಸ್ತ್ರವನ್ನು ಹೊದೆದು ಕೊಂಡಿರುವ ಮನುಷ್ಯನಿಗೆ ಯಾವ ಪಾಪವೇ ಆಗಲಿ ಸ್ವಲ್ಪವೂ ಅಂಟು ವುದಿಲ್ಲ. ಮನುಷ್ಯನಾದವನು ಶಂಖ, ಚಕ್ರ, ಗದಾ, ಪದ್ಮ ರಾಮ ನಾಮಗಳಿಂದ ಅಂಕಿತ ವಾಗಿರುವ ಶುಭವಾದ ವಸ್ತ್ರವನ್ನು ಧರಿಸಬೇಕು. ಅಥವಾ ರಾಮ ಮುದ್ರೆ ಯೊಂದರಿಂದಲೇ ಅಂತವಾಗಿದ್ದರೂ ಇರಬಹುದು. ಶಂಖ, ಚಕ್ರ, ಗದಾ, ಪದ್ಮ ಗಳಿಂದ ಅಂಕಿತವಾಗಿರುವ ವಸ್ತ್ರವೇ ನನಗೆ ಪ್ರೀತಿಪಾತ್ರವಾಗಿರುವುದು.

೯೧. ನನ್ನ ಮುದ್ರೆಯಿಂದ ಕೂಡಿರುವ ವಸ್ತ್ರವು ಸಂತೋಷವನ್ನುಂಟುಮಾಡ ತಕ್ಕದ್ದು. ಆ ವಸ್ತ್ರವನ್ನು ಸ್ನಾನಮಾಡಿಕೊಂಡು ಧರಿಸಬೇಕು. ಜಪಕಾಲದಲ್ಲಿ ಯಂತೂ ಖಂಡಿತವಾಗಿಯೂ ಧರಿಸಬೇಕು.

ಮಲಮೂತ್ರೋತ್ಸರ್ಜನೇ ಚ ಶಯನೇ ಕ್ರೀಡನೇ ತಥಾ ।
ಅಶುಚೌ ಚ ಕ್ಷಯೇ ವೃದ್ಧೌ ಹಟ್ಟೆ ರಾಜಸಭಾಸು ಚ । ॥ ೯೨ ॥

ಪಥಿ ದುರ್ಜನಸಂಸರ್ಗೇ ಮುದ್ರಾವಸ್ತ್ರಂ ನ ಧಾರಯೇತ್ ।
ತಥಾ ಭೋಜನಕಾಲೇಪಿ ವಿಹಾರೇ ನೈವ ಧಾರಯೇತ್ ॥ ೯೩ ॥

ಸ್ನಾನಕಾಲೇ ವ್ರತೇ ತೀರ್ಥೇ ಪೂಜಾಯಾಂ ಪಿತೃಕರ್ಮಣಿ ।
ಹೋಮೇ ದಾನೇ ಜಪೇ ಯಜ್ಞೇ ಕೃಚ್ಛ್ರಚಾಂದ್ರಾಯಣಾದಿಷು ॥ ೯೪ ॥

ನಿತ್ಯಕರ್ಮಸು ಕಾಮ್ಯೇಷು ತಥಾ ನೈಮಿತ್ತಿಕೇಷ್ವಪಿ ।
ತಥಾ ತಪಸ್ಸು ಮನ್ಮುದ್ರಾವಸ್ತ್ರಂ ಧಾರ್ಯಂ ಸದೈವ ಹಿ ॥ ೯೫ ॥

ಮಮ ಮುದ್ರಾಂಕಿತಂ ವಸ್ತ್ರಂ ಬಿಭ್ರಂತಂ ಮಾನವೋತ್ತಮಂ ।
ಅಹಂ ಮೋಕ್ಷಂ ಪ್ರದಾಸ್ಯಾಮಿ ಸತ್ಯಂ ಸತ್ಯಂ ಮುನೀಶ್ವರಾಃ ॥ ೯೬ ॥

೯೨-೯೩. ಮಲವನ್ನು ವಿಸರ್ಜಿಸುವಾಗಲೂ, ಮೂತ್ರವಿಸರ್ಜನೆ ಮಾಡುವಾಗಲೂ, ಮಲಗಿರುವಾಗಲೂ, ಕ್ರೀಡಿಸುವಾಗಲೂ, ಅಶುಚಿಯಾಗಿರುವಾಗಲೂ, ಹೆತ್ತಸೂತಕದಲ್ಲಿಯೂ, ಸತ್ತಸೂತಕದಲ್ಲಿಯೂ, ಬೀದಿಯಲ್ಲಿ ಹೋಗುವಾಗಲೂ, ರಾಜಸಭೆಯಲ್ಲಿ ಇರುವಾಗಲೂ, ದಾರಿನಡೆಯುವಾಗಲೂ, ದುರ್ಜನ ಸಂಸರ್ಗದಲ್ಲಿಯೂ, ಊಟಮಾಡುವಾಗಲೂ, ವಿಹರಿಸುವಾಗಲೂ, ಮುದ್ರಾ ವಸ್ತ್ರವನ್ನೂ ಧರಿಸಿರಬಾರದು.

೯೪-೯೫. ಸ್ನಾನಕಾಲದಲ್ಲಿಯೂ, ವ್ರತಮಾಡುವಾಗಲೂ, ತೀರ್ಥಗಳಲ್ಲಿಯೂ, ಪೂಜೆಮಾಡುವಾಗಲೂ, ಪಿತೃಗಳ ಕೆಲಸದಲ್ಲಿಯೂ, ಹೋಮಮಾಡುವಾಗಲೂ, ದಾನಮಾಡುವಾಗಲೂ, ಜಪಮಾಡುವಾಗಲೂ, ಯಜ್ಞಮಾಡುವಾಗಲೂ, ಕೃಚ್ಛ್ರಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವಾಗಲೂ, ಚಾಂದ್ರಾಯಣ ವ್ರತದಲ್ಲಿಯೂ, ನಿತ್ಯಕರ್ಮಗಳನ್ನು ಮಾಡುವಾಗಲೂ, ಕಾಮ್ಯಕರ್ಮವನ್ನು ಮಾಡುವಾಗಲೂ, ನೈಮಿತ್ತ ಕರ್ಮಗಳಲ್ಲಿಯೂ, ತಪಸ್ಸನ್ನು ಮಾಡುವಾಗಲೂ, ಇಂತಹ ಕಾಲಗಳಲ್ಲೆಲ್ಲಾ ಬಿಡದೆ ನನ್ನ ಮುದ್ರೆಯ ವಸ್ತ್ರವನ್ನು ಧರಿಸಬೇಕು.

೯೬. ನನ್ನ ಮುದ್ರೆಯಿಂದ ಕೂಡಿದ ವಸ್ತ್ರಗಳನ್ನು ಧರಿಸಿರುವ ಮನುಷ್ಯನಿಗೆ ನಾನು ಮೋಕ್ಷವನ್ನು ಕೊಡುತ್ತೇನೆ. ಎಲೈ ಮುನೀಶ್ವರರಿರಾ ! ಇದು ಸತ್ಯವು ! ಸಂಶಯವಿಲ್ಲ.

ಏವಂ ಶ್ರುತ್ವಾ ರಾಮವಾಕ್ಯಂ ಮುನಯಸ್ತೇ ಮುದಾನ್ವಿತಾಃ ।
ರಾಮಂ ಪೃಷ್ಟ್ವಾಶ್ರಮಂ ಸ್ವಂ ಸ್ವಂ ಯಯುಸ್ತೇ ಮುದಿತಾನನಾಃ ॥

ತಸ್ಮಾತ್ಸದಾ ರಾಮಮುದ್ರಾವಸ್ತ್ರಂ ಧಾರ್ಯಂ ನರೈಶ್ಶುಭೈಃ ।
ರಾಮೇತಿ ದ್ವ್ಯಕ್ಷರೋ ಮಂತ್ರೋ ಜಪನೀಯಸ್ತು ಸರ್ವದಾ ॥ ೯೮ ॥

ರಾಮಮುದ್ರಾ ಶುಭಾ ಧಾರ್ಯಾ ಗೋಪೀಚಂದನಸಂಯುತಾ ।
ಸದಾತ್ರ ಮಾನವೈರ್ಭಕ್ತ್ಯಾ ರಾಮತೋಷಾರ್ಥಮಾದರಾತ್ ॥ ೯೯ ॥

ಪೂಜಾ ಸದಾ ರಾಘವಸ್ಯ ಕಾರ್ಯಾತ್ರ ಮಾನವೈರ್ಭುವಿ ।
ಸದಾ ಸ್ನಾನಂ ರಾಮತೀರ್ಥೇ ನರೈಃ ಕಾರ್ಯಂ ಪ್ರಯತ್ನತಃ ॥ ೧೦೦ ॥

ಸದಾ ರಾಮಾಯಣಂ ಚೇದಂ ಶ್ರವಣೀಯಂ ನರೈರ್ಭುವಿ ।
ಚಿಂತನೀಯಸ್ಸದಾ ರಾಮೋ ಜನ್ಮಮೃತ್ಯುನಿವಾರಕಃ ॥ ೧೦೧ ॥

---

೯೭. ರಾಮನೇ ಇಂತು ಹೇಳಿದುದನ್ನು ಆ ಋಷಿಗಳು ಕೇಳಿ ಸಂತೋಷ ಗೊಂಡರು. ಮತ್ತು ಆ ರಾಮನಿಗೆ ಹೊಗುತ್ತೇವೆಂದು ಹೇಳಿ ಅವರವರ ಆಶ್ರಮಗಳಿಗೆ ಹೊರಟು ಹೋದರು.

೯೮. ಆದರಿಂದ ರಾಮಮುದ್ರೆಯುಳ್ಳ ವಸ್ತ್ರವನ್ನು ಜನರು ಯಾವಾಗಲೂ ಧರಿಸಿರ ಬೇಕು. ರಾಮಯೆಂಬ ಮಂತ್ರವನ್ನು ಯಾವಾಗಲೂ ಜಪಿಸುತ್ತಿರಬೇಕು.

೯೯–೧೦೦. ರಾಮಮುದ್ರೆಯನ್ನೂ ಗೋಪಿಚಂದ್ರವನ್ನೂ ಯಾವಾಗಲೂ ಧರಿಸಿರಬೇಕು. ಹಾಗೆ ಧರಿಸಿದರೆ ರಾಮನು ಸಂತೋಷಗೊಳ್ಳುವನು. ರಾಮಪೂಜೆಯನ್ನು ಮಾನವನು ಯಾವಾಗಲೂ ಮಾಡುತ್ತಿರಬೇಕು. ರಾಮತೀರ್ಥದಲ್ಲಿ ಯಾವಾಗಲೂ ಪ್ರಯತ್ನಪಟ್ಟು ಸ್ನಾನಮಾಡುತ್ತಿರಬೇಕು.

೧೦೧. ಜನರು ರಾಮಾಯಣವನ್ನು ಯಾವಾಗಲೂ ಕೇಳುತ್ತಿರಬೇಕು. ಜನರ ಮರಣಗಳನ್ನು ಹೋಗಲಾಡಿಸಿ ಮೋಕ್ಷವನ್ನು ಕೊಡುವ ರಾಮನನ್ನು ಯಾವಾಗಲೂ ಸ್ಮರಿಸುತ್ತಿರಬೇಕು.

ಸ್ತೋತವ್ಯಃ ಕೀರ್ತನೀಯಶ್ಚ ವಂದನೀಯೋತ್ರ ರಾಘವಃ ।
ನ ಕಿಂಚಿದಣುಮಾತ್ರಂ ಹಿ ವಿನಾ ರಾಮಂ ಸದಾ ಚರೇತ್ ॥ ೧೦೨ ॥

ಹನುಮತ್ಕವಚಂ ದಿವ್ಯಂ ಪಠಿತ್ವಾದೌ ನರೈರ್ಭುವಿ ।
ತತಃ ಶ್ರೀರಾಮಕವಚಂ ಪಠನೀಯಂ ಹಿ ಸರ್ವದಾ ॥ ೧೦೩ ॥

ಪಠಂತಿ ರಾಮಕವಚಂ ಹನುಮತ್ಕವಚಂ ವಿನಾ ।
ಅರಣ್ಯೇರೋದನಂ ತೈಸ್ತು ಕೃತಮೇವ ನ ಸಂಶಯಃ ॥ ೧೦೪ ॥

ಸ್ತೋತ್ರಾಣಾಮುತ್ತಮಂ ಸ್ತೋತ್ರಂ ಸರ್ವಭೀತಿನಿವಾರಕಂ ।
ಶ್ರೀರಾಮ ಕವಚಂ ನಿತ್ಯಂ ಪಠನೀಯಂ ನರೈರ್ಭುವಿ ॥ ೧೦೫ ॥

॥ ವಿಷ್ಣುದಾಸ ಉವಾಚ ॥

ಗುರೋಹಂ ಶ್ರೋತುಮಿಚ್ಛಾಮಿ ಹನುಮತ್ಕವಚಂ ಶುಭಂ ।
ತಥೈವ ರಾಮಕವಚಂ ವದ ಕೃತ್ವಾ ಕೃಪಾಂ ಮಯಿ ॥ ೧೦೬ ॥

---

೧೦೨. ರಾಮನ ಸ್ತೋತ್ರವನ್ನು ಮಾಡಬೇಕು. ರಾಮನನ್ನು ಕೀರ್ತಿಸಬೇಕು. ರಾಮನನ್ನು ವಂದಿಸಬೇಕು. ಈ ರಾಮಸ್ಮರಣೆಯಿಲ್ಲದೆ ಯಾವುದನ್ನೂ ಯಾವಾಗಲೂ ಮಾಡಲೇ ಬಾರದು.

೧೦೩. ಯಾವಾಗಲೂ ಮನುಷ್ಯನು ಶ್ರೀರಾಮ ಕವಚವನ್ನು ಹೇಳುತ್ತಿರಬೇಕು. ಅದನ್ನು ಹೇಳುವುದಕ್ಕೆ ಮುಂಚೆ ಹನುಮತ್ಕವಚವನ್ನು ಹೇಳಬೇಕು.

೧೦೪. ಹನುಮಂತನ ಕವಚವನ್ನು ಮೊದಲು ಹೇಳದೆ ಅದಕ್ಕೆ ಮೊದಲೇ ಯಾವನು ರಾಮಕವಚವನ್ನು ಹೇಳುವನೋ ಅವನು ಅರಣ್ಯದಲ್ಲಿ ರೋದನ ಮಾಡಿದಂತೆ ನಿಷ್ಫಲವಾಗುವುದು. ಇದರಲ್ಲಿ ಸಂಶಯವಿಲ್ಲ.

೧೦೫. ಈ ಸ್ತೋತ್ರವು ಸ್ತೋತ್ರಗಳಲ್ಲಿ ಉತ್ತಮವಾದ ಸ್ತೋತ್ರವು. ಎಲ್ಲಾ ಭಯಗಳನ್ನೂ ನಾಶಮಾಡುತ್ತದೆ. ಆದ್ದರಿಂದ ಎಲ್ಲರೂ ಈ ರಾಮ ಕವಚವನ್ನು ಹೇಳುತ್ತಿರಬೇಕು.

೧೦೬. ವಿಷ್ಣುದಾಸನು ಹೇಳಿದನು--ಎಲೈ ಗುರುವೆ! ನನಗೆ ಹನುಮಂತನ ಕವಚವನ್ನು ಕೇಳಬೇಕೆಂದು ಅಪೇಕ್ಷೆಯಾಗುತ್ತಿರುವುದು. ಅಂತೆಯೇ ನನ್ನಲ್ಲಿ ಕೃಪೆಮಾಡಿ ಶ್ರೀರಾಮ ಕವಚವನ್ನೂ ಹೇಳು.

॥ ರಾಮದಾಸ ಉವಾಚ ॥

ಸಮ್ಯಕ್ ಪೃಷ್ಟಂ ತ್ವಯಾ ವತ್ಸ ಸಾವಧಾನಮನಾಃ ಶೃಣು ।
ಹನುಮತ್ಕವಚಂ ರಾಮಕವಚಂ ಚ ವದಾಮಿ ತೇ ॥ ೧೦೭ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಮನೋಹರಕಾಂಡೇ ಶ್ರೀರಾಮೋಕ್ತಾದ್ವೈತಪ್ರದರ್ಶನಂ ನಾಮ ದ್ವಾದಶಸ್ಸರ್ಗಃ ಸಮಾಪ್ತಃ

---

೨೦೭. ರಾಮದಾಸನು ಹೇಳಿದನು--ಎಲೈ ವತ್ಸನೆ! ನೀನು ಕೇಳಿದುದು ಬಹು ಚೆನ್ನಾಗಿದೆ. ಒಂದೇ ಮನಸ್ಸಿನಿಂದ ಕೇಳು. ಹನುಮಂತನ ಮತ್ತು ಶ್ರೀರಾಮನ ಕವಚಗಳನ್ನು ನಿನಗೆ ಹೇಳುತ್ತೇನೆ.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಆದಿಕಾವ್ಯವಾದ ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಶ್ರೀರಾಮನಿಂದ ಅದ್ವೈತದರ್ಶನಮಾಡಲ್ಪಟ್ಟಿತೆಂಬ ಹನ್ನೆರಡನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹನ್ನೆರಡನೆಯ ಸರ್ಗದ ಸಾರಾಂಶವು

ಶ್ರೀರಾಮನು ಒಂದುಸಾರಿ ಅನುಚರರೊಡನೆ ಕಾಡಿಗೆ ಬೇಟೆಯಾಡಲು ಹೋದನು. ಅಲ್ಲಿ ಒಂದು ಮೃಗವನ್ನು ಓಡಿಸಿಕೊಂಡು ಹೋಗಲು ಅದು ಸಿಕ್ಕದೆ ಬಹು ದೂರಕ್ಕೆ ಎಳೆದುಕೊಂಡು ಹೋಯಿತು. ಅನುಚರರೊಬ್ಬರೂ ಇವನನ್ನು ಹಿಂಬಾಲಿಸಲಾಗದೆ ದೂರವಾದರು. ಕೊನೆಗೆ ರಾಮನು ಆ ಮೃಗವನ್ನು ಕೊಂದನು. ಬಹು ಶ್ರಮವಾಗಿಯೂ ಹಸಿವು ಬಾಯಾರಿಕೆಗಳು ಹೆಚ್ಚಾಗಿಯೂ ಇದ್ದುದರಿಂದ ಬಳಲಿ ಒಂದು ಮರದ ಕೆಳಗೆ ಅನುಚರರನ್ನು ನಿರೀಕ್ಷಿಸುತ್ತ ಕುಳಿತನು.

ಇವನು ಕುಳಿತಿರುವುದನ್ನು ಒಬ್ಬ ಬೇಡಿತಿಯು ಕಂಡು ಅವನ ಬಳಿಗೆ ಬಂದು ಶ್ರೀರಾಮನೆಂದು ಗುರ್ತಿಸಿ ನಮಸ್ಕರಿಸಿ ನಿಂತುಕೊಂಡಳು ಆಗ ರಾಮನು ತನ್ನ ಹಸಿವು ಬಾಯಾರಿಕೆಗಳನ್ನು ನೀಗಿಸುವಂತೆ ಕೇಳಲು ಆಕೆಯು ಸ್ವಲ್ಪದೂರದಲ್ಲಿದ್ದ ದುರ್ಗೆಯನ್ನು ಪೂಜಿಸಲು ಬಂದಿದ್ದ ಹೆಂಗಸರಿಗೆ ತಿಳಿಸಿದಳು. ಆ ಹೆಂಗಸರು ಸಂತೋಷಪಟ್ಟು ವಿಧವಿಧವಾದ ಪಕ್ವಾನ್ನಗಳನ್ನು ಮಾಡಿಕೊಂಡು ದುರ್ಗೆಗೆ ನಿವೇದನ ಮಾಡಿ ಅದನ್ನೇ ರಾಮನಿಗೆ ಬಡಿಸಲು ಉದ್ದೇಶಿಸಿ ದುರ್ಗೆಯ ಗುಡಿಗೆ ಹೋಗಲು ಆ ದುರ್ಗೆಯು ತನ್ನ ಗುಡಿಯ ಬಾಗಿಲುಗಳನ್ನೆಲ್ಲಾ ಮುಚ್ಚಿಕೊಂಡು ಅವರಿಗೆ ಒಳಕ್ಕೆ ಬರಲು ಜಾಗವನ್ನು ಕೊಡದೆ ಆ ಅನ್ನವನ್ನು ಮೊದಲು ರಾಮನಿಗೆ ಅರ್ಪಿಸಬೇಕೆಂದೂ ಅದರಿಂದ ತನಗೆ ತೃಪ್ತಿಯಾಗುವುದೆಂದೂ ರಾಮನಿಗೂ ಹರನಿಗೂ ಸೀತೆಗೂ ತನಗೂ ಭೇದವಿಲ್ಲದೆಂದೂ ಹೇಳಲು ಆ ದುರ್ಗೆಯ ಮಾತಿನಂತೆ ಅವರು ರಾಮನ ಬಳಿಗೆ ಬಂದು ದುರ್ಗೆಯ ಮಾತನ್ನು ತಿಳಿಸಿ ಊಟಮಾಡುವಂತೆ ಕೇಳಿಕೊಂಡರು. ರಾಮನು ಇದನ್ನು ಕೇಳಿ ದುರ್ಗೆಯು ಹೇಳಿದುದು ನಿಜವಾದರೆ ಆಕೆಯು ಸೀತೆಯ ರೂಪದಿಂದ ಇಲ್ಲಿಗೆ ಬರಲೆಂದು ಹೇಳಿಕಳುಹಿಸಲು ಆ ಹೆಂಗಸರು ಹೋಗಿ ಅಂತೆಯೇ ಹೇಳಿದರು. ಆಗ ದುರ್ಗೆಯು ಸೀತೆಯ ರೂಪದಿಂದ ಬಂದು ರಾಮನಿಗೆ ನಮಸ್ಕರಿಸಿದಳು.

ರಾಮನು ಸ್ನಾನಕ್ಕೋಸ್ಕರ ಪಾತಾಳಗಂಗೆಗೆ ಬಾಣವನ್ನು ಹೊಡೆದು ಅಲ್ಲಿಂದ ನೀರು ಬರುವಂತೆ ಮಾಡಿ ಅದರಲ್ಲಿ ಸ್ನಾನಮಾಡಿ ಊಟಕ್ಕೆ ಸಿದ್ಧನಾಗಲು ಅಷ್ಟರಲ್ಲಿ ಅನುಯಾಯಿಗಳು ಬಂದು ರಾಮನನ್ನೂ ಅವನ ಬಳಿಯಲ್ಲಿ ಸೀತೆಯು ಇರುವುದನ್ನೂ ನೋಡಿ ಆಶ್ಚರ್ಯಗೊಂಡರು. ಅವರಿಗೆ ಬೇಡಿತಿಯು ನಡೆದ ವಿಷಯಗಳೆಲ್ಲವನ್ನೂ ತಿಳಿಸಲು ಅವರು ಅಜ್ಞಾನವನ್ನು ತೊರೆದು ರಾಮನನ್ನೂ ಶಿವನನ್ನೂ ಒಬ್ಬನನ್ನಾಗಿ ತಿಳಿದುಕೊಂಡರು.

ಅನಂತರ ಅವರೆಲ್ಲರೂ ಅಲ್ಲಿ ಊಟಮಾಡಿ ಶ್ರಮವನ್ನು ಪರಿಹರಿಸಿ ಕೊಂಡಮೇಲೆ ರಾಮನು ಆ ಹೆಂಗಸರಿಗೆ ವರಗಳನ್ನು ಕೊಟ್ಟನು. ಮತ್ತು ದ್ವಾಪರಯುಗದಲ್ಲಿ ಕೃಷ್ಣನ ರೂಪಿನಿಂದ ಮತ್ತೆ ದರ್ಶನವನ್ನು ಕೊಡುವು ದಾಗಿಯೂ ಹೇಳಿದನು.

ಅನಂತರ ಅವರೆಲ್ಲರನ್ನೂ ಕಳುಹಿಸಿದನು. ಸೀತೆಯೂ ಕೂಡ ಗುಡಿಗೆ ಹೋಗಿ ದುರ್ಗೆಯ ರೂಪವನ್ನು ಹೊಂದಿ ಕುಳಿತಳು. ಉಳಿದ ಹೆಂಗಸರು ಆ ದುರ್ಗೆಯನ್ನು ಪೂಜಿಸಿ ತಾವೂ ತಮ್ಮ ತಮ್ಮ ಸ್ಥಳಗಳಿಗೆ ಹೊರಟು ಹೋದರು.

ಇತ್ತ ರಾಮನು ಎಲ್ಲರೊಡನೆಯೂ ಅಯೋಧ್ಯೆಗೆ ಹಿಂದಿರುಗಿ ಹೋದನು. ಸಂದೇಹಗೊಂಡಿದ್ದ ಕುಶನು ಮನೆಯಲ್ಲಿ ತಾಯಿಯನ್ನು ಕುರಿತು ಕಾಡಿನಲ್ಲಿ ನಡೆದ ವಿಷಯವನ್ನು ಕೇಳಲು ಅವಳು ನಡೆದುದನ್ನು ಕಂಡಂತೆಯೂ ಅನುಭವಿಸಿ ದಂತೆಯೂ ಹೇಳಿದಳು

ಈ ರೀತಿಯಾಗಿ ಶ್ರೀರಾಮನು ಅದ್ವೈತ ರೀತಿಯನ್ನು ಎಲ್ಲರಿಗೂ ತೋರಿಸಿದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಮನೋಹರಕಾಂಡೇ ತ್ರಯೋದಶಸ್ಸರ್ಗಃ

॥ ರಾಮದಾಸ ಉವಾಚ ॥

ಏಕದಾ ಸುಖಮಾಸೀನಂ ಶಂಕರಂ ಲೋಕಶಂಕರಂ ।
ಪಪ್ರಚ್ಛ ಗಿರಿಜಾ ಕಾಂತಂ ಕರ್ಪೂರಧವಳಂ ಶಿವಂ ॥ ೧ ॥

॥ ಪಾರ್ವತ್ಯುವಾಚ ॥

ಭಗವನ್ದೇವದೇವೇಶ ಲೋಕನಾಥ ಜಗತ್ಪ್ರಭೋ ।
ಶೋಕಾಕುಲಾನಾಂ ಲೋಕಾನಾಂ ಕೇನ ರಕ್ಷಾ ಭವೇದ್ಧ್ರುವಂ ॥ ೨ ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹದಿಮೂರನೆಯ ಸರ್ಗವು

—०—०—

೧. ಶ್ರೀರಾಮನು ಹೇಳಿದನು—ಒಂದು ಸಾರಿ ಲೋಕಕ್ಕೆಲ್ಲಾ ಶುಭವನ್ನುಂಟು ಮಾಡುವ ಶಂಕರನು ಸುಖಾಸೀನನಾಗಿ ಕುಳಿತಿದ್ದನು. ಕರ್ಪೂರದಂತೆ ಬೆಳ್ಳಗಿರುವ ಶುಭಕರನಾದ ಆ ಶಿವನನ್ನು ಕುರಿತು ಗಿರಿಜೆಯು ಇಂತೆಂದು ಕೇಳಿದಳು.

೨. ಪಾರ್ವತಿಯು ಹೇಳಿದಳು—ದೇವದೇವೇಶನಾದ ಲೋಕನಾಥನಾದ ಜಗತ್ಪ್ರಭುವಾದ ಎಲೈ ಭಗವಂತನೇ ! ದುಃಖವೆಂಬ ಸಮುದ್ರದಲ್ಲಿ ಮುಳುಗಿರುವ ಜನರಿಗೆ ಸುಖವೆಂಬುದು ಹೇಗಾಗುವುದು ? ಅವರಿಗೆ ರಕ್ಷಣೆಯು ಹೇಗೆತಾನೇ ಸಿಕ್ಕುವುದು ?

ಸಂಗ್ರಾಮೇ ಸಂಕಟೇ ಘೋರೇ ಭೂತಪ್ರೇತಾದಿಕೇ ಭಯೇ ।
ದುಃಖದಾವಾಗ್ನಿಸಂತಪ್ತಚೇತಸಾಂ ದುಃಖಭಾಗಿನಾಂ ॥ ೩ ॥

॥ ಶ್ರೀಮಹಾದೇವ ಉವಾಚ ॥

ಶ್ರುಣು ದೇವಿ ಪ್ರವಕ್ಷ್ಯಾಮಿ ಲೋಕಾನಾಂ ಹಿತಕಾಮ್ಯಯಾ ।
ವಿಭೀಷಣಾಯ ರಾಮೇಣ ಪ್ರೋಕ್ತಂ ಪ್ರೇಮ್ಣಾ ಚ ಯತ್ಪುರಾ ॥ ೪ ॥

ಕವಚಂ ಕಪಿನಾಥಸ್ಯ ವಾಯುಪುತ್ರಸ್ಯ ಧೀಮತಃ ।
ಗುಹ್ಯಂ ತತ್ತೇ ಪ್ರವಕ್ಷ್ಯಾಮಿ ವಿಶೇಷಾಚ್ಛೃಣು ಸುಂದರಿ ॥ ೫ ॥

ಹನೂಮದ್ದ್ವಾದಶ ನಾಮಸ್ತೋತ್ರಂ

ಉದ್ಯದಾದಿತ್ಯಸಂಕಾಶಮುದಾರಭುಜವಿಕ್ರಮಂ ।
ಕಂದರ್ಪಕೋಟಿಲಾವಣ್ಯಂ ಸರ್ವವಿದ್ಯಾವಿಶಾರದಂ ॥ ೬ ॥

---

೩. ಆ ಪ್ರಾಣಿಗಳೊಬ್ಬೊಬ್ಬರಿಗೂ ಒಂದೊಂದು ಕಷ್ಟವು ಒದಗುವುದು. ಅವರಿಗೆ ಯುದ್ಧ, ಘೋರವಾದ ವಿಪತ್ತು, ಭೂತ ಭಯ, ಪಿಶಾಚಭಯ, ದುಃಖ ಕಾಳಗಿಚ್ಚಿನ ಭಯ ಇವುಗಳೊದಗಿ ಸಂತಾಪ ಪಡುತ್ತಿರುವರು. ಇವರಿಗೆ ಇವುಗಳಿಂದ ಪಾರಾಗಲು ಅನುಕೂಲವಾದ ಉಪಾಯವು ಯಾವದಿರುವುದು ?

೪-೫. ಶ್ರೀ ಮಹಾದೇವನು ಹೇಳಿದನು — ಎಲೈ ದೇವಿಯೇ ! ಲೋಕದವರ ಹಿತಕ್ಕೋಸ್ಕರ ಹೇಳುವೆನು ಕೇಳು. ಶ್ರೀರಾಮನು ಬಹು ಪ್ರೀತಿಯಿಂದ ಪೂರ್ವದಲ್ಲಿ ಕಪಿನಾಥನೂ, ವಾಯುಪುತ್ರನೂ ಆದ ಹನುಮಂತನ ಕವಚವನ್ನು ವಿಭೀಷಣನಿಗೆ ಕೊಟ್ಟನು. ಅದು ಬಹು ಗುಹ್ಯವಾದುದು. ಅದನ್ನೇ ನಿನಗೆ ಹೇಳುತ್ತೇನೆ. ಮನಸ್ಸಿಟ್ಟು ಕೇಳು.

ಹನುಮದ್ವಾದಶನಾಮಸ್ತೋತ್ರವು

೬-೭. ಉದಯಿಸುತ್ತಿರುವ ಸೂರ್ಯನಿಗೆ ಸಮಾನವಾದ ವರ್ಣವುಳ್ಳ ಬಹು ಹೆಚ್ಚಾದ ಬಾಹು ಪರಾಕ್ರಮವುಳ್ಳ ಕೋಟಿ ಜನಮನ್ಮಥರಂತೆ ಲಾವಣ್ಯವುಳ್ಳ, ಸಕಲ ವಿದ್ಯೆಗಳಲ್ಲಿಯೂ ಪಾರಾಂಗತನಾದ ಶ್ರೀರಾಮನಿಗೆ ಬಹುವಾಗಿ ಸಂತೋಷವನ್ನುಂಟುಮಾಡುವ, ಭಕ್ತರಿಗೆ ಕೇಳಿದುದನ್ನು ಕೊಡುವುದರಲ್ಲಿ ಕಲ್ಪವೃಕ್ಷ

ಶ್ರೀರಾಮಹೃದಯಾನಂದಂ ಭಕ್ತಕಲ್ಪಮಹೀರುಹಂ ।
ಅಭಯಂ ವರದಂ ದೋರ್ಭ್ಯಾಂ ಕಲಯೇ ಮಾರುತಾತ್ಮಜಂ　　　　॥ ೭ ॥

ಹನೂಮಾನಂಜನೀಸೂನುರ್ವಾಯುಪುತ್ರೋ ಮಹಾಬಲಃ ।
ರಾಮೇಷ್ಟಃ ಫಾಲ್ಗುನಸಖಾ ಪಿಂಗಾಕ್ಷೋಽಮಿತವಿಕ್ರಮಃ ।　　　　॥ ೮ ॥

ಉದಧಿಕ್ರಮಣಶ್ಚೈವ ಸೀತಾಶೋಕವಿನಾಶನಃ ।
ಲಕ್ಷ್ಮಣಪ್ರಾಣದಾತಾ ಚ ದಶಗ್ರೀವಸ್ಯ ದರ್ಪಹಾ　　　　॥ ೯ ॥

ಏವಂ ದ್ವಾದಶನಾಮಾನಿ ಕಪೀಂದ್ರಸ್ಯ ಮಹಾತ್ಮನಃ ।
ಸ್ವಾಪಕಾಲೇ ಪ್ರಬೋಧೇ ಚ ಯಾತ್ರಾಕಾಲೇ ಚ ಯಃ ಪಠೇತ್ ॥

ದಂತಿರುವ, ಎಲ್ಲರಗೂ ಅಭಯವನ್ನು ಕೊಡುವ ಸಕಲರಿಗೂ ವರವನ್ನು ಕೊಡುವ, ಅಭಯವನ್ನೂ ವರದ ಹಸ್ತವನ್ನೂ ಧರಿಸಿರುವ ವಾಯುವಿಗೆ ಮಗನಾದ ಹನುಮಂತನನ್ನು ಧ್ಯಾನಿಸುತ್ತೇನೆ.

೮. ಈ ಹನುಮಂತನು ಉತ್ತಮವಾದ ಕಪೋಲವುಳ್ಳವನು. ಅಂಜನಿ ಎಂಬುವಳ ಮಗನು, ವಾಯುವಿಗೆ ಮಗನು, ಮಹಾ ಬಲಿಷ್ಠನು, ಶ್ರೀರಾಮನಿಗೆ ಬಹು ಇಷ್ಟನಾದವನು. ಅರ್ಜುನನಿಗೆ ಸ್ನೇಹಿತನು. ಕೆಂಜರುಗಣ್ಣುಳ್ಳವನು. ಬಹುವಾದ ಪರಾಕ್ರಮವುಳ್ಳವನು.

೯. ಸಮುದ್ರವನ್ನು ದಾಟಿದವನು, ಲಕ್ಷ್ಮಣನಿಗೆ ಪ್ರಾಣವನ್ನು ಉಳಿಸಿದವನು. ದಶಗ್ರೀವನಾದ ರಾವಣನ ದರ್ಪವನ್ನು ನಾಶಮಾಡಿದವನು. ಈ ರೀತಿಯಾಗಿ ಕಪೀಂದ್ರನಾದ ಹನುಮಂತನಿಗೆ ಹನ್ನೆರಡು ಹೆಸರುಗಳು.

೧೦-೧೧. ಇವನ್ನು ಮಲಗುವಾಗಲೂ, ಏಳುವಾಗಲೂ, ಯಾತ್ರೆಗೆ ಹೊರಡುವಾಗಲೂ ಯಾವನು ಹೇಳುತ್ತಿರುವನೋ ಅವನಿಗೆ ಯಾವುದರಿಂದಲೂ

ತಸ್ಯ ಸರ್ವಭಯಂ ನಾಸ್ತಿ ರಣೇ ಚ ವಿಜಯೀ ಭವೇತ್ ।
ರಾಜದ್ವಾರೇ ಗಹ್ವರೇ ಚ ಭಯಂ ನಾಸ್ತಿ ಕದಾಚನ ॥ ೧೧ ॥

ಉಲ್ಲಂಘ್ಯ ಸಿಂಧೋಸ್ಸಲಂ ಸಲೀಲಂ ।
ಯಶ್ಶೋಕವಹ್ನಿಂ ಜನಕಾತ್ಮಜಾಯಾಃ ॥
ಆದಾಯ ತೇನೈವ ದದಾಹ ಲಂಕಾಂ ।
ನಮಾಮಿ ತಂ ಪ್ರಾಂಜಲಿರಾಂಜನೇಯಂ ॥ ೧೨ ॥

ಶ್ರೀ ಹನುಮತ್ಕವಚಂ ಹನುಮನ್ಮಂತ್ರವಿಧಾನ ಸಹಿತಮ್

ಓಂ ನಮೋ ಹನೂಮತೇ ಸರ್ವಗ್ರಹಾನ್ ಭೂತಭವಿಷ್ಯದ್ವರ್ತಮಾನಾನ್
ಸಮೀಪಸ್ಥಾನ್ ಸರ್ವಕಾಲದುಷ್ಟಬುದ್ಧೀನುಚ್ಚಾಟಯೋಚ್ಚಾಟಯ ॥

ಭಯವೆಂಬುದೇ ಇಲ್ಲವು. ಯುದ್ಧದಲ್ಲಿ ಕೂಡ ಜಯವು ಲಭಿಸುತ್ತದೆ. ರಾಜನ ಬಳಿಯಲ್ಲಿಯಾಗಲಿ ಕಾಡಿನಲ್ಲಿಯಾಗಲಿ ಎಲ್ಲಿಯೂ ಕೂಡ ಅವನಿಗೆ ಭಯವೆಂಬುದೇ ಇರುವುದಿಲ್ಲ.

೧೨. ಮಹಾ ಸಮುದ್ರದ ನೀರನ್ನು ಬಹು ಸುಲಭವಾಗಿಯೇ ದಾಟಿ ಜನಕಾತ್ಮಜೆಯಾದ ಸೀತೆಯ ದುಃಖವೆಂಬ ಬೆಂಕಿಯನ್ನು ತೆಗೆದುಕೊಂಡು ಆ ಬೆಂಕಿಯಿಂದಲೇ ರಾವಣನ ಲಂಕೆಯನ್ನು ಸುಟ್ಟ ಆಂಜನೇಯನನ್ನು ಕೈ ಮುಗಿದುಕೊಂಡು ನಮಸ್ಕರಿಸುತ್ತೇನೆ.

ಹನುಮಂತನ ದ್ವಾದಶ ನಾಮಗಳು.

ಓಂ ಹನುಮತೇ ನಮಃ	ಓಂ ಪಿಂಗಾಕ್ಷಾಯ ನಮಃ
ಓಂ ಅಂಜನೀ ಸೂನವೇ ನಮಃ	ಓಂ ಅಮಿತ ವಿಕ್ರಮಾಯ ನಮಃ
ಓಂ ವಾಯುಪುತ್ರಾಯ ನಮಃ	ಓಂ ಉದಧಿಕ್ರಮಣಾಯ ನಮಃ
ಓಂ ಮಹಾಬಲಾಯ ನಮಃ	ಓಂ ಸೀತಾಶೋಕವಿನಾಶಾಯನಮಃ
ಓಂ ರಾಮೇಷ್ಟಾಯ ನಮಃ	ಓಂ ಲಕ್ಷ್ಮಣ ಪ್ರಾಣದಾತ್ರೇನಮಃ
ಓಂ ಫಾಲ್ಗುಣ ಸಖ್ಯೇ ನಮಃ	ಓಂ ದಶಗ್ರೀವದರ್ಪ ಹರ್ತ್ರೇ ನಮಃ

ಶ್ರೀ ಹನುತ್ಕವಚವು
ಹನುಮನ್ಮಂತ್ರವಿಧಾನ ಸಹಿತವಾದುದು.

ಓಂ ಹನುಮಂತನಿಗೆ ನಮಸ್ಕಾರವು. ಎಲೈ ಹನುಮಂತನೇ! ಹಿಂದೆ ಕಳೆದ, ಈಗಿರುವ ಮುಂದೆಬರುವ ಸಮೀಪದಲ್ಲಿ ಇರುವ, ಯಾವಾಗಲೂ ಕೆಟ್ಟ ಯೋಚನೆ

ಪರಬಲಂ ಕ್ಷೋಭಯ ॥ ಮಮ ಸರ್ವಕಾರ್ಯಾಣಿ ಸಾಧಯ ಸಾಧಯ ॥
ಓಂ ಹ್ರಾಂ ಹ್ರೀಂ ಹ್ರೂಂ ಫಟ್ ॥ ಘೇ ಘೇ ಘೇ ಓಂ ಶಿವಸಿದ್ಧಂ ಓಂ
ಹ್ರಾಂ ಓಂ ಹ್ರೀಂ, ಓಂ ಹ್ರೂಂ ಓಂ ಹ್ರೈಂ ಓಂ ಹ್ರೌಂ ಓಂ ಹ್ರಃ ಸ್ವಾಹಾ

ಪರಕೃತ ಯಂತ್ರ ಮಂತ್ರ ಪರಹಂಕಾರ, ಭೂತಪ್ರೇತ ಪಿಶಾಚ ದೃಷ್ಟಿ
ಸ್ಸರ್ವವಿಘ್ನದುರ್ಜನಚೇಷ್ಟಾ ಕುವಿದ್ಯಾಸರ್ವೋಗ್ರಭಯಾನಿ ನಿವಾರಯ
ನಿವಾರಯ ॥ ಬಂಧ ಬಂಧ, ಲುಂಠ ಲುಂಠ, ವಿಲುಂಪ ವಿಲುಂಪ,
ಕಿಲಿ ಕಿಲಿ ಕಿಲಿ, ಸರ್ವಕುಯಂತ್ರಾಣಿ ದುಷ್ಟವಾಚಂ ಫಟ್ ಸ್ವಾಹಾ ॥

ಓಂ ಅಸ್ಯ ಶ್ರೀಹನೂಮತ್ಕವಚಸ್ತೋತ್ರಮಂತ್ರಸ್ಯ ಶ್ರೀರಾಮಚಂದ್ರ ಋಷಿಃ. ಶ್ರೀಹನೂಮತ್ಪರಮಾತ್ಮಾ ದೇವತಾ. ಅನುಷ್ಟುಪ್ ಛಂದಃ, ಮಾರುತಾತ್ಮಜ ಇತಿ ಬೀಜಂ. ಅಂಜನೀಸೂನುರಿತಿ ಶಕ್ತಿಃ. ಲಕ್ಷ್ಮಣಪ್ರಾಣದಾತೇತಿ ಕೀಲಕಂ. ರಾಮದೂತಾಯೇತ್ಯಸ್ತ್ರಂ. ಹನೂಮಾನ್ ಇತಿದೇವತಾ, ಪಿಂಜಾಕ್ಷೋಮಿತವಿಕ್ರಮ ಇತಿ ಮಂತ್ರಃ. ಶ್ರೀರಾಮಚಂದ್ರ ಪ್ರೇರಣಯಾ ಶ್ರೀರಾಮಚಂದ್ರ ಪ್ರೀತ್ಯರ್ಥಂ ಮಮ ಸಕಲ ಕಾಮನಾಸಿದ್ಧ್ಯರ್ಥಂ ಜಪೇ

ಯನ್ನು ಉಳ್ಳ, ಎಲ್ಲಾ ಗ್ರಹಗಳನ್ನು ಉಚ್ಚಾಟನೆ ಮಾಡು. ಶತ್ರುಗಳ ಸೈನ್ಯವನ್ನು ಕ್ಷೋಭಿಸುವಂತೆ ಮಾಡು. ಕ್ಷೋಭಿಸುವಂತೆ ಮಾಡು. ನನ್ನ ಕೆಲಸಗಳನ್ನೆಲ್ಲಾ ಸಾಧಿಸಿಕೊಡು. ಓಂ ಹ್ರಾಂ ಹ್ರೀಂ ಹ್ರೂಂ ಫಟ್, ಘೇ, ಘೇ, ಘೇ, ಓಂ ಶಿವಸಿದ್ಧಂ ಓಂ ಹ್ರಾಂ ಓಂ ಹ್ರೀಂ ಓಂ ಹ್ರೂಂ, ಓಂ ಹ್ರೈಂ ಓಂ ಹ್ರೌಂ, ಓಂ ಹ್ರಃ ಸ್ವಾಹಾ. ಪರರು ಮಾಡಿದ ಯಂತ್ರಗಳನ್ನೂ ಪರರು ಮಾಡಿದ ಮಂತ್ರಗಳನ್ನೂ, ಭೂತ, ಪ್ರೇತ, ಪಿಶಾಚಗಳನ್ನೂ ಎಲ್ಲಾ ವಿಘ್ನಗಳನ್ನೂ, ದುರ್ಜನರ ಚೇಷ್ಟೆಗಳನ್ನೂ, ಕೆಟ್ಟ ವಿದ್ಯೆಗನ್ನೂ, ಎಲ್ಲಾ ಉಗ್ರಭಯಗಳನ್ನೂ ನಿವಾರಣೆಮಾಡು, ನಿವಾರಣೆಮಾಡು. ಬಂಧಿಸು, ಬಂಧಿಸು. ಲುಂಠನಮಾಡು, ಲುಂಠನಮಾಡು. ವಿಲುಂಪಿಸು, ವಿಲುಂಪಿಸು, ಕಿಲಿ, ಕಿಲಿ ಕಿಲಿ, ಎಲ್ಲಾ ಯಂತ್ರಗಳನ್ನೂ ದುಷ್ಟವಾಕ್ಯಗಳನ್ನೂ ಓಂ ಫಟ್ ಸ್ವಾಹಾ.

ಓಂ ಈ ಹನುಮತ್ಕವಚ ಸ್ತೋತ್ರ ಮಂತ್ರಕ್ಕೆ ಶ್ರೀ ರಾಮಚಂದ್ರನು ಋಷಿಯು, ಹನುಮತ್ಪರಮಾತ್ಮನು ದೇವತೆಯು, ಅನುಷ್ಟುಪ್ ಛಂದಸ್ಸು, ಮಾರುತಾತ್ಮಜನು ಎಂಬುದು ಬೀಜವು, ಅಂಜನೀ ಸೂನು ಎಂಬುದು ಶಕ್ತಿಯು,

ವಿನಿಯೋಗಃ ॥ ಅಥಾಂಗನ್ಯಾಸಃ ಓಂ ಹ್ರಾಂ ಅಂಜನೀಸುತಾಯ ಅಂಗುಷ್ಠಾಂಭ್ಯಾಂ ನಮಃ। ಓಂ ಹ್ರೀಂ ರುದ್ರಮೂರ್ತಯೇ ತರ್ಜನೀಭ್ಯಾಂ ನಮಃ। ಓಂ ಹ್ರೂಂ ರಾಮದೂತಾಯ ಮಧ್ಯಮಾಭ್ಯಾಂ ನಮಃ। ಓಂ ಹ್ರೈಂ ವಾಯುಪುತ್ರಾಯ ಅನಾಮಿಕಾಭ್ಯಾಂ ನಮಃ। ಓಂ ಹ್ರೌಂ ಅಗ್ನಿಗರ್ಭಾಯ ಕನಿಷ್ಠಿಕಾಭ್ಯಾಂ ನಮಃ। ಓಂ ಹ್ರಃ ಬ್ರಹ್ಮಾಸ್ತ್ರನಿವಾರಣಾಯ ಕರತಲಕರ ಪೃಷ್ಠಾಭ್ಯಾಂ ನಮಃ । ಏವಂ ಹೃದಯಾದ್ಯಂಗ ನ್ಯಾಸಂ ಕೃತ್ವಾ

ಅಥಧ್ಯಾನಂ ॥

ಲಕ್ಷ್ಮಣಪ್ರಾಣದಾತಾ ಎಂಬುದು ಅಸ್ತ್ರವು, ಹನುಮಾನ್ ದೇವತಾ ಎಂಬುದು ಕವಚವು ಪಿಂಗಾಕ್ಷೋಮಿತವಿಕ್ರಮಃ ಇದು ಮಂತ್ರವು.

ಶ್ರೀ ರಾಮಚಂದ್ರನ ಪ್ರೇರಣೆಯಿಂದ ಶ್ರೀ ರಾಮಚಂದ್ರನ ಪ್ರೀತಿಗೋಸ್ಕರ ಲೂ, ನನ್ನ ಸಕಲವಾದ ಕಾಮನೆಗಳ ಸಿದ್ಧಿಗೋಸ್ಕರಲೂ ಜಪಿಸುವುದರಲ್ಲಿ ಈ ಮಂತ್ರದ ವಿನಿಯೋಗವು.

ಅಂಗನ್ಯಾಸವು

ಓಂ ಹ್ರಾಂ ಅಂಜನೀಸುತಾಯ ಅಂಗುಷ್ಠಾಭ್ಯಾಂ ನಮಃ
ಓಂ ಹ್ರೀಂ ರುದ್ರಮೂರ್ತಯೇ ತರ್ಜನೀಭ್ಯಾ ನಮಃ
ಓಂ ಹ್ರೂಂ ರಾಮದೂತಾಯ ಮಧ್ಯಮಾಭ್ಯಾಂ ನಮಃ
ಓಂ ಹ್ರೈಂ ವಾಯುಪುತ್ರಾಯ ಅನಾಮಿಕಾಭ್ಯಾಂ ನಮಃ
ಓಂ ಹ್ರೌಂ ಅಗ್ನಿಗರ್ಬಾಯ ಕನಿಷ್ಠಿಕಾಭ್ಯಾ ನಮಃ
ಓಂ ಹ್ರಃ ಬ್ರಹ್ಮಾಸ್ತ್ರನಿವಾರಣಾಯ ಕರತಲಕರಪೃಷ್ಠಾಭ್ಯಾಂ ನಮಃ
ಓಂ ಹ್ರಾಂ ಅಂಜನೀಸುತಾಯ ಹೃದಯಾಯ ನಮಃ
ಓಂ ಹ್ರೀಂ ರುದ್ರಮೂರ್ತಯೇ ಶಿರಸೇ ಸ್ವಾಹಾ
ಓಂ ಹ್ರೂಂ ರಾಮದೂತಾಯ ಶಿಖಾಯೈ ವಷಟ್
ಓಂ ಹ್ರೈಂ ವಾಯುಪುತ್ರಾಯ ಕವಚಾಯ ಹುಂ
ಓಂ ಹ್ರೌಂ ಅಗ್ನಿಗರ್ಭಾಯ ನೇತ್ರತ್ರಯಾಯ ವೌಷಟ್
ಓಂ ಹ್ರಃ ಬ್ರಹ್ಮಾಸ್ತ್ರನಿವಾರಣಾಯ ಅಸ್ತ್ರಾಯ ಫಟ್

ಈ ರೀತಿಯಾಗಿ ಹೇಳಿ ಅಂಗನ್ಯಾಸವನ್ನೂ ಹೃದಯಾದಿ ನ್ಯಾಸವನ್ನೂ ಮಾಡಿಕೊಳ್ಳಬೇಕು.

ಧ್ಯಾಯೇದ್ಬಾಲದಿವಾಕರದ್ಯುತಿನಿಭಂದೇವಾರಿದರ್ಪಾಪಹಂ।
ದೇವೇಂದ್ರಪ್ರಮುಖಂ ಪ್ರಶಸ್ತಯಶಸಂ ದೇದೀಪ್ಯಮಾನಂರುಚಾ ।
ಸುಗ್ರೀವಾದಿ ಸಮಸ್ತ ವಾನರಯುತಂ ಸುವ್ಯಕ್ತ ತತ್ವ ಪ್ರಿಯಂ ।
ಸಂರಕ್ತಾರುಣಲೋಚನಂ ಪವನಜಂ ಪೀತಾಂಬರಾಲಂಕೃತಂ ॥ ೧ ॥

ಉದ್ಯನ್ಮಾರ್ತಾಂಡ ಕೋಟಿ ಪ್ರಕಟರುಚಿಯುತಂ ಚಾರುವೀರಾಸನಸ್ಥಂ
ಮೌಂಜೀಯಜ್ಞೋಪವೀತಾಭರಣ ರುಚಿ ಶಿಖಂ ಶೋಭಿತಂಕುಂಡಲಾಂಕಂ
ಭಕ್ತಾನಾಮಿಷ್ಟದಂ ತಂ ಪ್ರಣತಮುನಿಜನಂ ವೇದನಾದಪ್ರಮೋದಂ ।
ಧ್ಯಾಯೇದೇವಂ ವಿಧೇಯಂ ಪ್ಲವಗಕುಲಪತಿಂ ಗೋಷ್ಪದೀಭೂತವಾರ್ಧಿಂ॥

ವಜ್ರಾಂಗಂ ಪಿಂಗ ಕೇಶಾಢ್ಯಂ ಸ್ವರ್ಣಕುಂಡಲ ಮಂಡಿತಂ।
ನಿಗೂಢಮುಪ ಸಂಗಮ್ಯ ಪಾರಾವಾರ ಪರಾಕ್ರಮಂ ॥ ೩ ॥

ಧ್ಯಾನವು

೧. ಬಾಲ ಸೂರ್ಯನಂತೆ ಕಾಂತಿಯುಳ್ಳ, ದೇವಾರಿಯಾದ ರಾವಣನ ದರ್ಪವನ್ನು ನಾಶಮಾಡಿದ, ದೇವೇಂದ್ರನಿಗೂ ಮುಖ್ಯನಾದ, ಪ್ರಶಸ್ತವಾದ ಯಶಸ್ಸುಳ್ಳ ಕಾಂತಿಯಿಂದಲೇ ದೇದೀಪ್ಯಮಾನನಾದ, ಸುಗ್ರೀವನೇ ಮುಂತಾದ ಎಲ್ಲಾ ಕಪಿಗಳಿಂದಲೂ ಕೂಡಿಕೊಂಡಿರುವ ವ್ಯಕ್ತವಾದ ತತ್ವದಲ್ಲಿ ಪ್ರೀತಿಯುಳ್ಳ, ಕೆಂಪಾದ ಕಣ್ಣುಗಳುಳ್ಳ' ಪೀತಾಂಬರವನ್ನು ಹೊದ್ದಿರುವ, ವಾಯುಪುತ್ರನನ್ನು ಧ್ಯಾನಿಸಬೇಕು.

೨. ಆಗ ತಾನೇ ಹುಟ್ಟುತ್ತಿರುವ ಕೋಟಿ ಜನ ಸೂರ್ಯರಿಂದ ಹೊರಹೊಮ್ಮುವ ಕಾಂತಿಯಂತೆ ಕಾಂತಿಯುಳ್ಳ, ಮನೋಹರನಾದ, ವೀರಾಸನದಲ್ಲಿ ಕುಳಿತಿರುವ, ಮೌಂಜಿಯಜ್ಞೋಪವೀತ ಆಭರಣಗಳನ್ನು ಧರಿಸಿ ಮನೋಹರವಾಗಿರುವ ಸುಂದರವಾದ ಕಿವಿಯ ಕುಂಡಲಗಳನ್ನು ಹಾಕಿಕೊಂಡಿರುವ, ಭಕ್ತರಿಗೆ ಇಷ್ಟವನ್ನು ಕೊಡುವ, ಮುನಿ ಜನಗಳಿಂದಲೂ ನಮಸ್ಕೃತವಾದ, ವೇದದ ಧ್ವನಿಯಲ್ಲಿಯೇ ಆಸಕ್ತನಾಗಿ ಸಂತೋಷಗೊಂಡಿರುವ, ಕಪಿಗಳ ಕುಲಕ್ಕೆ ಒಡೆಯನಾದ, ಸಮುದ್ರವನ್ನು ಗೋವಿನ ಪಾದದಷ್ಟು ಚಿಕ್ಕದನ್ನಾಗಿ ಮಾಡಿದ, ಹನುಮಂತನನ್ನು ಧ್ಯಾನಿಸಬೇಕು.

೩–೪. ವಜ್ರದಂತೆ ದೇಹವುಳ್ಳ, ಕೆಂಚಗಿರುವ ಕೂದಲುಗಳನ್ನು ದೇಹದಲ್ಲಿ ಬಹುವಾಗಿ ಹೊಂದಿರುದ, ಚಿನ್ನದ ಕುಂಡಲಗಳಿಂದ ಅಲಂಕೃತವಾದ,

ಸ್ಫಟಿಕಾಭಂ ಸ್ವರ್ಣಕಾಂತಿಂ ದ್ವಿಭುಜಂ ಚ ಕೃತಾಂಜಲಿಂ ।
ಕುಂಡಲದ್ವಯ ಸಂಶೋಭಿ ಮುಖಾಂಭೋಜಂ ಹರಿಂ ಭಜೇ ॥ ೪ ॥
ಸವ್ಯ ಹಸ್ತೇ ಗದಾಯುಕ್ತಂ ವಾಮ ಹಸ್ತೇ ಕಮಂಡಲುಂ ।
ಉದ್ಯದ್ದಕ್ಷಿಣದೋರ್ದಂಡಂ ಹನೂಮಂತಂ ವಿಚಿಂತಯೇತ್ ॥ ೫ ॥

॥ ಅಥ ಮನುಃ ॥

ಓಂ ನಮೋ ಭಗವತೇ ಶೋಭಿತಾನನಾಯ ಯಶೋಲಂಕೃತಾಯ ಅಂಜನಾಗರ್ಭ ಸಂಭೂತಾಯ ರಾಮಲಕ್ಷ್ಮಣಾನಂದಕಾಯ ಕಪಿಸೈನ್ಯ ಪ್ರಕಾಶನ ಪರ್ವತೋತ್ಪಾಟನಾಯ ಸುಗ್ರೀವ ಸಹ್ಯಕರಣ ಪರೋಚ್ಚಾಟನ ಕುಮಾರ ಬ್ರಹ್ಮಚರ್ಯ ಗಂಭೀರ ಶಬ್ದೋದಯ ಓಂ ಹ್ರೀಂ ಸರ್ವ ದುಷ್ಟಗ್ರಹ ನಿವಾರಣಾಯ ಸ್ವಾಹಾ । ಓಂ ನಮೋ ಹನೂಮತೇ ಏಹಿ ಏಹಿ ಏಹಿ ಸರ್ವಗ್ರಹ ಭೂತಾನಾಂ ಶಾಕಿನೀಡಾಕಿನೀನಾಂ ವಿಷಮ ದುಷ್ಟಾನಾಂ ಸರ್ವೇಷಾಮಾಕರ್ಷಯ ಆಕರ್ಷಯ ಮರ್ದಯ ಮರ್ದಯ ಛೇದಯ ಛೇದಯ ಮರ್ತ್ಯಾನ್ಮಾರಯ ಮಾರಯ ಶೋಷಯ ಶೋಷಯ ಪ್ರಜ್ವಲ ಪ್ರಜ್ವಲ ಭೂತಮಂಡಲಪಿಶಾಚಮಂಡಲ ನಿರಸನಾಯ ಭೂತಜ್ವರ

ಸಮುದ್ರವನ್ನು ದಾಟಿದ ಪರಾಕ್ರಮವುಳ್ಳ, ಸ್ಫಟಿಕದಂತೆ ಕಾಂತಿಯುಳ್ಳ! ಚಿನ್ನದಂತೆ ಕಾಂತಿಯಿರುವ ಎರಡುತೋಳುಗಳಿರುವ, ಕೈಮುಗಿದುಕೊಂಡಿರುವ, ಎರಡು ಕುಂಡಲಗಳಿಂದಲೂ ಪ್ರಕಾಶಮಾನವಾದ ಮುಖವುಳ್ಳ, ಹನುಮಂತನನ್ನು ಗುಟ್ಟಾಗಿಹೊಂದಿ ಸೇವಿಸುತ್ತೇನೆ.

೫. ಬಲದಕ್ಕೈಯ್ಯಲ್ಲಿ ಗದೆಯನ್ನೂ, ಎಡದಕ್ಕೈಯ್ಯಲ್ಲಿ ಕಮಂಡಲುವನ್ನೂ ಹಿಡಿದು ಬಲಗೈಯನ್ನು ಮೇಲಕ್ಕೆ ಎತ್ತಿಕೊಂಡಿರುವ ಹನುಮಂತನನ್ನು ಧ್ಯಾನಿಸಬೇಕು.

ಮಂತ್ರವು

ಪ್ರಕಾಶ ಮಾನವಾದ ಮುಖವುಳ್ಳ, ಯಶಸ್ಸಿನಿಂದ ಅಲಂಕೃತನಾದ, ಅಂಜನೆಯ ಗರ್ಭದಲ್ಲಿ ಹುಟ್ಟಿದ, ರಾಮಲಕ್ಷ್ಮಣರಿಗೆ ಆನಂದವನ್ನುಂಟುಮಾಡುವ ಕಪಿಸೈನ್ಯವನ್ನು ಪ್ರಕಾಶಿಸುವ, ಪರ್ವತವನ್ನು ಕಿತ್ತಂಥಹ, ಸುಗ್ರೀವನಿಗೆ ಸಹಾಯಕನಾದ, ಶತ್ರುಗಳನ್ನು ಓಡಿಸುವ, ಬಾಲಬ್ರಹ್ಮಚಾರಿಯಾದ ಗಂಭೀರವಾಗಿ ಶಬ್ದವನ್ನು ಮಾಡುವಂತಹ, ಓಂಹ್ರೀಂ, ದುಷ್ಟ ಗ್ರಹಗಳನ್ನೆಲ್ಲಾ ನಿವಾರಣೆ ಮಾಡುವ, ಭಗವಂತನಿಗೆ ಸಹಾಯಕನಾದ ಹನುಮಂತನೇ ನಿನಗೆ ನಮಸ್ಕಾರವು. ಬಾ, ಬಾ, ಬಾ, ಎಲ್ಲಾ ಗ್ರಹಗಳನ್ನೂ, ಎಲ್ಲಾ

ಪ್ರೇತಜ್ವರ ಚಾತುರ್ಥಿಕಜ್ವರ ಬ್ರಹ್ಮರಾಕ್ಷಸಪಿಶಾಚಚ್ಛೇದನಕ್ರಿಯಾವಿಷ್ಣು ಜ್ವರ ಮಹೇಶಜ್ವರ ಛಿಂಧಿ ಛಿಂಧಿ ಭಿಂಧಿ ಭಿಂಧಿ ಅಕ್ಷಿಶೂಲೇ ಶಿರೋಭ್ಯಂತರೇ ಹೃಕ್ಷಿಶೂಲೇ ಗುಲ್ಮಶೂಲೇ ಪಿತ್ತಶೂಲೇ ಬ್ರಹ್ಮರಾಕ್ಷಸಕುಲಪ್ರಬಲನಾಗ ಕುಲವಿಷನಿರ್ವಿಷ ಝಟಿತಿ ಝಟಿತಿ ಓಂ ಹ್ರೀಂ ಫಟ್ ಘೇ ಘೇ ಸ್ವಾಹಾ ॥ ಓಂ ನಮೋ ಹನುಮತೇ ಪವನಪುತ್ರ ವೈಶ್ವಾನರಮುಖ ಪಾಪದೃಷ್ಟಿ ಶೋಧಾದೃಷ್ಟಿ ಹನೂಮತೇಕೋ ಅಜ್ಞಾಪುರೇ ಸ್ವಾಹಾ ॥ ಸ್ವಗೃಹೇ ದ್ವಾರೇ ಪಟ್ಟಕೇ ತಿಷ್ಠ ತಿಷ್ಠೇತಿ ತತ್ರ ರೋಗಭಯಂ ರಾಜಕುಲ ಭಯಂ ನಾಸ್ತಿ ತಸ್ಯೋಚ್ಚಾರಣ ಮಾತ್ರೇಣ ಸರ್ವೇ ಜ್ವರಾ ನಶ್ಯಂತಿ ಓಂ ಹ್ರಾಂ ಹ್ರೀಂ ಹ್ರೂಂ ಫಟ್ ಘೇ ಘೇ ಸ್ವಾಹಾ ॥ ಉಪಾಸನಾರಹಸ್ಯಂ ಗುರೂಪ ದೇಶಗಮ್ಯಂ.

ಭೂತಗಳನ್ನೂ, ಶಾಕಿನಿ ಡಾಕಿನಿಗಳನ್ನೂ, ವಿಷಮದುಷ್ಟ ಗ್ರಹಗಳನ್ನೂ ಎಲ್ಲವನ್ನೂ ಕೂಡ ಎಳೆದುಕೊಂಡುಬಾ, ಎಳೆದುಕೊಂಡುಬಾ, ಮರ್ದನ ಮಾಡು ಮರ್ದನಮಾಡು, ಭೇದಿಸು, ಭೇದಿಸು, ಸಾಯತಕ್ಕವುಗಳನ್ನು ಕೊಂದುಹಾಕು, ಕೊಂದುಹಾಕು, ಶೋಷಿಶು, ಶೋಷಿಸು, ಸುಡು, ಸುಡು, ಭೂತಮಂಡಲಗಳನ್ನೂ ಪಿಶಾಚಮಂಡಲಗಳನ್ನೂ ಓಡಿಸು, ಓಡಿಸು, ಭೂತಜ್ವರ, ಪ್ರೇತಜ್ವರ, ಚಾತುರ ರ್ಥಿಕಜ್ವರ ಬ್ರಹ್ಮರಾಕ್ಷಸ, ಪಿಶಾಚ, ಛೇದನಕ್ರಿಯೆ, ವಿಷ್ಣುಜ್ವರ, ಮಹೇಶ್ವರಜ್ವರ, ಇವುಗಳನ್ನು ಕತ್ತರಿಸು, ಕತ್ತರಿಸು, ಸೀಳು, ಸೀಳು, ಅಕ್ಷಿಶೂಲೆ, ಶಿರೋಶೂಲೆ, ದಂತಶೂಲೆ, ಕುಕ್ಷಿಶೂಲೆ, ಗುಲ್ಮಶೂಲೆ, ಪಿತ್ಥಶೂಲೆ, ಬ್ರಹ್ಮರಾಕ್ಷಸಕುಲ, ಪ್ರಬಲ ವಾದನಾಗವಿಷ, ಕಾಲವಿಷ, ನಿರ್ವಿಷ, ಇವನ್ನು ಬೇಗನೆ ನಾಶಮಾಡು, ನಾಶ ಮಾಡು, ಓಂಹ್ರೀಂ ಫಟ್ ಘೇಘೇ ಸ್ವಾಹಾ.

ಓಂಹನುಮಂತನಿಗೆ ನಮಸ್ಕಾರವು. ಪವನ ಪುತ್ರ, ಅಗ್ನಿಯಂತೆ ಕೆಂಪ ಗಿರುವ ಮುಖವುಳ್ಳವನೇ! ಪಾಪವೃಷ್ಟಿಗಳನ್ನು ನಾಶಮಾಡುವ ದೃಷ್ಟಿಯುಳ್ಳವನೇ! ಹನುಮಂತನೇ! ಕೋ, ಅಜ್ಞಾಪುರೇ ಸ್ವಾಹಾ. ನನ್ನ ಮನೆಯಲ್ಲಿಯೂ, ನನ್ನ ಬಾಗಿಲಿನಲ್ಲಿಯೂ, ಹೊಸಲಿನಲ್ಲಿಯೂ, ಇರು, ಇರು, ಅಲ್ಲಿ ರೋಗಭಯವು, ರಾಜ ಕುಲ ಭಯವು, ಇರುವುದಿಲ್ಲ. ಆ ಸ್ವಾಮಿಯ ನಾಮವನ್ನು ಉಚ್ಚಾರಣ ಮಾಡು ವುದರಿಂದಲೇ ಎಲ್ಲಾ ಜ್ವರಗಳೂ ನಾಶವಾಗುತ್ತವೆ. ಓಂಹ್ರಾಂ, ಹ್ರೀಂ,ಹ್ರೂಂ ಫಟ್, ಘೇಘೇ ಸ್ವಾಹಾ!

(ಉಪಾಸನೆಯ ರಹಸ್ಯವನ್ನು ಗುರುವಿನ ಉಪದೇಶದಿಂದ ತಿಳಿಯಬೇಕು)

ಶ್ರೀರಾಮಚಂದ್ರ ಉವಾಚ

ಹನೂಮಾನ್ ಪೂರ್ವತಃ ಪಾತು ದಕ್ಷಿಣೇ ಪವನಾತ್ಮಜಃ।
ಪಾತು ಪ್ರತೀಚ್ಯಾಂ ರಕ್ಷೋಘ್ನಃ ಪಾತು ಸಾಗರಪಾರಗಃ ॥ ೧ ॥

ಉದೀಚ್ಯಾಮೂರ್ಧ್ವತಃ ಪಾತು ಕೇಸರೀ ಪ್ರಿಯ ನಂದನಃ।
ಅಧಸ್ತು ವಿಷ್ಣುಭಕ್ತಸ್ತು ಪಾತು ಮಧ್ಯಂ ಚ ಪಾವನಿಃ ॥ ೨ ॥

ಲಂಕಾವಿದಾಹಕಃ ಪಾತು ಸರ್ವಾ ಪದ್ಭ್ಯೋ ನಿರಂತರಂ।
ಸುಗ್ರೀವಸಚಿವಃ ಪಾತು ಮಸ್ತಕಂ ವಾಯುನಂದನಃ ॥ ೩ ॥

ಫಾಲಂ ಪಾತು ಮಹಾವೀರೋ ಭ್ರುವೋರ್ಮಧ್ಯೇ ನಿರಂತರಂ।
ನೇತ್ರೇ ಛಾಯಾಪಹಾರೀ ಚ ಪಾತು ನಃ ಪ್ಲವಗೇಶ್ವರಃ ॥ ೪ ॥

ಕಪೋಲೇ ಕರ್ಣಮೂಲೇಚ ಪಾತು ಶ್ರೀರಾಮಕಿಂಕರಃ।
ನಾಸಾಗ್ರಮಂಜನಾಸೂನುಃ ಪಾತು ವಕ್ತ್ರಂ ಹರೀಶ್ವರಃ ॥ ೫ ॥

೧–೧೩. ಶ್ರೀರಾಮಚಂದ್ರನು ಹೇಳಿದನು—ಹನುಮಂತನು ಪೂರ್ವದ ಕಡೆಯಲ್ಲಿ ರಕ್ಷಿಸಲಿ, ಪವನಾತ್ಮಜನು ದಕ್ಷಿಣದಲ್ಲಿ, ಕಾಪಾಡಲಿ, ರಾಕ್ಷಸರನ್ನು ನಾಶಮಾಡುವವನು ಪಶ್ಚಿಮದ ಕಡೆ ರಕ್ಷಿಸಲಿ, ಸಾಗರವನ್ನು ದಾಟಿದವನು ಉತ್ತರದಕಡೆ ಕಾಪಾಡಲಿ, ಕೇಸರಿಯ ಪ್ರೀಯ ನಂದನನು ಮೇಲುಗಡೆಯಲ್ಲಿ ರಕ್ಷಿಸಲಿ, ವಿಷ್ಣು ಭಕ್ತನು ಕೆಳಭಾಗದಲ್ಲಿ ರಕ್ಷಿಸಲಿ, ಲಂಕಾ ವಿದಾಹಕನು ಸದಾಕಾಲದಲ್ಲಯೂ ಎಲ್ಲಾ ಆಪತ್ತುಗಳಿಂದಡೂ ರಕ್ಷಿಸಲಿ, ಸುಗ್ರೀವಸಚಿವನು ತಲೆಯನ್ನು ರಕ್ಷಿಸಲಿ, ವಾಯುನಂದನನು, ಹಣೆಯನ್ನು ರಕ್ಷಿಸಲಿ, ಮಹಾವೀರನು ಹುಬ್ಬುಗಳಮಧ್ಯದಲ್ಲಿ ಕಾಪಾಡಲಿ, ಛಾಯಾಪಹರಿಯು ನೇತ್ರಗಳನ್ನು ರಕ್ಷಿಸಲಿ, ಪ್ಲವಗೇಶ್ವರನು ಕಪೋಲಗಳನ್ನು ರಕ್ಷಿಸಲಿ, ರಾಮಕಿಂಕರನು ಕಿವಿಯ ಬುಡಗಳನ್ನು ರಕ್ಷಿಸಲಿ, ಅಂಜನಾಸೂನುವು ಮೂಗಿನ ತುದಿಯನ್ನು ರಕ್ಷಿಸಲಿ. ಹರೀಶ್ವರನು ಬಾಯನ್ನು ರಕ್ಷಿಸಲಿ. ರುದ್ರಪ್ರಿಯನು ಮಾತನ್ನು ರಕ್ಷಿಸಲಿ. ಪಿಂಗಳ

ವಾಚಂ ರುದ್ರಪ್ರಿಯಃ ಪಾತು ಜಿಹ್ವಾಂ ಪಿಂಗಳಲೋಚನಃ।
ಪಾತು ಕಂಠಂ ಚ ದೈತ್ಯಾರಿಃ ಸ್ಕಂಧೌ ಪಾತು ಸುರಾರ್ಚಿತಃ ॥೬॥

ಭುಜೌ ಪಾತು ಮಹಾತೇಜಾಃ ಕರೌ ತು ಚರಣಾಯುಧಃ।
ಲಂಕಾನಿಭಂಜನಃ ಪಾತು ಪೃಷ್ಠದೇಶೇ ನಿರಂತರಂ ॥೭॥

ನಾಭಿಂ ಚ ರಾಮದೂತಸ್ತು ಕಟಿಂ ಪಾತ್ವನಿಲಾತ್ಮಜಃ।
ಗುಹ್ಯಂ ಪಾತು ಮಹಾಪ್ರಾಜ್ಞೋ ಲಿಂಗಂ ಪಾತು ಶಿವಪ್ರಿಯಃ ॥೮॥

ಊರೂ ಚ ಜಾನುನೀ ಪಾತು ಲಂಕಾಪ್ರಾಸಾದಭಂಜನಃ।
ಜಂಘೇ ಪಾತು ಕಪಿಶ್ರೇಷ್ಠೋ ಗುಲ್ಫೌ ಪಾತು ಮಹಾಬಲಃ ॥೯॥

ಅಚಲೋದ್ಧಾರಕಃ ಪಾತು ಪಾದೌ ಭಾಸ್ಕರ ಸನ್ನಿಭಃ।
ಅಂಗಾನ್ಯಮಿತಸತ್ವಾಢ್ಯಃ ಪಾತು ಪಾದಾಂಗುಲೀಸ್ತಥಾ ॥೧೦॥

ಲೋಚನನು ನಾಲಗೆಯನ್ನು ರಕ್ಷಿಸಲಿ, ದೈತ್ಯಾರಿಯು ಕಂಠವನ್ನು ರಕ್ಷಿಸಲಿ, ಸುರಪೂಜಿತನು ಹೆಗಲುಗಳನ್ನು ರಕ್ಷಿಸಲಿ, ಮಹಾತೇಜನು ಭುಜಗಳನ್ನು ರಕ್ಷಿಸಲಿ, ಕಾಲುಗಳೇ ಆಯುಧವಾಗಿ ಉಳ್ಳವನು ಕೈಗಳನ್ನು ಕಾಪಾಡಲಿ, ಲಂಕಾ ವಿಭಂಜನನು ಪೃಷ್ಠಪ್ರದೇಶವನ್ನು ರಕ್ಷಿಸಲಿ, ರಾಮದೂತನು ಹೊಕ್ಕುಳನ್ನು ರಕ್ಷಿಸಲಿ, ಅನಿಲಾತ್ಮಜನು ನಡುವನ್ನು ರಕ್ಷಿಸಲಿ, ಮಹಾಪ್ರಾಜ್ಞನು ಗುಹ್ಯ ಪ್ರದೇಶವನ್ನು ರಕ್ಷಿಸಲಿ ಶಿವಪ್ರಿಯನು ಲಿಂಗವನ್ನು ರಕ್ಷಿಸಲಿ, ಲಂಕೆಯ ಮಹಡಿಗಳನ್ನು ನಾಶಮಾಡಿದವನು ತೊಡೆಗಳನ್ನೂ ಮಂಡಿಗಳನ್ನೂ ರಕ್ಷಿಸಲಿ, ಕಪಿಶ್ರೇಷ್ಠನು ಮುಮ್ಮಂಡಿಗಳನ್ನು ರಕ್ಷಿಸಲಿ, ಮಹಾಬಲವುಳ್ಳವನ್ನು ಹಿಮ್ಮಡಿ ಗಳನ್ನು ರಕ್ಷಿಸಲಿ, ಅಚಲೋದ್ಧಾರಕನು ಪಾದಗಳನ್ನು ರಕ್ಷಿಸಲಿ, ಬಾಸ್ಕರ ಸನ್ನಿಭನು ಪಾದಗಳನ್ನು ರಕ್ಷಿಸಲಿ, ಬಹುಸತ್ವವುಳ್ಳವನು ಪಾದಗಳ ಬೆರಳುಗಳನ್ನು

ಸರ್ವಾಂಗಾನಿ ಮಹಾಶೂರಃ ಪಾತು ರೋಮಾಣಿ ಚಾತ್ಮವಿತ್ ।
ಹನೂಮತ್ಕವಚಂ ಯಸ್ತು ಪಠೇದ್ವಿದ್ವಾನ್ ವಿಚಕ್ಷಣಃ ॥ ೧೧ ॥

ಸ ಏವ ಪುರುಷಶ್ರೇಷ್ಠೋ ಭುಕ್ತಿಂ ಮುಕ್ತಿಂ ಚ ವಿಂದತಿ ।
ತ್ರಿಕಾಲಮೇಕಕಾಲಂ ವಾ ಪಠೇನ್ಮಾಸತ್ರಯಂ ನರಃ ॥ ೧೨ ॥

ಸರ್ವಾನ್ರಿಪೂನ್ ಕ್ಷಣಾಜ್ಜಿತ್ವಾ ಸ ಪುಮಾನ್ ಶ್ರಿಯಮಾಪ್ನುಯಾತ್ ॥ ೧೩ ॥

ಮಧ್ಯರಾತ್ರೇ ಜಲೇ ಸ್ಥಿತ್ವಾ ಸಪ್ತವಾರಂ ಪಠೇದ್ಯದಿ ।
ಕ್ಷಯಾಪಸ್ಮಾರಕುಷ್ಠಾದಿ ತಾಪತ್ರಯ ನಿವಾರಣಂ ॥ ೧೪ ॥

ಅಶ್ವತ್ಥಮೂಲೇರ್ಕವಾರೇ ಸ್ಥಿತ್ವಾ ಪಠತಿ ಯಃ ಪುಮಾನ್ ।
ಅಚಲಾಂ ಶ್ರಿಯಮಾಪ್ನೋತಿ ಸಂಗ್ರಾಮೇ ವಿಜಯಂ ತಥಾ ॥ ೧೫ ॥

ರಕ್ಷಿಸಲಿ, ಮಹಾಶೂರನು ಎಲ್ಲಾ ಅಂಗಗಳನ್ನೂ ರಕ್ಷಿಸಲಿ, ಆತ್ಮಜ್ಞಾನವನ್ನು ಬಲ್ಲವನು ರೋಮಗಳನ್ನು ರಕ್ಷಿಸಲಿ. ವಿದ್ಯಾವಿಚಕ್ಷಣನನಾದವನು ಯಾವನು ಈ ಹನುಮತ್ಕವಚವನ್ನು ಹೇಳುವನೋ ಅವನೇ ಪುರುಷಶ್ರೇಷ್ಠನು. ಅವನಿಗೆ ಭುಕ್ತಿ (ಆಹಾರ)ಯೂ ಮುಕ್ತಿಯೂ ಸಿಕ್ಕುತ್ತವೆ.

೧೩. ಯಾವನು ಇದನ್ನು ಎರಡು ಹೊತ್ತಾಗಲಿ ಇಲ್ಲವೇ ಒಂದೇ ಹೊತ್ತಾಗಲೀ ಮೂರು ತಿಂಗಳವರೆಗೂ ಹೇಳುವನೋ ಅವನು ತನ್ನ ಶತ್ರುಗಳನ್ನೆಲ್ಲಾ ಕ್ಷಣಕಾಲವಲ್ಲಿ ಜಯಿಸಿ ಸಂಪತ್ತನ್ನು ಹೊಂದುತ್ತಾನೆ.

೧೪. ಮಧ್ಯ ರಾತ್ರಿಯ ಕಾಲದಲ್ಲಿ ನೀರಿನಲ್ಲಿ ನಿಂತು ಇದನ್ನು ಏಳಾವರ್ತಿ ಹೇಳಿದರೆ ಕ್ಷಯ, ಅಪಸ್ಮಾರಕ, ಕುಷ್ಠಗಳೂ, ಆಧಿಭೌತಿಕ, ಅಧ್ಯಾತ್ಮಿಕ, ಆಧಿದೈವಿಕವೆಂಬ ತಾಪತ್ರಯಗಳೂ ನಾಶವಾಗುತ್ತವೆ,

೧೫. ಭಾನುವಾರದ ದಿವಸ ಅರಳಿಯ ಮರದಬುಡದಲ್ಲಿ ನಿಂತು ಕೊಂಡು ಇದನ್ನು ಪಠಿಸಿದರೆ ಅವನಿಗೆ ಸ್ಥಿರವಾದ ಸಂಪತ್ತು ಬರುತ್ತದೆ. ಯುದ್ಧದಲ್ಲಿ ಜಯಶಾಲಿಯಾಗುತ್ತಾನೆ.

ಬುದ್ಧಿರ್ಬಲಂ ಯಶೋ ಧೈರ್ಯಂ ನಿರ್ಭಯತ್ವಮರೋಗತಾ ।
ಸುದಾರ್ಢ್ಯಂ ವಾಕ್ಸ್ಫುಟತ್ವಂ ಚ ಹನೂಮತ್ಸ್ಮರಣಾದ್ಭವೇತ್ ॥ ೧೬ ॥

ಮಾರಣಂ ವೈರಿಣಾಂ ಸದ್ಯಶ್ಶರಣಂ ಸರ್ವಸಂಪದಾಂ ।
ಶೋಕಸ್ಯ ಹರಣೇ ದಕ್ಷಂ ವಂದೇ ತಂ ರಣದಾರುಣಂ ॥ ೧೭ ॥

ಲಿಖಿತ್ವಾ ಪೂಜಯೇದ್ಯಸ್ತು ಸರ್ವತ್ರ ವಿಜಯೀ ಭವೇತ್ ।
ಯಃ ಕರೇ ಧಾರಯೇನ್ನಿತ್ಯಂ ಸ ಪುಮಾನ್ ಶ್ರಿಯಮಾಪ್ನುಯಾತ್ ॥

ಸ್ಥಿತ್ವಾ ತು ಬಂಧನೇ ಯಸ್ತು ಜಪಂ ಕಾರಯತಿ ದ್ವಿಜೈಃ ।
ತತ್ಕ್ಷಣಾನ್ಮುಕ್ತಿಮಾಪ್ನೋತಿ ನಿಗಡಾತ್ತು ತಥೈವ ಚ ॥ ೧೯ ॥

---

೧೬. ಹನುಮಂತನನ್ನು ಸ್ಮರಿಸುವುದರಿಂದ ಬುದ್ಧಿಯೂ, ಬಲವೂ, ಯಶಸ್ಸೂ, ಧೈರ್ಯವೂ, ನಿರ್ಭಯವೂ, ರೋಗವಿಲ್ಲದಿರುವಿಕೆಯೂ, ದೃಢವಾಗಿರುವಿಕೆಯೂ, ಮಾತಿನಲ್ಲಿ ಸ್ಫುಟತ್ವವೂ ಕೂಡ ಉಂಟಾಗುತ್ತವೆ.

೧೭. ಇವನನ್ನು ಸ್ಮರಣೆ ಮಾಡುವವನ ವೈರಿಗಳೆಲ್ಲರೂ ನಾಶವಾಗುವರು. ಇಲ್ಲದಿದ್ದರೆ ಶರಣುಹೊಂದುವರು. ಎಲ್ಲ ಸಂಪತ್ತುಗಳೂ ಬರುವುವು. ಶೋಕವನ್ನು ನಾಶಮಾಡುಡುವವರಲ್ಲಿ ಬಹುಉತ್ತಮನಾದ ಆ ಹನುಮಂತನನ್ನು ನಮಸ್ಕರಿಸುತ್ತೇನೆ.

೧೮. ಇದನ್ನು ಬರೆಸಿಟ್ಟುಕೊಂಡು ಯಾವನು ಪೂಜಿಸುವನೋ ಅವನು ಎಲ್ಲೆಲ್ಲಿಯೂ ಜಯಶಾಲಿಯಾಗುವನು. ಇದನ್ನು ಬರೆದು ತೋಳಿಗೆ ಕಟ್ಟಿಕೊಂಡಿದ್ದರೆ ಅವನಿಗೆ ಸಮಸ್ತ ಸಂಪತ್ತುಗಳೂ ಸ್ವಾಧೀನವಾಗಿರುವುವು.

೧೯. ಯಾವನಾದರೂ ಬಂಧನದಲ್ಲಿರುವಾಗ ಬ್ರಾಹ್ಮಣರಿಂದ ತನಗೋಸ್ಕರ ಈ ಹನುಮಂತನ ಮಂತ್ರದ ಜಪವನ್ನು ಮಾಡಿಸಿದರೆ ಆಕ್ಷಣದಲ್ಲಿಯೇ ಆ ಬಂಧನದಿಂದ ಮುಕ್ತನಾಗುವನು.

॥ ಈಶ್ವರ ಉವಾಚ ॥

ಭಾಸ್ವಿಂದೂಚರಣಾರವಿಂದಯುಗಳಂ ಕೌಪೀನಮೌಂಜೀಧರಂ ।
ಕಾಂಚಿಶ್ರೇಣಿಧರಂ ದುಕೂಲವಸನಂ ಯಜ್ಞೋಪವೀತಾಜಿನಂ ॥
ಹಸ್ತಾಭ್ಯಾಂ ಧೃತಪುಸ್ತಕಂ ಚ ವಿಲಸದ್ಧಾರಾವಳಿಂ ಕುಂಡಲಂ ।
ಯಶ್ಚಾಲಂ ನಿಶಿಖಂ ಪ್ರಸನ್ನವದನಂ ಶ್ರೀವಾಯುಪುತ್ರಂಭಜೇ ॥ ೨೦ ॥

ಯೋ ವಾರಾಂನಿಧಿಮಲ್ಪಪಲ್ವಲಮಿವೋಲ್ಲಂಘ್ಯ ಪ್ರತಾಪಾನ್ವಿತೋ ।
ವೈದೇಹೀಘನಶೋಕತಾಪಹರಣೋ ವೈಕುಂಠಭಕ್ತಿಪ್ರಿಯಃ ॥
ಅಕ್ಷಾದ್ಯೂರ್ಜಿತರಾಕ್ಷಸೇಶ್ವರಮಹಾದರ್ಪಾಪಹಾರೀ ರಣೇ ।
ಸೋಽಯಂ ವಾನರಪುಂಗವೋಽವತು ಸದಾ ಯೋಽಸ್ಮಾನ್ಸಮೀರಾತ್ಮಜಃ ॥

ವಜ್ರಾಂಗಂ ಪಿಂಗನೇತ್ರಂ ಕನಕಮಯಲಸತ್ಕುಂಡಲಾಕ್ರಾಂತಗಂಡಂ ।
ದಂಭೋಳಿಸ್ತಂಭಸಾರಂ ಪ್ರಹರಣಸುವಶೀಭೂತರಕ್ಷೋಧಿನಾಥಂ ॥
ಉದ್ಯಲ್ಲಾಂಗೂಲಸಪ್ತಪ್ರಚಲಚಲಧರಂ ಭೀಮಮೂರ್ತಿಂ ಕಪೀಂದ್ರಂ ।
ಧ್ಯಾಯೇತ್ತಂರಾಮಚಂದ್ರಂ ಭ್ರಮರದೃಢಕರಂಸತ್ವಸಾರಂ ಪ್ರಸನ್ನಂ ॥

---

೨೦. ಈಶ್ವರನು ಹೇಳಿದನು— ಸೂರ್ಯಚಂದ್ರರವರೆಗೂ ಇರುವಕಾಲುಗಳುಳ್ಳ ಕೌಪೀನಗಳನ್ನೂ, ಮೌಂಜಿಯನ್ನೂ, ಧರಿಸಿರುವ ಉಡಿಗೆಜ್ಜೆಯನ್ನು ಕಟ್ಟಿಕೊಂಡಿರುವ, ದುಕೂಲವನ್ನು ಧರಿಸಿರುವ, ಕೈಯಲ್ಲಿ ಪುಸ್ತಕವನ್ನು ಹಿಡಿದಿರುವ, ಹಾರಗಳನ್ನು ಹಾಕಿಕೊಂಡು ಪ್ರಕಾಶಿಸುತ್ತಿರುವ, ಕುಂಡಲಗಳನ್ನು ಧರಿಸಿರುವ ಜುಟ್ಟಿಲ್ಲದಿರುವ, ನಗುಮುಖವುಳ್ಳ, ವಾಯುಪುತ್ರನನ್ನು ಭಜಿಸಬೇಕು.

೨೧. ಮಹಾಸಮುದ್ರವನ್ನು ಯಾವನು ಸಣ್ಣದಾಗಿರುವ ಕಟ್ಟೆಯಂತೆ ದಾಟಿದನೋ, ಯಾವನು ಬಹುಪ್ರತಾಪಶಾಲಿಯೋ, ಯಾವನು ವೈದೇಹಿಯ ಮಹತ್ತಾದ ಶೋಕವನ್ನು ನಾಶಮಾಡಿದನೋ, ಯಾವನು ಶ್ರೀರಾಮನಲ್ಲಿ ಬಹು ಭಕ್ತಿಯುಳ್ಳವನೋ, ಯಾವನು ಅಕ್ಷನೇ ಮುಂತಾದವರನ್ನು ನಾಶಪಡಿಸಿ ರಾವಣನ ದರ್ಪವನ್ನು ನಾಶಮಾಡಿದನೋ, ಅಂತಹ ವಾನರಶ್ರೇಷ್ಠನಾದ ವಾಯುಪುತ್ರನು ಯಾವಾಗಲೂ ನಮ್ಮನ್ನು ಕಾಪಾಡಲಿ.

೨೨. ವಜ್ರದಂತೆ ದೇಹವುಳ್ಳ, ಕೆಂಚಗಿರುವ ಕಣ್ಣುಗಳುಳ್ಳ, ಚಿನ್ನದ ಕರ್ಣಾಭರಣಗಳಿಂದ ಪ್ರಕಾಶಿಸುತ್ತಿರುವ, ಕಪೋಲಗಳುಳ್ಳ, ವಜ್ರಾಯುಧವನ್ನು ತಡೆಯುವಷ್ಟು ಶಕ್ತಿಯುಳ್ಳ, ಕುಬೇರನನ್ನು ವಶಮಾಡಿಕೊಂಡಿರುವ, ಬಾಲವನ್ನು ಎತ್ತಿಕೊಂಡಿರುವ, ಬೆಟ್ಟದಬಂಡೆಯನ್ನುಹಿಡಿದಿರುವ ಭಯಂಕರವಾದಆಕಾರವನ್ನು ಹೊಂದಿರುವ ಕಪೀಂದ್ರನಾದ, ಯಾವಾಗಲೂ ರಾಮಚಂದ್ರನನ್ನು ಭಜಿಸುತ್ತಿರುವ ದೃಢವಾದ ತೋಳುಗಳುಳ್ಳ, ಸತ್ವಕ್ಕೆ ಸಾರಭೂತನಾದ, ಪ್ರಸನ್ನನಾದ ಹನುಮಂತನನ್ನು ಭಜಿಸುತ್ತಿರಬೇಕು.

ವಜ್ರಾಂಗಂ ಪಿಂಗನೇತ್ರಂ ಕನಕಮಯಲಸತ್ಕುಂಡಲೈಃ ಶೋಭನೀಯಂ ।
ಸರ್ವವಿದ್ಯಾಧಿನಾಥಂ ಕರತಲವಿಧೃತಂ ಪೂರ್ಣಕುಂಭಂ ದೃಢಂ ವಾ ॥
ಭಕ್ತಾನಾಮಿಷ್ಟಕಾರಂ ವಿದಧತಿ ಚ ಸದಾ ಸುಪ್ರಸನ್ನಂ ಹರೀಶಂ ।
ತ್ರೈಲೋಕ್ಯತ್ರಾತುಕಾಮಂ ಸಕಲಭುವಿಗತಂರಾಮದೂತಂಸ್ಮರಾಮಿ ॥೨೩॥

ವಾಮೇ ಕರೇ ವೈರಿಭಿದಂ ವಹಂತಂ ।
ಶೈಲಂ ಪರಂ ಶೃಂಖಲಹಾರಕಂಠಂ ॥
ದಧಾನಮಾಚ್ಛಾದ್ಯ ಸುವರ್ಣವರ್ಣಂ ।
ಭಜೇ ಜ್ವಲತ್ಕುಂಡಲಮಾಂಜನೇಯಂ　　　　॥ ೨೪ ॥

ಪದ್ಮರಾಗಮಣಿಕುಂಡಲತ್ವಿಷಾ ।
ಪಾಟಲೀಕೃತಕಪೋಲಮಂಡಲಂ ॥
ದಿವ್ಯದೇಹಕದಳೀವನಾಂತರೇ ।
ಭಾವಯಾಮಿ ಪವಮಾನನಂದನಂ　　　　॥ ೨೫ ॥

---

೨೩. ಗಟ್ಟಿಯಾದ ದೇಹವುಳ್ಳ ಹೊಂಬಣ್ಣದ ಕಣ್ಣುಗಳುಳ್ಳ, ಚಿನ್ನದ ಕುಂಡಲಗಳಿಂದ ಶೋಭಿಸುವ ಎಲ್ಲಾ ವಿದ್ಯೆಗಳಿಗೂ ಒಡೆಯನಾದ ಕೈಯ್ಯಲ್ಲಿ ಪೂರ್ಣಕುಂಭವನ್ನು ಹಿಡಿದಿರುವ ಭಕ್ತರ ಇಷ್ಟವನ್ನು ನೆರವೇರಿಸುವ ಯಾವಾಗಲೂ ಪ್ರಸನ್ನವಾದ ಮುಖವುಳ್ಳ ಮೂರುಲೋಕವನ್ನೂ ಕಾಪಾಡುವುದರಲ್ಲಿ ಶಕ್ತನಾದ ಎಲ್ಲೆಡೆಯಲ್ಲಿಯೂ ವ್ಯಾಪಿಸಿಕೊಂಡಿರುವ ರಾಮದೂತನಾದ ಹನುಮಂತನನ್ನು ಸ್ಮರಿಸುತ್ತೇನೆ.

೨೪. ಎಡಗೈಯ್ಯಲ್ಲಿ ವೈರಿಗಳನ್ನು ಕೊಲ್ಲುವ ಬೆಟ್ಟವನ್ನು ಹಿಡಿದಿರುವ, ಕತ್ತಿನಲ್ಲಿ ಸರಪಳಿಗಳನ್ನು ಹಾಕಿಕೊಂಡು ಮನೋಹರವಾಗಿರುವ, ಚಿನ್ನದಬಣ್ಣದಿಂದ ಪ್ರಕಾಶಿಸುವ, ಪ್ರಕಾಶಮಾನವಾದ ಕುಂಡಲಗಳನ್ನು ಧರಿಸಿರುವ ಆಂಜನೇಯನನ್ನು ಭಜಿಸುತ್ತೇನೆ.

೨೫. ಕುಂಡಲದಲ್ಲಿರುವ ಪದ್ಮರಾಗಮಣಿ ಕಾಂತಿಯಿಂದ ಪ್ರಕಾಶಿಸುವ ಕಪೋಲಗಳುಳ್ಳ, ದಿವ್ಯ ದೇಹವನ್ನು ಹೊಂದಿ ಕದಳಿಯವನದ ಮಧ್ಯದಲ್ಲಿರುವ ಪವಮಾನ ನಂದನನ್ನು ಭಜಿಸಬೇಕು.

ಯತ್ರ ಯತ್ರ ರಘುನಾಥಕೀರ್ತನಂ ।
ತತ್ರ ತತ್ರ ಕೃತಮಸ್ತಕಾಂಜಲಿಂ ॥
ಬಾಷ್ಪವಾರಿ ಪರಿಪೂರ್ಣ ಲೋಚನಂ ।
ಮಾರುತಿಂ ನಮತ ರಾಕ್ಷಸಾಂತಕಂ ॥ ೨೬ ॥

ಮನೋಜವಂ ಮಾರುತತುಲ್ಯವೇಗಂ ।
ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಂ ॥
ವಾತಾತ್ಮಜಂ ವಾನರಯೂಥಮುಖ್ಯಂ ।
ಶ್ರೀರಾಮದೂತಂ ಶಿರಸಾ ನಮಾಮಿ ॥ ೨೭ ॥

ವಿವಾದೇ ದಿವ್ಯಕಾಲೇ ಚ ದ್ಯೂತೇ ರಾಜಕುಲೇ ರಣೇ ।
ದಶವಾರಂ ಪಠೇದ್ರಾತ್ರೌ ಮಿತಾಹಾರೋ ಜಿತೇಂದ್ರಿಯಃ ॥ ೨೮ ॥

ವಿಜಯಂ ಲಭತೇ ಲೋಕೇ ಮಾನವೇಷು ನರೇಷು ಚ ।
ಭೂತೇಪ್ರೇತೇಮಹಾದುರ್ಗೇ ರಣೇ ಸಾಗರಸಂಪ್ಲವೇ ॥ ೨೯ ॥

---

೨೬. ಶ್ರೀರಾಮನ ಕೀರ್ತನವುನಡೆಯುವ ಸ್ಥಳಗಳಲ್ಲೆಲ್ಲಾ ತಲೆಯಮೇಲೆ ಕೈಯ್ಯನ್ನು ಬೊಗಸೆಕಟ್ಟಿ ಇಟ್ಟುಕೊಂಡಿರುವ, ಆಸಂತೋಷದಿಂದ ಬರುವ ದಿವ್ಯವಾದ ಕಣ್ಣೀರಿನಿಂದ ಕೂಡಿದ ನೇತ್ರಗಳುಳ್ಳ ರಾಕ್ಷಸರಿಗೆ ಯಮಸ್ವರೂಪನಾದ ಮಾರುತಿಯನ್ನು ನಮಿಸು.

೨೭. ಮನೋವೇಗವುಳ್ಳ, ವಾಯುವೇಗವುಳ್ಳ, ಜಿತೇಂದ್ರಿಯ ನಾದ, ಬುದ್ಧಿವಂತರಲ್ಲಿ ಶ್ರೇಷ್ಠನಾವ, ವಾಯುಪುತ್ರನಾದ, ವಾನರರ ಗುಂಪಿನಲ್ಲಿ ಮುಖ್ಯನಾದ ಶ್ರೀರಾಮನೂತನಾದ ಹನುಮಂತನನ್ನು ತಲೆತಗ್ಗಿಸಿನಮಸ್ಕರಿಸುತ್ತೇನೆ.

೨೮. ವಿವಾದಕ್ಕೆ ಒಳಗಾಗಿರುವಾಗಲೂ, ಪರೀಕ್ಷೆಯ ಕಾಲಗಳಲ್ಲಿಯೂ, ದ್ಯೂತವಾಡುವಾಗಲೂ, ರಾಜನ ಬಳಿಗೆ ಹೋಗುವಾಗಲೂ, ಯುದ್ಧವೊದಗಿದಾಗಲೂ ಯಾವ ಮನುಷ್ಯನು ಮಿತವಾದ ಆಹಾರವನ್ನು ಸೇವಿಸಿ ರಾತ್ರಿಯಲ್ಲಿ ಹತ್ತುಸಾರಿ, ಈ ಕವಚವನ್ನು ಹೇಳುವನೋ ಅವನು ಲೋಕದಲ್ಲಿ ವಿಜಯವನ್ನು ಹೊಂದುತ್ತಾನೆ.

೨೯–೩೧. ನರರ ಸಂಬಂಧವಾದ, ಭೂತಗಳ ಸಂಬಂಧವಾದ, ಪ್ರೇತಗಳ ಸಂಬಂಧವಾದ ಭಯವು ಒದಗಿದಾಗಲೂ, ಬಹು ಕಷ್ಟ ಕಾಲದಲ್ಲಿಯೂ,

ಸಿಂಹವ್ಯಾಘ್ರಭಯೇ ಚೋಗ್ರೇ ಶರಶಸ್ತ್ರಾಸ್ತ್ರಪಾತನೇ ।
ಶೃಂಖಲಾಬಂಧನೇ ಚೈವ ಕಾರಾಗೃಹಾದಿಯಂತ್ರಣೇ ॥ ೩೦ ॥

ಕೋಪೇ ಸ್ತಂಭೇ ವಹ್ನಿಚಕ್ರೇ ಕ್ಷೇತ್ರೇ ಘೋರೇ ಸುದಾರುಣೇ ।
ಶೋಕೇ ಮಹಾರಣೇ ಚೈವ ಬ್ರಹ್ಮಗ್ರಹ ನಿವಾರಣಂ ॥ ೩೧ ॥

ಸರ್ವದಾ ತು ಪಠೇನ್ನಿತ್ಯಂ ಜಯಮಾಪ್ನೋತಿ ನಿಶ್ಚಿತಂ ।
ಭೂರ್ಜೇ ವಾ ವಸನೇ ರಕ್ತೇ ಕ್ಷೌಮೇ ವಾ ತಾಲಪತ್ರಕೇ ॥ ೩೨ ॥

ತ್ರಿಗಂಧಿನಾ ವಾ ಮಷ್ಯಾ ವಾ ವಿಲಿಖ್ಯ ಧಾರಯನ್ನರಃ ।
ಪಂಚಸಪ್ತತ್ರಿಲೋಹೈರ್ವಾ ಗೋಪಿತಸ್ಸರ್ವತಃಶುಭಂ ॥ ೩೩ ॥

ಕರೇ ಕಟ್ಯಾಂ ಬಾಹುಮೂಲೇ ಕಂಠೇ ಶಿರಸಿ ಧಾರಿತಂ ।
ಸರ್ವಾನ್ಕಾಮಾನವಾಪ್ನೋತಿ ಸತ್ಯಂ ಶ್ರೀರಾಮಭಾಷಿತಂ ॥ ೩೪ ॥

ದುರ್ಗಗಳಲ್ಲಿಯೂ, ಅರಣ್ಯದಲ್ಲಿಯೂ, ಸಮುದ್ರಗಳಲ್ಲಿ ತೊಂದರೆಪಡುವಾಗಲೂ, ಸಿಂಹ, ವ್ಯಾಘ್ರಗಳ ಭಯವು ಒದಗಿದಾಗಲೂ, ಶರ, ಶಸ್ತ್ರ, ಅಸ್ತ್ರಗಳ ಬಾಧೆಗೆ ಒಳಗಾದಾಗಲೂ, ಬೇಡಿ ಬಿದ್ದಿರುವಾಗಲೂ, ಕಾರಾಗೃಹದಲ್ಲಿರುವಾಗಲೂ, ಬಂಧನದಲ್ಲಿರುವಾಗಲೂ, ಕೋಪಕ್ಕೆ ಒಳಗಾದಾಗಲೂ, ಬೆಂಕಿಗೆ ಸಿಕ್ಕಿ ಬಿದ್ದಿದ್ದಾಗಲೂ, ರಣ ಕ್ಷೇತ್ರದಲ್ಲಿಯೂ, ದುಃಖದಲ್ಲಿಯೂ, ರಣಾಂಗಣದಲ್ಲಿಯೂ, ಬ್ರಹ್ಮರಾಕ್ಷಸವು ಹಿಡಿದಿರುವಾಗಲೂ, ಇದನ್ನು ಹೇಳಿದರೆ ಅವೆಲ್ಲವೂ ನಾಶವಾಗುತ್ತವೆ.

೩೨–೩೫. ಯಾವಾಗಲೂ ಇದನ್ನು ಹೇಳುತ್ತಿದ್ದರೆ ಜಯವನ್ನು ಖಂಡಿತವಾಗಿಯೂ ಹೊಂದುತ್ತಾನೆ. ಭುಜಪತ್ರೆಯಲ್ಲಾಗಲಿ, ಕೆಂಪು ಬಟ್ಟೆಯಲ್ಲಾಗಲಿ, ಕೆಂಪಿನಮಗುಟದಲ್ಲಾಗಲಿ, ತಾಳೆಯಗರಿಯಲ್ಲಾಗಲ. ಮೂರು ಗಂಧಗಳಿಂದಾಗಲಿ ಮಸಿಯಿಂದಾಗಲಿ ಈ ಕವಚವನ್ನು ಬರೆದು ಧರಿಸಿಕೊಳ್ಳಬೇಕು. ಪಂಚಲೋಹಗಳಿಂದಾಗಲಿ, ಏಳು ಲೋಹಗಳಿಂದಲಾಗಲಿ, ಮೂರು ಲೋಹ

ಅಪರಾಜಿತ ನಮಸ್తేಸ್ತು ನಮಸ್ತೇ ರಾಮಪೂಜಿತ ।
ಪ್ರಸ್ಥಾನಂ ಚ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ ॥ ೩೫ ॥

ಇತ್ಯುಕ್ತ್ವಾ ಯೋ ವ್ರಜೇದ್ಗ್ರಾಮಂ ದೇಶಂ ತೀರ್ಥಾಂತರಂ ರಣಂ ।
ಆಗಮಿಷ್ಯತಿ ಶೀಘ್ರಂ ಸಃ ಕ್ಷೇಮರೂಪೋ ಗೃಹಂ ಪುನಃ ॥ ೩೬ ॥

ಇತಿ ವದತಿ ವಿಶೇಷಾದ್ರಾಘವೇ ರಾಕ್ಷಸೇಂದ್ರಃ ।
ಪ್ರಮುದಿತವರಚಿತ್ತೋ ರಾವಣಸ್ಯಾನುಜೋ ಹಿ ॥
ರಘುವರಪದಪದ್ಮಂ ವಂದಯಾಮಾಸ ಭೂಯಃ ।
ಕುಲಸಹಿತಕೃತಾರ್ಥಃ ಶರ್ಮದಂ ಮನ್ಯಮಾನಃ ॥ ೩೭ ॥

ತಂ ವೇದಶಾಸ್ತ್ರಪರಿನಿಷ್ಠಿತಶುದ್ಧಬುದ್ಧಿಂ ।
ಶರ್ಮಾವರಂ ಸುರಮುನೀಂದ್ರನುತಂ ಕಪೀಂದ್ರಂ ॥
ಕೃಷ್ಣತ್ವಚಂ ಕನಕಪಿಂಗಜಟಾಕಲಾಪಂ ।
ವ್ಯಾಸಂ ನಮಾಮಿ ಶಿರಸಾ ತಿಲಕಂ ಮುನೀನಾಂ ॥ ೩೮ ॥

ಗಳಿಂದಲಾಗಲಿ ಮಾಡಿದ ತಗಡಿನಲ್ಲಿ ಇದನ್ನು ಬರೆದು ಕೈಯ್ಯಲ್ಲಾಗಲಿ, ನಡುವಿನಲ್ಲಾಗಲಿ, ಕತ್ತಿನಲ್ಲಾಗಲಿ, ತಲೆಯಲ್ಲಾಗಲಿ ಕಟ್ಟಿಕೊಂಡರೆ ಎಲ್ಲಾ ಇಷ್ಟಾರ್ಥಗಳನ್ನೂ ಹೊಂದುವನು. ಇದನ್ನು ಶ್ರೀ ರಾಮನೇ ಹೇಳಿರುವನು. ಸತ್ಯವಾದುದು.

೩೫. ಸೋಲನ್ನು ಹೊಂದದವನೇ ! ನಿನಗೆ ನಮಸ್ಕಾರವು ರಾಮನಿಂದ ಗೌರವಿತನಾದವನೇ ! ನಿನಗೆ ನಮಸ್ಕಾರವು. ನಾನು ಪ್ರಯಾಣ ಮಾಡುತ್ತೇನೆ. ನನಗೆ ಯಾವಾಗಲೂ ಎಲ್ಲವೂ ಸಿದ್ಧಿಯಾಗಲಿ.

೩೬. ಹೀಗೆಂದು ಸ್ಮರಿಸಿ ಯಾವನು ಗ್ರಾಮಕ್ಕಾಗಲಿ, ತೀರ್ಥಕ್ಕಾಗಲಿ, ಬೇರೆ ದೇಶಕ್ಕಾಗಲಿ, ಯುದ್ಧಕ್ಕಾಗಲಿ ಪ್ರಯಾಣ ಮಾಡಿದರೆ ಅವನು ಸಿದ್ಧಿಯನ್ನು ಹೊಂದಿ ಮತ್ತೆ ಬೇಗನೆ ಮನೆಗೆ ಬರುವನು.

೩೭. ಈ ರೀತಿಯಾಗಿ ಶ್ರೀ ರಾಮನು ಹೇಳುತ್ತಿರಲು ರಾಕ್ಷಸೇಂದ್ರನಾದ ವಿಭೀಷಣನು ಬಹು ಸಂತೋಷಗೊಂಡನು. ಅನಂತರ ಶ್ರೀ ರಾಮನ ಪಾದಪದ್ಮಗಳನ್ನು ಅನೇಕ ಬಾರಿ ನಮಸ್ಕರಿಸಿ ಇದರಿಂದ ತಾನೂ, ತನ್ನ ಕುಲವೂ ಕೃತಾರ್ಥವಾಯಿತೆಂದೂ, ಇದು ತನಗೆ ಸುಖಕರವೆಂದೂ ತಿಳಿದುಕೊಂಡು ಸಂತೋಷಪಟ್ಟನು.

ಯ ಇದಂ ಪ್ರಾತರುತ್ಥಾಯ ಪಠತೇ ಕವಚಂ ಸದಾ ।
ಆಯುರಾರೋಗ್ಯಸಂತಾನೈಸ್ತಸ್ಯ ಸ್ತವ್ಯಸ್ತವೋ ಭವೇತ್ ॥ ೩೯ ॥

ಏವಂ ಗಿರೀಂದ್ರಜೇ ಶ್ರೀಮದ್ಧನುಮತ್ಕವಚಂ ಶುಭಂ ।
ತ್ವಯಾ ಪೃಷ್ಟಂ ಮಯಾ ಪ್ರೀತ್ಯಾ ವಿಸ್ತರಾದ್ಧಿ ನಿವೇದಿತಂ ॥ ೪೦ ॥

॥ ಶ್ರೀ ರಾಮದಾಸ ಉವಾಚ ॥

ಏವಂ ಶಿವಮುಖಾಚ್ಛ್ರುತ್ವಾ ಪಾರ್ವತೀ ಕವಚಂ ಶುಭಂ ।
ಹನೂಮತಸ್ಸದಾ ಭಕ್ತ್ಯಾ ಪಪಾಠ ತನ್ಮನಾಸ್ಸದಾ ॥ ೪೧ ॥

ಏವಂ ಶಿಷ್ಯ ತ್ವಯಾಪ್ಯತ್ರ ಯಥಾಪೃಷ್ಟಂ ತಥಾ ಮಯಾ ।
ಹನೂಮತ್ಕವಚಂ ಚೇದಂ ತವಾಗ್ರೇ ವಿನಿವೇದಿತಂ ॥ ೪೨ ॥

---

೩೯. ವೇದಗಳಿಂದಲೂ, ಶಾಸ್ತ್ರಗಳಿಂದಲೂ, ಪರಿಷ್ಕಾರ ಹೊಂದಿದ ಶುದ್ಧವಾದ ಬುದ್ಧಿಯುಳ್ಳ, ಕ್ಷೇಮಕರನಾದ, ಸುರರಿಂದಲೂ, ಮುನೀಂದ್ರರಿಂದಲೂ, ಹೊಗಳಲ್ಪಟ್ಟ ಕಪೀಂದ್ರನಾದ ಕಪ್ಪಗಿರುವ ಚರ್ಮವುಳ್ಳ, ಚಿನ್ನದಂತೆ ಬಣ್ಣವಿರುವ ಜಟೆಗಳುಳ್ಳ, ಮುನಿಗಳಲ್ಲಿ ಮುಖ್ಯನಾದ ಹನುಮಂತನನ್ನು ನಮಿಸುತ್ತೇನೆ.

೪೦. ಬೆಳಿಗ್ಗೆ ಎದ್ದು ಯಾವನು ಈ ಕವಚವನ್ನು ಹೇಳುವನೋ ಅವನಿಗೆ ಆಯುಸ್ಸೂ, ಆರೋಗ್ಯವೂ, ಸಂತಾನವೂ ಉಂಟಾಗುವುವು. ಅವನನ್ನು ಎಲ್ಲರೂ ಹೊಗಳುವರು. ಅವನನ್ನು ಎಲ್ಲರೂ ನಮಸ್ಕರಿಸುವರು.

೪೧. ಶ್ರೀ ರಾಮದಾಸನು ಹೇಳಿದನು — ಪಾರ್ವತಿಯು ಶಿವನ ಬಾಯಿಯಿಂದ ಶುಭಕರವಾದ ಈ ಕವಚವನ್ನು ಕೇಳಿ ಹನುಮಂತನಲ್ಲಿ ಭಕ್ತಿಯನ್ನಿಟ್ಟು ಯಾವಾಗಲೂ ಜಪಿಸುತ್ತಾ ಬಂದಳು.

೪೨. ಎಲೈ ಪಾರ್ವತಿಯೇ! ಈ ರೀತಿಯಾಗಿ ಹನುಮತ್ಕವಚವು ಬಹು ಶುಭಕರವೂ, ಫಲಕಾರಿಯೂ ಆಗಿರುವುದು. ನೀನು ಕೇಳಿದುದರಿಂದ ನಾನೂ ಪ್ರೀತಿಯಿಂದ ಇದನ್ನು ವಿಸ್ತಾರವಾಗಿ ಹೇಳಿದೆನು.

ಇದಂ ಪೂರ್ವಂ ಪಠಿತ್ವಾ ತು ರಾಮಸ್ಯ ಕವಚಂ ತತಃ ।
ಪಠನೀಯಂ ನರೈರ್ಭಕ್ತ್ಯಾ ನೈಕಮೇವ ಪಠೇತ್ಕದಾ ॥ ೪೩ ॥

ಹನುಮತ್ಕವಚಂಚಾತ್ರ ಶ್ರೀರಾಮಕವಚಂ ವಿನಾ ।
ಯೇ ಪಠಂತಿ ನರಾಶ್ಚಾತ್ರ ಪಠನಂ ತದ್ವೃಥಾ ಭವೇತ್ ॥ ೪೪ ॥

ತಸ್ಮಾತ್ಸರ್ವೈಃ ಪಠನೀಯಂ ಸರ್ವದಾ ಕವಚದ್ವಯಂ ।
ರಾಮಸ್ಯ ವಾಯುಪುತ್ರಸ್ಯ ಸದ್ಭಕ್ತ್ಯೈಶ್ಚ ವಿಶೇಷತಃ ॥ ೪೫ ॥

ಹನುಮತ್ಕವಚವು

॥ ಶ್ರೀರಾಮ ಕವಚಂ ॥

ಇದಾನೀಂ ರಾಮಕವಚಂ ಶೃಣು ಶಿಷ್ಯ ವದಾಮಿ ತೇ ।
ಪರಂ ಗುಹ್ಯಂ ಪವಿತ್ರಂ ಚ ಸರ್ವ ವಾಂಛಿತ ಪೂರಕಂ । ॥ ೧ ॥

---

೪೩. ಮೊದಲು ಈ ಹನುಮಂತನ ಕವಚವನ್ನು ಹೇಳಬೇಕು. ಅನಂತರ ರಾಮನ ಕವಚವನ್ನು ಭಕ್ತಿಯಿಂದ ಹೇಳಬೇಕು. ಇದೊಂದನ್ನೇ ಯಾವಾಗಲೂ ಹೇಳಬಾರದು.

೪೪. ಹನುಮಂತನ ಕವಚವನ್ನು ಹೇಳದೆ ಶ್ರೀ ರಾಮನ ಕವಚವೊಂದನ್ನೇ ಯಾರು ಹೇಳುವರೋ ಅವರ ಆ ಹೇಳುವಿಕೆಯು ಫಲವಿಲ್ಲದೇ ಹೋಗುವುದು.

೪೫. ಆದ್ದರಿಂದ ಇದನ್ನು ಹೇಳುವ ಪ್ರತಿಯೊಬ್ಬನೂ ಎರಡು ಕವಚಗಳನ್ನೂ ಒಟ್ಟಿಗೆ ಹೇಳಬೇಕು. ಹನುಮಂತನ ಕವಚವನ್ನು ಮೊದಲು ಹೇಳಿ ಅನಂತರ ಶ್ರೀ ರಾಮ ಕವಚವನ್ನು ಭಕ್ತಿಯಿಂದ ಹೇಳಿದರೆ ಎಲ್ಲಾ ಇಷ್ಟಾರ್ಥಗಳನ್ನೂ ಹೊಂದುವನು.

ಇಂತು ಹನುಮಂತನ ಕವಚವು ಮುಗಿದುದು.

ಶ್ರೀರಾಮ ಕವಚವು

೧. ಶ್ರೀ ರಾಮದಾಸನು ಹೇಳಿದನು — ಎಲೈ ಶಿಷ್ಯನೆ! ಈ ಶ್ರೀರಾಮನ ಕವಚನ್ನು ಹೇಳುತ್ತೇನೆ. ಅದನ್ನು ಕೇಳು. ಅದು ಬಹು ಗುಹ್ಯವಾದುದು. ಪವಿತ್ರವಾದದು. ಎಲ್ಲಾ ಇಷ್ಟಗಳನ್ನೂ ಪೂರ್ತಿಗೊಳಿಸುತ್ತದೆ.

ಸುತೀಕ್ಷ್ಣಸ್ತ್ವೇಕದಾಗಸ್ತಿಂ ಪ್ರೋವಾಚ ರಹಸಿ ಸ್ಥಿತಂ ।
ಭಗವನ್ಪರಮಾನಂದ ತತ್ತ್ವಜ್ಞ ಕರುಣಾನಿಧೇ ।
ಗುರೋ ತ್ವಂ ಮಾಂ ವದಸ್ವಾದ್ಯಸ್ತೋತ್ರಂ ರಾಮಸ್ಯ ಪಾವನಂ ॥ ೨ ॥

॥ ಅಗಸ್ತಿರುವಾಚ ॥

ಆಜಾನುಬಾಹುಮರವಿಂದದಳಾಯತಾಕ್ಷ ।
ಮಾಜನ್ಮಶುದ್ಧರಸಹಾಸ ಮುಖಂ ಪ್ರಸನ್ನಂ ॥
ಶ್ಯಾಮಂ ಗೃಹೀತಶರಚಾಪಮುದಾರರೂಪಂ ।
ರಾಮಂ ಸರಾಮಮಭಿರಾಮಮನುಸ್ಮರಾಮಿ ॥ ೩ ॥

ಶೃಣು ವಕ್ಷ್ಯಾಮ್ಯಹಂ ಸರ್ವಂ ಸುತೀಕ್ಷ್ಣ ಮುನಿಸತ್ತಮಂ ।
ಶ್ರೀರಾಮಕವಚಂ ಪುಣ್ಯಂ ಸರ್ವಕಾಮಪ್ರದಾಯಕಂ ॥ ೪ ॥

---

೨. ಒಂದು ಸಾರಿ ಸುತೀಕ್ಷ್ಣನೆಂಬ ಋಷಿಯು ಏಕಾಂತದಲ್ಲಿ ಕುಳಿತಿರುವ ಅಗಸ್ತ್ಯನನ್ನು ಕುರಿತು ಇಂತೆಂದು ಕೇಳಿದನು. ಭಗವಂತನಾದ ಕರುಣಾನಿಧಿಯಾದ, ಆನಂದ ತತ್ವವನ್ನು ಬಲ್ಲ ಎಲೈ ಗುರುವೆ ! ಪಾವನನಾದ ಶ್ರೀರಾಮನ ತತ್ವವನ್ನು ನನಗೆ ಹೇಳು.

೩. ಅಗಸ್ತ್ಯನು ಹೇಳಿದನು — ಮಂಡಿಗಳವರೆಗೂ ಕಾಣ ಬರುವ ಕೈಗಳುಳ್ಳ, ಅರವಿಂದದ ದಳಗಳಂತೆ ಅಗಲವಾದ ಕಣ್ಣುಗಳುಳ್ಳ, ಜನ್ಮದಿಂದ ಮೊದಲ್ಗೊಂಡು ಶುದ್ಧನಾಗಿರುವ, ನಗು ಮುಖವುಳ್ಳ ಪ್ರಸನ್ನನಾಗಿರುವ, ಶ್ಯಾಮಲವರ್ಣವುಳ್ಳ, ಬಿಲ್ಲು-ಬಾಣಗಳನ್ನು ಧರಿಸಿರುವ, ಚೆನ್ನಾಗಿರುವ ರೂಪವುಳ್ಳ, ಹೆಂಡತಿಯೊಡನೆ ಕೂಡಿರುವ, ಸುಂದರನಾದ ಶ್ರೀ ರಾಮನನ್ನು ಸ್ಮರಿಸುತ್ತೇನೆ.

೪. ಮುನಿಶ್ರೇಷ್ಠನಾದ ಸುತೀಕ್ಷ್ಣನೆ ! ಅದೆಲ್ಲವನ್ನೂ ಹೇಳುತ್ತೇನೆ. ಕೇಳು. ಶ್ರೀ ರಾಮ ಕವಚವು ಪುಣ್ಯಕರವಾದುದು, ಎಲ್ಲಾ ಇಷ್ಟಾರ್ಥಗಳನ್ನೂ ಕೊಡುತ್ತದೆ.

ಅದ್ವೈತಾನಂದಚೈತನ್ಯಶುದ್ಧಸತ್ವೈಕಲಕ್ಷಣಃ ।
ಬಹಿರಂತಸ್ಸುತೀಕ್ಷ್ಣಾತ್ರ ರಾಮಚಂದ್ರಃ ಪ್ರಕಾಶತೇ ॥ ೫ ॥

ತತ್ತ್ವವಿದ್ಯಾರ್ಥಿನೋ ನಿತ್ಯಂ ರಮಂತೇ ಚಿತ್ಸುಖಾತ್ಮನಿ ।
ಇತಿರಾಮಪದೇನಾಸೌ ಪರಬ್ರಹ್ಮಾಭಿಧೀಯತೇ ॥ ೬ ॥

ಜಯರಾಮೇತಿ ಯನ್ನಾಮ ಕೀರ್ತಯನ್ನಾಭಿವರ್ಣಯೇತ್ ।
ಸರ್ವಪಾಪೈರ್ವಿನಿರ್ಮುಕ್ತೋ ಯಾತಿ ವಿಷ್ಣೋಃ ಪರಂ ಪದಂ ॥ ೭ ॥

ಶ್ರೀರಾಮೇತಿ ಪರಂ ಮಂತ್ರಂ ತದೇವ ಪರಮಂ ಪದಂ ।
ತದೇವ ತಾರಕಂ ವಿದ್ಧಿ ಜನ್ಮಮೃತ್ಯುಭಯಾಪಹಂ ।
ಶ್ರೀರಾಮೇತಿ ವದನ್ ಬ್ರಹ್ಮಭಾವಮಾಪ್ನೋತ್ಯಸಂಶಯಃ ॥ ೮ ॥

---

೫. ಎಲೈ ಸುತೀಕ್ಷ್ಣನೇ ! ರಾಮಚಂದ್ರನು ಪೂರ್ಣವಾಗಿರುವ ಆನಂದ ರೂಪನೂ ಆ ಆನಂದಕ್ಕೆ ಚೈತನ್ಯರೂಪನೂ ಶುದ್ಧ ಸತ್ವಗುಣವುಳ್ಳವನೂ ಆಗಿರುವ ಲಕ್ಷಣವುಳ್ಳವನು. ಇವನು ಒಳಗೂ ಹೊರಗೂ ಎಲ್ಲ ಕಡೆಯಲ್ಲಿಯೂ ಇರುವವನು. ಇಂತಹ ರಾಮಚಂದ್ರನು ಪ್ರಕಾಶಿಸುವನು.

೬. ತತ್ವ ವಿದ್ಯೆಯನ್ನು ಅಪೇಕ್ಷಿಸುವವರಿಗೆ ನಿತ್ಯ ರೂಪನೂ, ಪರಮ ಸುಖ ರೂಪನೂ ಆಗಿರುವನು. ರಾಮ ಎಂಬ ಪದಕ್ಕೆ ಈ ರೀತಿಯಾದ ಅರ್ಥ ಗಳಿದ್ದು ಆ ಪದವು ಆ ರೀತಿಯಾಗಿರುವ ಪರಬ್ರಹ್ಮನನ್ನು ಹೇಳುತ್ತದೆ.

೭. ಮನುಷ್ಯನಾದವನು ಜಯರಾಮ ಎಂದು ಹೇಳುತ್ತ ರಾಮನನ್ನು ವರ್ಣಿಸಬೇಕು. ಅವನು ತನ್ನ ಪಾಪಗಳೆಲ್ಲವನ್ನೂ ಕಳೆದುಕೊಂಡು ವೈಕುಂಠ ವನ್ನು ಹೊಂದುತ್ತಾನೆ.

೮. ಶ್ರೀ ರಾಮ ಎಂಬುವುದೇ ಉತ್ತಮವಾದ ಮಂತ್ರವು. ಅದೇನೇ ಪರಮ ಪದವು. ಅದೇ ತಾರಕ ಮಂತ್ರವೆಂದು ತಿಳಿ. ಅದು ಜನನ–ಮರಣ ಗಳ ಭಯವನ್ನು ತಪ್ಪಿಸುತ್ತದೆ. ನರನು ಶ್ರೀ ರಾಮ ಎಂದು ಹೇಳಿದರೇನೇ ಬ್ರಾಹ್ಮಣನಾಗುತ್ತಾನೆ. ಇದರಲ್ಲಿ ಸಂಶಯವಿಲ್ಲ.

ಓಂ ಅಸ್ಯ ಶ್ರೀ ರಾಮಕವಚಸ್ಯ - ಅಗಸ್ತ್ಯ ಋಷಿಃ ॥
ಅನುಷ್ಟುಪ್ ಛಂದಃ – ಸೀತಾಲಕ್ಷ್ಮಣೋಪೇತಶ್ರೀರಾಮಚಂದ್ರೋ।
ದೇವತಾ - ಶ್ರೀರಾಮಚಂದ್ರಪ್ರಸಾದಸಿದ್ಧ್ಯರ್ಥಂ ಜಪೇ ವಿನಿಯೋಗಃ ॥
ಅಥಧ್ಯಾನಂ ಪ್ರವಕ್ಷ್ಯಾಮಿ ಸರ್ವಾಭೀಷ್ಟಫಲಪ್ರದಂ ।
ನೀಲಜೀಮೂತ ಸಂಕಾಶಂ ವಿದ್ಯುತ್ಪೀತಾಂಬರಾವೃತಂ ॥ ೯ ॥

ಕೋಮಲಾಂಗಂ ವಿಶಾಲಾಕ್ಷಂ ಯುವಾನಮತಿಸುಂದರಂ ।
ಸೀತಾಸೌಮಿತ್ರಿಸಹಿತಂ ಜಟಾಮುಕುಟಧಾರಿಣಂ ॥ ೧೦ ॥

ಸಾಸಿತೂಣಧನುರ್ಬಾಣಪಾಣಿಂ ದಾನವಮರ್ದನಂ ।
ಯದಾ ಚೋರಭಯೇ ರಾಜಭಯೇ ಶತ್ರುಭಯೇ ತಥಾ ॥ ೧೧ ॥

ಧ್ಯಾತ್ವಾ ರಘುಪತಿಂ ಕ್ರುದ್ಧಂ ಕಾಲಾನಲಸಮಪ್ರಭಂ ।
ಚೀರಕೃಷ್ಣಾಜಿನಧರಂ ಭಸ್ಮೋದ್ಧೂಳಿತವಿಗ್ರಹಂ ॥ ೧೨ ॥

---

೯. ಓಂ — ಈ ಶ್ರೀ ರಾಮ ಕವಚಕ್ಕೆ—ಅಗಸ್ತ್ಯನು ಋಷಿಯು, ಅನುಷ್ಟುಪ್ ಛಂದಸ್ಸು, ಸೀತಾ ಲಕ್ಷ್ಮಣರೊಡನೆ ಕೂಡಿದ ಶ್ರೀ ರಾಮಚಂದ್ರನೇ ದೇವತೆಯು. ಶ್ರೀ ರಾಮಚಂದ್ರನ ಪ್ರಸಾದವು ಸಿದ್ಧಿಸುವುದಕ್ಕೋಸ್ಕರ ಜಪ ಮಾಡುವುದರಲ್ಲಿ ವಿನಿಯೋಗವು. ಇನ್ನು ಧ್ಯಾನವನ್ನು ಹೇಳುತ್ತೇನೆ. ಅದು ಸಕಲವಾದ ಇಷ್ಟಗಳನ್ನು ಕೊಡುತ್ತದೆ.

೧೦-೧೧. ನೀಲ ಬಣ್ಣದ ಮೇಘಕ್ಕೆ ಸಮವಾದ, ಮಿಂಚಿನಂತೆ ಬಣ್ಣವುಳ್ಳ ಪೀತಾಂಬರವನ್ನು ಧರಿಸಿರುವ, ಕೋಮಲಾಂಗನಾದ, ವಿಶಾಲವಾದ ಕಣ್ಣುಗಳುಳ್ಳ, ಯುವಕನಾದ, ಬಹು ಸೌಂದರ್ಯವುಳ್ಳ, ಸೀತಾ ಲಕ್ಷ್ಮಣರಿಂದ ಕೂಡಿದ, ಜಟೆ ಕಿರೀಟಗಳನ್ನು ಧರಿಸಿರುವ, ಕತ್ತಿ, ಬತ್ತಳಿಕೆ, ಬಾಣ, ಧನುಸ್ಸುಗಳನ್ನು ಧರಿಸಿರುವ, ದಾನವರನ್ನು ನಾಶಪಡಿಸುವ ಇಂತಹ ರಾಮನನ್ನು ಚೋರ ಭಯ, ರಾಜ ಭಯ, ಶತ್ರು ಭಯಗಳು ಬಂದಾಗ ಧ್ಯಾನಿಸಬೇಕು.

೧೨-೧೩. ಕೋಪಗೊಂಡಿರುವ ಕಾಲಾಗ್ನಿ ಸಮವಾದ ತೇಜಸ್ಸುಳ್ಳ, ನಾರುಮಡಿ ಕೃಷ್ಣಾಜಿನಗಳನ್ನು ಧರಿಸಿರುವ, ಭಸ್ಮವನ್ನು ಮೈಗೆ ಬಳಿದು

ಆಕರ್ಣಾಕೃಷ್ಟಸಶರಕೋದಂಡಭುಜಮಂಡಿತಂ ।
ರಣೇ ರಿಪೂನ್ ರಾವಣಾದೀನ್ ತೀಕ್ಷ್ಣಮಾರ್ಗಣವೃಷ್ಟಿಭಿಃ ॥ ೧೩ ॥

ಸಂಹರಂತಂ ಮಹಾವೀರಮುಗ್ರಮೈಂದ್ರರಥಸ್ಥಿತಂ ।
ಲಕ್ಷ್ಮಣಾದ್ಯೈರ್ಮಹಾವೀರೈರ್ವೃತಂ ಹನುಮದಾದಿಭಿಃ ॥ ೧೪ ॥

ಸುಗ್ರೀವಾದ್ಯೈರ್ಮಹಾವೀರೈಃ ಶೈಲವೃಕ್ಷಕರೋದ್ಯತೈಃ ।
ವೇಗಾತ್ಕರಾಲಹುಂಕಾರೈರ್ಭುಭುಕ್ಕಾರಮಹಾರವೈಃ ॥ ೧೫ ॥

ನದದ್ಭಿಃ ಪರಿವಾದದ್ಭಿಸ್ಸಮರೇ ರಾವಣಂ ಪ್ರತಿ ।
ಶ್ರೀರಾಮಶತ್ರುಸಂಘಾನ್ಮೇ ಹನ ಮರ್ದಯ ಖಾದಯ ॥ ೧೬ ॥

ಭೂತಪ್ರೇತಪಿಶಾಚಾದೀನ್ ಶ್ರೀರಾಮಾಶು ವಿನಾಶಯ ।
ಏವಂ ಧ್ಯಾತ್ವಾ ಜಪೇದ್ರಾಮಕವಚಂ ಸಿದ್ಧಿದಾಯಕಂ ॥ ೧೭ ॥

ಕೊಂಡಿರುವ, ಧನುಸ್ಸಿಗೆ ಬಾಣವನ್ನು ಹೂಡಿ ಅದನ್ನು ಕಿವಿಯವರೆಗೂ ಎಳೆದಿರುವ ಕೈಯುಳ್ಳ, ಯುದ್ಧದಲ್ಲಿ ರಾವಣನೇ ಮುಂತಾದವರನ್ನು ಬಾಣದ ಮಳೆಯಿಂದ ಹೊಡೆದು ಕೊಲ್ಲುತ್ತಿರುವ, ಮಹಾ ವೀರನಾದ, ಉಗ್ರ ರೂಪವುಳ್ಳ, ಇಂದ್ರನ ರಥದಲ್ಲಿ ಕುಳಿತಿರುವ, ಲಕ್ಷ್ಮಣನೇ ಮುಂತಾದ ಮಹಾ ವೀರರಿಂದ ಕೂಡಿರುವ, ಬೆಟ್ಟವನ್ನು ಕೈಯ್ಯಲ್ಲಿ ಹಿಡಿದಿರುವ, ಹನುಮಂತನೇ ಮುಂತಾದವರಿಂದಲೂ, ಸುಗ್ರೀವನೇ ಮುಂತಾದ ಮಹಾ ವೀರರಿಂದಲೂ ಕೂಡಿರುವ, ಭು ಭು ಎಂಬುವ ಮಹಾ ಧ್ವನಿಯಿಂದ ಕೂಡಿರುವ, ಕುಣಿಯುತ್ತಲಿರುವ, ಯುದ್ಧದಲ್ಲಿ ರಾವಣನನ್ನು ಕುರಿತು ಬಯ್ಯುತ್ತಿರುವ, ಕಪಿಸಂಘಗಳಿಂದ ಕೂಡಿದ ಶ್ರೀ ರಾಮನನ್ನು ಧ್ಯಾನಿಸಬೇಕು.

೧೬–೧೭. ಶ್ರೀ ರಾಮನೇ ! ನನ್ನ ಶತ್ರು ಸಂಘವನ್ನು ಕೊಂದು ಹಾಕು–ಕೊಂದು ಹಾಕು ಮರ್ದಿಸು – ಮರ್ದಿಸು. ಎಲೈ ಶ್ರೀ ರಾಮನೇ ! ಭೂತಗಳನ್ನೂ, ಪಿಶಾಚಗಳನ್ನೂ, ಪ್ರೇತವೇ ಮುಂತಾದುವುಗಳನ್ನೂ ಬೇಗನೆ ನಾಶ ಮಾಡು - ನಾಶ ಮಾಡು ಎಂಬುದಾಗಿ ಧ್ಯಾನಿಸುತ್ತ ರಾಮ ಕವಚವನ್ನು ಧ್ಯಾನಿಸಬೇಕು. ಸಿದ್ಧಿಯುಂಟಾಗುತ್ತದೆ.

ಸುತೀಕ್ಷ್ಣ ವಜ್ರಕವಚಂ ಶೃಣು ವಕ್ಷ್ಯಾಮ್ಯನುತ್ತಮಂ ।
ಶ್ರೀರಾಮಃ ಪಾತು ಮೇ ಮೂರ್ಧ್ನಿ ಪೂರ್ವೇ ಚ ರಘುವಂಶಜಃ ॥ ೧೮ ॥

ದಕ್ಷಿಣೇ ಮೇ ರಘುವರಃ ಪಶ್ಚಿಮೇ ಪಾತು ಪಾವನಃ ।
ಉತ್ತರೇ ಮೇ ರಘುಪತಿಃ ಫಾಲಂ ದಶರಥಾತ್ಮಜಃ ॥ ೧೯ ॥

ಭ್ರುವೋರ್ದೂರ್ವಾದಳಶ್ಯಾಮ ಸ್ತಯೋರ್ಮಧ್ಯೇ ಜನಾರ್ದನಃ ।
ಶ್ರೋತ್ರಂಮೇ ಪಾತು ರಾಜೇಂದ್ರೋ ದೃಶೋ ರಾಜೀವಲೋಚನಃ ॥

ಘ್ರಾಣಂ ಮೇ ಪಾತು ರಾಜರ್ಷಿರ್ಗಂಡಂ ಮೇ ಜಾನಕೀಪತಿಃ ।
ಕರ್ಣಮೂಲೇ ಖರಧ್ವಂಸೀ ಫಾಲಂ ಮೇ ರಘುವಲ್ಲಭಃ ॥ ೨೧ ॥

ಜಿಹ್ವಾಂ ಮೇ ವಾಕ್ಪತಿಃ ಪಾತು ದಂತಾವಳ್ಯಾ ರಘೂತ್ತಮಃ ।
ಓಷ್ಠೌ ಶ್ರೀರಾಮಚಂದ್ರೋ ಮೇ ಮುಖಂ ಪಾತು ಪರಾತ್ಪರಃ ॥ ೨೨ ॥

೧೮-೧೯. ಎಲೈ ಸುತೀಕ್ಷ್ಣನೇ ! ಶ್ರೀ ರಾಮನ ವಜ್ರ ಕವಚವನ್ನು ಹೇಳುತ್ತೇನೆ ಕೇಳು. ಅದು ಉತ್ತಮವಾದುದು. ಶ್ರೀ ರಾಮನು ನನ್ನ ತಲೆಯನ್ನು ರಕ್ಷಿಸಲಿ. ರಘುವಂಶಜನು ಪೂರ್ವ ದಿಕ್ಕಿನಲ್ಲಿಯೂ, ರಘುವರನು ದಕ್ಷಿಣದಲ್ಲಿಯೂ, ಪಾವನನು ಪಶ್ಚಿಮದಲ್ಲಿಯೂ, ರಘುಪತಿಯು ಉತ್ತರದಲ್ಲಿಯೂ ರಕ್ಷಿಸಲಿ. ಹಣೆಯನ್ನು ದಶರಥಾತ್ಮಜನು ರಕ್ಷಿಸಲಿ.

೨೦-೨೨. ದೂರ್ವಾದಳಶ್ಯಾಮನು ಹುಬ್ಬುಗಳನ್ನೂ, ಜನಾರ್ದನನು ಆ ಹುಬ್ಬುಗಳ ಮಧ್ಯ ಭಾಗವನ್ನೂ, ರಾಜೇಂದ್ರನು ಕಿವಿಗಳನ್ನೂ, ರಾಜೀವ ಲೋಚನನು ಕಣ್ಣುಗಳನ್ನೂ, ರಾಜರ್ಷಿಯು ನನ್ನ ಮೂಗನ್ನೂ, ಜಾನಕೀ ಪತಿಯು ನನ್ನ ಗಲ್ಲವನ್ನೂ, ಖರಧ್ವಂಸಿಯು ಕಿವಿಗಳ ಬುಡವನ್ನೂ, ರಘುವಲ್ಲಭನು ಹಣೆಯನ್ನೂ, ವಾಕ್ಪತಿಯು ನನ್ನ ನಾಲಗೆಯನ್ನೂ, ರಘೂತ್ತಮನು ಹಲ್ಲುಗಳ ಸಾಲನ್ನೂ, ಶ್ರೀರಾಮ ಚಂದ್ರನು ತುಟಿಗಳನ್ನೂ, ಪರಾತ್ಪರನು ನನ್ನ ಮುಖವನ್ನೂ ರಕ್ಷಿಸಲಿ.

ಕಂಠಂ ಪಾತು ಜಗದ್ವಂದ್ಯಃ ಸ್ಕಂಧೌ ಮೇ ರಾವಣಾಂತಕಃ ।
ಧನುರ್ಬಾಣಧರಃ ಪಾತು ಭುಜೌ ಮೇ ವಾಲಿಮರ್ದನಃ ॥ ೨೩ ॥

ಸರ್ವಾಂಗುಳಿಸುಪರ್ವಾಣಿ ಹಸ್ತೌ ಮೇ ರಾಕ್ಷಸಾಂತಕಃ ।
ವಕ್ಷೋ ಮೇ ಪಾತು ಕಾಕುತ್ಸ್ಥಃ ಪಾತು ಮೇ ಹೃದಯಂ ಹರಿಃ ॥ ೨೪ ॥

ಸ್ತನೌ ಸೀತಾಪತಿಃ ಪಾತು ಪಾರ್ಶ್ವಂ ಮೇ ಜಗದೀಶ್ವರಃ ।
ಮಧ್ಯಂ ಮೇ ಪಾತು ಲಕ್ಷ್ಮೀಶೋ ನಾಭಿಂ ಮೇ ರಘುನಾಯಕಃ ॥ ೨೫ ॥

ಕೌಸಲ್ಯೇಯಃ ಕಟಿಂ ಪಾತು ಪೃಷ್ಠಂ ದುರ್ಗತಿನಾಶನಃ ।
ಗುಹ್ಯಂ ಪಾತು ಹೃಷೀಕೇಶಸ್ಸಕ್ಥಿನೀ ಸತ್ಯವಿಕ್ರಮಃ ॥ ೨೬ ॥

ಊರೂ ಶಾಂರ್ಗಧರಃ ಪಾತು ಜಾನುನೀ ಹನುಮತ್ಪ್ರಿಯಃ ।
ಜಂಘೇ ಪಾತು ಜಗದ್ವ್ಯಾಪೀ ಪಾದೌ ಮೇ ತಾಟಕಾಂತಕಃ ॥ ೨೭ ॥

೨೩–೨೪. ಜಗದ್ವಂದ್ಯನು ಕಂಠವನ್ನೂ, ರಾವಣಾಂತಕನು ಹೆಗಲುಗಳನ್ನೂ, ಧನುರ್ಬಾಣಗಳನ್ನು ಧರಿಸಿರುವವನು ನನ್ನ ಭುಜಗಳನ್ನೂ, ವಾಲಿಮರ್ದನನು ಬೆರಳಿನ ಎಲ್ಲಾ ಗಿಣ್ಣುಗಳನ್ನೂ, ರಾಕ್ಷಸಾಂತಕನು ನನ್ನ ಕೈಗಳನ್ನೂ, ಕಾಕುತ್ಸ್ಥನು ಎದೆಯನ್ನೂ, ಹರಿಯು ಹೃದಯವನ್ನೂ ರಕ್ಷಿಸಲಿ.

೨೫–೨೬ ಸೀತಾಪತಿಯು ನನ್ನ ಸ್ತನಗಳನ್ನೂ, ಜಗದೀಶ್ವರನು ನನ್ನ ಪಕ್ಕಗಳನ್ನೂ. ಲಕ್ಷ್ಮೀಶನು ಮಧ್ಯ ಭಾಗವನ್ನೂ, ರಘುನಾಯಕನು ನನ್ನ ಹೊಕ್ಕುಳನ್ನೂ, ಕೌಸಲ್ಯೇಯನು ನಡುವನ್ನೂ, ದುರ್ಗತಿ ನಾಶನನು ಪೃಷ್ಠ ಪ್ರದೇಶವನ್ನೂ, ಹೃಷೀಕೇಶನು ಗುಹ್ಯವನ್ನೂ, ಸತ್ಯ ವಿಕ್ರಮನು ಮೇಲ್ತೊಡೆಗಳನ್ನೂ (ಕುಂಡೆಗಳನ್ನೂ), ರಕ್ಷಿಸಲಿ.

೨೭. ಶಾಂರ್ಗವೆಂಬ ಧನುಸ್ಸನ್ನು ಧರಿಸಿರುವವನು ತೊಡೆಗಳನ್ನೂ, ಹನುಮಂತನಿಗೆ ಪ್ರಿಯನು ಮೊಣಕಾಲುಗಳನ್ನೂ, ಜಗದ್ವ್ಯಾಪಿಯು ಮೊಣಕಾಲುಗಳನ್ನೂ, ತಾಟಕಾಂತಕನು ನನ್ನ ಕಾಲುಗಳನ್ನೂ ರಕ್ಷಿಸಲಿ.

ಸರ್ವಾಂಗಂ ಪಾತು ಮೇ ವಿಷ್ಣುಸ್ಸರ್ವಸಂಧೀನನಾಮಯಃ ।
ಜ್ಞಾನೇಂದ್ರಿಯಾನಿ ಪ್ರಾಣಾದೀನ್ ಪಾತು ಮೇ ಮಧುಸೂದನಃ ॥ ೨೮ ॥

ಪಾತು ಶ್ರೀರಾಮಭದ್ರೋ ಮೇ ಶಬ್ದಾದೀನ್ವಿಷಯಾನಪಿ ।
ದ್ವಿಪದಾದೀನಿ ಭೂತಾನಿ ಮತ್ಸಂಬಂಧೀನಿ ಯಾನಿ ಚ ॥ ೨೯ ॥

ರೋಮಾಂಕುರಾಣ್ಯಶೇಷಾಣಿ ಪಾತು ಸುಗ್ರೀವರಾಜ್ಯದಃ ।
ವಾಂಗ್ಮನೋ ಬುದ್ಧ್ಯಹಂಕಾರೈಃ ಜ್ಞಾನಾಜ್ಞಾನಕೃತಾನಿ ಚ ॥ ೩೦ ॥

ಜನ್ಮಾಂತರಕೃತಾನೀಹ ಪಾಪಾನಿ ವಿವಿಧಾನಿ ಚ ।
ತಾನಿ ಸರ್ವಾಣಿ ದಗ್ಧ್ವಾಶು ಹರಕೋದಂಡ ಖಂಡನಃ ॥ ೩೧ ॥

ಪಾತು ಮಾಂ ಸರ್ವತೋ ರಾಮಃ ಶಾಂರ್ಗಬಾಣಧರಸ್ಸದಾ ।
ಇತಿ ಶ್ರೀರಾಮಚಂದ್ರಸ್ಯ ಕವಚಂ ವಜ್ರಸನ್ನಿಭಂ ॥ ೩೨ ॥

---

೨೮. ವಿಷ್ಣುವು ನನ್ನ ಸರ್ವಾಂಗವನ್ನೂ, ಅನಾಮಯನು ಎಲ್ಲಾ ಗಿಣ್ಣು ಪ್ರದೇಶಗಳನ್ನೂ, ಮಧುಸೂದನನು ಜ್ಞಾನೇಂದ್ರಿಯಗಳನ್ನೂ, ಪ್ರಾಣಗಳನ್ನೂ ರಕ್ಷಿಸಲಿ.

೨೯. ಶ್ರೀರಾಮಭದ್ರನು ನನ್ನ ಶಬ್ದಾದಿ ವಿಷಯಗಳನ್ನೂ, ಸುಗ್ರೀವನಿಗೆ ರಾಜ್ಯವನ್ನು ಕೊಟ್ಟವನು ನನ್ನ ಸಂಬಂಧವಾದ ಎರಡು ಕಾಲಿನ ಪ್ರಾಣಿಗಳೆಲ್ಲವನ್ನೂ ಮತ್ತು ಎಲ್ಲಾ ರೋಮಾಂಕುರಗಳನ್ನೂ ರಕ್ಷಿಸಲಿ.

೩೦-೩೧. ಶಿವಧನಸ್ಸನ್ನು ಮುರಿದವನು, ವಾಕ್ಕು, ಮನಸ್ಸು, ಬುದ್ಧಿ, ಅಹಂಕಾರಗಳಿಂದಲೂ, ಜ್ಞಾನಗಳಿಂದಲೂ, ಅಜ್ಞಾನಗಳಿಂದಲೂ, ಜನ್ಮ ಜನ್ಮಾಂತರಗಳಲ್ಲಿಯೂ ಮಾಡಿದ ವಿಧ ವಿಧವಾದ ಪಾಪಗಳನ್ನು ಎಲ್ಲವನ್ನೂ ಬೇಗನೆ ಸುಟ್ಟು ರಕ್ಷಿಸಲಿ.

೩೨. ರಾಮನು ಧನುರ್ಬಾಣಗಳನ್ನು ಧರಿಸಿ ನನ್ನನ್ನು ಯಾವಾಗಲೂ ರಕ್ಷಿಸಲಿ. ಇಂತೆಂಬುದಾಗಿ ಶ್ರೀರಾಮಚಂದ್ರನ ಕವಚವು ಉತ್ತಮವಾಗಿರುವುದು. ಇದು ವಜ್ರಕವಚಕ್ಕೆ ಸಮವಾದುದು.

ಗುಹ್ಯಾದ್ಗುಹ್ಯತಮಂ ದಿವ್ಯಂ ಸುತೀಕ್ಷ್ಣ ಮುನಿಸತ್ತಮ ।
ಯಃ ಪಠೇಚ್ಛೃಣುಯಾದ್ವಾಪಿ ಶ್ರಾವಯೇದ್ವಾ ಸಮಾಹಿತಃ ॥ ೩೩ ॥

ಸ ಯಾತಿ ಪರಮಂ ಸ್ಥಾನಂ ರಾಮಚಂದ್ರಪ್ರಸಾದತಃ ।
ಮಹಾಪಾತಕಯುಕ್ತೋ ವಾ ಗೋಘ್ನೋ ವಾ ಭ್ರೂಣಹಾ ತಥಾ ॥

ಶ್ರೀರಾಮಚಂದ್ರಕವಚಪಠನಾಚ್ಛುದ್ಧಿಮಾಪ್ನುಯಾತ್ ।
ಬ್ರಹ್ಮಹತ್ಯಾದಿಭಿಃ ಪಾಪೈರ್ಮುಚ್ಯತೇ ನಾತ್ರ ಸಂಶಯಃ ॥ ೩೫ ॥

ಭೋಃ ಸುತೀಕ್ಷ್ಣ ಯಥಾ ಪೃಷ್ಟಂ ತ್ವಯಾ ಮಮ ಪುರಾ ಶುಭಂ ।
ತಥಾ ಶ್ರೀರಾಮಕವಚಂ ಮಯಾ ತೇ ವಿನಿವೇದಿತಂ ॥ ೩೬ ॥

॥ ರಾಮದಾಸ ಉವಾಚ ॥

ಏವಂ ಶಿಷ್ಯ ತ್ವಯಾ ಪೃಷ್ಟಂ ಶ್ರೀರಾಮಕವಚಂ ವರಂ ।
ಹನೂಮತ್ಕವಚಂ ಚಾಪಿ ತಥಾ ತೇ ವಿನಿವೇದಿತಂ ॥ ೩೭ ॥

---

೩೩. ಎಲೈ ಮುನಿಶ್ರೇಷ್ಠನಾದ ಸುತೀಕ್ಷ್ಣನೇ ! ಇದು ಬಹು ಗುಹ್ಯವಾದುದು, ದಿವ್ಯವಾದುದು. ಇದನ್ನು ಯಾವನು ಒಂದೇ ಮನಸ್ಸಿನಿಂದ ಓದುವನೋ, ಹೇಳುವನೋ, ಹೇಳಿಸುವನೋ, ಅವನು ರಾಮಚಂದ್ರನ ಅನುಗ್ರಹದಿಂದ ಪರಮಪದವನ್ನು ಹೊಂದುವನು.

೩೪-೩೫. ಮಹಾ ಪಾತಕದಿಂದ ಕೂಡಿರಲಿ, ಗೋಹತ್ಯ ಮಾಡಿರಲಿ, ಭ್ರೂಣಹತ್ಯೆ ಮಾಡಿರಲಿ, ಅವನು ಎಷ್ಟೇ ಪಾಪಿಯಾಗಿದ್ದರೂ ಶ್ರೀರಾಮಚಂದ್ರನ ಕವಚವನ್ನು ಹೇಳುವುದರಿಂದ ಶುದ್ಧನಾಗುತ್ತಾನೆ. ಅವನು ಬ್ರಹ್ಮಹತ್ಯೆಯನ್ನು ಮಾಡಿದ್ದರೂ, ಆ ಪಾಪದಿಂದಲೂ ಮುಕ್ತನಾಗುತ್ತಾನೆ. ಇದರಲ್ಲಿ ಸಂಶಯವಿಲ್ಲ.

೩೬. ಎಲೈ ಸುತೀಕ್ಷ್ಣನೇ ! ನೀನು ಕೇಳಿದ ಈ ರಾಮ ಕವಚವನ್ನು ನಾನು ಹಿಂದೆ ಕೇಳಿದ್ದಂತೆ ವಿಸ್ತಾರವಾಗಿ ಸಲ್ಪವನ್ನೂ ಬಿಡದಂತೆ ಹೇಳಿದ್ದೇನೆ.

೩೭. ಶ್ರೀರಾಮದಾಸರು ಹೇಳಿದನು—ಎಲೈ ಶಿಷ್ಯನೇ ! ನೀನು ಶ್ರೇಷ್ಠವಾದ ಶ್ರೀರಾಮಕವಚವನ್ನೂ, ಹನುಮಂತ ಕವಚವನ್ನೂ ಕೂಡ ಕೇಳಿದೆ. ಅದೆಲ್ಲವನ್ನೂ ನಿನಗೆ ಸರಿಯಾಗಿ ಹೇಳಿದ್ದೇನೆ.

ವಾಯುಪುತ್ರಸ್ಯ ರಾಮಸ್ಯ ಕವಚೇತ್ರ ನರೈರ್ಭುವಿ ।
ವಿನಾ ಸೀತಾಕವಚೇನ ಪಠನೀಯಂ ನ ವೈ ಕದಾ ॥ ೩೮ ॥

ಆದೌ ಪಠಿತ್ವಾ ಕವಚಂ ವಾಯುಪುತ್ರಸ್ಯ ಧೀಮತಃ ।
ಪಠನೀಯಂ ತತಸ್ಸೀತಾಕವಚಂ ಸೌಖ್ಯವರ್ಧನಂ ॥ ೩೯ ॥

ತತಶ್ಶ್ರೀರಾಮಕವಚಂ ಪಠನೀಯಂ ಮಹತ್ತ್ವಮೈಃ ।
ಏವಮೇವ ಹಿ ಮಂತ್ರಾಶ್ಚ ಜಪನೀಯಾಸ್ತ್ರಯಃ ಕ್ರಮಾತ್ ॥ ೪೦ ॥

॥ ವಿಷ್ಣುದಾಸ ಉವಾಚ ॥

ಗುರೋಹಂ ಶ್ರೋತುಮಿಚ್ಛಾಮಿ ಸೀತಾಯಾಃ ಕವಚಂ ಶುಭಂ ।
ತಥಾನ್ಯಾನ್ಯಪಿ ವೈದೇಹ್ಯಾಃ ಸ್ತೋತ್ರಾದೀನಿ ವದಸ್ವ ಯತ್ ॥ ೪೧ ॥

---

೩೮. ಎಲೈ ಶಿಷ್ಯನೇ! ಈ ಹನುಮತ್ಕವಚವನ್ನೂ, ಶ್ರೀರಾಮ ಕವಚವನ್ನೂ ಕೂಡ ಸೀತಾ ಕವಚದೊಡನೆ ಹೇಳಬೇಕು. ಆ ಸೀತಾ ಕವಚವನ್ನು ಹೇಳದೆ ಇವೆರಡನ್ನೇ ಹೇಳಬಾರದು.

೩೯. ಮೊದಲು ಹನುಮತ್ಕವಚನ್ನು ಹೇಳಬೇಕು. ಅನಂತರ ಸೀತಾ ಕವಚವನ್ನು ಹೇಳಬೇಕು. ಅದು ಸೌಖ್ಯವನ್ನು ಹೆಚ್ಚಿಸುತ್ತದೆ.

೪೦. ಅನಂತರ ಶ್ರೀರಾಮ ಕವಚವನ್ನು ಹೇಳಬೇಕು. ಈ ರೀತಿಯಾಗಿ ಮೂರು ಕವಚಗಳಂತೆ ಮೂರು ಮಂತ್ರಗಳನ್ನೂ ಕ್ರಮದಿಂದ ಜಪಿಸಬೇಕು.

೪೧-೪೨. ವಿಷ್ಣುದಾಸನು ಹೇಳಿದನು—ಎಲೈ ಗುರುವೆ! ಶುಭಕರವಾದ ಸೀತೆಯ ಕವಚವನ್ನು ಕೇಳಬೇಕೆಂಬ ಇಷ್ಟವಿದೆ. ಹೇಳು. ಅಲ್ಲದೆ ಸೀತೆಯ ಸ್ತೋತ್ರಗಳು ಮತ್ತೇನೇನಿವೆಯೋ ಅವೆಲ್ಲವನ್ನೂ ಹೇಳು. ಸೀತೆಗೆ ಸಂತೋಷ

ಸೀತಾಯಾಸ್ತೋಷದಂ ಭೂಮ್ಯಾಂ ತತ್ಸರ್ವಂ ವಿಸ್ತರೇಣ ಚ ।

॥ ಮಹಾದೇವ ಉವಾಚ ॥

ಇತಿ ತದ್ವಚನಂ ಶ್ರುತ್ವಾ ರಾಮದಾಸೋಽಬ್ರವೀದ್ವಚಃ ॥ ೪೨ ॥

ಇತಿಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಮನೋಹರಕಾಂಡೇ ಕವಚದ್ವಯ ವರ್ಣನಂ ನಾಮ ತ್ರಯೋದಶಸ್ಸರ್ಗಃ ಸಮಾಪ್ತಃ

ವನ್ನುಂಟುಮಾಡುವ ಯಾವು ಯಾವುವು ಇವೆಯೋ ಅವೆಲ್ಲವನ್ನೂ ವಿಸ್ತಾರವಾಗಿ ಹೇಳು.

ಮಹಾದೇವನು ಹೇಳಿದನು--ವಿಷ್ಣುದಾಸನ ಈ ಮಾತನ್ನು ಕೇಳಿ ರಾಮದಾಸನು ಸಂತೋಷಗೊಂಡು ಇಂತೆಂದು ಹೇಳತೊಡಗಿದನು.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗಗವಾದ ಆದಿಕಾವ್ಯವಾದ ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಕವಚದ್ವಯವರ್ಣನವೆಂಬ ಹದಿಮೂರನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹದಿಮೂರನೆಯ ಸರ್ಗದ ಸಾರಾಂಶವು

ಈ ಸರ್ಗದಲ್ಲಿ ಹನುಮತ್ಕವಚ ಶ್ರೀರಾಮಕವಚಗಳನ್ನು ಹೇಳಿ ಅವನ್ನು ಹೇಳುವ ವಿಧಾನವನ್ನೂ ಅವುಗಳಿಂದ ಆಗುವ ಪ್ರಯೋಜನವನ್ನೂ ವಿವರಿಸಿದ್ದಾನೆ.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಮನೋಹರಕಾಂಡೇ ಚತುರ್ದಶಸ್ಸರ್ಗಃ

ಶ್ರೀ ಸೀತಾಕವಚಮ್

॥ ಶ್ರೀ ರಾಮದಾಸ ಉವಾಚ ॥

ಶೃಣು ಶಿಷ್ಯ ಪ್ರವಕ್ಷ್ಯಾಮಿ ಸೀತಾಯಾಃ ಕವಚಂ ಶುಭಂ ।
ಪುರಾ ಪ್ರೋಕ್ತಂ ಸುತೀಕ್ಷ್ಣಾಯ ಯದ್ರಮ್ಯಂ ಕುಂಭಜನ್ಮನಾ ॥ ೧ ॥

ಏಕದಾ ಕುಂಭಜನ್ಮಾನಂ ಸುತೀಕ್ಷ್ಣಃ ಪ್ರಾಹ ವೈ ಮುನಿಃ ।
ರಹಃ ಸ್ಥಿತಂ ಗುರುಂ ದೃಷ್ಟ್ವಾ ಪ್ರಣಮ್ಯ ಭಕ್ತಿಪೂರ್ವಕಂ ॥ ೨ ॥

॥ ಸುತೀಕ್ಷ್ಣ ಉವಾಚ ॥

ಗುರೋಽಹಂ ಶ್ರೋತುಮಿಚ್ಛಾಮಿ ಸೀತಾಯಾಃ ಪ್ರೀತಿದಾನಿ ಹಿ ।
ಯಾನಿ ಸ್ತೋತ್ರಾಣಿ ಕರ್ಮಾಣಿ ತಾನಿ ತ್ವಂ ವಕ್ತುಮರ್ಹಸಿ ॥ ೩ ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹದಿನಾಲ್ಕನೆಯ ಸರ್ಗವು

—o—o—

ಶ್ರೀ ಸೀತಾಕವಚವು

೧. ಶ್ರೀರಾಮದಾಸನು ಹೇಳಿದನು–ಎಲೈ ಶಿಷ್ಯನೆ ! ಆಗಸ್ತ್ಯನು ಸುತೀಕ್ಷ್ಣನಿಗೆ ಪೂರ್ವದಲ್ಲಿ ಹೇಳಿದ ರಮ್ಯವಾದ ಸೀತಾಕವಚನ್ನು ಹೇಳುತ್ತೇನೆ. ಅದನ್ನು ಕೇಳು.

೨. ಒಂದುಸಾರಿ ಸುತೀಕ್ಷ್ಣನು ಏಕಾಂತದಲ್ಲಿ ಕುಳಿತಿದ್ದ ಅಗಸ್ತ್ಯನನ್ನು ಹೊಂದಿ ಭಕ್ತಿಪೂರ್ವಕವಾಗಿ ನಮಸ್ಕರಿಸಿ ಇಂತೆಂದು ಕೇಳಿದನು.

೩. ಸುತೀಕ್ಷ್ಣನು ಹೇಳಿದನು–ಎಲೈ ಗುರುವೆ ! ಸೀತೆಗೆ ಪ್ರೀತಿಯನ್ನುಂಟು ಮಾಡುವ ಸ್ತೋತ್ರಗಳೂ ಕೆಲಸಗಳೂ ಯಾವುವಿವೆಯೋ ಅವೆಲ್ಲವನ್ನೂ ಹೇಳು. ಅವನ್ನು ಕೇಳಬೇಕೆಂಬ ಇಚ್ಛೆಯು ಬಹುವಾಗಿದೆ.

॥ ಅಗಸ್ತಿರುವಾಚ ॥
ಸಮ್ಯಕ್ ಪೃಷ್ಟಂ ತ್ವಯಾ ವತ್ಸ ಸಾವಧಾನಮನಾಃ ಶೃಣು ।
ಆದೌ ವಕ್ಷ್ಯಾಮ್ಯಹಂ ಸಮ್ಯಕ್ ಸೀತಾಯಾಃ ಕವಚಂ ಶುಭಂ ॥ ೪ ॥

ಯಾ ಸೀತಾವನಿಸಂಭವಾಥ ಮಿಥಿಲಾಪಾಲೇನ ಸಂವರ್ಧಿತಾ ।
ಪದ್ಮಾಕ್ಷೋರ್ನೃಪತೇಸ್ಸುತಾನಲಗತಾ ಯಾ ಮಾತುಲಿಂಗೋದ್ಭವಾ ।
ಯಾ ರತ್ನೇ ಲಯಮಾಗತಾ ಜಲನಿಧೌ ಯಾ ವೇದವಾರಂಗತಾ ।
ಲಂಕಾಂ ಸಾ ಮೃಗಲೋಚನಾ ಶಶಿಮುಖೀ ಮಾಂ ಪಾತು ರಾಮಪ್ರಿಯಾ

ಓಂ ಅಸ್ಯ ಶ್ರೀಸೀತಾಕವಚಸ್ತೋತ್ರಮಂತ್ರಸ್ಯ
ಅಗಸ್ತಿ ಋಷಿಃ-ಶ್ರೀ ಸೀತಾ ದೇವತಾ-ಅನುಷ್ಟುಪ್ ಛಂದಃ । ರಾಮೇತಿ ಬೀಜಂ । ಜನಕಜಾತಾ ಇತಿ ಶಕ್ತಿಃ । ಅವನಿಜೇತಿ ಕೀಲಕಂ । ಪದ್ಮಾಕ್ಷಸುತೇತ್ಯಸ್ತ್ರಂ । ಮಾತುಲಿಂಗೀತಿ ಕವಚಂ । ಮೂಲಕಾಸುರ ಘಾತಿನೀತಿ ಮಂತ್ರ । ಶ್ರೀಸೀತಾರಾಮಚಂದ್ರ ಪ್ರೀತ್ಯರ್ಥೇ ಜಪೇ ವಿನಿಯೋಗಃ ॥

---

೪. ಅಗಸ್ತ್ಯನು ಹೇಳಿದನು--ಎಲೈ ಶಿಷ್ಯನೆ! ನೀನು ಕೇಳಿದುದು ಚೆನ್ನಾಗಿದೆ. ಸಾವಧಾನದಿಂದ ಕೇಳು. ಮೊದಲು ಶುಭಕರವಾದ ಸೀತೆಯ ಕವಚವನ್ನು ಹೇಳುತ್ತೇನೆ.

೫ ಭೂಮಿಯಲ್ಲಿ ಹುಟ್ಟಿದ, ಜನಕರಾಜನಿಂದ ರಕ್ಷಿತಳಾದ, ಪದ್ಮಾಕ್ಷನೆಂಬ ರಾಜನಿಗೆ ಮಗಳಾದ, ಅಗ್ನಿಯಲ್ಲಿ ಸೇರಿಕೊಂಡಿದ್ದ, ಮಾದಲದ ಹಣ್ಣಿನಲ್ಲಿ ಹುಟ್ಟಿದ, ರತ್ನದಲ್ಲಿ ಸೇರಿಕೊಂಡು ಮರೆಯಾದ, ಲಂಕೆಗೆ ನಾಲ್ಕುಬಾರಿ ಪ್ರೇವೇಶಿಸಿದ, ರಾಮಪ್ರಿಯಳಾದ ಸೀತೆಯು ನಮ್ಮನ್ನು ಕಾಪಾಡಲಿ.

ಓಂ, ಈ ಸೀತಾಕವಚಸ್ತೋತ್ರ ಮಂತ್ರಕ್ಕೆ
ಅಗಸ್ತ್ಯನು ಋಷಿಯು, ಶ್ರೀ ಸೀತೆಯು ದೇವತೆಯು, ಅನುಷ್ಟುಪ್ ಛಂದಸ್ಸು, ರಾಮ ಎಂಬುದು ಬೀಜವು, ಜನಕಜಾತಾ ಎಂಬುದು ಶಕ್ತಿಯು, ಅವನಿಜಾ ಎಂಬುದು ಕೀಲಕವು, ಪದ್ಮಾಕ್ಷಸುತಾ ಎಂಬುದು ಅಸ್ತ್ರವು, ಮಾತುಲಿಂಗಿ ಎಂಬುದು ಕವಚವು. ಮೂಲಕಾಸುರಘಾತಿನೀ ಎಂಬುದು ಮಂತ್ರವು, ಶ್ರೀ ಸೀತಾರಾಮಚಂದ್ರರ ಪ್ರೀತಿಗೋಸ್ಕರ ಜಪಿಸುವುದರಲ್ಲಿ ವಿನಿಯೋಗವು.

॥ ಅಥ ಅಂಗುಳೀನ್ಯಾಸಃ ॥

ಓಂ ಹ್ರಾಂ ಸೀತಾಯೈ ಅಂಗುಷ್ಠಾಭ್ಯಾಂ ನಮಃ
ಓಂ ಹ್ರೀಂ ರಮಾಯೈ ತರ್ಜನೀಭ್ಯಾಂ ನಮಃ
ಓಂ ಹ್ರೂಂ ಜನಕಜಾಯೈ ಮಧ್ಯಮಾಭ್ಯಾಂ ನಮಃ
ಓಂ ಹ್ರೈಂ ಅವನಿಜಾಯೈ ಅನಾಮಿಕಾಭ್ಯಾಂ ನಮಃ
ಓಂ ಹ್ರೌಂ ಪದ್ಮಾಕ್ಷಸುತಾಯೈ ಕನಿಷ್ಠಿಕಾಭ್ಯಾಂ ನಮಃ
ಓಂ ಹ್ರಃ ಮಾತುಲಿಂಗ್ಯೈ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಹೃದಯಾದ್ಯಂಗನ್ಯಾಸಃ ॥

ಓಂ ಹ್ರಾಂ ಸೀತಾಯೈ ಹೃದಯಾಯ ನಮಃ
ಓಂ ಹ್ರೀಂ ರಮಾಯೈ ಶಿರಸೇ ಸ್ವಾಹಾ
ಓಂ ಹ್ರೂಂ ಜನಕಜಾಯೈ ಶಿಖಾಯೈ ವಷಟ್
ಓಂ ಹ್ರೈಂ ಅವನಿಜಾಯೈ ಕವಚಾಯ ಹುಂ

ಅಂಗುಳೀನ್ಯಾಸವು

ಓಂ ಹ್ರಾಂ ಸೀತಾಯೈ ಅಂಗುಷ್ಠಾಭ್ಯಾಂ ನಮಃ
ಓಂ ಹ್ರೀಂ ರಮಾಯೈ ತರ್ಜನೀಭ್ಯಾಂ ನಮಃ
ಓಂ ಹ್ರೂಂ ಜನಕಜಾಯೈ ಮಧ್ಯಮಾಭ್ಯಾಂ ನಮಃ
ಓಂ ಹ್ರೈಂ ಅವನಿಜಾಯೈ ಅನಾಮಿಕಾಭ್ಯಾಂ ನಮಃ
ಓಂ ಹ್ರೌಂ ಪದ್ಮಾಕ್ಷಸುತಾಯೈ ಕನಿಷ್ಟಿಕಾಭ್ಯಾಂ ನಮಃ
ಓಂ ಹ್ರಃ ಮಾತುಲಿಂಗ್ಯೈ ಕರತಲಕರಪೃಷ್ಟಾಭ್ಯಾಂ ನಮಃ

ಹೃದಯಾದಿ ನ್ಯಾಸವು

ಓಂ ಹ್ರಾಂ ಸೀತಾಯೈ ಹೃದಯಾಯನಮಃ
ಓಂ ಹ್ರೀಂ ಸಮಾಯೈ ಶಿರಸೇ ಸ್ವಾಹಾ
ಓಂ ಹ್ರೂಂ ಜನಕಜಾಯೈ ಶಿಖಾಯೈ ವಷಟ್
ಓಂ ಹ್ರೈಂ ಅವನಿಜಾಯೈಕವಚಾಯ ಹುಂ

ಓಂ ಹ್ರೌಂ ಪದ್ಮಾಕ್ಷಸುತಾಯೈ ನೇತ್ರತ್ರಯಾಯ ವೌಷಟ್
ಓಂ ಹ್ರಃ ಮಾತುಲಿಂಗ್ಯೈ ಅಸ್ತ್ರಾಯ ಫಟ್

ಓಂ ಮೂಲಕಾಸುರ ಘಾತಿನೀತಿ ದಿಗ್ಬಂಧಃ

॥ ಅಥ ಧ್ಯಾನಂ ॥

ಸೀತಾಂ ಕಮಲ ಪತ್ರಾಕ್ಷೀಂ ವಿದ್ಯುತ್ಪುಂಜಸಮಪ್ರಭಾಂ ।
ದ್ವಿಭುಜಾಂ ಸುಕುಮಾರಾಂಗೀಂ ಪೀತಕೌಶೇಯವಾಸಿನೀಂ ॥ ೬ ॥

ಸಿಂಹಾಸನೇ ರಾಮಚಂದ್ರವಾಮಭಾಗಸ್ಥಿತಾಂ ವರಾಂ ।
ನಾನಾಲಂಕಾರಸಂಯುಕ್ತಾಂ ಕುಂಡಲದ್ವಯಧಾರಿಣೀಂ ॥ ೭ ॥

ಚೂಡಾಕಂಕಣಕೇಯೂರರಶನಾನೂಪುರಾನ್ವಿತಾಂ ।
ಸೀಮಂತೇ ರವಿಚಂದ್ರಾಭ್ಯಾಂ ನಿಟಿಲೇ ತಿಲಕೇನ ಚ ॥ ೮ ॥

ಓಂ ಹ್ರೌಂ ಪದ್ಮಾಕ್ಷಸುತಾಯೈ ನೇತ್ರತ್ರಯಾಯ ವೌಷಟ್
ಓಂ ಹ್ರಃ ಮಾತುಲಿಂಗ್ಯೈ ಅಸ್ತ್ರಾಯ ಫಟ್

ಓಂ ಮೂಲಕಾಸುರಘಾತಿನೀತಿ ದಿಗ್ಬಂಧಃ

ಧ್ಯಾನವು

೬. ಕಮಲ ಪತ್ರದಂತೆ ಕಣ್ಣುಗಳುಳ್ಳ, ಮಿಂಚಿನ ಗುಂಪಿನಂತೆ ಕಾಂತಿಯುಳ್ಳ, ಎರಡು ಕೈಗಳುಳ್ಳ, ಸುಕುಮಾರವಾದ ಅವಯವಗಳುಳ್ಳ, ಬಿಳಿಯ ರೇಷ್ಮೆಯ ಬಟ್ಟೆಯನ್ನು ಉಟ್ಟಿರುವ ಸೀತೆಯನ್ನು ಧ್ಯಾನಿಸುತ್ತೇನೆ.

೭. ಸಿಂಹಾಸನದಲ್ಲಿ ರಾಮಚಂದ್ರನ ಬಲಭಾಗದಲ್ಲಿ ಕುಳಿತಿರುವ, ನಾನಾ ಬಗೆಯ ಭೂಷಣಗಳನ್ನು ಧರಿಸಿರುವ, ಎರಡು ಓಲೆಗಳನ್ನು ಧರಿಸಿರುವ ಸೀತೆಯನ್ನು ಧ್ಯಾನಿಸುತ್ತೇನೆ.

೮. ಚೂಡಾಮಣಿ, ಕೈಬಳೆಗಳನ್ನೂ, ಕೇಯೂರ, ರಶನ, ಕಾಲು ಮಿಂಚು ಗಳನ್ನೂ ಧರಿಸಿರುವ, ಬೈತಲೆಯಲ್ಲಿ ಸೂರ್ಯಚಂದ್ರರೆಂಬ ಒಡವೆಗಳನ್ನು ಧರಿಸಿರುವ ಹಣೆಯಲ್ಲಿ ತಿಲಕವನ್ನಿಟ್ಟಿರುವ ಸೀತೆಯನ್ನು ಧ್ಯಾನಿಸುತ್ತೇನೆ.

ಮಯೂರಾಭರಣೇನಾಪಿ ಘ್ರಾಣೇತಿಶೋಭಿತಾಂ ಶುಭಾಂ ।
ಹರಿದ್ರಾಂ ಕಜ್ಜಲಂ ದಿವ್ಯಂ ಕುಂಕುಮಾನಿ ಶುಭಾನಿ ಚ ॥ ೯ ॥

ಬಿಭ್ರಂತೀಂ ಸುರಭಿದ್ರವ್ಯಂ ಸುಗಂಧಸ್ನೇಹಮುತ್ತಮಂ ।
ಸ್ಮಿತಾನನಾಂ ಗೌರವರ್ಣಾಂ ಮಂದಾರಕುಸುಮಂ ಕರೇ ॥ ೧೦ ॥

ಬಿಭ್ರಂತೀಮಪರೇ ಹಸ್ತೇ ಮಾತುಲಿಂಗಮನುತ್ತಮಂ ।
ರಮ್ಯಹಾಸಾಂ ಚ ಬಿಂಬೋಷ್ಠೀಂ ಚಂದ್ರಮಾಹನಲೋಚನಾಂ ॥ ೧೧ ॥

ಕಲಾನಾಥಸಮಾನಾಸ್ಯಾಂ ಕಲಕಂಠಮನೋರಮಾಂ ।
ಮಾತುಲಿಂಗೋದ್ಭವಾಂ ದೇವೀಂ ಪದ್ಮಾಕ್ಷದುಹಿತಾಂ ಶುಭಾಂ ॥ ೧೨ ॥

---

೯. ಮೂಗಿಗೆ ಮಯೂರಾಭರಣವೆಂಬ ಒಡವೆಯನ್ನು ಹಾಕಿಕೊಂಡಿರುವ ಅರಿಶಿನ ಕುಂಕುಮಗಳನ್ನು ಹಚ್ಚಿಕೊಂಡು ಕಣ್ಣಿಗೆ ಕಾಡಿಗೆಯನ್ನು ಹಚ್ಚಿಕೊಂಡಿರುವ ಸೀತೆಯನ್ನು ಧ್ಯಾನಿಸುತ್ತೇನೆ.

೧೦. ಸುಗಂಧ ದ್ರವ್ಯಗಳನ್ನು ಧರಿಸಿರುವ, ಸುಗಂಧದ ಎಣ್ಣೆಯನ್ನು ಪೂಸಿಕೊಂಡಿರುವ, ನಗುಮುಖವುಳ್ಳ, ಅರಿಶಿನ ಮಿಶ್ರವಾದ ಬಿಳುಪುಬಣ್ಣವುಳ್ಳ ಒಂದು ಕೈಯ್ಯಲ್ಲಿ ಕಲ್ಪವೃಕ್ಷದ ಹೂವನ್ನು ಹಿಡಿದಿರುವ ಸೀತೆಯನ್ನು ಧ್ಯಾನಿಸುತ್ತೇನೆ.

೧೧. ಮತ್ತೊಂದು ಕೈಯ್ಯಲ್ಲಿ ಮಾದಲದ ಹಣ್ಣನ್ನು ಹಿಡಿದಿರುವ, ಮನೋಹರವಾಗಿ ನಗುತ್ತಿರುವ, ತೊಂಡೆಯ ಹಣ್ಣಿನಂತಿರುವ ತುಟಿಗಳುಳ್ಳ, ಜಿಂಕೆಯ ಕಣ್ಣಿನಂತೆ ಕಣ್ಣುಗಳುಳ್ಳ ಸೀತೆಯನ್ನು ಧ್ಯಾನಿಸುತ್ತೇನೆ.

೧೨. ಕಲಾನಾಥನಾದ ಚಂದ್ರನಂತೆ ಮುಖವುಳ್ಳ, ಕೋಗಿಲೆಯ ಧ್ವನಿಯಂತೆ ಧ್ವನಿಯುಳ್ಳ, ಮನೋಹರಳಾದ, ಮಾದಲದ ಹಣ್ಣಿನಲ್ಲಿ ಹುಟ್ಟಿದ ಪದ್ಮಾಕ್ಷನ ಮಗಳಾದ ಸೀತೆಯನ್ನು ಧ್ಯಾನಿಸುತ್ತೇನೆ.

ಮೈಥಿಲೀಂ ರಾಮದಯಿತಾಂ ದಾಸೀಭಿಃ ಪರಿವೀಜಿತಾಂ ।
ಏವಂ ಧ್ಯಾತ್ವಾ ಜನಕಜಾಂ ಹೇಮಕುಂಭಪಯೋಧರಾಂ ॥ ೧೩ ॥

ಸೀತಾಯಾಃ ಕವಚಂ ದಿವ್ಯಂ ಪಠನೀಯಂ ಶುಭಾವಹಂ ।
ಶ್ರೀಸೀತಾ ಪೂರ್ವತಃ ಪಾತು ದಕ್ಷಿಣೇವತು ಜಾನಕೀ ॥ ೧೪ ॥

ಪ್ರತೀಚ್ಯಾಂ ಪಾತು ವೈದೇಹೀ ಪಾತೂದೀಚ್ಯಾಂ ಚ ಮೈಥಿಲೀ ।
ಅಧಃ ಪಾತು ಮಾತುಲಿಂಗೀ ಊರ್ಧ್ವಂ ಪದ್ಮಾಕ್ಷಜಾವತು ॥ ೧೫ ॥

ಮಧ್ಯೇವನಿಸುತಾ ಪಾತು ಸರ್ವತಃ ಪಾತು ಮಾಂ ರಮಾ ।
ಸ್ಮಿತಾನನಾ ಶಿರಃ ಪಾತು ಪಾತು ಫಾಲಂ ನೃಪಾತ್ಮಜಾ ॥ ೧೬ ॥

ಪದ್ಮಾವತು ಭ್ರುವೋರ್ಮಧ್ಯೇ ಮೃಗಾಕ್ಷೀ ನಯನೇವತು ।
ಕಪೋಲೇ ಕರ್ಣಮೂಲೇ ಚ ಪಾತು ಶ್ರೀರಾಮವಲ್ಲಭಾ ॥ ೧೭ ॥

---

೧೩ - ೧೪. ಈ ರೀತಿಯಾಗಿ ಸೀತೆಯನ್ನು ಧ್ಯಾನ ಮಾಡಿದ ಮೇಲೆ ಉತ್ತಮವಾದ ಸೀತೆಯ ಕವಚವನ್ನು ಹೇಳಬೇಕು. ಸೀತೆಯು ಪೂರ್ವ ದಿಕ್ಕಿನಲ್ಲಿಯೂ, ಜಾನಕಿಯು ದಕ್ಷಿಣ ದಿಕ್ಕಿನಲ್ಲಿಯೂ ರಕ್ಷಿಸಲಿ.

೧೫. ವೈದೇಹಿಯು ಪಶ್ಚಿಮ ದಿಕ್ಕಿನಲ್ಲಿಯೂ, ಮೈಥಿಲಿಯು ಉತ್ತರ ದಿಕ್ಕಿನಲ್ಲಿಯೂ, ಮಾತುಲಿಂಗಿಯು ತಳಭಾಗದಲ್ಲಿಯೂ, ಪದ್ಮಾಕ್ಷಜೆಯು ಮೇಲುಭಾಗದಲ್ಲಿಯೂ ರಕ್ಷಿಸಲಿ.

೧೬. ಅಶನಿಸುತೆಯು ಮಧ್ಯದಲ್ಲಿಯೂ, ರಮೆಯು ಎಲ್ಲಾ ಕಡೆಯಲ್ಲಿಯೂ, ಸ್ಮಿತಾನನೆಯು ತಲೆಯನ್ನೂ, ನೃಪಾತ್ಮಜೆಯು ಹಣೆಯನ್ನೂ ರಕ್ಷಿಸಲಿ.

೧೭. ಪದ್ಮೆಯು ಹುಬ್ಬುಗಳ ಮಧ್ಯವನ್ನೂ, ಮೃಗಾಕ್ಷಿಯು ಕಣ್ಣುಗಳನ್ನೂ ರಕ್ಷಿಸಲಿ. ಶ್ರೀರಾಮ ವಲ್ಲಭೆಯು ಕಪೋಲಗಳನ್ನೂ, ಕಿವಿಯ ಬುಡವನ್ನೂ ರಕ್ಷಿಸಲಿ.

ನಾಸಾಗ್ರಂ ಸಾತ್ವಿಕೀ ಪಾತು ಪಾತು ವಕ್ತ್ರಂ ತು ರಾಜಸೀ ।
ತಾಮಸೀ ಪಾತು ಮದ್ವಾಣೀಂ ಪಾತು ಜಿಹ್ವಾಂ ಪತಿವ್ರತಾ ॥ ೧೮ ॥

ದಂತಾನ್ ಪಾತು ಮಹಾಮಾಯಾ ಚುಬುಕಂ ಕನಕಪ್ರಭಾ ।
ಪಾತು ಕಂಠಂ ಸೌಮ್ಯರೂಪಾ ಸ್ಕಂಧೌ ಪಾತು ಸುರಾರ್ಚಿತಾ ॥ ೧೯ ॥

ಭುಜೌ ಪಾತು ವರಾರೋಹಾ ಕರೌ ಕಂಕಣಮಂಡಿತಾ ।
ನಖಾನ್ ರಕ್ತನಖಾ ಪಾತು ಕುಕ್ಷೌ ಪಾತು ಲಘೂದರಾ ॥ ೨೦ ॥

ವಕ್ಷಃ ಪಾತು ರಾಮಪತ್ನೀ ಪಾರ್ಶ್ವೇ ರಾವಣಮೋಹಿನೀ ।
ಪೃಷ್ಠದೇಶೇ ವಹ್ನಿಗುಪ್ತಾವತು ಮಾಂ ಸರ್ವದೈವ ಹಿ ॥ ೨೧ ॥

ದಿವ್ಯಪ್ರದಾ ಪಾತು ನಾಭಿಂ ಕಟಿಂ ರಾಕ್ಷಸಮೋಹಿನೀ ।
ಗುಹ್ಯಂ ಪಾತು ರತ್ನಗುಪ್ತಾ ಲಿಂಗಂ ಪಾತು ಹರಿಪ್ರಿಯಾ ॥ ೨೨ ॥

---

೧೮. ಸಾತ್ವಿಕಿಯು ಮೂಗಿನ ತುದಿಯನ್ನೂ, ರಾಜಸಿಯು ಬಾಯನ್ನೂ, ತಾಮಸಿಯು ಮಾತನ್ನೂ, ಪತಿವ್ರತೆಯು ನಾಲಗೆಯನ್ನೂ ರಕ್ಷಿಸಲಿ.

೧೯. ಮಹಾ ಮಾಯೆಯು ದಂತಗಳನ್ನೂ, ಕನಕಪ್ರಭೆಯು ಗಲ್ಲವನ್ನೂ ಸೌಮ್ಯರೂಪೆಯು ಕಂಠವನ್ನೂ, ಸುರಾರ್ಚಿತೆಯು ಹೆಗಲನ್ನೂ ಕಾಪಾಡಲಿ.

೨೦. ವರಾರೋಹೆಯು ಭುಜವನ್ನೂ, ಕಂಕಣಮಂಡಿತೆಯು ಕೈಗಳನ್ನೂ, ಕೆಂಪಾದ ಉಗುರುಗಳುಳ್ಳವಳು ಉಗುರುಗಳನ್ನೂ, ಲಘುವಾದ ಹೊಟ್ಟೆಯುಳ್ಳವಳು ನನ್ನ ಹೊಟ್ಟೆಯನ್ನೂ ರಕ್ಷಿಸಲಿ.

೨೧. ರಾಮಪತ್ನಿಯು ಕಣ್ಣುಗಳನ್ನೂ, ರಾವಣ ಮೋಹಿನಿಯು ಪಾರ್ಶ್ವಗಳನ್ನೂ, ವಹ್ನಿಗುಪ್ತೆಯು ಪೃಷ್ಠಪ್ರದೇಶವನ್ನೂ ಯಾವಾಗಲೂ ಕಾಪಾಡಲಿ.

೨೨. ದಿವ್ಯಪ್ರದೆಯು ನನ್ನ ಹೊಕ್ಕುಳನ್ನೂ, ರಾಕ್ಷಸ ಮೋಹಿನಿಯು ನನ್ನ ನಡುವನ್ನೂ, ರತ್ನಗುಪ್ತೆಯು ನನ್ನ ಗುಹ್ಯ ಪ್ರದೇಶವನ್ನೂ, ಹರಿಪ್ರಿಯೆಯು ನನ್ನ ಲಿಂಗವನ್ನೂ ರಕ್ಷಿಸಲಿ.

ಊರೂ ರಕ್ಷತು ರಂಭೋರೂ ಜಾನುನೀ ಪ್ರಿಯಭಾಷಿಣೀ ।
ಜಂಘೇ ಪಾತು ಸದಾ ಸುಭ್ರೂರ್ಗುಲ್ಫೌ ಚಾಮರವೀಜಿತಾ ॥ ೨೩ ॥

ಪಾದೌ ಲವಸುತಾ ಪಾತ್ವಂಗಾನಿ ತು ಕುಶಾಂಬಿಕಾ ।
ಪಾದಾಂಗುಳೀಸ್ಸದಾ ಪಾತು ಮಮ ನೂಪುರನಿಸ್ವನಾ ॥ ೨೪ ॥

ರೋಮಾಣ್ಯವತು ಮೇ ನಿತ್ಯಂ ಪೀತಕೌಶೇಯವಾಸಿನೀ ।
ರಾತ್ರೌ ಪಾತು ಕಾಲರೂಪಾ ದಿನೇ ದೀನೈಕತತ್ಪರಾ ॥ ೨೫ ॥

ಸರ್ವಕಾಲೇಷು ಮಾಂ ಪಾತು ಮೂಲಕಾಸುರಘಾತಿನೀ ।
ಏವಂ ಸುತೀಕ್ಷ್ಣ ಸೀತಾಯಾಃ ಕವಚಂ ತೇ ಮಯೇರಿತಂ ॥ ೨೬ ॥

ಏವಂ ಪ್ರಾತಸ್ಸಮುತ್ಥಾಯ ಸ್ನಾತ್ವಾ ನಿತ್ಯಂ ಪಠೇತ್ತು ಯಃ ।
ಜಾನಕೀಂ ಪೂಜಯಿತ್ವಾ ಸ ಸರ್ವಾನ್ ಕಾಮಾನವಾಪ್ನುಯಾತ್ ॥ ೨೭ ॥

---

೨೩. ರಂಭೋರುವು ನನ್ನ ತೊಡೆಗಳನ್ನೂ, ಪ್ರಿಯಭಾಷಿಣಿಯು ಜಾನು ಪ್ರದೇಶಗಳನ್ನೂ, ಸುಭ್ರುವು ಜಂಘ ಪ್ರದೇಶವನ್ನೂ, ಚಾಮರ ವೀಜಿತೆಯು ಹಿಮ್ಮಡಿಗಳನ್ನೂ ಕಾಪಾಡಲಿ.

೨೪. ಲವನನ್ನೇ ಮಗನನ್ನಾಗಿ ಉಳ್ಳವಳು ನನ್ನ ಪಾದಗಳನ್ನೂ, ಕುಶನ ತಾಯಿಯು ನನ್ನ ಎಲ್ಲಾ ಅಂಗಗಳನ್ನೂ, ನೂಪುರ ಧ್ವನಿಯುಳ್ಳವಳು ನನ್ನ ಕಾಲಿನ ಬೆರಳನ್ನೂ ರಕ್ಷಿಸಲಿ.

೨೫. ಪೀತಕಾಕೌಶೇಶವಾಸಿನಿಯು ನನ್ನ ರೋಮಗಳನ್ನು ರಕ್ಷಿಸಲಿ. ಕಾಲರೂಪಿಣಿಯು ರಾತ್ರಿಯಲ್ಲಿಯೂ, ದೀನರನ್ನು ಕಾಪಾಡುವವಳು ಹಗಲಿನಲ್ಲಿಯೂ, ರಕ್ಷಿಸಲಿ.

೨೬. ಮೂಲಕಾಸುರನನ್ನು ಕೊಂದವಳು ನನ್ನನ್ನು ಯಾವಾಗಲೂ ರಕ್ಷಿಸಲಿ. ಎಲೈ ಸುತೀಕ್ಷ್ಣನೇ ! ಇದೇ ಸೀತೆಯ ಕವಚವು. ನಿನಗೆ ವಿಸ್ತಾರವಾಗಿ ಹೇಳಿದ್ದೇನೆ.

೨೭. ಬೆಳಗ್ಗೆ ಎದ್ದು ಸ್ನಾನ ಮಾಡಿ ಯಾವನು ಜಾನಕಿಯನ್ನು ಪೂಜಿಸಿ ದಿನವೂ ಹೇಳುವನೋ ಅದನಿಗೆ ಸಕಲ ಇಷ್ಟಾರ್ಥಗಳೂ ಕೈಗೂಡುತ್ತವೆ.

ಧನಾರ್ಥೀ ಪ್ರಾಪ್ನುಯಾದ್ದ್ರವ್ಯಂ ಪುತ್ರಾರ್ಥೀ ಪುತ್ರಮಾಪ್ನುಯಾತ್ ।
ಸ್ತ್ರೀಕಾಮಾರ್ಥೀ ಶುಭಾಂ ನಾರೀಂ ಸುಖಾರ್ಥೀ ಸೌಖ್ಯಮಾಪ್ನುಯಾತ್ ॥

ಅಷ್ಟವಾರಂ ಜಪನೀಯಂ ಸೀತಾಯಾಃ ಕವಚಂ ಸದಾ ।
ಅಷ್ಟಭೂಸುರಸೀತಾಯೈ ನರೈಃ ಪ್ರೀತ್ಯಾರ್ಪಯೇತ್ಸದಾ ॥ ೨೯ ॥

ಫಲಪುಷ್ಪಾದಿಕಾದೀನಿ ಯಾನಿ ತಾನಿ ಪೃಥಕ್ ಪೃಥಕ್ ।
ಸೀತಾಯಾಃ ಕವಚಂ ಚೇದಂ ಪುಣ್ಯಂ ಪಾತಕನಾಶನಂ ॥ ೩೦ ॥

ಯೇ ಪಠಂತಿ ನರಾ ಭಕ್ತ್ಯಾ ತೇ ಧನ್ಯಾ ಮಾನವಾ ಭುವಿ ।
ಪಠಂತಿ ರಾಮಕವಚಂ ಸೀತಾಯಾಃ ಕವಚಂ ವಿನಾ ॥ ೩೧ ॥

ತಥಾ ವಿನಾ ಲಕ್ಷ್ಮಣಸ್ಯ ಕವಚೇನ ವೃಥಾ ಸ್ಮೃತಂ ।
ತಸ್ಮಾತ್ಸದಾ ಜಪನೀಯಂ ಕವಚಾನಾಂ ಚತುಷ್ಟಯಂ ॥ ೩೨ ॥

---

೨೮. ಧನಾರ್ಥಿಯು ಧನವನ್ನೂ, ಪುತ್ರಾರ್ಥಿಯು ಪುತ್ರನನ್ನೂ, ಸ್ತ್ರೀಯ ರನ್ನು ಆಪೇಕ್ಷಿಸುವವನು ಒಳ್ಳೆಯ ಹೆಂಗಸನ್ನೂ, ಸುಖಾರ್ಥಿಯು ಸೌಖ್ಯವನ್ನೂ ಹೊಂದುತ್ತಾನೆ.

೨೯-೩೦. ಸೀತೆಯ ಈ ಕವಚವನ್ನು ಯಾವಾಗಲೂ ಎಂಟು ಬಾರಿ ಹೇಳಬೇಕು. ಮತ್ತು ಎಂಟು ಬಗೆಯ ಹೂವುಗಳನ್ನು ತಂದು ಅವುಗಳಿಂದ ಪ್ರತ್ಯೇಕ ಪ್ರತ್ಯೇಕವಾಗಿ ಎಂಟು ಬಾರಿ ಪೂಜಿಸಬೇಕು. ಸೀತೆಯ ಈ ಕವಚವು ಪುಣ್ಯಕರವು. ಪಾಪನಾಶಕವು. ಇದನ್ನು ಯಾರು ಪಠಿಸುವರೋ ಅವರೇ ಈ ಭೂಮಿಯಲ್ಲಿ ಧನ್ಯರು.

೩೧-೩೨. ಯಾರು ಸೀತೆಯ ಕವಚವನ್ನೂ, ಅಂತೆಯೇ ಲಕ್ಷ್ಮಣ ಕವಚವನ್ನೂ ಹೇಳದೆ ಶ್ರೀರಾಮ ಕವಚವನ್ನೇ ಹೇಳುವರೋ ಅದು ಅವರಿಗೆ ಫಲ ಕೊಡದೆ ವ್ಯರ್ಥವಾಗುವುದು. ಆದ್ದರಿಂದ ಹನುಮಂತ, ಶ್ರೀರಾಮ, ಸೀತಾ, ಲಕ್ಷ್ಮಣರ ನಾಲ್ಕು ಕವಚಗಳನ್ನೂ ಒಟ್ಟಿಗೆ ಹೇಳಬೇಕು.

ಆದೌ ತು ವಾಯುಪುತ್ರಸ್ಯ ಲಕ್ಷ್ಮಣಸ್ಯ ತತಃ ಪರಂ ।
ತತಃ ಪಠೇಚ್ಚ ಸೀತಾಯಾಃ ಶ್ರೀರಾಮಸ್ಯ ತತಃ ಪರಂ ॥ ೩೩ ॥

ಏವಂ ಸದಾ ಜಪನೀಯಂ ಕವಚಾನಾಂ ಚತುಷ್ಟಯಂ ॥ ೩೪ ॥

॥ ಇತಿ ಸೀತಾಕವಚಂ ॥

ಶ್ರೀ ಸೀತಾಷ್ಟೋತ್ತರ ಶತನಾಮಸ್ತೋತ್ರಂ

ಏವಂ ಸುತೀಕ್ಷ್ಣ ಸೀತಾಯಾಃ ಕವಚಂ ತೇ ಮಯೇರಿತಂ ।
ಅತಃ ಪರಂ ಶ್ರುಣುಷ್ವಾಸ್ಯಾಸ್ಸೀತಾಯಾಃ ಸ್ತೋತ್ರಮುತ್ತಮಂ ॥ ೩೫ ॥

ಯಸ್ಮಿನ್ನಷ್ಟೋತ್ತರಶತಂ ಸೀತಾನಾಮಾನಿ ಸಂತಿ ಹಿ ।
ಅಷ್ಟೋತ್ತರಶತಂ ಸೀತಾನಾಮ್ನಾಂ ಸ್ತೋತ್ರಮನುತ್ತಮಂ ॥ ೩೬ ॥

ಯೇ ಪಠಂತಿ ನರಾಸ್ತ್ವತ್ರ ತೇಷಾಂ ಚ ಸಫಲೋ ಭವಃ ।
ತೇ ಧನ್ಯ ಮಾನವಾ ಲೋಕೇ ತೇ ವೈಕುಂಠಂ ವ್ರಜಂತಿ ಹಿ . ॥ ೩೭ ॥

---

೩೩. ಮೊದಲು ಹನುಮತ್ಕವಚವನ್ನೂ, ಎರಡನೇ ಬಾರಿ ಲಕ್ಷ್ಮಣನ ಕವಚವನ್ನೂ, ಆನಂತರ ಸೀತೆಯ ಕವಚವನ್ನೂ, ಅದಾದ ಮೇಲೆ ರಾಮ ಕವಚವನ್ನೂ ಈ ರೀತಿಯಾಗಿ ಯಾವಾಗಲೂ ಈ ನಾಲ್ಕು ಕವಚಗಳನ್ನೂ ಜಪಿಸಬೇಕು.

೩೪. ಎಲೈ ಸುತೀಕ್ಷ್ಣನೇ ! ಸೀತೆಯ ಈ ರೀತಿಯಾದ ಕವಚವನ್ನು ನಿನಗೆ ಹೇಳಿದೆನು. ಇನ್ನು ಮೇಲೆ ಸೀತೆಯ ಉತ್ತಮವಾದ ಸ್ತೋತ್ರವನ್ನು ಕೇಳು.

ಇದು ಸೀತಾ ಕವಚವು

ಶ್ರೀ ಸೀತೆಯ ಅಷ್ಟೋತ್ತರಶತ ನಾಮ ಸ್ತೋತ್ರವು.

೩೫-೩೭ ಈ ಸ್ತೋತ್ರದಲ್ಲಿ ಸೀತೆಯ ಹೆಸರುಗಳಿವೆ. ಸೀತೆಯ ಈ ಅಷ್ಟೋತ್ತರ ಎಂದರೆ ನೂರಎಂಟು ನಾಮಗಳು ಬಹು ಉತ್ತಮವಾದುವು. ಇವುಗಳನ್ನು ಯಾರು ಹೇಳುವರೋ ಅವರ ಜನ್ಮವು ಸಾರ್ಥಕವಾಗುತ್ತದೆ. ಆ ಮಾನವರೇ ಈ ಲೋಕದಲ್ಲಿ ಧನ್ಯರು. ಅವರೇ ವೈಕುಂಠವನ್ನು ಹೊಂದತಕ್ಕವರು.

ಓಂ ಅಸ್ಯ ಶ್ರೀಸೀತಾನಾಮಾಷ್ಟೋತ್ತರಶತಮಂತ್ರಸ್ಯ ಅಗಸ್ತಿ ಋಷಿಃ। ಅನುಷ್ಟುಪ್ ಛಂದಃ। ರಮೇತಿ ಬೀಜಂ। ಮಾತುಲಿಂಗೀತಿ ಶಕ್ತಿಃ। ಪದ್ಮಾಕ್ಷಜೇತಿ ಕೀಲಕಂ, ಅವನಿಜೇತ್ಯಸ್ತ್ರಂ,। ಜನಕಜೇತಿ ಕವಚಂ। ಮೂಲಕಾಸುರಮರ್ದಿನೀತಿ ಮಂತ್ರಃ। ಶ್ರೀಸೀತಾ ರಾಮಚಂದ್ರಪ್ರೀತ್ಯರ್ಥೇ ಸಕಲಕಾಮನಾಸಿದ್ಧ್ಯರ್ಥೇ ಜಪೇ ವಿನಿಯೋಗಃ ॥

॥ ಅಥಾಂಗುಳೀನ್ಯಾಸಃ ॥

ಓಂ ಸೀತಾಯೈ ಅಂಗುಷ್ಠಾಭ್ಯಾಂ ನಮಃ
ಓಂ ರಮಾಯೈ ತರ್ಜನೀಭ್ಯಾಂ ನಮಃ
ಓಂ ಮಾತುಲಿಂಗ್ಯೈ ಮಧ್ಯಮಾಭ್ಯಾಂ ನಮಃ
ಓಂ ಪದ್ಮಾಕ್ಷಜಾಯೈ ಅನಾಮಿಕಾಭ್ಯಾಂ ನಮಃ
ಓಂ ಅವನಿಜಾಯೈ ಕನಿಷ್ಠಿಕಾಭ್ಯಾಂ ನಮಃ
ಓಂ ಜನಕಜಾಯೈ ಕರತಲಕರಪೃಷ್ಠಾಭ್ಯಾಂ ನಮಃ

ಓಂ ಸೀತಾಯೈ ಹೃದಯಾಯ ನಮಃ
ಓಂ ರಮಾಯೈ ಶಿರಸೇ ಸ್ವಾಹಾ
ಓಂ ಮಾತುಲಿಂಗ್ಯೈ ಶಿಖಾಯೈ ವಷಟ್
ಓಂ ಅವನಿಜಾಯೈ ಕವಚಾಯ ಹುಂ

ಓಂ ಈ ಸೀತಾ ಅಷ್ಟೋತ್ತರಶತನಾಮಸ್ತೋತ್ರ ಮಂತ್ರಕ್ಕೆ ಆಗಸ್ತ್ಯನು ಋಷಿಯು, ಅನುಷ್ಟುಪ್ ಛಂದಸ್ಸು, ರಮಾ ಎಂಬುದು ಬೀಜವು, ಮಾತುಲಿಂಗೀ ಎಂಬುದು ಶಕ್ತಿಯು, ಪದ್ಮಾಕ್ಷಜಾ ಎಂಬುದು ಕೀಲಕವು, ಮೂಲಕಾಸುರಮರ್ದಿನೀ ಎಂಬುದೇ ಮಂತ್ರವು, ಶ್ರೀ ಸೀತಾ ರಾಮಚಂದ್ರನ ಪ್ರೀತಿಗೋಸ್ಕರವೂ, ಎಲ್ಲಾ ಇಷ್ಟಗಳು ಸಿದ್ಧಿಸುವುದಕ್ಕೂ ಜಪ ಮಾಡುವುದರಲ್ಲಿ ವಿನಿಯೋಗವು.

ಅಂಗುಳಿನ್ಯಾಸವು

ಓಂ ಸೀತೆಗೋಸ್ಕರ ಅಂಗುಷ್ಠಗಳಿಗೆ ನಮಃ
ಓಂ ರಮೆಗೋಸ್ಕರ ತರ್ಜನಿಗಳಿಗೆ ನಮಃ
ಓಂ ಮಾತುಲಿಂಗಿಗೋಸ್ಕರ ಮಧ್ಯಮಗಳಿಗೆ ನಮಃ
ಓಂ ಪದ್ಮಾಕ್ಷಜೆಗೋಸ್ಕರ ಅನಾಮಿಕೆಗೆ ನಮಃ
ಓಂ ಅವನಿಜೆಗೋಸ್ಕರ ಕನಿಷ್ಠಿಕೆಗೆ ನಮಃ

ಓಂ ಪದ್ಮಾಕ್ಷಜಾಯೈ ನೇತ್ರಯಾಯ ವೌಷಟ್
ಓಂ ಜನಕಾತ್ಮಜಾಯೈ ಅಸ್ತ್ರಾಯ ಫಟ್
ಓಂ ಮೂಲಕಾಸುರಮರ್ದಿನ್ಯೈ ಇತಿ ದಿಗ್ಬಂಧಃ

॥ ಏವಂ ಹೃದಯಾದಿನ್ಯಾಸಃ ॥

॥ ಅಥ ಧ್ಯಾನಂ ॥

ವಾಮಾಂಗೇ ರಘುನಾಯಕಸ್ಯ ರುಚಿರೇ ಯಾ ಸಂಸ್ಥಿತಾ ಶೋಭನಾ ।
ಯಾ ವಿಪ್ರಾಧಿಪಯಾನರಮ್ಯನಯನಾ ಯಾ ವಿಪ್ರಪಾಲಾನನಾ ।
ವಿದ್ಯುತ್ಪುಂಜವಿರಾಜಮಾನವಸನಾ ಭಕ್ತಾರ್ತಿಸಂಖಂಡನಾ
ಶ್ರೀಮದ್ರಾಘವಪಾದಪದ್ಮಯುಗಳನ್ಯಸ್ತೇಕ್ಷಣಾ ಸಾವತು ॥ ॥ ೩೮ ॥

ಶ್ರೀ ಸೀತಾ ಜಾನಕೀ ದೇವೀ ವೈದೇಹೀ ರಾಘವಪ್ರಿಯಾ ।
ರಮಾವನಿಸುತಾ ರಾಮಾ ರಾಕ್ಷಸಾಂತಪ್ರಕಾರಿಣೀ ॥ ೩೯ ॥

ಓಂ ಜನಕಜೆಗೋಸ್ಕರ ಕೈಗಳ ತಳಭಾಗಕ್ಕೆ ನಮಃ
ಓಂ ಸೀತೆಗೋಸ್ಕರ ಹೃದಯಕ್ಕೆ ನಮಃ
ಓಂ ರಮೆಗೋಸ್ಕರ ಶಿರಸ್ಸಿಗೆ ಸ್ವಾಹಾ
ಓಂ ಮಾತುಲಿಂಗಗೋಸ್ಕರ ಶಿಖೆಗೆ ವಷಟ್
ಓಂ ಪದ್ಮಾಕ್ಷಜೆಗೋಸ್ಕರ ಕವಚಗಳಿಗೆ ಹುಂ
ಓಂ ಅವನಿಜೆಗೋಸ್ಕರ ನೇತ್ರತ್ರಯಗಳಿಗೆ ವೌಷಟ್
ಓಂ ಜನಕಜೆಗೋಸ್ಕರ ಅಸ್ತ್ರಾಯ ಫಟ್
ಓಂ ಮೂಲಕಾಸುರ ಮರ್ದಿನೀ ಎಂದು ದಿಗ್ಬಂಧವು.

ಇಂತು ಅಂಗನ್ಯಾಸ ಕರನ್ಯಾಸಗಳು.

೩೮. ಶ್ರೀರಾಮನ ಎಡಗಡೆಯಲ್ಲಿ ಕುಳಿತಿರುವ ಮಂಗಳಾಂಗಿಯಾದ ಜಿಂಕೆಯ ಕಣ್ಣಿನಂತೆ ಕಣ್ಣುಗಳುಳ್ಳ ವಿಪ್ರರನ್ನು ಪಾಲಿಸುವ ಚಂದ್ರನಂತೆ ಮುಖವುಳ್ಳ ಮಿಂಚುಗಳ ಗುಂಪಿನಂತೆ ಪ್ರಕಾಶಮಾನವಾದ ಬಟ್ಟೆಗಳುಳ್ಳ ಭಕ್ತರ ದುಃಖವನ್ನು ನಾಶಮಾಡುವ ಶ್ರೀ ರಾಘವನ ಪಾದಪದ್ಮಗಳಲ್ಲಿಯೇ ಕಣ್ಣುಗಳನ್ನಿಟ್ಟಿರುವ ಸೀತೆಯು ನಮ್ಮನ್ನು ರಕ್ಷಿಸಲಿ.

೩೯. ಶ್ರೀ ಸೀತಾ–ಸೀತೆಯೆಂದರೆ ನೇಗಲಿನಗೆರೆ ಅದರಲ್ಲಿ ಹುಟ್ಟಿದುದರಿಂದ ಸೀತೆಯು. ಜಾನಕಿ-ಜನಕನಿಂದ ಪರಿಪಾಲಿತದಳಾದುದರಿಂದ ಜಾನಕಿಯು, ದೇವಿ–ರಮ್ಯವಾಗಿ ಕ್ರೀಡಿಸುವವಳು, ವೈದೇಹೀ-ವಿದೇಹವೆಂಬ ರಾಜ್ಯದವಳು. ರಾಘವಪ್ರಿಯಾ-ರಾಮನಿಗೆ ಪ್ರೀತಿಪಾತ್ರಳು, ರಮಾ-ಮನೋಹರವಾಗಿರುವವಳು. ಅವನಿಸುತಾ–ಭೂಮಿಯ ಮಗಳು, ರಾಮಾ-ಸುಂದರಿಯು, ರಾಕ್ಷಸಾಂತಪ್ರಕಾರಿಣೀ–ರಾಕ್ಷಸರನ್ನು ಕೊನೆಗಾಣಿಸುವವಳು ಎಂದರೆ ರಾಕ್ಷಸರನ್ನು ಕೊಲ್ಲುವವಳು.

ರತ್ನಗುಪ್ತಾ ಮಾತುಲಿಂಗೀ ಮೈಥಿಲೀ ಭಕ್ತತೋಷದಾ ।
ಪದ್ಮಾಕ್ಷಜಾ ಕಂಜನೇತ್ರಾ ಸ್ಮಿತಾಸ್ಯಾ ನೂಪುರಸ್ವನಾ ॥ ೪೦ ॥
ವೈಕುಂಠನಿಲಯಾ ಮಾ ಶ್ರೀರ್ಮುಕ್ತಿದಾ ಕಾಮಪೂರಿಣೀ ।
ನೃಪಾತ್ಮಜಾ ಹೇಮವರ್ಣಾ ಮೃದುಲಾಂಗೀ ಸುಭಾಷಿಣೀ ॥ ೪೧ ॥
ಕುಶಾಂಬಿಕಾ ದಿವ್ಯದಾ ಚ ಲವಮಾತಾ ಮನೋಹರಾ ।
ಹನೂಮದ್ವಂದಿತಪದಾ ಮುಗ್ಧಕೇಯೂರಧಾರಿಣೀ ॥ ೪೨ ॥
ಅಶೋಕವನಮಧ್ಯಸ್ಥಾ ರಾವಣಾದಿಕಮೋಹಿನೀ ।
ವಿಮಾನಸಂಸ್ಥಿತಾ ಸುಭ್ರೂಸ್ಸುಕೇಶೀ ರಶನಾನ್ವಿತಾ ॥ ೪೩ ॥

---

೪೦. ರತ್ನಗುಪ್ತಾ--ರತ್ನದಲ್ಲಿ ಕಾಣದಂತೆ ಸೇರಿಕೊಂಡವಳು, ಮಾತುಲಿಂಗೀ-ಮಾದಲದ ಹಣ್ಣಿನಲ್ಲಿ ಹುಟ್ಟಿದವಳು. ಭಕ್ತತೋಷದಾ-ಭಕ್ತರಿಗೆ ಸಂತೋಷವನ್ನುಂಟುಮಾಡುವವಳು. ಪದ್ಮಾಕ್ಷಜಾ-ಪದ್ಮಾಕ್ಷನಿಂದ ಉತ್ಪನ್ನಳಾದವಳು, ಕಂಜನೇತ್ರಾ-ಕಮಲದಂತೆ ಕಣ್ಣುಗಳುಳ್ಳವಳು. ಸ್ಮಿತಾಸ್ಯಾ-ನಗುಮುಖವನ್ನುಳ್ಳವಳು. ನೂಪುರಸ್ವನಾ-ಕಾಲುಕಡಗಗಳ ಧ್ವನಿಯುಳ್ಳವಳು.

೪೧. ವೈಕುಂಠನಿಲಿಯಾ-ವೈಕುಂಠವೇ ಸ್ಥಾನವಾಗಿ ಉಳ್ಳವಳು, ಮಾ-ಲಕ್ಷ್ಮಿಯು, ಶ್ರೀ-ಕಾಂತಿಯುಕ್ತಳು, ಮುಕ್ತಿದಾ-ಮುಕ್ತಿಯನ್ನು ಕೊಡತಕ್ಕವಳು, ಕಾಮಪೂರಿಣೀ-ಇಷ್ಟಾರ್ಥವನ್ನು ಪೂರ್ಣಮಾಡುವವಳು, ನೃಪಾತ್ಮಜಾ-ರಾಜಪುತ್ರಿಯು, ಹೇಮವರ್ಣಾ-ಚಿನ್ನದ ಬಣ್ಣಕ್ಕಿರುವವಳು, ಮೃದುಲಾಂಗೀ-ಕೋಮಲವಾದ ಅಂಗವುಳ್ಳವಳು, ಸುಭಾಷಿಣೀ-ಚೆನ್ನಾಗಿ ಮಾತನಾಡುವವಳು.

೪೨. ಕುಶಾಂಬಿಕಾ-ಕುಶನತಾಯಿಯು, ದಿವ್ಯದಾ-ಉತ್ತಮವಾದುವನ್ನು ಕೊಡತಕ್ಕವಳು, ಲವಮಾತಾ-ಲವನಿಗೆ ತಾಯಿಯು, ಮನೋಹರಾ-ಮನೋಹರಳು, ಹನುಮದ್ವಂದಿತಪದಾ-ಹನುಮಂತನಿಂದ ನಮಸ್ಕರಿಸಲ್ಪಟ್ಟ ಪಾದಗಳುಳ್ಳವಳು, ಮುಗ್ಧಕೇಯೂರಧಾರಿಣೀ–ಮನೋಹರಳು ಜಕೀರ್ತಿಗಳನ್ನು ಹಾಕಿಕೊಂಡಿರತಕ್ಕವಳು.

೪೩. ಅಶೋಕವನಮಧ್ಯಸ್ಥಾ–ಅಶೋಕವನದ ಮಧ್ಯದಲ್ಲಿರುವವಳು, ರಾವಣಾದಿಕಮೋಹಿನೀ-ರಾವಣನೇ ಮುಂತಾದವರನ್ನು ಮೋಹಗೊಳ್ಳವಂತೆ ಮಾಡುವವಳು, ವಿಮಾನಸಂಸ್ಥಿತಾ–ವಿಮಾನದಲ್ಲಿರುವವಳು, ಸುಭ್ರೂಃ-ಒಳ್ಳೆಯ ಹುಬ್ಬುಗಳುಳ್ಳವಳು, ಸುಕೇಶೀ-ಚೆನ್ನಾಗಿರುವ ತಲೆಗೂದಲುಳ್ಳವಳು, ರಶನಾನ್ವಿತಾ-ಒಡ್ಡಿಯಾಣ [ಡಾಬನ್ನು]ವನ್ನು ಹಾಕಿಕೊಂಡಿರುವವಳು.

ರಜೋರೂಪಾ ಸತ್ವರೂಪಾ ತಾಮಸೀ ವಹ್ನಿವಾಸಿನೀ ।
ಹೇಮಮೃಗಾಸಕ್ತಚಿತ್ತಾ ವಾಲ್ಮೀಕ್ಯಾಶ್ರಮವಾಸಿನೀ ॥ ೪೪ ॥
ಪತಿವ್ರತಾ ಮಹಾಮಾಯಾ ಪೀತಕೌಶೇಯವಾಸಿನೀ ।
ಮೃಗನೇತ್ರಾ ಚ ಬಿಂಬೋಷ್ಠೀ ಧನುರ್ವಿದ್ಯಾವಿಶಾರದಾ ॥ ೪೫ ॥
ಸೌಮ್ಯರೂಪಾ ದಶರಥಸ್ನುಷಾ ಚಾಮರವೀಜಿತಾ ।
ಸುಮೇಧಾದುಹಿತಾ ದಿವ್ಯರೂಪಾ ತ್ರೈಲೋಕ್ಯಪಾಲಿನೀ ॥ ೪೬ ॥
ಅನ್ನಪೂರ್ಣಾ ಮಹಾಲಕ್ಷ್ಮೀರ್ಧೀರ್ಲಜ್ಜಾ ಚ ಸರಸ್ವತೀ ।
ಶಾಂತಿಃ ಪುಷ್ಟಿಃ ಕ್ಷಮಾ ಗೌರೀ ಪ್ರಭಾಯೋಧ್ಯಾನಿವಾಸಿನೀ ॥ ೪೭ ॥

---

೪೪. ರಜೋರೂಪಾ-ರಜೋಗುಣದ ಸ್ವರೂಪಳು, ಸತ್ವರೂಪಾ-ಸತ್ವ ಗುಣದ ಸ್ವರೂಪಳು, ತಾಮಸೀ-ತಮೋಗುಣದ ರೂಪಳು, ವಹ್ನಿವಾಸಿನೀ-ಅಗ್ನಿಯಲ್ಲಿ ವಾಸಮಾಡುವವಳು, ಹೇಮಮೃಗಾಸಕ್ತಚಿತ್ತಾ-ಚಿನ್ನದ ವರ್ಣವುಳ್ಳ ಜಿಂಕೆಯಲ್ಲಿ ಅಪೇಕ್ಷೆಯುಳ್ಳವಳು, ವಾಲ್ಮೀಕ್ಯಾಶ್ರಮವಾಸಿನೀ-ವಾಲ್ಮೀಕಿಯ ಆಶ್ರಮದಲ್ಲಿ ವಾಸಿಸುವವಳು.

೪೫. ಪತಿವ್ರತಾ-ಪತಿವ್ರತೆಯು, ಮಹಾಮಾಯಾ-ಮಹಾಮಾಯಾ ಸ್ವರೂಪಳು, ಪೀತಕೌಶೇಯವಾಸಿನೀ-ಹೊಂಬಣ್ಣದ ರೇಷ್ಮೆಯ ಬಟ್ಟೆಯನ್ನು ಧರಿಸಿರುವವಳು, ಮೃಗನೇತ್ರಾ-ಜಿಂಕೆಯ ಕಣ್ಣಿನಂತೆ ಕಣ್ಣುಳ್ಳವಳು, ಬಿಂಬೋಷ್ಠೀ-ತೊಂಡೆಯ ಹಣ್ಣಿನಂತೆ ತುಟಿಯುಳ್ಳವಳು, ಧನುರ್ವಿದ್ಯಾ ವಿಶಾರದಾ-ಧನುರ್ವಿದ್ಯೆಯಲ್ಲಿ ಪಂಡಿತಳು.

೪೬. ಸೌಮ್ಯರೂಪಾ-ಸಾಧುವಾದ ಸ್ವಭಾವದವಳು, ದಶರಥಸ್ನುಷಾ-ದಶರಥನ ಸೊಸೆಯು, ಚಾಮರವೀಜಿತಾ-ಚಾಮರದಿಂದ ಬೀಸಿಸಿಕೊಳ್ಳುವವಳು, ಸುಮೇಧಾದುಹಿತಾ-ಸುಮೇಧೆಯ ಮಗಳು, ದಿವ್ಯರೂಪಾ-ದಿವ್ಯವಾದ ರೂಪುಳ್ಳವಳು ತ್ರೈಲೋಕ್ಯಪಾಲಿನೀ-ಮೂರುಲೋಕವನ್ನೂ ರಕ್ಷಿಸುವವಳು.

೪೭. ಅನ್ನಪೂರ್ಣಾ-ಅನ್ನದಿಂದ ಕೂಡಿರುವಳು. ಅನ್ನಪೂರ್ಣೆ ಎಂಬ ಹೆಸರುಳ್ಳವಳು, ಮಹಾಲಕ್ಷ್ಮೀಃ-ಮಹಾ ಲಕ್ಷ್ಮಿಯು, ಧೀಃ-ಬುದ್ಧಿರೂಪಳು, ಲಜ್ಜಾ ನಾಚಿಕೆಯ ಸ್ವರೂಪಳು, ಸರಸ್ವತೀ-ಸರಸ್ವತಿಯ ರೂಪಳು, ಶಾಂತಿಃ-ಶಾಂತಿಸ್ವರೂಪಳು, ಪುಷ್ಟಿಃ-ಪುಷ್ಟಿಸ್ವರೂಪಳು, ಕ್ಷಮಾ-ಕ್ಷಮಾರೂಪಳು, ಗೌರೀ-ಗೌರವರ್ಣವುಳ್ಳವಳು, ಪ್ರಭಾ-ಕಾಂತಿರೂಪಳು, ಅಯೋಧ್ಯಾನಿವಾಸಿನೀ ಅಯೋಧ್ಯೆಯಲ್ಲಿರುವವಳು.

ವಸಂತಸೀತಲಾಗೌರೀಸ್ನಾನಸಂತುಷ್ಟಮಾನಸಾ ।
ರಮಾನಾಮಭದ್ರಸಂಸ್ಥಾ ಹೇಮಕುಂಭಪಯೋಧರಾ ॥ ೪೮ ॥
ಸುರಾರ್ಚಿತಾ ಧೃತಿಃ ಕಾಂತಿಃ ಸ್ಮೃತಿರ್ಮೇಧಾ ವಿಭಾವರೀ ।
ಲಘೂದರಾ ವರಾರೋಹಾ ಹೇಮಕಂಕಣಮಂಡಿತಾ ॥ ೪೯ ॥
ದ್ವಿಜಪತ್ನ್ಯರ್ಪಿತನಿಜಭೂಷಾ ರಾಘವತೋಷಿಣೀ ।
ಶ್ರೀರಾಮಸೇವನರತಾ ರತ್ನತಾಟಂಕಧಾರಿಣೀ ॥ ೫೦ ॥
ರಾಮವಾಮಾಂಕಸಂಸ್ಥಾ ಚ ರಾಮಚಂದ್ರೈಕರಂಜಿನೀ ।
ಸರಯೂಜಲಸಂಕ್ರೀಡಾಕಾಮಿನೀ ರಾಮಮೋಹಿನೀ ॥ ೫೧ ॥

---

೪೮. ವಸಂತಶೀತಳಾ ಗೌರೀಸ್ನಾನ ಸಂತುಷ್ಟಮಾನಸಾ-ಚೈತ್ರಮಾಸ ದಲ್ಲಿ ಶಿತಳಾಗೌರಿ ಎಂಬ ವ್ರತದ ಸ್ನಾನಮಾಡುವುದರಿಂದ ಸಂತೋಷಗೊಳ್ಳುವ ಮನಸ್ಸುಳ್ಳವಳು, ರಮಾನಾಮ-ರಮೆಯೆಂಬ ಹೆಸರುಳ್ಳವಳು ಭದ್ರಸಂಸ್ಥಾ-ಭದ್ರವೆಂಬ ಆಸನದಲ್ಲಿ ಕುಳಿತಿರುವವಳು. ಅಥವಾ ಮಂಗಳವಿದ್ದೆಡೆಯಲ್ಲಿ ಇರುವವಳು, ಹೇಮಕುಂಭಪಯೋಧರಾ-ಚಿನ್ನದ ಬಿಂದಿಗೆಯಂತಿರುವ ಸ್ತನ ಗಳುಳ್ಳವಳು.

೪೯. ಸುರಾರ್ಚಿತಾ-ದೇವತೆಗಳಿಂದ ಪೂಜಿತಳಾದವಳು, ಧೃತಿ-ಧೈರ್ಯ ರೂಪಳು, ಕಾಂತಿಃ-ಕಾಂತಿರೂಪಳು, ಸ್ಮೃತಿಃ-ಸ್ಮರಣೆರೂಪಳು, ಮೇಧಾ-ಮೇಧೆಯೆಂಬ ಗ್ರಹಣಶಕ್ತಿಯ ಸ್ವರೂಪಳು, ವಿಭಾವರೀ-ರಾತ್ರಿರೂಪಳು, ಲಘೂದರಾ-ಹೊಟ್ಟೆಯು ಸಣ್ಣಗಿರುವವಳು, ವರಾರೋಹಾ-ಉತ್ತಮಳಾದ ಹೆಂಗಸು, ಹೇಮಕಂಕಣಮಂಡಿತಾ-ಚಿನ್ನದ ಬಳೆಗಳುಳ್ಳವಳು.

೫೦. ದ್ವಿಜಪತ್ನ್ಯರ್ಪಿತನಿಜಭೂಷಾ-ಬ್ರಾಹ್ಮಣನ ಹೆಂಗಸಿಗೆ ತನ್ನ ಒಡವೆ ಗಳನ್ನು ಕೊಟ್ಟವಳು, ರಾಘವತೋಷಿಣೀ-ರಾಮನಿಗೆ ಯಾವಾಗಲೂ ಸಂತೋಷ ವನ್ನುಂಟುಮಾಡುವವಳು, ಶ್ರೀರಾಮಸೇವನರತಾ-ಶ್ರೀರಾಮನನ್ನು ಸೇವಿಸುವು ದರಲ್ಲಿ ಆಸಕ್ತಳಾದವಳು. ರತ್ನತಾಟಂಕಧಾರಿಣೀ-ರತ್ನದ ಕಿವಿಯೋಲೆಗಳನ್ನು ಧರಿಸಿರುವವಳು.

೫೧. ರಾಮವಾಮಾಂಕಸಂಸ್ಥಾ-ರಾಮನ ಎಡಗಡೆಯಲ್ಲಿ ಕುಳಿತಿರು ವವಳು, ರಾಮಚಂದ್ರೈಕರಂಜಿನೀ-ರಾಮಚಂದ್ರನನ್ನು ಸಂತೋಷಪಡಿಸುವವಳು ಸರಯೂ ಜಲಸಂಕ್ರೀಡಾ-ಸರಯೂ ನೀರಿನಲ್ಲಿ ಕ್ರೀಡಿಸುವವಳು, ಕಾಮಿನೀ-ಕಾಮವುಳ್ಳವಳು, ರಾಮಮೋಹಿನೀ-ರಾಮನನ್ನು ಮೋಹಗೊಳಿಸುವವಳು.

ಸುವರ್ಣತುಲಿತಾ ಪುಣ್ಯಾ ಪುಣ್ಯಕೀರ್ತಿಃ ಕಲಾವತೀ ।
ಕಲಕಂಠಾ ಕಂಬುಕಂಠಾ ರಂಭೋರೂರ್ಗಜಗಾಮಿನೀ ॥ ೫೨ ॥

ರಾಮಾರ್ಪಿತಮನಾ ರಾಮವಂದಿತಾ ರಾಮವಲ್ಲಭಾ ।
ಶ್ರೀರಾಮಪದಚಿಹ್ನಾಂಕಾ ರಾಮರಾಮೇತಿಭಾಷಿಣೀ ॥ ೫೩ ॥

ರಾಮಪರ್ಯಂಕಶಯನಾ ರಾಮಾಂಘ್ರಿಕ್ಷಾಳನಾತುರಾ ।
ಕಾಮಧೇನ್ವನ್ನಸಂತುಷ್ಟಾ ಮಾತುಲಿಂಗಫಲೋತ್ಕರಾ ॥ ೫೪ ॥

ದಿವ್ಯಚಂದನಸಂಸ್ಥಾ ಶ್ರೀಮೂರ್ಲಕಾಸುರಮರ್ದಿನೀ ।
ಏವಮಷ್ಟೋತ್ತರಶತಂ ಸೀತಾನಾಮ್ನಾಂ ಸುಪುಣ್ಯದಂ ॥ ೫೫ ॥

---

೫೨. ಸುವರ್ಣತುಲಿತಾ-ಚಿನ್ನದಿಂದ ತೂಗಿಸಿಕೊಂಡವಳು, ಪುಣ್ಯಾಃ-ಪುಣ್ಯಸ್ವರೂಪಳು, ಪುಣ್ಯಕೀರ್ತಿಃ-ಪುಣ್ಯವನ್ನು ಕೊಡುವ ಕೀರ್ತಿಯುಳ್ಳವಳು ಕಲಾವತೀಃ-ವಿದ್ಯೆಯನ್ನು ಬಲ್ಲವಳು, ಕಲಕಂಠಾ-ಮಧುರಸ್ವರವುಳ್ಳವಳು, ಕಂಬುಕಂಠಾ-ಶಂಖದಂತೆ ಕತ್ತುಳ್ಳವಳು. ರಂಭೋರೂಃ-ಬಾಳೆಯ ಮರದಂತೆ ತೊಡೆಗಳುಳ್ಳವಳು, ಗಜಗಾಮಿನೀ-ಆನೆಯಂತೆ ನಡೆಯುವವಳು.

೫೩. ರಾಮಾರ್ಪಿತಮನಾಃ-ರಾಮನಲ್ಲಿಯೇ ಮನಸ್ಸನ್ನು ಇಟ್ಟಿರುವವಳು, ರಾಮವಂದಿತಾ-ರಾಮನಿಂದ ನಮಸ್ಕೃತಳು, ರಾಮವಲ್ಲಭಾ-ರಾಮನಿಗೆ ಪ್ರಿಯಳು ಶ್ರೀರಾಮಪದಚಿಹ್ನಾಂಕಾ-ಶ್ರೀರಾಮನ ಪಾದಗಳ ಚಿಹ್ನೆಗಳನ್ನು ಗುರುತಾಗಿ ಉಳ್ಳವಳು, ರಾಮರಾಮೇತಿಭಾಷಿಣೀ-ರಾಮರಾಮ ಎಂದು ಹೇಳುತ್ತಿರುವವಳು.

೫೪. ರಾಮಪರ್ಯಂಕಶಯನಾ-ರಾಮನ ಹಾಸಿಗೆಯಲ್ಲಿ ಮಲಗುವವಳು, ರಾಮಾಂಘ್ರಿಕ್ಷಾಳನಾತುರಾ-ರಾಮನ ಪಾದಗಳನ್ನು ತೊಳೆಯುವುದರಲ್ಲಿ ಅವಸರವುಳ್ಳವಳು, ಕಾಮಧೇನ್ವನ್ನಸಂತುಷ್ಟಾ-ಕಾಮಧೇನುವು ಕೊಡುವ ಅನ್ನದಿಂದ ತೃಪ್ತಳಾದವಳು, ಮಾತುಲಿಂಗಫಲೋತ್ಕರಾ-ಮಾದಲದ ಹಣ್ಣನ್ನು ಕೈಯ್ಯಲ್ಲಿ ಹಿಡಿದಿರುವವಳು.

೫೫. ದಿವ್ಯಚಂದನಸಂಸ್ಥಾ-ದಿವ್ಯವಾದ ಚಂದನದಲ್ಲಿ ಇರುವವಳು, ಮೂಲಕಾಸುರನನ್ನು ಕೊಂದವಳು, ಈ ರೀತಿಯಾಗಿ ಸೀತೆಯ ನಾಮಗಳು ನೂರೆಂಟಿವೆ. ಇವು ಪುಣ್ಯವನ್ನು ಕೊಡುತ್ತವೆ.

ಶ್ರೀ ಸೀತಾಷ್ಟೋತ್ತರಂ

ಓಂ ಶ್ರೀ ಸೀತಾಯೈ ನಮಃ
ಓಂ ಜಾನಕ್ಯೈ ನಮಃ
ಓಂ ದೇವ್ಯೈ ನಮಃ
ಓಂ ವೈದೇಹ್ಯೈ ನಮಃ
ಓಂ ರಾಘವಪ್ರಿಯಾಯೈ ನಮಃ
ಓಂ ರಮಾಯೈ ನಮಃ
ಓಂ ಅವನಿಸುತಾಯೈ ನಮಃ
ಓಂ ರಾಮಾಯೈ ನಮಃ
ಓಂ ರಾಕ್ಷಸಾಂತಪ್ರಕಾರಿಣ್ಯೈ ನಮಃ
ಓಂ ರತ್ನಗುಪ್ತಾಯೈ ನಮಃ ॥ ೧೦ ॥
ಓಂ ಮಾತುಲಿಂಗ್ಯೈ ನಮಃ
ಓಂ ಮೈಥಿಲ್ಯೈ ನಮಃ
ಓಂ ಭಕ್ತತೋಷದಾಯೈ ನಮಃ
ಓಂ ಪದ್ಮಾಕ್ಷಜಾಯೈ ನಮಃ
ಓಂ ಕಂಜನೇತ್ರಾಯೈ ನಮಃ
ಓಂ ಸ್ಮಿತಾಸ್ಯಾಯೈ ನಮಃ
ಓಂ ನೂಪುರಸ್ವನಾನ್ಯೈ ನಮಃ
ಓಂ ವೈಕುಂಠನಿಲಯಾಯೈ ನಮಃ
ಓಂ ಮಾಯೈ ನಮಃ
ಓಂ ಶ್ರಿಯೈ ನಮಃ ॥ ೨೦ ॥
ಓಂ ಮುಕ್ತಿದಾಯೈ ನಮಃ
ಓಂ ಕಾಮಪೂರಿಣ್ಯೈ ನಮಃ
ಓಂ ನೃಪಾತ್ಮಜಾಯೈ ನಮಃ
ಓಂ ಪೀತಕೌಶೇಯವಾಸಿನ್ಯೈ ನಮಃ
ಓಂ ಮೃಗನೇತ್ರಾಯೈ ನಮಃ
ಓಂ ಬಿಂಬೋಷ್ಠ್ಯೈ ನಮಃ
ಓಂ ಧನುರ್ವಿದ್ಯಾವಿಶಾರದಾಯೈ ನಮಃ
ಓಂ ಸೌಮ್ಯರೂಪಾಯೈ ನಮಃ
ಓಂ ಹೇಮವರ್ಣಾಯೈ ನಮಃ
ಓಂ ಮೃದುಲಾಂಗ್ಯೈ ನಮಃ
ಓಂ ಸುಭಾಷಿಣ್ಯೈ ನಮಃ
ಓಂ ಕುಶಾಂಬಿಕಾಯೈ ನಮಃ
ಓಂ ದಿವ್ಯದಾಯೈ ನಮಃ
ಓಂ ಲವಮಾತ್ರೇ ನಮಃ
ಓಂ ಮನೋಹರಾಯೈ ನಮಃ ॥ ೩೦ ॥
ಓಂ ಹನುಮದ್ವಂದಿತಪದಾಯೈ ನಮಃ
ಓಂ ಮುಗ್ಧಕೇಯೂರಧಾರಿಣ್ಯೈ ನಮಃ
ಓಂ ಅಶೋಕವನಮಧ್ಯಸ್ಥಾಯೈ ನಮಃ
ಓಂ ರಾವಣಾದಿಕಮೋಹಿನ್ಯೈ ನಮಃ
ಓಂ ವಿಮಾನಸಂಸ್ಥಿತಾಯೈ ನಮಃ
ಓಂ ಸುಭ್ರುವೇ ನಮಃ
ಓಂ ಸುಕೇಶ್ಯೈ ನಮಃ
ಓಂ ರಶನಾನ್ವಿತಾಯೈ ನಮಃ
ಓಂ ರಜೋರೂಪಾಯೈ ನಮಃ ॥ ೪೦ ॥
ಓಂ ಸತ್ವರೂಪಾಯೈ ನಮಃ
ಓಂ ತಾಮಸ್ಯೈ ನಮಃ
ಓಂ ವಹ್ನಿವಾಸಿನ್ಯೈ ನಮಃ
ಓಂ ಹೇಮಮೃಗಾಸಕ್ತಚಿತ್ತಾಯೈ ನಮಃ
ಓಂ ವಾಲ್ಮೀಕ್ಯಾಶ್ರಮವಾಸಿನ್ಯೈ ನಮಃ
ಓಂ ಪತಿವ್ರತಾಯೈ ನಮಃ
ಓಂ ಮಹಾಮಾಯಾಯೈ ನಮಃ
ಓಂ ಭದ್ರಸಂಸ್ಥಾಯೈ ನಮಃ ॥ ೫೦ ॥
ಓಂ ಹೇಮಕುಂಭಪಯೋಧರಾಯೈ ನಮಃ
ಓಂ ಸುರಾರ್ಚಿತಾಯೈ ನಮಃ
ಓಂ ಧೃತ್ಯೈ ನಮಃ
ಓಂ ಕಾಂತ್ಯೈ ನಮಃ

ಓಂ ದಶರಥಸ್ನುಷಾಯೈ ನಮಃ

ಓಂ ಚಾಮರವೀಜಿತಾಯೈ ನಮಃ

ಓಂ ಸುಮೇಧಾದುಹಿತ್ರೇ ನಮಃ

ಓಂ ದಿವ್ಯರೂಪಾಯೈ ನಮಃ

ಓಂ ತ್ರೈಲೋಕ್ಯಪಾಲಿನ್ಯೈ ನಮಃ

ಓಂ ಅನ್ನಪೂರ್ಣಾಯೈ ನಮಃ

ಓಂ ಮಹಾಲಕ್ಷ್ಮ್ಯೈ ನಮಃ

ಓಂ ಧಿಯೇ ನಮಃ

ಓಂ ಲಜ್ಜಾಯೈ ನಮಃ || ೬೦ ||

ಓಂ ಸರಸ್ವತ್ಯೈ ನಮಃ

ಓಂ ಶಾಂತ್ಯೈ ನಮಃ

ಓಂ ಪುಷ್ಟ್ಯೈ ನಮಃ

ಓಂ ಕ್ಷಮಾಯೈ ನಮಃ

ಓಂ ಗೌರ್ಯೈ ನಮಃ

ಓಂ ಪ್ರಭಾಯೈ ನಮಃ

ಓಂ ಅಯೋಧ್ಯಾನಿವಾಸಿನ್ಯೈ ನಮಃ

ಓಂ ವಸಂತಸೀತಲಾಗೌರೀಸ್ನಾನ ಸಂತುಷ್ಟಮಾನಸಾಯೈ ನಮಃ

ಓಂ ರಮಾನಾಮ್ನ್ಯೈ ನಮಃ

ಓಂ ಪುಣ್ಯಕೀರ್ತ್ಯೈ ನಮಃ

ಓಂ ಕಲಾವತ್ಯೈ ನಮಃ

ಓಂ ಕಲಕಂಠಾಯೈ ನಮಃ

ಓಂ ಕಂಬುಕಂಠಾಯೈ ನಮಃ

ಓಂ ರಂಭೋರವೇ ನಮಃ

ಓಂ ಗಜಗಾಮಿನ್ಯೈ ನಮಃ

ಓಂ ರಾಮಾರ್ಪಿತಮನಸೇ ನಮಃ

ಓಂ ರಾಮಮುದಿತಾಯೈ ನಮಃ ||

ಓಂ ಸ್ಮೃತ್ಯೈ ನಮಃ

ಓಂ ಮೇಧಾಯೈ ನಮಃ

ಓಂ ವಿಭಾವರ್ಯೈ ನಮಃ

ಓಂ ಲಘೂದರಾಯೈ ನಮಃ

ಓಂ ವರಾರೋಹಾಯೈ ನಮಃ

ಓಂ ಹೇಮಕಂಕಣಮಂಡಿತಾಯೈ ನಮಃ || ೮೦ ||

ಓಂ ದ್ವಿಜಪತ್ನ್ಯರ್ಪಿತನಿಜಭೂಷಾಯೈ ನಮಃ

ಓಂ ರಾಘವತೋಷಿಣ್ಯೈ ನಮಃ

ಓಂ ಶ್ರೀರಾಮಸೇವನಿರತಾಯೈ ನಮಃ

ಓಂ ರತ್ನತಾಟಂಕಧಾರಿಣ್ಯೈ ನಮಃ

ಓಂ ರಾಮವಾಮಾಂಕಸಂಸ್ಥಾಯೈ ನಮಃ

ಓಂ ರಾಮಚಂದ್ರೈಕರಂಜಿನ್ಯೈ ನಮಃ

ಓಂ ಸರಯೂಜಲಸಂಕ್ರೀಡಾಯೈ ನಮಃ

ಓಂ ಕಾಮಿನ್ಯೈ ನಮಃ

ಓಂ ರಾಮಮೋಹಿನ್ಯೈ ನಮಃ || ೯೦ ||

ಓಂ ಸುವರ್ಣತುಲಿತಾಯೈ ನಮಃ

ಓಂ ಪುಣ್ಯಾಯೈ ನಮಃ

ಓಂ ರಾಮವಲ್ಲಭಾಯೈ ನಮಃ

ಓಂ ಶ್ರೀರಾಮಪದಚಿಹ್ನಾಂಕಾಯೈ ನಮಃ

ಓಂ ರಾಮರಾಮೇತಿಭಾಷಿಣ್ಯೈ ನಮಃ

ಓಂ ರಾಮಪರ್ಯಂಕಶಯನಾಯೈ ನಮಃ

ಓಂ ರಾಮಾಂಘ್ರಿಕ್ಷಾಲನಾತುರಾಯೈ ನಮಃ

ಓಂ ಕಾಮಧೇನ್ವನ್ನಸಂತುಷ್ಟಾಯೈ ನಮಃ

ಓಂ ಮಾತುಲಿಂಗಫಲೋತ್ಕರಾಯೈ ನಮಃ

ಓಂ ದಿವ್ಯಚಂದನಸಂಸ್ಥಾಯೈ ನಮಃ

ಶ್ರೀ ಮೂಲಕಾಸುರ ಮರ್ದಿನ್ಯೈ ನಮಃ || ೧೦೮ ||

ಯೇ ಪಠಂತಿ ನರಾ ಭೂಮ್ಯಾಂ ತೇ ಧನ್ಯಾಃ ಸ್ವರ್ಗಗಾಮಿನಃ ।
ಅಷ್ಟೋತ್ತರಶತಂ ನಾಮ್ನಾಂ ಸೀತಾಯಾಃ ಸ್ತೋತ್ರಮುತ್ತಮಂ ॥ ೫೬ ॥

ಜಪನೀಯಂ ಪ್ರಯತ್ನೇನ ಸರ್ವದಾ ಭಕ್ತಿಪೂರ್ವಕಂ ।
ಸಂತಿ ಸ್ತೋತ್ರಾಣ್ಯನೇಕಾನಿ ಪುಣ್ಯದಾನಿ ಮಹಾಂತಿ ಚ ॥ ೫೭ ॥

ನಾನೇನ ಸದೃಶಾನೀಹ ತಾನಿ ಸರ್ವಾಣಿ ಭೂಸುರ ।
ಸ್ತೋತ್ರಾಣಾಮುತ್ತಮಂ ಚೇದಂ ಭುಕ್ತಿಮುಕ್ತಿಪ್ರದಂ ನೃಣಾಂ ॥ ೫೮ ॥

ಏವಂ ಸುತೀಕ್ಷ್ಣ ತೇ ಪ್ರೋಕ್ತಮಷ್ಟೋತ್ತರಶತಂ ಶುಭಂ ।
ಸೀತಾನಾಮ್ನಾಂ ಪುಣ್ಯದಂ ಚ ಶ್ರವಣಾನ್ಮಂಗಳಪ್ರದಂ ॥ ೫೯ ॥

ನರೈಃ ಪ್ರಾತಸ್ಸಮುತ್ಥಾಯ ಪಠಿತವ್ಯಂ ಪ್ರಯತ್ನತಃ ।
ಸೀತಾಪೂಜನಕಾಲೇಽಪಿ ಸರ್ವವಾಂಛಿತದಾಯಕಂ ॥ ೬೦ ॥

---

೫೬. ಈ ಸೀತಾಷ್ಟೋತ್ತರವನ್ನು ಹೇಳುವರು ಧನ್ಯರು. ಅವರು ಸ್ವರ್ಗಕ್ಕೆ ಹೋಗುವರು. ಸೀತೆಯ ಅಷ್ಟೋತ್ತರವು ಉತ್ತಮವಾದುವು

೫೭-೫೮. ಪ್ರಯತ್ನಪಟ್ಟು ಭಕ್ತಿಯಿಂದ ಜಪಿಸಬೇಕು. ಪ್ರಪಂಚದಲ್ಲಿ ಉತ್ತಮವಾದ ಮತ್ತು ಪುಣ್ಯಪ್ರದವಾದ ಅನೇಕ ಸ್ತೋತ್ರಗಳಿವೆ. ಅವುಗಳಲ್ಲಿ ಒಂದೂ ಕೂಡ ಈ ಸ್ತೋತ್ರಕ್ಕೆ ಸಮವಾಗುವುದಿಲ್ಲ. ಸ್ತೋತ್ರಗಳಲ್ಲಿ ಇದು ಉತ್ತಮವು. ಜನರಿಗೆ ಭಕ್ತಿಯನ್ನೂ ಮುಕ್ತಿಯನ್ನೂ ಕೊಡುತ್ತವೆ.

೫೯. ಎಲೈ ಸುತೀಷ್ಣನೇ! ಈ ರೀತಿಯಾಗಿರುವ ಶುಭವಾದ ಸೀತೆಯ ಅಷ್ಟೋತ್ತರವನ್ನು ಹೇಳಿದ್ದೇನೆ. ಇದು ಬಹು ಪುಣ್ಯವನ್ನು ಕೊಡುತ್ತದೆ. ಕೇಳುವುದರಿಂದ ಮಂಗಳವನ್ನುಂಟುಮಾಡುತ್ತದೆ.

೬೦. ಜನರು ಬೆಳಗ್ಗೆ ಎದ್ದು ಕೂಡಲೇ ಪ್ರಯತ್ನಪಟ್ಟು ಹೇಳಬೇಕು. ಸೀತೆಯ ಪೂಜೆಯ ಕಾಲದಲ್ಲಿ ಹೇಳಿದರೆ ಇಷ್ಟಾರ್ಥಗಳನ್ನೆಲ್ಲಾ ಕೊಡುತ್ತದೆ.

ಅನ್ಯತ್ಸೀತಾತೋಷದಾನಿ ವ್ರತಾದೀನಿ ಮಹಾಂತಿ ಚ ।
ಯಾನಿ ಸಂತ್ಯದ್ಯ ತೇ ಶಿಷ್ಯ ತಾನಿ ಸಮ್ಯಗ್ವದಾಮ್ಯಹಂ ॥ ೬೧ ॥

ನಾರೀಭಿಸ್ತು ಸದಾ ಕಾರ್ಯಂ ಸೀತಾಯಾಸ್ತುಷ್ಟಿಹೇತವೇ ।
ವಸಂತಸೀತಲಾಗೌರೀಸ್ನಾನಂ ತೀರ್ಥೇ ತು ತತ್ಕೃತೇ ॥ ೬೨ ॥

ಯತ್ರ ಸೀತಾಕೃತಂ ತೀರ್ಥಂ ರಾಮತೀರ್ಥಂ ನ ವರ್ತತೇ ।
ತದಾ ಲಕ್ಷ್ಮ್ಯಾಶ್ಚ ಗೌರ್ಯಾಶ್ಚ ಸರಸ್ವತ್ಯಾದಿಯೋಷಿತಾಂ ॥ ೬೩ ॥

ತೀರ್ಥೇಷು ಚ ಸದಾ ಕಾರ್ಯಂ ತದಭಾವೇ ನದೀಷು ಚ ।
ಯತ್ರ ಯತ್ರ ರಾಮತೀರ್ಥಂ ತದ್ವಾಮೇ ಜಾನಕೀಕೃತಂ ॥ ೬೪ ॥

ನ ಕುರ್ವಂತ್ಯತ್ರ ಯಾ ನಾರ್ಯಃ ಸ್ನಾನಂ ತಾಸ್ಸಪ್ತಜನ್ಮಸು ।
ಭವಂತಿ ವಿಧವಾಸ್ತಸ್ಮಾತ್ಸದಾ ಸ್ನಾನಂ ಸಮಾಚರೇತ್ ॥ ೬೫ ॥

---

೬೧. ಎಲೈ ಶಿಷ್ಯನೇ ! ಸೀತೆಗೆ ಸಂತೋಷವನ್ನುಂಟುಮಾಡುವ ಬೇರೆಯು ದಾದ ಮಹಾ ವ್ರತಗಳನ್ನು ಹೇಳುತ್ತೇನೆ. ಅವನ್ನು ಒಂದೇ ಮನಸ್ಸಿನಿಂದ ಕೇಳು.

೬೨. ಈ ವ್ರತಗಳನ್ನು ಹೆಂಗಸರು ಸೀತೆಯನ್ನು ಸಂತೋಷಪಡಿಸಲು ಯಾವಾಗಲೂ ಮಾಡಬೇಕು. ಸೀತಾತೀರ್ಥದಲ್ಲಿ ವಸಂತಸೀತಳಾಗೌರಿಯ ಸ್ನಾನವನ್ನು ಮಾಡಲೇ ಬೇಕು.

೬೩-೬೪. ಎಲ್ಲಿ ಸೀತಾತೀರ್ಥವೂ ರಾಮತೀರ್ಥವೂ ಇರುವುದಿಲ್ಲವೋ ಅಲ್ಲಿ ಲಕ್ಷ್ಮೀಗೌರಿ ಸರಸ್ವತಿಯರ ತೀರ್ಥದಲ್ಲಿ ಸ್ನಾನಮಾಡಬೇಕು. ಅವೂ ಇಲ್ಲದಿದ್ದರೆ ನದಿಗಳಲ್ಲಿ ಸ್ನಾನಮಾಡಬೇಕು. ರಾಮತೀರ್ಥವು ಇರುವಲ್ಲಿ ಆದರ ಎಡದಲ್ಲಿಯೇ ಸೀತಾತೀರ್ಥವಿರುವುದು.

೬೫. ಈ ಸೀತಳಾಗೌರಿ ಸ್ನಾನವನ್ನು ಯಾವ ನಾರಿಯು ಮಾಡುವುದಿಲ್ಲವೋ ಆಕೆಯು ಏಳು ಜನ್ಮಗಳಲ್ಲಿಯೂ ವಿಧವೆಯಾಗಿ ಆಗುತ್ತಾಳೆ. ಆದ್ದರಿಂದ ಈ ವಸಂತಶೀತಳಾಗೌರೀ ಸ್ನಾನವನ್ನು ಮಾಡಲೇ ಬೇಕು.

॥ ಸುತೀಕ್ಷ್ಣ ಉವಾಚ ॥

ಭೋ ಗುರೋ ಶೀತಲಾಗೌರೀಸ್ನಾನಸ್ಯೋದ್ಯಾಪನಂ ಕಥಂ ।
ಸ್ತ್ರೀಭಿಃ ಕಾರ್ಯಂ ವದಸ್ವಾದ್ಯ ಸವಿಸ್ತಾರಂ ಶುಭಾವಹಂ ॥ ೬೬ ॥

॥ ಆಗಸ್ತಿರುವಾಚ ॥

ಸಮ್ಯಕ್ಪೃಷ್ಟಂ ತ್ವಯಾ ಶಿಷ್ಯ ಸುತೀಕ್ಷ್ಣ ಶ್ರುಣು ಸಾದರಂ ।
ಚೈತ್ರಮಾಸೇ ಸಿತೇ ಸ್ತ್ರೀಭಿಸ್ತೃತೀಯಾಯಾಂ ಸದಾತ್ರ ವೈ ॥ ೬೭ ॥

ಕಾರ್ಯಂ ತು ಶೀತಲಾಗೌರೀಸ್ನಾನಂ ತ್ರಿಂಶದ್ದಿನಾನಿ ಹಿ ।
ವೈಶಾಖಸ್ಯ ಸಿತೇ ಪಕ್ಷೇ ದ್ವಿತೀಯಾಯಾಮುಪೋಷ್ಯ ಚ ॥ ೬೮ ॥

ಸ್ತ್ರೀಭಿಶ್ಚ ವಿಧಿನಾ ಕಾರ್ಯಂ ನಿಶಾಯಾಮಧಿವಾಸನಂ ।
ಪೂರ್ವವಚ್ಚ ಪ್ರಕರ್ತವ್ಯಂ ಮಂಡಪಾದಿಕಮುತ್ತಮಂ ॥ ೬೯ ॥

ತತ್ರ ರಮಾನಾಮಭದ್ರಮಷ್ಟೋತ್ತರಸಹಸ್ರಕಂ ।
ಅಥವಾಷ್ಟೋತ್ತರಶತಂ ಸೂಕ್ಷ್ಮಾಣ್ಯನ್ಯಾನಿ ವಾ ಕ್ರಮಾತ್ ॥ ೭೦ ॥

---

೬೬. ಸುತೀಕ್ಷ್ಣನು ಹೇಳಿದನು–ಎಲೈ ಗುರುವೇ ! ಸೀತಳಾಗೌರೀ ಸ್ನಾನದ ಉದ್ಯಾಪನೆಯನ್ನೂ ಯಾವಾಗ ಮಾಡಬೇಕು ? ಎಂಬುದೇ ಮುಂತಾದುವನ್ನು ವಿಸ್ತಾರವಾಗಿ ಹೇಳು.

೬೭-೬೯. ಆಗಸ್ತ್ಯನು ಹೇಳಿದನು--ಎಲೈ ಶಿಷ್ಯನೇ ! ನೀನು ಚೆನ್ನಾಗಿ ಕೇಳಿದೆ. ಮನಸ್ಸಿಟ್ಟು ಕೇಳು. ಚೈತ್ರಮಾಸದ ಶುಕ್ಲಪಕ್ಷದ ತದಿಗೆಯ ದಿನ ಹೆಂಗಸು ಶೀತಳಾಗೌರಿಯ ಸ್ನಾನವನ್ನು ಮಾಡಬೇಕು. ಆ ದಿನದಿಂದ ಹಿಡಿದು ಮೂವತ್ತು ದಿನಗಳವರೆಗೂ ಮಾಡಬೇಕು. ಕಡೆಯಲ್ಲಿ ವೈಶಾಖಶುದ್ಧ ಬಿದಿಗೆಯ ದಿವಸ ಉಪವಾಸವಿರಬೇಕು. ಆದಿನ ರಾತ್ರಿಯಲ್ಲಿ ಹೆಂಗಸರು ಅಧಿವಾಸನವನ್ನು ಮಾಡಬೇಕು. ಎಲ್ಲಾ ಉದ್ಯಾಪನೆಗಳನ್ನೂ ಮಾಡುವಾಗ ಹೇಳಿರುವಂತೆಯೇ ಮಂಡಪ ಮುಂತಾದುವನ್ನು ಮಾಡಬೇಕು.

೭೦. ಆ ಮಂಡಪದೊಳಗೆ ರಮಾಭದ್ರವೆಂಬ ಮಂಡಲವನ್ನು ಒಂದು ಸಾವಿರಬಾರಿ ಬರೆಯಬೇಕು. ಆದಾಗದಿದ್ದರೆ ನೂರೆಂಟುಬಾರಿಯಾದರೂ ಬರೆಯಬೇಕು. ಇನ್ನು ಇತರ ಮಂಡಲಗಳನ್ನು ಸೂಕ್ಷ್ಮವಾಗಿ ಬರೆಯಬಹುದು.

ಸ್ಥಾಪನೀಯಂ ಮಧ್ಯದೇಶೇ ತನ್ಮಧ್ಯೇ ಪಂಕಜೋಪರಿ ।
ಧಾನ್ಯರಾಶೌ ತೋಯಪೂರ್ಣಃ ಸ್ಥಾಪನೀಯೋ ಘಟಶ್ಶುಭಃ ॥ ೭೧ ॥

ತನ್ಮುಖೇ ತಾಮ್ರ ಪಾತ್ರಂ ಚ ಸ್ಥಾಪನೀಯಂ ತು ವಿಸ್ತೃತಂ ।
ಆಚ್ಛಾದ್ಯ ಪಾತ್ರಂ ಕೌಶೇಯವಸ್ತ್ರೇಣ ತನ್ಮನೋರಮಂ ॥ ೭೨ ॥

ತಸ್ಮಿನ್ ಸೀತಾರಾಮಯೋಶ್ಚ ದ್ವೇ ಮೂರ್ತೀ ರುಕ್ಮನಿರ್ಮಿತೇ ।
ಸ್ಥಾಪನೀಯೇ ಪೂಜನೀಯೇ ಷೋಡಶೈರುಪಚಾರಕೈಃ ॥ ೭೩ ॥

ನವಮಾಷಾತ್ಮಕೋ ರಾಮಸ್ಸೀತಾಷ್ಟಮಾಷನಿರ್ಮಿತಾ ।
ನಿಜಶಕ್ತ್ಯಾಥವಾ ಕಾರ್ಯೇ ದ್ವೇ ಮೂರ್ತೀ ರಜತಸ್ಯ ವಾ ॥ ೭೪ ॥

---

೭೧. ಈ ರೀತಿಯಾಗಿ ಮಂಡಪದ ಮಧ್ಯದಲ್ಲಿ ಅದನ್ನು ಬರೆದು ಅದರ ಮಧ್ಯದಲ್ಲಿ ಕಮಲವನ್ನು ಬರೆಯಬೇಕು. ಆ ಕಮಲಮಧ್ಯದಲ್ಲಿ ಧಾನ್ಯದ ರಾಶಿಯನ್ನು ಹಾಕಬೇಕು. ಧಾನ್ಯರಾಶಿಯಮೇಲೆ ನೀರಿನಿಂದ ತುಂಬಿದ ಕಲಶವನ್ನು ಇಡಬೇಕು.

೭೨. ಅದರ ಸುತ್ತಲೂ ನೀರಿನಿಂದ ತುಂಬಿದ ಇತರ ಕಲಶಗಳನ್ನು ಇಡಬೇಕು. ಅವೆಲ್ಲಕ್ಕೂ ರೇಷ್ಮೆಯ ಬಟ್ಟೆಗಳನ್ನು ಹೊದ್ದಿಸಬೇಕು.

೭೩. ಚಿನ್ನದಲ್ಲಿ ಸೀತೆಯು ಮತ್ತು ರಾಮರ ಮೂರ್ತಿಗಳನ್ನು ಚಿನ್ನದಿಂದ ಮಾಡಿಸಿ ಅವುಗಳನ್ನು ಅವುಗಳ ಒಳಕ್ಕೆ ಹಾಕಬೇಕು. ಅವನ್ನು ಷೋಡಶೋಪಚಾರಗಳಿಂದ ಪೂಜಿಸಬೇಕು.

೭೪. ರಾಮನ ಪ್ರತಿಮೆಯು ಒಂಭತ್ತು ಮಾಷಗಳ ತೂಕವುಳ್ಳದ್ದಾಗಿಯೂ ಸೀತೆಯ ಪ್ರತಿಮೆಯು ಎಂಟು ಮಾಷಗಳುಳ್ಳದ್ದಾಗಿಯೂ ಇರಬೇಕು. ಇವನ್ನು ಚಿನ್ನದಿಂದ ಮಾಡಿಸಲು ಆಗದಿದ್ದರೆ ಬೆಳ್ಳಿಯಲ್ಲಿ ಬೇಕಾದರೂ ಮಾಡಿಸಬಹುದು. ಅವು ಆ ಕರ್ತನ ಶಕ್ತಿಗೆ ಅನುಗುಣವಾಗಿರಬೇಕು. ಲೋಭಮಾಡಬಾರದು.

ಗಂಧಪುಷ್ಪಧೂಪದೀಪನೈವೇದ್ಯವಸನಾದಿಕಂ ।
ಸರ್ವಂ ಪೃಥಗಷ್ಟವಿಧಂ ಜಾನಕ್ಯೈ ವಿನಿವೇದಯೇತ್ ॥ ೭೫ ॥

ತತಃ ಸ್ತ್ರೀಣಾಂ ವಾಯನಾನಿ ವಸ್ತ್ರಾಲಂಕಾರವಸ್ತುಭಿಃ ।
ಕುಂಕುಮಾದಿಪೂರಿತಾನಿ ದೇಯಾನಿ ವಿವಿಧಾನಿ ಚ ॥ ೭೬ ॥

ದೇಯಾನಿ ಕಾಂಸ್ಯಪಾತ್ರಾಣಿ ಪಕ್ವಾನ್ನಪೂರಿತಾನಿ ಚ ।
ತ್ರಯಸ್ತ್ರಿಂಶತ್ತಥಾ ವಾಷ್ಟೌ ಸ್ತ್ರೀಭ್ಯೋದೇಯಾನಿ ಶಕ್ತಿತಃ ॥ ೭೭ ॥

ತ್ರಯಸ್ತ್ರಿಂಶಚ್ಚ ಯುಗ್ಮಾನಿ ಭೋಜಯೇಚ್ಚ ಪ್ರಯತ್ನತಃ ।
ಅಥವಾಷ್ಟೌ ಯಥಾಶಕ್ತಿ ಭೋಜನೀಯಾನಿ ಷಡ್ರಸೈಃ ॥ ೭೮ ॥

---

೭೫. ಅನಂತರ ಅವಕ್ಕೆ ಗಂಧ, ಹೂ, ಧೂಪ, ದೀಪ, ನೈವೇದ್ಯ, ವಸನ ಎಲ್ಲವನ್ನೂ ಸಮರ್ಪಿಸಬೇಕು. ಪ್ರತಿಯೊಂದೂ ಎಂಟು ಬಗೆಯವುಗಳಾಗಿರಬೇಕು. ಇದನ್ನು ಜಾನಕಿಗೆ ಸಮರ್ಪಿಸಬೇಕು.

೭೬. ಅನಂತರ ಮುತ್ತೈದೆಯರಿಗೆ ಬಾಗಿನಗಳನ್ನು ಕೊಡಬೇಕು. ಅವರಿಗೆ ವಸ್ತ್ರಗಳನ್ನೂ ಅಲಂಕಾರ ಪದಾರ್ಥಗಳನ್ನೂ ಕೊಡಬೇಕು. ಕುಂಕುಮ ಅರಶಿನ ಮುಂತಾದುವುಗಳನ್ನು ಬಟ್ಟಲುಗಳಿಗೆ ತುಂಬಿ ಅವನ್ನು ಕೊಡಬೇಕು.

೭೭. ಕಂಚಿನ ಪಾತ್ರೆಯಲ್ಲಿ ವಿಧ ವಿಧವಾದ ಅನ್ನಗಳನ್ನು ತುಂಬಿ ಅವನ್ನು ಅವರಿಗೆ ಕೊಟ್ಟುಬಿಡಬೇಕು. ಈ ರೀತಿಯಾಗಿ ಮೂವತ್ತುಮೂರು ಬಾಗಿನಗಳನ್ನಾದರೂ ಕೊಡಬೇಕು. ಅಂತು ಶಕ್ತಿಗನುಗುಣವಾಗಿ ಕೊಡಬೇಕು.

೭೮. ಮೂವತ್ತು ಮೂರು ದಂಪತಿಗಳಿಗೆ ಭೋಜನವನ್ನೂ ಮಾಡಿಸಬೇಕು. ಕೊನೆಗೆ ಎಂಟು ದಂಪತಿಗಳಿಗಾದರೂ ಭೋಜನಮಾಡಿಸಬೇಕು. ಈ ಮಧ್ಯದಲ್ಲಿ ಅವರ ಯೋಗ್ಯತೆಗೆ ಅನುಗುಣವಾಗಿ ಇರಬೇಕು.

ರಾತ್ರೌ ಜಾಗರಣಂ ಕಾರ್ಯಂ ಗೀತವಾದ್ಯಾದಿಮಂಗಳೈಃ ।
ಪ್ರಾತಃ ಕಾಲೇ ತೃತೀಯಾಯಾಂ ಸ್ನಾತ್ವಾ ಸಂಪೂಜ್ಯ ಜಾನಕೀ ॥ ೭೯ ॥

ಹೋಮಶ್ಚಾಪಿ ಪ್ರಕರ್ತವ್ಯಸ್ಸೀತಾಮಂತ್ರೇಣ ಯತ್ನತಃ ।
ತಿಲಾಜ್ಯೈಃ ಪಾಯಸೈಶ್ಚಾಪಿ ಸಹಸ್ರಾಣ್ಯಷ್ಟ ಭೂಸುರೈಃ ॥ ೮೦ ॥

ಮುದ್ಗಹೀನಂ ನವಾನ್ನಂ ಚ ದೇಯಮಷ್ಟಾನ್ನಮುತ್ತಮಂ ।
ತತ್ಸೀತಾತೋಷದಂ ಜ್ಞೇಯಂ ತೇನ ವಾ ಜುಹುಯಾತ್ಸುಖಂ ॥ ೮೧ ॥

ತತಸ್ಸ್ವಯಂ ಸುಹೃನ್ಮಿತ್ರೈರ್ಭೋಕ್ತವ್ಯಂ ಚ ಯಥಾಸುಖಂ ।
ಏವಮುದ್ಯಾಪನವಿಧಿಸ್ತವಾಗ್ರೇ ವಿನಿವೇದಿತಃ ॥ ೮೨ ॥

---

೭೯. ರಾತ್ರಿಯಲ್ಲಿ ಜಾಗರಣೆಯನ್ನು ಮಾಡಬೇಕು. ಆಗ ಗೀತಗಳನ್ನು ಹಾಡಬೇಕು. ವಾದ್ಯಗಳನ್ನು ಬಾರಿಸಬೇಕು. ಮಂಗಳವಾದ ಎಲ್ಲಾ ವಾದ್ಯಗಳೂ ಇರಬೇಕು. ಮೂರನೆಯ ದಿವಸ ಎಂದರೆ ವೈಶಾಖ ಶುದ್ಧ ತದಿಗೆಯ ದಿವಸ ಬೆಳಗ್ಗೆ ಸ್ನಾನಮಾಡಿ ಜಾನಕಿಯನ್ನು ಪೂಜಿಸಬೇಕು.

೮೦. ಸೀತೆಯ ಮಂತ್ರದಿಂದ ಹೋಮವನ್ನು ಮಾಡಬೇಕು. ಎಳ್ಳು, ತುಪ್ಪ, ಪಾಯಸಗಳಿಂದ ಆ ಹೋಮವನ್ನು ಮಾಡಬೇಕು. ಈ ಹೋಮವನ್ನು ಸಾವಿರದ ಎಂಟುಬಾರಿ ಬ್ರಾಹ್ಮಣರಿಂದ ಮಾಡಿಸಬೇಕು.

೮೧. ಹಿಂದೆ ರಾಮಉದ್ಯಾಪನೆಯಲ್ಲಿ ಹೇಳಿದ ನವಾನ್ನಗಳಿರಬೇಕು. ಆದರೆ ಇದರಲ್ಲಿ ಹೆಸರು ಸೇರಿದ ಮುದ್ಗಾನ್ನ, (ಹುಗ್ಗಿ)ಯೊಂದು ಇರಕೂಡದು. ಎಂದರೆ ಎಂಟು ಬಗೆಯ ಅನ್ನವನ್ನು ಕೊಡಬೇಕು. ಈ ಅನ್ನಗಳಿಂದಲೇ ಹೋಮವನ್ನು ಮಾಡಬಹುದು. ಇದೇ ಸೀತೆಗೆ ಸಂತೋಷವನ್ನುಂಟು ಮಾಡುತ್ತದೆ.

೮೨. ಇವುಗಳಿಂದಲೇ ಆ ದಂಪತಿಗಳಿಗೂ ಬ್ರಾಹ್ಮಣರಿಗೂ ಭೋಜನ ಮಾಡಿಸಿ ಆಮೇಲೆ ತಾನು ಇಷ್ಟರಿಂದಲೂ ಮಿತ್ರರಿಂದಲೂ ಕೂಡಿಕೊಂಡು ಭೋಜನಮಾಡಬೇಕು. ಇದೇ ಉದ್ಯಾಪನೆಯ ವಿಧಿಯು. ನಿನ್ನ ಎದುರಿಗೆ ಹೇಳಿದ್ದೇನೆ.

॥ ರಾಮದಾಸ ಉವಾಚ ॥

ಅಗಸ್ತಿನಾ ಸುತೀಕ್ಷ್ಣಾಯ ಯದಿದಂ ಕಥಿತಂ ಪುರಾ ।
ತತ್ಸರ್ವಂ ಚ ತ್ವಯಾ ಪೃಷ್ಟಂ ಮಯಾ ತೇದ್ಯ ನಿವೇದಿತಂ ॥ ೮೩ ॥

॥ ವಿಷ್ಣುದಾಸ ಉವಾಚ ॥

ಕಥಂ ರಮಾನಾಮಭದ್ರಂ ಕಾರ್ಯಂ ಸ್ತ್ರೀಭಿಃ ಪ್ರಪೂಜನೇ ।
ತತ್ಸರ್ವಂ ವಿಸ್ತರೇಣಾದ್ಯ ಕಥಯಸ್ವ ಮಮಾಗ್ರತಃ ॥ ೮೪ ॥

॥ ರಾಮದಾಸ ಉವಾಚ ॥

ಯಥಾ ಪ್ರೋಕ್ತಂ ಮಯಾ ಶಿಷ್ಯ ರಾಮತೋಭದ್ರಮುತ್ತಮಂ ।
ಕಾರ್ಯಂ ರಮಾನಾಮಭದ್ರಂ ತಥೈವ ಸಕಲಂ ಶುಭಂ ॥ ೮೫ ॥

ಕಿಂಚಿದ್ವಿಶೇಷಸ್ತತ್ರಾಸ್ತಿ ತತ್ತೇದ್ಯ ಕಥಯಾಮ್ಯಹಂ ।
ಲಿಂಗಸ್ಥಲೇಷು ಕರ್ತವ್ಯಾ ವಾಪಿಕಾಶ್ಚೈವ ಪೂರ್ವವತ್ ॥ ೮೬ ॥

---

೮೩. ರಾಮದಾಸನು ಹೇಳಿದನು–ಪೂರ್ವದಲ್ಲಿ ಅಗಸ್ತ್ಯನು ಸುತೀಕ್ಷ್ಣಣನಿಗೆ ಹೇಳಿದುದನ್ನು ನಿನ್ನ ಎದುರಿಗೆ ಹೇಳಿದ್ದೇನೆ. ಇದೇ ಪ್ರಶ್ನೆಯನ್ನೇ ಅವನೂ ಮಾಡಿದ್ದನು.

೮೪. ವಿಷ್ಣುದಾಸನು ಹೇಳಿದನು–ಹೆಂಗಸರು ರಮಾಭದ್ರವನ್ನು ಬರೆದು ಪೂಜಿಸಬೇಕು. ಎಂದು ಹೇಳಿದೆಯಲ್ಲ. ಅದೆಲ್ಲವನ್ನೂ ಕೂಡ ನನಗೆ ವಿಸ್ತಾರವಾಗಿ ಹೇಳು.

೮೫. ರಾಮದಾಸನು ಹೇಳಿದನು–ಎಲೈ ಶಿಷ್ಯನೇ ! ಹಿಂದೆ ರಾಮತೋಭದ್ರವನ್ನು ನಾನು ಹೇಳಿದೆನಲ್ಲ. ಅದೇ ರೀತಿಯಲ್ಲಿ ರಮಾಭದ್ರವನ್ನೂ ರಚಿಸಬೇಕು. ಅದು ಕೇವಲ ಶುಭವಾದುದು.

೮೬. ಆದರೂ ಕೂಡ ಆ ರಮಾಭದ್ರದಲ್ಲಿ ಒಂದು ವಿಶೇಷವಿದೆ. ಅದನ್ನು ಹೇಳುತ್ತೇನೆ. ಕೇಳು. ರಾಮತೋಭದ್ರದಲ್ಲಿ ಲಿಂಗವನ್ನು ರಚಿಸುತ್ತೇವೆಯಷ್ಟೆ ! ಲ್ಲಿಇ ಆ ಲಿಂಗದ ಸ್ಥಳದಲ್ಲಿ ಕೊಳವನ್ನು ರಚಿಸಬೇಕು.

ಮುದ್ರಾಯಾಮೇವ ಕಿಂಚಿಚ್ಚ ವಿಶೇಷೋಽಸ್ತಿ ಶೃಣುಷ್ವ ತತ್ ।
ನಾಕಾರಶ್ಚ ಮಕಾರಶ್ಚ ಪೂರ್ವವದ್ರಚಯೇದಧಃ ॥ ೮೭ ॥

ಊರ್ಧ್ವಂ ರಮೇತ್ಯಕ್ಷರೇ ದ್ವೇ ರಚನೀಯೇ ತು ಪೂರ್ವವತ್ ।
ಏವಂ ಕೃತ್ವಾ ರಮಾನಾಮ ಶ್ವೇತವರ್ಣಂ ನಿರೀಕ್ಷಯೇ ॥ ೮೮ ॥

ಏತದ್ರಮಾನಾಮ ಭದ್ರಂ ದೇವೀನಾಂ ಪೂಜನಾದಿಷು ।
ನಾನಾಕರ್ಮಸು ಸರ್ವೇಷು ಕರ್ತವ್ಯಂ ಚ ಪ್ರಯತ್ನತಃ ॥ ೮೯ ॥

ವಿನಾ ರಮಾನಾಮಭದ್ರಾದ್ಯಾನಿ ದೇವ್ಯಾಃ ಕೃತಾನಿ ಹಿ ।
ಪೂಜನಾದೀನಿ ಕರ್ಮಾಣಿ ತಾನಿ ಜ್ಞೇಯಾನಿ ಮಾನವೈಃ ॥ ೯೦ ॥

ಅಕೃತಾನ್ಯತ್ರ ತಸ್ಮಾದ್ಧಿ ಕರ್ತವ್ಯಂ ಯತ್ನತಸ್ತ್ವಿದಂ ।
ಕೃತಾ ರಮಾನಾಮಭದ್ರೇ ಯಾ ಪೂಜಾ ಮಾನವೈರ್ಭುವಿ ॥ ೯೧ ॥

---

೮೭. ಮುದ್ರೆಯಲ್ಲಿ ಯಾವ ವಿಶೇಷವೂ ಇರುವುದಿಲ್ಲ. ವಿಶೇಷ ವಿರುವುದನ್ನು ಹೇಳುತ್ತೇನೆ. ಕೇಳು. ನಾ ಎಂಬ ಅಕ್ಷರವನ್ನೂ ಮ ಎಂಬ ಅಕ್ಷರವನ್ನೂ ಮೊದಲಿನಂತೆಯೇ ತಳಭಾಗದಲ್ಲಿ ರಚಿಸಬೇಕು.

೮೮. ಮೇಲುಭಾಗದಲ್ಲಿ ರಮಾ ಎಂಬ ಎರಡಕ್ಷರವನ್ನು ಬರೆಯಬೇಕು. ಈ ರೀತಿಯಾಗಿ ಬರೆದು ಬಿಳಿಯ ಬಣ್ಣವನ್ನು ಹಾಕಬೇಕು.

೮೯. ಇದೇನೇ ರಮಾನಾಮಭದ್ರವೆಂದು ಹೆಸರನ್ನು ಹೊಂದಿರುತ್ತದೆ. ಇದನ್ನು ದೇವಿಯ ಪೂಜೆಮಾಡುವಾಗ ಉಪಯೋಗಿಸಬೇಕು. ಇನ್ನೂ ಅನೇಕ ವಿಧವಾದ ಕರ್ಮಗಳಲ್ಲಿಯೂ ಪ್ರಯತ್ನಪಟ್ಟು ರಚಿಸಬೇಕು.

೯೦. ಈ ರಮಾನಾಮಭದ್ರವನ್ನು ರಚಿಸದೆ ನಾವು ದೇವಿಗೆ ಯಾವುದನ್ನು ಮಾಡಿದರೂ ಆ ಕರ್ಮಗಳೂ ಪೂಜೆಗಳೂ ಮಾಡದಿದ್ದಂತೆಯೇ ವ್ಯರ್ಥವೆಂದು ತಿಳಿಯಬೇಕು.

೯೧-೯೨. ಆದ್ದರಿಂದ ಪ್ರಯತ್ನಪಟ್ಟು ಈ ರಮಾನಾಮಭದ್ರವನ್ನು ರಚಿಸಬೇಕು. ಈ ರಮಾನಾಮಭದ್ರದಲ್ಲಿ ನಾವು ಯಾವ ಯಾವ ಪೂಜೆಗಳನ್ನು

ಸಾ ದೇವ್ಯೈ ತೋಷದಾ ದಿವ್ಯಾ ತಸ್ಮಾತ್ಕುರ್ಯಾತ್ಪ್ರಯತ್ನತಃ ।
ಪೂರ್ವೋಕ್ತಾನಿ ದೈವತಾನಿ ತಾನ್ಯೇವಾತ್ರ ವಿಚಿಂತಯೇತ್ ॥ ೯೨ ॥

ಆವಾಹಯೇಚ್ಚ ಮುದ್ರಾಯಾಂ ಜಾನಕೀಂ ರಘುನಂದನಂ ।
ಅನ್ಯಚ್ಛೃಣುಷ್ವ ಭೋ ಶಿಷ್ಯ ಸೀತಾರಾಮಪ್ರಪೂಜನೇ ॥ ೯೩ ॥

ರಮಾರಾಮತೋಭದ್ರಂ ಚ ಕಾರ್ಯಂ ವಾ ಮಾನವೈರ್ಭುವಿ ।
ತಚ್ಚಾಪಿ ಪೂರ್ವವತ್ಸರ್ವಂ ಕರ್ತವ್ಯಂ ಮಾನವೈರ್ಧಿಯಾ ॥ ೯೪ ॥

ಇದಂ ಸೀತಾರಾಮಯೋಶ್ಚ ಪೂಜನಾರ್ಥಂ ಪ್ರಕಲ್ಪಯೇತ್ ।
ರಾಮನಾಮಾದ್ರಮಾನಾಮಾದಿದಂ ಭದ್ರಂ ಮಹತ್ತಮಂ ॥ ೯೫ ॥

ಯತ್ರ ದ್ವಯೋರ್ನಾಮನೀ ಚ ರಮಾರಾಮೇತಿ ಚೋತ್ತಮೇ ।
ರಮಾರಾಮತೋಭದ್ರಂ ಚ ತಸ್ಮಾಚ್ಛ್ರೇಷ್ಠಂ ಪ್ರಕಾರಯೇತ್ ॥ ೯೬ ॥

ಮಾಡುತ್ತೇವೆಯೋ ಅವೆಲ್ಲವೂ ದೇವಿಗೆ ಸಂತೋಷವನ್ನುಂಟುಮಾಡುತ್ತವೆ. ಆದ್ದರಿಂದಲೇ ಈ ರಾಮನಾಮಭದ್ರವನ್ನು ಎಷ್ಟು ಕಷ್ಟವಾದರೂ ಮಾಡಲೇಬೇಕು. ರಾಮತೋಭದ್ರದಲ್ಲಿ ಹೇಳಿದ ದೇವತೆಗಳನ್ನೇ ಇಲ್ಲಿಯೂ ಸ್ಮರಿಸಬೇಕು.

೯೩. ಈ ಮುದ್ರೆಯುಲ್ಲಿ ಜಾನಕಿಯನ್ನೂ ರಘುನಂದನನನ್ನೂ ಆವಾಹನ ಮಾಡಬೇಕು. ಸೀತಾರಾಮರ ಪೂಜೆಯಲ್ಲಿ ಮತ್ತೊಂದು ವಿಶೇಷವನ್ನು ಹೇಳುತ್ತೇನೆ. ಕೇಳು.

೯೪. ರಮಾನಾಮ ಭದ್ರವನ್ನಾಗಲಿ ರಾಮತೋಭದ್ರವನ್ನಾಗಲಿ ರಚಿಸಿಯೇ ತೀರಬೇಕು. ಅವೆಲ್ಲವನ್ನೂ ಬುದ್ಧಿವಂತಿಕೆಯಿಂದ ರಚಿಸಬೇಕು.

೯೫. ಈ ಭದ್ರವನ್ನು ಸೀತಾರಾಮರ ಪೂಜೆಗೋಸ್ಕರ ರಚಿಸಬೇಕು. ರಾಮತೋಭದ್ರಕ್ಕಿಂತಲೂ ರಮಾನಾಮಭದ್ರವೇ ಬಹು ಉತ್ತಮವಾದುದು.

೬೬. ಯಾವುದಕ್ಕೆ ರಾಮಭದ್ರವೆಂದೂ ರಮಾಭದ್ರವೆಂದೂ ಎರಡು ಹೆಸರುಗಳು ಇವೆಯೋ ಅಂತಹ ಶ್ರೇಷ್ಠವಾದ ರಮಾರಾಮತೋಭದ್ರವನ್ನು ರಚಿಸಬೇಕು. ಅದು ಬಹು ಉತ್ತಮವಾದುದು.

ರಾಮಾಸನೋಪಮಾನ್ಯೇವ ದೇವತಾನ್ಯತ್ರ ಚಿಂತಯೇತ್ ।
ಏವಂ ಶಿಷ್ಯ ತ್ವಯಾ ಪೃಷ್ಟಂ ಯದ್ಯತ್ತತ್ತನ್ಮಯೋದಿತಂ ॥ ೯೭ ॥

ಕಾ ತೇನ್ಯಾಸ್ತಿ ಸ್ಪೃಹಾ ಶ್ರೋತುಂ ವದ ತತ್ತ್ವದಾಮ್ಯಹಂ ।

॥ ವಿಷ್ಣುದಾಸ ಉವಾಚ ॥

ಕವಚಂ ಲಕ್ಷ್ಮಣಸ್ಯಾಪಿ ಪಠನೀಯಮಿತಿ ಸ್ಮೃತಂ ॥ ೯೮ ॥

ಪುರಾ ಗುರೋ ತ್ವಯಾ ತಚ್ಚ ಮಾಂ ವದಸ್ವ ಸವಿಸ್ತರಂ ।
ಭರತಸ್ಯಾಪಿ ಕವಚಂ ಶತ್ರುಘ್ನಸ್ಯ ತಥಾ ವದ ॥ ೯೯ ॥

॥ ರಾಮದಾಸ ಉವಾಚ ॥

ಏವಮೇವ ಸುತೀಕ್ಷ್ಣೇನ ಪೃಷ್ಟಂ ಚ ಕುಂಭಜನ್ಮನಾ ।
ಪುರಾ ತದ್ವಿಸ್ತರೇಣಾದ್ಯ ತವಾಗ್ರೇ ಕಥಯಾಮ್ಯಹಂ ॥ ೧೦೦ ॥

---

೯೭. ರಾಮತೋಭದ್ರಾಸನದಂತೆಯೇ ಇಲ್ಲಿಯೂ ದೇವತೆಗಳನ್ನು ರಚಿಸಿ ಚಿಂತಿಸಬೇಕು. ಎಲೈ ಶಿಷ್ಯನೇ ! ನೀನು ಯಾವು ಯಾವುದನ್ನು ಕೇಳಿದೆಯೋ ಅವೆಲ್ಲವನ್ನೂ ಹೇಳಿದ್ದೇನೆ.

೯೮. ಇನ್ನೂ ಯಾವುದನ್ನು ಕೇಳಬೇಕೆಂಬ ಇಚ್ಛೆ ಇರುವುದು? ಅದನ್ನು ಕೇಳಿದರೆ ಹೇಳುತ್ತೇನೆ ವಿಷ್ಣುದಾಸನು ಹೇಳಿದನು–ಲಕ್ಷ್ಮಣನ ಕವಚವನ್ನು ಹೇಳಬೇಕೆಂದು ಕೇಳಿರುವೆನು.

೯೯. ಆ ರೀತಿಯಾಗಿ ಹೇಳಬೇಕೆಂಬ ವಿಷಯವನ್ನು ಮೊದಲು ನೀನೇ ಹೇಳಿದ್ದೀಯೆ. ಅದೆಲ್ಲವನ್ನೂ ಈಗ ನನಗೆ ಹೇಳು. ಅದೇ ರೀತಿಯಲ್ಲಿ ಭರತನ ಕವಚವನ್ನೂ ಶತ್ರುಘ್ನನ ಕವಚವನ್ನೂ ಹೇಳು.

೧೦೦. ರಾಮದಾಸನು ಹೇಳಿದನು–ಇದೇ ರೀತಿಯಾಗಿ ಸುತೀಕ್ಷ್ಣನು ಅಗಸ್ತ್ಯನನ್ನು ಕೇಳಲು ಅವನು ಆ ಸುತೀಕ್ಷ್ಣನಿಗೆ ಹೇಳಿದನು. ಅದನ್ನೇ ನಾನು ನಿನಗೆ ಹೇಳುತ್ತೇನೆ. ಕೇಳು.

॥ ಸುತೀಕ್ಷ್ಣ ಉವಾಚ ॥

ಗುರೋ ತ್ವಯಾ ಪುರಾ ಪ್ರೋಕ್ತಂ ಕವಚಂ ಲಕ್ಷ್ಮಣಸ್ಯ ಚ ।
ಪಠನೀಯಂ ಜನೈಶ್ಚೇತಿ ತನ್ಮಮಾದ್ಯ ಪ್ರಕಾಶಯ ॥ ೧೦೧ ॥

ಭರತಸ್ಯಾಪಿ ಕವಚಂ ಶತ್ರುಘ್ನಸ್ಯ ತಥಾ ವದ ।

॥ ಅಗಸ್ತಿರುವಾಚ ॥

ಸಮ್ಯಕ್ಪೃಷ್ಟಂ ತ್ವಯಾ ವತ್ಸ ಸಾವಧಾನಮನಾಶ್ಶೃಣು ।
ಆದೌ ಸೌಮಿತ್ರಿಕವಚಂ ಕಥ್ಯತೇದ್ಯ ಮಯಾ ಶುಭಂ ॥ ೧೦೨ ॥

ಇತಿಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಮನೋಹರಕಾಂಡೇ ಸೀತಾರಾಮಾದಿ ಕವಚನಿರೂಪಣಂ ನಾಮ ಚತುರ್ದಶಸ್ಸರ್ಗಃ ಸಮಾಪ್ತಃ

---

೧೦೧. ಎಲೈ ಗುರುವೆ! ನೀನು ಹಿಂದೆ ಲಕ್ಷ್ಮಣನ ಕವಚವನ್ನು ಹೇಳಬೇಕೆಂದು ಹೇಳಿದೆಯಷ್ಟೆ. ಅದನ್ನು ಈಗ ನನಗೆ ವಿಸ್ತಾರವಾಗಿ ಹೇಳು.

೧೦೨. ಅಂತೆಯೇ ಭರತನ ಕವಚವನ್ನೂ ಶತ್ರುಘ್ನನ ಕವಚವನ್ನೂ ಹೇಳು. ಅಗಸ್ತ್ಯನು ಹೇಳಿದನು–ಎಲೈ ವತ್ಸನೆ! ನೀನು ಕೇಳಿದುದು ಸರಿಯಾಗಿದೆ. ಮನಸ್ಸಿಟ್ಟು ಕೇಳು. ನಾನು ಮೊದಲಿನಲ್ಲಿ ಶುಭವಾದ ಲಕ್ಷ್ಮಣನ ಕವಚವನ್ನು ಹೇಳುತ್ತೇನೆ.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಆದಿಕಾವ್ಯವಾದ ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಸೀತಾರಾಮರ ಕವಚನಿರೂಪಣವೆಂಬ ಹದಿನಾಲ್ಕನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹದಿನಾಲ್ಕನೆಯ ಸರ್ಗದ ಸಾರಾಂಶವು

—○—○—

ಈ ಸರ್ಗದಲ್ಲಿ ಸೀತೆಯ ಸ್ತೋತ್ರ ಮತ್ತು ಕವಚಗಳನ್ನು ಹೇಳಿ ಅದರ ಫಲವನ್ನೂ ಹೇಳಿರುವನು. ಈ ಕವಚವು ಇಲ್ಲಿ ಎರಡು ರೀತಿಯಲ್ಲಿ ಹೇಳಲ್ಪಟ್ಟಿರುವುದು.

ಶೀತಾಳಾಗೌರಿಯೆಂಬ ಒಂದು ವ್ರತವು ಸೀತೆಗೆ ಬಹು ಪ್ರೀತಿದಾಯಕವಾದುದು. ಅದನ್ನು ಮಾಡುವ ರೀತಿಯನ್ನು ವಿವರಿಸಿರುವನು.

ರಮಾಭದ್ರವೆಂಬ ಒಂದು ಆಸನವು ರಾಮಭದ್ರಾಸನದಂತೆಯೇ ಹೇಳಲ್ಪಟ್ಟಿರುವುದು. ಇದು ಸೀತೆಗೆ ಪ್ರೀತಿದಾಯಕವಾದುದು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಮನೋಹರಕಾಂಡೇ

ಪಂಚದಶಸ್ಸರ್ಗಃ

॥ ಶ್ರೀ ಲಕ್ಷ್ಮಣಕವಚಂ ॥

॥ ಅಗಸ್ತಿರುವಾಚ ॥

ಸೌಮಿತ್ರಂ ರಘುನಾಯಕಸ್ಯ ಚರಣದ್ವಂದ್ವೇಕ್ಷಣಂ ಶ್ಯಾಮಲಂ ।
ಬಿಭ್ರಂತಂ ಸ್ವಕರೇಣ ರಾಮಶಿರಸಿ ಛತ್ರಂ ವಿಚಿತ್ರಂ ವರಂ ॥
ಬಿಭ್ರಂತಂ ರಘುನಾಯಕಸ್ಯ ಸುಮಹತ್ಕೋದಂಡಬಾಣಾಸನೇ ।
ತಂ ವಂದೇ ಕಮಲೇಕ್ಷಣಂ ಜನಕಜಾವಾಕ್ಯೇ ಸದಾ ತತ್ಪರಂ ॥ ೧ ॥

ಓಂ ಅಸ್ಯ ಶ್ರೀಲಕ್ಷ್ಮಣಕವಚಮಂತ್ರಸ್ಯ । ಅಗಸ್ತ್ಯಋಷಿಃ । ಅನುಷ್ಟುಪ್ಛಂದಃ । ಶ್ರೀಲಕ್ಷ್ಮಣೋ ದೇವತಾ । ಶೇಷ ಇತಿ ಬೀಜಂ । ಸುಮಿತ್ರಾನಂದನ ಇತಿ ಶಕ್ತಿಃ । ರಾಮಾನುಜ ಇತಿ ಕೀಲಕಂ । ರಾಮದಾಸ

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹದಿನೈದನೆಯ ಸರ್ಗವು

—o—o—

೧. ಅಗಸ್ತ್ಯನು ಹೇಳಿದನು-ಶ್ರೀರಾಮನ ಪಾದಪದ್ಮಗಳಲ್ಲಿಯೇ ಕಣ್ಣನ್ನು ಇಟ್ಟು ನೋಡುತ್ತಿರುವ, ಶ್ಯಾಮಲವರ್ಣವುಳ್ಳ, ತನ್ನ ಕೈಯಿಂದಲೇ ರಾಮನ ತಲೆಯಮೇಲೆ ಉತ್ತಮವಾದ ಛತ್ರಿಯನ್ನು ಹಿಡಿದಿರುವ, ಶ್ರೀರಾಮನ ದೊಡ್ಡದಾದ ಬಿಲ್ಲನ್ನೂ ಬಾಣವನ್ನೂ ತನ್ನ ಕೈಯ್ಯಲ್ಲಿ ಹಿಡಿದಿರುವ, ಸೀತೆಯ ಮಾತಿನಂತೆಯೇ ಯಾವಾಗಲೂ ನಡೆಯುವ, ಕಮಲೇಕ್ಷಣನಾದ, ಲಕ್ಷ್ಮಣನನ್ನು ನಮಸ್ಕರಿಸುತ್ತೇನೆ.

ಓಂ ಲಕ್ಷ್ಮಣ ಕವಚವೆಂಬ ಮಂತ್ರಕ್ಕೆ–ಅಗಸ್ತ್ಯನು ಋಷಿಯು, ಅನುಷ್ಟುಪ್ ಛಂದಸ್ಸು, ಲಕ್ಷ್ಮಣನು ದೇವತೆಯು, ಶೇಷನೆಂಬುದು ಬೀಜವು, ಸುಮಿತ್ರಾನಂದನ ಎಂಬುದು ಶಕ್ತಿಯು, ರಾಮಾನುಜ ಎಂಬುದು ಕೀಲಕವು ರಾಮದಾಸ

ಇತ್ಯಸ್ತ್ರಂ। ರಘುವಂಶಜ ಇತಿ ಕವಚಂ। ಸೌಮಿತ್ರಿರಿತಿ ಮಂತ್ರಃ। ಶ್ರೀಲಕ್ಷ್ಮಣಪ್ರೀತ್ಯರ್ಥಂ। ಸಕಲಮನೋಽಭಿಲಷಿತಸಿದ್ಧ್ಯರ್ಥಂ ಜಪೇ ವಿನಿಯೋಗಃ ॥

॥ ಅಥಾಂಗುಳಿನ್ಯಾಸಃ ॥

ಓಂ ಲಕ್ಷ್ಮಣಾಯ ಅಂಗುಷ್ಠಾಭ್ಯಾಂ ನಮಃ
ಓಂ ಶೇಷಾಯ ತರ್ಜನೀಭ್ಯಾಂ ನಮಃ
ಓಂ ಸುಮಿತ್ರಾನಂದನಾಯ ಮಧ್ಯಮಾಭ್ಯಾಂ ನಮಃ
ಓಂ ರಾಮಾನುಜಾಯ ಅನಾಮಿಕಾಭ್ಯಾಂ ನಮಃ
ಓಂ ರಾಮದಾಸಾಯ ಕನಿಷ್ಠಿಕಾಭ್ಯಾಂ ನಮಃ
ಓಂ ರಘುವಂಶಜಾಯ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಹೃದಯಾದ್ಯಂಗನ್ಯಾಸಃ ॥

ಓಂ ಲಕ್ಷ್ಮಣಾಯ ಹೃದಯಾಯ ನಮಃ
ಓಂ ಶೇಷಾಯ ಶಿರಸೇ ಸ್ವಾಹಾ

ಎಂಬುದು ಅಸ್ತ್ರವು. ರಘುವಂಶಜ ಎಂಬುದು ಕವಚವು, ಸೌಮಿತ್ರಿಃ ಎಂಬುದು ಮಂತ್ರವು, ಶ್ರೀ ಲಕ್ಷ್ಮಣನ ಪ್ರೀತಿಗೋಸ್ಕರಲೂ, ಮನಸ್ಸಿನ ಎಲ್ಲಾ ಇಷ್ಟಾರ್ಥಗಳೂ ಸಿದ್ಧಿಸುವುದಕ್ಕೂ ಜಪಮಾಡುವುದರಲ್ಲಿ ವಿನಿಯೋಗವು.

ಅಂಗುಳಿನ್ಯಾಸವು

ಓಂ ಲಕ್ಷ್ಮಣಾಯ ಅಂಗುಷ್ಠಾಭ್ಯಾಂ ನಮಃ
ಓಂ ಶೇಷಾಯ ತರ್ಜನೀಭ್ಯಾಂ ನಮಃ
ಓಂ ಸುಮಿತ್ರಾನಂದನಾಯ ಮಧ್ಯಮಾಭ್ಯಾಂ ನಮಃ
ಓಂ ರಾಮಾನುಜಾಯ ಅನಾಮಿಕಾಭ್ಯಾಂ ನಮಃ
ಓಂ ರಾಮದಾಸಾಯ ಕನಿಷ್ಠಿಕಾಭ್ಯಾಂ ನಮಃ
ಓಂ ರಘುವಂಶಜಾಯ ಕರತಲಕರಪೃಷ್ಠಾಭ್ಯಾಂ ನಮಃ

ಹೃದಯಾದಿನ್ಯಾಸಃ

ಓಂ ಲಕ್ಷ್ಮಣಾಯ ಹೃದಯಾಯ ನಮಃ
ಓಂ ಶೇಷಾಯ ಶಿರಸೇ ಸ್ವಾಹಾ

ಓಂ ಸುಮಿತ್ರಾಯ ಶಿಖಾಯೈ ವಷಟ್
ಓಂ ರಾಮಾನುಜಾಯ ಕವಚಾಯ ಹುಂ
ಓಂ ರಾಮದಾಸಾಯ ನೇತ್ರತ್ರಯಾಯ ವೌಷಟ್
ಓಂ ರಘುವಂಶಜಾಯ ಅಸ್ತ್ರಾಯ ಫಟ್

ಓಂ ಸೌಮಿತ್ರಯೇ ನಮಃ ಇತಿ ದಿಗ್ಬಂಧಃ

॥ ಅಥ ಧ್ಯಾನಂ ॥

ರಾಮಪೃಷ್ಠಸ್ಥಿತಂ ರಮ್ಯಂ ರತ್ನಕುಂಡಲಧಾರಿಣಂ ।
ನೀಲೋತ್ಪಲದಳಶ್ಯಾಮಂ ರತ್ನಕಂಕಣಮಂಡಿತಂ ॥ ೧ ॥

ರಾಮಸ್ಯ ಮಸ್ತಕೇ ದಿವ್ಯಂ ಬಿಭ್ರಂತಂ ಛತ್ರಮುತ್ತಮಂ ।
ನರಪೀತಾಂಬರಧರಂ ಮುಕುಟೇನಾತಿಶೋಭಿತಂ ॥ ೨ ॥

ಓಂ ಸುಮಿತ್ರಾಯ ಶಿಖಾಯೈ ವಷಟ್
ಓಂ ರಾಮಾನುಜಾಯ ಕವಚಾಯ ಹುಂ
ಓಂ ರಾಮದಾಸಾಯ ನೇತ್ರತ್ರಯಾಯ ವೌಷಟ್
ಓಂ ರಘುವಂಶಜಾಯ ಅಸ್ತ್ರಾಯ ಫಟ್

ಓಂ ಸೌಮಿತ್ರಯೇ ಇತಿ ದಿಗ್ಬಂಧಃ

ಅಥ ಧ್ಯಾನವು

೧. ಶ್ರೀರಾಮನ ಹಿಂದುಗಡೆಯಲ್ಲಿರುವ ರಮ್ಯನಾದ ರತ್ನದ ಕುಂಡಲಗಳನ್ನು ಧರಿಸಿರುವ ಕನ್ನೈದಿಲೆಯ ದಳದಂತೆ ಶ್ಯಾಮಲವರ್ಣವುಳ್ಳ ರತ್ನದ ಕೈಬಳೆಗಳನ್ನು ಹಾಕಿಕೊಂಡಿರುವ ಲಕ್ಷ್ಮಣನನ್ನು ಧ್ಯಾನಿಸುತ್ತೇನೆ.

೨. ಶ್ರೀರಾಮನ ತಲೆಯಮೇಲೆ ದಿವ್ಯವಾದ ಛತ್ರಿಯನ್ನು ಹಿಡಿದಿರುವ ಉತ್ತಮವಾದ ಪೀತಾಂಬರವನ್ನು ಧರಿಸಿರುವ ತಲೆಗೆ ಕಿರೀಟವನ್ನೂ ಹಾಕಿಕೊಂಡು ಪ್ರಕಾಶಿಸುವ ಲಕ್ಷ್ಮಣನನ್ನು ಧ್ಯಾನಿಸುತ್ತೇನೆ

ತೂಣೀರಕಾರ್ಮುಕೇ ಚಾಪಿ ಬಿಭ್ರಂತಂ ಚ ಸ್ಮಿತಾನನಂ ।
ರತ್ನಮಾಲಾಧರಂ ದಿವ್ಯಂ ಪುಷ್ಪಮಾಲಾವಿರಾಜಿತಂ ॥ ೪ ॥

ಏವಂ ಧ್ಯಾತ್ವಾ ಲಕ್ಷ್ಮಣಂ ಚ ರಾಘವನ್ಯಸ್ತಲೋಚನಂ ।
ಕವಚಂ ಜಪನೀಯಂ ಹಿ ತತೋ ಭಕ್ತ್ಯಾತ್ರ ಮಾನವೈಃ ॥ ೫ ॥

ಓಂ ಲಕ್ಷ್ಮಣಃ ಪಾತು ಮೇ ಪೂರ್ವೇ ದಕ್ಷಿಣೇ ರಾಘವಾನುಜಃ ।
ಪ್ರತೀಚ್ಯಾಂ ಪಾತು ಸೌಮಿತ್ರಿಃ ಪಾತೂದೀಚ್ಯಾಂ ರಘೂತ್ತಮಃ ॥ ೬ ॥

ಅಧಃ ಪಾತು ಮಹಾವೀರಶ್ಚೋರ್ಧ್ವಂ ಪಾತು ನೃಪಾತ್ಮಜಃ ।
ಮಧ್ಯೇ ಪಾತು ರಾಮದಾಸಸ್ಸರ್ವತಸ್ಸತ್ಯಪಾಲಕಃ ॥ ೭ ॥

ಸ್ಮಿತಾನನಃ ಶಿರಃ ಪಾತು ಫಾಲಂ ಪಾತೂರ್ಮಿಲಾಧವಃ ।
ಭ್ರುವೋರ್ಮಧ್ಯೇ ಧನುರ್ಧಾರೀ ಸುಮಿತ್ರಾನಂದನೋಽಕ್ಷಿಣೀ ॥ ೮ ॥

---

೪. ಬಾಣಬತ್ತಳಿಕೆಗಳನ್ನು ಹಿಡಿದಿರುವ ನಗುಮುಖವುಳ್ಳ, ದಿವ್ಯವಾದ ರತ್ನಮಾಲೆಯನ್ನು ಧರಿಸಿರುವ ಪುಷ್ಪಮಾಲೆಯಿಂದ ಪ್ರಕಾಶಿಸುವ ಲಕ್ಷ್ಮಣನನ್ನು ಧ್ಯಾನಿಸುತ್ತೇನೆ.

೫. ರಾಮನಲ್ಲಿಯೇ ಕಣ್ಣಿಟ್ಟಿರುವ ಲಕ್ಷ್ಮಣನನ್ನು ಈ ರೀತಿಯಾಗಿ ಧ್ಯಾನಮಾಡಿ ಅನಂತರ ಬಹು ಭಕ್ತಿಯಿಂದ ಈ ಲಕ್ಷ್ಮಣಕವಚವನ್ನು ಜಪಿಸಬೇಕು.

೬-೭. ಓಂ ಲಕ್ಷ್ಮಣನು ಪೂರ್ವದಿಕ್ಕಿನಲ್ಲಿಯೂ ರಾಘವಾನುಜನು ದಕ್ಷಿಣದಿಕ್ಕಿನಲ್ಲಿಯೂ ಸೌಮಿತ್ರಿಯು ಪಶ್ಚಿಮದಿಕ್ಕಿನಲ್ಲಿಯೂ ರಘೂತ್ತಮನು ಉತ್ತರದಿಕ್ಕಿನಲ್ಲಿಯೂ ಮಹಾವೀರನು ತಳಭಾಗದಲ್ಲಿಯೂ, ನೃಪಾತ್ಮಜನು ಮೇಲುಭಾಗದಲ್ಲಿಯೂ ರಾಮದಾಸನು ಮಧ್ಯಭಾಗದಲ್ಲಿಯೂ ಸತ್ಯಪಾಲಕನು ಎಲ್ಲಾ ದಿಕ್ಕಿನಲ್ಲಿಯೂ ರಕ್ಷಿಸಲಿ.

೮-೧೦. ನಗುಮುಖಳ್ಳವನು ನನ್ನ ಶಿರಸ್ಸನ್ನೂ ಊರ್ಮಿಳಾಪತಿಯು ನನ್ನ ಹಣೆಯನ್ನೂ ಧನುರ್ಧಾರಿಯೂ ನನ್ನ ಹುಬ್ಬುಗಳ ಮಧ್ಯಭಾಗವನ್ನೂ

ಕಪೋಲೇ ರಾಮಮಂತ್ರೀ ಚ ಸರ್ವದಾಪಾತು ನ್ಯೆ ಮಮ ।
ಕರ್ಣಮೂಲೇ ಸದಾ ಪಾತು ಕಬಂಧಭುಜಖಂಡನಃ ॥ ೯ ॥

ನಾಸಾಗ್ರಂ ಮೇ ಸದಾ ಪಾತು ಸುಮಿತ್ರಾನಂದವರ್ಧನಃ ।
ರಾಮನ್ಯಸ್ತೇಕ್ಷಣಃ ಪಾತು ಸದಾ ಮೇಽತ್ರ ಮುಖಂ ಭುವಿ ॥ ೧೦ ॥

ಸೀತಾವಾಕ್ಯಕರಃ ಪಾತು ಮಮ ವಾಣೀಂ ಸದಾತ್ರ ಹಿ ।
ಸೌಮ್ಯರೂಪಃ ಪಾತು ಜಿಹ್ವಾಮನಂತಃ ಪಾತು ಮೇ ದ್ವಿಜಾ ॥ ೧೧ ॥

ಚುಬುಕಂ ಪಾತು ರಕ್ಷೋಘ್ನಃ ಕಂಠಂ ಪಾತ್ವಸುರಾರ್ದನಃ ।
ಸ್ಕಂಧೌ ಪಾತು ಜಿತಾರಾತಿರ್ಭುಜೌ ಪಂಕಜಲೋಚನಃ ॥ ೧೨ ॥

ಕರೌ ಕಂಕಣಧಾರೀ ಚ ನಖಾ ರಕ್ತನಖೋಽವತು ।
ಕುಕ್ಷಿಂ ಪಾತು ವಿನಿದ್ರೋ ಮೇ ವಕ್ಷಃ ಪಾತು ಜಿತೇಂದ್ರಿಯಃ ॥ ೧೩ ॥

ಸುಮಿತ್ರಾನಂದನನು ನನ್ನ ಕಣ್ಣುಗಳನ್ನೂ, ರಾಮಮಂತ್ರಿಯು ನನ್ನ ಕಪೋಲಗಳನ್ನೂ ಕಬಂಧನಭುಜಗಳನ್ನು ಕತ್ತರಿಸಿದವನು ಕಿವಿಯ ಬುಡಗಳನ್ನೂ ಸುಮಿತ್ರಾನಂದವರ್ಧನನು ನನ್ನ ಮೂಗಿನ ತುದಿಯನ್ನೂ ರಾಮನಲ್ಲಿ ದೃಷ್ಟಿಯುಳ್ಳವನು ನನ್ನ ಮುಖವನ್ನೂ ರಕ್ಷಿಸಲಿ.

೧೧-೧೨. ಸೀತೆಯ ವಾಕ್ಯದಂತೆ ನಡೆಯುವವನು ನನ್ನ ಮಾತನ್ನೂ, ಸೌಮ್ಯರೂಪನು ನನ್ನ ನಾಲಗೆಯನ್ನೂ, ಅನಂತನು ನನ್ನ ಹಲ್ಲುಗಳನ್ನೂ, ರಾಕ್ಷಸರನ್ನು ಸಂಹರಿಸುವವನು ನನ್ನ ಗಲ್ಲವನ್ನೂ, ಅಸುರಾಂತಕನು ಕಂಠವನ್ನೂ ಶತ್ರುಗಳನ್ನು, ಜಯಿಸಿದವನು ಹೆಗಲನ್ನೂ, ಪಂಕಜಲೋಚನನು ಭುಜಗಳನ್ನೂ ರಕ್ಷಿಸಲಿ.

೧೩–೧೪. ಕಂಕಣಧಾರಿಯು ಕೈಗಳನ್ನೂ ಕೆಂಪಾಗಿರುವ ಉಗುರುಳ್ಳವನು ಉಗುರುಗಳನ್ನೂ ನಿದ್ರೆಮಾಡದವನು ನನ್ನ ಹೊಟ್ಟೆಯನ್ನೂ ಜಿತೇಂದ್ರಿಯನು ಎದೆಯನ್ನೂ ರಾಘವನ ಹಿಂದಿರುವವನು ಪಾರ್ಶ್ವಗಳನ್ನೂ ಮನೋರಮನು

ಪಾರ್ಶ್ವೇ ರಾಘವಪೃಷ್ಠಸ್ಥಃ ಪೃಷ್ಠದೇಶಂ ಮನೋರಮಃ ।
ನಾಭಿಂ ಗಂಭೀರನಾಭಿಸ್ತು ಕಟೀ ಚ ರುಕ್ಮಮೇಖಲಃ ॥ ೧೪ ॥

ಗುಹ್ಯಂ ಪಾತು ಸಹಸ್ರಾಸ್ಯಃ ಪಾತು ಲಿಂಗಂ ಹರಿಪ್ರಿಯಃ ।
ಊರೂ ಪಾತು ವಿಷ್ಣುತಲ್ಪಃ ಸುಮುಖೋಽವತು ಜಾನುನೀ ॥ ೧೫ ॥

ನಾಗೇಂದ್ರಃ ಪಾತು ಮೇ ಜಂಘೌ ಗುಲ್ಫೌ ನೂಪುರವಾನ್ಮಮ ।
ಪಾದಾವಂಗದತಾತೋಽವ್ಯಾತ್ಪಾತ್ವಂಗಾನಿ ಸುಲೋಚನಃ ॥ ೧೬ ॥

ಚಿತ್ರಕೇತುಪಿತಾ ಪಾತು ಮಮ ಪಾದಾಂಗುಲೀಸ್ಸದಾ ।
ರೋಮಾಣಿ ಮೇ ಸದಾ ಪಾತು ರವಿವಂಶಸಮುದ್ಭವಃ ॥ ೧೭ ॥

ದಶರಥಸುತಃ ಪಾತು ನಿಶಾಯಾಂ ಮಮ ಸಾದರಂ ।
ಭೂಗೋಳಧಾರೀ ಮಾಂ ಪಾತು ದಿವಸೇ ದಿವಸೇ ಸದಾ ॥ ೧೮ ॥

ಹಿಂಭಾಗವನ್ನೂ ಆಳವಾದ ಹೊಕ್ಕಳುಳ್ಳವನು ನನ್ನ ಹೊಕ್ಕಳನ್ನೂ ಚಿನ್ನದ ಉಡಿದಾರಉಳ್ಳವನು ಸೊಂಟವನ್ನೂ ರಕ್ಷಿಸಲಿ.

೧೫-೧೬. ಸಾವಿರ ತಲೆಯುಳ್ಳವನು ನನ್ನ ಗುಹ್ಯವನ್ನೂ ಹರಿಪ್ರಿಯನು ನನ್ನ ಲಿಂಗವನ್ನೂ ವಿಷ್ಣುವಿಗೆ ಸಮಾನನಾದವನು ನನ್ನ ತೊಡೆಗಳನ್ನೂ ಸುಮುಖನು ಬಾಹು ಪ್ರದೇಶಗಳನ್ನೂ ನಾಗೇಂದ್ರನು ನನ್ನ ಜಂಘೆಗಳನ್ನೂ ನೂಪುರವನ್ನು ಹಾಕಿಕೊಂಡಿರುವವನು ಹಿಮ್ಮಡಿಗಳನ್ನೂ ಅಂಗದನ ತಾತನು ಪಾದಗಳನ್ನೂ ಸುಲೋಚನನು ಎಲ್ಲಾ ಅಂಗಗಳನ್ನೂ ರಕ್ಷಿಸಲಿ.

೧೭. ಚಿತ್ರಕೇತುವಿನ ತಂದೆಯು ನನ್ನ ಹೆಜ್ಜೆಯ ಬೆರಳುಗಳನ್ನೂ ರಕ್ಷಿಸಲಿ. ರವಿವಂಶದಲ್ಲಿ ಹುಟ್ಟಿದವನು ನನ್ನ ರೋಮಗಳನ್ನು ರಕ್ಷಿಸಲಿ.

೧೮. ದಶರಥನ ಮಗನು ನನ್ನನ್ನು ರಾತ್ರಿಯಲ್ಲಿ ರಕ್ಷಿಸಲಿ. ಭೂಮಿಯನ್ನು ಧರಿಸಿರುವವನು ನನ್ನನ್ನು ಹಗಲಲ್ಲಿ ಯಾವಾಗಲೂ ರಕ್ಷಿಸಲಿ.

ಸರ್ವಕಾಲೇಷು ಮಾಮಿಂದ್ರಜಿದ್ಧಂತಾಽವತು ಸರ್ವದಾ ।
ಏವಂ ಸೌಮಿತ್ರಿಕವಚಂ ಸುತೀಕ್ಷ್ಣ ಕಥಿತಂ ಮಯಾ ॥ ೧೯ ॥

ಇದಂ ಪ್ರಾತಸ್ಸಮುತ್ಥಾಯ ಯೇ ಪಠಂತ್ಯತ್ರ ಮಾನವಾಃ ।
ತೇ ಧನ್ಯಾ ಮಾನವಾ ಲೋಕೇ ತೇಷಾಂ ಚ ಸಫಲೋ ಭವಃ ॥ ೨೦ ॥

ಸೌಮಿತ್ರೇಃ ಕವಚಸ್ಯಾಸ್ಯ ಪಠನಾನ್ನಿಶ್ಚಯೇನ ಹಿ ।
ಪುತ್ರಾರ್ಥೀ ಲಭತೇ ಪುತ್ರಾನ್ ಧನಾರ್ಥೀ ಧನಮಾಪ್ನುಯಾತ್ ॥ ೨೧ ॥

ಪತ್ನೀಕಾಮೋ ಲಭೇತ್ಪತ್ನೀಂ ಗೋಧನಾರ್ಥೀ ತು ಗೋಧನಂ ।
ಧಾನ್ಯಾರ್ಥೀ ಪ್ರಾಪ್ನುಯಾದ್ಧಾನ್ಯಂ ರಾಜ್ಯಾರ್ಥೀ ರಾಜ್ಯಮಾಪ್ನುಯಾತ್

ಪಠಿತಂ ರಾಮಕವಚಂ ಸೌಮಿತ್ರಿಕವಚಂ ವಿನಾ ।
ಘೃತೇನ ಹೀನೋ ನೈವೇದ್ಯಸ್ತೇನ ದತ್ತೋ ನ ಸಂಶಯಃ ॥ ೨೩ ॥

---

೧೯. ಇಂದ್ರಜಿತುವನ್ನು ಸಂಹರಿಸಿದವನು ನನ್ನನ್ನು ಸರ್ವಕಾಲದಲ್ಲಿಯೂ ರಕ್ಷಿಸಲಿ. ಎಲೈ ಸುತೀಕ್ಷ್ಣನೇ! ಈ ರೀತಿಯಾಗಿ ಲಕ್ಷ್ಮಣನ ಕವಚವನ್ನು ಹೇಳಿದ್ದೇನೆ.

೨೦. ಬೆಳಗ್ಗೆ ಎದ್ದು ಯಾರು ಇದನ್ನು ಹೇಳುವರೋ ಅವರೇ ಈ ಲೋಕದಲ್ಲಿ ಧನ್ಯರು. ಅವರು ಹುಟ್ಟಿದುದಕ್ಕೆ ಸಾರ್ಥಕವಾಗುವುದು.

೨೧-೨೨. ಈ ಲಕ್ಷ್ಮಣಕವಚವನ್ನು ಹೇಳಿದರೆ ನಿಶ್ಚಯವಾಗಿಯೂ ಮಕ್ಕಳಾಗಬೇಕಾದವನಿಗೆ ಮಕ್ಕಳಾಗುತ್ತದೆ. ಧನಬೇಕಾದವನಿಗೆ ಧನವು ಸಿಕ್ಕುತ್ತದೆ. ಹೆಂಡತಿಬೇಕಾದವನಿಗೆ ಹೆಂಡತಿಯು ದೊರಕುತ್ತಾಳೆ. ಪಶುಗಳನ್ನು ಅಪೇಕ್ಷಿಸುವವನು ಪಶುಗಳನ್ನು ಹೊಂದುವನು ಧಾನ್ಯಾರ್ಥಿಯು ಧಾನ್ಯವನ್ನೂ ರಾಜ್ಯಾರ್ಥಿಯು ರಾಜ್ಯವನ್ನೂ ಹೊಂದುತ್ತಾರೆ.

೨೩-೨೪. ಈ ಲಕ್ಷ್ಮಣಕವಚವನ್ನು ರಾಮಕವಚವನ್ನು ಹೇಳಿದ ಮೇಲೆಯೇ ಹೇಳಬೇಕು. ಹಾಗೆ ರಾಮಕವಚವನ್ನು ಹೇಳದೆ ಲಕ್ಷ್ಮಣಕವಚ

ಕೇವಲಂ ರಾಮಕವಚಂಪಠಿತಂ ಮಾನವೈರ್ಯದಿ ।
ತತ್ಪಾಠೇನ ಸುಸಂತುಷ್ಟೋ ನ ಭವೇದ್ರಘುನಂದನಃ ॥ ೨೪ ॥

ಅತಃ ಪ್ರಯತ್ನತಶ್ಚೇದಂ ಸೌಮಿತ್ರಿಕವಚಂ ನರೈಃ ।
ಪಠನೀಯಂ ಸರ್ವದೈವ ಸರ್ವವಾಂಛಿತದಾಯಕಂ ॥ ೨೫ ॥

॥ ಇತಿ ಲಕ್ಷ್ಮಣಕವಚಂ ॥

॥ ಅಥ ಶ್ರೀ ಭರತಕವಚಮ್ ॥

ಅತಃ ಪರಂ ಭರತಸ್ಯ ಕವಚಂ ತೇ ವದಾಮ್ಯಹಂ ।
ಸರ್ವಪಾಪಹರಂ ಪುಣ್ಯಂ ಸದಾ ಶ್ರೀರಾಮಭಕ್ತಿದಂ ॥ ೨೬ ॥

ಕೈಕೇಯೀತನಯಂ ಸದಾ ರಘುವರನ್ಯಸ್ತೇಕ್ಷಣಂ ಶ್ಯಾಮಲಂ ।
ಸಪ್ತದ್ವೀಪಪತೇರ್ವಿದೇಹತನಯಾಕಾಂತಸ್ಯವಾಕ್ಯೇ ರತಂ ।
ಶ್ರೀ ಸೀತಾಧವಸವ್ಯಪಾರ್ಶ್ವನಿಕಟೇ ಸ್ಥಿತ್ವಾ ವರಂ ಚಾಮರಂ ।
ಧೃತ್ವಾ ದಕ್ಷಿಣಸತ್ಕರೇಣ ಭರತಂ ತಂ ವೀಜಯಂತಂ ಭಜೇ ॥ ೨೭ ॥

ವೊಂದನ್ನೇ ಹೇಳಿದರೆ ಅದರಿಂದ ಈ ಲಕ್ಷ್ಮಣನಿಗೆ ಸಂತೋಷವಾಗುವುದಿಲ್ಲ. ತುಪ್ಪದಿಂದ ಅಭಿಘಾರವಾಡದೆ ದೇವರಿಗೆ ನೈವೇದ್ಯವನ್ನು ಕೊಟ್ಟಂತಾಗುವುದು.

೨೫. ಆದ್ದರಿಂದ ಈ ಲಕ್ಷ್ಮಣಕವಚವನ್ನು ರಾಮಕವಚದ ಜೊತೆಯಲ್ಲಿ ಹೇಳಿದರೆ ಮನುಷ್ಯನು ಎಲ್ಲಾ ಇಷ್ಟಗಳನ್ನೂ ಹೊಂದುತ್ತಾನೆ.

ಇಂತು ಲಕ್ಷ್ಮಣಕವಚವು

ಶ್ರೀ ಭರತಕವಚವು

೨೬. ಇನ್ನುಮೇಲೆ ಭರತನ ಕವಚವನ್ನು ಹೇಳುತ್ತೇನೆ. ಕೇಳು. ಇದು ಎಲ್ಲಾ ಪಾಪಗಳನ್ನೂ ನಾಶಮಾಡುತ್ತದೆ. ಪುಣ್ಯಕರವಾದುದು. ಶ್ರೀರಾಮನಲ್ಲಿ ಭಕ್ತಿಯನ್ನುಂಟುಮಾಡುತ್ತದೆ.

೨೭. ಶ್ರೀರಾಮನಲ್ಲಿಯೇ ದೃಷ್ಟಿಯನ್ನಿಟ್ಟಿರುವ, ಶ್ಯಾಮಲವರ್ಣವುಳ್ಳ, ಸಪ್ತದ್ವೀಪಗಳಿಗೂ ಪತಿಯಾದ ಶ್ರೀರಾಮನ ಮಾತಿನಲ್ಲಿ ಯಾವಾಗಲೂ ಆಸಕ್ತನಾಗಿರುವ, ಶ್ರೀರಾಮನ ಬಲಗಡೆಯಲ್ಲಿ ಇದ್ದುಕೊಂಡು ಯಾನಾಗಲೂ ಉತ್ತಮವಾದ ಚಾಮರವನ್ನು ಹಿಡಿದು ಬೀಸುತ್ತಾ ಇರುವ, ಕೈಕೇಯಿಯ ಮಗನಾದ ಭರತನನ್ನು ಭಜಿಸುತ್ತೇನೆ.

॥ ಅಸ್ಯ ಶ್ರೀಭರತಕವಚ ಮಂತ್ರಸ್ಯ ॥

ಅಗಸ್ತ್ಯ ಋಷಿಃ। ಶ್ರೀಭರತೋ ದೇವತಾ। ಅನುಷ್ಟುಪ್ ಛಂದಃ। ಶಂಖ ಇತಿ ಬೀಜಂ। ಕೈಕೇಯೀನಂದನ ಇತಿ ಶಕ್ತಿಃ। ಭರತಖಂಡೇಶ್ವರ ಇತಿ ಕೀಲಕಂ। ರಾಮಾನುಜ ಇತ್ಯಸ್ತ್ರಂ। ಸಪ್ತದ್ವೀಪೇಶ್ವರದಾಸ ಇತಿ ಕವಚಂ। ರಾಮಾಂಶಜ ಇತಿ ಮಂತ್ರಃ। ಶ್ರೀ ಭರತಪ್ರೀತ್ಯರ್ಥ್ಯಂ ಸಕಲಕಾಮನಾಸಿದ್ಧ್ಯರ್ಥಂ ಜಪೇ ವಿನಿಯೋಗಃ ॥

॥ ಅಥಾಂಗುಳಿನ್ಯಾಸಃ ॥

ಓಂ ಭರತಾಯ ಅಂಗುಷ್ಠಾಭ್ಯಾಂ ನಮಃ
ಓಂ ಶಂಖಾಯ ತರ್ಜನೀಭ್ಯಾಂ ನಮಃ
ಓಂ ಕೈಕೇಯೀನಂದಾನಾಯ ಮಧ್ಯಮಾಭ್ಯಾಂ ನಮಃ
ಓಂ ಭರತಖಂಡೇಶ್ವರಾಯ ಅನಾಮಿಕಾಭ್ಯಾಂ ನಮಃ
ಓಂ ರಾಮಾನುಜಾಯ ಕನಿಷ್ಠಿಕಾಭ್ಯಾಂ ನಮಃ
ಓಂ ಸಪ್ತದ್ವೀಪೇಶ್ವರದಾಸಾಯ ಕರತಲಕರಪೃಷ್ಠಾಭ್ಯಾಂನಮಃ

ಓಂ ಈ ಭರತಕವಚ ಮಂತ್ರಕ್ಕೆ

ಅಗಸ್ತ್ಯನು ಋಷಿಯು,ಶ್ರೀ ಭರತನೇ ದೇವತೆಯು, ಅನುಷ್ಟುಪ್ ಛಂದಸ್ಸು, ಶಂಖವು ಬೀಜವು, ಕೈಕೇಯೀನಂದನ ಎಂಬುದು ಶಕ್ತಿಯು, ಭರತ ಖಂಡೇಶ್ವರ ಎಂಬುದು ಕೀಲಕವು, ರಾಮಾನುಜ ಎಂಬುದು ಅಸ್ತ್ರವು, ಸಪ್ತದ್ವೀಪೇಶ್ವರದಾಸ ಎಂಬುದು ಕವಚವು. ರಾಮಾಂಶದಿಂದ ಹುಟ್ಟಿದವನು ಎಂಬುದುದೇ ಮಂತ್ರವು. ಶ್ರೀ ಭರತನ ಪ್ರೀತಿಗೋಸ್ಕರಲೂ, ಸಕಲಕಾಮನಾಸಿದ್ಧಿಗೋಸ್ಕರಲೂ, ಜಪಿಸುವುದರಲ್ಲಿ ವಿನಿಯೋಗವು.

ಅಂಗುಳಿನ್ಯಾಸವು

ಓಂ ಭರತನಿಗೋಸ್ಕರ ಅಂಗುಷ್ಠಗಳಿಗೆ ನಮಃ
ಓಂ ಶಂಖಕ್ಕೋಸ್ಕರ ತರ್ಜನಿಗಳಿಗೆ ನಮಃ
ಓಂ ಕೈಕೇಯೀನಂದನನಿಗೋಸ್ಕರ ಮಧ್ಯಮಗಳಿಗೆ ನಮಃ
ಓಂ ಭರತಖಂಡೇಶ್ವರನಿಗೋಸ್ಕರ ಅನಾಮಿಕೆಗಳಿಗೆ ನಮಃ
ಓಂ ರಾಮಾನುಜನಿಗೋಸ್ಕರ ಕನಿಷ್ಠಿಕೆಗಳಿಗೆ ನಮಃ
ಓಂ ಸಪ್ತದ್ವೀಪೇಶ್ವರದಾಸನಿಗೋಸ್ಕರ ಕರತಳಗಳಿಗೆ ನಮಃ

॥ ಅಥ ಹೃದಯಾದ್ಯಂಗನ್ಯಾಸಃ ॥

ಓಂ ಭರತಾಯ ಹೃದಯಾಯ ನಮಃ
ಓಂ ಶಂಖಾಯ ಶಿರಸೇ ಸ್ವಾಹಾ
ಓಂ ಕೇಕಯೀನಂದನಾಯ ಶಿಖಾಯೈ ವಷಟ್
ಓಂ ಭರತಖಂಡೇಶ್ವರಾಯ ಕವಚಾಯ ಹುಂ
ಓಂ ರಾವಣಾನುಜಾಯ ನೇತ್ರತ್ರಯಾಯ ವೌಷಟ್
ಓಂ ಸಪ್ತದ್ವಿಪೇಶ್ವರದಾಸಾಯ ಅಸ್ತ್ರಾಯ ಫಟ್
ಓಂ ರಾಮಾಂಶಜಾಯೇತಿ ದಿಗ್ಬಂಧಃ

॥ ಅಥ ಧ್ಯಾನಂ ॥

ರಾಮಚಂದ್ರಸವ್ಯಪಾರ್ಶ್ವೇ ಸ್ಥಿತಂ ಕೇಕಯಜಾಸುತಂ ।
ರಾಮಾಯ ಚಾಮರೇಣೈವ ವಿಜೇಯಂತಂ ಮನೋರಮಂ ॥ ೨೮ ॥

ರತ್ನಕುಂಡಲಕೇಯೂರಕಂಕಣಾದಿಸುಭೂಷಿತಂ ।
ಪೀತಾಂಬರಪರೀಧಾನಂ ವನಮಾಲಾವಿರಾಜಿತಂ ॥ ೨೯ ॥

ಇದು ಹೃದಯಾದಿನ್ಯಾಸವು

ಓಂ ಭರತನಿಗೋಸ್ಕರ ಹೃದಯಕ್ಕೆ ನಮಃ
ಓಂ ಶಂಖಕ್ಕೋಸ್ಕರ ಶಿರಸ್ಸಿಗೆ ನಮಃ
ಓಂ ಕೈಕೇಯೀನಂದನನಿಗೋಸ್ಕರ ಶಿಖೆಗಳಿಗೆ ನಮಃ
ಓಂ ಭರತಖಂಡೇಶ್ವರನಿಗೋಸ್ಕರ ಕವಚಗಳಿಗೆ ನಮಃ
ಓಂ ರಾಮಾನುಜನಿಗೋಸ್ಕರ ನೇತ್ರತ್ರಯಗಳಿಗೆ ನಮಃ
ಓಂ ಸಪ್ತದ್ವೀಪೇಶ್ವರನದಾಸನಿಗೋಸ್ಕರ ಅಸ್ತ್ರಾಯ ನಮಃ
ಓಂ ರಾಮಾಂಶಜಾಯ ಎಂಬುದು ದಿಗ್ಬಂಧನವು.

ಧ್ಯಾನವು

೨೮–೨೯. ರಾಮಚಂದ್ರನ ಬಲಗಡೆಯಲ್ಲಿರುವ, ಕೇಕಯಿಯ ಮಗನಾದ, ಶ್ರೀರಾಮನನ್ನು ಚಾಮರದಿಂದ ಬೀಸುತ್ತಲಿರುವ, ಮನೋರಮನಾದ, ರತ್ನದ ಕುಂಡಲಗಳಿಂದಲೂ, ಭುಜಕೀರ್ತಿಗಳಿಂದಲೂ ಕಂಕಣವೇ ಮುಂತಾದುವುಗಳಿಂದಲೂ ಅಲಂಕೃತನಾದ, ಪೀತಾಂಬರವನ್ನು ಧರಿಸಿರುವ, ವನಮಾಲೆಯಿಂದ ಪ್ರಕಾಶಿಸುವ, ಭರತನನ್ನು ನಮಸ್ಕರಿಸುತ್ತೇನೆ.

ಮಾಂಡವೀಧೌತಚರಣಂ ರಶನಾನೂಪುರಾನ್ವಿತಂ ।
ನೀಲೋತ್ಪಲದಳಶ್ಯಾಮಂ ದ್ವಿಜರಾಜಸಮಾನನಂ ॥ ೩೦ ॥

ಆಜಾನುಬಾಹುಂ ಭರತಖಂಡಸ್ಯ ಪ್ರೀತಿಪಾಲಕಂ ।
ರಾಮಾನುಜಂ ಸ್ಮಿತಾಸ್ಯಂ ಚ ಶತ್ರುಘ್ನಪರಿವಂದಿತಂ ॥ ೩೧ ॥

ರಾಮನ್ಯಸ್ತೇಕ್ಷಣಂ ಸೌಮ್ಯಂ ವಿದ್ಯುತ್ಪುಂಜಸಮಪ್ರಭಂ ।
ರಾಮಭಕ್ತಂ ಮಹಾವೀರಂ ವಂದೇ ತಂ ಭರತಂ ಶುಭಂ ॥ ೩೨ ॥

ಏವಂ ಧ್ಯಾತ್ವಾ ತು ಭರತಂ ರಾಮಪಾದೇಕ್ಷಣಂ ಹೃದಿ ।
ಕವಚಂ ಪಠನೀಯಂ ಹಿ ಭರತಸ್ಯೇದಮುತ್ತಮಂ ॥ ೩೩ ॥

ಓಂ ಪೂರ್ವತೋ ಭರತಃ ಪಾತು ದಕ್ಷಿಣೇ ಕೇಕಯೀಸುತಃ ।
ನೃಪಾತ್ಮಜಃ ಪ್ರತೀಚ್ಯಾಂ ಹಿ ಪಾತೂದೀಚ್ಯಾಂ ರಘೂತ್ತಮಃ ॥ ೩೪ ॥

೩೦–೩೨. ಮಾಂಡವಿಯಿಂದ ಕಾಲುಗಳನ್ನು ತೊಳೆಸಿಕೊಳ್ಳುವ, ಉಡಿಧಾರವನ್ನೂ ಕಾಲುಬಳೆಯನ್ನೂ ಹಾಕಿಕೊಂಡಿರುವ, ಕನ್ನೈದಿಲೆಯಂತೆ ಶ್ಯಾಮಲವರ್ಣವುಳ್ಳ, ಚಂದ್ರನಂತೆ ಮುಖವುಳ್ಳ, ಆಜಾನುಬಾಹುವಾದ, ಭರತಖಂಡವನ್ನು ಪ್ರೀತಿಯಿಂದ ರಕ್ಷಿಸುವ, ನಗುಮುಖವುಳ್ಳ, ರಾಮನಿಗೆ ತಮ್ಮನಾದ, ಶತ್ರುಘ್ನನಿಂದ ನಮಸ್ಕರಿಸಿಕೊಳ್ಳುವ, ರಾಮನಲ್ಲಿಯೇ ದೃಷ್ಟಿಯನ್ನು ಇಟ್ಟಿರುವ ಸೌಮ್ಯವಾದ, ಮಿಂಚುಗಳ ಗುಂಪಿನಂತೆ ಕಾಂತಿಯುಳ್ಳ, ರಾಮಭಕ್ತನೂ ಮಹಾವೀರನೂ ಆದ, ಶುಭನಾದ, ಭರತನನ್ನು ನಮಸ್ಕರಿಸುತ್ತೇನೆ.

೩೩. ರಾಮನ ಪಾದಗಳಲ್ಲಿ ದೃಷ್ಟಿಯನ್ನಿಟ್ಟಿರುವ ಭರತನನ್ನು, ಈ ರೀತಿಯಾಗಿ ಮನಸ್ಸಿನಲ್ಲಿ ಧ್ಯಾನಮಾಡಿ ಭರತನ ಈ ಉತ್ತಮವಾದ ಕವಚವನ್ನು ಹೇಳಬೇಕು.

೩೪. ಓಂ ಭರತನು ಪೂರ್ವದಿಕ್ಕಿನಲ್ಲಿಯೂ, ಕೈಕೇಯೀಸುತನು ದಕ್ಷಿಣದಿಕ್ಕಿನಲ್ಲಿಯೂ, ನೃಪಾತ್ಮಜನು ಪಶ್ಚಿಮದಿಕ್ಕಿನಲ್ಲಿಯೂ, ರಘೂತ್ತಮನು ಉತ್ತರದಿಕ್ಕಿನಲ್ಲಿಯೂ ಇದ್ದುಕೊಂಡು ರಕ್ಷಿಸಲಿ.

ಅಧಃ ಪಾತು ಶ್ಯಾಮಲಾಂಗಶ್ಚೋರ್ಧ್ವಂ ದಶರಥಾತ್ಮಜಃ ।
ಮಧ್ಯೇ ಭರತವರ್ಷೇಶಸ್ಸರ್ವತಸ್ಸೂರ್ಯವಂಶಜಃ ॥ ೩೫ ॥

ಶಿರಸ್ತಕ್ಷಪಿತಾ ಪಾತು ಫಾಲಂ ಪಾತು ಹರಿಪ್ರಿಯಃ ।
ಭ್ರುವೋರ್ಮಧ್ಯಂ ಜನಕಜಾವಾಕ್ಯೈಕತತ್ಪರೋಽವತು ॥ ೩೬ ॥

ಪಾತು ಜನಕಜಾಮಾತಾ ಮಮ ನೇತ್ರೇ ಸದಾತ್ರ ಹಿ ।
ಕಪೋಲೇ ಮಾಂಡವೀಕಾಂತಃ ಕರ್ಣಮೂಲೇ ಸ್ಮಿತಾನಃ ॥ ೩೭ ॥

ನಾಸಾಗ್ರಂ ಮೇ ಸದಾ ಪಾತು ಕೈಕೇಯಿತೋಷವರ್ಧನಃ ।
ಉದಾರಾಂಗೋ ಮುಖೇ ಪಾತು ವಾಣೀಂ ಪಾತು ಜಟಾಧರಃ ॥ ೩೮ ॥

ಪಾತು ಪುಷ್ಕರತಾತೋ ಮೇ ಜಿಹ್ವಾಂ ದಂತಾನ್ ಪ್ರಭಾಮಯಃ ।
ಚುಬುಕಂ ವಲ್ಕಲಧರಃ ಕಂಠೇ ಪಾತು ವರಾನನಃ ॥ ೩೯ ॥

---

೩೫. ಶ್ಯಾಮಾಂಗನು ತಳಭಾಗದಲ್ಲಿಯೂ, ದಶರಥಾತ್ಮಜನು ಮೇಲು ಭಾಗದಲ್ಲಿಯೂ, ಭರತವರ್ಷೇಶನು ಮಧ್ಯದಲ್ಲಿಯೂ, ಸೂರ್ಯವಂಶಜನು ಎಲ್ಲಾ ಕಡೆಯಲ್ಲಿಯೂ ರಕ್ಷಿಸಲಿ.

೩೬. ತಕ್ಷನ ತಂದೆಯು ತಲೆಯನ್ನೂ, ಹರಿಪ್ರಿಯನು ಹಣೆಯನ್ನೂ, ಸೀತೆಯ ಮಾತಿನಂತೆ ನಡೆಯುವವನು ಹುಬ್ಬುಗಳ ಮಧ್ಯವನ್ನೂ ರಕ್ಷಿಸಲಿ.

೩೭. ಜನಕನ ಅಳಿಯನು ನನ್ನ ಕಣ್ಣುಗಳನ್ನೂ, ಮಾಂಡವಿಯ ನಾಥನು ಕಪೋಲಗಳನ್ನೂ, ನಗುಮುಖವುಳ್ಳವನು ಕಿವಿಯ ಬುಡವನ್ನೂ ರಕ್ಷಿಸಲಿ.

೩೮. ಕೈಕೇಯಿಗೆ ಸಂತೋಷವನ್ನು ಹೆಚ್ಚಿಸುವವನು ನನ್ನ ಮೂಗಿನ ತುದಿಯನ್ನೂ, ಉದಾರಾಂಗನು ನನ್ನ ಮುಖವನ್ನೂ, ಜಟಾಧರನು ನನ್ನ ವಾಣಿಯನ್ನೂ ರಕ್ಷಿಸಲಿ.

೩೯. ಪುಷ್ಕರನ ತಂದೆಯು ನಾಲಗೆಯನ್ನೂ, ಪ್ರಭಾಮಯನು ನನ್ನ ದಂತಗಳನ್ನೂ, ನಾರುಮಡಿಗಳನ್ನುಟ್ಟಿರುವವನು ನನ್ನ ಗಲ್ಲವನ್ನೂ, ವರಾನನನು ಕಂಠವನ್ನೂ ರಕ್ಷಿಸಲಿ.

ಸ್ಕಂಧೌ ಪಾತು ಜಿತಾರಾತಿರ್ಭುಜೌ ಶತ್ರುಘ್ನವಂದಿತಃ ।
ಕರೌ ಕವಚಧಾರೀ ಚ ನಖಾನ್ ಖಡ್ಗಧರೋಽವತು ॥ ೪೦ ॥

ಕುಕ್ಷೀ ರಾಮಾನುಜಃ ಪಾತು ವಕ್ಷಃ ಶ್ರೀರಾಮವಲ್ಲಭಃ ।
ಪಾರ್ಶ್ವೇ ರಾಘವಪಾರ್ಶ್ವಸ್ಥಃ ಪಾತು ಪೃಷ್ಠಂ ಸುಭಾಷಣಃ ॥ ೪೧ ॥

ಜಠರಂ ಚ ಧನುರ್ಧಾರೀ ನಾಭಿಂ ಶರಕರೋಽವತು ।
ಕಟಿಂ ಪದ್ಮೇಕ್ಷಣಃ ಪಾತು ಗುಹ್ಯಂ ರಾಮೈಕಮಾನಸಃ ॥ ೪೨ ॥

ರಾಮಮಿತ್ರಃ ಪಾತು ಲಿಂಗಮೂರೂ ಶ್ರೀರಾಮಸೇವಕಃ ।
ನಂದಿಗ್ರಾಮಸ್ಥಿತಃ ಪಾತು ಜಾನುನೀ ಮಮ ಸರ್ವದಾ ॥ ೪೩ ॥

ಶ್ರೀರಾಮಪಾದುಕಾಧಾರೀ ಪಾತು ಜಂಘೇ ಸದಾ ಮಮ ।
ಗುಲ್ಫೌ ಶ್ರೀರಾಮಬಂಧುಶ್ಚ ಪಾದೌ ಪಾತು ಸುರಾರ್ಚಿತಃ ॥ ೪೪ ॥

---

೪೦. ಶತ್ರುಗಳನ್ನು ಜಯಿಸಿದವನು ಕತ್ತನ್ನೂ, ಶತ್ರುಘ್ನವಂದಿತನು ಭುಜಗಳನ್ನೂ, ಕವಚಧಾರಿಯು ಕೈಗಳನ್ನೂ, ಖಡ್ಗಧರನು ನಖಗಳನ್ನೂ ರಕ್ಷಿಸಲಿ.

೪೧. ರಾಮಾನುಜನು ಕುಕ್ಷಿಯನ್ನೂ, ಶ್ರೀರಾಮವಲ್ಲಭನು ಎದೆಯನ್ನೂ ರಾಘವನ ಪಕ್ಕದಲ್ಲಿರುವವನು ಪಾರ್ಶ್ವಗಳನ್ನೂ, ಸುಭಾಷಣನು ಪೃಷ್ಟಪ್ರದೇಶವನ್ನೂ ರಕ್ಷಿಸಲಿ.

೪೨. ಧನುರ್ಧಾರಿಯು ಜಠರವನ್ನೂ, ಕೈಯ್ಯಲ್ಲಿ ಬಾಣವನ್ನುಳ್ಳವನು ನಾಭಿಯನ್ನೂ, ಪದ್ಮದಂತೆ ಕಣ್ಣುಳ್ಳವನು ನನ್ನ ನಡುವನ್ನೂ, ರಾಮನಲ್ಲಿ ಮನಸ್ಸುಳ್ಳವನು ಗುಹ್ಯವನ್ನೂ ರಕ್ಷಿಸಲಿ.

೪೩. ರಾಮಮಿತ್ರನು ಲಿಂಗವನ್ನೂ, ಶ್ರೀರಾಮಸೇವಕನು ತೊಡೆಗಳನ್ನೂ, ನಂದಿಗ್ರಾಮದಲ್ಲಿರುವವನು ನನ್ನ ಜಾನುಪ್ರದೇಶಗಳನ್ನೂ ರಕ್ಷಿಸಲಿ.

೪೪. ಶ್ರೀರಾಮನ ಪಾದುಕೆಗಳನ್ನು ಹೊತ್ತಿರುವವನು ಜಂಘೆಗಳನ್ನೂ ಶ್ರೀರಾಮನ ಬಂಧುವು ಹಿಮ್ಮಡಿಗಳನ್ನೂ ಸುರಾರ್ಚಿತನು ಪಾದಗಳನ್ನೂ ರಕ್ಷಿಸಲಿ.

ರಾಮಾಜ್ಞಾಪಾಲಕಃ ಪಾತು ಮಮಾಂಗಾನ್ಯತ್ರ ಸರ್ವದಾ ।
ಮಮ ಪಾದಾಂಗುಳೀಃ ಪಾತು ರಘುವಂಶಸುಭೂಷಣಃ ॥ ೪೫ ॥

ರೋಮಾಣಿ ಪಾತು ಮೇ ರಮ್ಯಃ ಪಾತು ರಾತ್ರೌ ಸುಧೀರ್ಮಮ ।
ತೂಣೀರಧಾರೀ ದಿವಸೇ ದಿಕ್ಪಾತು ಮಮ ಸರ್ವದಾ ॥ ೪೬ ॥

ಸರ್ವಕಾಲೇಷು ಮಾಂ ಪಾತು ಪಾಂಚಜನ್ಯಸ್ಸದಾ ಭುವಿ ।
ಏವಂ ಶ್ರೀಭರತಸ್ಯೇದಂ ಸುತೀಕ್ಷ್ಣ ಕವಚಂ ಶುಭಂ ॥ ೪೭ ॥

ಮಯಾ ಪ್ರೋಕ್ತಂ ತವಾಗ್ರೇ ಹಿ ಮಹಾಮಂಗಳಕಾರಕಂ ।
ಸ್ತೋತ್ರಾಣಾಮುತ್ತಮಂ ಸ್ತೋತ್ರಮಿದಂ ಜ್ಞೇಯಂ ಸುಪುಣ್ಯದಂ ॥

ಪಠನೀಯಂ ಸದಾ ಭಕ್ತ್ಯಾ ರಾಮಚಂದ್ರಸ್ಯ ಹರ್ಷದಂ ।
ಪಠಿತ್ವಾ ಭರತಸ್ಯೇದಂ ಕವಚಂ ರಘುನಂದನಃ ॥ ೪೯ ॥

---

೪೫. ರಾಮಾಜ್ಞಾಪಾಲಕನು ನನ್ನ ಅಂಗಗಳನ್ನೂ ಯಾವಾಗಲೂ ರಕ್ಷಿಸಲಿ, ರಘುವಂಶ ಸುಭೂಷಣನು ನನ್ನ ಕಾಲಿನ ಬೆರಳುಗಳನ್ನೂ ರಕ್ಷಿಸಲಿ.

೪೬. ರಮ್ಯನಾಗಿರುವವನು ನನ್ನ ರೋಮಗಳನ್ನೂ ರಕ್ಷಿಸಲಿ, ಒಳ್ಳೆ ಬುದ್ಧಿಯುಳ್ಳವನು ನನ್ನನ್ನು ರಾತ್ರಿಯಲ್ಲಿಯೂ, ಬತ್ತಳಿಕೆಗಳನ್ನು ಧರಿಸಿರುವವನು ನನ್ನನ್ನು ಹಗಲಿನಲ್ಲಿಯೂ ರಕ್ಷಿಸಲಿ.

೪೭. ಪಾಂಚಜನ್ಯನು ನನ್ನನ್ನು ಭೂಮಿಯಲ್ಲಿ ಯಾವಾಗಲೂ ರಕ್ಷಿಸಲಿ. ಎಲೈ ಸುತೀಕ್ಷ್ಣನೇ ! ಇದೇ ಭರತನ ಕವಚವು. ಶುಭವಾದುದು.

೪೮. ಮಹಾ ಮಂಗಳಕಾರಕವಾದ ಈ ಕವಚವನ್ನು ನಿನಗೆ ಹೇಳಿದ್ದೇನೆ. ಈ ಕವಚವು ಸ್ತೋತ್ರಗಳೊಳಗೆಲ್ಲಾ ಉತ್ತಮವಾದ ಸ್ತೋತ್ರವು. ಪುಣ್ಯವನ್ನು ಕೊಡತಕ್ಕದ್ದು.

೪೯–೫೦. ಇದು ರಾಮಚಂದ್ರನಿಗೆ ಸಂತೋಷವನ್ನುಂಟುಮಾಡತಕ್ಕದ್ದು ಆದ್ದರಿಂದ ಇದನ್ನು ಯಾವಾಗಲೂ ಹೇಳಬೇಕು. ಭರತನ ಈ ಕವಚವನ್ನು ಹೇಳಿದರೆ ಶ್ರೀರಾಮನು ಸಂತೋಷಗೊಳ್ಳುವಂತೆ ಮತ್ತಾವ ಕವಚದಿಂದಲೂ

ಯಥಾ ಯಾತಿ ಪರಂ ತೋಷಂ ತಥಾಸ್ಯ ಕವಚೇನ ಚ ।
ತಸ್ಮಾದೇತತ್ಸದಾ ಜಪ್ಯಂ ಕವಚಾನಾಮನುತ್ತಮಂ ॥ ೫೦ ॥

ಅಸ್ಯಾತ್ರ ಪಠನಾನ್ಮರ್ತ್ಯಸ್ಸರ್ವಕಾಮಾನವಾಪ್ನುಯಾತ್ ।
ವಿದ್ಯಾಕಾಮೋ ಲಭೇದ್ವಿದ್ಯಾಂ ಪುತ್ರಕಾಮೋ ಲಭೇತ್ಸುತಂ ॥ ೫೧ ॥

ಪತ್ನೀಕಾಮೋ ಲಭೇತ್ಪತ್ನೀಂ ಧನಾರ್ಥೀ ಧನಮಾಪ್ನುಯಾತ್ ।
ಯದ್ಯನ್ಮನೋಭಿಲಷಿತಂ ತತ್ತತ್ಕವಚಪಾಠತಃ ॥ ೫೨ ॥

ಲಭ್ಯತೇ ಮಾನವೈರತ್ರ ಸತ್ಯಂ ಸತ್ಯಂ ವದಾಮ್ಯಹಂ ।
ತಸ್ಮಾತ್ಸದಾ ಜಪನೀಯಂ ರಾಮೋಪಾಸಕಮಾನವೈಃ ॥ ೫೩ ॥

॥ ಇತಿ ಭರತಕವಚಮ್ ॥

ಅಥ ಶ್ರೀ ಶತ್ರುಘ್ನಕವಚಂ ಸುತೀಕ್ಷ್ಣ ಶ್ರುಣು ಸಾದರಂ ।
ಸರ್ವಕಾಮಪ್ರದಂ ರಮ್ಯಂ ರಾಮಸದ್ಭಕ್ತಿವರ್ಧನಂ ॥ ೫೪ ॥

ಸಂತೋಷಗೊಳ್ಳುವುದಿಲ್ಲ. ಇದು ಉತ್ತಮವಾದ ಕವಚವು. ಆದ್ದರಿಂದ ಇದನ್ನು ಯಾವಾಗಲೂ ಹೇಳಬೇಕು.

೫೧-೫೨. ಮನುಷ್ಯನು ಇದನ್ನು ಹೇಳುವುದರಿಂದ ಎಲ್ಲಾ ಇಷ್ಟಗಳನ್ನೂ ಹೊಂದುವನು. ವಿದ್ಯಾಕಾಮನು ವಿದ್ಯೆಯನ್ನೂ, ಪುತ್ರಕಾಮನು ಪುತ್ರನನ್ನೂ, ಪತ್ನೀಕಾಮನು ಪತ್ನಿಯನ್ನೂ, ಧನಕಾಮನು ಧನವನ್ನೂ, ಹೊಂದುವರು. ಇದನ್ನು ಹೇಳುವುದರಿಂದ ಯಾವುದನ್ನು ಮನಸ್ಸಿನಲ್ಲಿ ಹೊಂದಿರುವನೋ ಅದೆಲ್ಲವೂ ಲಭಿಸುತ್ತವೆ.

೫೩. ಇದನ್ನು ಪಠಿಸುವುದರಿಂದ ಎಲ್ಲವೂ ಸಿಕ್ಕುವುದು ಎನ್ನುವುದರಲ್ಲಿ ಸಂಶಯವಿಲ್ಲ. ಇದು ಸತ್ಯವು. ಸತ್ಯವು. ಸತ್ಯವಾಗಿಯೂ ಹೇಳುತ್ತೇನೆ. ರಾಮೋಪಾಸಕರಾದವರು ಇದನ್ನು ಯಾವಾಗಲೂ ಜಪಿಸಬೇಕು.

ಇಂತು ಭರತನ ಕವಚವು

ಶ್ರೀ ಶತ್ರುಘ್ನ ಕವಚವು.

೫೪. ಎಲೈ ಸುತೀಕ್ಷ್ಣನೇ! ಶತ್ರುಘ್ನನ ಕವಚವನ್ನು ಹೇಳುತ್ತೇನೆ. ಕೇಳು. ಇದೂ ಕೂಡ ಇಷ್ಟಾರ್ಥಗಳನ್ನೆಲ್ಲಾ ಕೊಡುತ್ತದೆ. ರಾಮನಲ್ಲಿ ಭಕ್ತಿಯನ್ನು ಹೆಚ್ಚಿಸುತ್ತದೆ.

ಶತ್ರುಘ್ನಂ ಧೃತಕಾರ್ಮುಕಂ ಧೃತಮಹಾತೂಣೀರಬಾಣೋತ್ತಮಂ ।
ಪಾರ್ಶ್ವೇ ಶ್ರೀರಘುನಂದನಸ್ಯ ವಿನಯಾದ್ವಾಮೇ ಸ್ಥಿತಂ ಸುಂದರಂ ।
ರಾಮಂ ಸ್ವೀಯಕರೇಣ ತಾಲದಲಜಂ ಧೃತ್ವಾತಿಚಿತ್ರಂ ವರಂ ।
ಸೂರ್ಯಾಭಂ ವ್ಯಜನಂ ಸಭಾಸ್ಥಿತಮಹಂ ತಂ ವೀಜಯಂತಂ ಭಜೇ ॥

॥ ಅಸ್ಯ ಶ್ರೀಶತ್ರುಘ್ನಕವಚಮಂತ್ರಸ್ಯ ॥

ಅಗಸ್ತಿಃ ಋಷಿಃ । ಶ್ರೀ ಶತ್ರುಘ್ನೋ ದೇವತಾ । ಅನುಷ್ಟುಪ್ ಛಂದಃ । ಸುದರ್ಶನ ಇತಿ ಬೀಜಂ । ಕೈಕೇಯಿನಂದನ ಇತಿ ಶಕ್ತಿಃ । ಶ್ರೀಭರತಾನುಜ ಇತಿ ಕೀಲಕಂ । ಭರತಮಂತ್ರೀತ್ಯಸ್ತ್ರಂ । ಶ್ರೀರಾಮದಾಸ ಇತಿ ಕವಚಂ । ಲಕ್ಷ್ಮಣಾಂಶಜ ಇತಿಮಂತ್ರಃ. ಶ್ರೀಶತ್ರುಘ್ನಪ್ರೀತ್ಯರ್ಥಂ ಸಕಲಮನಃ ಕಾಮನಾಸಿಧ್ಯರ್ಥಂ ಜಪೇ ವಿನಿಯೋಗಃ ॥

॥ ಅಂಥಾಂಗುಳೀನ್ಯಾಸಃ ॥
ಓಂ ಶತ್ರುಘ್ನಾಯ ಅಂಗುಷ್ಠಾಭ್ಯಾಂ ನಮಃ

ಧ್ಯಾನವು

೫೫. ಧನುಸ್ಸನ್ನು ಧರಿಸಿರುವ, ಬಾಣವನ್ನು ಹಿಡಿದು ಬತ್ತಳಿಕೆಯನ್ನು ಧರಿಸಿರುವ, ರಾಮನ ಎಡಭಾಗದಲ್ಲಿ ವಿನಯದಿಂದ ನಿಂತುಕೊಂಡು ಕೈಯ್ಯಲ್ಲಿ ತಾಳೆಯ ಗರಿಯ ಬೀಸಣಿಗೆಯನ್ನು ಹಿಡಿದು ಆ ಶ್ರೀರಾಮನನ್ನು ಸಭೆಯಲ್ಲಿ ಬೀಸುತ್ತಿರುವ, ಶ್ರೀ ಶತ್ರುಘ್ನನನ್ನು ಭಜಿಸುತ್ತೇನೆ.

ಓಂ ಈ ಶತ್ರುಘ್ನಕವಚವೆಂಬ ಮಂತ್ರಕ್ಕೆ

ಅಗಸ್ತ್ಯನು ಋಷಿಯು, ಶತ್ರುಘ್ನನು ದೇವತೆಯು, ಅನುಷ್ಟುಪ್ ಛಂದಸ್ಸು, ಸುದರ್ಶನವೆಂಬುದು ಬೀಜವು, ಕೈಕೇಯಿನಂದನವೆಂಬುದು ಶಕ್ತಿಯು, ಶ್ರೀ ಭರತಾನುಜ ಎಂಬುದು ಕೀಲಕವು, ಭರತಮಂತ್ರಿ ಎಂಬುದು ಅಸ್ತ್ರವು, ಶ್ರೀರಾಮದಾಸ ಎಂಬುದು ಕವಚವು, ಲಕ್ಷ್ಮಣಾಂಶಜಎಂಬುದು ಮಂತ್ರವು, ಶ್ರೀ ಶತ್ರುಘ್ನನ ಪ್ರೀತಿಗೋಸ್ಕರವೂ ಎಲ್ಲಾ ಕಾಮನಗಳೂ ಸಿದ್ಧಿಸುವುದಕ್ಕೂ ಜಪಮಾಡುವುದರಲ್ಲಿ ವಿನಿಯೋಗವು.

ಅಂಗುಳಿನ್ಯಾಸವು
ಓಂ ಶತ್ರುಘ್ನನಿಗೋಸ್ಕರ ಅಂಗುಷ್ಠಗಳಿಗೆ ನಮಃ

ಓಂ ಸುದರ್ಶನಾಯ ತರ್ಜನೀಭ್ಯಾಂ ನಮಃ
ಓಂ ಕೈಕೇಯೀನಂದನಾಯ ಮಧ್ಯಮಾಭ್ಯಾಂ ನಮಃ
ಓಂ ಭರತಾನುಜಾಯ ಅನಾಮಿಕಾಭ್ಯಾಂ ನಮಃ ।
ಓಂ ಭರತಮಂತ್ರಿಣೇ ಕನಿಷ್ಠಿಕಾಭ್ಯಾಂ ನಮಃ
ಓಂ ಶ್ರೀರಾಮದಾಸಾಯ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಹೃದಯಾದಿನ್ಯಾಸಃ ॥

ಓಂ ಶತ್ರುಘ್ನಾಯ ಹೃದಯಾಯ ನಮಃ
ಓಂ ಸುದರ್ಶನಾಯ ಶಿರಸೇ ಸ್ವಾಹಾ
ಓಂ ಕೈಕಯೀನಂದನಾಯ ಶಿಖಾಯೈ ವಷಟ್
ಓಂ ಭರತಾನುಜಾಯ ಕವಚಾಯ ಹುಂ
ಓಂ ಭರತಮಂತ್ರಿಣೇ ನೇತ್ರತ್ರಯಾಯ ವೌಷಟ್
ಓಂ ಶ್ರೀರಾಮದಾಸಾಯ ಅಸ್ತ್ರಾಯ ಫಟ್
ಓಂ ಲಕ್ಷ್ಮಣಾಂಶಜೇತಿ ದಿಗ್ಬಂಧಃ

ಓಂ ಸುದರ್ಶನನಿಗೋಸ್ಕರ ತರ್ಜನಿಗಳಿಗೆ ನಮಃ
ಓಂ ಕೈಕೇಯೀನಂದನನಿಗೋಸ್ಕರ ಮಧ್ಯಮಗಳಿಗೆ ನಮಃ
ಓಂ ಭರತಾನುಜನಿಗೋಸ್ಕರ ಅನಾಮಿಕೆಗಳಿಗೆ ನಮಃ
ಓಂ ಭರತಮಂತ್ರಿಗೋಸ್ಕರ ಕನಿಷ್ಠಿಕೆಗಳಿಗೆ ನಮಃ
ಓಂ ಶ್ರೀರಾಮದಾಸನಿಗೋಸ್ಕರ ಕರತಲಗಳಿಗೆ ನಮಃ

ಹೃದಯಾದಿನ್ಯಾಸವು

ಓಂ ಶತ್ರುಘ್ನನಿಗೋಸ್ಕರ ಹೃದಯಕ್ಕೆ ನಮಃ
ಓಂ ಸುದರ್ಶನನಿಗೋಸ್ಕರ ಶಿರಸ್ಸಿಗೆ ನಮಃ
ಓಂ ಕೈಕೇಯೀನಂದನನಿಗೋಸ್ಕರ ಶಿಖೆಗೆ ನಮಃ
ಓಂ ಭರತಾನುಜನಿಗೋಸ್ಕರ ಕವಚಗಳಿಗೆ ನಮಃ
ಓಂ ಭರತಮಂತ್ರಿಗೋಸ್ಕರ ನೇತ್ರಗಳಿಗೆ ನಮಃ
ಓಂ ಶ್ರೀರಾಮದಾಸನಿಗೋಸ್ಕರ ಅಸ್ತ್ರಕ್ಕೆ ನಮಃ
ಓಂ ಲಕ್ಷ್ಮಣಾಂಶಜ ಎಂಬುದು ದಿಗ್ಬಂಧನವು.

|| ಅಥ ಧ್ಯಾನಂ ||

ರಾಮಸ್ಯ ಸಂಸ್ಥಿತಂ ವಾಮೇ ಪಾರ್ಶ್ವೇ ವಿನಯಪೂರ್ವಕಂ ।
ಕೈಕೇಯೀನಂದನಂ ಸೌಮ್ಯಂ ಮುಕುಟೇನಾತಿರಂಜಿತಂ || ೫೬ ||

ರತ್ನಕಂಕಣಕೇಯೂರವನಮಾಲಾವಿರಾಜಿತಂ ।
ರಶನಾಕುಂಡಲಧರಂ ರತ್ನಹಾರಸುನೂಪುರಂ || ೫೭ ||

ವ್ಯಜನೇನ ವೀಜಯಂತಂ ಜಾನಕೀಕಾಂತಮಾದರಾತ್ ।
ರಾಮಸ್ಯಸ್ತೇಕ್ಷಣಂ ವೀರಂ ಕೈಕೇಯೀತೋಷವರ್ಧನಂ || ೫೮ ||

ದ್ವಿಭುಜಂ ಕಂಜನಯನಂ ದಿವ್ಯಪೀತಾಂಬರಾನ್ವಿತಂ ।
ಸುಭುಜಂ ಸುಂದರಂ ಮೇಘಶ್ಯಾಮಲಂ ಸುಂದರಾನನಂ || ೫೯ ||

ಧ್ಯಾನವು

೫೬. ಶ್ರೀರಾಮನ ಎಡಪಕ್ಕದಲ್ಲಿ ವಿನಯಪೂರ್ವಕವಾಗಿ ನಿಂತು ಕೊಂಡಿರುವ, ಕಿರೀಟವನ್ನು ತೊಟ್ಟು ಬಹು ಮನೋಹರವಾಗಿರುವ ಕೈಕೇಯಿಯ ಮಗನಾದ ಶತ್ರುಘ್ನನನ್ನು ಧ್ಯಾನಿಸುತ್ತೇನೆ.

೫೭. ರತ್ನದ ಕೈಬಳೆ, ಭುಜಕೀರ್ತಿ, ವನಮಾಲೆಯೆಂಬ ಹಾರ ಇವು ಗಳಿಂದ ಸುಂದರನಾದ, ಉಡಿದಾರ ಕುಂಡಲಗಳನ್ನು ಧರಿಸಿರುವ, ರತ್ನದ ಹಾರವನ್ನೂ, ಕಾಲುಬಳೆಯನ್ನೂ ಧರಿಸಿರುವ ಶತ್ರುಘ್ನನನ್ನು ಧ್ಯಾನಿಸುತ್ತೇನೆ.

೫೮. ಜಾನಕಿಯ ಕಾಂತನಾದ ರಾಮನನ್ನು ಆದರವಾಗಿ ಬೀಸಣಿಗೆಯಿಂದ ಬೀಸುತ್ತಿರುವ, ರಾಮನಲ್ಲಿ ದೃಷ್ಟಿಯಿಟ್ಟಿರುವ, ವೀರನಾದ, ಕೈಕೇಯಿಗೆ ಸಂತೋಷ ವನ್ನುಂಟುಮಾಡುವ ಶತ್ರುಘ್ನನನ್ನು ಧ್ಯಾನಿಸುತ್ತೇನೆ.

೫೯. ಎರಡು ತೋಳುಗಳುಳ್ಳ, ಕಮಲದಂತೆ ಕಣ್ಣುಗಳುಳ್ಳ, ದಿವ್ಯವಾದ ಪಿತಾಂಬರವನ್ನು ಧರಿಸಿರುವ, ಒಳ್ಳೆಯ ಭುಜಗಳುಳ್ಳ, ಮೇಘದಂತೆ ನೀಲ ವರ್ಣವುಳ್ಳ, ಸುಂದರವಾದ ಮುಖವುಳ್ಳ ಶತ್ರುಘ್ನನನ್ನು ಧ್ಯಾನಿಸುತ್ತೇನೆ.

ರಾಮವಾಕ್ಯೇ ದತ್ತಕರ್ಣಂ ರಕ್ಷೋಘ್ನಂ ಖಡ್ಗಧಾರಿಣಂ ।
ಧನುರ್ಬಾಣಧರಂ ಶ್ರೇಷ್ಠಂ ಧೃತತೂಣೀರಮುತ್ತಮಂ ॥ ೬೦ ॥

ಸಭಾಯಾಂ ಸಂಸ್ಥಿತಂ ರಮ್ಯಂ ಕಸ್ತೂರೀತಿಲಕಾಂಕಿತಂ ।
ಮುಕುಟಸ್ಥಾವತಂಸಸೇನ ಶೋಭಿತಂ ಚ ಸ್ಮಿತಾನನಂ ॥ ೬೧ ॥

ರವಿವಂಶೋದ್ಭವಂ ದಿವ್ಯರೂಪಂ ದಶರಥಾತ್ಮಜಂ ।
ಮಧುರಾವಾಸಿನಂ ದೇವಂ ಲವಣಾಸುರಮರ್ದನಂ ॥ ೬೨ ॥

ಏವಂ ಧ್ಯಾತ್ವಾ ತು ಶತ್ರುಘ್ನಂ ರಾಮಪಾದೇಕ್ಷಣಂ ಹೃದಿ ।
ಪಠನೀಯಂ ವರಂ ಚೇದಂ ಕವಚಂ ತಸ್ಯ ಪಾವನಂ ॥ ೬೩ ॥

ಪೂರ್ವೇತ್ವವತು ಶತ್ರುಘ್ನಃ ಪಾತು ಯಾಮ್ಯೇ ಸುದರ್ಶನಃ ।
ಕೈಕೇಯೀನಂದನಃ ಪಾತು ಪ್ರತೀಚ್ಯಾಂ ಸರ್ವದಾ ಮಮ ॥ ೬೪ ॥

---

೬೦. ರಾಮನ ಮಾತಿನಲ್ಲಿಯೇ ಕಿವಿಯನ್ನು ಕೊಟ್ಟಿರುವ, ರಾಕ್ಷಸರನ್ನು ನಾಶಮಾಡುವ ಖಡ್ಗವನ್ನು ಧರಿಸಿರುವ, ಧನುರ್ಬಾಣಗಳನ್ನು ಹಿಡಿದಿರುವ ಬತ್ತಳಿಕೆಯನ್ನು ಧರಿಸಿರುವ, ಶ್ರೇಷ್ಠನಾದ ಶತ್ರುಘ್ನನನ್ನು ಧ್ಯಾನಿಸುತ್ತೇನೆ.

೬೧. ಸಭೆಯಲ್ಲಿ ಕುಳಿತಿರುವ, ರಮ್ಯವಾದ ಕಸ್ತೂರಿಯ ತಿಲಕವನ್ನು ಇಟ್ಟುಕೊಂಡಿರುವ, ಕಿರೀಟದಲ್ಲಿರುವ ಒಡವೆಗಳಿಂದ ಶೋಭಿತನಾದ, ನಗುಮುಖವುಳ್ಳ ಶತ್ರುಘ್ನನನ್ನು ಧ್ಯಾನಿಸುತ್ತೇನೆ.

೬೨. ಸೂರ್ಯವಂಶದಲ್ಲಿ ಹುಟ್ಟಿದ, ದಿವ್ಯವಾದ ರೂಪುಳ್ಳ, ದಶರಥನ ಮಗನಾದ, ಮಧುರೆಯಲ್ಲಿ ವಾಸಮಾಡುವ, ಲವಣಾಸುರನನ್ನು ಕೊಂದು ದೇವನಾದ ಶತ್ರುಘ್ನನನ್ನು ಧ್ಯಾನಮಾಡುತ್ತೇನೆ.

೬೩. ರಾಮನ ಪಾದದಲ್ಲಿ ದೃಷ್ಟಿಯಿಟ್ಟಿರುವ, ಶತ್ರುಘ್ನನನ್ನು ಹೃದಯದಲ್ಲಿ ಈ ರೀತಿಯಾಗಿ ಧ್ಯಾನಮಾಡಿ ಈ ಶತ್ರುಘ್ನನ ಕವಚವನ್ನು ಹೇಳಬೇಕು. ಇದು ಪಾವನವಾದುದು.

೬೪-೬೫. ಶತ್ರುಘ್ನನು ಪೂರ್ವದಿಕ್ಕಿನಲ್ಲಿಯೂ, ಸುದರ್ಶನನು ದಕ್ಷಿಣ ದಿಕ್ಕಿನಲ್ಲಿಯೂ, ಕೈಕೇಯಿನಂದನನು ಪಶ್ಚಿಮದಿಕ್ಕಿನಲ್ಲಿಯೂ, ರಾಮನ ತಮ್ಮನು

ಪಾತೂದೀಚ್ಯಾಂ ರಾಮಬಂಧುಃ ಪಾತ್ವಧೋ ಭರತಾನುಜಃ ।
ರವಿವಂಶೋದ್ಭವಶ್ಚೋರ್ಧ್ವಂ ಮಧ್ಯೇ ದಶರಥಾತ್ಮಜಃ ॥ ೬೫ ॥

ಸರ್ವತಃ ಪಾತು ಮಾಮತ್ರ ಕೈಕೇಯಿತೋಷವರ್ಧನಃ ।
ಶ್ಯಾಮಲಾಂಗಶ್ಶಿರಃ ಪಾತು ಫಾಲಂ ಶ್ರೀಲಕ್ಷ್ಮಣಾಂಶಜಃ ॥ ೬೬ ॥

ಭ್ರುವೋರ್ಮಧ್ಯೇ ಸದಾ ಪಾತು ಸುಮುಖೋತ್ರಾವನೀತಲೇ ।
ಶ್ರುತಕೀರ್ತಿಪತಿರ್ನೇತ್ರೇ ಕಪೋಲೇ ಪಾತು ರಾಘವಃ । ॥ ೬೭ ॥

ಕರ್ಣೌ ಕುಂಡವಿಕರ್ಣೋವ್ಯಾನ್ನಾಸಾಗ್ರಂ ನೃಪವಂಶಜಃ ।
ಮುಖಂ ಮಮ ಯುವಾ ಪಾತು ಪಾತುವಾಣೀಂ ಸ್ಫುಟಾಕ್ಷರಃ ॥ ೬೮ ॥

ಜಿಹ್ವಾಂ ಸುಬಾಹುತಾತೋವ್ಯಾದ್ಯೂಪಕೇತುಪಿತಾ ದ್ವಿಜಾನ್ ।
ಚುಬುಕಂ ರಮ್ಯಚುಬುಕಃ ಕಂಠಂ ಪಾತು ಸುಭಾಷಣಃ ॥ ೬೯ ॥

ಉತ್ತರದಿಕ್ಕಿನಲ್ಲಿಯೂ, ಭರತಾನುಜನು ತಳಭಾಗದಲ್ಲಿಯೂ, ರವಿವಂಶೋದ್ಭವನು ಮೇಲುಭಾಗದಲ್ಲಿಯೂ, ದಶರಥಾತ್ಮಜನು ಮಧ್ಯದಲ್ಲಿಯೂ, ನನ್ನನ್ನು ರಕ್ಷಿಸಲಿ.

೬೬. ಕೈಕೇಯಿಗೆ ಸಂತೋಷವನ್ನುಂಟುಮಾಡುವ, ಭರತ ಮಂತ್ರಿಯು ನನ್ನನ್ನು ಎಲ್ಲಾ ಕಡೆಯಲ್ಲಿಯೂ ಕಾಪಾಡಲಿ. ಶ್ಯಾಮಲಾಂಗನು ಶಿರಸ್ಸನ್ನೂ, ಲಕ್ಷ್ಮಣಾಂಶಜನು ಹಣೆಯನ್ನೂ ರಕ್ಷಿಸಲಿ.

೬೭. ಸುಮುಖನು ನನ್ನ ಹುಬ್ಬುಗಳ ಮಧ್ಯವನ್ನೂ, ಶ್ರುತಕೀರ್ತಿಯ ಪತಿಯು ನೇತ್ರಗಳನ್ನೂ, ರಾಘವನು ಕಪೋಲಗಳನ್ನೂ ರಕ್ಷಿಸಲಿ.

೬೮. ಕರ್ಣಾಭರಣಗಳನ್ನು ಹಾಕಿಕೊಂಡಿರುವವನು ಕಿವಿಗಳನ್ನೂ, ನೃಪವಂಶಜನು ಮೂಗಿನ ತುದಿಯನ್ನೂ, ಯುವಕನು ನನ್ನ ಮುಖವನ್ನೂ, ಸ್ಫುಟಾಕ್ಷರನು ನನ್ನ ವಾಣಿಯನ್ನೂ ರಕ್ಷಿಸಲಿ.

೬೯. ಸುಬಾಹುವಿನ ತಂದೆಯು ನಾಲಿಗೆಯನ್ನೂ, ಯೂಪಕೇತುವಿನ ತಂದೆಯು ಹಲ್ಲುಗಳನ್ನೂ, ರಮ್ಯವಾದ ಗಲ್ಲವುಳ್ಳವನು ಗಲ್ಲವನ್ನೂ, ಚೆನ್ನಾಗಿ ಮಾತನಾಡುವವನು ಕಂಠವನ್ನೂ ರಕ್ಷಿಸಲಿ.

ಸ್ಕಂಧೌ ಪಾತು ಮಹಾತೇಜಾಃ ಭುಜೌ ರಾಘವನಾಕ್ಯಕೃತ್ ।
ಕರೌ ಮೇ ಕಂಕಣಧರಃ ಪಾತು ಖಡ್ಗೀ ನಖಾನ್ಮಮ ॥ ೭೦ ॥

ಕುಕ್ಷೀ ರಾಮಪ್ರಿಯಃ ಪಾತು ಪಾತು ವಕ್ಷೋ ರಘೂತ್ತಮಃ ।
ಪಾರ್ಶ್ವೇ ಸುರಾರ್ಚಿತಃ ಪಾತು ಪಾತು ಪೃಷ್ಠಂ ವರಾನನಃ ॥ ೭೧ ॥

ಜಠರಂ ಪಾತು ರಕ್ಷೋಘ್ನಃ ಪಾತು ನಾಭಿಂ ಸುಲೋಚನಃ ।
ಕಟಿಂ ಭರತಮಂತ್ರೀ ಮೇ ಗುಹ್ಯಂ ಶ್ರೀರಾಮಸೇವಕಃ ॥ ೭೨ ॥

ರಾಮಾರ್ಪಿತಮನಾಃ ಪಾತು ಲಿಂಗಮೂರೂ ಸ್ಮಿತಾನನಃ ।
ಜಾನುನೀ ಹ್ಯತ್ರ ಮೇ ಪಾತು ಲವಣಾಸುರಘಾತಕಃ ॥ ೭೩ ॥

ರಾಮಮಿತ್ರಃ ಪಾತು ಜಂಘೇ ಗುಲ್ಫೌ ಪಾತು ಸುನೂಪುರಃ ।
ಪಾದೌ ನೃಪತಿಪೂಜ್ಯೋವ್ಯಾಚ್ಛ್ರೀಮಾನ್ಪಾದಾಂಗುಳೀರ್ಮಮ ॥ ೭೪ ॥

---

೭೦. ಮಹಾ ತೇಜಸ್ಸುಳ್ಳವನು ಹೆಗಲನ್ನೂ, ರಾಘವನ ಮಾತನ್ನು ನಡೆಸುವವನು ಭುಜಗಳನ್ನೂ, ಕಂಕಣವನ್ನು ಧರಿಸಿರುವವನು ಕೈಗಳನ್ನೂ, ಖಡ್ಗವನ್ನು ಧರಿಸಿರುವವನು ನನ್ನ ಉಗುರುಗಳನ್ನೂ ರಕ್ಷಿಸಲಿ.

೭೧. ರಾಮಪ್ರಿಯನು ಹೊಟ್ಟೆಯನ್ನೂ, ರಘೂತ್ತಮನು ಎದೆಯನ್ನೂ, ಸುರರಿಂದ ಪೂಜಿತನಾದವನು ಪಕ್ಕಗಳನ್ನೂ, ಸುಂದರವಾದ ಮುಖವುಳ್ಳವನು ಪೃಷ್ಠಪ್ರದೇಶವನ್ನೂ ರಕ್ಷಿಸಲಿ.

೭೨. ರಾಕ್ಷಸರನ್ನು ಕೊಂದವನು ಜಠರವನ್ನೂ, ಸುಲೋಚನನು ನಾಭಿಯನ್ನೂ, ಭರತನ ಮಂತ್ರಿಯು ನಡುವನ್ನೂ, ಶ್ರೀರಾಮಸೇವಕನು ಗುಹ್ಯವನ್ನೂ ರಕ್ಷಿಸಲಿ.

೭೩. ರಾಮನಲ್ಲಿಯೇ ಮನಸ್ಸುಳ್ಳವನು ನನ್ನ ಲಿಂಗಪ್ರದೇಶವನ್ನೂ, ನಗುಮುಖವುಳ್ಳವನು ತೊಡೆಗಳನ್ನೂ, ಲವಣಾಸುರನನ್ನು ಕೊಂದವನು ನನ್ನ ಜಾನುಪ್ರದೇಶಗಳನ್ನೂ ರಕ್ಷಿಸಲಿ.

೭೪. ರಾಮನ ಮಿತ್ರನು ಜಂಘೆಗಳನ್ನೂ, ಕಾಲುಬಳೆಗಳುಳ್ಳವನು ನನ್ನ ಹಿಮ್ಮಡಿಯನ್ನೂ, ನೃಪತಿಪೂಜ್ಯನು ಪಾದಗಳನ್ನೂ, ಶ್ರೀಮಂತನು ನನ್ನ ಪಾದದ ಬೆರಳುಗಳನ್ನೂ ರಕ್ಷಿಸಲಿ.

ಪಾತ್ವಂಗಾನಿ ಸಮಸ್ತಾನಿ ಹ್ಯುದಾರಾಂಗಸ್ಸದಾ ಮಮ ।
ರೋಮಾಣಿ ರಮಣೀಯೋ ವ್ಯಾದ್ರಾತ್ರೌ ಪಾತು ಸುಧಾರ್ಮಿಕಃ ॥ ೭೫ ॥

ದಿವಸೇ ಸತ್ಯಸಂಧೋವ್ಯಾದ್ಭೋಜನೇ ಶರಸತ್ಕರಃ ।
ಗಮನೇ ಕಲಕಂಠೋವ್ಯಾತ್ಸರ್ವದಾ ಲವಣಾಂತಕಃ ॥ ೭೬ ॥

ಏವಂ ಶತ್ರುಘ್ನಕವಚಂ ಮಯಾ ತೇ ಸಮುದೀರಿತಂ ।
ಯೇ ಪಠಂತಿ ನರಾಸ್ತತ್ರ ತೇ ನರಾಸ್ಸೌಖ್ಯಭಾಗಿನಃ ॥ ೭೭ ॥

ಶತ್ರುಘ್ನಸ್ಯ ವರಂ ಚೇದಂ ಕವಚಂ ಮಂಗಳಪ್ರದಂ ।
ಪಠನೀಯಂ ನರೈರ್ಭಕ್ತ್ಯಾ ಪುತ್ರಪೌತ್ರಪ್ರವರ್ಧನಂ ॥ ೭೮ ॥

ಅಸ್ಯ ಸ್ತೋತ್ರಸ್ಯ ಪಾಠೇನ ಯಂ ಯಂ ಕಾರ್ಯಂ ನರೋರ್ಥಯೇತ್ ।
ತಂ ತಂ ಲಭೇನ್ನಿಶ್ಚಯೇನ ಸತ್ಯಮೇತದ್ವಚೋ ಮಮ ॥ ೭೯ ॥

---

೭೫. ಉದಾರವಾದ ಅಂಗಗಳುಳ್ಳವನು ಸಮಸ್ತ ಅಂಗಗಳನ್ನೂ, ರಮಣೀಯನು ರೋಮಗಳನ್ನೂ ರಕ್ಷಿಸಲಿ. ಸುಧಾರ್ಮಿಕನು ರಾತ್ರಿಯಲ್ಲಿಯೂ ರಕ್ಷಿಸಲಿ.

೭೬. ಸತ್ಯಸಂಧನು ಹಗಲಿನಲ್ಲಿಯೂ, ಕೈಯ್ಯಲ್ಲಿ ಬಾಣವನ್ನು, ಹಿಡಿದಿರುವವನು ಭೋಜನಕಾಲದಲ್ಲಿಯೂ, ಕಲಕಂಠನು ಸಂಚರಿಸುತ್ತಿರುವಾಗಲೂ, ಲವಣಾಂತಕನು ಸದಾಕಾಲದಲ್ಲಿಯೂ ರಕ್ಷಿಸಲಿ.

೭೭. ಈ ರೀತಿಯಾಗಿ ಶತ್ರುಘ್ನಕವಚವನ್ನು ನಿನಗೆ ವಿಸ್ತಾರವಾಗಿ ಹೇಳಿರುವೆನು. ಇದನ್ನು ಯಾರು ಹೇಳುವರೋ ಅವರು ಸೌಖ್ಯವನ್ನು ಹೊಂದುತ್ತಾರೆ.

೭೮. ಶತ್ರುಘ್ನನ ಈ ಕವಚವು, ಉತ್ತಮವಾದುದು. ಮಂಗಳವನ್ನು ಉಂಟುಮಾಡುತ್ತದೆ. ಇದನ್ನು ಭಕ್ತಿಯಿಂದ ಹೇಳಬೇಕು. ಭಕ್ತಿಯಿಂದ ಹೇಳಿದರೆ ಮಕ್ಕಳು, ಮೊಮ್ಮಕ್ಕಳು ಉಂಟಾಗುತ್ತಾರೆ.

೭೯. ಮನುಷ್ಯನು ಯಾವ ಯಾವ ಇಚ್ಛೆಗಳನ್ನು ಹೊಂದಿ ಈ ಸ್ತೋತ್ರವನ್ನು ಹೇಳುವನೋ ಅದನ್ನು ನಿಶ್ಚಯವಾಗಿಯೂ ಹೊಂದುವನು. ಈ ನನ್ನ ಮಾತು ಸತ್ಯವಾದುದು.

ಪುತ್ರಾರ್ಥೀ ಪ್ರಾಪ್ನುಯಾತ್ಪುತ್ರಂ ಧನಾರ್ಥೀ ಧನಮಾಪ್ನುಯಾತ್ ।
ಇಚ್ಛಾಕಾಮಂ ತು ಕಾಮಾರ್ಥೀ ಪ್ರಾಪ್ನುಯಾತ್ಪಠನಾದಿನಾ ॥ ೮೦ ॥

ಕವಚಸ್ಯಾಸ್ಯ ಭೂಮ್ಯಾಂ ಹಿ ಶತ್ರುಘ್ನಸ್ಯ ವಿನಿಶ್ಚಯಾತ್ ।
ತಸ್ಮಾದೇತತ್ಸದಾ ಭಕ್ತ್ಯಾ ಪಠನೀಯಂ ಸರ್ವೈಶ್ಶುಭಂ ॥ ೮೧ ॥

ಆದೌ ನರ್ವೈರ್ಮಾರುತೇಶ್ಚ ಪಠಿತ್ವಾ ಕವಚಂ ಶುಭಂ ।
ತತಶ್ಶತ್ರುಘ್ನಕವಚಂ ಪಠನೀಯಮಿದಂ ಶುಭಂ ॥ ೮೨ ॥

ಪಠನೀಯಂ ಭರತಸ್ಯ ಕವಚಂ ಪರಮಂ ತತಃ ।
ತತಸ್ಸೌಮಿತ್ರಿಕವಚಂ ಪಠನೀಯಂ ಸದಾನರೈಃ ॥ ೮೩ ॥

ಪಠನೀಯಂ ತತಸ್ಸಿತಾಕವಚಂ ಭಾಗ್ಯವರ್ಧನಂ ।
ತತಃ ಶ್ರೀರಾಮಚಂದ್ರಸ್ಯ ಕವಚಂ ಸರ್ವದೋತ್ತಮಂ ॥ ೮೪ ॥

ಪಠನೀಯಂ ನರ್ವೈರ್ಭಕ್ತ್ಯಾ ಪರಂ ವಾಂಛಿತದಾಯಕಂ ।
ಏವಂ ಷಟ್ಕವಚಾನ್ಯತ್ರ ಪಠನೀಯಾನಿ ಸರ್ವದಾ ॥ ೮೫ ॥

---

೮೦. ಇದನ್ನು ಹೇಳುವುದರಿಂದ ಮಕ್ಕಳಾಗಬೇಕಾದವನಿಗೆ ಮಕ್ಕಳಾಗುವುದು. ಧನಬೇಕಾದವನಿಗೆ ಧನವು ಸಿಕ್ಕುವುದು. ಕಾಮಾರ್ಥಿಯು ತನ್ನ ಇಚ್ಛೆಯಲ್ಲಿರುವುದೆಲ್ಲವನ್ನೂ ಹೊಂದುವನು.

೮೧. ಈ ಶತ್ರುಘ್ನಕವಚವು ಭೂಮಿಯಲ್ಲಿ ಯಾವುದನ್ನು ಬೇಕಾದರೂ ಕೊಡುತ್ತದೆ. ಆದ್ದರಿಂದ ಈ ಕವಚವನ್ನು ಜನರು ಭಕ್ತಿಯಿಂದ ಪಠಿಸಬೇಕು.

೮೨-೮೪. ಜನರು ಮೊದಲು ಶತ್ರುಘ್ನನ ಕವಚವನ್ನೂ, ಅನಂತರ ಭರತನ ಕವಚವನ್ನೂ, ಅನಂತರ ಲಕ್ಷ್ಮಣನ ಕವಚವನ್ನೂ, ಆಮೇಲೆ ಸೀತಾಕವಚವನ್ನೂ ಹೇಳಿದರೆ ಭಾಗ್ಯವು ಹೆಚ್ಚುತ್ತದೆ. ಅನಂತರ ಶ್ರೀರಾಮಚಂದ್ರನ ಕವಚವನ್ನು ಹೇಳತಕ್ಕದ್ದು ಉತ್ತಮವಾದುದು.

೮೫. ಹೀಗೆ ಹೇಳಿದ ಪಕ್ಷದಲ್ಲಿ ಬಹುವಾದ ಭಾಗ್ಯವು ಬರುತ್ತದೆ. ಈ ರೀತಿಯಾಗಿ ಹನುಮಂತ, ಶತ್ರುಘ್ನ, ಭರತ, ಲಕ್ಷ್ಮಣ, ಸೀತೆ, ರಾಮರ ಆರು ಕವಚಗಳನ್ನೂ ಯಾವಾಗಲೂ ಹೇಳುತ್ತಿರಬೇಕು.

ಪಠನಂ ಷಟ್ಕವಚಾನಾಂ ಶ್ರೇಷ್ಠಂ ಮೋಕ್ಷೈಕಸಾಧನಂ ।
ಜ್ಞಾತ್ವಾತ್ರ ಮಾನವೈರ್ಭಕ್ತ್ಯಾ ಕಾರ್ಯಂ ಚ ಪಠನಂ ಸದಾ ॥ ೮೬ ॥

ಅಶಕ್ತೇನಾತ್ರ ಚತ್ವಾರಿ ಪಠನೀಯಾನಿ ಸಾದರಂ ।
ಹನೂಮಂತಶ್ಚ ಸೌಮಿತ್ರೇಃ ಸೀತಾಯಾ ರಾಘವಸ್ಯ ಚ ॥ ೮೭ ॥

ಇಮಾನಿ ಪಠನೀಯಾನಿ ಚತ್ವಾರಿ ಕವಚಾನಿ ಹಿ ।
ಚತುರ್ಣಾಂ ಕವಚಾನಾಂ ಚ ಪಠನೇ ಮಾನವಾಯ ಚ ॥ ೮೮ ॥

ನ ಯದ್ಯತ್ರಾವಕಾಶಶ್ಚೇತ್ತದಾ ತ್ರೀಣಿ ಪಠೇನ್ನರಃ ।
ಮಾರುತೇಶ್ಚಾತ್ರ ಸೀತಾಯಾಸ್ತಥಾ ಶ್ರೀರಾಘವಸ್ಯ ಚ ॥ ೮೯ ॥

ತ್ರಯಾಣಾಂ ಕವಚಾನಾಂ ಚ ನ ಪಾಠಾವಸರೋ ಯದಾ ।
ಪಠನಾರ್ಥಂ ಮಾನವಾಯ ತದಾ ದ್ವೇ ಕವಚೇ ಸ್ಮೃತೇ ॥ ೯೦ ॥

---

೮೬. ಈ ಆರು ಕವಚಗಳನ್ನು ಹೇಳುವುದು ಶ್ರೇಷ್ಠವಾದುದು. ಮೋಕ್ಷಕ್ಕೆ ಸಾಧನವಾಗಿ ಆಗುತ್ತದೆ. ಇದನ್ನು ತಿಳಿದುಕೊಂಡು ಜನರು ಯಾವಾಗಲೂ ಈ ಆರು ಕವಚಗಳನ್ನೂ ಹೇಳಬೇಕು.

೮೭. ಈ ಆರನ್ನು ಹೇಳಲು ಸಾಧ್ಯವಾಗದಿದ್ದರೆ ಹನುಮಂತ, ಲಕ್ಷ್ಮಣ, ಸೀತೆ ರಾಮರ ಸಂಬಂಧವಾದ ನಾಲ್ಕು ಕವಚಗಳನ್ನಾದರೂ ಹೇಳಬೇಕು.

೮೮–೮೯. ಈ ನಾಲ್ಕು ಕವಚಗಳನ್ನು ಖಂಡಿತವಾಗಿಯೂ ಹೇಳಬೇಕು. ಒಂದುವೇಳೆ ಬಹುವಾದ ತೊಂದರೆಯಿಂದ ನಾಲ್ಕನ್ನೂ ಹೇಳಲಾಗದಿದ್ದರೆ ಆಗ ಮಾರುತಿ, ಸೀತೆ, ರಾಮರ ಕವಚಗಳು ಮೂರನ್ನಾದರೂ ಹೇಳಬಹುದು.

೯೦. ಒಂದುವೇಳೆ, ಈ ಮೂರನ್ನೂ ಹೇಳಲು ಅವಕಾಶವು ದೊರೆಯದಿದ್ದರೆ ಆವಾಗ ಮಾನವನು ಎರಡು ಕವಚಗಳನ್ನು ಹೇಳಬೇಕು.

ಮಾರುತೇಶ್ಚಾಥ ರಾಮಸ್ಯ ಸೀತಾಯಾ ರಾಘವಸ್ಯ ವಾ ।
ನೈಕಮೇವ ಪಠೇಚ್ಚಾತ್ರ ಶ್ರೀರಾಮಕವಚಂ ಶುಭಂ ॥ ೯೧ ॥

ಅವಕಾಶೇ ಕವಚಾನಾಂ ಷಟ್ಕಮೇವ ಸದಾ ನರೈಃ ।
ಪಠನೀಯಂ ಕ್ರಮೇಣೈವ ಕರ್ತವ್ಯೋ ನಾಲಸಃ ಕದಾ ॥ ೯೨ ॥

ಯದಾವಕಾಶೋ ನಾಸ್ತ್ಯೇವ ತದಾ ತೇಷಾಂ ಸುಖಾರ್ಥಯೇ ।
ಮಯಾ ವಿಶೇಷಃ ಪ್ರೋಕ್ತೋಯಂ ನ ಸರ್ವೇಷಾಂ ಮಯೇರಿತಃ ॥

॥ ಇತಿ ಶತ್ರುಘ್ನಕವಚಂ ॥

॥ ರಾಮದಾಸ ಉವಾಚ ॥

ಏವಂ ಶಿಷ್ಯ ತ್ವಯಾ ಯದ್ಯತ್ಪೃಷ್ಟಂ ತತ್ತನ್ಮಯೋದಿತಂ ।
ಅನ್ಯತ್ಕಿಂಚಿತ್ಪ್ರವಕ್ಷ್ಯಾಮಿ ತಚ್ಛೃಣುಷ್ವಾದ್ಯ ಸಾದರಂ ॥ ೯೪ ॥

ಗೀತೈಃ ಪ್ರಬಂಧೈಃ ಶ್ರೀರಾಮಸ್ಸದಾ ಗೇಯೋತ್ರ ಮಾನವೈಃ ।
ವೀಣಾವಾದ್ಯಾದಿಭಿರ್ಭಕ್ತ್ಯಾ ನೃತ್ಯಾನಪಿ ಸಮಾಚರೇತ್ ॥ ೯೫ ॥

---

೯೧. ಮಾರುತಿಯ ಕವಚವನ್ನು ಹೇಳಲೇಬೇಕು ಅನಂತರ ಶ್ರೀರಾಮ ಕವಚವನ್ನಾಗಲೀ, ಸೀತಾಕವಚವನ್ನಾಗಲಿ, ಎರಡರಲ್ಲಿ ಒಂದನ್ನಾದರೂ ಹೇಳಬೇಕು. ಆದರೆ ಶ್ರೀರಾಮಕವಚವನ್ನು ಒಂದನ್ನೇ ಹೇಳಬಾರದು.

೯೨. ಅವಕಾಶವಾದರೆ ಈ ಆರುಕವಚಗಳನ್ನೂ ಹೇಳಬೇಕು. ಅವಕಾಶವಿದ್ದಾಗ ಈ ಆರನ್ನೂ ಹೇಳುವುದರಲ್ಲಿ ಸೋಮಾರಿತನ ಮಾಡಬಾರದು.

೯೩. ಅವಕಾಶವಾಗದಿದ್ದರೆ ಈ ರೀತಿಯಾಗಿ ಹೇಳಿದ್ದೇನೆಯೇ ಹೊರತು ಅನುಕೂಲಕ್ಕೋಸ್ಕರ ಹೀಗೆ ಹೇಳಲಿಲ್ಲ. ಆದ್ದರಿಂದ ಅದಕ್ಕನುಕೂಲವಾಗಿ ನಡೆಯಬೇಕು.

ಇಂತು ಶತ್ರುಘ್ನಕವಚವು

೯೪. ರಾಮದಾಸನು ಹೇಳಿದನು–ಎಲೈ ಶಿಷ್ಯನೇ! ನೀನು ಕೇಳಿದುದನ್ನೆಲ್ಲಾ ಹೀಗೆ ಹೇಳಿರುವೆನು. ಮತ್ತು ಇನ್ನೊಂದು ವಿಷಯವನ್ನೂ ಹೇಳುತ್ತೇನೆ. ಮನಸ್ಸಿಟ್ಟು ಕೇಳು.

೯೫. ಶ್ರೀರಾಮನನ್ನು ಭಜಿಸಬೇಕಾದರೆ ಗೀತವನ್ನು ಗಾನವನ್ನೂ ಮಾಡುತ್ತ ಭಜಿಸಬೇಕು. ವೀಣೆಯನ್ನೂ ಬಾರಿಸುತ್ತ ನೃತ್ಯವನ್ನು ಮಾಡಬೇಕು.

ದಶರಥನಂದನೇತಿ ಪೂರ್ವಮುಕ್ತ್ವಾ ತತಃ ಪರಂ ।
ಮೇಘಶ್ಯಾಮೇತಿ ವೈ ಚೋಕ್ತ್ವಾ ತಥಾ ರವಿಕುಲೇತಿ ಚ ॥ ೯೬ ॥

ಮಂಡನರಾಜಾರಾಮೇತಿ ದ್ವಾವಿಂಶಾಕ್ಷರಜಪಸ್ತ್ವಯಂ ।
ಮನುಸ್ಸದಾ ಜಪನೀಯೋ ವೀಣಾವಾದ್ಯೇನ ಸುಸ್ವರಂ ॥ ೯೭ ॥

ದಶರಥನಂದನ ಮೇಘಶ್ಯಾಮ ರವಿಕುಲಮಂಡನ ರಾಜಾರಾಮ ।
॥ ಇತಿ ಮನುಃ ॥

ಕೀರ್ತನೇಸ್ಯ ಮನೋರ್ನೈವ ಕಾರ್ಯೋ ನ್ಯಾಸೋ ಜಪೇ ಸ್ಮೃತಃ ।
ಏವಂ ಸರ್ವೇಷು ಮಂತ್ರೇಷು ಬೋದ್ಧವ್ಯಂ ಮಾನವೈರ್ಭುವಿ ॥ ೯೮ ॥

ರಾಮಜಯೇತಿ ಚೋಕ್ತ್ವಾ ತು ತ್ರಿವಾರಂ ಚಾತ್ರ ಸುಸ್ವರಂ ।
ರಾಮೇತಿ ದ್ವೇಕ್ಷರೇ ತ್ವಂತೇ ಚೋಕ್ತ್ವಾ ವೀಣಾಸ್ವರೇಣ ಚ ॥ ೯೯ ॥

---

೯೬. ದಶರಥನಂದನ ಎಂಬುದಾಗಿ ಮೊದಲು ಹೇಳಿ ಅನಂತರ ಮೇಘಶ್ಯಾಮ ಎಂದು ಹೇಳಿ ಆಮೇಲೆ ರವಿಕುಲ ಎಂದು ಹೇಳಬೇಕು.

೯೭. ಆಮೇಲೆ ಮಂಡನರಾಜಾರಾಮ ಎಂದು ಹೇಳಬೇಕು. ಇದು ಇಪ್ಪತ್ತೆರಡು ಅಕ್ಷರಗಳುಳ್ಳ ಮಂತ್ರವು. ಇದನ್ನು ಹೇಳಬೇಕು. ಇದನ್ನು ಒಟ್ಟಿಗೆ ಸೇರಿಸಿದರೆ ಹೀಗೆ ಆಗುತ್ತದೆ.

ದಶರಥನಂದನಮೇಘಶ್ಯಾಮ । ರವಿಕುಲಮಂಡನರಾಜಾರಾಮ ॥ ೧ ॥

೯೮. ಈ ಮಂತ್ರಗಳನ್ನು ಕೀರ್ತನೆಮಾಡುವಾಗ ಅಂಗನ್ಯಾಸ ಕರನ್ಯಾಸಗಳು ಬೇಕಾಗಿರುವುದಿಲ್ಲ. ಜಪಮಾಡುವಾಗ ಮಾತ್ರ ಅಂಗನ್ಯಾಸ ಕರನ್ಯಾಸಗಳು ಅವಶ್ಯಕವಾಗಿ ಬೇಕಾಗುತ್ತವೆ.

೯೯ ರಾಮಜಯ ಎಂಬುದಾಗಿ ಮೂರುಬಾರಿ ಸುಸ್ವರದಿಂದ ಹೇಳಬೇಕು. ಅನಂತರ ಕೊನೆಯಲ್ಲಿ ರಾಮ ಎಂಬ ಎರಡಕ್ಷರಗಳನ್ನು ಹೇಳಬೇಕು. ಇದನ್ನು ವೀಣೆಯ ಸ್ವರದ ಜೊತೆಗೆ ಸೇರುವಂತೆ ಹೇಳಬೇಕು.

ಚತುರ್ದಶಾಕ್ಷರಶ್ಚಾಯಂ ಕೀರ್ತನಾರ್ಥಂ ಮಯೋದಿತಃ ।
ರಾಮ ಜಯ ರಾಮ ಜಯ ರಾಮ ಜಯ ರಾಮ ॥ ೧೦೦ ॥

॥ ಇತಿ ಮನುಃ ॥

ಮಂತ್ರಶಾಸ್ತ್ರೇಷು ಯೇ ಮಂತ್ರಾಸ್ತೇ ಜಪಾರ್ಥಂ ಪ್ರಕೀರ್ತಿತಾಃ ।
ಇಮೇ ಮಂತ್ರಾಃ ಕೀರ್ತನಾರ್ಥಂ ಜ್ಞಾತವ್ಯಾ ಮಾನವೋತ್ತಮೈಃ ॥ ೧೦೧ ॥

ಏತೇಷಾಮಪಿ ಚೇದ್ಭಕ್ತ್ಯಾ ಮಂತ್ರಾಣಾಂ ಕೀರ್ತನಂ ಕೃತಂ ।
ತದಾ ಭಸ್ಮೀಭವಿಷ್ಯಂತಿ ತೇಷಾಂ ಪಾಪಾನಿ ವೈ ಕ್ಷಣಾತ್ ॥ ೧೦೨ ॥

ಅನ್ಯಾನ್ಮಂತ್ರಾನ್ ಪ್ರವಕ್ಷ್ಯಾಮಿ ತಾನ್ ಶೃಣುಷ್ವ ದ್ವಿಜೋತ್ತಮ ।
ರಾಜೀವಲೋಚನೇತ್ಯುಕ್ತ್ವಾ ಮೇಘಶ್ಯಾಮೇತಿ ವೈ ತತಃ ॥ ೧೦೩ ॥

ತಥಾ ಸೀತಾರಂಜನೇತಿ ರಾಜಾರಾಮೇತಿ ವೈ ತತಃ ।
ಏಕೋನವಿಂಶದ್ವರ್ಣಶ್ಚ ರಾಮಮಂತ್ರಸ್ತ್ವಯಂ ಸ್ಮೃತಃ ॥ ೧೦೪ ॥

---

೧೦೦. ಈ ಮಂತ್ರವು ಹದಿನಾಲ್ಕು ಅಕ್ಷರಗಳುಳ್ಳದ್ದು. ಕೀರ್ತನೆಗೋಸ್ಕರ ಹೇಳಿದ್ದೇನೆ ಈ ಮಂತ್ರವು.

ರಾಮಜಯ ರಾಮಜಯ ರಾಮಜಯ ರಾಮ ಎಂದು ಆಗುತ್ತದೆ. ॥ ೨ ॥

೧೦೧. ಜಪಕ್ಕೋಸ್ಕರವಿರತಕ್ಕ ಮಂತ್ರಗಳನ್ನು ಮಂತ್ರ ಶಾಸ್ತ್ರದಲ್ಲಿ ವಿಸ್ತಾರವಾಗಿ ಹೇಳಿದ್ದಾರೆ. ಇಲ್ಲಿ ಹೇಳಿರತಕ್ಕವು ಜಪದ ಮಂತ್ರಗಳಲ್ಲ. ಇವುಗಳನ್ನು ಕೀರ್ತನೆಗೋಸ್ಕರ ಇಲ್ಲಿ ಹೇಳಿದ್ದೇನೆ.

೧೦೨. ಭಕ್ತಿಯಿಂದ ಈ ಮಂತ್ರಗಳನ್ನು ಕೀರ್ತನೆ ಮಾಡಿದರೆ ಅದರಿಂದ ಅವರ ಪಾಪಗಳೆಲ್ಲವೂ ಕ್ಷಣಕಾಲದಲ್ಲಿಯೇ ಭಸ್ಮವಾಗುತ್ತವೆ.

೧೦೩. ಎಲೈ ದ್ವಿಜೋತ್ತಮನೇ ! ಬೇರೆಯ ಮಂತ್ರಗಳನ್ನು ಹೇಳುತ್ತೇನೆ. ಅವನ್ನು ಕೇಳು. ಮೊದಲು ರಾಜೀವಲೋಚನ ಎಂದು ಹೇಳಬೇಕು. ಅನಂತರ ಮೇಘಶ್ಯಾಮ ಎಂದೂ ಹೇಳಬೇಕು.

೧೦೪. ಅನಂತರ ಸೀತಾರಂಜನವೆಂದೂ ಆ ಮೇಲೆ ಸೀತಾರಾಮ ಎಂದುಹೇಳಬೇಕು. ಇದು ಹತ್ತೊಂಭತ್ತು ಅಕ್ಷರದ ಮಂತ್ರವೆಂದು ತಿಳಿಯಬೇಕು.

ರಾಜೀವಲೋಚನ ಮೇಘಶ್ಯಾಮ ಸೀತಾರಂಜನ ರಾಜಾರಾಮ ।
॥ ಇತಿ ಮಂತ್ರಃ ॥

ಅಯಂ ಮಂತ್ರಸ್ಸುಸ್ವರೇಣ ಕೀರ್ತನೀಯೋ ಮುಹುರ್ಮುಹುಃ ।
ವೀಣಾಸ್ವರೇಣ ಸಂಯುಕ್ತಶ್ಚಾಸನೇ ಗಮನೇಽಪಿ ಚ ॥ ೧೦೫ ॥

ಶ್ರೀಶಬ್ದಪೂರ್ವಂ ಜಯಶಬ್ದಮಧ್ಯಂ
ಜಯದ್ವಯೇನಾಪಿ ಪುನಃ ಪ್ರಯುಕ್ತಂ ।
ತ್ರಿಸ್ಸಪ್ತಕೃತ್ವೋ ರಘುನಾಥನಾಮ
ಜಪಂ ನಿಹನ್ಯಾದ್ದ್ವಿಜಕೋಟಿಹತ್ಯಾಃ ॥ ೧೦೬ ॥

ತ್ರಯೋದಶಾಕ್ಷರಶ್ಚಾಯಂ ರಾಮಮಂತ್ರಶ್ಶುಭಾವಹಃ ।
ಜಪನೀಯಃ ಕೀರ್ತನೀಯಸ್ಸರ್ವದಾಯಂ ಮುಹುರ್ಮುಹುಃ ॥ ೧೦೭ ॥

॥ ಶ್ರೀರಾಮ ಜಯರಾಮ ಜಯಜಯರಾಮ ಇತಿ ಮಂತ್ರಃ ॥

ಅಯಂಮಂತ್ರಸ್ಸುಸ್ವರೇಣ ತಥಾ ವೀಣಾಸ್ವರಾದಿನಾ ।
ಕೀರ್ತನೀಯೋ ಮುದಾ ಮರ್ತ್ಯೈರ್ಮಂತ್ರಶಾಸ್ತ್ರೇಷ್ವಯಂ ಸ್ಮೃತಃ ॥

ರಾಜೀವ ಲೋಚನ ಮೇಘ ಶ್ಯಾಮ ‖ ಸೀತಾರಂಜನ ರಾಜಾರಾಮ ‖ ೩ ‖

೧೦೫. ಈ ಮಂತ್ರವನ್ನು ಸುಸ್ವರದಿಂದ ವೀಣಾವಾದನದಲ್ಲಿ ಗಾನ ಮಾಡಬೇಕು. ಇದನ್ನು ಕುಳಿತಿರುವಾಗಲೂ, ನಡೆಯುವಾಗಲೂ ಹೇಳಬಹುದು.

೧೦೬. ಶ್ರೀಶಬ್ದವನ್ನು ಮೊದಲಿನಲ್ಲಿಯೂ, ಜಯಶಬ್ದವನ್ನು ಮಧ್ಯದಲ್ಲಿಯೂ ಹೇಳಿ ಅನಂತರ ಜಯ ಜಯ ಎಂದು ಎರಡು ಪದಗಳನ್ನು ಹೇಳಬೇಕು. ಈ ರೀತಿಯಾಗಿಮಾಡಿ ಇಪ್ಪತ್ತೊಂದು ಬಾರಿ ಆ ರಘುನಾಥನ ನಾಮವನ್ನು ಗಾನಮಾಡಿದರೆ ಅದು ಕೋಟಿ ಬ್ರಹ್ಮಹತ್ಯೆಗಳನ್ನಾದರೂ ನಾಶ ಮಾಡುತ್ತದೆ.

೧೦೭. ಈ ಮಂತ್ರವು ಹದಿಮೂರು ಅಕ್ಷರಗಳುಳ್ಳದ್ದು ಆಗುತ್ತದೆ. ಇದು ಶುಭಕರವು. ಇದನ್ನು ಸರ್ವದಾ ಜಪಮಾಡಬೇಕು. ಕೀರ್ತನೆ ಮಾಡಬೇಕು.

ಶ್ರೀರಾಮ ಜಯ ರಾಮ । ಜಯ ಜಯ ರಾಮ ‖ ೪ ‖

೧೦೮. ಈ ಮಂತ್ರವನ್ನು ಸುಸ್ವರದಿಂದ ಅಂತೆಯೇ ವೀಣೆಯ ಸ್ವರದಿಂದಲೂ (ಎಂದರೆ ತಂಬೂರಿಯ ಸ್ವರದಿಂದಲೂ) ಕೀರ್ತನೆ ಮಾಡಬೇಕು. ಇದನ್ನು ಮಂತ್ರಶಾಸ್ತ್ರದವರೂ ಹೇಳಿದ್ದಾರೆ.

ತಸ್ಮಾತ್ಸದಾ ಜಪನೀಯಸ್ಸರ್ವಸಿದ್ಧಿಪ್ರದಾಯಕಃ ।
ಅಷ್ಟಾದಶಾಕ್ಷರಂ ಮಂತ್ರಂ ತ್ವನ್ಯಂ ಶ್ರುಣು ಶುಭಾವಹಂ ॥ ೧೦೯ ॥

ಉಕ್ತ್ವಾ ಸೀತಾರಂಜನೇತಿ ಮೇಘಶ್ಯಾಮೇತಿ ವೈ ತತಃ ।
ಕೌಸಲ್ಯಾಸುತೇತ್ಯುಕ್ತ್ವಾಥ ರಾಜಾರಾಮೇತಿ ವೈ ತತಃ ॥ ೧೧೦ ॥

ಸೀತಾರಂಜನ ಮೇಘಶ್ಯಾಮ ಕೌಸಲ್ಯಾಸುತ ರಾಜಾರಾಮ ।
॥ ಇತಿ ಮಂತ್ರಃ ॥

ಅಷ್ಟಾದಶಾಕ್ಷರಶ್ಚಾಯಂ ಕೀರ್ತನೀಯೋ ಮಹಾಮನುಃ ।
ವೀಣಾಸ್ವರಸಮೇತಶ್ಚ ಕಲಕಂಠೇನ ಸುಸ್ವರಃ ॥ ೧೧೧ ॥

ರವಿವರಕುಲಜಾತಂ ವಂದೇ ಚೇತಿ ಪ್ರಕೀರ್ತ್ಯ ಚ ।
ಸುರಭೂಸುರೇತ್ಯುಕ್ತ್ವಾಗ್ರೇ ಗೀತಂ ಚೇತಿ ತತಃ ಪರಂ ॥ ೧೧೨ ॥

ಸಪ್ತದಶಸುವರ್ಣೈಶ್ಚ ರಾಮಮಂತ್ರಸ್ತ್ವಯಂ ಶುಭಃ ।
ಕೀರ್ತನೀಯಸ್ಸುಸ್ವರಂ ಹಿ ವೀಣಾವಾದ್ಯಸ್ವರಾದಿನಾ ॥ ೧೧೩ ॥

---

೧೦೯. ಇದನ್ನು ಸದಾಕಾಲದಲ್ಲಿಯೂ ಜಪಿಸಬೇಕು. ಎಲ್ಲವನ್ನೂ ಸಿದ್ಧಿಸುವಂತೆ ಮಾಡುತ್ತದೆ. ಹದಿನೆಂಟು ಅಕ್ಷರದ ಮತ್ತೊಂದು ಮಂತ್ರವನ್ನು ಹೇಳುತ್ತೇನೆ. ಕೇಳು.

೧೧೦. ಸೀತಾರಂಜನ ಎಂದು ಹೇಳಿ ಅನಂತರ ಮೇಘಶ್ಯಾಮ ಎಂದು ಹೇಳಬೇಕು. ಅನಂತರ ಕೌಸಲ್ಯಾಸುತ ಎಂದು ಹೇಳಿ ಅನಂತರ ರಾಜಾರಾಮ ಎಂದು ಹೇಳಬೇಕು.

ಸೀತಾರಂಜನಮೇಘಶ್ಯಾಮ । ಕೌಸಲ್ಯಾಸುತ ರಾಜಾರಾಮ ॥ ೫ ॥

೧೧೧. ಇದು ಹದಿನೆಂಟು ಅಕ್ಷರದ ಮಂತ್ರವು ಇದನ್ನು ವೀಣೆಯ ಸ್ವರದೊಡನೆ ಸುಸ್ವರದಿಂದ ಗಾನಮಾಡಬೇಕು.

೧೧೨. ರವಿವರಕುಲಜಾತಂವಂದೆ ಎಂದು ಹೇಳಿ ಅನಂತರ ಸುರಭೂಸುರ ಎಂದು ಹೇಳಿ ಅದರ ಕೊನೆಯಲ್ಲಿ ಗೀತಂ ಎಂದು ಸೇರಿಸಬೇಕು.

೧೧೩. ಇದು ಹದಿನೇಳಕ್ಷರದ ಮಂತ್ರವು. ಇದು ಶುಭವಾದ ಮಂತ್ರವು. ಇದನ್ನು ಸುಸ್ವರವಾಗಿ ವೀಣೆಯ ಗಾನದೊಡನೆ ಕೀರ್ತನೆಮಾಡಬೇಕು.

ರವಿವರಕುಲಜಾತಂ ವಂದೇ ಸುರಭೂಸುರಗೀತಂ ।
॥ ಇತಿ ಮಂತ್ರಃ ॥

ವಿಷ್ಣುದಾಸ ಶೃಣುಷ್ವಾನ್ಯಾನ್ ರಾಮಮಂತ್ರಾನ್ ಶುಭಾವಹಾನ್ ।
ಯೇಷಾಂ ಸ್ಮರಣಮಾತ್ರೇಣ ಮಹತ್ಪಾಪಂ ಲಯಂ ವ್ರಜೇತ್ ॥ ೧೧೪ ॥

ಕೌಸಲ್ಯಾಸುತೇತ್ಯುಕ್ತ್ವಾಥ ರಾಮೇತಿ ದ್ವ್ಯಕ್ಷರೇ ತಥಾ ।
ತಥಾ ಸೀತಾರಂಜನೇತಿ ಮೇಘಶ್ಯಾಮೇತಿ ವೈ ತತಃ ॥ ೧೧೫ ॥

ಷೋಡಶಾಕ್ಷರಮಂತ್ರೋಽಯಂ ಕೀರ್ತನೀಯಶ್ಶುಭಾವಹಃ ।
ವೀಣಾಸ್ವರಪೂರ್ವಕಶ್ಚ ಕಲಕಂಠೇನ ಸುಸ್ವರಃ ॥ ೧೧೬ ॥

ಕೌಸಲ್ಯಾಸುತ ರಾಮ ಸೀತಾರಂಜನ ಮೇಘಶ್ಯಾಮ ।
॥ ಇತಿ ಮಂತ್ರಃ ॥

ಷೋಡಶಾಕ್ಷರಮಂತ್ರೋಽಯಂ ಕೀರ್ತನೀಯಸ್ಸದಾ ನರೈಃ ।
ಸರ್ವಪಾಪಕ್ಷಯಕರಸ್ಸರ್ವವಾಂಛಿತದಾಯಕಃ ॥ ೧೧೭ ॥

ರವಿವರ ಕುಲಜಾತಂ । ವಂದೆ ಸುರಭೂಸುರಗೀತಂ ॥ ೬ ॥

ಎಂದು ಹದಿನೇಳಕ್ಷರದ ಮಂತ್ರವು

೧೧೪. ವಿಷ್ಣುದಾಸನೇ! ಈಗ ಇನ್ನೂ ಕೆಲವು ರಾಮಮಂತ್ರಗಳನ್ನು ಹೇಳುತ್ತೇನೆ. ಕೇಳು. ಇವುಗಳನ್ನು ಕೇಳಿದ ಮಾತ್ರದಿಂದಲೇ ಮಹಾ ಪಾಪಗಳೂ ಕೂಡ ನಾಶವಾಗುತ್ತವೆ

೧೧೫. ಕೌಸಲ್ಯಾಸುತ ಎಂದು ಹೇಳಿ ಅನಂತರ ರಾಮ ಎಂದು ಎರಡಕ್ಷರಗಳನ್ನು ಹೇಳಬೇಕು. ಅನಂತರ ಸೀತಾರಂಜನ ಎಂದೂ ಆದಾದಮೇಲೆ ಮೇಘಶ್ಯಾಮ ಎಂದೂ ಹೇಳಬೇಕು.

೧೧೬. ಹೀಗೆ ಹೇಳಿದನಂತರ ಇದು ಹದಿನಾರಕ್ಷರದ ಮಂತ್ರವಾಗುತ್ತದೆ. ಇದನ್ನು ಹೇಳಿದರೆ ಶುಭವನ್ನುಂಟುಮಾಡುತ್ತದೆ. ವೀಣೆಯನ್ನು ನುಡಿಸಿಕೊಂಡು ಸುಸ್ವರದಿಂದ ಹೇಳಬೇಕು

ಕೌಸಲ್ಯಾಸುತರಾಮ । ಸೀತಾರಂಜನಮೇಘಶ್ಯಾಮ ॥ ೭ ॥

೧೧೭. ಈ ಹದಿನಾರಕ್ಷರದ ಮಂತ್ರವನ್ನು ಯಾವಾಗಲೂ ಕೀರ್ತಿಸಬೇಕು. ಇದು ಪಾಪಗಳನ್ನೆಲ್ಲಾ ನಾಶಮಾಡಿ ಇಷ್ಟಾರ್ಥಗಳನ್ನು ಕೊಡುತ್ತದೆ.

ದಶರಥನಂದನೇತಿ ಪೂರ್ವಮುಕ್ತ್ವಾ ತತಃ ಪರಂ ।
ಮೇಘಶ್ಯಾಮೇತಿ ವೈ ಚೋಕ್ತ್ವಾ ಸೀತೇತಿ ದ್ವ್ಯಕ್ಷರೇ ತತಃ ॥ ೧೧೮

ರಂಜನೇತಿ ತತಶ್ಚೋಕ್ತ್ವಾ ರಾಜಾರಾಮೇತಿ ವೈ ತತಃ ।
ವಿಂಶಾಕ್ಷರಮನುಶ್ಚಾಯಂ ಮಹಾಪಾತಕನಾಶನಃ ॥ ೧೧೯ ॥

ದಶರಥನಂದನ ಮೇಘಶ್ಯಾಮ ಸೀತಾರಂಜನ ರಾಜಾರಾಮ ।
॥ ಇತಿ ಮಂತ್ರ ॥

ಅಯಂ ವಿಂಶಾಕ್ಷರೋ ಮಂತ್ರಃ ಕೀರ್ತನೀಯಸ್ಸುಖಪ್ರದಃ ।
ವೀಣಾಸ್ವರಸಮೇತಶ್ಚ ಮಹಾಪುಣ್ಯಪ್ರದಃ ಸ್ಮೃತಃ ॥ ೧೨೦ ॥

ವಂದೇ ರಘುವೀರಮಿತಿ ಚೋಕ್ತ್ವಾ ಚೈವ ತತಃ ಪರಂ ।
ಉಕ್ತ್ವಾ ಸೀತಾಕಾಂತಮಿತಿ ರಣಧೀರಮಿತಿ ಕ್ರಮಾತ್ ॥ ೧೨೧ ॥

ಚತುರ್ದಶಾಕ್ಷರಶ್ಚಾಯಂ ರಾಮಮಂತ್ರಶ್ಶುಭಾವಹಃ ।
ಕೀರ್ತನೀಯೋ ಜನೈರ್ಭಕ್ತ್ಯಾ ಮಹಾಮಂಗಳಕಾರಕಃ ॥ ೧೨೨ ॥

---

೨೧೮. ಮೊದಲು ದಶರಥನಂದನ ಎಂದು ಹೇಳಿ ಅನಂತರ ಮೇಘಶ್ಯಾಮ ಎಂದು ಹೇಳಿ ಆಮೇಲೆ ಸೀತಾ ಎಂದು ಎರಡಕ್ಷರಗಳನ್ನು ಹೇಳಬೇಕು.

೧೧೯. ಅನಂತರ ರಂಜನ ಎಂದು ಹೇಳಬೇಕು. ಆಮೇಲೆ ರಾಜಾರಾಮ ಎಂದು ಹೇಳಬೇಕು. ಇದು ಇಪ್ಪತ್ತು ಅಕ್ಷರದ ಮಂತ್ರವಾಗುತ್ತದೆ. ಇದು ಮಹಾ ಪಾಪವನ್ನೂ ನಾಶಮಾಡುತ್ತದೆ.

ದಶರಥನಂದನ ಮೇಘಶ್ಯಾಮ । ಸೀತಾರಂಜನ ರಾಜಾರಾಮ ॥ ೮ ॥

೧೨೦. ಇದು ಇಪ್ಪತ್ತು ಅಕ್ಷರದ ಮಂತ್ರವು. ಇದನ್ನು ಹೇಳಿದರೆ ಶುಭಕರವು. ವೀಣೆಯ ಸ್ವರದ ಜೊತೆಯಲ್ಲಿ ಹೇಳಿದರೆ ಮಹಾ ಪುಣ್ಯವು ಬರುತ್ತದೆ.

೧೨೧–೧೨೨. ವಂದೆ ರಘುವೀರಂ ಎಂದು ಹೇಳಿ ಅನಂತರ ಸೀತಾಕಾಂತ ಎಂದೂ ಅನಂತರ ರಣಧೀರ ಎಂದೂ ಹೇಳಬೇಕು. ಇದು ಹದಿನಾಲ್ಕು ಅಕ್ಷರದ ಮಂತ್ರವು. ಶುಭಕರವು. ಇದು ಮಹಾ ಮಂಗಳಕಾರಕವಾದ್ದರಿಂದ ಜನರು ಇದನ್ನು ಹೇಳಬೇಕು.

ವಂದೇ ರಘುವೀರಂ ಸೀತಾಕಾಂತಂ ರಣಧೀರಂ ।
॥ಇತಿ ಮಂತ್ರಃ ॥

ಜಯರಾಮ ಜಯರಾಮ ಸಂಕೀರ್ತ್ಯ ಸುಸ್ವರಂ ತತಃ ।
ಜಯಜಯೇತಿ ಸಂಕೀರ್ತ್ಯ ರಾಮೇತಿ ದ್ವ್ಯಕ್ಷರೇ ಪುನಃ ॥ ೧೨೩ ॥

ಜಯರಾಮ ಜಯರಾಮ ಜಯಜಯರಾಮ ।
॥ ಇತಿ ಮಂತ್ರಃ ॥

ಚತುರ್ದಶಾಕ್ಷರಶ್ಚಾಯಂ ತೃತೀಯಃ ಕಥಿತೋ ಮನುಃ ।
ಕೀರ್ತನೀಯೋ ಜನೈರ್ನಿತ್ಯಂ ಮಹಾಪಾತಕನಾಶನಃ ॥ ೧೨೪ ॥

ಮನುಸ್ಸೀತಾರಾಘವೇತಿ ಪಂಚವರ್ಣಾತ್ಮಕಃ ಸ್ಮೃತಃ ।
ಜಪನೀಯಃ ಕೀರ್ತನೀಯೋ ವೀಣಾನಾದ್ಯೇನ ಸುಸ್ವರಃ ॥ ೧೨೫ ॥

॥ ಸೀತಾರಾಘವ ಇತಿ ಮನುಃ ॥

ಭಜೇತಿದ್ವ್ಯಕ್ಷರೇ ಪೂರ್ವಂ ಸೀತಾರಾಮಮಿತಿ ಕ್ರಮಾತ್ ।
ಮಾನಸೇತಿ ತತಶ್ಚೋಕ್ತ್ವಾ ಭಜೇತಿ ದ್ವ್ಯಕ್ಷರೇ ಪುನಃ ॥ ೧೨೬ ॥

ವಂದೇ ರಘುವೀರಂ । ಸೀತಾಕಾಂತಂ ರಣಧೀರಂ ॥ ೯ ॥

೧೨೩. ಜಯರಾಮ ಜಯರಾಮ ಎಂದು ಹೇಳಿ ಅನಂತರ ಜಯಜಯ ವೆಂದೂ ಅನಂತರ ರಾಮ ಎಂದೂ ಎರಡಕ್ಷರವನ್ನು ಹೇಳಬೇಕು.

ಜಯರಾಮ ಜಯರಾಮ । ಜಯ ಜಯ ರಾಮ ॥ ೧೦ ॥

೧೨೪. ಇದು ಹದಿನಾಲ್ಕು ಅಕ್ಷರದ ಮಂತ್ರವು. ಇದನ್ನು ಹೇಳಿದರೆ ಮಹಾ ಪಾತಕವು ನಾಶವಾಗುತ್ತದೆ.

೧೨೫. ಸೀತಾರಾಘವ ಎಂಬುದೇ ಮಂತ್ರವು ಇದು ಐದಕ್ಷರದ ಮಂತ್ರವು. ಇದನ್ನು ವೀಣೆಯ ಧ್ವನಿಯೊಡನೆ ಸುಸ್ವರವಾಗಿ ಗಾನಮಾಡಬೇಕು.

ಸೀತಾರಾಘವ ಇದು ಮಂತ್ರವು ॥ ೧೧ ॥

೧೨೬. ಭಜ ಎಂಬ ಎರಡಕ್ಷರವನ್ನು ಮೊದಲು ಹೇಳಿ ಅನಂತರ ಸೀತಾರಾಮಂ ಎಂದು ಹೇಳಬೇಕು. ಆಮೇಲೆ ಮಾನಸ ಎಂದು ಹೇಳಿ ಅನಂತರ ಭಜ ಎಂದು ಎರಡಕ್ಷರವನ್ನು ಹೇಳಬೇಕು.

ತತೋ ರಾಜಾರಾಮಮಿತಿ ಮಂತ್ರಃ ಪಂಚದಶಾಕ್ಷರಃ ।
ಕೀರ್ತನೀಯೋ ಮನುಶ್ಚಾಯಂ ವೀಣಾವಾದ್ಯೇನ ಸುಸ್ವರಃ ॥ ೧೨೭ ॥

॥ ಭಜ ಸೀತಾರಾಮಂ ಮಾನಸ ಭಜ ರಾಜಾರಾಮಂ ಇತಿ ಮಂತ್ರಃ ॥

ಶ್ರೀಸೀತಾರಾಮಮಿತ್ಯುಕ್ತ್ವಾ ವಂದೇ ಚೋಕ್ತ್ವಾ ತತಃ ಪುನಃ ।
ಶ್ರೀರಾಜಾರಾಮಮಿತಿ ಚ ಕೀರ್ತಯೇತ್ಸುಸ್ವರಂ ಮುಹುಃ ॥ ೧೨೮ ॥

॥ ಶ್ರೀಸೀತಾರಾಮಂ ವಂದೇ ಶ್ರೀರಾಜಾರಾಮಂ ಇತಿ ಮಂತ್ರಃ ॥

ದ್ವಾದಶಾಕ್ಷರಮಂತ್ರೋಽಯಂ ಕೀರ್ತನೀಯಸ್ಸದಾ ಜನೈಃ ।
ವೀಣಾವಾದ್ಯಾದಿನಾ ಪುಣ್ಯಸ್ಸರ್ವಾಂಛಿತದಾಯಕಃ ॥ ೧೨೯ ॥

ರಾವಣಮರ್ದನೇತ್ಯುಕ್ತ್ವಾ ರಾಮೇತ್ಯುಕ್ತ್ವಾ ತತಃ ಪರಂ ।
ರಾಘವೇತಿ ತತಶ್ಚೋಕ್ತ್ವಾ ವಾಲೀ ಚೇತಿ ತತಃ ಕ್ರಮಾತ್ ॥ ೧೩೦ ॥

ಮರ್ದನೇತಿ ತತಶ್ಚೋಕ್ತ್ವಾ ರಾಮೇತಿ ದ್ವ್ಯಕ್ಷರೇ ಪುನಃ ।
ಸ್ಮೃತೋಽಷ್ಟಾದಶವರ್ಣೈಶ್ಚ ದ್ವಿತೀಯೋಽಯಂ ಮನುಶ್ಶುಭಃ ॥ ೧೩೧ ॥

---

೧೨೭. ಅನಂತರ ರಾಜಾರಾಮ ಎಂದು ಹೇಳಬೇಕು. ಇದು ಹದಿನೈದಕ್ಷರದ ಮಂತ್ರವು ವೀಣೆಯ ವಾದ್ಯದೊಡನೆ ಈ ಮಂತ್ರವನ್ನು ಗಾನಮಾಡಬೇಕು.

ಭಜ ಸೀತಾರಾಮಂ । ಮಾನಸ ಭಜ ರಾಜಾರಾಮಂ ॥ ೧ ॥

೧೨೮. ಶ್ರೀ ಸೀತಾರಾಮ ಎಂದು ಹೇಳಿ ಅನಂತರ ವಂದೇ ಎಂದು ಹೇಳಬೇಕು. ಆಮೇಲೆ ಶ್ರೀರಾಜಾರಾಮಂ ಎಂದು ಹೇಳಿ ಸುಸ್ವರವಾಗಿ ಗಾನಮಾಡಬೇಕು.

ಶ್ರೀ ಸೀತಾರಾಮಂ ವಂದೇ । ಶ್ರೀ ರಾಜಾರಾಮಂ ॥ ೧೩ ॥

೧೨೯. ಇದು ಹನ್ನೆರಡಕ್ಷರದ ಮಂತ್ರವು. ಇದು ಶುಭಕರವಾದುದು. ವೀಣೆಯ ವಾದ್ಯದೊಡನೆ ಹೇಳಿದರೆ ಎಲ್ಲಾ ಇಷ್ಟಗಳನ್ನೂ ಕೊಡುತ್ತದೆ.

೧೩೦. ರಾವಣಮರ್ದನ ಎಂದು ಹೇಳಿ ಅನಂತರ ರಾಮ ಎಂದು ಹೇಳಬೇಕು. ಆಮೇಲೆ ರಾಘವ ಎಂದು ಹೇಳಿ ವಾಲೀ ಎಂದು ಅನಂತರ ಹೇಳಬೇಕು.

೧೩೧. ಅನಂತರ ಮರ್ದನ ಎಂದು ಹೇಳಬೇಕು. ಮತ್ತೆ ರಾಮ ಎಂದು ಹೇಳಬೇಕು. ಇದು ಹದಿನೆಂಟು ಅಕ್ಷರದ ಮಂತ್ರವು. ಇದು ಶುಭಕರವಾದುದು.

ರಾವಣಮರ್ದನ ರಾಮ ರಾಘವ ವಾಲೀಮರ್ದನ ರಾಮ ।
॥ ಇತಿ ಮಂತ್ರಃ ॥

ಅಯಂ ಮಂತ್ರಃ ಕೀರ್ತನೀಯಃ ಸರ್ವದಾ ಮಾನವೋತ್ತಮೈಃ ।
ಶ್ರೀಸೀತಾರಾಮಮಿತಿ ಚ ಮಾನಸೇತಿ ತತಃ ಪರಂ ॥ ೧೩೨ ॥

ಭಜೇತಿ ದ್ವ್ಯಕ್ಷರೇ ಚೋಕ್ತ್ವಾ ರಾಜೇತಿ ದ್ವ್ಯಕ್ಷರೇ ಪುನಃ ।
ರಾಮಮಿತಿ ದ್ವ್ಯಕ್ಷರೇ ಚ ಮಂತ್ರೋಽಯಂ ಪರಮಶ್ಶುಭಃ ॥ ೩೩ ॥

ಚತುರ್ದಶಾಕ್ಷರಶ್ಚಾಯಂ ಚತುರ್ಥಶ್ಚ ಮಯೇರಿತಃ ।
ಕೀರ್ತನೀಯಸ್ಸುಸ್ವರೋಽಯಂ ವೀಣಾವಾದ್ಯಪುರಸ್ಸರಃ ॥ ೧೩೪ ॥

ಶ್ರೀಸೀತಾರಾಮಂ ಮಾನಸ ಭಜ ರಾಜಾರಾಮಂ ।
॥ ಇತಿ ಮಂತ್ರಃ ॥

ಸೀತಾರಾಮಜಯೇತ್ಯುಕ್ತ್ವಾ ರಾಜಾರಾಮೇತಿ ವೈ ತತಃ ।
ಅಯಂ ದಶಾಕ್ಷರೋ ಮಂತ್ರಃ ಕೀರ್ತನೀಯೋಽತ್ರ ಸುಸ್ವರಃ ॥ ೧೩೫ ॥

ರಾವಣಮರ್ದನ ರಾಮ । ರಾಘವ ವಾಲೀಮರ್ದನ ರಾಮ ॥ ೧೪ ॥

೧೩೨. ಮಾನವೋತ್ತಮರು ಈ ಮಂತ್ರವನ್ನು ಸರ್ವದಾ ಕೀರ್ತಿಸಬೇಕು. ಮೊದಲು ಶ್ರೀ ಸೀತಾರಾಮ ಎಂದು ಹೇಳಿ ಅನಂತರ ಮಾನಸ ಎಂದು ಹೇಳಬೇಕು.

೧೩೩. ಅನಂತರ ಭಜ ಎಂದು ಎರಡಕ್ಷರಗಳನ್ನು ಹೇಳಬೇಕು. ಮತ್ತೆ ರಾಜಾ ಎಂದು ಎರಡಕ್ಷರಗಳನ್ನು ಹೇಳಬೇಕು. ಅನಂತರ ರಾಮ ಎಂದು ಎರಡಕ್ಷರಗಳನ್ನು ಸೇರಿಸಬೇಕು. ಈ ಮಂತ್ರವು ಶುಭಕರವು.

೧೩೪. ಈ ಮಂತ್ರವು ಹದಿನಾಲ್ಕು ವರ್ಣಗಳುಳ್ಳದ್ದು. ಇದು ನಾಲ್ಕನೆಯ ಮಂತ್ರವು. ಇದನ್ನು ವೀಣಾನಾದದೊಡನೆ ಸುಸ್ವರವಾಗಿ ಗಾನಮಾಡಬೇಕು.

ಶ್ರೀ ಸೀತಾರಾಮಂ ಮಾನಸ । ಭಜ ರಾಜಾರಾಮಂ ॥ ೧೫ ॥

೧೩೫. ಸೀತಾರಾಮ ಜಯ ಎಂದು ಹೇಳಿ ಅನಂತರ ರಾಜಾರಾಮ ಎಂದು ಹೇಳಬೇಕು. ಇದು ಹತ್ತಕ್ಷರದ ಮಂತ್ರವು. ಇದು ಶುಭಕರವು. ಗಾನಮಾಡಬೇಕು.

ಸೀತಾರಾಮಜಯರಾಜಾರಾಮ ।
॥ ಇತಿ ಮಂತ್ರಃ ॥

ಶ್ರೀಸೀತಾರಾಮಮಿತಿ ವಂದೇ ರಾಮಮಿತಿ ಕ್ರಮಾತ್ ।
ಜಯರಾಮಂ ತತಶ್ಶೋಕ್ತ್ವಾ ತ್ರಯೋದಶಾಕ್ಷರೋ ಮನುಃ ॥ ೧೩೬ ॥

ಕೀರ್ತನೀಯಸ್ಸದಾ ಮರ್ತ್ಯೈಸ್ಸರ್ವಪಾತಕನಾಶನಃ ।
ವೀಣಾವಾದ್ಯಾದಿನಾ ನಿತ್ಯಂ ದ್ವಿತೀಯೋಯಂ ಮನುಃ ಸ್ಮೃತಃ ॥ ೧೩೭ ॥

ಶ್ರೀಸೀತಾರಾಮಂ ವಂದೇ ರಾಮಂ ಜಯರಾಮಂ ।
॥ ಇತಿ ಮಂತ್ರಃ ॥

ಮಾಂ ಪಾಹ್ಯತೀತಿ ಚೋಕ್ತ್ವಾದೌ ದೀನಂ ರಾಘವಚೇತಿ ಹಿ ।
ತ್ವತ್ಪದಯುಗಳೀನಂ ವೈ ಚೇತ್ಯೇಷ ಷೋಡಶಾಕ್ಷರಃ ॥ ೧೩೮ ॥

ಕೀರ್ತನೀಯೋ ಮನುರ್ಮರ್ತ್ಯೈಸ್ಸರ್ವಪಾತಕಕೃಂತನಃ ।
ವೀಣಾವಾದ್ಯಸ್ವರೇಣೋಚ್ಚೈಃ ಕಲಕಂಠೇನ ಸುಸ್ವರಃ ॥ ೧೩೯ ॥

ಸೀತಾರಾಮ | ಜಯರಾಜಾರಾಮ ॥ ೧೬ ॥

೧೩೬. ಶ್ರೀ ಸೀತಾರಾಮಂ ಎಂದು ಹೇಳಿ ಅನಂತರ ವಂದೆ ರಾಮಂ ಎಂದು ಹೇಳಬೇಕು. ಆನಂತರ ಜಯ ರಾಮ ಎಂದು ಹೇಳಬೇಕು. ಇದು ಹದಿಮೂರಕ್ಷದ ಮಂತ್ರವು.

೧೩೭. ಇದನ್ನು ಯಾವಾಗಲೂ ಮನುಷ್ಯರು ವೀಣೆಯ ವಾದ್ಯದೊಡನೆ ಹೇಳಬೇಕು. ಶುಭಕರವು. ಪಾಪಗಳೆಲ್ಲವೂ ಹೋಗುತ್ತವೆ. ಇದು ಎರಡನೆಯ ಮಂತ್ರವು.

ಶ್ರೀ ಸೀತಾರಾಮಂ ವಂದೇ । ರಾಮಂ ಜಯರಾಮಂ ॥ ೧೭ ॥

೧೩೮. ಮಾಂ ಪಾಹ್ಯತಿ ಎಂದು ಹೇಳಿ ಅನಂತರ ದೀನಂ ರಾಘವ ಎಂದು ಹೇಳಬೇಕು. ತ್ವತ್ಪದ ಯುಗಳೀನಂ ಎಂದು ಅನಂತರ ಹೇಳಬೇಕು. ಇದು ಹದಿನಾರಕ್ಷರದ ಮಂತ್ರವು.

೧೩೯. ಇದು ಸರ್ವಪಾತಕಗಳನ್ನೂ ನಾಶಮಾಡುತ್ತದೆ. ಆದ್ದರಿಂದ ಇದನ್ನು ಕೀರ್ತನೆಮಾಡಬೇಕು. ವೀಣೆಯ ಧ್ವನಿಯೊಡನೆ ಗಟ್ಟಿಯಾಗಿ ರಮ್ಯವಾಗಿ ಹೇಳಬೇಕು.

ಮಾಂ ಪಾಹ್ಯತಿದೀನಂ ರಾಘವ ತ್ವತ್ಪ್ರದಯುಗಳೀನಂ ।
॥ ಇತಿ ಮಂತ್ರಃ ॥

ದ್ವಿತೀಯೋಽಯಂ ಮಯಾ ಪ್ರೋಕ್ತೋ ಮಂತ್ರೋ ವೈ ಷೋಡಶಾಕ್ಷರಃ ।
ಜಯ ಜಯೇತಿ ವೈ ಚೋಕ್ತ್ವಾ ರಾಘವೇತಿ ತತಃ ಪರಂ ॥ ೧೪೧ ॥

ಸಪ್ತಾಕ್ಷರಮನುಶ್ಚಾಯಂ ಕೀರ್ತನೀಯಸ್ಸದಾ ನರೈಃ ।

॥ ಜಯ ಜಯ ರಾಘವ ಇತಿ ಮಂತ್ರಃ ॥

ಜಯ ಜಯೇತಿ ಸಂಕೀರ್ತ್ಯ ತತೋ ರಘುವರೇತಿ ಚ ॥ ೧೪೨ ॥

ಅಷ್ಟಾಕ್ಷರಮನುಶ್ಚಾಯಂ ಕೀರ್ತನೀಯಸ್ಸದಾ ನರೈಃ ।

॥ ಜಯ ಜಯ ರಘುವರ ಇತಿ ಮಂತ್ರಃ ॥

ತ್ವಂ ಮಾಂ ಪಾಲಯೇತ್ಯುಕ್ತ್ವಾ ಸೀತಾರಾಮೇತಿ ವೈ ಪುನಃ ॥ ೧೪೩ ॥

ನವಾಕ್ಷರಮನುಶ್ಚಾಯಂ ಕೀರ್ತನೀಯಸ್ಸದಾ ನರೈಃ ।
ವೀಣಾವಾದ್ಯಸ್ವರೇಣೈವ ಮಹಾಪಾತಕನಾಶನಃ ॥ ೧೪೪ ॥

ಮಾಂ ಪಾಹ್ಯತಿದೀನಂ । ರಾಘವ ತ್ವತ್ಪದಯುಗಳೀನಂ ॥ ೧೮ ॥

೧೪೦–೧೪೧. ಈ ಹದಿನಾರಕ್ಷರದ ಎರಡನೆಯ ಮಂತ್ರವನ್ನು ಹೇಳಿದ್ದೇನೆ. ಜಯ ಜಯ ಎಂದು ಮೊದಲು ಹೇಳಿ ಆನಂತರ ರಾಘವ ಎಂದು ಹೇಳಬೇಕು. ಇದು ಏಳಕ್ಷರದ ಮಂತ್ರವು. ಇದನ್ನು ಯಾವಾಗಲೂ ಗಾನಮಾಡಬೇಕು.

ಜಯ ಜಯ ರಾಘವ ॥ ೧೯ ॥

೧೪೨. ಮೊದಲು ಜಯ ಜಯ ಎಂದು ಹೇಳಬೇಕು. ಅನಂತರ ರಘುವರ ಎಂದು ಹೇಳಬೇಕು. ಇದು ಎಂಟು ಅಕ್ಷರದ ಮಂತ್ರವು. ಇದನ್ನು ಯಾವಾಗಲೂ ಕೀರ್ತಿಸಬೇಕು.

ಜಯ ಜಯ ರಘುವೀರ ॥ ೨೦ ॥

೧೪೩–೧೪೪. ತ್ವಂ ಮಾಂ ಪಾಲಯ ಎಂದು ಹೇಳಿ ಅನಂತರ ಸೀತಾರಾಮ ಎಂದು ಹೇಳಬೇಕು. ಇದು ಒಂಭತ್ತಕ್ಷರದ ಮಂತ್ರವು. ಭಕ್ತಿಯಿಂದ ಗಾನಮಾಡಬೇಕು. ವೀಣೆಯೊಡನೆ ಗಾನಮಾಡಿದರೆ ಮಹಾ ಪಾಪಗಳು ಹೋಗುತ್ತವೆ.

॥ ತ್ವಂ ಮಾಂ ಪಾಲಯ ಸೀತಾರಾಮ ಇತಿ ಮಂತ್ರಃ ॥

ಸೀತಾರಾಮ ಜಯೇತ್ಯುಕ್ತ್ವಾ ಷಡಕ್ಷರಮನುಸ್ತ್ವಯಂ ।
ಕೀರ್ತನೀಯಸ್ಸದಾ ಮರ್ತ್ಯೈರ್ವೀಣಾವಾದ್ಯೇನ ಸುಸ್ವರಃ ॥ ೧೪೫ ॥

॥ ಸೀತಾರಾಮ ಜಯ ಇತಿ ಮಂತ್ರಃ ॥

ಶ್ರೀಸೀತಾರಾಮೇತಿ ಮನುರ್ಜ್ಞೇಯಃ ಪಂಚಾಕ್ಷರಃ ಪರಃ ।
ಕೀರ್ತನೀಯಸ್ಸದಾ ಮರ್ತ್ಯೈರ್ಮಹಾಪಾತಕನಾಶನಃ ॥ ೧೪೬ ॥

॥ ಶ್ರೀಸೀತಾರಾಮ ಇತಿ ಮಂತ್ರಃ ॥

ಸೀತಾರಾಮೇತಿಮನುಶ್ಚತುರ್ವರ್ಣಾತ್ಮಕಃ ಸ್ಮೃತಃ ।

॥ ಸೀತಾರಾಮ ಇತಿ ಮಂತ್ರಃ ॥

ಶ್ರೀರಾಮೇತಿ ತ್ರ್ಯಕ್ಷರಶ್ಚ ರಾಮೇತಿ ದ್ವ್ಯಕ್ಷರೋ ಮನುಃ ॥ ೧೪೭ ॥

ತ್ವಂ ಮಾಂ ಪಾಲಯ ಸೀತಾರಾಮ ॥ ೨೧ ॥

೧೪೫. ಸೀತಾರಾಮಜಯ ಎಂದು ಹೇಳಬೇಕು. ಇದು ಆರಕ್ಷರದ ಮಂತ್ರವು. ಇದನ್ನು ವೀಣಾವಾದನದೊಡನೆ ಸುಸ್ವರವಾಗಿ ಹಾಡಬೇಕು.

ಸೀತಾರಾಮಜಯ ॥ ೨೨ ॥

೧೪೬. ಶ್ರೀ ಸೀತಾರಾಮ ಎಂಬುದು ಮಂತ್ರವು. ಇದು ಐದು ಅಕ್ಷರಗಳುಳ್ಳದ್ದು. ಇದನ್ನು ಹೇಳಿದರೆ ಮಹಾ ಪಾಪಗಳು ಹೋಗುತ್ತವೆ.

ಶ್ರೀ ಸೀತಾರಾಮ ॥ ೨೩ ॥

೧೪೭. ಸೀತಾರಾಮ ಎಂಬುದೇ ಮಂತ್ರವು. ಇದು ನಾಲ್ಕು ಅಕ್ಷರಗಳುಳ್ಳದ್ದು.

ಸೀತಾರಾಮ ॥ ೨೪ ॥

ಶ್ರೀರಾಮ ಎಂಬುದು ಮೂರಕ್ಷರದ ಮಂತ್ರವು. ರಾಮ ಎಂಬುದು ಎರಡಕ್ಷರದ ಮಂತ್ರವು.

॥ ಶ್ರೀರಾಮ ಇತಿ ಮಂತ್ರಃ ॥

॥ ರಾಮ ಇತಿ ಮಂತ್ರಃ ॥

ರಾಕಾರೋ ಬಿಂದುನಾ ಯುಕ್ತಶ್ಚೈಕವರ್ಣಾತ್ಮಕೋಮನುಃ ।
ಅಯಂ ಸದಾ ಜಪನೀಯಃ ಕೀರ್ತನೀಯೋ ನ ವೈ ಕದಾ ॥ ೧೪೮ ॥

॥ ರಾಂ ಇತಿ ಮಂತ್ರಃ ॥

ರಾಮಜಯೇತಿ ಚೋಕ್ತ್ವಾದೌ ಸೀತಾರಾಮೇತಿ ವೈ ತತಃ ।
ರಾಘವೇತಿ ತತಶ್ಚೋಕ್ತ್ವಾ ಮಂತ್ರಸ್ತ್ವೇಕಾದಶಾಕ್ಷರಃ ॥ ೧೪೯ ॥

॥ ರಾಮಜಯ ಸೀತಾರಾಮ ರಾಘವ ಇತಿ ಮಂತ್ರಃ ॥

ದಶರಥನಂದನೇತಿ ರಘುಕುಲೇತಿ ವೈ ತತಃ ।
ಭೂಷಣೇತಿ ತತಶ್ಚೋಕ್ತ್ವಾ ಕೌಸಲ್ಯೇತಿ ತತಃ ಪರಂ ॥ ೧೫೦ ॥

ವಿಶ್ರಾಮೇತಿ ತತಶ್ಚೋಕ್ತ್ವಾ ಪಂಕಜಲೋಚನೇತಿ ಚ ।
ರಾಮೇತಿ ದ್ವೇಕ್ಷರೇ ಚಾಪಿ ಹ್ಯಷ್ಟಾವಿಂಶಾಕ್ಷರೋ ಮನುಃ ॥ ೧೫೧ ॥

ಶ್ರೀರಾಮ ॥ ೨೫ ॥		ರಾಮ ॥ ೨೭ ॥

೧೪೮. ರಾ ಎಂಬ ಅಕ್ಷರವು ಬಿಂದು ಎಂದರೆ ಸೊನ್ನೆಯಿಂದ ಕೂಡಿಕೊಂಡರೆ ಇದು ಒಂದಕ್ಷರದ ಮಂತ್ರವು. ಈ ಮಂತ್ರವನ್ನು ಜಪ ಮಾಡಬೇಕೇ ಹೊರತು ಕೀರ್ತನೆಮಾಡಬಾರದು.

ರಾಂ ॥ ೨೭ ॥

೧೪೯. ರಾಮಜಯ ಎಂದು ಹೇಳಿ ಅನಂತರ ಸೀತಾರಾಮ ಎಂದು ಹೇಳಬೇಕು. ಅನಂತರ ರಾಘವ ಎಂದು ಹೇಳಬೇಕು. ಇದು ಹನ್ನೊಂದಕ್ಷರದ ಮಂತ್ರವು.

ರಾಮಜಯ ಸೀತಾರಾಮರಾಘವ ॥ ೨೮ ॥

೧೫೦. ದಶರಥನಂದನ ಎಂದು ಹೇಳಿ ಅನಂತರ ರಘುಕುಲ ಎಂದು ಹೇಳಬೇಕು. ಅನಂತರ ಭೂಷಣ ಎಂದು ಹೇಳಬೇಕು. ಅನಂತರ ಕೌಸಲ್ಯಾ ಎಂದು ಹೇಳಬೇಕು.

೧೫೧-೧೫೨. ಆಮೇಲೆ ವಿಶ್ರಾಮ ಎಂದು ಹೇಳಬೇಕು. ಅನಂತರ ಪಂಕಜಲೋಚನ ಎಂದು ಹೇಳಬೇಕು. ಅನಂತರ ರಾಮ ಎಂದು ಎರಡು

ಅಯಂ ಸದಾ ಕೀರ್ತನೀಯೋ ವೀಣಾವಾದ್ಯೇನ ಸುಸ್ವರಃ ।
ಪ್ರೋಕ್ತಃ ಪಾತಕವಿಧ್ವಂಸೀ ಸರ್ವವಾಂಛಿತದಾಯಕಃ ॥ ೧೫೨ ॥

ದಶರಥನಂದನ ರಘುಕುಲಭೂಷಣ
ಕೌಸಲ್ಯಾವಿಶ್ರಾಮ ಪಂಕಜಲೋಚನ ರಾಮ ।
॥ ಇತಿ ಮಂತ್ರಃ ॥

ಸೀತಾರಾಮ ಜಯೇತ್ಯುಕ್ತ್ವಾ ರಾಘವೇತಿ ತತಃ ಪರಂ ।
ರಾಮೇತಿ ದ್ವ್ಯಕ್ಷರೇ ಚಾಪಿ ಮಂತ್ರಸ್ತ್ವೇಕಾದಶಾಕ್ಷರಃ ॥ ೧೫೩ ॥

ಕೀರ್ತನೀಯಃ ಸುಸ್ವರೋಽಯಂ ಮಂತ್ರೋ ವೀಣಾ ಸ್ವರೇಣ ಚ ।
ಮಹಾಪಾತಕಹೃತ್ಪ್ರೋಕ್ತಸ್ಸರ್ವವಾಂಛಿತದಾಯಕಃ ॥ ೧೫೪ ॥

॥ ಸೀತಾರಾಮ ಜಯ ರಾಘವ ರಾಮ ಇತಿ ಮಂತ್ರಃ ॥

ಏಕಾದಶಾಕ್ಷರಶ್ಚಾಯಂ ಮಂತ್ರಃ ಪ್ರೋಕ್ತೋ ಮಯಾತ್ರ ಹಿ ।
ದ್ವಿತೀಯಃ ಪರಮಶ್ಚೈಷೋ ಮಹಾಪಾತಕನಾಶನಃ ॥ ೧೫೫ ॥

ಅಕ್ಷರಗಳನ್ನು ಹೇಳಬೇಕು. ಆಮೇಲೆ ಇದು ಇಪ್ಪತ್ತೆಂಟು ಅಕ್ಷರದ ಮಂತ್ರವಾಗುತ್ತದೆ. ಇದನ್ನು ಯಾವಾಗಲೂ ಕೀರ್ತಿಸಬೇಕು. ವೀಣಾವಾದ್ಯದೊಡನೆ ಹೇಳಬೇಕು. ಅದು ಪಾಪಗಳನ್ನು ನಾಶಮಾಡುತ್ತದೆ.

ದಶರಥನಂದನ ರಘುಕುಲಭೂಷಣ ।
ಕೌಸಲ್ಯಾವಿಶ್ರಾಮ ಪಂಕಜಲೋಚನರಾಮ ॥ ೨೯ ॥

೧೫೩. ಸೀತಾರಾಮಜಯ ಎಂದು ಹೇಳಿ ಅನಂತರ ರಾಘವ ಎಂದೂ ಹೇಳಬೇಕು. ಅನಂತರ ರಾಮ ಎಂಬ ಎರಡಕ್ಷರವನ್ನು ಹೇಳಬೇಕು. ಈ ಮಂತ್ರವು ಹನ್ನೊಂದು ಅಕ್ಷರದ ಮಂತ್ರವಾಗುತ್ತದೆ.

೧೫೪. ಇದನ್ನು ವೀಣೆಯ ವಾದ್ಯದೊಡನೆ ಸುಸ್ವರವಾಗಿ ಗಾನಮಾಡಬೇಕು ಇದು ಮಹಾ ಪಾತಕಗಳನ್ನು ನಾಶಮಾಡುವುದಲ್ಲದೆ ಸಕಲ ಇಷ್ಟಗಳನ್ನೂ ಕೊಡುತ್ತದೆ.

ಸೀತಾರಾಮಜಯ । ರಾಘವರಾಮ ॥ ೩೦ ॥

೧೫೫. ಹನ್ನೊಂದು ಅಕ್ಷರದ ಮಂತ್ರವನ್ನು ಹೇಳಿದ್ದೇನೆ. ಇದು ಎರಡನೆಯದು. ಶ್ರೇಷ್ಠವಾದುದು. ಮಹಾ ಪಾತಕವನ್ನು ನಾಶಮಾಡುತ್ತದೆ.

ಪಂಚವಟೀಸ್ಥಿತೇತ್ಯುಕ್ತ್ವಾ ರಾಮಜಯಜಯೇತಿ ಚ ।
ದಶರಥನಂದನೇತಿ ರಾಮೇತಿ ದ್ವೇಕ್ಷರೇ ತಥಾ ॥ ೧೫೬ ॥

ಏಕವಿಂಶಾಕ್ಷರಶ್ಚಾಯಂ ಕೀರ್ತನೀಯೋ ಮಹಾಮನುಃ ।
ಕಲಕಂಠೇನ ಮರ್ತ್ಯೈಶ್ಚ ಮಹಾಪಾತಕನಾಶನಃ ॥ ೧೫೭ ॥

ಪಂಚವಟೀಸ್ಥಿತರಾಮ ಜಯ ಜಯ ದಶರಥನಂದನ ರಾಮ ।
॥ ಇತಿ ಮಂತ್ರಃ ॥

ದಶರಥಸುತೇತ್ಯುಕ್ತ್ವಾ ಬಾಲಂ ವಂದೇತ್ವಿತಿ ಕ್ರಮಾತ್ ।
ರಾಮಂ ಘನನೀಲಮಿತಿ ಮಂತ್ರೋಯಂ ಷೋಡಶಾಕ್ಷರಃ ॥ ೧೫೮ ॥

ತೃತೀಯೋಯಂ ಮಯಾ ಪ್ರೋಕ್ತಃ ಕೀರ್ತನೀಯೋ ಮನೋರಮಃ ।
ವೀಣಾವಾದ್ಯಸ್ವರೇಣೈವ ಮಹಾಪುಣ್ಯವಿವರ್ಧನಃ ॥ ೧೫೯ ॥

---

೧೫೬. ಪಂಚವಟೀ ಸ್ಥಿತ ಎಂದು ಹೇಳಿ ರಾಮಜಯ ಜಯ ಎಂದು ಅನಂತರ ಹೇಳಬೇಕು. ಆಮೇಲೆ ದಶರಥನಂದನ ಎಂದು ಹೇಳಿ ಅನಂತರ ರಾಮ ಎಂದು ಎರಡಕ್ಷರವನ್ನು ಹೇಳಬೇಕು.

೧೫೭. ಇದು ಇಪ್ಪತ್ತೊಂದು ಅಕ್ಷರದ ಮಂತ್ರವಾಗುತ್ತದೆ. ಇದನ್ನು ಗಾನಮಾಡಬೇಕು. ಇದನ್ನು ಗಾನಮಾಡಿದರೆ ಮಹಾ ಪಾಪವು ಹೋಗುವುದು.

ಪಂಚವಟೀಸ್ಥಿತರಾಮ । ಜಯ ಜಯ ದಶರಥನಂದನರಾಮ ॥ ೩೧ ॥

೧೫೮. ದಶರಥಸುತ ಎಂದು ಹೇಳಿ ಅನಂತರ ಬಾಲಂ ವಂದೇ ಎಂದು ಹೇಳಬೇಕು ಆಮೇಲೆ ರಾಮಂ ಘನನೀಲಂ ಎಂದು ಹೇಳಬೇಕು ಈ ಮಂತ್ರವು ಹದಿನಾರು ಅಕ್ಷರಗಳು ಉಳ್ಳದ್ದು.

೧೫೯. ಇದು ಮೂರನೆಯ ಮಂತ್ರವು. ಮನೋಹರವಾಗಿರುವುದು. ವೀಣೆಯ ವಾದ್ಯದೊಡನೆ ಗಾನಮಾಡಿದರೆ ಮಹಾ ಪುಣ್ಯವನ್ನು ಕೊಡುತ್ತದೆ. ಮತ್ತು ಪುಣ್ಯವನ್ನು ಹೆಚ್ಚಿಸುತ್ತದೆ.

ದಶರಥಸುತಬಾಲಂ ವಂದೇ ರಾಮಂ ಘನನೀಲಂ ।
॥ ಇತಿ ಮಂತ್ರಃ ॥

ಕೋದಂಡಖಂಡನೇತ್ಯುಕ್ತ್ವಾ ದಶಶಿರಮರ್ದನೇತಿ ಚ ।
ಕೌಸಲ್ಯಾಸುತರಾಮೇತಿ ಸೀತಾರಂಜನಚೇತಿ ವೈ ॥ ೧೬೦ ॥

ರಾಜಾರಾಮೇತಿ ವೈ ಚೋಕ್ತ್ವಾ ಚೈಕೋನತ್ರಿಂಶವರ್ಣಕಃ ।
ಕೀರ್ತನೀಯೋ ಮನುಶ್ಚಾಯಂ ವೀಣಾವಾದ್ಯೇನ ಸುಸ್ವರಃ ॥ ೧೬೧ ॥

ಕೋದಂಡಖಂಡನ ದಶಶಿರಮರ್ದನ
ಕೌಸಲ್ಯಾಸುತ ರಾಮ ಸೀತಾರಂಜನ ರಾಜಾರಾಮ ।
॥ ಇತಿ ಮಂತ್ರಃ ॥

ಕೋದಂಡಭಂಜನೇತ್ಯುಕ್ತ್ವಾ ರಾವಣಮರ್ದನೇತಿ ಚ ।
ಕೌಸಲ್ಯೇತಿ ತತಶ್ಚೋಕ್ತ್ವಾ ವಿಶ್ರಾಮೇತಿ ತತಃ ಪರಂ ॥ ೧೬೨ ॥

ಸೀತಾರಂಜನೇತಿ ತತೋ ರಾಜಾರಾಮೇತಿ ವೈ ತತಃ ।
ಸಪ್ತವಿಂಶಾಕ್ಷರಶ್ಚಾಯಂ ಮನುಃ ಪ್ರೋಕ್ತಶ್ಶುಭಪ್ರದಃ ॥ ೧೬೩ ॥

ದಶರಥಸುತ ಬಾಲಂ ವಂದೇ ರಾಮಂ ಘನನೀಲಂ ॥ ೩೨ ॥

೧೬೦–೧೬೧. ಕೋದಂಡಖಂಡನ ಎಂಬುದಾಗಿ ಹೇಳಿ ಅನಂತರ ದಶಶಿರ ಮರ್ದನ ಎಂದು ಹೇಳಬೇಕು. ಆಮೇಲೆ ಕೌಸಲ್ಯಾಸುತರಾಮ ಎಂದೂ ಸೀತಾರಂಜನ ಎಂದೂ ರಾಜಾರಾಮ ಎಂದೂ ಹೇಳಬೇಕು. ಇದು ಇಪ್ಪತ್ತೊಂಭತ್ತು ಅಕ್ಷರಗಳ ಮಂತ್ರವು ಇದನ್ನು ವೀಣೆಯ ವಾದ್ಯದೊಡನೆ ಹೇಳಬೇಕು.

ಕೋದಂಡಖಂಡನ ದಶಶಿರಮರ್ದನ ।
ಕೌಸಲ್ಯಾಸುತರಾಮ । ಸೀತಾರಂಜನ ರಾಜಾರಾಮ ॥ ೩೩ ॥

೧೬೨-೧೬೩. ಕೋದಂಡಭಂಜನ ಎಂದು ಹೇಳಿ ಅನಂತರ ರಾವಣ ಮರ್ದನ ಎಂದು ಹೇಳಬೇಕು. ಅನಂತರ ಕೌಸಲ್ಯಾ ಎಂದು ಹೇಳಬೇಕು. ವಿಶ್ರಾಮ ಎಂದು ಹೇಳಿ ಆಮೇಲೆ ಸೀತಾರಂಜನ ಎಂದು ಹೇಳಿ ಆಮೇಲೆ ರಾಜಾರಾಮ ಎಂದು ಹೇಳಬೇಕು. ಇದು ಇಪ್ಪತ್ತೇಳು ಅಕ್ಷರಗಳುಳ್ಳ ಮಂತ್ರವು. ಶುಭವನ್ನುಂಟುಮಾಡತಕ್ಕದ್ದು.

ಕೋದಂಡಭಂಜನ ರಾವಣಮರ್ದನ ಕೌಸಲ್ಯಾವಿಶ್ರಾಮ-
ಸೀತಾರಂಜನ ರಾಜಾರಾಮ
॥ ಇತಿ ಮಂತ್ರಃ ॥

ಕೋದಂಡಖಂಡನೇತ್ಯುಕ್ತ್ವಾ ವಾಲೀತಾಡನಚೇತಿ ವೈ ।
ಲಂಕಾದಾಹನೇತಿ ತತಃ ಪಾಷಾಣತಾರಣೇತಿ ಚ ॥ ೧೬೪ ॥

ರಾವಣಮರ್ದನೇತ್ಯುಕ್ತ್ವಾ ರವಿಕುಲೇತಿ ವೈ ತತಃ ।
ಭೂಷಣೇತಿ ತತಶ್ಚೋಕ್ತ್ವಾ ಕೌಸಲ್ಯೇತಿ ತತಃ ಪರಂ ॥ ೧೬೫ ॥

ವಿಶ್ರಾಮೇತಿ ತತಶ್ಚೋಕ್ತ್ವಾ ಸೀತಾರಂಜನ ಚೇತಿ ವೈ ।
ರಾಜಾರಾಮೇತಿ ವೈ ಚೋಕ್ತ್ವಾ ಪಂಚಾದಶಾಕ್ಷರೋ ಮನುಃ ॥ ೧೬೬ ॥

ಅಯಂ ಸದಾ ಕೀರ್ತನಿಯೋ ವೀಣಾವಾದ್ಯೇನ ಸುಸ್ವರಃ ।
ಮಂತ್ರಾಣಾಂ ಹಿ ವರಿಷ್ಠೋಽಯಂ ಮಹಾಪಾತಕನಾಶನಃ ॥ ೧೬೭ ॥

ಕೋದಂಡಭಂಜನ ರಾವಣಮರ್ದನ ।
ಕೌಸಲ್ಯಾವಿಶ್ರಾಮ ಸೀತಾರಂಜನ ರಾಜಾರಾಮ ॥ ೩೪ ॥

೧೬೪. ಕೋದಂಡಖಂಡನ ಎಂದು ಹೇಳಿ ಅನಂತರ ವಾಲೀತಾಡನ ಎಂದು ಹೇಳಿ ಅನಂತರ ಲಂಕಾದಾಹನ ಎಂದು ಉಚ್ಚರಿಸಿ ಆಮೇಲೆ ಪಾಷಾಣ ತಾರಣ ಎಂದು ಹೇಳಬೇಕು.

೧೬೫. ರಾವಣಮರ್ದನ ಎಂದು ಅದಕ್ಕೆ ಸೇರಿಸಿ ಹೇಳಿ ಅನಂತರ ರವಿಕುಲ ಎಂದು ಹೇಳಬೇಕು. ಭೂಷಣ ಎಂದು ಅದಕ್ಕೆ ಸೇರಿಸಿ ಆಮೇಲೆ ಕೌಸಲ್ಯಾ ಎಂದು ಅದಕ್ಕೆ ಸೇರಿಸಬೇಕು.

೧೬೬-೧೬೭. ಆಮೇಲೆ ವಿಶ್ರಾಮ ಎಂದು ಹೇಳಬೇಕು. ಅನಂತರ ಸೀತಾರಂಜನ ಎಂದು ಹೇಳಬೇಕು. ಅನಂತರ ರಾಜಾರಾಮ ಎಂದು ಹೇಳ ಬೇಕು. ಇದು ಐವತ್ತು ಅಕ್ಷರಗಳ ಮಂತ್ರವು. ಇದನ್ನು ವೀಣೆಯ ವಾದ್ಯದೊಡನೆ ಸುಸ್ವರವಾಗಿ ಹೇಳಬೇಕು. ಇದು ಮಂತ್ರಗಳೊಳಗೆಲ್ಲಾ ಶ್ರೇಷ್ಠವಾದುದು. ಪಾಪಗಳನ್ನೆಲ್ಲಾ ನಾಶಮಾಡುತ್ತದೆ.

ಕೋದಂಡಖಂಡನ ವಾಲೀತಾಡನ ಲಂಕಾದಾಹನ ಪಾಷಾಣತಾರಣ
ರಾವಣಮರ್ದನ ರವಿಕುಲಭೂಷಣ ಕೌಸಲ್ಯಾವಿಶ್ರಾಮ
ಸೀತಾರಂಜನ ರಾಜಾರಾಮ
॥ ಇತಿ ಮಂತ್ರಃ ॥

ಏವಂ ನಾನಾವಿಧಾ ಮಂತ್ರಾಃ ಸಂತಿ ಶಿಷ್ಯ ಸಹಸ್ರಶಃ ।
ಸಹಸ್ರವರ್ಷಪರ್ಯಂತಂ ಕಸ್ತಾನ್ವಕ್ತುಂ ಭವೇತ್ ಕ್ಷಮಃ ॥ ೧೬೮ ॥

ಏತೇ ಸರ್ವೇ ಕೀರ್ತನೀಯಾ ಏವ ವೀಣಾ ಪುರಸ್ಸರಾಃ ।
ಇಮೇ ಮಂತ್ರಾ ಜಪನೀಯಾ ನ ಜ್ಞೇಯಾ ಮಾನವೋತ್ತಮೈಃ ॥ ೧೬೯ ॥

ಮಂತ್ರಶಾಸ್ತ್ರೇಷು ಯೇ ಪ್ರೋಕ್ತಾಸ್ತೇ ಜಪ್ಯಾ ಏವ ಮಾನವೈಃ ।
ತೇ ಮಂತ್ರಾಃ ಕೀರ್ತನೀಯಾ ನ ಕೀರ್ತನೀಯಾ ಸ್ತ್ವಮೇ ಸ್ಮೃತಾಃ ॥

ಏತಾನ್ಮಂತ್ರಾನ್ಪುರಸ್ಕೃತ್ಯ ಪ್ರಬಂಧಾ ವಿವಿಧಾಶ್ಶುಭಾಃ ।
ರಚನೀಯಾ ಬುದ್ಧಿಮದ್ಭಿರ್ನಾನಾಭಾಷಾಭಿರಾದರಾತ್ ॥ ೧೭೧ ॥

ಕೋದಂಡಖಂಡನ ವಾಲೀತಾಡನ । ಲಂಕಾದಾಹನ ಪಾಷಾಣತಾರಣ ।
ರಾವಣಮರ್ದನ ರವಿಕುಲಭೂಷಣ ।
ಕೌಸಲ್ಯಾ ವಿಶ್ರಾಮ ಸೀತಾರಂಜನ ರಾಜಾರಾಮ ॥ ೩೫ ॥

೧೬೮. ಎಲೈ ಶಿಷ್ಯನೇ ! ಈ ರೀತಿಯಾಗಿ ಮಂತ್ರಗಳು ನಾನಾ ವಿಧವಾಗಿವೆ. ಇಂತಹವು ಸಾವಿರಾರು ಇವೆ. ಸಾವಿರ ವರ್ಷಗಳವರೆಗೆ ಹೇಳುತ್ತಿದ್ದರೂ ಅದನ್ನು ಪೂರ್ತಿಯಾಗಿ ಹೇಳಲು ಯಾವನಿಂದ ಸಾಧ್ಯವಾದೀತು ?

೧೬೯. ಇವೆಲ್ಲವನ್ನೂ ವೀಣೆಯ ಧ್ವನಿಯೊಡನೆ ಗಾನಮಾಡಬೇಕು. ಈ ಮಂತ್ರಗಳು ಜಪಮಾಡತಕ್ಕವುಗಳಲ್ಲವೆಂಬುದನ್ನು ಜನರು ತಿಳಿದುಕೊಳ್ಳಲಿ.

೧೭೦. ಮಂತ್ರಶಾಸ್ತ್ರದಲ್ಲಿ ಹೇಳಿರುವ ಮಂತ್ರಗಳೇ ಜಪಕ್ಕೆ ಯೋಗ್ಯವಾದುವು. ಆ ಮಂತ್ರಗಳನ್ನು ಗಾನಮಾಡಬಾರದು. ಈ ಮಂತ್ರಗಳನ್ನು ಜಪಿಸದೆ ಗಾನವನ್ನೇ ಮಾಡಬೇಕು.

೧೭೧. ಈ ಮಂತ್ರಗಳ ಬಗೆಗಳನ್ನೇ ಅನುಸರಿಸಿಕೊಂಡು ಅನೇಕ ಪ್ರಬಂಧಗಳನ್ನು ವಿವಿಧಭಾಷೆಗಳಲ್ಲಿ ಜನರು ಬರೆಯಬಹುದು.

ಯೋ ಯೋ ನೋಕ್ತಾ ಮಯಾ ಮಂತ್ರಾ ಸ್ತಾನ್ಯುಕ್ತ್ಯಾ ರಚಯೇನ್ನರಃ ।
ರಚನೇ ನೈವ ದೋಷೋಽಸ್ತಿ ತೈಸ್ತುಷ್ಟೋ ಜಾಯತೇ ಹರಿಃ ॥ ೧೭೨ ॥

ಮಂತ್ರೈಃ ಪ್ರಬಂಧೈಃ ಕಾವ್ಯೈಶ್ಚ ಸ್ತುತಿಭಿಃ ಕೀರ್ತನಾದಿಭಿಃ ।
ಪ್ರಾಚೀನೈರ್ವಾ ಕಲ್ಪಿತೈರ್ವಾ ರಾಮೋ ಗೇಯಸ್ಸದಾ ನರೈಃ ॥ ೧೭೩ ॥

ಯೇನ ಕೇನ ಪ್ರಕಾರೇಣ ಕಾರ್ಯಂ ರಾಘವ ಚಿಂತನಂ ।
ಪಾಪರಾಶಿಃ ಕ್ಷಣಾದ್ದಗ್ಧಃ ಶ್ರೀರಾಮಚಿಂತನೇನ ಹಿ ॥ ೧೭೪ ॥

ಭವತ್ಯತ್ರ ನ ಸಂದೇಹಃ ಪಾವಕೇನ ಯಥಾ ಕುಟೀ ।
ದಂಭೇನ ವಾತಿಭಕ್ತ್ಯಾ ವಾ ನಿಷ್ಕಾಮಾದ್ವಾ ಸಕಾಮತಃ ॥ ೧೭೫ ॥

---

೧೭೨. ನಾನು ಯಾವ ಮಂತ್ರಗಳನ್ನು ಹೇಳಿಲ್ಲವೋ ಅವನ್ನು ಯುಕ್ತಿಯಿಂದ ಹೇಳಿ ಅವರು ರಚಿಸಬಹುದು. ಹಾಗೆ ಹೊಸದಾಗಿ ರಚಿಸುವುದರಿಂದ ದೋಷವುಂಟಾಗುವುದಿಲ್ಲ. ಆದರಿಂದ ಹರಿಯು ಸಂತೋಷಗೊಳ್ಳುವನು.

೧೭೩. ಮಂತ್ರಗಳಿಂದಲಾಗಲೀ, ಪ್ರಬಂಧಗಳಿಂದಲಾಗಲೀ, ಕಾವ್ಯಗಳಿಂದಲಾಗಲೀ, ಸ್ತುತಿಗಳಿಂದಲಾಗಲೀ, ಕೀರ್ತನೆಗಳಿಂದಲಾಗಲೀ, ಈಗಿನವರು ಕಲ್ಪಿಸಿಕೊಂಡುದರಿಂದಾಗಲಿ, ಪೂರ್ವಿಕರು ಕಲ್ಪಿಸಿರುವುವುಗಳಿಂದಲಾಗಲಿ ಆ ಶ್ರೀರಾಮನನ್ನು ಯಾವಾಗಲೂ ಗಾನಮಾಡಬೇಕು.

೧೭೪. ಈ ರಾಮನ ಚಿಂತೆಯನ್ನು ಯಾವುದಾದರೂ ಒಂದು ರೀತಿಯಿಂದ ಮಾಡಲೇ ಬೇಕು. ಶ್ರೀರಾಮನ ಸ್ಮರಣೆಯಿಂದ ಪಾಪರಾಶಿಗಳು ಕ್ಷಣಕಾಲದಲ್ಲಿಯೇ ಸುಟ್ಟು ಹೋಗುತ್ತವೆ.

೧೭೫. ಬೆಂಕಿಯಿಂದ ತರಗೆಲೆಯ ಮನೆಯು ಸುಟ್ಟುಹೋಗುವಂತೆ ಈ ಪಾಪಗಳು ಸುಟ್ಟುಹೋಗುವುದರಲ್ಲಿ ಸ್ವಲ್ಪವೂ ಸಂದೇಹವಿರುವುದಿಲ್ಲ. ಶ್ರೀರಾಮ ಚಿಂತನವನ್ನು ದಂಭದಿಂದ ಮಾಡಿದರೂ ಸರಿಯೇ. ಅತಿಭಕ್ತಿಯಿಂದ ಮಾಡಿದರೂ ಸರಿಯೇ. ನಿಷ್ಕಾಮದಿಂದ ಮಾಡಿದರೂ ಸರಿಯೇ. ಸಕಾಮದಿಂದ ಮಾಡಿದರೂ ಸರಿಯೇ. ಯಾವ ರೀತಿಯಿಂದಲಾದರೂ ಸರಿಯೇ. ಶ್ರೀರಾಮನನ್ನು ಗಾನಮಾಡಿದರೆ ಅದರಿಂದ ಅವನ ಪಾಪವೆಲ್ಲವೂ ಸುಟ್ಟು ಭಸ್ಮವಾಗುತ್ತವೆ.

ಯದ್ಯತ್ರ ರಾಘವೋ ಗೀತಸ್ತೇನ ಪಾಪಂ ಹುತಂ ಭವೇತ್ ।
ಯಥಾ ವಹ್ನಿಃ ತೂಲರಾಶಿಂ ಸ್ಪೃಶತಃ ಕಾಮನಾಂ ವಿನಾ ॥ ೧೭೬ ॥

ಕಾಮೇನ ವಾ ದಹತ್ಯೇವ ಕ್ಷಣಾತ್ತದ್ವನ್ನ ಸಂಶಯಃ ।
ಮಂತ್ರೈಃ ಪ್ರಬಂಧೈಃ ಕಾವ್ಯೈಶ್ಚ ನಾನಾಚಾರಿತ್ರ ವರ್ಣನೈಃ ॥ ೧೭೭ ॥

ಅತ್ಯಶುದ್ಧೈಃ ಸ್ತುತೋ ರಾಮಃ ಕಲ್ಪಿತೈರಪಿ ಸ್ವೇಚ್ಛಯಾ ।
ತೈಶ್ಚ ತುಷ್ಟೋ ಭವತ್ಯತ್ರ ಶ್ರೀರಾಮೋ ನಾತ್ರ ಸಂಶಯಃ ॥ ೧೭೮ ॥

ವಿನಾಶ್ರಯೇಣ ರಾಮಸ್ಯ ಯತ್ಕೃತಂ ಸ್ತವನಾದಿಕಂ ।
ತೇನಾಪಿ ತುಷ್ಟಶ್ಶ್ರೀರಾಮೋ ಭವತ್ಯೇವ ನ ಸಂಶಯಃ ॥ ೧೭೯ ॥

ಆಶ್ರಯೇಣಾಪಿ ಯಾ ನಿಂದಾ ಕೃತಾ ಶ್ರೀರಾಘವಸ್ಯ ಚ ।
ಸಾ ಭವೇನ್ನರಕಾಯೈವ ನಾತ್ರ ಕಾರ್ಯಾ ವಿಚಾರಣಾ ॥ ೧೮೦ ॥

೧೭೬-೧೮೦. ನಾವು ಬೆಂಕಿಯನ್ನು ಸುಡಲೆಂಬುದಾಗಿಯಾಗಲೀ, ಸುಡದಿರಲೆಂಬುದಾಗಿಯಾಗಲೀ, ತಿಳಿಯದೆಯಾಗಲೀ, ತಿಳಿದಾಗಲಿ ಯಾವ ರೀತಿಯಲ್ಲಿ ಮುಟ್ಟಿದರೂ ಅದು ಸುಡುತ್ತದೆ. ಅಪೇಕ್ಷೆಯಿಲ್ಲದಿದ್ದರೂ ಬೆಂಕಿಯು ತಗುಲಿದರೆ ಹತ್ತಿಯ ರಾಶಿಯನ್ನು ಹೇಗೆ ನಾಶಮಾಡುತ್ತದೆಯೋ ಅಂತೆಯೇ ಕ್ಷಣಕಾಲದಲ್ಲಿ ರಾಮನಾಮವನ್ನು ಇಚ್ಛೆಯಿಂದಾಗಲೀ, ಇಚ್ಛೆಯಿಲ್ಲದೇನೇ ಆಗಲಿ ಗಾನ ಮಾಡಿದರೆ ಪಾಪರಾಶಿಯನ್ನು ನಾಶಮಾಡುತ್ತದೆ. ಮಂತ್ರಗಳಿಂದಲಾಗಲೀ, ಪ್ರಬಂಧಗಳಿಂದಲಾಗಲೀ, ಕಾವ್ಯಗಳಿಂದಲಾಗಲೀ, ಅವನ ಚರಿತ್ರೆಯನ್ನು ವರ್ಣಿಸುವುದರಿಂದ ಹರಿಯು ತುಷ್ಟನಾಗುತ್ತಾನೆ. ಮನುಷ್ಯನು ತಾನಾಗಿಯೇ ರಾಮನಾಮವನ್ನು ಕಲ್ಪಿಸಿಕೊಳ್ಳಬಹುದು. ಅದು ಶುದ್ಧವಾಗಿಯೇ ಇರಬೇಕೆಂಬ ನಿಯಮವಿಲ್ಲ. ಶುದ್ಧವಾಗಿಲ್ಲದಿದ್ದರೂ ಅದರಿಂದ ಸ್ತುತಿಸಿದರೆ ಹರಿಯು ತುಷ್ಟನಾಗುವುದರಲ್ಲಿ ಸಂಶಯವಿಲ್ಲ ವೀಣೆ ತಂಬೂರಿ ಮುಂತಾದುವುಗಳ ಆಶ್ರಯವನ್ನು ಹೊಂದದೇ ಇದ್ದರೂ ರಾಮನ ಕೀರ್ತನೆಯನ್ನು ಮಾಡಬೇಕು. ಆ ಸ್ತುತಿಗಳಿಂದ ಶ್ರೀರಾಮನು ಸಂತೋಷಗೊಳ್ಳುತ್ತಾನೆ. ಸಂಶಯವಿಲ್ಲವು. ಯಾವುದಾದರೂ ದೇವರನ್ನು ಆಶ್ರಯಿಸಿಕೊಂಡು ಶ್ರೀರಾಮನನ್ನು ನಿಂದಿಸಿದರೆ ಅದು ಖಂಡಿತವಾಗಿಯೂ ನರಕವನ್ನು ಉಂಟುಮಾಡುತ್ತದೆ. ಇದರಲ್ಲಿ ಸಂಶಯವೇ ಇರುವುದಿಲ್ಲ.

ಕಿಂಶಾಸ್ತ್ರೈಶ್ಚ ಪುರಾಣೈಶ್ಚ ಪಠಿತೈಃ ಪಾಠಿತೈರಪಿ ।
ಯದಿ ರಾಮೇ ರತಿರ್ನಾಸೀತ್ತೈರ್ಭವೇನ್ನಾನವಸ್ಯ ಚ ॥ ೮೦೧ ॥

ರಾಮಪ್ರೀತಿಯುತಸ್ಯಾತ್ರ ಮೂರ್ಖಸ್ಯಾಪಿ ನರಸ್ಯ ಚ ।
ತದ್ಭಾಷಾಕೃತಸ್ತುತ್ಯಾದ್ಯೈಃ ಪ್ರಸನ್ನೋ ಜಾಯತೇ ಹರಿಃ ॥ ೮೦೨ ॥

ರಾಮಚಂದ್ರಸ್ಯ ಪ್ರಾಪ್ತ್ಯರ್ಥಂ ಯತ್ಕೃತಂ ಮಾನವೈರ್ಭುವಿ ।
ತೇನಾತಿ ತುಷ್ಟಃ ಶ್ರೀರಾಮೋ ಭವತ್ಯೇವ ನ ಸಂಶಯಃ ॥ ೮೦೩ ॥

ರಾಮೋ ನೇಯಶ್ಚಿಂತನೀಯೋ ತ್ರ ರಾಮಃ ।
ಸ್ತವ್ಯೋ ರಾಮಸ್ಸೇವನೀಯೋತ್ರ ರಾಮಃ ॥
ಧ್ಯೇಯೋ ರಾಮೋ ವಂದನೀಯೋತ್ರ ರಾಮೋ ।
ದರ್ಶ್ಯೋ ರಾಮಸ್ಸರ್ವಭೂತಾಂತರೇಷು ॥ ೧೮೪ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಮನೋಹರಕಾಂಡೇ ಲಕ್ಷ್ಮಣಾದೀನಾಂ ಕವಚಾದಿವರ್ಣನಂನಾಮ ಪಂಚದಶಸ್ಸರ್ಗಃ.

---

೨೮೧. ಶಾಸ್ತ್ರಗಳನ್ನೂ, ಪುರಾಣಗಳನ್ನೂ, ಎಲ್ಲವನ್ನೂ ಓದುವುದರಿಂದಲಾಗಲೀ, ಹೇಳಿ ಕಲಿಸಿದುದರಿಂದಲಾಗಲೀ, ರಾಮನಲ್ಲಿ ಭಕ್ತಿಯಿಲ್ಲದಿದ್ದರೆ ಅದರಿಂದ ಏನುತಾನೇ ಪ್ರಯೋಜನವಿರುವುದು ? ಯಾವ ಪ್ರಯೋಜನವೂ ಇರುವುದೇ ಇಲ್ಲ.

೧೮೨. ರಾಮನಲ್ಲಿ ಪ್ರೀತಿಯೂ ಭಕ್ತಿಯೂ ಇದ್ದವನು ಮೂರ್ಖನಾಗಿದ್ದರೂ ಕೂಡ ಅವನು ಮಾಡಿದ ಸ್ತುತಿಯೇ ಮುಂತಾದುವುಗಳಿಂದ ಹರಿಯು ಪ್ರಸನ್ನನಾಗಿಯೇ ಆಗುವನು.

೧೮೩. ರಾಮಚಂದ್ರನ ಪ್ರೀತಿಗೋಸ್ಕರ ಈ ಲೋಕದಲ್ಲಿ ಏನುಮಾಡಿದರೂ ಅದರಿಂದ ಶ್ರೀರಾಮನು ತುಷ್ಟನಾಗಿಯೇ ಆಗುವನು. ಇದರಲ್ಲಿ ಸಂದೇಹವೇ ಇರುವುದಿಲ್ಲ.

೧೮೪. ಶ್ರೀರಾಮನನ್ನು ಗಾನಮಾಡಬೇಕು. ಸ್ಮರಿಸಬೇಕು. ಸ್ತುತಿಸಬೇಕು. ಸೇವಿಸಬೇಕು. ಧ್ಯಾನಮಾಡಬೇಕು. ವಂದಿಸಬೇಕು. ದರ್ಶನಮಾಡಬೇಕು. ರಾಮನೇ ಎಲ್ಲಾ ಪ್ರಾಣಿಗಳಲ್ಲಿಯೂ ಇರುವನೆಂದು ತಿಳಿದು ನೋಡಬೇಕು.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗಗವಾದ ಆದಿಕಾವ್ಯವಾದ ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಲಕ್ಷ್ಮಣನೇ ಮುಂತಾದವರ ಕವಚಾದಿಗಳ ನಿರೂಪಣವರ್ಣನವೆಂಬ ಹದಿನೈದನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹದಿನೈದನೆಯ ಸರ್ಗದ ಸಾರಾಂಶವು

ಈ ಸರ್ಗದಲ್ಲಿ, ಲಕ್ಷ್ಮಣ, ಭರತ, ಶತ್ರುಘ್ನರ ಕವಚವನ್ನು ಹೇಳಿ ಅವುಗಳಿಗೆ ಫಲಗಳನ್ನು ವಿವರಿಸಿದೆ.

ಮತ್ತು ಮಂತ್ರಗಳು ಕೀರ್ತನೆಗೆ ಅರ್ಹವಾದುವೆಂದೂ ಜಪಕ್ಕೆ ಅರ್ಹವಾದುವೆಂದೂ ಎರಡು ಭಾಗವನ್ನಾಗಿ ವಿವರಿಸಿ ಇಲ್ಲಿ ಕೀರ್ತನೆಯ ಮಂತ್ರಗಳನ್ನೇ ವಿಶೇಷವಾಗಿ ವಿವರಿಸಿ ಒಂದೆರಡು ಮಾತ್ರ ಕೀರ್ತನೆಗೂ ಜಪಕ್ಕೂ ಉಪಯೋಗವಾಗುತ್ತವೆಂದು ವಿವರಿಸಿದ್ದಾನೆ.

ಈ ಕೀರ್ತನಾಮಂತ್ರಗಳು ಒಂದಕ್ಷರದಿಂದ ಹಿಡಿದು ಇಪ್ಪತ್ತನಾಲ್ಕು ಅಕ್ಷರದವರಿಗಿವೆ.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಮನೋಹರಕಾಂಡೇ ಷೋಡಶಸ್ಸರ್ಗಃ

॥ ರಾಮದಾಸ ಉವಾಚ ॥

ಏವಂ ಯದ್ಯತ್ತ್ವಯಾ ಪೃಷ್ಟಂ ತನ್ಮಯಾ ಪರಿವರ್ಣಿತಂ ।
ಕಿಮನ್ಯಚ್ಛ್ರೋತುಕಾಮಸ್ತ್ವಂ ತದ್ವದಸ್ವ ವದಾಮಿ ತೇ ॥ ೧ ॥

॥ ವಿಷ್ಣುದಾಸ ಉವಾಚ ॥

ರಾಮಾಯಣಂ ನರೈಃ ಶ್ರುತ್ವಾ ಕಿಂ ವಿಧಾನಂ ಸಮಾಚರೇತ್ ।
ತತ್ತ್ವಂ ವದ ಮಹಾಭಾಗ ಯದ್ಯಸ್ತಿ ತತ್ಸವಿಸ್ತರಂ ॥ ೨ ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹದಿನಾರನೆಯ ಸರ್ಗವು

—೦—೦—

೧. ರಾಮದಾಸನು ಹೇಳಿದನು–ಎಲೈ ವಿಷ್ಣುದಾಸನೇ ! ನೀನು ಕೇಳಿದುದನ್ನೆಲ್ಲಾ ಇಂತು ನಾನು ವಿವರಿಸಿ ಹೇಳಿದ್ದೇನೆ. ಮತ್ತೇನನ್ನು ಕೇಳಬೇಕೆಂದಿದ್ದೀಯೆ ? ಕೇಳು. ಅವೆಲ್ಲವನ್ನೂ ನಿನಗೆ ಹೇಳುತ್ತೇನೆ.

೨. ವಿಷ್ಣುದಾಸನು ಹೇಳಿದನು–ಎಲೈ ಗುರುವೇ ! ಮನುಷ್ಯರು ರಾಮಾಯಣವನ್ನು ಕೇಳಿದನಂತರದಲ್ಲಿ ಏನನ್ನು ಮಾಡಬೇಕು ? ಅದರ ವಿಷಯವನ್ನು ಹೇಳು ಅದು ವಿಸ್ತಾರವಾಗಿಯಾಗಲೀ, ಸೂಕ್ಷ್ಮವಾಗಿಯಾಗಲೀ, ಇದ್ದರೂ ಸರಿ. ಅದರ ರೀತಿಯನ್ನು ಸರಿಯಾಗಿ ಹೇಳು.

॥ ರಾಮದಾಸ ಉವಾಚ ॥

ರಾಮಾಯಣೇ ಶ್ರುತೇ ದದ್ಯಾದ್ರಥಂ ಹೇಮಮಯಂ ಸುಧೀಃ ।
ಚತುರ್ಭಿರ್ವಾಜಿಭಿರ್ಯುಕ್ತಂ ತಥಾ ಕ್ಷೌಮಪತಾಕಯಾ ॥ ೩ ॥

ಏತೈಶ್ಚೈವ ಸಮಾಯುಕ್ತಂ ಕಿಂಕಿಣೀನಾದನಾದಿತಂ ।
ಸಂಪಾದಿತೈಶ್ಚ ಸಮ್ಯಗ್ವೈ ಧೇನುಂ ದದ್ಯಾತ್ಪಯಸ್ವಿನೀಂ ॥ ೪ ॥

ಬ್ರಾಹ್ಮಣಾನ್ ಭೋಜಯೇತ್ಪಶ್ಚಾತ್ ಶತಮಷ್ಟೋತ್ತರಂ ಸುಧೀಃ ।
ಏವಂ ಕೃತೇ ವಿಧಾನೇ ತನ್ಮಹಾಕಾವ್ಯಂ ಫಲಪ್ರದಂ ॥ ೫ ॥

ರಾಮಾಯಣಂ ಭವೇನ್ನೂನಂ ನಾತ್ರ ಕಾರ್ಯಾ ವಿಚಾರಣಾ ।
ಯಸ್ಮಿನ್ ರಾಮಸ್ಯ ಸಂಸ್ಥಾನಂ ರಾಮಾಯಣಮಥೋಚ್ಯತೇ ॥ ೬ ॥

---

೩ ರಾಮದಾಸನು ಹೇಳಿದನು-ರಾಮಾಯಣವನ್ನು ಕೇಳಿದನಂತರ ಚಿನ್ನದಲ್ಲಿ ರಥವನ್ನು ಮಾಡಿಸಿ ಅದನ್ನು ದಾನಕೊಡಬೇಕು. ಅದಕ್ಕೆ ನಾಲ್ಕು ಕುದುರೆಗಳಿರುವಂತೆ ಮಾಡಿಸಿ ಕಟ್ಟಿ ಮೇಲುಗಡೆಗೆ ರೇಷ್ಮೆಯ ಬಟ್ಟೆಯ ಪತಾಕೆಯನ್ನು ಕಟ್ಟಿರಬೇಕು.

೪-೫ ಅದಕ್ಕೆ ಸಣ್ಣ ಗಂಟೆಗಳನ್ನೂ ಕಿರುಗೆಜ್ಜೆಗಳನ್ನೂ ಕಟ್ಟಿರಬೇಕು. ಮತ್ತು ಕರೆಯುವ ಹಸುವನ್ನು ಆ ರಥದ ಜೊತೆಯಲ್ಲಿ ಕೊಡಬೇಕು. ಅನಂತರ ನೂರೆಂಟು ಜನ ಬ್ರಾಹ್ಮಣರಿಗೆ ಮೃಷ್ಟಾನ್ನವಾದ ಸಮಾರಾಧನೆಯನ್ನು ಮಾಡಿ ಭೋಜನಮಾಡಿಸಬೇಕು. ಈ ವಿಧವಾಗಿ ಮಾಡಿದರೆ ಆ ಮಹಾಕಾವ್ಯವಾದ ರಾಮಾಯಣದ ಫಲವು ಸಿಕ್ಕುತ್ತದೆ.

೬. ಈ ರೀತಿಯಾಗಿ ಮಾಡಿದರೆ ರಾಮಾಯಣದ ಫಲವು ಸಿಕ್ಕುವುದರಲ್ಲಿ ಸಂದೇಹವೇ ಇರುವುದಿಲ್ಲ. ಈ ವಿಷಯದಲ್ಲಿ ವಿಚಾರವೇ ಬೇಕಾಗಿರುವುದಿಲ್ಲ. ಯಾವುದರಲ್ಲಿ ರಾಮನ ವಿಷಯವು ಪೂರ್ತಿಯಾಗಿರುವುದೋ ಅದೇ ರಾಮಾಯಣವೆಂದು ಹೇಳಿಸಿಕೊಳ್ಳುತ್ತದೆ.

ಏವಂ ತ್ವಯಾ ಯಥಾ ಪೃಷ್ಟಂ ಮಯಾ ತತ್ತೇ ನಿವೇದಿತಂ ।
॥ ವಿಷ್ಣುದಾಸ ಉವಾಚ ॥
ಕಿಂಚಿದ್ವ್ರತಂ ಹನೂಮತಸ್ತ್ವಂ ಮಾಂ ವಕ್ತು ಮಿಹಾರ್ಹಸಿ ॥ ೭ ॥

॥ ರಾಮದಾಸ ಉವಾಚ ॥
ಯದಾರಾಮಸ್ತ್ರಿಕೂಟಾದ್ರೌ ನಾಗಪಾಶೈಸ್ತು ಪೀಡಿತಃ ।
ನಾರದಸ್ಯ ವಚಃ ಶ್ರುತ್ವಾ ಸಸ್ಮಾರ ವಿನತಾಸುತಂ ॥ ೮ ॥

ತದಾಸೌ ಕಾಶ್ಯಪೀ ವೀರಸ್ಸಮಾಗತ್ಯ ರಣಾಂಗಣೇ ।
ಪ್ರಣಾಮಮಕರೋತ್ತಸ್ಮೈ ರಾಮಾಯಾಮಿತತೇಜಸೇ ॥ ೯ ॥

ನಿವಾರ್ಯ ಪನ್ನಗಾಸ್ತ್ರಂ ತನ್ಮೇಘನಾದಸಮೀರಿತಂ ।
ತುಷ್ಟಾವ ರಘುವೀರಂ ತಂ ಸಸೈನ್ಯಂ ಚ ಸಲಕ್ಷ್ಮಣಂ ॥ ೧೦ ॥

ಉವಾಚ ಪ್ರಣಿಪತ್ಯಾಥ ರಾಮಭದ್ರಂ ಖಗೇಶ್ವರಃ ।
॥ ಗರುಡ ಉವಾಚ ॥
ಆಶ್ಚರ್ಯಮಿದಮತ್ಯಂತಂ ಯದ್ಭವಾನಸ್ಮರದ್ಧಿ ಮಾಂ ॥ ೧೧ ॥

---

೭. ಇಗೋ ನೀನು ಕೇಳಿರುವುದನ್ನು ಹೇಳಿದ್ದೇನೆ. ವಿಷ್ಣುದಾಸನು ಹೇಳಿದನು—ಎಲೈ ಗುರುವೆ! ಹನುಮಂತನ ವ್ರತವನ್ನು ಹೇಳು. ಅದನ್ನು ಕೇಳಬೇಕೆಂದಿದ್ದೇನೆ.

೮. ರಾಮದಾಸನು ಹೇಳಿದನು-ಶ್ರೀರಾಮನು ತ್ರಿಕೂಟಾಚಲದಲ್ಲಿ ನಾಗ ಪಾಶದಿಂದ ಕಟ್ಟಲ್ಪಟ್ಟಾಗ ಅವನ ಬಳಿಗೆ ನಾರದನು ಬಂದನು. ಆಗ ನಾರದನ ಮಾತಿನಂತೆ ಆ ರಾಮನು ವಿನತೆಯ ಮಗನಾದ ಗರುಡನನ್ನು ಸ್ಮರಿಸಿಕೊಂಡನು.

೯. ಒಡನೆಯೇ ಆ ವೀರನಾದ ಗರುಡನು ರಾಮನ ಬಳಿಗೆ ಬಂದನು. ರಾಮನನ್ನು ನೋಡಿ ಒಡನೆಯೇ ಪರಾಕ್ರಮಿಯಾದ ಅವನಿಗೆ ನಮಸ್ಕರಿಸಿದನು.

೧೦. ಮೇಘನಾದನಿಂದ ಪ್ರಯೋಗಿಸಲ್ಪಟ್ಟ ಆ ಪನ್ನಗಾಸ್ತ್ರವನ್ನು ನಿವಾರಣೆ ಮಾಡಿದನು. ಆಗ ಆ ವೀರನಾದ ಗರುಡನು ರಾಮನನ್ನೂ ಅವನ ಸೈನ್ಯವನ್ನೂ ಲಕ್ಷ್ಮಣನನ್ನೂ ಕೂಡ ಸ್ತುತಿಸಿದನು.

೧೧. ಅನಂತರ ಗರುಡನು ರಾಮಭದ್ರನಿಗೆ ನಮಸ್ಕರಿಸಿ ಇಂತೆಂದನು. ಗರುಡನು ಹೇಳಿದನು-ಎಲೈ ಸ್ವಾಮಿಯೆ! ನೀನು ನನ್ನನ್ನು ಸ್ಮರಿಸಿಕೊಂಡೆಯಲ್ಲ! ಅದು ಬಹು ಆಶ್ಚರ್ಯವು.

ಸತಿ ವೀರೇ ಮಹಾರುದ್ರೇ ಸಗಣೇ ಶ್ರೀಹನೂಮತಿ ।
ಸುಗ್ರೀವೇ ಚ ನಲೇ ನೀಲೇ ಸುಷೇಣೇ ಜಾಂಬವತ್ಯಪಿ ॥ ೧೨ ॥

ಅಂಗದೇ ದಧಿವಕ್ತ್ರೇ ಚ ತಾರೇ ಚ ತರಳೇ ತಥಾ ।
ಮೈಂದೇ ಸತಿ ಮಹಾವೀರ್ಯೇ ಕಿಮತ್ರಾಸ್ತಿ ಪ್ರಯೋಜನಂ ॥ ೧೩ ॥

॥ ಶ್ರೀರಾಮ ಉವಾಚ ॥

ಭವದ್ಭೀತಿಮುಪಾಗಮ್ಯ ವಿದ್ರುತಾಶ್ಚ ಭುಜಂಗಮಾಃ ।
ಏತೇಷು ಸತ್ಸು ವೀರೇಷು ಕಿಮು ಸೈನ್ಯಮಪೀಡಯರ್ನ್ ॥ ೧೪ ॥

॥ ಗರುಡ ಉವಾಚ ॥

ರಾಮದೇವ ಮಹಾಬಾಹೋ ಕಪೀನಾಂ ಚರಿತಂ ಶ್ರುಣು
ಆತ್ಮನೋಽಪಿ ಸಮಾವಿಷ್ಟಾನ್ಮಾಕುರುಷ್ವಾತ್ರ ಗರ್ಹಣಂ ॥ ೧೫ ॥

ಸಾಕ್ಷಾತ್ತ್ವಂ ಭಗವಾನ್ ವಿಷ್ಣುಃ ಲಕ್ಷ್ಮೀಸ್ತು ಜನಕಾತ್ಮಜಾ ।
ಸೌಮಿತ್ರಿಃ ಫಣಿರಾಜೋಽಯಂ ರುದ್ರಾಶ್ಚ ಕಪಯಃ ಸ್ಮೃತಾಃ ॥ ೧೬ ॥

೧೨-೧೩. ವೀರನೂ ಮಹಾ ರುದ್ರನ ಅವತಾರವೂ ಆದ ಹನುಮಂತನು ಅವನ ಗಣಗಳೊಡನೆ ಸಿದ್ಧನಾಗಿರುವನು. ಸುಗ್ರೀವ, ನಲ, ನೀಲ, ಸುಷೇಣ, ಜಾಂಬುವ, ಅಂಗದ, ದಧಿವಕ್ತ್ರ, ತಾರ, ತರಳ, ಮಹಾ ವೀರನಾದ ಮೈಂದ ಇವರೆಲ್ಲರೂ ಇರುವರು. ಇವರೆಲ್ಲರೂ ಇರುವಾಗ ನನ್ನಿಂದ ಇಲ್ಲಿ ಪ್ರಯೋಜನ ವೇನಿರುವುದು ? ನನ್ನನ್ನೇಕೆ ಸ್ಮರಿಸಿದೆ ? ಹೇಳು.

೧೪. ಶ್ರೀರಾಮನು ಹೇಳಿದನು-ಎಲೈ ಗುರುಡನೇ ! ನೀನು ಬಂದುದನ್ನು ನೋಡಿ ಹೆದರಿಕೆಯಿಂದ ಸರ್ಪಗಳೆಲ್ಲವೂ ಓಡಿಹೋದುವು. ಈ ವೀರರೆಲ್ಲರೂ ಇದ್ದರೂ ಕೂಡ ಆ ಸರ್ಪಗಳು ಸೈನ್ಯವನ್ನೇಕೆ ಪೀಡಿಸಿದುವು ?

೧೫. ಗರುಡನು ಹೇಳಿದನು-ಎಲೈ ಮಹಾಬಾಹುವಾದ ರಾಮದೇವನೆ ! ಕಪಿಗಳ ಚರಿತ್ರೆಯನ್ನು ಕೇಳು. ನಿನ್ನ ಚರಿತ್ರೆಯನ್ನೂ ಹೇಳುವೆನು. ಕೇಳು. ನಿಮ್ಮಗಳನ್ನು ನೀವು ನಿಂದಿಸಿಕೊಳ್ಳಬೇಡಿರಿ.

೧೬ ನೀನು ಆ ಸಾಕ್ಷಾದ್ವಿಷ್ಣುವೇ ಆಗಿದ್ದೀಯೆ. ಆ ಜನಕಾತ್ಮಜೆಯಾದ ಸೀತೆಯೇ ಲಕ್ಷ್ಮಿಯು. ಲಕ್ಷ್ಮಣನು ಆ ಫಣಿರಾಜನಾದ ಆದಿಶೇಷನು. ಈ ಕಪಿಗಳೆಲ್ಲರೂ ರುದ್ರನ ಅಂಶಗಳಿಂದೇ ತಿಳಿ.

ಸುಗ್ರೀವೋ ವೀರಭದ್ರೋಽಯಂ ಶಂಭುರೇಷಃ ಸ್ಮೃತೋ ನಲಃ ।
ವಿದ್ಧಿ ದಾಶರಥೇ ನೂನಂ ಗಿರಿಶೋ ನೀಲ ಏವ ಚ ॥ ೧೭ ॥

ಮಹಾಯಶಾಸ್ಸುಷೇಣೋಽಯಂ ಜಾಂಬವಾಂಶ್ಚಾಪ್ಯಜೈಕಪಾತ್ ।
ಅಹಿರ್ಬುಧ್ನ್ಯಸ್ತ್ವಂಗದೋತ್ರ ದಧಿವಕ್ತ್ರಃ ಪಿನಾಕಧೃತ್ ॥ ೧೮ ॥

ಅಯುತಾಜಿತ್ತ್ವಯಂ ತಾರಃ ಸ್ಥಾಣುಶ್ಚ ತರಳೋ ಮತಃ ।
ಮೈಂದೋ ಭರ್ಗತನುಸ್ಸಾಕ್ಷಾತ್ ಹನುಮಾನ್ ಭಗವಾನ್ ಸ್ಮೃತಂ ॥ ೧೯ ॥

ಅವತೀರ್ಣಾ ಮಹಾರುದ್ರಾಸ್ತ್ವದರ್ಥಂ ರಘುನಂದನ ।
ಅವಸನ್ ಸರ್ವದೇಶೇಷು ನಾನಾಪರ್ವತಮಧ್ಯತಃ ॥ ೨೦ ॥

ಧೃತ್ವಾ ಚ ಕಪಿರೂಪಾಣಿ ಅವತೇರುರ್ಮಹೀತಲೇ ।
ಸರ್ವೇಽಪಿ ಕಪಿತಾಂ ಪ್ರಾಪ್ತಾಃ ಕಾರಣಂ ತದ್ಬ್ರವೀಮಿ ತೇ ॥ ೨೧ ॥

---

೧೭. ಈ ಸುಗ್ರೀವನು ವೀರಭದ್ರನು. ಈ ನಳನು ಶಂಭುವು. ಎಲೈ ದಾಶರಥಿಯೆ ! ಆ ಗಿರೀಶನೇ ನೀಲನಾಗಿಯೂ ಹುಟ್ಟಿರುವನು.

೧೮. ಮಹಾ ಕಾಯನಾದ ಈ ಸುಷೇಣನೂ ಮಹಾ ಜಾಂಬವಂತನು ಅಜೈಕಪಾದ್ದೇವತೆಯು. ಅಂಗದನು ಅಹಿರ್ಬುಧ್ನ್ಯನೆಂಬ ದೇವತೆಯು. ದಧಿವಕ್ತ್ರನು ಪಿನಾಕಭೃತ್ತೆಂಬ ಶಿವನು.

೧೯. ಈ ತಾರನು ಅಯುತಾಜಿತನು. ತರಳನು ಸ್ಥಾಣುವು ಎಂದು ತಿಳಿ. ಮೈಂದನು ಭರ್ಗನ ಅವತಾರವು. ಹನುಮಂತನು ಮಹಾರುದ್ರನ ಅವತಾರವೆಂದು ತಿಳಿ.

೨೦. ಇವರೆಲ್ಲರೂ ಕೂಡ ನಿನಗೋಸ್ಕರವೇ ಈ ಭೂಮಿಯಲ್ಲಿ ಅವತಾರ ಮಾಡಿದವರೆಂದು ತಿಳಿ. ಅವರೆಲ್ಲರೂ ಅನೇಕ ಪರ್ವತಗಳ ಮಧ್ಯದಲ್ಲಿಯೂ ಅನೇಕ ದೇಶಗಳಲ್ಲಿಯೂ ಇದ್ದುಕೊಂಡಿದ್ದರು.

೨೧. ಇವರೆಲ್ಲರೂ ಕಪಿಯ ರೂಪವನ್ನು ಹೊಂದಿ ಭೂಮಿಯಲ್ಲಿ ಅವತರಿಸಿರುವರು. ಇವರೆಲ್ಲರೂ ಕೂಡ ಕಪಿಗಳಾಗಿ ಹುಟ್ಟಿರುವರು. ಅದಕ್ಕೆ ನಿನಗೆ ಕಾರಣವನ್ನು ಹೇಳುತ್ತೇನೆ. ಕೇಳು.

ಪುರಾ ದೇವಾಸ್ಸುರೈಸ್ಸಿಂಧೋರ್ಮಥಿತಾದ್ವ್ಯಾಧಯೋಽಭವನ್ ।
ನಾನಾಪೀಡಾಕರಾಸ್ಸರ್ವಾ ಲೂತಾ ವಿಸ್ಫೋಟಿಕಾದಯಃ ॥ ೨೨ ॥

ತೈರೇವ ವ್ಯಾಧಿಭಿಸ್ಸರ್ವಂ ಪೀಡಿತಂ ಜಗತೀತಲಂ ।
ಋಷಯೋಽಪಿ ನೃಪಾಲಾಶ್ಚ ಬ್ರಹ್ಮಾಣಂ ಶರಣಂ ಯಯುಃ ॥ ೨೩ ॥

ಊಚುಶ್ಚ ಜಗತಾಂ ನಾಥಂ ಬ್ರಹ್ಮಾಣಂ ಕಮಲೋದ್ಭವಂ ।
ತ್ರಾಹಿ ತ್ರಾಹಿ ಜಗನ್ನಾಥ ವ್ಯಾಧಿಭ್ಯೋ ಜಗತೀಮಿಮಾಂ ॥ ೨೪ ॥

ಪೀಡಿತಾಂ ದಾರುಣೈರ್ದೋಷೈರ್ಜ್ವರಾದ್ಯೈಶ್ಚ ವಿಷೋಲ್ಬಣೈಃ ।
ತ್ರಿದೋಷೈರ್ಜರ್ಜರೀಭೂತಾಂ ವಿಭ್ರನ್ಯೈರ್ವ್ಯಾಕುಲೀಕೃತಾಂ ॥ ೨೫ ॥

ಔಷಧಾನಿ ನ ಸಿದ್ಧ್ಯಂತಿ ಮಂತ್ರಯಂತ್ರಾಣಿ ಚೈವ ಹಿ ।
ಪೀಡಯಂತಿ ಮಹಾರೋಗಾ ಮಾನವಾನ್ನಾಶಕಾರಿಣಃ ॥ ೨೬ ॥

---

೨೨. ಹಿಂದೆ ದೇವತೆಗಳೂ ಅಸುರರೂ ಕ್ಷೀರಸಮುದ್ರವನ್ನು ಕಡೆದಾಗ ಸಿಡುಬು, ಕ್ಷಯ, ಕುಷ್ಠ ಮುಂತಾದ ಪೀಡಾಕರವಾದ ವ್ಯಾಧಿಗಳು ಹುಟ್ಟಿದುವು.

೨೩. ಆ ವ್ಯಾಧಿಗಳಿಂದ ಈ ಪ್ರಪಂಚವೆಲ್ಲವೂ ಆವರಿಸಲ್ಪಟ್ಟು ತೊಂದರೆಗೊಳಗಾಯಿತು. ಆಗ ಋಷಿಗಳೂ ರಾಜರೂ ಎಲ್ಲರೂ ಬ್ರಹ್ಮನನ್ನು ಮರೆಹೊಕ್ಕರು.

೨೪. ಆಗ ಅವರೆಲ್ಲರೂ ಬ್ರಹ್ಮನನ್ನು ನಮಸ್ಕರಿಸಿ ಅವನನ್ನು ಕುರಿತು ಇಂತೆಂದರು. ಎಲೈ ಜಗನ್ನಾಥನೇ! ಬಹು ದುಷ್ಟಗಳಾದ ವ್ಯಾಧಿಗಳಿಂದ ಈ ಪ್ರಪಂಚವನ್ನು ಕಾಪಾಡು.

೨೫. ವಿಷದಿಂದ ಕೂಡಿದ ಜ್ವರವೇ ಮುಂತಾದ ಮಹಾ ವ್ಯಾಧಿಗಳು ಎಲ್ಲರನ್ನೂ ಪೀಡಿಸುತ್ತಿವೆ. ವಾತಪಿತ್ತಕಫಗಳೆಂಬ ತ್ರಿದೋಷಗಳಿಂದಲೂ ಅವುಗಳಿಂದ ಹುಟ್ಟಿದ ಬೇರೆ ಬೇರೆ ರೋಗಗಳಿಂದಲೂ ತೊಂದರೆಪಡುತ್ತಿರುವ ಈ ಪ್ರಪಂಚವನ್ನು ನೋಡು.

೨೬. ಆ ವ್ಯಾಧಿಗಳ ವಿಷಯದಲ್ಲಿ ಔಷಧಿಗಳಾಗಲಿ, ಮಂತ್ರಗಳಾಗಲಿ, ಯಂತ್ರಗಳಾಗಲಿ, ಸಿದ್ಧಿಸುತ್ತಿಲ್ಲ. ಈ ನಾಶಕಾರಿಗಳಾದ ರೋಗಗಳು ಮನುಷ್ಯರನ್ನು ಪೀಡಿಸುತ್ತ ನಾಶಮಾಡುತ್ತಿರುವುವು.

ಏತತ್ತೇ ಕಥಿತಂ ಸರ್ವಂ ಬ್ರಹ್ಮನ್ ತ್ವತ್ಪುರತಸ್ಸುಧೀಃ ।
ತತ್ತೇಷಾಂ ವಚನಂ ಶ್ರುತ್ವಾ ರುದ್ರಾನ್ ಸಂಪ್ರಾರ್ಥಯದ್ವಿಧಿಃ ॥ ೨೭ ॥

ತೇಪಿ ಶ್ರುತ್ವಾ ಬ್ರಹ್ಮವಾಕ್ಯಂ ರುದ್ರಾ ಏಕಾದಶಾಮಲಾಃ ।
ಸಮಾಶ್ವಾಸ್ಯ ವಿರಂಚಿಂ ತೇ ವೀರಭದ್ರಾದಯಸ್ಸುರಾಃ ॥ ೨೮ ॥

ಸಂಭೂಯ ವಾನರೇಷ್ವೇವ ಸುಗ್ರೀವಪ್ರಮುಖಾ ಇಮೇ ।
ಪರ್ಯಟಂತಿ ಪರ್ವತಾಗ್ರಾಣಿ ಮಂಡಲಾನಿ ಚ ಸರ್ವಶಃ ॥ ೨೯ ॥

ನಾದಯಂತೋ ಜಗತ್ಸರ್ವಂ ಬುಭುಕ್ಕಾರೈಃ ಸುದಾರುಣೈಃ ।
ಕ್ಷ್ವೇಡಿತೈಃ ಕ್ರೀಡನೈಸ್ತೇಷಾಂ ವ್ಯಾಧಯೋ ನಾಶಮಾಪ್ನುಯುಃ ॥ ೩೦ ॥

ತತಸ್ತು ಸಕಲಾಂ ದೃಷ್ಟ್ವಾ ವಾನರೈರ್ವೇಷ್ಟಿತಾಂ ಭುವಂ ।
ತುತೋಷ ಭಗವಾನ್ ಬ್ರಹ್ಮಾ ದದೌ ತೇಭ್ಯೋ ವರಾನ್ ಬಹೂನ್ ॥ ೩೧ ॥

---

೨೭. ಎಲೈ ಬ್ರಹ್ಮನೆ! ಇದ್ದ ವಿಷಯಗಳೆಲ್ಲವನ್ನೂ ನಿನ್ನೆದುರಿಗೆ ಹೇಳಿದ್ದೇವೆ. ಎಂದರು. ಬುದ್ಧಿವಂತನಾದ ಆ ಬ್ರಹ್ಮನು ಅವರ ಆ ಮಾತನ್ನು ಕೇಳಿ ಏಕಾದಶರುದ್ರರನ್ನು ಪ್ರಾರ್ಥಿಸಿಕೊಂಡನು.

೨೮. ಆಗ ಅಮಲರಾದ ಏಕಾದಶರುದ್ರರು ಬಂದು ಆ ಬ್ರಹ್ಮನನ್ನು ಸಮಾಧಾನಪಡಿಸಿ ವೀರಭದ್ರನೇ ಮುಂತಾದ ದೇವತೆಗಳು ಆ ಕಪಿಗಳಲ್ಲಿ ಸೇರಿ ಹುಟ್ಟಿದರು.

೨೯–೩೦. ಅವರೇ ಆ ಸುಗ್ರೀವನೇ ಮುಂತಾದವರಾಗಿ ಅವತರಿಸಿರುವರು. ಇವರೆಲ್ಲರೂ ಭೂಮಿಯಲ್ಲಿ ಎಲ್ಲ ಕಡೆಯಲ್ಲಿಯೂ ಪರ್ವತಗಳ ತುದಿಯಲ್ಲಿಯೂ ಸುತ್ತುತ್ತ ತಮ್ಮ ದಾರುಣವಾದ ಭು ಭು ಎಂಬ ಶಬ್ದಗಳಿಂದ ಜಗತ್ತನ್ನೇ ಮೊಳಗಿಸುತ್ತ ಬಂದರು. ಅವರ ಸಿಂಹನಾದದಿಂದಲೂ ಆಟಗಳಿಂದಲೂ ಕೂಡ ವ್ಯಾಧಿಗಳು ನಾಶವಾದುವು.

೩೧. ಅನಂತರ ಈ ಕಪಿಗಳೆಲ್ಲವೂ ಪ್ರಪಂಚವೆಲ್ಲವನ್ನೂ ಆವರಿಸಿಕೊಂಡಿರುವುದನ್ನು ಬ್ರಹ್ಮನು ನೋಡಿದನು. ಇದರಿಂದ ಅವನಿಗೆ ಬಹು ಸಂತೋಷವಾಗಿ ಅವುಗಳಿಗೆ ಅನೇಕ ಬಗೆಯಾದ ವರಗಳನ್ನು ಕೊಟ್ಟನು.

॥ ಬ್ರಹ್ಮೋವಾಚ ॥

ಯುಷ್ಮಾಸ್ವಪಿ ಚ ಮುದ್ರಾಸ್ತು ಮೃತಸಂಜೀವಿನೀ ಕಲಾ ।
ಆಜ್ಞಾಸ್ತು ಸರ್ವಜಗತಿ ವೇಗೋಸ್ತು ಮನಸಸ್ಸಮಃ ॥ ೩೨ ॥

ಯುಷ್ಮಾನ್ ಸ್ಮರಂತಿ ಯೇ ಮರ್ತ್ಯಾಃ ಪೂಜಯಂತಿ ಭವತ್ತನೂಃ ।
ಪತಾಕಾ ವಿವಿಧಾಃ ಕೃತ್ವಾ ಚಿತ್ರತೋರಣಸಂಯುತಾಃ ॥ ೩೩ ॥

ಭಕ್ಷಭೋಜ್ಯಾನಿ ಖಾದ್ಯಾನಿ ಲೇಹ್ಯಂ ಪೇಯಂ ಚ ಸರ್ವಶಃ ।
ಯುಷ್ಮಾನುದ್ದಿಶ್ಯ ಯೇ ಮರ್ತ್ಯಾಃ ಜುಹ್ವಂತಿ ಹಿ ಹುತಾಶನೇ ॥ ೩೪ ॥

ಹವಿಃ ಪುಣ್ಯತಮಂ ರುದ್ರಾಸ್ತೇಷಾಂ ಸಿದ್ಧಿರ್ನ ಸಂಶಯಃ ।
ಪಾಯಸೇನೈವ ಸಾಜ್ಯೇನ ತಥೈವ ತಿಲಸರ್ಪಿಷಾ ॥ ೩೫ ॥

ಯಜಂತಿ ಭವತಾಂ ವೃಂದಂ ತೇ ಯಾಂತಿ ಪರಮಂ ಪದಂ ।
ಏವಂ ವೈ ರುದ್ರಮಖಿಲಂ ಗಾಥಾ ವೈಶ್ವಾನರೀಸ್ತಥಾ ॥ ೩೬ ॥

---

೩೨. ಬ್ರಹ್ಮನು ಹೇಳಿದನು-ಎಲೈ ಕಪಿಗಳಿರಾ ! ನಿಮ್ಮಲ್ಲಿ ಮೃತಸಂಜೀವಿನೀಕಳೆಯು ಮುದ್ರೆಯಾಗಿರಲಿ. ನಿಮ್ಮ ಆಜ್ಞೆಯು ಎಲ್ಲಾ ಜಗತ್ತಿನಲ್ಲಿಯೂ ಅಪ್ರತಿಹತವಾಗಿರಲಿ. ನಿಮ್ಮ ವೇಗವು ಮನೋವೇಗಕ್ಕೆ ಸಮವಾದುದಾಗಿರಲಿ.

೩೩. ಯಾವ ಮನುಷ್ಯರು ನಿಮ್ಮನ್ನು ಸ್ಮರಿಸುವರೋ ಯಾರು ನಿಮ್ಮ ದೇಹವನ್ನು ಅನೇಕ ಬಗೆಯಾದ ತೋರಣಗಳನ್ನು ಕಟ್ಟಿ ಧ್ವಜಗಳನ್ನು ನೆಟ್ಟು ದೇವಸ್ಥಾನವನ್ನು ಮಾಡಿ ಪೂಜಿಸುವರೋ ಅವರಿಗೆ ಸಿದ್ಧಿಯುಂಟಾಗಲಿ. ಅವರನ್ನು ವ್ಯಾಧಿಗಳು ಪೀಡಿಸದಿರಲಿ

೩೪. ಭಕ್ಷ್ಯಗಳು, ಭೋಜ್ಯಗಳು, ಖಾದ್ಯಗಳು, ಲೇಹ್ಯಗಳು, ಪೇಯಗಳು ಇವನ್ನು ಅಗ್ನಿಯಲ್ಲಿ ನಿಮ್ಮನ್ನು ಉದ್ದೇಶಿಸಿ ಹೋಮಮಾಡಿದರೆ ಅದು ಪುಣ್ಯತಮವಾಗಿ ಅವರಿಗೆ ಸಿದ್ಧಿಯುಂಟಾಗಲಿ. ಇದರಲ್ಲಿ ಸಂಶಯವಿಲ್ಲ.

೩೫-೩೬. ತುಪ್ಪವನ್ನು ಹಾಕಿದ ಪಾಯಸದಿಂದಲೂ ಯಾರು ನಿಮ್ಮಗಳನ್ನು ಉದ್ದೇಶಿಸಿ ಹೋಮಮಾಡುವರೋ ಅವರಿಗೆ ಮೋಕ್ಷವು ಸಿಕ್ಕಲಿ. ಹೋಮಮಾಡುವಾಗ ರುದ್ರನನ್ನು ಹೇಳಬೇಕು. ವೈಶ್ವಾನರ ಗಾಥೆಯನ್ನು (ಋಕ್ಕನ್ನು) ಹೇಳಿ ಹೋಮಮಾಡಬೇಕು.

ಮಾನಸ್ತೋಕೇತಿ ವಾ ಮಂತ್ರೋ ಮನೋಜ್ಯೋತಿರಥಾಪಿ ವಾ ।
ಭವತಾಂ ಯಜನಂ ಚಾತ್ರ ಗಾಯತ್ರ್ಯಾ ವಾ ಪ್ರಕೀರ್ತಿತಂ ॥ ೩೭ ॥

ಏವಂ ಯೇ ಮಾನವಾ ಲೋಕೇ ವಿಧಾನಂ ಪರಿಕುರ್ವತೇ ।
ವ್ಯಾಧಿಂ ಮುಕ್ತ್ವಾ ಸುಖಾಸೀನಾಸ್ತ್ವಂತೇ ಯಾಂತ್ಯಕ್ಷಯಂಪದಂ ॥

॥ ಗರುಡ ಉವಾಚ ॥

ಇತಿ ರಾಮ ಪುರಾ ವೃತ್ತಂ ಕಪೀನಾಂ ಕಥಿತಂ ಮಯಾ ।
ಏಷು ರುದ್ರೇಷು ಸರ್ವೇಷು ಹನೂಮಾನ್ ಭದ್ರನಾಯಕಃ ॥ ೩೯ ॥

ವಿಧಾನಂ ತತ್ರ ಕರ್ತವ್ಯಂ ಯತ್ರಾಸ್ತೇ ಹನುಮತ್ತನುಃ ।
ಗೋಪುರೇ ಹನುಮನ್ಮೂರ್ತಿಶ್ಶಿಲಾಯಾಂ ಚ ಪ್ರತಿಷ್ಠಿತಾ ॥ ೪೦ ॥

---

೩೭. ಮಾನಸ್ತೋಕೇ ಎಂಬ ಮಂತ್ರದಿಂದಾಗಲಿ ಮನೋಜ್ಯೋತಿಃ ಎಂಬ ಮಂತ್ರದಿಂದಾಗಲಿ, ಗಾಯಿತ್ರಿಯಿಂದಾಗಲಿ, ನಿಮ್ಮಗಳನ್ನು ಉದ್ದೇಶಿಸಿ ಹೋಮಮಾಡಬೇಕು.

೩೮. ಈ ರೀತಿಯಾಗಿ ಯಾರು ಲೋಕದಲ್ಲಿ ವಿಧಿಯನ್ನು ಅನುಸರಿಸುವರೋ ಅವರಿಗೆ ವ್ಯಾಧಿಗಳೆಲ್ಲವೂ ಹೋಗಿ ಸುಖದಿಂದಿರುವರು. ಕೊನೆಯಲ್ಲಿ ಮೋಕ್ಷವೂ ಕೂಡ ಅವರಿಗೆ ಸಿಕ್ಕುತ್ತದೆ.

೩೯. ಗರುಡನು ಹೇಳಿದನು--ಎಲೈ ರಾಮನೆ ! ಈ ರೀತಿಯಾಗಿ ಕಪಿಗಳ ಪೂರ್ವಚರಿತ್ರೆಯನ್ನು ನಿನಗೆ ಹೇಳಿರುವೆನು. ಇವರೆಲ್ಲರೂ ರುದ್ರರೇನೇ. ಇವರಿಗೆಲ್ಲರಿಗೂ ನಾಯಕನಾದವನು ವೀರಭದ್ರನ ಅವತಾರವಾದ ಹನುಮಂತನು.

೪೦. ಎಲ್ಲಿ ಹನುಮಂತನ ಆಕೃತಿ ಇರುವುದೋ ಅಲ್ಲಿಯೇ ವಿಧಿಯೆಲ್ಲವನ್ನೂ ಮಾಡಬೇಕು. ಗೋಪುರಗಳಲ್ಲಿಯೂ ಊರಬಾಗಿಲಲ್ಲಿಯೂ ಹನುಮಂತನ ಮೂರ್ತಿಯನ್ನು ಕಲ್ಲಿನಲ್ಲಿ ಮಾಡಿರಬೇಕು.

ತತ್ರ ಸರ್ವಂ ಪ್ರಕರ್ತವ್ಯಂ ವಿಧಾನಂ ಸುರಸತ್ತಮ ।

॥ ಶ್ರೀರಾಮ ಉವಾಚ ॥

ಕೇನ ಕೇನ ಪ್ರಕಾರೇಣ ಕ್ರಿಯತೇ ಕಪಿಪೂಜನಂ ॥ ೪೧ ॥

ಪತಾಕಾಃ ಕೀದೃಶಾಸ್ತತ್ರ ಕತಿಕಾರ್ಯಾ ವಿಹಂಗಮ ।
ಹವನಂ ಕತಿ ಸಂಖ್ಯಾಕಂ ಕಿಂ ದ್ರವ್ಯಂ ಕೋ ಜಪೋತ್ರ ವೈ ॥ ೪೨ ॥

ಕಿಂ ದಾನಂ ಕೇನ ವಿಧಿನಾ ತನ್ಮಮಾಚಕ್ಷ್ವ ಸುವ್ರತ ।

॥ ಗರುಡ ಉವಾಚ ॥

ಜನಮಾರೇ ಸಮುತ್ಪನ್ನೇ ಗ್ರಾಮೇ ವಾ ಪತ್ತನೇಪಿ ವಾ ॥ ೪೩ ॥

ಪ್ರಭವತ್ಯೌಷಧಂ ನೈವ ಮಣಿಮಂತ್ರಪುರಃ ಕ್ರಿಯಾ ।
ವಿಧಾನಂ ತತ್ರ ಕರ್ತವ್ಯಮೇಕಾದಶ್ಯಾಂ ತಿಥೌ ನೃಪ ॥ ೪೪ ॥

---

೪೧. ಎಲೈ ರಾಮನೆ ! ಆ ಜಾಗಗಳಲ್ಲಿಯೇ ಈ ರೀತಿಯಾಗಿ ಹೇಳಿರುವ ವಿದಿಯೆಲ್ಲವನ್ನೂ ಮಾಡಬೇಕು. ಶ್ರೀರಾಮನು ಹೇಳಿದನು–ಎಲೈ ಗರುಡನೇ ! ಈ ಕಪಿಗಳ ಪೂಜೆಯನ್ನು ಯಾವ ಯಾವ ರೀತಿಯಲ್ಲಿ ಮಾಡಬೇಕು.

೪೨. ಅಲ್ಲಿ ಪತಾಕೆಗಳನ್ನು ಹೇಗೆ ಮಾಡಬೇಕು ? ಎಷ್ಟು ಪತಾಕೆಗಳಿರಬೇಕು ? ಹೋಮವನ್ನು ಎಷ್ಟುಬಾರಿ ಮಾಡಬೇಕು ? ದ್ರವ್ಯವು ಯಾವುದು ? ಮಾಡತಕ್ಕ ಜನರು ಹೇಗಿರಬೇಕು ? ಜಪವು ಯಾವುದು ?

೪೩-೪೪. ಯಾವ ದಾನವನ್ನು ಮಾಡಬೇಕು ? ಅದಕ್ಕೆ ವಿಧಿಯೇನು ? ಎಲೈ ಪಕ್ಷಿರಾಜನೇ ! ಅವೆಲ್ಲವನ್ನೂ ನನಗೆ ಹೇಳು. ಗರುಡನು ಹೇಳಿದನು–ಗ್ರಾಮದಲ್ಲಿಯಾಗಲಿ, ಪಟ್ಟಣದಲ್ಲಿಯಾಗಲೀ ಜನಗಳು ರೋಗದಿಂದ ಸಾಯುವುದಕ್ಕೆ ಮೊದಲಾದಾಗ ಅಲ್ಲಿ ಓಷಧವಾಗಲಿ, ಮಣಿಗಳಾಗಲಿ, ಮಂತ್ರಗಳಾಗಲಿ, ವಾಸಿಮಾಡಲು ಶಕ್ತವಾಗಲಾರವು. ಆವಾಗ ಈ ಹೋಮಾದಿಕಾರ್ಯಗಳಿಗೆ ಏಕಾದಶಿಯ ದಿವಸ ಪ್ರಾರಂಭಿಸಬೇಕು.

ಪ್ರಾತಃಕಾಲೇ ಸಮುತ್ಥಾಯ ಕೃತಶೌಚೋ ದ್ವಿಜೋತ್ತಮಃ ।
ಸ್ನಾತ್ವಾ ಗಂಗಾಜಲೇ ಪುಣ್ಯೇ ತಿಲಾಮಲಕಸಂಸ್ಕೃತಃ ॥ ೪೫ ॥

ಏಕಾದಶದ್ವಿಜಾನ್ ಶ್ರೇಷ್ಠಾನ್ ಸೋಪವಾಸನ್ನಿಮಂತ್ರಯೇತ್ ।
ಜಾಗರಸ್ತೈಸ್ತು ಕರ್ತವ್ಯಸ್ಸರ್ವೋಪಸ್ಕಾರಸಂಯುತಃ ॥ ೪೬ ॥

ಆದೌ ತು ಮಂಡಪಂ ಕೃತ್ವಾ ಸರ್ವತ್ರಾಪಿ ಸುಶೋಭಿತಂ ।
ಪುಷ್ಪಮಂಡಪಿಕಾಮಧ್ಯೇ ಮಂಡಪೇ ಸ್ಥಾಪಯೇದ್ಧರೀನ್ ॥ ೪೭ ॥

ಪಂಚಾಮೃತೈಸ್ತು ಸ್ನಪನಂ ರುದ್ರೇಭ್ಯಃ ಪರಿಕಲ್ಪಯೇತ್ ।
ತತಸ್ತು ಕುಸುಮೈಃ ಪೂಜಾ ಶತಪತ್ರಾದಿಭಿಶ್ಶುಭೈಃ ॥ ೪೮ ॥

---

೪೫. ಏಕಾದಶಿಯ ದಿವಸ ಬ್ರಾಹ್ಮಣನಾದವನು ಪ್ರಾತಃಕಾಲದಲ್ಲಿ ಎದ್ದು ಎಳ್ಳೆಣ್ಣೆಯನ್ನು ಹಚ್ಚಿಕೊಂಡು, ಗಂಗೆಯೇ ಮುಂತಾದ ಪುಣ್ಯ ಜಲಗಳಲ್ಲಿ ಸ್ನಾನ ಮಾಡಬೇಕು.

೪೬. ಆದಿನ ಹನ್ನೊಂದು ಜನ ಬ್ರಾಹ್ಮಣರನ್ನು, ಉಪವಾಸವಿರತಕ್ಕ ವರನ್ನು ಕರೆಯಬೇಕು. ಆ ದಿನ ಅವರೊಡನೆ ಜಾಗರಣೆಯನ್ನು ಮಾಡಬೇಕು. ಆವಾಗ ಎಲ್ಲಾ ಪದಾರ್ಥಗಳನ್ನೂ ಸಂಪಾದಿಸಿಕೊಂಡಿರಬೇಕು.

೪೭. ಮೊದಲು ಒಂದು ಉತ್ತಮವಾದ ಸ್ಥಳದಲ್ಲಿ ಮಂಡಪವನ್ನು ರಚಿಸಬೇಕು. ಅದನ್ನು ಎಲ್ಲಾ ಕಡೆಯಲ್ಲಿಯೂ ಶೋಭಾಯಮಾನವಾಗಿರುವಂತೆ ಮಾಡಬೇಕು. ಅದಕ್ಕೆ ಹೂವು ಮುಂತಾದುವುಗಳಿಂದ ಚೆನ್ನಾಗಿ ಅಲಂಕರಿಸಬೇಕು. ಅನಂತರ ಆ ಪುಷ್ಪಮಂಡಪದ ಮಧ್ಯದಲ್ಲಿ ಹನುಮಂತನ ಬಿಂಬವನ್ನು ಇಡಬೇಕು.

೪೮. ಆ ಕಪಿಗೆ ಪಂಚಾಮೃತದಿಂದ ಸ್ನಾನವನ್ನು ಮಾಡಿಸಿ, ರುದ್ರಾಭಿಷೇಕವನ್ನು ಮಾಡಬೇಕು. ಅನಂತರ ಆ ಕಾಲದಲ್ಲಿ ಸಿಕ್ಕುವ ಹೂವುಗಳಿಂದಲೂ ಕಮಲಗಳಿಂದಲೂ ಪೂಜೆಯನ್ನು ಮಾಡಬೇಕು.

ಚಂದನಂ ಚ ಸಕರ್ಪೂರಂ ದೇಯಂ ರುದ್ರಾಂಸ್ತು ಲೇಪನಂ ।
ದಶಾಂಗಂ ಧೂಪಮಾದದ್ಯಾದ್ದೀಪೈರ್ನೀರಾಜಯೇತ್ತತಃ ॥ ೪೯ ॥

ನೈವೇದ್ಯಂ ವಿವಿಧಂ ದದ್ಯಾತ್ತಾಂಬೂಲೇನೈವ ಸಂಯುತಂ ।
ಏಕಾದಶಪತಾಕಾಸ್ತು ಪಟೈಸ್ಸುಪರಿಕಲ್ಪಯೇತ್ ॥ ೫೦ ॥

ಯಾ ಯಾ ಯಸ್ಯೈ ಸಮುದ್ದಿಷ್ಟಾ ಪತಾಕಾ ಚ ಸುಶೋಭನಾ ।
ತಸ್ಯ ತಸ್ಯೈವ ರೂಪಂ ತು ತಸ್ಯಾಮೇವ ಪ್ರಲೇಪಯೇತ್ ॥ ೫೧ ॥

ಏವಂ ಕೃತೇ ವಿಧಾನೇ ಚ ಪತಾಕಾಭಿಸ್ತು ತೋರಣೈಃ ।
ಪ್ರಾತಃಕಾಲೇ ತು ರಾಜೇಂದ್ರ ಜಾಗರಾಂತೇ ದ್ವಿಜೋತ್ತಮಃ ॥ ೫೨ ॥

---

೪೯. ಪಚ್ಚಕರ್ಪೂರದಿಂದ ಕೂಡಿದ ಚಂದನವನ್ನು ಸಮರ್ಪಿಸಬೇಕು. ರುದ್ರಸೂಕ್ತದಿಂದ ಲೇಪಿಸಬೇಕು. ದಶಾಂಗ ಧೂಪವನ್ನು ಕೊಟ್ಟು ದೀಪವನ್ನು ಎತ್ತಬೇಕು.

೫೦. ಅನಂತರ ವಿಧವಿಧವಾದ ನೈವೇದ್ಯಗಳನ್ನು ಸಮರ್ಪಿಸಬೇಕು. ಆಮೇಲೆ ತಾಂಬೂಲವನ್ನು ನಿವೇದನ ಮಾಡಬೇಕು. ಅನಂತರ ಒಳ್ಳೆಯ ಬಟ್ಟೆಗಳನ್ನು ಹಾಕಿ ಹನ್ನೊಂದು ಪತಾಕೆಗಳನ್ನು ಮಾಡಬೇಕು.

೫೧. ಈ ಕಪಿಗಳಲ್ಲಿ ಯಾವ ಯಾವ ಕಪಿಗೆ ಯಾವ ಯಾವ ರೂಪುಗಳು ಮುದ್ರಿತವಾಗಿ ನಿರ್ದಿಷ್ಟವಾಗಿವೆಯೋ ಅಂತಹ ಪತಾಕೆಗಳನ್ನು ಹನ್ನೊಂದನ್ನು ಮಾಡಬೇಕು. ಎಂದರೆ ಆಯಾ ಕಪಿಗಳನ್ನು ಆಯಾ ಪತಾಕೆಗಳಲ್ಲಿ ಬರೆಯಬೇಕು.

೫೨. ಈ ರೀತಿಯಾಗಿ ವಿಧಿವತ್ತಾಗಿ ಮಾಡಿ ಆ ಮಂಡಪದಲ್ಲಿ ಈ ಪತಾಕೆಗಳನ್ನು ನೆಟ್ಟು ತೋರಣಗಳನ್ನು ಕಟ್ಟಿ ಅಲಂಕರಿಸಬೇಕು. ಏಕಾದಶಿಯ ದಿವಸವೆಲ್ಲವೂ ಜಾಗರಣೆಮಾಡಿ, ಜಾಗರಣೆಯ ಕೊನೆಯಲ್ಲಿ ಬೆಳಗ್ಗೆ ಎಂದರೆ ದ್ವಾದಶಿಯ ದಿವಸ ಸ್ನಾನಮಾಡಬೇಕು.

ಕೃತಸ್ನಾನೋ ನದೀತೋಯೇ ಹೋಮಂ ಕುರ್ಯಾತ್ಸಮಾಹಿತಃ ।
ಪಾಯಸೇನ ತು ಸಾಜ್ಯೇನ ತಥೈವ ತಿಲಸರ್ಪಿಷಾ ॥ ೫೩ ॥

ಅಯುತಂ ಹವನಂ ಕೃತ್ವಾ ಪುನಃಪೂಜಾಂ ಪ್ರಕಲ್ಪಯೇತ್ ।
ಪತಾಕಾಂ ಹನುಮದ್ದ್ವಾರೇ ತಸ್ಯೈವ ಚ ನಿಧಾಪಯೇತ್ ॥ ೫೪ ॥

ರಾಜದ್ವಾರೇ ತು ಸೌಗ್ರೀವೀಂ ಸೌಷೇಣೀಮಾಪಣೇ ನ್ಯಸೇತ್ ।
ನಲನೀಲಪತಾಕೇ ತು ಶಿವದ್ವಾರೇ ತು ವಿನ್ಯಸೇತ್ ॥ ೫೫ ॥

ತಾರಸ್ಯ ತರಳಸ್ಯಾಪಿ ವೈಂದಸ್ಯ ಹ್ಯಂಗದಸ್ಯ ಚ ।
ಗ್ರಾಮಾದ್ಬಹಿಶ್ಚತುರ್ದಿಕ್ಷು ಮಾರ್ಗೇಷು ಸ್ಥಾಪಯೇದ್ಧಿಯಾ ॥ ೫೬ ॥

---

೫೩. ನದಿಯ ನೀರಿನಲ್ಲಿ ಸ್ನಾನಮಾಡಿ ಸರಿಯಾದ ಮನಸ್ಸಿನಿಂದ ಹೋಮಮಾಡಬೇಕು. ಆ ಹೋಮದಲ್ಲಿ ಪಾಯಸಕ್ಕೆ ಸಕ್ಕರೆ ತುಪ್ಪಗಳನ್ನು ಸೇರಿಸಿಕೊಂಡು ಹೋಮ ಮಾಡಬೇಕು. ಮತ್ತು ತುಪ್ಪದಿಂದಲೂ, ಎಳ್ಳಿನಿಂದಲೂ ಹೋಮಮಾಡಬೇಕು.

೫೪. ಒಂದು ಸಾವಿರಬಾರಿ ಹೋಮಮಾಡಬೇಕು. ಅನಂತರ ಪುನಃ ಪೂಜೆಯನ್ನು ಮಾಡಬೇಕು. ಅನಂತರ ಆ ಪತಾಕೆಗಳನ್ನು ತೆಗೆದುಕೊಂಡು ಹನುಮಂತನನ್ನು ಬರೆದಿರುವ ಪತಾಕೆಯನ್ನು ಆ ಗ್ರಾಮದ ಹನುಮಂತನಿರುವ ಬಾಗಿಲಿನಲ್ಲಿಯೇ ಕಟ್ಟಬೇಕು.

೫೫. ಸುಗ್ರೀವನನ್ನು ಬರೆದಿರುವ ಪತಾಕೆಯನ್ನು ಗ್ರಾಮದ ಹೆಬ್ಬಾಗಿಲಿನಲ್ಲಿ ಕಟ್ಟಬೇಕು. ಸುಷೇಣನ ಪತಾಕೆಯನ್ನು ಅಂಗಡಿಯ ಬೀದಿಯಲ್ಲಿ ಕಟ್ಟಬೇಕು. ನಳನೀಲರ ಪತಾಕೆಗಳನ್ನು, ಶಿವಾಲಯದ ಬಾಗಿಲಿನಲ್ಲಿ ಕಟ್ಟಬೇಕು.

೫೬. ತಾರ, ತರಳ, ವೈಂದ, ಅಂಗದರ ಪತಾಕೆಗಳನ್ನು ಊರಿನಹೊರಗೆ ನಾಲ್ಕು ಕಡೆಯ ದಾರಿಗಳಲ್ಲಿಯೂ ಕಟ್ಟಬೇಕು.

ಜಲಸ್ಥಾನೇ ಜಾಂಬವತೋ ದಧಿವಕ್ತ್ರೀಂ ಚತುಷ್ಪಥೇ ।
ಸ್ಥಾಪಯೇತ್ಪರಮಾಂ ದಿವ್ಯಾಂ ಮಹಾವಾದ್ಯಾದಿಮಂಗಳೈಃ ॥ ೫೭ ॥

ದ್ವಾರದೇಶೇ ಜನಾನಾಂ ಚ ರುದ್ರಮೂರ್ತಿಂ ವಿಲೇಖಯೇತ್ ।
ಚಿತ್ರಿತಾಂ ಪಂಚವರ್ಣೈಶ್ಚ ಗ್ರಾಮಂ ಸೂತ್ರೈಶ್ಚ ವೇಷ್ಟಯೇತ್ ॥ ೫೮ ॥

ಪ್ರತ್ಯಹಂ ಕಾರಯೇದ್ವಿದ್ವಾನ್ ಭಕ್ತ್ಯಾ ಬ್ರಾಹ್ಮಣತರ್ಪಣಂ ।
ದದ್ಯಾದ್ವಸ್ತ್ರಾಣಿ ಋತ್ವಿಗ್ಭ್ಯಸ್ಸಾಲಂಕಾರಾಣಿ ಭೂಪತಿಃ ॥ ೫೯ ॥

ಛತ್ರಾಣಿ ಕರಪತ್ರೈಶ್ಚ ಪಾದುಕಾಶ್ಚ ವಿಶೇಷತಃ ।
ಧೇನುಂ ಪಯಸ್ವಿನೀಂ ದದ್ಯಾದಾಚಾರ್ಯಾಯ ಸವತ್ಸಕಾಂ ॥ ೬೦ ॥

ಸದಕ್ಷಿಣಾಂ ಸವಸ್ತ್ರಾಂ ಚ ಸಾಲಂಕಾರಾಂ ಗುಣಾನ್ವಿತಾಂ ।
ದ್ವಿಜಾಯ ಮಹಿಷೀಂ ದದ್ಯಾತ್ತಥೈವ ಪೃಥಿವೀಪತಿಃ ॥ ೬೧ ॥

---

೫೭. ಜಾಂಬುವಂತನ ಧ್ವಜವನ್ನು ನೀರಿರುವ ಬಳಿ ಕಟ್ಟಬೇಕು. ದಧಿವಕ್ತ್ರನದನ್ನು ದಾರಿಯ ಚೌಕದಲ್ಲಿಯೂ ಕಟ್ಟಬೇಕು. ಇವುಗಳನ್ನು ಕಟ್ಟುವಾಗ ಉತ್ತಮವಾದ ಮಂಗಳವಾದ್ಯಗಳನ್ನು ಮಾಡಿಸಿಕೊಂಡು ವಿಜೃಂಭಣೆಯಿಂದ ಹೋಗಬೇಕು.

೫೮. ಜನಗಳು ಎಲ್ಲರ ಮನೆಯ ಬಾಗಿಲಿನಲ್ಲಿಯೂ, ರುದ್ರಮೂರ್ತಿಯ ಬೊಂಬೆಗಳನ್ನು ಬರೆದುಕೊಳ್ಳಬೇಕು. ಆ ಮೂರ್ತಿಯನ್ನು ಐದು ಬಣ್ಣಗಳಿಂದ ಬರೆಯಬೇಕು. ಐದುರಂಗಿನ ಸೂತ್ರದಿಂದ ಎಂದರೆ ಕಂಬಳಿನೂಲಿನಿಂದ ಗ್ರಾಮವನ್ನು ಕಟ್ಟಬೇಕು.

೫೯. ಪ್ರತಿದಿನದಲ್ಲಿಯೂ ಬ್ರಾಹ್ಮಣ ಸಂತರ್ಪಣೆಯನ್ನು ಹನ್ನೊಂದು ದಿನದವರೆಗೆ ಮಾಡಬೇಕು. ಹೋಮ ಮುಂತಾದುವನ್ನು ಮಾಡಿದ ಋತ್ವಿಕ್ಕುಗಳಿಗೆ ವಸ್ತ್ರ ಅಲಂಕಾರ ಮುಂತಾದುವನ್ನೂ ದಕ್ಷಿಣೆಯನ್ನೂ ಕೊಡಬೇಕು

೬೦. ಛತ್ರಿ, ಬೀಸಣಿಗೆ, ಕೆರ, ಇವೆಲ್ಲವನ್ನೂ ಕೊಡಬೇಕು. ಹೋಮ ಮುಂತಾದುವನ್ನು ಮಾಡಿಸಿದ ಆಚಾರ್ಯನಿಗೆ ಕರೆಯುವ ಹಸುವನ್ನು ಕರುವಿನೊಡನೆ ಕೊಡಬೇಕು

೬೧. ಅದರ ಜೊತೆಯಲ್ಲಿ ದಕ್ಷಿಣೆಯನ್ನು ಕೊಡಬೇಕು. ವಸ್ತ್ರವನ್ನೂ ಹಸುವಿಗೆ ಹೊದ್ದಿಸಿರಬೇಕು. ಆ ಹಸುವಿಗೆ ಅಲಂಕಾರ ಮಾಡಿರಬೇಕು. ಆ ಹಸುವು ಒದೆಯುವುದು, ಹಾಯುವುದು, ಮುಂತಾದ ದುರ್ಗುಣಗಳಿಲ್ಲದೆ ಒಳ್ಳೆಯ ಗುಣಗಳಿಂದ ಕೂಡಿರಬೇಕು. ಒಬ್ಬ ಬ್ರಾಹ್ಮಣನಿಗೆ ಒಂದು ಎಮ್ಮೆಯನ್ನೂ ದಾನಮಾಡಬೇಕು.

ಅನ್ಯೇಭ್ಯೋ ಬ್ರಾಹ್ಮಣೇಭ್ಯಶ್ಚ ಸಪ್ತಧಾನ್ಯಾನಿ ಭೂರಿಶಃ ।
ಲವಣಂ ಸಘೃತಂ ದೇಯಂ ತೈಲಂ ಚ ಸಗುಡಂ ತಥಾ ॥ ೬೨ ॥

ಶಯ್ಯಾದಾನಾನಿ ಭೂರೀಣಿ ಛತ್ರಾಣಿ ವಿವಿಧಾನಿ ಚ ।
ಏತತ್ಕೃತ್ವಾ ವಿಧಾನಂ ಚ ರಾಜಾ ಕ್ಷೇಮಮವಾಪ್ನುಯಾತ್ ॥ ೬೩ ॥

ರುದ್ರ ಏವಾತ್ರ ನಿರ್ದಿಷ್ಟೋ ಜಪೇ ಸರ್ವೈಸ್ಸುಲಕ್ಷಣಃ ।
ಅಥವಾ ಹವನಂ ಶಸ್ತಂ ಮಾನಸ್ತೋಕಇತಿ ಸ್ಫುಟಂ ॥ ೬೪ ॥

ಇತಿ ಹನುಮತ್ಪತಾಕಾಭಿಧಾನಂವ್ರತಂ ।

ಇತಿಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಮನೋಹರಕಾಂಡೇ ಹನೂಮತ್ಪತಾಕಾರೋಪಣವ್ರತವರ್ಣನಂ ನಾಮ ಷೋಡಶಸ್ಸರ್ಗಃ ಸಮಾಪ್ತಃ

---

೬೨. ಉಳಿದ ಋತ್ವಿಜರಿಗೆ ಏಳು ಬಗೆಯ ಧಾನ್ಯಗಳನ್ನೂ ಹೆಚ್ಚು ಹೆಚ್ಚಾಗಿ ಕೊಡಬೇಕು. ಉಪ್ಪನ್ನೂ ತುಪ್ಪವನ್ನೂ ಜೊತೆಯಲ್ಲಿ ದಾನಮಾಡಬೇಕು. ಅಂತೆಯೇ ಎಣ್ಣೆಯನ್ನೂ ಬೆಲ್ಲವನ್ನೂ ಜೊತೆಯಲ್ಲಿ ದಾನಮಾಡಬೇಕು.

೬೩. ಅನೇಕವಾಗಿ ಹಾಸಿಗೆಗಳನ್ನೂ ದಾನಮಾಡಬೇಕು. ನಾನಾ ಪ್ರಕಾರವಾದ ಛತ್ರಿಯನ್ನೂ ದಾನಮಾಡಬೇಕು. ಈ ರೀತಿಯಾಗಿ ಹೋಮ ಹವನ ದಾನಗಳನ್ನು ಮಾಡಿ ರಾಜನು ಕ್ಷೇಮವನ್ನು ಹೊಂದುತ್ತಾನೆ.

೬೪. ಎಲ್ಲರೂ ಕೂಡ ರುದ್ರವನ್ನು ಜಪಿಸುತ್ತಿರಬೇಕು ಅದಿಲ್ಲದಿದ್ದರೆ ಮಾನಸ್ತೋಕೆ ಎಂಬ ಮಂತ್ರದಿಂದ ಹೋಮವನ್ನು ಮಾಡುತ್ತಿರಬೇಕು. ಇದು ಈ ವಿಷಯದಲ್ಲಿ ಸರಿಯಾಗುತ್ತದೆ.

ಇಂತು ಇದು ಹನುಮತ್ಪತಾಕ ಎಂಬ ಹೆಸರುಳ್ಳ ವ್ರತವು.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಆದಿಕಾವ್ಯವಾದ ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹನುಮತ್ಪತಾಕಾರೋಪಣ ವ್ರತವರ್ಣನವೆಂಬ ಹದಿನಾರನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹದಿನಾರನೆಯ ಸರ್ಗದ ಸಾರಾಂಶವು.

ರಾಮಾಯಣವನ್ನು ಕೇಳಿದಮೇಲೆ ಅಥವಾ ಹೇಳಿದಮೇಲೆ ಪಟ್ಟಾಭಿಷೇಕವನ್ನು ಮಾಡಿ ಕುದುರೆಗಳಿಂದ ಕೂಡಿದ ರಥವನ್ನು ದಾನಮಾಡಬೇಕು. ಅಲ್ಲದೆ ಕರೆಯುವ ಹಸುವನ್ನೂ ದಾನಮಾಡಬೇಕು. ರಾಮನ ವಿಷಯವನ್ನು ಹೇಳುವ ಗ್ರಂಥವೆಲ್ಲಾ ರಾಮಾಯಣಗಳೇ ಆಗಿರುವುವು.

ಶ್ರೀರಾಮನು ಲಂಕೆಯಲ್ಲಿ ಮೇಘನಾದನಿಂದ ನಾಗಪಾಶದಿಂದ ಕಟ್ಟಲ್ಪಟ್ಟಾಗ ಆ ರಾಮನು ಗರುಡನನ್ನು ಸ್ಮರಿಸಿಕೊಂಡನು. ಅವನು ಬಂದೊಡನೆಯೇ ನಾಗಪಾಶವು ಬಿಟ್ಟು ಹೋಯಿತು.

ಆಗ ಗರುಡನು ಶ್ರೀರಾಮನನ್ನು ಕುರಿತು ಎಲೈ ರಾಮಚಂದ್ರನೇ ! ಮಹಾಶೂರರಾದ ಈ ಕಪಿಗಳೆಲ್ಲರೂ ನಿನ್ನ ಸೇವೆಯಲ್ಲಿರುವರು. ಅಲ್ಲದೆ ಅವರೆಲ್ಲರೂ ದೇವಾಂಶ ಸಂಭೂತರು. ಅವರೆಲ್ಲರೂ ಮಹಾ ರುದ್ರನ ಅಂಶದಿಂದಲೇ ಅವತರಿಸಿರುವುದನ್ನು ನೀನೇ ಬಲ್ಲೆ. ಹೇಗೆಂದರೆ ಪೂರ್ವದಲ್ಲಿ ದೇವಾಸುರರು ಸಮುದ್ರವನ್ನು ಕಡೆದಾಗ ಕಲ್ಪವೃಕ್ಷ ಕಾಮಧೇನುಗಳು ಹುಟ್ಟಿದಂತೆಯೇ ಅನೇಕ ಬಗೆಯಾದ ರೋಗಗಳೂ ಹುಟ್ಟಿದುವು. ಆಗ ಆ ವ್ಯಾಧಿಗಳು ಜಗತ್ತನ್ನು ಪೀಡಿಸತೊಡಗಿದುವು. ಆಗ ಋಷಿಗಳು ಬ್ರಹ್ಮನ ಬಳಿಗೆ ಹೋಗಿ ತಮ್ಮ ಕಷ್ಟಗಳನ್ನು ನಿವೇದಿಸಿಕೊಳ್ಳುತ್ತಾ ಈ ರೋಗಗಳ ವಿಷಯದಲ್ಲಿ ನಮ್ಮ ಮಂತ್ರಗಳಾಗಲಿ ಔಷಧಿಗಳಾಗಲಿ ಉಪಯೋಗವಾಗುತ್ತಿಲ್ಲವೆಂದರು. ಇದನ್ನು ಕೇಳಿದ ಬ್ರಹ್ಮನು ರುದ್ರರನ್ನು ಪ್ರಾರ್ಥಿಸಿಕೊಳ್ಳಲು ಏಕಾದಶರುದ್ರರೂ ಆ ಬ್ರಹ್ಮನನ್ನು ಸಮಾಧಾನಪಡಿಸಿ ಈ ಕಪಿಗಳಿಗೆ ತಮ್ಮ ಅಂಶವನ್ನು ಸೇರಿಸಿದರು. ಆಗ ಈ ಕಪಿಗಳು ಎಲ್ಲಾ ಕಡೆಯಲ್ಲಿಯೂ ಓಡಿಯಾಡುತ್ತ ವ್ಯಾಧಿಗಳನ್ನೆಲ್ಲಾ ನಾಶಮಾಡಿದುವು. ಬ್ರಹ್ಮನೂ ಕೂಡ ಆ ಕಪಿಗಳಿಗೆ ನಿಮ್ಮಲ್ಲಿ ಮೃತಸಂಜೀವಿನಿ ಕಳೆಯು ಶಾಶ್ವತವಾಗಿರಲೆಂದು ಹೇಳುತ್ತಾ ಅನೇಕ ವರಗಳನ್ನು ಕೊಟ್ಟನು.

ಎಲೈ ರಾಮನೇ ! ಹೀಗೆಂದು ಕಪಿಗಳ ಚರಿತ್ರೆಯನ್ನು ಕೇಳಿದ್ದೇನೆ. ಹನುಮಂತನ ಆಕೃತಿಯನ್ನು ಮಾಡಿಕೊಂಡು ಪೂಜೆಮಾಡಿದರೆ ಬಹು ಉತ್ತಮವು ಈ ಪೂಜೆಯಲ್ಲಿ ಹೋಮ ಹವನಗಳೂ ನಡೆಯಬೇಕು. ಅನೇಕವಾದ ದಾನಗಳನ್ನು ಮಾಡಬೇಕು.



॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಮನೋಹರಕಾಂಡೇ ಸಪ್ತದಶಸ್ಸರ್ಗಃ

॥ ಶ್ರೀರಾಮದಾಸ ಉವಾಚ ॥

ವಿಷ್ಣುದಾಸ ತ್ವಯಾ ಯದ್ಯತ್ಪೃಷ್ಟಂ ತತ್ತನ್ಮಯೇರಿತಂ ।
ರಾಮಾಜ್ಞಯಾ ತವ ಪ್ರೀತ್ಯಾನಂದಚಾರಿತ್ರಮುತ್ತಮಂ ॥ ೧ ॥

ರಾಮೇಣೈವ ಮಮಾಸ್ಯೇನ ತವೋಪದಿಷ್ಟಮಾದರಾತ್ ।
ತ್ವಯ್ಯಸ್ತಿ ರಾಮಸಂಪ್ರೀತಿಸ್ತಸ್ಮಾದ್ರಾಮೇಣ ಮೇ ದ್ವಿಜ ॥ ೨ ॥

ಆಜ್ಞಾಪಿತಂ ಪೂಜನಾಂತೇ ಪುರಾ ತವ ತಪೋಬಲಾತ್ ।
ಆನಂದರಾಮಚರಿತಂ ಮಮೇದಂ ಮಂಗಳಪ್ರದಂ ॥ ೩ ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹದಿನೇಳನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು—ಎಲೈ ವಿಷ್ಣುದಾಸನೇ! ನೀನು ಕೇಳಿದುದನ್ನೆಲ್ಲಾ ಹೇಳಿರುವೆನು. ಆ ಶ್ರೀರಾಮನ ಅಪ್ಪಣೆಯಾದುದರಿಂದಲೂ ನಿನ್ನ ಮೇಲಿನ ಪ್ರೀತಿಯಿಂದಲೂ ಉತ್ತಮವಾದ ಈ ರಾಮಚರಿತ್ರೆಯನ್ನು ವರ್ಣಿಸಿರುವೆನು.

೨. ಆ ರಾಮನೇ ನನ್ನ ಬಾಯಿನಿಂದ ನಿನಗೆ ಪ್ರೀತಿಯಿಂದ ಉಪದೇಶ ಮಾಡಿರುವನು. ನಿನ್ನಲ್ಲಿ ರಾಮನಿಗೆ ಪ್ರೀತಿಯಿರುವುದು. ಆದ್ದರಿಂದಲೇ ರಾಮನು ನನಗೆ ಹೇಳುವಂತೆ ಆಜ್ಞಾಪಿಸಿರುವನು.

೩. ನಾನು ಪೂಜೆಮಾಡಿದಮೇಲೆ ನನಗೆ ಈರೀತಿ ಆಜ್ಞಾಪಿಸಿರುವನು. ಇದು ನಿನ್ನ ಪೂರ್ವಜನ್ಮದ ತಪೋಬಲವು. ನಾನು ಹೇಳಿರುವ ಆನಂದರಾಮ ಚರಿತ್ರೆಯು ಮಂಗಳಕಾರಕವು. ಶುಭವಾದುದು.

ವಿಷ್ಣುದಾಸಾಯ ವಿಪ್ರಾಯ ಕಥಯಸ್ವೇತಿ ವೈ ಮುಹುಃ ।
ತ್ವದರ್ಥಂ ಪೂಜನಾಂತೇ ಮೇ ದರ್ಶನಂ ದತ್ತವಾನ್ನಿಜಂ ॥ ೪ ॥

ನವೋತ್ತರಶತಶ್ಲೋಕಸಾರರಾಮಾಯಣೇನ ಚ ।
ಪುರಾ ಮೇ ಗ್ರಥಿತೇನಾತ್ರ ರಾಮೇಣ ಸ್ಮಾರಿತೋಸ್ಮ್ಯಹಂ ॥ ೫ ॥

ಶ್ರೀರಾಘವೋಪದಿಷ್ಟೇನ ಮಹಾಮಂಗಳದೇನ ಚ ।
ನವಾಧಿಕಶತಶ್ಲೋಕಸಾರರಾಮಾಯಣೇನ ಚ ॥ ೬ ॥

ಯದ್ಯನ್ಮಯಾ ವಿಸ್ತೃತಂ ಚ ಶ್ರುತಂ ಪೂರ್ವಕಥಾನಕಂ ।
ಮಮ ತಚ್ಚಾಪಿ ಸ್ಮರಿತಂ ವಾಲ್ಮೀಕಿಮುಖನಿರ್ಗತಂ ॥ ೭ ॥

ತತೋ ಮಯಾ ವಿಷ್ಣುದಾಸ ರಾಘವಸ್ಯಾಜ್ಞಯಾ ತವ ।
ಶತಕೋಟಿಮಿತಾದ್ರಾಮಚರಿತಾತ್ಸಂವಿವಿಚ್ಯ ಚ ॥ ೮ ॥

---

೪. ಆ ರಾಮನು ನಾನು ಪೂಜೆಯನ್ನು ಮಾಡಿದಮೇಲೆ ನನಗೆ ದರ್ಶನವನ್ನು ಕೊಟ್ಟು ಮಂಗಳಪ್ರದವಾದ ನನ್ನ ಆನಂದರಾಮಚರಿತ್ರೆಯನ್ನು ಆ ವಿಷ್ಣುದಾಸನಿಗೆ ಹೇಳು. ಎಂಬುದಾಗಿ ಅನೇಕಬಾರಿ ಹೇಳಿದನು.

೫. ನಾನು ಹಿಂದೆ ಸಾರರಾಮಾಯಣವನ್ನು ನೂರಒಂಭತ್ತು ಶ್ಲೋಕಗಳಿಂದ ರಚಿಸಿರುವೆನು. ಅದನ್ನು ರಾಮನು ನನಗೆ ಜ್ಞಾಪಿಸಿ ಅದನ್ನೇ ಹೇಳು. ಎಂದು ಹೇಳಿದನು.

೬-೭. ಶ್ರೀರಾಮನು ಉಪದೇಶಮಾಡಿದ ಬಹು ಮಂಗಳಕರವಾದ ನೂರಒಂಭತ್ತು ಶ್ಲೋಕಗಳಿಂದ ಮಾಡಿದ ಸಾರರಾಮಾಯಣದಿಂದ ನಾನು ಯಾವು ಯಾವುದನ್ನು ವಿಸ್ತಾರಗೊಳಿಸಿರುವೆನೋ ಅವೆಲ್ಲವೂ ಕೂಡ ಎಂದರೆ ಒಟ್ಟಿನಲ್ಲಿ ವಾಲ್ಮೀಕಿಯ ಬಾಯಿಂದ ಹೊರಟ ಎಲ್ಲಾ ವಿಷಯವೂ ಒಡನೆಯೇ ಸ್ಮರಣೆಗೆ ಬಂದಿತು.

೮. ಎಲೈ ವಿಷ್ಣುದಾಸನೇ ! ಶ್ರೀರಾಮನ ಅಪ್ಪಣೆಯಂತೆ ಶತಕೋಟಿ ಸಂಖ್ಯೆಯುಳ್ಳ ಶ್ರೀರಾಮಚರಿತ್ರೆಯಲ್ಲಿ ಯಾವು ಯಾವುದನ್ನು ಹೇಳಬೇಕೋ ಅದನ್ನು ವಿವೇಚನೆಯಿಂದ ತಿಳಿದು ಹೇಳಿದ್ದೇನೆ.

ಸಾರಂ ಸಾರಂ ಚ ಕಥಿತಂ ಮಹಾಮಂಗಳ್ಯಕಾರಕಂ ।
॥ ವಿಷ್ಣುದಾಸ ಉವಾಚ ॥
ತ್ವಯೈತತ್ಕಥಿತಂ ಚೇದಮಾನಂದಸಂಜ್ಞಕಂ ಮಮ ॥ ೯ ॥

ಶ್ರೀರಾಮಚರಿತಂ ರಮ್ಯಂ ಮತ್ತೋಷಾರ್ಥಮನುತ್ತಮಂ ।
ಶತಕೋಟಿಮಿತಾತ್ತಸ್ಮಾತ್ ಕಥಿತಂ ಚ ವಿವಿಚ್ಯ ಚ ॥ ೧೦ ॥

ಅಥವಾ ಭರತಖಂಡಾಂತರ್ಭಾಗಾದುಕ್ತಂ ವದಸ್ವ ತತ್ ।
॥ ರಾಮದಾಸ ಉವಾಚ ॥
ಶತಕೋಟಿಮಿತಂ ಕೃತ್ಸ್ನಂ ಮಯಾ ರಾಮಾಯಣಂ ಶುಭಂ ॥ ೧೧ ॥

ವಿವಿಚ್ಯ ಜ್ಞಾನದೃಷ್ಟ್ಯಾತ್ರ ತವೇದಮುಪದೇಶಿತಂ ।
ವಿಶೇಷಾತ್ಸ್ಮರಿತಂ ಚಾಪಿ ಸಾರರಾಮಾಯಣಶ್ರವಾತ್ ॥ ೧೨ ॥

---

೯. ಅವುಗಳಲ್ಲಿ ಸಾರವಾಗಿರುವವುಗಳಲ್ಲಿಯೂ ಸಾರ ಸಾರವನ್ನೇ ತೆಗೆದು ನಿನಗೆ ಹೇಳಿರುವೆನು. ಇದು ಮಹಾ ಮಂಗಳಕರವು. ವಿಷ್ಣುದಾಸನು ಹೇಳಿದನು-ಎಲೈ ಗುರುವೇ! ನೀನು ಈ ಆನಂದರಾಮಾಯಣವೆಂಬ ಸಂಜ್ಞೆಯುಳ್ಳ ರಾಮಾಯಣವನ್ನು ಹೇಳಿದ್ದೀಯೆ.

೧೦. ಈ ಶ್ರೀರಾಮಚರಿತೆಯು ರಮ್ಯವಾಗಿರುವುದು ಉತ್ತಮವಾಗಿರುವುದು. ನನಗೆ ಬಹು ಸಂತೋಷವಾಯಿತು ಇದನ್ನು ನೀನು ಆ ಶತಕೋಟಿ ಸಂಖ್ಯೆಯ ರಾಮಾಯಣದಿಂದ ತೆಗೆದು ಹೇಳಿದ್ದೀಯೆ. ಆದರೆ ಆ ಶತಕೋಟಿ ರಾಮಾಯಣದಿಂದ ಯಾವು ಯಾವುದನ್ನು ತೆಗೆದು ಹೇಳಿದ್ದೀಯೆ?

೧೧. ಇಲ್ಲದಿದ್ದರೆ ಭರತಖಂಡದ ಭಾಗದಿಂದ ತೆಗೆದು ಇವನ್ನು ಹೇಳಿರುವೆಯಾ? ಎಂಬುದನ್ನು ಹೇಳು. ರಾಮದಾಸನು ಹೇಳಿದನು-ಎಲೈ ವಿಷ್ಣುದಾಸನೆ! ರಾಮಾಯಣವೆಲ್ಲವೂ ನೂರುಕೋಟಿ ಗ್ರಂಥಗಳಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿರುವುದು.

೧೨. ಅದರಲ್ಲಿರುವುದನ್ನು ಜ್ಞಾನದೃಷ್ಟಿಯಿಂದ ತೆಗೆದು ನಿನಗೆ ಉಪದೇಶಿಸಿದ್ದೇನೆ. ಸಾರರಾಮಾಯಣವನ್ನು ಕೇಳಿದುದರಿಂದ ಅವೆಲ್ಲವೂ ಹೆಚ್ಚಾಗಿ ಜ್ಞಾಪಕಕ್ಕೆ ಬಂದುವು.

ರಾಮೋಪದೇಶಿತಾದ್ರಮ್ಯಾತ್ತತಸ್ತೇ ಕಥಿತಂ ಮಯಾ ।

॥ ವಿಷ್ಣುದಾಸ ಉವಾಚ ॥

ಶತಕೋಟಿಮಿತೇ ರಾಮಚರಿತೇ ಪಾತಕಾಪಹೇ ॥ ೧೩ ॥

ಕತಿ ಕಾಂಡಾನಿ ಸರ್ಗಾಶ್ಚ ಕನ್ಮಾಂ ವಕ್ತುಂ ತ್ವಮರ್ಹಸಿ ।

॥ ಶ್ರೀರಾಮದಾಸ ಉವಾಚ ॥

ನವಲಕ್ಷಾಣಿ ಕಾಂಡಾನಿ ಶತಕೋಟಿಮಿತೇ ದ್ವಿಜ ॥ ೧೪ ॥

ಸರ್ಗಾ ನವತಿಲಕ್ಷಾಶ್ಚ ಜ್ಞಾತವ್ಯಾ ಮುನಿಕೀರ್ತಿತಾಃ ।
ಕೋಟೀನಾಂ ಚ ಶತಂ ಶ್ಲೋಕಮಾನಂ ಜ್ಞೇಯಂ ವಿಚಕ್ಷಣೈಃ ॥ ೧೫ ॥

॥ ವಿಷ್ಣುದಾಸ ಉವಾಚ ॥

ಗುರೋಹಂ ಶ್ರೋತುಮಿಚ್ಛಾಮಿ ಯತ್ತ್ವಾಂ ಶ್ರೀರಾಘವೇಣ ಹಿ ।
ಉಪದಿಷ್ಟಂ ಮದರ್ಥಂ ಹಿ ಸಾರರಾಮಾಯಣಂ ಶುಭಂ ॥ ೧೬ ॥

---

೧೩. ಅವೆಲ್ಲವನ್ನೂ ಶ್ರೀರಾಮನೇ ನನಗೆ ಉಪದೇಶಮಾಡಿದನು. ರಮ್ಯವಾಗಿರುವುದು. ಆದರಿಂದಲೇ ತೆಗೆದು ನಿನಗೆ ಎಲ್ಲವನ್ನೂ ಹೇಳಿದ್ದೇನೆ. ವಿಷ್ಣುದಾಸನು ಕೇಳಿದನು-ಎಲೈ ಗುರುವೇ ! ಶತಕೋಟಿ ಗ್ರಂಥಗಳುಳ್ಳ ರಾಮಚರಿತೆಯು ಪಾಪನಾಶಕವು ಎಂದು ಹೇಳಿದೆಯಲ್ಲ.

೧೪. ಅದರಲ್ಲಿ ಎಷ್ಟು ಕಾಂಡಗಳಿವೆ ? ಎಷ್ಟು ಸರ್ಗಗಳಿವೆ ? ಅದನ್ನು ನನಗೆ ಹೇಳು. ಶ್ರೀರಾಮದಾಸನು ಹೇಳಿದನು-ಎಲೈ ವಿಷ್ಣುದಾಸನೇ ! ಆ ಶತಕೋಟಿರಾಮಾಯಣದಲ್ಲಿ ಒಂಭತ್ತುಲಕ್ಷ ಕಾಂಡಗಳಿರುವುವು.

೧೫. ಮತ್ತು ತೊಂಭತ್ತು ಲಕ್ಷಸರ್ಗಗಳಿವೆ. ಇವೆಲ್ಲವನ್ನೂ ವಾಲ್ಮೀಕಿಯೇ ಹೇಳಿರುವನು. ಎಂದು ತಿಳಿ. ನೂರುಕೋಟಿ ಶ್ಲೋಕಗಳಿವೆ ಎಂಬುದಾಗಿ ಲೆಕ್ಕವನ್ನು ತಿಳಿ.

೧೬. ವಿಷ್ಣುದಾಸನು ಕೇಳಿದನು-ಎಲೈ ಗುರುವೇ ! ಶ್ರೀರಾಮನು ನನಗೋಸ್ಕರ ಸಾರರಾಮಾಯಣವನ್ನು ನಿನಗೆ ಉಪದೇಶಮಾಡಿದನೆಂದು ಹೇಳಿದೆಯಲ್ಲ !

ನವೋತ್ತರಶತಶ್ಲೋಕಸಂಮಿತಂ ಚ ಮನೋಹರಂ ।
ತತ್ತ್ವಂ ವದಾಧುನಾ ಪುಣ್ಯಂ ಪರಂ ಕೌತೂಹಲಂ ಮಮ ॥ ೧೭ ॥

॥ ರಾಮದಾಸ ಉವಾಚ ॥

ಸಮ್ಯಕ್ ಪೃಷ್ಟಂ ತ್ವಯಾ ಶಿಷ್ಯ ಸಾವಧಾನಮನಾಃ ಶೃಣು ।
ಸಾರರಾಮಾಯಣಂ ತದ್ಯತ್ಪ್ರೋಚ್ಯತೇ ರಾಮಕೀರ್ತಿತಂ ॥ ೧೮ ॥

ಆವಿರ್ಭೂತ್ವಾ ಪೂಜನಾಂತೇ ಮದಗ್ರೇ ಭ್ರಾತೃಭಿಃ ಶ್ರಿಯಾ ।
ಮಾಂ ಪ್ರೋವಾಚ ರಘುಶ್ರೇಷ್ಠಃ ಪ್ರಸನ್ನಮುಖಪಂಕಜಃ ॥ ೧೯ ॥

॥ ಶ್ರೀರಾಮಚಂದ್ರ ಉವಾಚ ॥

ರಾಮದಾಸ ಶೃಣುಷ್ವಾದ್ಯ ಯತ್ಸಾರಂ ಪ್ರೋಚ್ಯತೇ ತವ ।
ಚರಿತ್ರಂ ಸಕಲಂ ಸ್ವೀಯಂ ಮಯಾ ತತ್ತ್ವಂ ಸವಿಸ್ತರಂ ॥ ೧ ॥

---

೧೭. ಅದರಲ್ಲಿ ನೂರಒಂಭತ್ತು ಶ್ಲೋಕಗಳಿವೆ ಅವು ಮನೋಹರವಾದುವು ಎಂದೂ ಹೇಳಿದೆಯಷ್ಟೆ. ಅದನ್ನು ಕೇಳಬೇಕೆಂದು ಬಹಳ ಆಸೆಯಿರುವುದು. ಪುಣ್ಯಪ್ರದವಾದ ಅವುಗಳನ್ನು ಹೇಳು.

೧೮. ರಾಮದಾಸನು ಹೇಳಿದನು–ಎಲೈ ಶಿಷ್ಯನೇ! ನೀನು ಕೇಳಿದುದು ಸರಿಯಾಗಿದೆ. ಸಮಾಧಾನವಾದ ಮನಸ್ಸಿನಿಂದ ಕೇಳು. ಶ್ರೀರಾಮನು ಹೇಳಿದ ಆ ಸಾರರಾಮಾಯಣವನ್ನು ನಿನಗೆ ಹೇಳುತ್ತೇನೆ.

೧೯. ನಾನು ಆ ಸ್ವಾಮಿಯ ಪೂಜೆಯನ್ನು ಮಾಡಿದನಂತರ ಆತನು ತಮ್ಮಂದಿರೊಡನೆ ನನ್ನ ಎದುರಿಗೆ ಬಂದು ಪ್ರತ್ಯಕ್ಷನಾದನು. ಸೀತೆಯೂ ಕಾಣಿಸಿಕೊಂಡಳು. ಪ್ರಸನ್ನವಾದ ಮುಖದಿಂದ ನನ್ನನ್ನು ಕುರಿತು ಇಂತೆಂದನು.

೧. ಶ್ರೀರಾಮಚಂದ್ರನು ಹೇಳಿದನು--ಎಲೈ ರಾಮದಾಸನೇ! ಕೇಳು. ನಾನು ಈಗ ನಿನಗೆ ನನ್ನ ಚರಿತ್ರೆಯ ಸಾರವಾದ ಭಾಗವನ್ನು ಹೇಳುತ್ತೇನೆ. ಅದು ವಿಸ್ತಾರವಾಗಿಲ್ಲದಿದ್ದರೂ ತತ್ವವನ್ನು ತೆಗೆದು ಹೇಳುತ್ತೇನೆ.

ವಿಷ್ಣುದಾಸಾಯ ಶಿಷ್ಯಾಯ ಮದ್ಭಕ್ತಿನಿರತಾಯ ಚ।
ಕಥಯಸ್ವ ಯಥಾನ್ಯಚ್ಚ ಜ್ಞಾನಾದ್ದೃಷ್ಟಂ ಯಥಾಶ್ರುತಂ ॥ ೨ ॥

ಯಥಾ ಭರತಖಂಡಾತರ್ಭಾಗೇ ಚಾಪಿ ತ್ವಯೇಕ್ಷಿತಂ।
ಸ್ಮರಣಾರ್ಥಂ ತ್ವಹಂ ಕಿಂಚಿತ್ತವ ವಕ್ಷ್ಯಾಮಿ ಸಾದರಂ ॥ ೩ ॥

ಪಾರ್ವತೀಶಿವಸಂವಾದಸ್ಸೂರ್ಯವಂಶಾರ್ಥಪಾರ್ಥಿವಾಃ।
ಮತ್ಪಿತ್ರೋರ್ಹರಣ ಲಂಕಾಂ ರಾವಣೇನ ವಿಸರ್ಜನಂ ॥ ೪ ॥

ದಶರಥವಿವಾಹಾಶ್ಚ ಕೈಕೇಯ್ಯೈ ದ್ವಿವರಾರ್ಪಣಂ।
ಕೈಕೇಯ್ಯೈ ದ್ವಿಜಶಾಪಶ್ಚ ವರದಾನಂ ಕರಾಯ ಚ ॥ ೫ ॥

---

೨. ಆದನ್ನು ನನ್ನಲ್ಲಿ ಭಕ್ತಿಯುಳ್ಳ ನಿನ್ನ ಶಿಷ್ಯನಾದ ವಿಷ್ಣುದಾಸನಿಗೆ ಉಪದೇಶಿಸು ಇದನ್ನು ಹೇಳುವುದಲ್ಲದೆ ನೀನು ಕೇಳಿರುವುದನ್ನೂ ನಿನಗೆ ಜ್ಞಾನದೃಷ್ಟಿಯಿಂದ ತಿಳಿಯುವುದನ್ನೂ ಅವನಿಗೆ ಉಪದೇಶಿಸು.

೩. ಭರತಖಂಡದಲ್ಲಿಯೂ ಕೂಡ ನೀನು ಯಾವು ಯಾವುದನ್ನು ನೋಡಿದ್ದೀಯೋ ಅದೆಲ್ಲವನ್ನೂ ಹೇಳು. ಅವುಗಳ ಸ್ಮರಣೆಯು ಬರುವುದಕ್ಕೋಸ್ಕರ ನಿನಗೆ ಕೊಂಚ ವಿಷಯವನ್ನೂ ನಾನು ಉಪದೇಶಿಸುತ್ತೇನೆ.

೪. ಇವೆಲ್ಲವೂ ಪಾರ್ವತಿ ಪರಮೇಶ್ವರಸಂವಾದದಲ್ಲಿ ಹೇಳಿರುವುದು. ಅವುಗಳಾವುವೆಂದರೆ ರಾಮನ ಕುಲದಲ್ಲಿ ಹುಟ್ಟಿದ ಹಿಂದಿನ ರಾಜರ ವಿಷಯ, ಕೌಸಲ್ಯೆ ಮತ್ತು ದಶರಥರ ಹರಣ, ರಾವಣನು ದಶರಥ ಕೌಸಲ್ಯೆಯರನ್ನು ಲಂಕೆಗೆ ತೆಗೆದುಕೊಂಡು ಹೋಗಿ ಅನಂತರ ಬಿಟ್ಟು ಬಿಡುವುದು.

೫. ದಶರಥನ ವಿವಾಹವು, ಕೈಕೇಯಿಗೆ ಎರಡು ವರಗಳನ್ನು ದಶರಥನು ಕೊಡುವುದು. ಕೈಕೇಯಿಗೆ ಬ್ರಾಹ್ಮಣನು ಶಾಪವನ್ನು ಕೊಟ್ಟದು. ಕೈಕೇಯಿಗೆ ಕೊಟ್ಟ ವರದಾನಗಳು.

ರಾಜ್ಞಃ ಶಾಪೋ ವೈಶ್ಯಹತ್ಯಾ ಋಷ್ಯಶೃಂಗಾರ್ಥಮುದ್ಯಮಃ ।
ಋಷ್ಯಶ್ರಿಂಗಮುನೇಸ್ತೇಜಃ ಪ್ರತಾಪಾದ್ವಹ್ನಿನಾರ್ಪಿತಂ ॥ ೬ ॥

ಪಾಯಸಂ ತದ್ವಿಭಕ್ತೇ ಚ ಗೃಧ್ರೋ ಭಾಗಂ ಗಿರೌ ನಯತ್ ।
ಅಂತರ್ಗರ್ಭಾನ್ನೃಪಪತ್ನ್ಯಸ್ತಾಸಾಮಾಸನ್ ಸುದೋಹದಾಃ ॥ ೭ ॥

ತತೋ ಭೂಮ್ಯಾ ಬ್ರಹ್ಮಣಾ ಮೇ ಪ್ರಾರ್ಥನಾಮಂಥರಾಜನಿಃ ।
ಚೈತ್ರೇ ಮಾಸಿ ಮನೋತ್ಪತ್ತಿರ್ಬಂಧುಭಿಶ್ಚ ಹನೂಮತಾ ॥ ೮ ॥

ಬಾಲಕ್ರೀಡಾ ಮತ್ಕೃತಾ ಚ ವ್ರತಬಂಧಸ್ತತೋ ಮಮ ।
ವೇದಾಭ್ಯಾಸೋ ವಶಿಷ್ಠಾಚ್ಚ ತೀರ್ಥಯಾತ್ರಾ ಚ ಬಂಧುಭಿಃ ॥ ೯ ॥

---

೬. ದಶರಥನು ವೈಶ್ಯನನ್ನು ಕೊಂದುದು. ಅದರಿಂದ ಆ ರಾಜನಿಗೆ ಶಾಪ ಬಂದುದು. ಋಷ್ಯಶೃಂಗನನ್ನು ಕರೆತರುವುದಕ್ಕೆ ಪ್ರಯತ್ನಪಡುವುದು. ಆ ಋಷ್ಯಶೃಂಗನು ಯಾಗವನ್ನು ಮಾಡಿಸಲು ಅವನ ತೇಜಸ್ಸಿನ ಶಕ್ತಿಯಿಂದ ಅಗ್ನಿಯು ಪಾಯಸವನ್ನು ಕೊಟ್ಟುದು.

೭. ಅವನ್ನು ಹೆಂಡತಿಯರಿಗೆ ವಿಭಾಗ ಮಾಡಿಕೊಡುವುದು. ಆ ಭಾಗದಲ್ಲಿ ಹದ್ದು ಒಂದು ಭಾಗವನ್ನು ತೆಗೆದುಕೊಂಡುಹೋಗಿ ಬೆಟ್ಟದಲ್ಲಿ ಹಾಕುವುದು. ಆ ರಾಜನ ಹೆಂಡತಿಯರು ಗರ್ಭಿಣಿಯರಾಗುವುದು. ಅವರಿಗೆ ಬಸುರಿನ ಬಯಕೆಗಳಾಗುವುದು.

೮. ಅನಂತರ ಭೂದೇವಿಯು ಬ್ರಹ್ಮನನ್ನು ಪ್ರಾರ್ಥಿಸಲು ಅವನು ನನ್ನನ್ನು ಪ್ರಾರ್ಥಿಸಿಕೊಂಡುದು. ಮಂಥರೆಯು ಹುಟ್ಟಿದುದು. ಚೈತ್ರಮಾಸದಲ್ಲಿ ನಾನು ಹುಟ್ಟಿದುದು. ಆಗಲೇ ನನ್ನ ತಮ್ಮಂದಿರೂ ಹನುಮಂತನೂ ಹುಟ್ಟಿದುದು.

೯. ನಾನು ಬಾಲಕ್ರೀಡೆಯನ್ನಾಡುವುದು. ಅನಂತರ ಉಪನಯನವಾಗುವುದು. ವಸಿಷ್ಠನಿಂದ ನಮಗೆ ವೇದಾಭ್ಯಾಸವು ನಡೆಯುವುದು. ತಮ್ಮಂದಿರೊಡನೆ ತೀರ್ಥಯಾತ್ರೆಗೆ ಹೋಗುವುದು.

ವಿಶ್ವಾಮಿತ್ರಾದ್ಧನುವಿದ್ಯಾ ತಾಟಿಕಾಮರ್ದನಂ ವನೇ ।
ಪ್ರಾರಂಭೋ ರಣದೀಕ್ಷಾಯಾಃ ಸುಬಾಹೋರ್ದರ್ಶನಂ ಮಖೇ ॥ ೧೦ ॥

ಮಾರೀಚಕ್ಷೇಪಣಂ ಚಾಪಿ ಹ್ಯಹಲ್ಯೋದ್ಧರಣಂ ಮಯಾ ।
ಸ್ವಯಂವರಂ ಚ ಶಾಪಶ್ಚ ಮುನಿಪತ್ನ್ಯಾಸ್ಸವಿಸ್ತರಂ ॥ ೧೧ ॥

ನೌಕಾಪೇನ ಹಿ ಗಂಗಾಯಾಂ ಮದಂಘ್ರಿಕ್ಷಾಳನಂ ಕೃತಂ ।
ಶೈವಂ ಧನುರ್ಜಾಮದಗ್ನ್ಯನ್ಯಸ್ತಂ ಭಗ್ನಂ ಸಭಾಂಗಣೇ ॥ ೧೨ ॥

ಸೀತೋತ್ಪತ್ತಿಶ್ಚ ಸೀತಾಯಾಂ ಲಂಕಾಗಮನನಿರ್ಗಮೌ ।
ಬಂಧುಭಿರ್ಮೇ ವಿವಾಹಾಶ್ಚ ಜಾಮದಗ್ನ್ಯಪರಾಜಯಃ ॥ ೧೩ ॥

ದೀಪಾವಳ್ಯುತ್ಸವಶ್ಚಾಪಿ ನೃಪೈಃ ಪಥಿ ಮಹಾರಣಃ ।
ಜೀವನಂ ಭರತಸ್ಯಾಪಿ ಮದ್ಭಾವಿಮುನಿನೇರಿತಂ ॥ ೧೪ ॥

---

೧೦. ವಿಶ್ವಾಮಿತ್ರನಿಂದ ಧನುರ್ವಿದ್ಯೆಯನ್ನು ಕಲಿಯುವುದು. ಕಾಡಿನಲ್ಲಿ ತಾಟಕೆಯನ್ನು ಕೊಂದುದು. ರಣದೀಕ್ಷೆಗೆ ಪ್ರಾರಂಭಮಾಡುವುದು. ಯಾಗದಲ್ಲಿ ಸುಬಾಹುವನ್ನು ನೋಡುವುದು.

೧೧. ಮಾರೀಚನನ್ನು ಎಸೆಯುವುದು. ಅಹಲ್ಯೆಯನ್ನು ಉದ್ಧಾರಮಾಡಿದುದು. ಸ್ವಯಂವರಕ್ಕೆ ಹೋದುದು. ಮುನಿಪತ್ನಿಯ ಶಾಪದ ವಿಷಯ.

೧೨ ಗುಹನು ಗಂಗೆಯಲ್ಲಿ ನನ್ನ ಪಾದಗಳನ್ನು ತೊಳೆಯುವುದು. ಜಮದಗ್ನಿಯು ಇಟ್ಟಿದ್ದ ಶಿವಧನುಸ್ಸನ್ನು ಸಭೆಯಲ್ಲಿ ಮುರಿದುದು.

೧೩. ಸೀತೆಯ ಉತ್ಪತ್ತಿ. ಸೀತೆಯು ಲಂಕೆಗೆ ಹೋಗುವುದು. ಮತ್ತೆ ಬರುವುದು. ನನಗೂ ನನ್ನ ತಮ್ಮಂದಿರಿಗೂ ವಿವಾಹವಾಗುವುದು. ಜಮದಗ್ನಿಯನ್ನು ಜಯಿಸುವುದು.

೧೪. ದೀಪಾವಳಿಯ ಉತ್ಸವಗಳು. ದಾರಿಯಲ್ಲಿ ರಾಜರೊಡನೆ ಯುದ್ಧ ನಡೆಯುವುದು. ಭರತನನ್ನು ಬದುಕಿಸುವುದು. ಮುನಿಯು ನನ್ನ ವಿಷಯವಾದ ಭವಿಷ್ಯವನ್ನು ಹೇಳುವುದು.

ವೃಂದಾಶಾಪಃ ಪಿತುಃ ಪುಣ್ಯಂ ಕೈಕೇಯೀ ಪೂರ್ವಕರ್ಮ ಚ ।
ತತೋ ಮದ್ದಿನಚರ್ಯಾತ್ರ ಗರ್ಭಾಧಾನಮಹೋತ್ಸವಃ ॥ ೧೫ ॥

ನಾರದಾಗ್ರೇ ಪ್ರತಿಜ್ಞಾ ಮೇ ಯೌವರಾಜ್ಯಾರ್ಥಮುದ್ಯಮಃ ।
ಕೈಕೇಯೀವರದಾನೇನ ದಂಡಕೇ ಗಮನಂ ಮಮ ॥ ೧೬ ॥

ದರ್ಶನಂ ಗುಹ್ಯಕಸ್ಯಾಪಿ ಸೀತಾವಾಕ್ಯಂ ಚ ಜಾಹ್ನವೀಂ ।
ಭರದ್ವಾಜವಾಲ್ಮೀಕಯೋರ್ದರ್ಶನಂ ಚ ಗಿರೌ ಸ್ಥಿತಿಃ ॥ ೧೭ ॥

ಕಾಕಾಕ್ಷಿಭೇದನಂ ಚಾಪಿ ರಾಜ್ಞಶ್ಚ ಮರಣಂ ಪುರಿ ।
ದರ್ಶನಂ ಭರತಸ್ಯಾಪಿ ಭರತಸ್ಯ ವಿಸರ್ಜನಂ ॥ ೧೮ ॥

ಸೀತಾಯಾಸ್ತಿಲಕೋರಣ್ಯೇನಸೂಯಾಭೂಷಣಾರ್ಪಣಂ ।
ವಿರಾಧಮರ್ದನಂ ಮಾರ್ಗೇ ನಾನಾಶ್ರಮವಿಲೋಕನಂ ॥ ೧೯ ॥

---

೧೫. ವೃಂದೆಯ ಶಾಪವು. ತಂದೆಯ ಪುಣ್ಯವು. ಕೈಕೇಯಿಯ ಹಿಂದಿನ ಕರ್ಮವು. ಅನಂತರ ನನ್ನ ದಿನಚರ್ಯೆಗಳು. ಗರ್ಭಾಧಾನಮಹೋತ್ಸವವು.

೧೬. ನಾನು ನಾರದನ ಎದುರಿನಲ್ಲಿ ಪ್ರತಿಜ್ಞೆಯನ್ನು ಮಾಡುವುದು. ಯುವರಾಜ ಪದವಿಗೋಸ್ಕರ ಪ್ರಯತ್ನವು. ಕೈಕೇಯಿಗೆ ಕೊಟ್ಟ ವರದಾನದ ರೀತಿಯಿಂದ ನಾನು ದಂಡಕಾರಣ್ಯಕ್ಕೆ ಹೋಗುವುದು.

೧೭. ಗುಹನ ದರ್ಶನವು ಜೌಹ್ನವಿಯನ್ನು ಕುರಿತು ಸೀತೆಯ ವಾಕ್ಯವು. ಭರದ್ವಾಜಋಷಿಯ ಮತ್ತು ವಾಲ್ಮೀಕಿಋಷಿಯ ದರ್ಶನವು. ಅನಂತರ ಪರ್ವತ ಪ್ರದೇಶಗಳಲ್ಲಿ ನಾನಿರುವಿಕೆಯು.

೧೮. ಕಾಕಾಸುರನ ಕಣ್ಣನ್ನು ನಾಶಪಡಿಸುವುದು. ರಾಜನು ಅಯೋಧ್ಯೆಯಲ್ಲಿ ಸಾಯುವುದು ಭರತನ ದರ್ಶನವು. ಅನಂತರ ಭರತನನ್ನು ಕಳುಹಿಸುವುದು.

೧೯. ಅರಣ್ಯದಲ್ಲಿ ಸೀತೆಯು ತಿಲಕದಿಂದ ಅಲಂಕರಿಸಿಕೊಳ್ಳುವುದು. ಆ ಸೀತೆಗೆ ಅನುಸೂಯೆಯು ಅಲಂಕಾರಗಳನ್ನು ಕೊಡುವುದು. ವಿರಾಧನನ್ನು ಕೊಲ್ಲುವಿಕೆ. ಅನೇಕ ಆಶ್ರಮವನ್ನು ನೋಡುವಿಕೆಯು.

ಅಗಸ್ತ್ಯೇಶ್ಚಾಥ ಗೃಧ್ರಸ್ಯ ದರ್ಶನಂ ಸಾಂಬಮರ್ದನಂ ।
ವಿರೂಪಣಂ ಶೂರ್ಪಣಖಾಯಾಃ ಖರಾದಿಪ್ರಮರ್ದನಂ ॥ ೨೦ ॥

ಸೀತಾದೇಹೇ ವಿಭಾಗಶ್ಚ ಮಾರೀಚಸ್ಯ ವಧೋ ಮಯಾ ।
ಸೀತಾಯಾ ಹರಣಂ ಲಂಕಾಂ ಸಂಗರಶ್ಚ ಜಟಾಯುಷಃ ॥ ೨೧ ॥

ಇಂದ್ರೇಣ ಪಾಯಸಂ ದತ್ತಂ ಸೀತಾಯೈ ಗಿರಿಜೇಕ್ಷಣಃ ।
ಕಬಂಧಮರ್ದನಂ ಮಾರ್ಗೇ ಶಬರ್ಯಾ ಪೂಜಿತಾಸ್ತ್ವಹಂ ॥ ೨೨ ॥

ತತಸ್ಸಖ್ಯಂ ಕಪೀಂದ್ರೇಣ ಶಿರಸಃ ಕ್ಷೇಪಣಂ ಮಯಾ ।
ಭೇದನಂ ಸಪ್ತತಾಲಾನಾಂ ಸರ್ಪೇಣ ಮಾಲಿಕಾ ಹೃತಾ ॥ ೨೩ ॥

ವಾಲೇರ್ಘಾತೋ ಮಯಾ ತತ್ರ ಸೀತಾಶುದ್ಧ್ಯರ್ಥಮುದ್ಯಮಃ ।
ಹನೂಮತಾಬ್ಧಿತರಣಂ ಲಂಕಾಯಾಂ ಜಾನಕೀಕ್ಷಣಂ ॥ ೨೪ ॥

---

೨೦. ಅಗಸ್ತ್ಯನ ದರ್ಶನ. ಸಾಂಬ ಸಂಹಾರವು. ಶೂರ್ಪಣಖೆಯನ್ನು ವಿಕಾರಗೊಳಿಸುವುದು. ಖರನೇ ಮುಂತಾದವರನ್ನು ಕೊಲ್ಲುವಿಕೆ.

೨೧. ಸೀತೆಯ ದೇಹದ ವಿಭಾಗವು. ಮಾರೀಚನ ವಧೆಯು. ಸೀತೆಯ ಹರಣವು. ರಾವಣನು ಜಟಾಯುವಿನೊಡನೆ ಯುದ್ಧಮಾಡುವುದು.

೨೨. ಇಂದ್ರನು ಸೀತೆಗೆ ಪಾಯಸವನ್ನು ಕೊಡುವುದು. ಸೀತೆಯು ವಿರಹದಿಂದಿರುವಾಗ ಪಾರ್ವತಿಯು ಬಂದು ನನ್ನನ್ನು [ಶ್ರೀರಾಮನನ್ನು] ಪರೀಕ್ಷಿಸುವುದು. ಕಬಂಧನ ವಧೆ. ಶಬರಿಯಿಂದ ಪೂಜೆಯನ್ನು ಹೊಂದುವುದು.

೨೩. ಕಪೀಂದ್ರನಾದ ಸುಗ್ರೀವನೊಡನೆ ಸಖ್ಯವು. ದುಂದುಭಿಯ ತಲೆಯನ್ನು ಎಸೆಯುವುದು. ಏಳು ತಾಳೆಯ ಮರಗಳನ್ನು ಕಡಿಯುವುದು. ತಾಳವೃಕ್ಷದಲ್ಲಿರುವ ಮಾಲಿಕಾರೂಪವಾದ ಸರ್ಪಗಳನ್ನು ಹರಣ ಮಾಡುವುದು.

೨೪. ವಾಲಿಯ ಮರ್ದನವು. ಸೀತೆಯ ಸುದ್ದಿಯನ್ನು ತರಲು ಪ್ರಯತ್ನ. ಹನುಮಂತನು ಸಮುದ್ರವನ್ನು ದಾಟುವುದು. ಅವನು ಲಂಕೆಯಲ್ಲಿ ಜಾನಕಿಯನ್ನು ನೋಡುವುದು.

ಮಂಡೋದರೀಸಮುತ್ಪತ್ತಿರ್ವರ್ಣನೇಸಾಕ್ಷಾದಿಮರ್ದನಂ ।
ಲಂಕಾದಾಹಶ್ಚ ದೇಹಾಂತಂ ಕರ್ತುಂ ಸಿದ್ಧೋಽಭವತ್ಕಪಿಃ ॥ ೨೫ ॥

ಜಾಂಬೂನದವೃಕ್ಷಶಾಖಾತಥಾಬ್ಧೇಸ್ತರಣಂ ಪುನಃ ।
ಬಹುಮುದ್ರಾಪ್ರದರ್ಶನಂ ಚ ಸೇತುಬಂಧಸ್ತತಃ ಪರಂ ॥ ೨೬ ॥

ವಿಭೀಷಣಾಭಿಷೇಕಶ್ಚ ವಿಶ್ವನಾಥಕಥಾ ಶುಭಾ ।
ಗಂಧಮಾದನೇಶಾಖ್ಯಾನಂ ಸಂಗರಶ್ಚ ತತಃ ಪರಂ ॥ ೨೭ ॥

ಕಾಲನೇಮಿವಧಶ್ಚಾಥ ತಥೈರಾವಣಮರ್ದನಂ ।
ಮೈರಾವಣಮರ್ದನಂ ಚ ಮಯಾ ಮಂಚಕಮರ್ದನಂ ॥ ೨೮ ॥

ಕುಂಭಕರ್ಣವಧಶ್ಚಾಪಿ ಮೇಘನಾದಸ್ಯ ಮರ್ದನಂ ।
ತತೋ ಹೋಮಸ್ಯ ವಿಧ್ವಂಸಸ್ತತೋ ರಾವಣಮರ್ದನಂ ॥ ೨೯ ॥

---

೨೫ ಮಂಡೋದರಿಯ ಉತ್ಪತ್ತಿ ವರ್ಣನೆ. ಅಕ್ಷನೇ ಮುಂತಾದ ಒಂಭತ್ತು ಜನರ ವಧೆ. ಲಂಕೆಯನ್ನು ಸುಡುವುದು. ಆಂಜನೇಯನು ಎಲ್ಲರನ್ನೂ ಕೊಲ್ಲಲು ಪ್ರತಿಜ್ಞೆ ಮಾಡುವುದು.

೨೬. ಜಾಂಬೂನದ ವೃಕ್ಷದ ಶಾಖೆಯ ಕಥೆಯು. ಹನುಮಂತನು ಮತ್ತೆ ಸಮುದ್ರವನ್ನು ದಾಟುವುದು. ಬಹು ರಾಮಮುದ್ರಿಕೆಗಳನ್ನು ನೋಡುವುದು. ಸೇತುವೆಯನ್ನು ಕಟ್ಟುವುದು.

೨೭. ವಿಭೀಷಣನಿಗೆ ಲಂಕಾರಾಜ್ಯದಲ್ಲಿ ಅಭಿಷೇಕಮಾಡುವುದು. ವಿಶ್ವನಾಥನ ಕಥೆಯನ್ನು ಹೇಳುವುದು. ಗಂಧಮಾದನೇಶ್ವರನ ಕಥೆಯು. ಯುದ್ಧದ ಆರಂಭವು.

೨೮. ಕಾಲನೇಮಿಯ ವಧೆಯು. ಐರಾವಣನ ವಧೆಯು. ಮೈರಾವಣನ ವಧೆಯು. ಮಂಚವನ್ನು ಮುರಿಯುವುದು.

೨೯. ಕುಂಭಕರ್ಣನ ವಧೆ, ಮೇಘನಾದನ ವಧೆ, ಹೋಮವನ್ನು ಕೆಡಿಸುವುದು. ಅನಂತರ ರಾವಣನ ವಧೆ.

ಸೀತಾಯಾ ದಿವ್ಯದಾನಂ ಚ ಸ್ವಪುರೀಗಮನಂ ಮಮ ।
ರಣದೀಕ್ಷಾಸಮಾಪ್ತಿಶ್ಚ ರಾಜ್ಯಾಭಿಷೇಚನಂ ಮಮ ॥ ೩೦ ॥

ಉತ್ಪತ್ತೀ ರಾವಣಾದೀನಾಮಿಂದ್ರಜಿತಃಪರಾಕ್ರಮಃ ।
ಮಾನಭಂಗೋ ರಾವಣಸ್ಯ ವಾಲೀಸುಗ್ರೀವಜನ್ಮನೀ ॥ ೩೧ ॥

ವಾಯುಪುತ್ರಜನ್ಮಕರ್ಮ ವರದಾನಂ ಹನೂಮತಃ ।
ಶಾಪೋಽಪಿ ವಾಯುಪುತ್ರಾಯ ಹ್ಯಗಸ್ತೇಶ್ಚ ವಿಸರ್ಜನಂ ॥ ೩೨ ॥

॥ ಇತಿ ಸಾರಕಾಂಡಃ ॥

ಗಂಗಾಯಾತ್ರಾಸಮುದ್ಯೋಗಶ್ಶರಯೂಭೇದನಂ ತತಃ ।
ಮಯಾ ಸ್ವಬಾಣರೇಖಾ ಚ ಸೀತಾವಾಕ್ಯ ವಿಸರ್ಜನಂ ॥ ೩೩ ॥

ಕುಂಭೋದರಸ್ಯ ವಾಕ್ಯೇನ ಪೃಥ್ವೀಯಾತ್ರಾ ಮಯಾ ಕೃತಾ ।
ಕುಮಾರೀವರದಾನಂ ಚ ಸುರಭಿಃ ಕೇನ ಮೋರ್ಪಿತಾ ॥ ೩೪ ॥

---

೩೦. ಸೀತೆಯು ತಾನು ದಿವ್ಯವಾದ ಪ್ರಮಾಣದಿಂದ ಪಾತಿವ್ರತ್ಯವನ್ನು ತೋರಿಸುವುದು. ಆನಂತರ ಅಯೋಧ್ಯೆಗೆ ಗಮನವು. ರಣದೀಕ್ಷೆಯ ಸಮಾಪ್ತಿ. ಆನಂತರ ನನಗೆ ರಾಜ್ಯಾಭಿಷೇಕವು.

೩೧. ರಾವಣಾದಿಗಳ ಉತ್ಪತ್ತಿಯು. ಇಂದ್ರಜಿತುವಿನ ಪರಾಕ್ರಮವು. ರಾವಣನ ಮಾನಭಂಗವು. ವಾಲಿ ಮತ್ತು ಸುಗ್ರೀವರ ಜನ್ಮಕಥನ.

೩೨. ವಾಯುಪುತ್ರನ ಜನ್ಮಕಥನ. ಹನುಮಂತನಿಗೆ ವರದಾನವು. ವಾಯುಪುತ್ರನಾದ ಹನುಮಂತನಿಗೆ ಶಾಪವು ಬರುವಿಕೆ ಅಗಸ್ತ್ಯನು ಸ್ತುತಿಸಿ ಹೋಗುವುದು.

ಇಂತು ಸಾರಕಾಂಡದ ಸಂಕ್ಷಿಪ್ತ ವಿಷಯವು.

೩೩. ಗಂಗಾಯಾತ್ರೆಯ ಸಮುದ್ಯೋಗವು. ಸರಯೂ ಭೇದನವು. ನನ್ನ ಬಾಣದಿಂದ ರೆಖೆಯನ್ನು ಮಾಡಿದುದು. ಸೀತಾವಾಕ್ಯವು. ಜನಗಳ ತೊಂದರೆ.

೩೪. ಅಗಸ್ತ್ಯನ ಮಾತಿನಂತೆ ನಾನು ಪ್ರಪಂಚದ ಯಾತ್ರೆಯನ್ನು ಮಾಡಿದುದು. ಕನ್ಯಾಕುಮಾರಿಗೆ ವರದಾನವು. ಕಾಮಧೇನುವನ್ನು ಕೊಡುವುದು. ಶಿವನಿಂದ ಚಿಂತಾಮಣಿ ರತ್ನವು ಸಿಕ್ಕುವುದು. ಅಯೋಧ್ಯೆಗೆ ಹಿಂದಿರುಗುವುದು.

ಚಿಂತಾಮಣೇಶ್ಚಿನಾಲ್ಲಾಭಸ್ತತೋಽಯೋಧ್ಯಾಪ್ರವೇಶನಂ |

|| ಯಾತ್ರಾಕಾಂಡಃ || ೨ ||

ಆರಂಭೋ ವಾಜಿಮೇಧಸ್ಯ ಪೃಥ್ವ್ಯಾಂ ವಾಜೀ ವಿಮೋಚಿತಃ || ೩೫ ||

ತುರಗಾಯ ಸಸೈನ್ಯಾಯ ಮಾರ್ಗದಾನಂ ತು ಗಂಗಯಾ |
ಪೃಥ್ವೀಂ ಪ್ರದಕ್ಷಿಣಾಂ ಕೃತ್ವಾ ವಾಟೇಽಶ್ವಸ್ಯ ಪ್ರವೇಶನಂ || ೩೬ ||

ತಮಸಾತಟೆಶಾಲಾ ಚ ಕುಂಭೋದರಪ್ರದರ್ಶನಂ |
ಅಷ್ಟೋತ್ತರಶತಂ ನಾಮ್ನಾಂ ಮಮ ಸ್ತೋತ್ರಮುದೀರಿತಂ || ೩೭ ||

ದಿನಚರ್ಯಾಧ್ವಜಾರೋಪಾವ ವಭೃಥೋತ್ಸವೋ ಮಮ |
ಸೀತಾದಾನಂ ಚ ತನ್ಮುಕ್ತೀ ರಾಮತೀರ್ಥಾದಿವರ್ಣನಂ || ೩೮ ||

ತತೋ ಯಜ್ಞಸಮಾಪ್ತಿಶ್ಚ ದಶಯಜ್ಞಾ ವಿಶೇಷತಃ |

|| ಯಾಗಕಾಂಡಃ || ೩ ||

ತತೋ ಮಮ ಸ್ತವರಾಜಃ ಕ್ರೀಡಾಶಾಲಾಪ್ರವರ್ಣನಂ || ೩೯ ||

೩೫-೩೬ ಅಶ್ವಮೇಧಯಾಗಕ್ಕೆ ಪ್ರಾರಂಭ ಮಾಡುವುದು. ಕುದುರೆಯನ್ನು ಭೂಮಿಯಲ್ಲಿ ಬಿಡುವುದು. ಕುದುರೆಗೂ ಸೈನ್ಯಗಳಿಗೂ ಗಂಗೆಯು ಮಾರ್ಗವನ್ನು ಕೊಡುವುದು. ಕುದುರೆಯು ಮತ್ತೆ ಯಾಗಮಂಟಪಕ್ಕೆ ಬರುವುದು.

ಇದು ಯಾತ್ರಾಕಾಂಡದ ಸಂಕ್ಷಿಪ್ತ ವಿಷಯವು.

೩೭. ತಮಸಾನದಿಯ ತೀರದಲ್ಲಿ ಯಜ್ಞಶಾಲೆಯ ರಚನೆ, ಅಗಸ್ತ್ಯನ ದರ್ಶನವು, ಅಗಸ್ತ್ಯಮುನಿಯು ರಾಮನ ನೂರೆಂಟುನಾಮಗಳನ್ನು ಹೇಳುವುದು.

೩೮. ದಿನಚರ್ಯೆಯು, ಧ್ವಜಾರೋಪವು, ಅವಭೃತ ಉತ್ಸವವು, ಸೀತೆಯ ದಾನವು, ಅವಳನ್ನು ಮತ್ತೆ ಹಿಂದಿರುಗಿಕೊಡುವುದು, ರಾಮತೀರ್ಥವೇ ಮುಂತಾದುವುಗಳ ವರ್ಣನೆ.

೩೯. ಯಜ್ಞದ ಸಮಾಪ್ತಿ, ವಿಶೇಷವಾದ ಹತ್ತು ಯಾಗಗಳನ್ನು ರಾಮನು ಮಾಡುವುದು.

ಇದು ಯಾಗಕಾಂಡದ ಸೂಕ್ಷ್ಮ ಪರಿಚಯವು

ಅನಂತರ ರಾಮನ ಸ್ತವರಾಜವು, ಕ್ರೀಡೆಯ ಶಾಲೆಯೇ ಮುಂತಾದುವುಗಳ ವರ್ಣನೆ.

ಪಕ್ಷಿಣಾಂ ನವಕಂ ಸ್ತೋತ್ರಂ ಜಾನಕ್ಯಾವರ್ಣನಂ ಮಯಾ ।
ದೇಹರಾಮಾಯಣಂ ಪತ್ನ್ಯೈ ಮಯಾ ಕಥಿತಮುತ್ತಮಂ ॥ ೪೦ ॥

ದಿನಚರ್ಯಾಪುನರ್ಮೇ ಹಿ ಸೀತಾಲಂಕಾರವರ್ಣನಂ ।
ಪಕ್ವಾನ್ನಾನಾಂ ಚ ವಿಸ್ತಾರೋ ಜಲಕ್ರೀಡಾ ಚ ಸೀತಯಾ ॥ ೪೧ ॥

ಮಧ್ಯಾಹ್ನಿಕಂ ಭೋಜನಾದಿ ಮಮ ಕರ್ಮಪ್ರವರ್ಣನಂ ।
ದ್ವಿಜಪತ್ನ್ಯೈ ಭೂಷಣಾನಾಂ ದಾನಂ ಜನಕಜಾಕೃತಂ ॥ ೪೨ ॥

ರಾತ್ರೌ ನಾನಾಸ್ಥಲೇಷ್ವತ್ರ ಕ್ರೀಡಾಶ್ಚ ವಿವಿಧಾಃ ಸ್ತ್ರಿಯಾಃ ।
ರುಕ್ಮಷೋಡಶಮೂರ್ತೀನಾಂ ವ್ಯಾಸಾಗ್ರೇ ದಾನಮರ್ಪಿತಂ ॥ ೪೩ ॥

ತತೋ ನಿರ್ಜರಪತ್ನೀಭ್ಯೋ ವರದಾನಂ ಮಯಾ ಮುದಾ ।
ಗುಣವತ್ಯೈ ವರದಾನಂ ಪಿಂಗಳಾಯೈ ವರಾರ್ಪಣಂ ॥ ೪೪ ॥

ಸೀತಾಯಾಃ ಪ್ರತ್ಯಯಾರ್ಥಂ ಚ ದಿವ್ಯದಾನಂ ಮಯಾ ಮುದಾ ।
ಕುರುಕ್ಷೇತ್ರೇಗಸ್ತಿಪತ್ನ್ಯಾ ಸಂವಾದೇ ಜಾನಕೀಜಯಃ ॥ ೪೫ ॥

೪೦-೪೧. ಪಕ್ಷಿಗೀತನವರತ್ನವು, ಜಾನಕಿಯ ವರ್ಣನೆಯು, ದೇಹರಾಮಾಯಣ ವರ್ಣನೆಯು, ನನ್ನ ದಿನಚರ್ಯೆಗಳು, ಸೀತೆಯ ಅಲಂಕಾರ ವರ್ಣನೆಯು, ಪಕ್ವಾನ್ನಗಳ ವಿಸ್ತಾರವು, ಸೀತೆಯೊಡನೆ ನನ್ನ ಜಲಕ್ರೀಡೆಯ ವಿಷಯವು.

೪೨. ಮಾಧ್ಯಾಹ್ನಿಕ, ಭೋಜನ ಮುಂತಾದುವುಗಳ ವರ್ಣನೆಯು, ಜನಕಜೆಯು ಬ್ರಾಹ್ಮಣಪತ್ನಿಯರಿಗೆ ಅಲಂಕಾರದಾನವನ್ನು ಮಾಡಿದುದು.

೪೩. ರಾತ್ರಿಯಲ್ಲಿ ಸೀತೆಯೊಡನೆ ಅನೇಕ ಕಡೆಗಳಲ್ಲಿ ಕ್ರೀಡಿಸಿದುದರ ವರ್ಣನೆಯು, ಹದಿನಾರು ಚಿನ್ನದ ಪ್ರತಿಮೆಗಳ ದಾನವನ್ನು ವ್ಯಾಸನ ಎದುರಿಗೆ ಮಾಡಿದುದು.

೪೪ ದೇವತಾಸ್ತ್ರೀಯರಿಗೆ ವರವನ್ನು ಕೊಟ್ಟುದು, ಗುಣವತಿಗೆ ವರದಾನವು, ಅಂತೆಯೇ ಪಿಂಗಳೆಗೆ ವರದಾನ ಮಾಡಿದುದು.

೪೫. ಸೀತೆಗೆ ನಂಬಿಕೆಯುಂಟಾಗಲು ನಾನು ದಿವ್ಯವಾದ ಪ್ರಮಾಣಗಳನ್ನು ಮಾಡಿದುದು, ಕುರುಕ್ಷೇತ್ರದಲ್ಲಿ ಅಗಸ್ತ್ಯನ ಹೆಂಡತಿಗೂ, ಸೀತೆಗೂ ಸಂವಾದ ನಡೆದು ಜಾನಕಿಯು ಜಯಿಸಿದುದು.

॥ ವಿಲಾಸಕಾಂಡಃ ॥ ೪ ॥

ಸೀತಾಯಾ ದೋಹದಾರ್ಥಂ ಹಿ ಕ್ರೀಡಾರಾಮಾದಿಷು ಕೃತಾ ।
ಸೀಮಂತೋನ್ನಯನಾದೀನಿ ನಾನಾಕರ್ಮಾಣಿ ವೈ ತತಃ ॥ ೪೬ ॥

ವಿಸರ್ಜಿತಶ್ಚ ಜನಕೋ ವಾಲ್ಮೀಕೇರಾಶ್ರಮಂ ಮಯಾ ।
ಸೀತಾಯಾ ದ್ವೇ ನಿಜೇ ರೂಪೇ ಕೃತೇ ಮದ್ವಾಕ್ಯಗೌರವಾತ್ ॥ ೪೭ ॥

ಅಂಗುಷ್ಠಯೋಗ್ಯೋ ಲಿಖಿತಃ ಕೈಕೇಯ್ಯಾ ರಾವಣೋ ಮಹಾನ್ ।
ಲೋಕಾನಾಂ ರಜಕಸ್ಯಾಪಿ ಹ್ಯಪವಾದಾದ್ವಿದೇಹಜಾ ॥ ೪೮ ॥

ಮಯಾ ರಜಸ್ತಮೋಯುಕ್ತಾ ತ್ಯಕ್ತಾ ನೀತಶ್ಚ ತದ್ಭುಜಃ ।
ಗುಪ್ತರೂಪೇಣ ಪುತ್ರಸ್ಯ ಕೃತಂ ಗತ್ವಾ ತು ಜಾತಕಂ ॥ ೪೯ ॥

ಶತಯಜ್ಞಾ ಮಯಾ ಗತ್ವಾ ಕೃತಾಃ ಶ್ರೀಜಾಹ್ನವೀತಟೇ ।
ವಾಲ್ಮೀಕಿನಾ ಲವಾನಾಂ ಚ ಲವಃ ಪುತ್ರಃ ಕೃತಃ ಪರಃ ॥ ೫೦ ॥

ವಿಲಾಸಕಾಂಡ ಸಂಕ್ಷೇಪವಿದು.

೪೬. ಸೀತೆಯ ಬಸುರಿನ ಬಯಕೆಯಂತೆ ಅವಳೊಡನೆ ವನಗಳಲ್ಲಿ ವಿಹರಿಸಿದುದು, ಅನಂತರ ಸೀತೆಗೆ ಸೀಮಂತೋನ್ನಯನಾದಿಕರ್ಮಗಳನ್ನು ನೆರವೇರಿಸಿದುದು.

೪೭. ಜನಕರಾಜನನ್ನು ವಾಲ್ಮೀಕಿಯ ಆಶ್ರಮಕ್ಕೆ ಕಳುಹಿಸಿದುದು, ಸೀತೆಯು ನನ್ನ ಮಾತಿನ ಗೌರವಕ್ಕೆ ಎರಡು ಆಕಾರಗಳನ್ನು ಹೊಂದಿದುದು.

೪೮. ಸೀತೆಯು ರಾವಣನ ಅಂಗುಷ್ಠವನ್ನು ಬರೆಯಲು ಅದನ್ನು ಅನುಸರಿಸಿ ಅದಕ್ಕೆ ಯೋಗ್ಯವಾಗಿರುವಂತೆ ರಾವಣನನ್ನು ಕೈಕೇಯಿಯು ಬರೆದುದು. ಲೋಕಾಪವಾದ ಭಯದಿಂದ ಜನಕಜೆಯನ್ನು ಬಿಟ್ಟುದು.

೪೯. ರಜಸ್ತಮೋಯುಕ್ತಳಾದ ಸೀತೆಯನ್ನು ನಾನು ಬಿಟ್ಟು ಕೊಲ್ಲಿಸಿ ಆಕೆಯ ತೋಳನ್ನು ತರಿಸಿದುದು, ಗುಟ್ಟಾಗಿ ಹೋಗಿ ನಾನು ಮಕ್ಕಳಿಗೆ ಜಾತಕರ್ಮವನ್ನು ಮಾಡಿ ನೋಡಿಕೊಂಡು ಬರುವುದು.

೫೦. ಗಂಗಾದಡದಲ್ಲಿ ನಾನು ನೂರು ಯಜ್ಞಗಳನ್ನು ಮಾಡಿದುದು, ವಾಲ್ಮೀಕಿಯು ಲವವೆಂಬ ಹುಲ್ಲನ್ನು ತೆಗೆದುಕೊಂಡು ಲವನೆಂಬ ಮಗುವನ್ನು ಮಾಡಿದುದು.

ತಯೋಃ ಕೃತಂ ತು ಮುನಿನಾ ರಾಮರಕ್ಷಾಭಿಮಂತ್ರಣಂ ।
ಕಮಲಾನಾಂ ಚ ಹರಣೇ ಲವಸ್ಯ ವಿಜಯೋ ಮಹಾನ್ ॥ ೫೧ ॥

ರಾಮಾಯಣಸ್ಯ ಶ್ರವಣಂ ಪುತ್ರಾಸ್ಯಾಭ್ಯಾಂ ಮಯಾಧ್ವರೇ ।
ಯುದ್ಧಂ ಲವಕೃತಂ ಚಾಥ ಜಲೈಸ್ತಸ್ಯಾಭಿಷೇಚನಂ ॥ ೫೨ ॥

ಮಯಾ ಯುದ್ಧಂ ಕುಶೇನಾಥ ಸೀತಾಯಾಶ್ಯಪಥಸ್ತತಃ ।
ಸೀತಾಯಾ ಗ್ರಹಣಂ ಚಾಪಿ ವಿಶಂತ್ಯಾ ಭೂತಲಂ ಪುನಃ ॥ ೫೩ ॥

ತತೋ ಯಜ್ಞಸಮಾಪ್ತಿಶ್ಚ ಬಂಧುಪುತ್ರಜನಿಸ್ತತಃ ।
ಬಾಲಕ್ರೀಡೋಪನಯನಂ ವೇದಾನಾಂ ಗ್ರಹಣಂ ಕ್ರಮಾತ್ ॥ ೫೪ ॥

ಬಾಲಾನಾಂ ಶುಭಚಿಹ್ನಾನಿ ಸೀತಯಾ ಪುತ್ರಲಾಲನಂ ।
ಸರ್ವೇಷಾಂ ವ್ರತಬಂಧಾಶ್ಚ ತೇಷಾಂ ಯಾತ್ರಾಸ್ತತಃ ಪರಂ ॥ ೫೫ ॥

---

೫೧. ಲವಕುಶರಿಗೆ ರಾಮರಕ್ಷೆಯಿಂದ ಅಭಿಮಂತ್ರಣ ಮಾಡುವುದು, ಜಾನಕಿಗೆ ಕಮಲಗಳನ್ನು ಲವಕುಶರು ತೆಗೆದುಕೊಂಡುಹೋಗಿ ಕೊಡುವುದು, ಆಗ ಲವನ ವಿಜಯವು.

೫೨. ಮಕ್ಕಳ ಬಾಯಿಂದ ನಾನು ರಾಮಾಯಣವನ್ನು ಯಾಗದಲ್ಲಿ ಕೇಳುವುದು, ಲವನು ಯುದ್ಧಮಾಡುವುದು, ನೀರನ್ನು ಚಿಮುಕಿಸಿ ಲವನನ್ನು ಬದುಕಿಸುವುದು.

೫೩. ನಾನು ಕುಶನೊಡನೆ ಯುದ್ಧಮಾಡುವುದು, ಅನಂತರ ಸೀತೆಯು ಶಪಥಮಾಡುವುದು, ಸೀತೆಯು ಭೂಮಿಯೊಳಕ್ಕೆ ಹೋಗುತ್ತಿರಲು ಆಕೆಯನ್ನು ತಡೆದು ಪರಿಗ್ರಹಿಸುವುದು.

೫೪. ಅನಂತರ ಯಜ್ಞವನ್ನು ಮುಗಿಸುವುದು, ತಮ್ಮಂದಿರಿಗೆ ಮಕ್ಕಳಾಗುವಿಕೆ, ಅವರ ಬಾಲಕ್ರೀಡೆ, ಅವರ ಉಪನಯನ, ಅನಂತರ ವೇದಾಭ್ಯಾಸ.

೫೫ ಬಾಲರಿಗಿರುವ ಶುಭಚಿಹ್ನೆಗಳ ವರ್ಣನೆ, ಸೀತೆಯು ಮಕ್ಕಳನ್ನು ಆಡಿಸುವುದು, ಎಲ್ಲರಿಗೂ ಸ್ನಾತಕವ್ರತವಾಗುವುದು, ಅನಂತರ ಅವರು ಯಾತ್ರೆ ಹೊರಡುವುದು.

|| ಜನ್ಮಕಾಂಡಃ || ೫ ||

ಭೂರಿಕೀರ್ತೇಃ ಪತ್ರಿಕಯಾ ತತ್ಪುರಂ ಗಮನಂ ಮಮ ।
ವ್ಯಗ್ರತಾಸೀತ್ತತ್ಪುರಸ್ತ್ರೀಣಾಂ ದರ್ಶನಾರ್ಥಂ ತದಾ ಮಮ ॥ ೫೬ ॥

ವಂದಿತೋಽಹಂ ನೃಪೈಸ್ಸರ್ವೈಸ್ತದಾ ರಾಜಸಭಾಂಗಣೇ ।
ಕ್ರಮೇಣ ವರ್ಣನಂ ಚಾಪಿ ಪಾರ್ಥಿವಾನಾಂ ಹಿ ನಂದಯಾ ॥ ೫೭ ॥

ಕುಶಕಂಠೇ ಚಂಪಿಕಯಾ ರತ್ನಮಾಲಾವಿಸರ್ಜನಂ ।
ಕ್ರಮೇಣ ವರ್ಣನಂ ಚಾಥ ಪಾರ್ಥಿವಾನಾಂ ಸುನಂದಯಾ ॥ ೫೮ ॥

ಸುಮತ್ಯಾ ರತ್ನಮಾಲಾಯಾಃ ಲವಕಂಠೇ ವಿಸರ್ಜನಂ ।
ಉತ್ಸಾಹೋಽಥ ವಿವಾಹಸ್ಯ ನಾನಾಸಮ್ಮಾನಪೂರ್ವಕಃ ॥ ೫೯ ॥

ಗಮನಂ ಹಿ ಸ್ನುಷಾಭ್ಯಾಂ ಚ ಸೀತಯಾ ಸ್ವಪುರೀಂ ಮಮ ।
ನಿಗ್ರಹೋ ಜಲದೇವೀನಾಂ ಬಾಲಕಾನಾಂ ಪ್ರಮೋಚನಂ ॥ ೬೦ ॥

ಇಂತು ಜನ್ಮಕಾಂಡದ ಸಂಕ್ಷೇಪ ಚರಿತ್ರೆಯು.

೫೬. ಭೂರಿಕೀರ್ತಿಯು ಪತ್ರಿಕೆಯಂತೆ ಅವನ ದೇಶಕ್ಕೆ ಹೋಗುವುದು, ಆಗ ಆ ದೇಶದ ಸ್ತ್ರೀಯರು ನನ್ನನ್ನು ನೋಡಬೇಕೆಂದು ತವಕಪಟ್ಟುದು.

೫೭. ಎಲ್ಲಾ ರಾಜರೂ ಆ ಸಭೆಯಲ್ಲಿ ನನಗೆ ನಮಸ್ಕರಿಸುವುದು, ನಂದೆಯೆಂಬ ದಾದಿಯು ಕ್ರಮವಾಗಿ ಎಲ್ಲರನ್ನೂ ವರ್ಣಿಸುತ್ತ ಬರುವುದು.

೫೮. ಚಂಪಿಕೆಯು ಕುಶನ ಕತ್ತಿಗೆ ಮಾಲಿಕೆಯನ್ನು ಹಾಕುವುದು, ಸುನಂದೆಯು ರಾಜರುಗಳನ್ನು ಕ್ರಮವಾಗಿ ವರ್ಣಿಸುತ್ತ ಬರುವುದು.

೫೯. ಸುಮತಿಯು ರತ್ನಮಾಲೆಯನ್ನು ಲವನ ಕತ್ತಿಗೆ ಹಾಕುವುದು, ಅನಂತರ ಬಹುವಾದ ಗೌರವದಿಂದ ವಿವಾಹದ ಉತ್ಸಾಹಗಳು.

೬೦. ಅನಂತರ ನಾನು ಹೆಂಡತಿಜೊಡನೆಯೂ, ಸೊಸೆಯರೊಡನೆಯೂ ನನ್ನ ಪಟ್ಟಣಕ್ಕೆ ಬರುವುದು, ಜಲದೇವತೆಗಳ ನಿಗ್ರಹವು, ಬಾಲಕರನ್ನು ಬಿಡುಗಡೆ ಮಾಡುವುದು.

ಸರ್ವೇಷಾಂ ಚ ವಿವಾಹಾಶ್ಚ ಪೃಥಕ್ ಪುತ್ರಗೃಹಾಣಿ ಚ ।
ಕಾಂತಿಪುರ್ಯಾಶ್ಚ ಮದನಸುಂದರೀಹರಣಂ ತತಃ ॥ ೬೧ ॥

ಯೂಪಕೇತೋರ್ವಿವಾಹಶ್ಚ ಪೌತ್ರಾಣಾಂ ಗಣನಾ ತತಃ ।
ಪೌತ್ರೀಣಾಂ ಗಣನಾ ಚಾಪಿ ಸರ್ವೈಃ ಸೌಖ್ಯಂ ತತೋ ಮಮ ॥ ೬೨ ॥

॥ ವಿವಾಹಕಾಂಡಃ ॥

ಸಹಸ್ರನಾಮಸ್ತೋತ್ರಂ ಮೇ ಕಲ್ಪವೃಕ್ಷಸುರದ್ರುಮೌ ।
ಸಮಾನೀತೌ ಮಯಾಸ್ವರ್ಗಾದ್ಭುವಂ ದುರ್ವಾಸ ಈಕ್ಷಣಂ ॥ ೬೩ ॥

ಮತ್ಕೃಷ್ಣೋಪಾಸಕಯೋಶ್ಚ ಸಂವಾದಶ್ಚ ಪರಸ್ಪರಂ ।
ಕಾಕಾಯ ವರದಾನಂ ಚ ಶತಸ್ತ್ರೀಣಾಂ ವರಾರ್ಪಣಂ ॥ ೬೪ ॥

ಸ್ಥಾನಾನ್ಯುಕ್ತಾನಿ ನಿದ್ರಾಯೈ ಕೃತಃ ಕ್ರೋಧೋನುಗಾದಿಷು ।
ಶತಶೀರ್ಷ್ಣೋ ರಾವಣಸ್ಯ ಪೌಂಡ್ರಕಸ್ಯ ವಧೋಽಪಿ ಚ ॥ ೬೫ ॥

---

೬೧. ತಮ್ಮಂದಿರ ಮಕ್ಕಳಿಗೆಲ್ಲರಿಗೂ ಮದುವೆಯಾಗುವುದು, ಆ ಮಕ್ಕಳಿಗೆಲ್ಲರಿಗೂ ಬೇರೆಬೇರೆ ಮನೆಗಳನ್ನು ಕಟ್ಟಿಸಿಕೊಡುವುದು, ಕಾಂತಿಪುರಿಯಿಂದ ಮದನಸುಂದರಿಯ ಅಪಹರಣವು.

೬೨. ಯೂಪಕೇತುವಿನ ಮದುವೆ, ಮೊಮ್ಮಕ್ಕಳ ಲೆಕ್ಕಾಚಾರವೂ, ಹೆಣ್ಣು ಮೊಮ್ಮಕ್ಕಳ ಲೆಕ್ಕವೂ ನಡೆಯುವುದು, ಅವರೆಲ್ಲರೊಡನೆಯೂ ನಾನು ಸೌಖ್ಯವಾಗಿರುವುದು.

ಇದು ವಿವಾಹಕಾಂಡದ ಸಂಕ್ಷೇಪ ವರ್ಣನೆಯು

೬೩. ಸಹಸ್ರನಾಮದ ಸ್ತೋತ್ರವು, ಸ್ವರ್ಗದಿಂದ ಕಲ್ಪವೃಕ್ಷ, ಪಾರಿಜಾತಗಳನ್ನು ತಂದು ರಕ್ಷಿಸುವುದು, ದೂರ್ವಾಸದರ್ಶನವು.

೬೪. ರಾಮೋಪಾಸಕ, ಕೃಷ್ಣೋಪಾಸಕರಿಗೆ ಸಂವಾದ ನಡೆಯುವುದು, ಕಾಗೆಗೆ ವರದಾನ, ನೂರುಜನ ಸ್ತ್ರೀಯರಿಗೆ ವರವನ್ನು ಕೊಟ್ಟದು.

೬೫. ನಿದ್ರಾದೇವಿಗೆ ಸ್ಥಾನಗಳು, ಅನುಗರಲ್ಲಿ ಕೋಪಮಾಡುವುದು, ಶತಕಂಠರಾವಣನ ವಧೆಯು, ಪೌಂಡ್ರಕನ ವಧೆಯು.

ಸೀತಾಯೈ ವಿರಹೋ ಜಾತೋ ಹತಶ್ಚ ಮೂಲಕಾಸುರಃ ।
ಸೀತಾಯಾಶ್ಚ ಸ್ತುತಿಃ ಕೇನ ಲಂಕಾಯಾಂ ಚ ಪ್ರವೇಶನಂ ॥ ೧೬ ॥

ಲಂಕಾಯಾಃ ಪರಿತಶ್ಚಾಪಂ ಭ್ರಮಿತ್ವಾ ಗಮನಂ ಪುರಿ ।
ಲಾಭಃ ಕಪಿಲವಾರಾಹಮೂರ್ತೇರ್ದತ್ವಾ ಚ ಬಂಧವೇ ॥ ೧೭ ॥

ಲವಣಾಸುರಘಾತಶ್ಚ ಮಧುರಾಯಾಂ ನಿವೇಶನಂ ।
ಪುತ್ರಾಣಾಂ ರಾಜ್ಯಭಾಗಾಶ್ಚ ಸಪ್ತದ್ವೀಪಜಯೋ ಮಯಾ ॥ ೧೮ ॥

ಯತಿಶೂದ್ರಗೃಧ್ರಶಿಕ್ಷಾ ಸಪ್ತಪ್ರೇತಸುಜೀವನಂ ।
ಶೂದ್ರಾಣಾಂ ವರದಾನಂ ಚ ದ್ವಿಜಸ್ತ್ರೀಣಾಂ ವರಾರ್ಪಣಂ ॥ ೧೯ ॥

ಷೋಡಶಸ್ತ್ರೀಸಹಸ್ರಾಣಾಂ ವರಾಶ್ಚ ಮೃಗಯಾ ಮಮ ।
ಕಾಲಿಂದ್ಯೈ ವರದಾನಂ ಚ ಪಿಪ್ಪಲಂ ಛೇತ್ತುಮುದ್ಯಮಃ ॥ ೨೦ ॥

---

೧೬. ಸೀತೆಯ ವಿರಹ, ಮೂಲಿಕಾಸುರ ಮರ್ದನ, ಸೀತೆಯ ಸ್ತುತಿಯು. ಲಂಕೆಗೆ ಸೀತೆಯ ಪ್ರವೇಶವು.

೧೭. ಲಂಕೆಯ ಸುತ್ತಲೂ ಬಿಲ್ಲಿನಿಂದ ಗೀಟನ್ನು ಮಾಡಿ ಅಯೋಧ್ಯೆಗೆ ಹೋಗುವುದು. ಕಪಿಲವರಾಹಮೂರ್ತಿಯು ದೊರಕುವುದು, ಅದನ್ನು ತಮ್ಮನಿಗೆ ಕೊಡುವುದು.

೧೮. ಲವಣಾಸುರನ ಮರ್ದನವು, ಮಧುರೆಯಲ್ಲಿ ನೆಲಸುವುದು, ಮಕ್ಕಳಿಗೆ ರಾಜ್ಯವನ್ನು ಭಾಗಮಾಡಿಕೊಡುವಿಕೆ, ಸಪ್ತದ್ವೀಪಗಳ ಜಯವು.

೧೯. ಯತಿ, ಶೂದ್ರ, ಗೃಧ್ರಗಳಿಗೆ ಬುದ್ಧಿ ಕಲಿಸಿದುದು, ಏಳುಪ್ರೇತಗಳನ್ನು ಜೀವಿಸಿದುದು, ಶೂದ್ರರಿಗೆ ವರದಾನಮಾಡಿರುವುದು, ಬ್ರಾಹ್ಮಣಸ್ತ್ರೀಯರಿಗೆ ವರವನ್ನು ಕೊಟ್ಟುದು.

೨೦. ಹದಿನಾರುಸಾವಿರಜನ ಹೆಂಗಸರಿಗೆ ವರವನ್ನು ಕೊಟ್ಟುದು, ಬೇಟೆಯಾಡುವುದು, ಕಾಳಿಂದೀನದಿಗೆ ವರದಾನವು, ಅರಳಿಯಮರವನ್ನು ಕಡಿಯಲು ಪ್ರಯತ್ನಪಡುವಿಕೆಯು.

॥ ರಾಜ್ಯಕಾಂಡ ಪೂರ್ವಾರ್ಧಃ ॥

ವಾಲ್ಮೀಕೇರ್ವಚನಾದ್ಧಾಸ್ಯಂ ಕರ್ತುಮಾಜ್ಞಾಪಿತಂ ಜನೈಃ ।
ಶಾಪೋಽಶ್ವಿನೀಕುಮಾರಾಭ್ಯಾಂ ಗಣಯೋಶ್ಚ ಪರಸ್ಪರಂ ॥ ೭೧ ॥

ಬ್ರಹ್ಮಣಾ ಮೇಽವತಾರಾಣಾಂ ವರ್ಣನಂ ಚ ಪೃಥಕ್ಕೃತಂ ।
ಜನ್ಮತ್ರಯಂ ಚ ವಾಲ್ಮೀಕೇರ್ವರದಾನಂಸ್ಮೃತಿರ್ಮಮ ॥ ೭೨ ॥

ಮದ್ರಾಜ್ಯವರ್ಣನಂ ಚಾಥ ಹೇಮಾಯಾಶ್ಚ ಸ್ವಯಂವರಂ ।
ಚಿತ್ರಾಂಗದೇನ ಸಂಗ್ರಾಮಃ ಕಥಾ ಕಂಕಣಯೋಸ್ತತಃ ॥ ೭೩ ॥

ಲವಸ್ಯ ಜೀವದಾನಂ ಚ ರಾಮಮುದ್ರಾಸವಿಸ್ತರಾ ।
ರಾಮನಾಥಪುರಂ ದಾನಂ ವಿಪ್ರೈರ್ದೃಷ್ಟಶ್ಚ ಮಾರುತಿಃ ॥ ೭೪ ॥

ದಿನಚರ್ಯಾ ಮಮ ತತಃ ಸ್ವಲ್ಪಸಂತತಿಕಾರಣಂ ।
ಪತ್ರಪಾರ್ಶ್ವೇ ಶ್ರೀರಾಮೇತಿ ಲೇಖನಸ್ಯ ಚ ಕಾರಣಂ ॥ ೭೫ ॥

ರಾಜ್ಯಕಾಂಡದ ಪೂರ್ವಾರ್ಧದ ಸಂಕ್ಷೇಪ ವಿವರಣೆ.

೭೧. ವಾಲ್ಮೀಕಿಯ ಮಾತಿನಂತೆ ಜನರೆಲ್ಲರೂ ಹಿಂದಿನಹಾಗೆ ನಗುವಂತೆ ಅಪ್ಪಣೆಮಾಡಿದುದು, ಅಶ್ವಿನೀಕುಮಾರರಿಗೆ ಶಾಪವು, ಗಣಗಳಿಗೆ ಶಾಪವು.

೭೨. ಬ್ರಹ್ಮನು ನನ್ನ ಅವತಾರಗಳ ವರ್ಣನೆಯನ್ನು ಬೇರೆಬೇರೆಯಾಗಿ ಮಾಡಿದುದು, ವಾಲ್ಮೀಕಿಯ ಮೂರುಜನ್ಮಗಳ ಕಥನ, ನನ್ನ ಸ್ತುತಿ.

೭೩. ನನ್ನ ರಾಜ್ಯದ ವರ್ಣನೆಯು, ಹೇಮಾಸ್ವಯಂವರವು, ಚಿತ್ರಾಂಗದ ನೊಡನೆ ಯುದ್ಧ, ಕಂಕಣಗಳ ಕಥೆ.

೭೪. ಲವನಿಗೆ ಜೀವದಾನ, ರಾಮಮುದ್ರೆಯ ವಿವರಣೆ, ರಾಮನಾಥ ಪುರದ ದಾನವು, ವಿಪ್ರರಿಗೆ ಮಾರುತಿಯು ದರ್ಶನವನ್ನು ಕೊಡುವುದು.

೭೫. ರಾಮನ ದಿನಚರ್ಯೆಯು, ಸ್ವಲ್ಪವಾದ ಸಂತತಿಗೆ ಕಾರಣವು, ಕಾಗದ ಗಳಮೇಲೆ ಪಕ್ಕದಲ್ಲಿ ಶ್ರೀರಾಮ ಎಂದು ಬರೆಯುಲು ಕಾರಣನಿರೂಪಣವು.

ಸುಗುಣಾಯೈ ವರದಾನಂ ದ್ವೇ ರೂಪೇ ಚ ಮಯಾ ಧೃತೇ ।
ಕರ್ಣಧ್ವನೇ ಕಥಾ ಚಾಪಿ ಮೇಽವತಾರೇಷ್ವಯಂ ವರಃ ॥ ೭೬ ॥

ತುಲಸೀಪತ್ರಸಂಧಿಶ್ಚ ರಾಮಾಯಣಶ್ರುತೇಃ ಫಲಂ ।
ಸುಮಂತ್ರಜೀವದಾನಂ ಚ ಸಂಗ್ರಾಮಶ್ಚ ಯಮೇನ ಹಿ ॥ ೭೭ ॥

ಸಪ್ತದ್ವೀಪೇಷು ಸರ್ವತ್ರ ಧರ್ಮಶಿಕ್ಷಾ ಮಯಾ ಕೃತಾ ।

॥ ಉತ್ತರರಾಜ್ಯಕಾಂಡಃ ॥

ನಾರದೋಕ್ತಂ ಶತಶ್ಲೋಕೈಶ್ಚರಿತಂ ಮಮ ಪಾವನಂ ॥ ೭೮ ॥

ಪೌರಾಣಾಮುಪದೇಶಶ್ಚ ಮನ್ಮಾತೄಣಾಂ ಪರಾಸ್ಯತಃ ।
ಮನಃಪೂಜಾ ಬಹಿಃಪೂಜಾ ನವರೂಪಧರಸ್ತ್ವಹಂ ॥ ೭೯ ॥

ರಾಮಲಿಂಗತೋಭದ್ರಾಣಾಂ ನಾನಾಭೇದಾ ವಿಚಿತ್ರತಾಃ ।
ಮಾಸನವಮ್ಯಾ ವಿಸ್ತಾರ ಕಥಾ ಸ್ತ್ರೀರಾಜ್ಯಸಂಭವಾ ॥ ೮೦ ॥

---

೭೬. ಸುಗುಣೆಗೆ ವರವನ್ನು ಕೊಡುವುದು, ನಾನು ಎರಡು ರೂಪಗಳನ್ನು ಧರಿಸುವುದು, ಕರ್ಣಧ್ವನಿಗೆ ಕಥೆ, ನನ್ನ ಅವತಾರಗಳಲ್ಲಿ ರಾಮಾವತಾರವೇ ಶ್ರೇಷ್ಠ ವೆಂಬ ವಿಷಯು

೭೭. ತುಲಸಿಯು ಪತ್ರವನ್ನು ಸೇರಿಸಿದುದು, ರಾಮಾಯಣವನ್ನು ಕೇಳಿದರೆ ಬರುವ ಫಲದ ವಿಷಯು, ಸುಮಂತ್ರನನ್ನು ಬದುಕಿಸಿದುದು, ಯಮನೊಡನೆಯುದ್ಧ.

೭೮. ಸಪ್ತದ್ವೀಪಗಳಲ್ಲಿಯೂ ಧರ್ಮ ನೆಲಸುವಂತೆ ಮಾಡಿದುದು.

ಉತ್ತರಾರ್ಧ ರಾಜ್ಯಕಾಂಡದ ಸಂಕ್ಷೇಪ ವಿವರಣೆ.

ನಾರದನು ನೂರುಶ್ಲೋಕಗಳಿಂದ ನನ್ನ ಪಾವನವಾದಚರಿತ್ರೆಯನ್ನು ಹೇಳುವುದು.

೭೯. ಪೌರರಿಗೆ ಉಪದೇಶವು, ನನ್ನ ತಾಯಿಯರಿಗೆ ಪರರ ಮುಖದಿಂದ ಉಪದೇಶಮಾಡಿಸಿದುದು, ಮಾನಸಪೂಜೆ ಅಂತೆಯೇ ಬಹಿಃಪೂಜೆಗಳ ವಿವರಣೆ, ನಾನು ಒಂಭತ್ತು ರೂಪಗಳನ್ನು ಧರಿಸಿದುದು

೮೦. ರಾಮಲಿಂಗತೋಭದ್ರಗಳ ವಿವರಣೆ, ಅವಕ್ಕೆ ನಾನಾಬಗೆಯ ಚಿತ್ರಗಳು, ಮಾಸನವಮಿಯ ವಿಸ್ತಾರ ಕಥನವು, ಸ್ತ್ರೀರಾಜ್ಯದಲ್ಲಿ ಉಂಟಾದ ಕಥೆಯ ವಿಚಾರ.

ಮಮ ನಾಮಲೇಖನಸ್ಯೋದ್ಯಾಪನಂ ದಾನವಿಸ್ತರಃ ।
ಗೌರೀವ್ರತಸ್ಯ ವಿಸ್ತಾರೋ ದೋಳಕೇ ಮಮಪೂಜನಂ ॥ ೮೧ ॥

ನವಮ್ಯಾಂ ಮೂರ್ತಿದಾನಂ ಚ ದಮನೋತ್ಸವವಿಸ್ತರಃ ।
ಕಾಮ್ಯದೈವತವಿಸ್ತಾರೋ ರಕಾರಾದ್ಯೇ ವರೋ ಗುಣಃ ॥ ೮೨ ॥

ಮಮನಾಮ್ನಶ್ಚ ಮಹಿಮಾ ಮನ್ನಾಮಾರ್ಥ ಉದಾಹೃತಃ ।
ಚೈತ್ರವ್ರತಸ್ಯ ವಿಸ್ತಾರೋ ರಾಕ್ಷಸಾದಿಗತಿಃ ಸ್ಮೃತಾ ॥ ೮೩ ॥

ಅದ್ವೈತಂ ದರ್ಶಿತಂ ಲೋಕಾನ್ನಾರೀಣಾಂ ಚ ವರಾರ್ಪಣಂ ।
ಮನ್ಮುದ್ರಾವಸ್ತ್ರಮಹಿಮಾ ಕವಚಂ ಮೇ ಹನೂಮತಃ ॥ ೮೪ ॥

ಸೀತಾಯಾ ಲಕ್ಷ್ಮಣಾದೀನಾಂ ಕವಚಾನಿ ಪೃಥಕ್ಪೃಥಕ್ ।
ಸೀತಲಾವ್ರತಮಾಹಾತ್ಮ್ಯಂ ತಸ್ಯ ಚೋದ್ಯಾಪನಂ ತಥಾ ॥ ೮೫ ॥

---

೮೧. ನನ್ನ ನಾಮವನ್ನು ಬರೆಯುವುದು, ಅದರ ವಿಸ್ತಾರ, ಅದಕ್ಕೆ ದಾನ, ಗೌರೀವ್ರತದ ವಿಸ್ತಾರವು, ಡೋಲಕೆಯಲ್ಲಿ ಶ್ರೀರಾಮನನ್ನು ಇಟ್ಟು ಪೂಜಿಸುವಿಕೆ.

೮೨. ನವಮಿಯ ದಿವಸ ಮೂರ್ತಿದಾನಮಾಡುವುದು, ದಮನೋತ್ಸವದ ವಿಸ್ತಾರವು, ಕಾಮ್ಯದೈವದ ವಿಸ್ತಾರವು, ರೇಫದ ಮಹಿಮೆ.

೮೩. ರಾಮನಾಮದ ಮಹಿಮೆ, ರಾಮನಾಮದ ಅರ್ಥವಿವರಣೆ, ಚೈತ್ರ ವ್ರತದ ವಿಸ್ತಾರವು, ರಾಕ್ಷಸರೇ ಮುಂತಾದವರಿಗೆ ಗತಿಬಂದುದು.

೮೪. ಅದ್ವೈತವನ್ನು ತೋರಿಸಿದುದು, ನಾರಿಯರಿಗೆ ವರವನ್ನುಕೊಟ್ಟುದು. ನನ್ನ ಮುದ್ರೆಯುಳ್ಳ ವಸ್ತ್ರದ ಮಹಿಮೆ, ಹನುಮಂತನ ಮತ್ತು ನನ್ನ ಕವಚಗಳು, ಅವುಗಳ ಮಹಿಮೆ.

೮೫. ಸೀತೆ, ಲಕ್ಷ್ಮಣ, ಭರತ, ಶತ್ರುಘ್ನರ, ಕವಚಗಳನ್ನು ಬೇರೆ ಬೇರೆಯಾಗಿ ಹೇಳುವಿಕೆ. ಶೀತಲಾ ವ್ರತದ ಮಹಿಮೆ. ಸೀತಳಾವ್ರತದ ಉದ್ಯಾಪನೆ.

ರಮಾನಾಮತೋಭದ್ರಂ ಚ ಮಂತ್ರಾಶ್ಚ ಕೀರ್ತನಾಯ ಚ ।
ಪತಾಕಾರೋಪಣಂ ನಾಮ ವ್ರತಂ ಮಾರುತಿತೋಷದಂ ॥ ೮೬ ॥

ಮಯೋಪದಿಷ್ಟಮೋತತ್ರೇ ಸಾರರಾಮಾಯಣಂ ತ್ವಪಿ ।
ಹನೂಮತಾ ಶರಸೇತೋರರ್ಜುನಸ್ಯಾತ್ರ ಖಂಡನಂ ॥ ೮೭ ॥

॥ ಮನೋಹರಕಾಂಡಃ ॥

ವಾಲ್ಮೀಕಿನಾ ಸೋಮವಂಶನೃಪವೃತ್ತನಿವೇದನಂ ।
ಪುತ್ರಯೋರಭಿಷೇಕಶ್ಚ ಪ್ರಸ್ಥಾನಂ ಹಸ್ತಿನಾಪುರಂ ॥ ೮೮ ॥

ತತೋಮಹಾನ್ ಸಂಗರಶ್ಚ ಪುತ್ರಯೋಶ್ಚ ಜಯೋ ಮಮ ।
ಬ್ರಹ್ಮಣಾ ಪ್ರಾರ್ಥನಾ ಮೇತ್ರ ವಾಲ್ಮೀಕೇಶ್ಚ ಕುಶಸ್ಯ ಚ ॥ ೮೯ ॥

ರಿಪುಸ್ತ್ರೀಣಾಂ ಪ್ರಾರ್ಥನಯಾ ಸೀತಾ ಪುತ್ರಂ ನ್ಯವಾರಯತ್ ।
ತತೋ ವಿಧೇಶ್ಚ ವಾಕ್ಯೇನ ವೈಕುಂಠಂ ಗಂತುಮುದ್ಯಮಃ ॥ ೯೦ ॥

---

೮೬. ರಾಮನಾಮತೋಭದ್ರವು. ಕೀರ್ತನೆಯ ಮಂತ್ರಗಳು ಮಾರುತಿಯ ಪತಾಕಾರೋಪವೆಂಬ ವ್ರತವು.

೮೭. ನಾನು ಸಾರರಾಮಾಯಣವನ್ನು ನಿನಗೆ ಉಪದೇಶಮಾಡಿದುದು. ಅರ್ಜುನನ ಶರಸೇತುವೆಯನ್ನು ಆಂಜನೇಯನು ಖಂಡಿಸಿದುದು.

ಮನೋಹರಕಾಂಡದ ಸಂಕ್ಷೇಪ ವಿವರಣೆ

೮೮. ವಾಲ್ಮೀಕಿಯು ಚಂದ್ರವಂಶದವರ ಕಥೆಯನ್ನೂ ಹೇಳುವುದು. ಮಕ್ಕಳಿಗೆ ರಾಜ್ಯಾಭಿಷೇಕವು. ಹಸ್ತಿನಾಪುರಕ್ಕೆ ಪ್ರಯಾಣವು.

೮೯. ಅಲ್ಲಿ ಮಹಾಯುದ್ಧವು ನಡೆಯುವಿಕೆ. ಅಲ್ಲಿ ನನ್ನ ಮಕ್ಕಳು ಜಯವನ್ನು ಹೊಂದುವುದು. ಬ್ರಹ್ಮನು ವಾಲ್ಮೀಕಿಯನ್ನೂ ನಮ್ಮನ್ನೂ ಪ್ರಾರ್ಥಿಸುವುದು.

೯೦. ಶತ್ರುಗಳ ಹೆಂಗಸರ ಪ್ರಾರ್ಥನೆಯಂತೆ ಕುಶನನ್ನು ನಿವಾರಿಸುವುದು. ಅನಂತರ ಬ್ರಹ್ಮನ ಮಾತಿನಂತೆ ವೈಕುಂಠಕ್ಕೆ ಹೋಗಲು ಪ್ರಯತ್ನವು.

ಸೋಮವಂಶೋದ್ಭವಾಯಾಥ ದತ್ತಂ ವೈ ಹಸ್ತಿನಾ ಪುರಂ |
ಅಜಮೀಢಾಭಿಷೇಕಶ್ಚ ಸರ್ವೇಷಾಂ ಚ ವಿಸರ್ಜನಂ ॥ ೯೧ ॥

ಕುಶಸ್ಯ ಗಮನಂ ಸ್ವೀಯಪುರಿ ರಾಜ್ಯಂ ಶಶಾಸ ಸಃ |
ಸರ್ಪಸ್ತ್ರಸುಃ ಕುಮುದ್ವತ್ಯಾ ವೀರವಂಶಸಮುದ್ಭವಃ ॥ ೯೨ ॥

ವರದಾನಂ ಲಕ್ಷ್ಮಣಾಯ ವಾನರೇಭ್ಯಸ್ತಥಾ ಮಯಾ |
ಅಯೋಧ್ಯಾಸಂಸ್ಥಿತಾನಾಂ ಚ ತತೋ ದೇಹವಿಸರ್ಜನಂ ॥ ೯೩ ॥

ವಾನರಾಸ್ತೇ ಸುರಾ ಜಾತಾ ಸೀತಾ ಜಾತಾ ರಮಾ ಮಮ |
ಲಕ್ಷ್ಮಣಃ ಪನ್ನಗೋ ಜಾತಶ್ಶಂಖೋಭೂದ್ಭರತಸ್ತಥಾ ॥ ೯೪ ॥

ಸುದರ್ಶನಂ ಚ ಶತ್ರುಘ್ನೋ ವಿಷ್ಣುರೂಪಧರಸ್ತ್ವಹಂ |
ತದೋರ್ಮಿಳಾದಿಕಾನಾಂ ಚ ಪ್ರಯಾಣಂ ಸರ್ವಯೋಷಿತಾಂ ॥ ೯೫ ॥

---

೯೧. ಹಸ್ತಿನಾಪುರವನ್ನು ಸೋಮವಂಶದವರಿಗೆ ಕೊಡುವುದು. ಅಜಮೀಢನ ಅಭಿಷೇಕ. ಮತ್ತೆಲ್ಲರನ್ನೂ ಬಿಟ್ಟು ಬಿಡುವುದು.

೯೨. ಕುಶನು ತನ್ನ ಪಟ್ಟಣಕ್ಕೆ ಪ್ರಯಾಣವಾಡಿ ತನ್ನ ಪಟ್ಟಣದಲ್ಲಿದ್ದುಕೊಂಡು ರಾಜ್ಯಭಾರವನ್ನು ಮಾಡುವುದು. ಸರ್ಪಸ್ತ್ರೀಯಾದ ಕುಮುದ್ವತಿಯಲ್ಲಿ ವೀರವಂಶವು ಹುಟ್ಟುವುದು.

೯೩. ಲಕ್ಷ್ಮಣನಿಗೆ ವರದಾನವು. ವಾನರರಿಗೆ ವರದಾನವು. ಅಯೋಧ್ಯೆಯಲ್ಲಿರುವವರಿಗೆ ವರದಾನವು. ಅನಂತರ ನಾನು ದೇಹವನ್ನು ವಿಸರ್ಜಿಸುವುದು.

೯೪. ವಾನರರೆಲ್ಲರೂ ದೇವತೆಗಳಾಗಿ ಹುಟ್ಟುವುದು. ಸೀತೆಯು ಲಕ್ಷ್ಮಿಯಾಗಿ ಹುಟ್ಟುವುದು, ಲಕ್ಷ್ಮಣನು ಆದಿಶೇಷನಾಗುವುದು. ಭರತನು ಶಂಖವಾಗಿ ಆಗುವುದು.

೯೫. ಶತ್ರುಘ್ನನು ಸುದರ್ಶನಚಕ್ರವಾಗುವುದು. ನಾನು ವಿಷ್ಣುವಿನ ರೂಪವನ್ನು ಧರಿಸಿರುವುದು. ಅನಂತರ ಊರ್ಮಿಳೆಯೇ ಮುಂತಾದ ಎಲ್ಲಾ ಹೆಂಗಸರೂ ಪ್ರಯಾಣ ಬೆಳೆಸುವುದು.

ನೀರಾಜನಂ ಸುರಸ್ತ್ರೀಭಿಸ್ತೇಷಾಂ ಸಾಂತಾನಿಕಂ ಪದಂ ।
ಶಂಭುನಾ ಸಂಸ್ತುತಶ್ಚಾಹಂ ಗರುಡಾರೋಹಣಂ ಮಮ ॥ ೯೬ ॥

ಪುಷ್ಪವೃಷ್ಟಿರ್ಮಯಾ ದತ್ತಾ ವೈಕುಂಠಗಮನಂ ಮಮ ।
ವೈಕುಂಠೇ ರಮಯಾ ಸ್ಥಿತ್ವಾ ದೇವಾನಾಂ ಚ ವಿಸರ್ಜನಂ ॥ ೯೭ ॥

ಸೂರ್ಯವಂಶೋನುಕ್ರಮಶ್ಚಾನಂದರಾಮಾಯಣಸ್ಯ ಚ ।
ಕಾಂಡಸಂಖ್ಯಾ ಸರ್ಗಸಂಖ್ಯಾ ಗ್ರಂಥಸಂಖ್ಯಾ ಫಲಶ್ರುತಿಃ ॥ ೯೮ ॥

ರಾಮಾಯಣಶ್ರವಣಸ್ಯೋದ್ಯಾಪನಂ ಚ ಮಹತ್ತಮಂ ।
ಗ್ರಂಥದಾನಮನುಷ್ಠಾನಂ ಪ್ರಕಾರಾಃ ಪಂಚ ವೈ ತತಃ ॥ ೯೯ ॥

ಅನುಷ್ಠಾನೋದ್ಯಾಪನಂ ಚ ಶಕುನಸ್ಯ ಚ ವಿಸ್ತರಃ ।
ಸಂವಾದಸ್ಯ ಪೂರ್ಣತಾಪಿ ಯುವಯೋರ್ಗುರುಶಿಷ್ಯಯೋಃ ॥ ೧೦೦ ॥

---

೯೬. ದೇವತಾಸ್ತ್ರೀಯರು ಆರತಿಬೆಳಗುವುದು. ಅವರೆಲ್ಲರಿಗೂ ಸಾಂತಾನಿಕಪದ ಪ್ರಾಪ್ತಿಯಾಗುವುದು. ಶಂಭುವು ನನ್ನನ್ನು ಸ್ತೋತ್ರಮಾಡುವುದು. ನಾನು ಗರುಡನಮೇಲೆ ಕುಳಿತುಕೊಳ್ಳುವುದು

೯೭. ಪುಷ್ಪವೃಷ್ಟಿಯಾಗುವಿಕೆ. ನಾನು ವೈಕುಂಠಕ್ಕೆ ಹೋಗುವುದು. ಅಲ್ಲಿ ವೈಕುಂಠದಲ್ಲಿ ರಮೆಯೊಡನೆ ನಿಂತು ದೇವತೆಗಳನ್ನು ಕಳುಹಿಸಿಬಿಡುವುದು.

೯೮. ಸೂರ್ಯವಂಶದ ಅನುಕ್ರಮವು. ಆನಂದರಾಮಾಯಣದ ಕಾಂಡ ಸಂಖ್ಯಾ, ಸರ್ಗ ಸಂಖ್ಯಾ, ಗ್ರಂಥ ಸಂಖ್ಯಾ, ಫಲಶ್ರುತಿಗಳು.

೯೯. ರಾಮಾಯಣ ಕಥೆಯನ್ನು ಕೇಳಿ ಉದ್ಯಾಪನೆಯನ್ನು ಮಾಡುವಿಕೆ. ಗ್ರಂಥದ ದಾನವು. ಐದು ಬಗೆಯ ಅನುಷ್ಠಾನಗಳು.

೧೦೦. ಅನುಷ್ಠಾನದ ಉದ್ಯಾಪನೆಯು ಶಕುನಗಳ ವಿಸ್ತಾರವು. ಗುರುಶಿಷ್ಯರಾದ ನಿಮ್ಮಗಳ ಸಂವಾದದ ಪೂರ್ಣತೆಯು.

ಆಶಂಕಾಚ್ಛೇದನಂ ದೇವ್ಯಾ ಕಾಲಸ್ಯ ಪಠನಸ್ಯ ಚ ।
ರಾಮಾಯಣಸ್ಯ ಮಹಿಮಾ ಚೈಕಶ್ಲೋಕೇನ ವೈ ತ್ವಿದಂ ॥ ೧೦೧ ॥
ಮಮ ಧ್ಯಾನಂ ಚೇಶದೇವ್ಯೋಃ ಸಂವಾದಸ್ಯಾಪಿ ಪೂರ್ಣತಾ ।

॥ ಪೂರ್ಣಕಾಂಡಃ ॥ ೯ ॥

ಏವಂ ಮಯಾ ರಾಮದಾಸ ಸಾರರಾಮಾಯಣಂ ತವ ॥ ೧೦೨ ॥
ಸ್ಮರಣಾರ್ಥಂ ಚರಿತ್ರಾಣಾಂ ಸಂಕ್ಷೇಪೇಣ ನಿವೇದಿತಂ ।
ಇದಂ ಗೋಪ್ಯಂ ತ್ವಯಾ ಕಾರ್ಯಂ ಮಹತ್ಪುಣ್ಯಪ್ರದಂನೃಣಾಂ ॥ ೧೦೩ ॥
ಶತಕೋಟಿಮಿತಗ್ರಂಥಾತ್ಸಾರಂ ಸಾರಂ ಮಯೋದಿತಂ ।
ಕಃ ಕ್ಷಮಃ ಸಕಲಂ ವಕ್ತುಂ ವಿನಾ ವಾಲ್ಮೀಕಿನಾ ಭುವಿ ॥ ೧೦೪ ॥
ಸ ಏವ ಧನ್ಯೋ ವಾಲ್ಮೀಕಿರ್ಯೇನ ಮಚ್ಚರಿತಂ ಕೃತಂ ।
ಸಾರರಾಮಾಯಣಮಿದಂಯೇ ಪಠಂತ್ಯತ್ರ ಮಾನವಾಃ ॥ ೧೦೫ ॥

---

೧೦೧. ದೇವಿಯ ಆಶಂಕೆಯ ಛೇದನವು. ಕಾಲದ ಶಂಕೆಯ ನಿವಾರಣೆ ಮತ್ತು ರಾಮಾಯಣಪಠನದ ಮಹಿಮೆ. ಒಂದೇ ಶ್ಲೋಕದಿಂದ ರಾಮಾಯಣದ ಮಹಿಮೆ.

೧೦೨. ಪಾರ್ವತೀ ಪರಮೇಶ್ವರರು ನನ್ನ ಧ್ಯಾನವನ್ನು ಮಾಡುವುದು. ಅವರ ಸಂವಾದವೂ ಪೂರ್ತಿಯಾಗುವುದು.

ಪೂರ್ಣಕಾಂಡದ ಸಂಗ್ರಹವಾದ ವಿವರಣೆ.

ಎಲೈ ರಾಮದಾಸನೇ ! ಈ ರೀತಿಯಾಗಿ ನಿನಗೆ ಸಾರರಾಮಾಯಣವನ್ನು ಹೇಳಿದ್ದೇನೆ.

೧೦೩. ನನ್ನ ಚರಿತ್ರೆಯು ಜ್ಞಾಪಕಕ್ಕೆ ಬರುವುದಕ್ಕೋಸ್ಕರ ಈರೀತಿ ಸಂಗ್ರಹವನ್ನು ಹೇಳಿರುವೆನು. ಇದನ್ನು ನೀನು ಗೋಪ್ಯವಾಗಿಟ್ಟುಕೋ. ಇದು ಮಹಾ ಪುಣ್ಯವನ್ನು ಕೊಡುತ್ತದೆ.

೧೦೪. ಶತಕೋಟಿಯುಳ್ಳ ಆ ಗ್ರಂಥದಿಂದ ಸಾರದಲ್ಲಿಯೂ ಸಾರವನ್ನು ತೆಗೆದು ನಿನಿಗೆ ಹೇಳಿದ್ದೇನೆ. ವಾಲ್ಮೀಕಿಯೊಬ್ಬನನ್ನು ಬಿಟ್ಟರೆ ರಾಮಾಯಣವನ್ನು ಹೇಳುವುದಕ್ಕೆ ಲೋಕದಲ್ಲಿ ಯಾವನು ತಾನೇ ಶಕ್ತನಾದಾನು ?

೧೦೫–೧೦೬. ವಾಲ್ಮೀಕಿಯು ನನ್ನ ಚರಿತ್ರೆಯನ್ನು ಮಾಡಿರುವುದರಿಂದ ಆವನೇ ಧನ್ಯನು. ಈ ಸಾರರಾಮಾಯಣವನ್ನು ಯಾವ ಮನುಷ್ಯನು

ತೇಷಾಂ ಭುಕ್ತಿಶ್ಚ ಮುಕ್ತಿಶ್ಚ ದ್ವಿಜ ದಾಸ್ಯಾಮ್ಯಹಂ ಮುದಾ ।
ಕೃತ್ಸ್ನಂ ರಾಮಾಯಣಂ ಶ್ರೋತುಂ ಪಠಿತುಂ ವಾ ನರೋತ್ತಮೈಃ ॥

ಅವಕಾಶೋ ಯದಾ ನಾಸ್ತಿ ತದೈತತ್ಸಂಪಠೇನ್ನರೈಃ ।
ಅನ್ಯದ್ಯದ್ಯನ್ಮಯಾ ಕರ್ಮ ಕೃತಂ ಪೂರ್ವಂ ಶುಭಾಶುಭಂ ॥ ೧೦೭ ॥

ತತ್ತದ್ಯದಾ ತವ ಮುಖಾನ್ನಿರ್ಗಮಿಷ್ಯತಿ ನಿಶ್ಚಯಾತ್ ।
ತ್ವದ್ದೃಷ್ಟಿಗೋಚರಂ ಕೃತ್ಸ್ನಂ ಚರಿತಂ ಮೇ ಭವಿಷ್ಯತಿ ॥ ೧೦೮ ॥

ವಿಷ್ಣುದಾಸಾಯ ಶಿಷ್ಯಾಯ ವದ ತ್ವಮಧುನಾ ಸುಖಂ ॥ ೧೨೮ ॥

॥ ಶ್ರೀರಾಮದಾಸ ಉವಾಚ ॥

ಏವಂ ಶ್ರೀರಾಮಚಂದ್ರೇಣ ಯಥಾತ್ರ ಕಥಿತಂ ಮಮ ।
ಸಾರರಾಮಾಯಣಂ ರಮ್ಯಂ ತದಿದಂ ತೇ ನಿವೇದಿತಂ ॥ ೧೨೯ ॥

ಇದಂ ರಮ್ಯಂ ಪವಿತ್ರಂ ಚ ಮಮ ಪಾತಕನಾಶನಂ ।
ಸರ್ವದಾ ಮಾನವೈರ್ಜಪ್ಯಂ ಭುಕ್ತಿಮುಕ್ತಿಪ್ರದಾಯಕಂ ॥ ೧೩೦ ॥

ಓದುವನೋ ಅವನಿಗೆ ಭಕ್ತಿಯನ್ನೂ ಮುಕ್ತಿಯನ್ನೂ ನಾನು ಯಾವಾಗಲೂ ಕೊಡುತ್ತೇನೆ ರಾಮಾಯಣವನ್ನು ಪೂರ್ತಿಯಾಗಿ ಓದುವುದಕ್ಕಾಗಲಿ ಕೇಳು ವುದಕ್ಕಾಗಲಿ ಅವಕಾಶವು ಇಲ್ಲದೆ ಹೋಗಬಹುದು.

೧೦೭-೧೨೮. ಹೀಗೆ ಅವಕಾಶವು ಸಿಕ್ಕದಿದ್ದಾಗ ಅವರು ಈ ಸಂಕ್ಷೇಪ ರಾಮಾಯಣವನ್ನು ಓದಬಹುದು. ನಾನು ಹಿಂದೆ ಒಳ್ಳೆಯದಾಗಲಿ ಕೆಟ್ಟದಾಗಲಿ ಯಾವ ಯಾವ ಕರ್ಮವನ್ನು ಮಾಡಿದನೋ ಅವೆಲ್ಲವೂ ಕೂಡ ಆಯಾಯ ಕಾಲದಲ್ಲಿ ನಿನ್ನ ಬಾಯಿಂದ ಬರುವಂತೆ ವರವನ್ನು ಕೊಟ್ಟಿದ್ದೇನೆ. ನನ್ನ ಚರಿತ್ರೆಯೆಲ್ಲವೂ ನಿನ್ನ ದೃಷ್ಟಿಗೆ ಗೋಚರವಾಗಿ ಆಗುತ್ತದೆ. ಆ ಚರಿತ್ರೆಯನ್ನು ನೀನು ಶಿಷ್ಯನಾದ ವಿಷ್ಣುದಾಸನಿಗೆ ಸುಖವಾಗಿ ಹೇಳು.

೧೨೯. ಶ್ರೀರಾಮದಾಸನು ಹೇಳಿದನು-ಶ್ರೀರಾಮಚಂದ್ರನು ಈ ರೀತಿ ಯಾಗಿ ನನಗೆ ಹೇಳಿದನು. ಇದೇ ಸಾರರಾಮಾಯಣವೆಂಬುದು. ರಮ್ಯ ವಾದುದು. ಅದನ್ನೇ ಈಗ ನಾನು ನಿನಗೆ ಹೇಳಿದ್ದೇನೆ.

೧೩೦. ಇದು ಸುಂದರವಾದುದು. ಪವಿತ್ರವಾದುದು ಮಹಾ ಪಾಪ ಗಳನ್ನು ನಾಶಮಾಡುತ್ತದೆ. ಮಾನವರು ಯಾವಾಗಲೂ ಇದನ್ನು ಜಪಮಾಡ ಬೇಕು. ಭಕ್ತಿಯನ್ನೂ ಮುಕ್ತಿಯನ್ನೂ ಕೊಡುತ್ತದೆ.

ಕೃತ್ಸ್ನಂ ರಾಮಾಯಣಂ ಶ್ರುತ್ವಾ ಯತ್ಫಲಂ ಪ್ರಾಪ್ಯತೇ ನರೈಃ ।
ತದಸ್ಯ ಪಠನಾದೇವ ಸತ್ಯಂ ಸತ್ಯಂ ವಚೋ ಮಮ ॥ ೧೩೧ ॥

ತಸ್ಮಾನ್ನೃಭಿಸ್ಸದಾ ಜಪ್ಯಂ ಸರ್ವೇಷಾಂ ಶಾಂತಿಕಾರಕಂ ।
ಪುತ್ರಪೌತ್ರಪ್ರದಂ ಸ್ತ್ರೀದಂ ಮಹತ್ಸೌಖ್ಯಪ್ರದಂ ನೃಣಾಂ ॥ ೧೩೨ ॥

ರಾಮಾಯಣಾನಿ ಶತಶಸ್ಸಂತಿ ಶಿಷ್ಯಾವನೀತಲೇ ।
ತಥಾಪ್ಯನೇನ ಸದೃಶಂ ನ ಭೂತಂ ನ ಭವಿಷ್ಯತಿ ॥ ೧೩೩ ॥

ಇತಿಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಮನೋಹರಕಾಂಡೇ ರಾಮದಾಸ ವಿಷ್ಣುದಾಸ ಸಂವಾದೇ ಶ್ರೀರಾಮಚಂದ್ರೋಪದಿಷ್ಟಂ ಸಾರರಾಮಾಯಣಂ ನಾಮ ಸಪ್ತದಶಸ್ಸರ್ಗಃ ಸಮಾಪ್ತಃ

---

೧೩೧. ರಾಮಾಯಣವೆಲ್ಲವನ್ನೂ ಕೇಳಿದರೆ ಮನುಷ್ಯನು ಯಾವ ಫಲವನ್ನು ಹೊಂದುವನೋ ಆ ಫಲವನ್ನು ಈ ಸಾರರಾಮಾಯಣವನ್ನು ಓದುವುದರಿಂದಲೇ ಹೊಂದುತ್ತಾನೆ. ಇದು ಸತ್ಯವಾದುದು. ಖಂಡಿತವಾಗಿಯೂ ಸತ್ಯವಾದುದು.

೧೩೨. ಇದನ್ನು ಯಾವಾಗಲೂ ಮಾನವರು ಜಪಿಸಬೇಕು. ಎಲ್ಲರ್ಕ್ಕೂ ಶಾಂತಿದಾಯಕವಾಗುತ್ತದೆ. ಮಕ್ಕಳನ್ನೂ ಮೊಮ್ಮಕ್ಕಳನ್ನೂ ಕೊಡುತ್ತದೆ. ಹೆಂಡತಿಯನ್ನೂ ಕೊಡುತ್ತದೆ. ನರರಿಗೆ ಮಹಾ ಸೌಖ್ಯವನ್ನು ಕೊಡುತ್ತದೆ.

೧೩೩. ಎಲೈ ಶಿಷ್ಯನೇ! ಭೂಮಿಯಲ್ಲಿ ರಾಮಾಯಣಗಳು ಸಾವಿರಾರು ಇವೆ. ಆದರೆ ಇದಕ್ಕೆ ಸಮವಾದ ರಾಮಾಯಣವು ಹಿಂದೆಯೂ ಇಲ್ಲ. ಮುಂದೆಯೂ ಇರುವುದಿಲ್ಲ.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಆದಿಕಾವ್ಯವಾದ ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ರಾಮದಾಸ ವಿಷ್ಣುದಾಸ ಸಂವಾದದಲ್ಲಿ ಶ್ರೀರಾಮಚಂದ್ರನು ಉಪದೇಶ ಮಾಡಿದ ಸಾರರಾಮಾಯಣ ಕಥನವೆಂಬ ಹದಿನೇಳನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹದಿನೇಳನೆಯ ಸರ್ಗದ ಸಾರಾಂಶವು.

ಈ ಸರ್ಗದಲ್ಲಿ ಶ್ರೀರಾಮನು ರಾಮದಾಸನಿಗೆ ಲಘುರಾಮಾಯಣವನ್ನು ಉಪದೇಶಮಾಡಿದುದಾಗಿಯೂ ಅದರಿಂದ ರಾಮಾಯಣದ ಎಲ್ಲಾ ವಿಷಯಗಳೂ ಜ್ಞಾಪಕಬರುವುದಾಗಿಯೂ ಹೇಳಿ ಉಪದೇಶಮಾಡುತ್ತಾನೆ.

ಆ ಸಾರರಾಮಾಯಣವನ್ನು ಕಾಂಡಗಳ ರೀತಿಯಿಂದ ತೆಗೆದು ಹೇಳುತ್ತಾನೆ. ಇದರಿಂದ ಕಾಂಡಗಳಲ್ಲಿನ ಸಾರವನ್ನು ಹೇಳಿದಂತಾಗುತ್ತೆ.

ಈ ಸಾರರಾಮಾಯಣವನ್ನು ಓದುವುದರಿಂದ ರಾಮಾಯಣವನ್ನು ಓದಿದಂತಾಗುವುದಲ್ಲದೆ ಅದರ ಫಲವೇ ಬರುತ್ತದೆ. ಇದರಿಂದ ಪುತ್ರಪೌತ್ರ ವೃದ್ಧಿಯಾಗುವುದಲ್ಲದೆ ಹೆಚ್ಚು ಸೌಖ್ಯವೂ ಉಂಟಾಗುತ್ತದೆ.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಮನೋಹರಕಾಂಡೇ ಅಷ್ಟಾದಶಸ್ಸರ್ಗಃ

॥ ವಿಷ್ಣುದಾಸ ಉವಾಚ ॥

ಕಪಿಧ್ವಜಶ್ಚಾರ್ಜುನಶ್ಚೇತಿ ಮಯಾ ಪೂರ್ವಂ ಶ್ರುತಂ ಗುರೋ ।
ತನ್ನಾಮಕರಣಂ ಮಾಂ ತ್ವಂ ವಿಸ್ತರಾದ್ವಕ್ತುಮರ್ಹಸಿ ॥ ೧ ॥

॥ ರಾಮದಾಸ ಉವಾಚ ॥

ಸಮ್ಯಕ್ ಪೃಷ್ಟಂ ತ್ವಯಾ ಶಿಷ್ಯ ಸಾವಧಾನಮನಾಃ ಶೃಣು ।
ದ್ವಾಪರಾಂತೇ ಭಾವಿಕಥಾಂ ತ್ವಾಂ ವದಾಮಿ ಚಮತ್ಕೃತಾಂ ॥ ೨ ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹದಿನೆಂಟನೆಯ ಸರ್ಗವು

೧. ವಿಷ್ಣುದಾಸನು ಹೇಳಿದನು-ಎಲೈ ಗುರುವೇ ! ಅರ್ಜುನನು ಕಪಿಧ್ವಜನೆಂದು ಹಿಂದೆ ನೀನು ಹೇಳಿದುದನ್ನು ಕೇಳಿದ್ದೇನೆ. ಅವನಿಗೆ ಈ ರೀತಿಯಾಗಿ ಹೆಸರುಬರಲು ಕಾರಣವೇನು ? ಎಂಬುದನ್ನು ನೀನು ನನಗೆ ವಿಸ್ತರಿಸಿ ಹೇಳು.

೨. ರಾಮದಾಸನು ಹೇಳಿದನು-ಎಲೈ ಶಿಷ್ಯನೇ ! ನೀನು ಕೇಳಿದುದು ಸರಿಯಾಗಿದೆ. ಸಾವಧಾನವಾಗಿ ಕೇಳು. ದ್ವಾಪರಯುಗದ ಅಂತ್ಯದಲ್ಲಿ ನಡೆದ ಚಮತ್ಕಾರವಾದ ಕಥೆಯನ್ನು ಹೇಳುತ್ತೇನೆ.

ಏಕದಾ ಕೃಷ್ಣರಹಿತೋಽರ್ಜುನಃ ಸ್ಯಂದನಸಂಸ್ಥಿತಃ ।
ಯಯಾವರಣ್ಯೇ ವಿಚರನ್ಮೃಗಯಾರ್ಥಂ ಹಿ ದಕ್ಷಿಣಾಂ ॥ ೩ ॥

ಏಕಾಕೀ ಸೂತಸಂಸ್ಥಾನೇ ಸ್ಥಿತ್ವಾ ತತ್ಕೃತ್ಯಮಾಚರನ್ ।
ಹತ್ವಾ ವನೇ ಮೃಗಾನ್ ಧನ್ವೀ ಮಧ್ಯಾಹ್ನೇ ಸ್ನಾತುಮುದ್ಯತಃ ॥ ೪ ॥

ಯಯೌ ರಾಮೇಶ್ವರಂ ಸೇತೌ ಧನುಷ್ಕೋಟ್ಯಾಂ ವಿಗಾಹ್ಯ ಚ ।
ಮಧ್ಯಾಹ್ನಕೃತ್ಯಂ ಸಂಪಾದ್ಯ ಪುನಃ ಸ್ಯಂದನಸಂಸ್ಥಿತಃ ॥ ೫ ॥

ಅಬ್ಧೇಸ್ತಟೇ ವಿಚಚಾರ ಕಿಂಚಿದ್ಗರ್ವಸಮನ್ವಿತಃ ।
ಏತಸ್ಮಿನ್ನಂತರೇಽರಣ್ಯೇ ಪರ್ವತೋಪರಿಸಂಸ್ಥಿತಂ ॥ ೬ ॥

---

೩. ಒಂದುಸಾರಿ ಅರ್ಜುನನು ಜೊತೆಯಲ್ಲಿ ಕೃಷ್ಣನನ್ನು ಕರೆದುಕೊಳ್ಳದೆ ರಥದಲ್ಲಿ ಒಬ್ಬನೇ ಕುಳಿತು ಬೇಟೆಗೋಸ್ಕರ ದಕ್ಷಿಣದಿಕ್ಕಿನ ಅರಣ್ಯಕ್ಕೆ ಹೋದನು.

೪. ಆ ರಥದಲ್ಲಿ ತಾನೊಬ್ಬನೇ ಹೊರಟು ಸೂತನ ಸ್ಥಾನದಲ್ಲಿ ತಾನೇ ಕುಳಿತು ರಥವನ್ನು ನಡೆಸುತ್ತಾ ಬೇಟೆಯಾಡುತ್ತ ಅನೇಕ ಮೃಗಗಳನ್ನು ಕೊಂದು ಮಧ್ಯಾಹ್ನವಾಗುತ್ತಲೂ ಸ್ನಾನಮಾಡಬೇಕೆಂದು ಪ್ರಯತ್ನಪಟ್ಟನು.

೫. ರಾಮೇಶ್ವರಕ್ಕೆ ಹೋಗಿ ಅಲ್ಲಿ ರಾಮಸೇತುವೆಯು ಇರುವ ಧನುಷ್ಕೋಟಿಯಲ್ಲಿ ಸ್ನಾನಮಾಡಿ ಮಧ್ಯಾಹ್ನದಲ್ಲಿ ಮಾಡಬೇಕಾದ ಕೆಲಸಗಳನ್ನು ನೆರವೇರಿಸಿಕೊಂಡು ಮತ್ತೆ ರಥದಲ್ಲಿ ಬಂದು ಕುಳಿತನು.

೬. ಸ್ವಲ್ಪಮಟ್ಟಿಗೆ ಹೆಮ್ಮೆಯನ್ನು ಹೊಂದಿದವನಾಗಿ ಆ ರಥದಲ್ಲಿಯೇ ಕುಳಿತು ಸಮುದ್ರದ ದಡದಲ್ಲಿಯೇ ಸುತ್ತುತ್ತಿದ್ದನು. ಈ ಸಮಯದಲ್ಲಿ ಕಾಡಿನಲ್ಲಿರುವ ಒಂದು ಬೆಟ್ಟದಮೇಲೆ ಕುಳಿತಿರುವ ಕಪಿಯಾದ ಮಾರುತಿಯನ್ನು ನೋಡಿದನು.

ದದರ್ಶ ಮಾರುತಿಂ ವೀರೋ ಸಾಮಾನ್ಯಕಪಿರೂಪಿಣಂ ।
ರಾಮರಾಮೇತಿಜಲ್ಪಂತಂ ಪಿಂಗಲೋ ಮಧುರಂ ಶುಭಂ ॥ ೭ ॥

ತಮರ್ಜುನೋಽಬ್ರವೀದ್ವಾಕ್ಯಂ ಕಿಂ ನಾಮಾಸ್ತಿ ಕಪೇ ತವ ।
ತದರ್ಜುನವಚಃ ಶ್ರುತ್ವಾ ವಿಹಸ್ಯ ಕಪಿರಬ್ರವೀತ್ ॥ ೮ ॥

ಯತ್ಪ್ರತಾಪಾಚ್ಚ ರಾಮೇಣ ಶಿಲಾಭಿಃ ಶತಯೋಜನಃ ।
ಬದ್ಧೋಽಯಂ ಸಾಗರೇ ಸೇತುಸ್ತಂ ಮಾಂ ತ್ವಂ ವಿದ್ಧಿ ವಾಯುಜಂ ॥ ೯ ॥

ಇತಿ ತದ್ಗರ್ವಸಹಿತಂ ವಾಕ್ಯಂ ಶ್ರುತ್ವಾರ್ಜುನಸ್ತದಾ ।
ಗರ್ವಾದ್ವಿಹಸ್ಯ ಪ್ರೋವಾಚ ಮಾರುತಿಂ ಪುರತಃ ಸ್ಥಿತಂ ॥ ೧೦ ॥

---

೭. ಆ ಹನುಮಂತನು ಸಾಮಾನ್ಯದ ಕಪಿಯಂತೆ ಕುಳಿತಿರುವುದನ್ನು ಈ ವೀರನಾದ ಅರ್ಜುನನು ನೋಡಿದನು. ಆ ಕಪಿಯು ರಾಮ ರಾಮ ಎಂದು ಜಪಮಾಡುತ್ತಿದ್ದಿತು. ಬಹಳ ಪ್ರಕಾಶಮಾನವಾಗಿದ್ದಿತು. ಕೆಂಚಗಿದ್ದಿತು. ನೋಡಿದರೆ ಮನೋಹರವಾಗಿದ್ದಿತು. ಶುಭಕರವಾಗಿಯೂ ಕಾಣುತ್ತ ಇದ್ದಿತು.

೮. ಅದನ್ನು ನೋಡಿ ಅರ್ಜುನನು ಎಲೈ ಕಪಿಯೇ ನಿನ್ನ ಹೆಸರೇನು ? ಎಂದು ಕೇಳಿದನು. ಅರ್ಜುನನ ಈ ಮಾತನ್ನು ಕೇಳಿ ಆ ಕಪಿಯು ಹುಸಿನಗು ನಕ್ಕು ಇಂತೆಂದಿತು.

೯. ಯಾವನ ಪ್ರತಾಪದ ಬಲದಿಂದ ಶ್ರೀರಾಮನು ನೂರುಯೋಜನ ಗಳುಳ್ಳ ಈ ಸೇತುವೆಯನ್ನು ಕಲ್ಲುಗಳಿಂದ ಸಮುದ್ರದಲ್ಲಿ ಕಟ್ಟಿದನೋ ಅಂತಹ ನನ್ನನ್ನು ವಾಯುಪುತ್ರನಾದ ಹನುಮಂತನೆಂದು ತಿಳಿ ಎಂದಿತು.

೧೦. ಅರ್ಜುನನು ಆ ಕಪಿಯು ವರ್ಗದಿಂದ ಹೇಳಿದ ಈ ಮಾತನ್ನು ಕೇಳಿದನು. ಆಗ ತಾನೂ ಕೂಡ ಗರ್ವದಿಂದ ಸ್ವಲ್ಪನಕ್ಕು ಎದುರಿಗಿರುವ ಮಾರುತಿಯನ್ನು ಕುರಿತು ಇಂತೆಂದನು.

ವೃಥಾ ರಾಮೇಣ ಸೇತ್ವರ್ಥಂ ಶ್ರಮಃ ಪೂರ್ವಂ ಕೃತಸ್ತ್ವಯಂ ।
ಕಥಂ ತೇನ ಶರೈಸ್ಸೇತುಂ ಕೃತ್ವಾ ಕಾರ್ಯಂ ಕೃತಂ ನ ಹಿ ॥ ೧೧ ॥

ತದರ್ಜುನವಚಃ ಶ್ರುತ್ವಾ ಮಾರುತಿಃ ಪ್ರಾಹ ತಂ ಪುನಃ ।
ಮತ್ತುಲ್ಯಕಪಿಭಾರೇಣ ಶರಸೇತುಃ ಪಯೋನಿಧೌ ॥ ೧೨ ॥

ನ್ಯಮಜ್ಜಿಷ್ಯತೀತಿ ಮತ್ವಾ ತಂ ನಾಕರೋದ್ರಘುನಂದನಃ ।
ತತ್ಕಪೇರ್ವಚನಂ ಶ್ರುತ್ವಾರ್ಜುನೋ ಮಾರುತಿಮಬ್ರವೀತ್ ॥ ೧೩ ॥

ಕಪಿಭಾರಾದ್ಯದಾ ಸೇತುರ್ಜಲೇ ಮಗ್ನೋ ಭವಿಷ್ಯತಿ ।
ಧನುರ್ವಿದ್ಯಾ ಧನ್ವಿನಃ ಕಾ ತದಾ ವಾನರಸತ್ತಮ ॥ ೧೪ ॥

ಅಧುನಾಹಂ ಕರಿಷ್ಯಾಮಿ ಶರಸೇತುಂ ತವಾಗ್ರತಃ ।
ತ್ವಂ ತಸ್ಯೋಪರಿ ನೃತ್ಯಾದಿ ಕುರುಷ್ವಾತ್ರ ಯಥಾಸುಖಂ ॥ ೧೫ ॥

---

೧೧. ಎಲೈ ಮಾರುತಿಯೇ ! ರಾಮನು ಪೂರ್ವದಲ್ಲಿ ಈ ಸೇತುವೆಗೋಸ್ಕರ ವ್ಯರ್ಥವಾಗಿ ಶ್ರಮಪಟ್ಟನು. ಆ ಶೂರನಾದ ರಾಮನು ಬಾಣಗಳಿಂದಲೇ ಸೇತುವೆಯನ್ನು ಕಟ್ಟಿ ತನ್ನ ಕಾರ್ಯವನ್ನು ಏತಕ್ಕೋಸ್ಕರವಾಗಿ ಸಾಧಿಸಿಕೊಳ್ಳಲಿಲ್ಲ ?

೧೨-೧೩. ಅರ್ಜುನನ ಈ ಮಾತನ್ನು ಕೇಳಿ ಮಾರುತಿಯು ಅವನನ್ನು ಕುರಿತು ಎಲೈ ವೀರನೇ ! ನನ್ನಂತಹ ಕಪಿಯ ಭಾರವನ್ನು ತಡೆಯಲಾರದೆ ಶರಸೇತುವು ಸಮುದ್ರದಲ್ಲಿ ಮುಳುಗೀತು ಎಂದು ತಿಳಿದು ಅಂತಹ ಶರಸೇತುವೆಯನ್ನು ಕಟ್ಟಲಿಲ್ಲ. ಎಂದನು. ಮಾರುತಿಯು ಹೇಳಿದ ಮಾತನ್ನು ಕೇಳಿ ಅರ್ಜುನನು ಅವನನ್ನು ಕುರಿತು ಮತ್ತೆ ಇಂತೆಂದನು.

೧೪. ಎಲೈ ಕಪಿಶ್ರೇಷ್ಠನೇ ! ಕಪಿಯ ಭಾರವನ್ನು ತಡೆಯಲಾರದೆ ಶರಸೇತುವು ನೀರಿನಲ್ಲಿ ಮುಳುಗಿದಮೇಲೆ ಆ ಬಿಲ್ಲಾಳಿನ ಬಿಲ್ಲಾಳಿತನ ವೆಷ್ಟರದು ? ಅದು ಉಪಯೋಗವಿಲ್ಲದ್ದಾಗುವುದು.

೧೫. ಈಗ ನೋಡು. ನಾನು ನಿನ್ನ ಎದುರಿಗೆ ಶರಸೇತುವೆಯನ್ನು ಕಟ್ಟುತ್ತೇನೆ. ಅದರಮೇಲೆ ನೀನು ನಿಂತು ಭಾರವನ್ನು ಬಿಡುವುದಿರಲಿ. ಬೇಕಾದಂತೆ ಕುಣಿದಾಡು. ಏನೂ ಆಗುವುದಿಲ್ಲ

ಧನುರ್ವಿದ್ಯಾ ಮನೂದ್ವ ತ್ವಂ ಕಪೇ ಪಶ್ಯತುಮರ್ಹಸಿ |
ತದರ್ಜುನಗಿರಂ ಶ್ರುತ್ವಾ ತಮಾಹ ಸಸ್ಮಿತಃ ಕಪಿಃ || ೧೬ ||

ಮನಾಂಘ್ರ್ಯಂಗುಷ್ಠಭಾರೇಣ ಶರಸೇತುಸ್ತ್ವಯಾ ಕೃತಃ |
ಚೇನ್ಮಗ್ನಸ್ಸ್ಯಾತ್ಸಮುದ್ರೇ ಹಿ ತದಾ ಕಾರ್ಯಂ ತ್ವಯಾತ್ರ ಕಿಂ || ೧೭ ||

ತತ್ಕಪೇರ್ವಾಕ್ಯಮಾಕರ್ಣ್ಯ ಸೋಽರ್ಜುನಃ ಪ್ರಾಹ ತಂ ಪುನಃ |
ಯದಿ ಮಗ್ನಶ್ಶರಸೇತುಸ್ತ್ವದ್ಭಾರಾತ್ತರ್ಹ್ಯಹಂ ಕಪೇ || ೧೮ ||

ವಿಶಾಮ್ಯತ್ರಾನಲಂ ಸತ್ಯಂ ತ್ವಂ ಚಾಪ್ಯದ್ಯ ಪಣಂ ವದ |
ತತ್ಪ್ರತಿಜ್ಞಾಂ ಕಪಿಃ ಶ್ರುತ್ವಾರ್ಜುನಂ ವಚನಮಬ್ರವೀತ್ || ೧೯ ||

ಮಯಾ ಸ್ವಾಂಗುಷ್ಠಭಾರೇಣ ತ್ವತ್ಸೇತುಶ್ಚೇನ್ನ ಲೋಪಿತಃ |
ತರ್ಹಿ ತ್ವದ್ಧ್ವಜಸಂಸ್ಥೋಽಹಂ ತವ ಸಾಹಾಯ್ಯಮಾಚರೇ || ೨೦ ||

---

೧೬. ಎಲೈ ಕಪಿಯೇ! ನನ್ನ ಧನುರ್ವಿದ್ಯೆಯ ಮಹತ್ವವನ್ನು ಈಗ ನೀನು ನೋಡು ಎಂದೆನ್ನಲು ಅರ್ಜುನನ ಈ ಮಾತನ್ನು ಕಪಿಯು ಕೇಳಿ ಅವನನ್ನು ಕುರಿತು ನಗುತ್ತ ಇಂತೆಂದಿತು.

೧೭. ಎಲೈ ವೀರನೇ! ನನ್ನ ಕಾಲಿನ ಅಂಗುಷ್ಠದ ಭಾರದಿಂದ ನೀನು ಕಟ್ಟಿದ ಶರಸೇತುವು ಸಮುದ್ರದಲ್ಲಿ ಬಿದ್ದುಹೋದರೆ ಆಗ ನೀನು ಏನುಮಾಡುತ್ತೀಯೆ?

೧೮–೧೯. ಕಪಿಯ ಈ ಮಾತನ್ನು ಅರ್ಜುನನು ಕೇಳಿ ಇಂತೆಂದನು. ಎಲೈ ಕಪಿಯೇ! ನಿನ್ನ ಭಾರದಿಂದ ನಾನು ಕಟ್ಟಿದ ಶರಸೇತುವು ಸಮುದ್ರದಲ್ಲಿ ಮುಳುಗಿದ್ದೇ ಆದರೆ ಆಗ ನಾನು ಇಲ್ಲಿಯೇ ಬೆಂಕಿಯನ್ನು ಹತ್ತಿಸಿ ಅದಕ್ಕೆ ಬಿದ್ದು ಪ್ರಾಣವನ್ನು ಬಿಡುವೆನು. ಇದು ಸತ್ಯವು. ನೀನೂ ಕೂಡ ಮುರಿಯದಿದ್ದರೆ ಅಥವಾ ಬಗ್ಗಿಸದಿದ್ದರೆ ಏನುಮಾತ್ತೀಯೆ? ಪಣವನ್ನು ಕಟ್ಟು.

೨೦. ಅರ್ಜುನನು ಮಾಡಿದ ಪ್ರತಿಜ್ಞೆಯನ್ನು ಕಪಿಯು ಕೇಳಿ ಅವನನ್ನು ಕುರಿತು ಇಂತೆಂದಿತು. ಎಲೈ ವೀರನೇ! ನಾನು ನನ್ನ ಅಂಗುಷ್ಠದ ಭಾರದಿಂದಲೇ ನಿನ್ನ ಶರಸೇತುವೆಯನ್ನು ಮುರಿಯದಿದ್ದರೆ ನಾನು ನಿನ್ನ ಧ್ವಜದಲ್ಲಿ ಕುಳಿತು ಕೊಂಡು ನಿನಗೆ ಸಹಾಯವನ್ನು ಮಾಡುತ್ತಲಿರುತ್ತೇನೆ.

ತಥಾಸ್త್ವಿತ್ಯರ್ಜುನಃ ಪ್ರಾಹ ಟಣತ್ಕೃತ್ಯ ಮಹದ್ಧನುಃ ।
ನಿರ್ಮಮೇ ಶರಸಂಜಾಲೈಸ್ಸೇತುಂ ದೃಢತರಂ ಘನಂ ॥ ೨೧ ॥

ಶತಯೋಜನವಿಸ್ತೀರ್ಣಂ ಸಾಗರಸ್ಯೋರ್ಧ್ವತಃ ಸ್ಥಿತಂ ।
ತಂ ಸೇತುಂ ಮಾರುತಿರ್ದೃಷ್ಟ್ವಾರ್ಜುನಾಗ್ರೇಂಗುಷ್ಠಭಾರತಃ ॥ ೨೨ ॥

ಅಕರೋತ್ಸಾಗರೇಮಗ್ನಂ ಕ್ಷಣಮಾತ್ರೇಣ ಲೀಲಯಾ ।
ತದಾ ದೇವಾಸ್ಸಗಂಧರ್ವಾಃ ಕಿನ್ನರೋರಗರಾಕ್ಷಸಾಃ ॥ ೨೩ ॥

ವಿದ್ಯಾಧರಾಶ್ಚಾಪ್ಸರಸಸ್ಸಿದ್ಧಾದ್ಯಾಗಗನಸ್ಥಿತಾಃ ।
ಮರುತಿಂ ಹ್ಯರ್ಜುನಸ್ಯಾಗ್ರೇ ವವರ್ಷುಃ ಪುಷ್ಪವೃಷ್ಟಿಭಿಃ ॥ ೨೪ ॥

ತತ್ಕರ್ಮಣಾರ್ಜುನಶ್ಚಾಪಿ ಚಿತಾಂ ಕೃತ್ವಾಬ್ಧಿರೋಧಸಿ ।
ನಿವಾರಿತೋಪಿ ಕಪಿನಾ ದೇಹಂ ತ್ಯಕ್ತುಂ ಸಮುದ್ಯತಃ ॥ ೨೫ ॥

---

೨೧. ಅರ್ಜುನನು ಹಾಗೆಯೇ ಆಗಲೆಂದು ಹೇಳಿ ಧನುಸ್ಸನ್ನು ತೆಗೆದು ಕೊಂಡು ಬೀವನ್ನು ಎಳೆಯುತ್ತ ಟಣತ್ಕಾರಮಾಡಿದನು. ಒಡನೆಯೇ ಬಾಣ ಗಳನ್ನು ಬಿಟ್ಟು ಜೋಡಿಸುತ್ತ ಆ ಬಾಣಗಳ ಗುಂಪಿನಿಂದ ಬಹು ಗಟ್ಟಿಯಾದ ಶರಸೇತುವೆಯನ್ನು ಕಟ್ಟಿದನು.

೨೨. ಆ ಸೇತುವೆಯು ಸಮುದ್ರದಮೇಲೆ ನೂರುಯೋಜನ ಉದ್ದ ಕ್ಕಿದ್ದಿತು. ಮಾರುತಿಯು ಆ ಸೇತುವೆಯನ್ನು ನೋಡಿ ತನ್ನ ಅಂಗುಷ್ಠದ ಭಾರದಿಂದ ಅರ್ಜುನನ ಎದುರಿನಲ್ಲಿಯೇ ಕ್ಷಣಕಾಲದಲ್ಲಿ ಮುಳುಗುವಂತೆ ಮಾಡಿದನು.

೨೩–೨೪. ಆಗ ದೇವತೆಗಳೂ, ಗಂಧರ್ವರೂ, ಕಿನ್ನರರೂ, ಉರಗರೂ, ರಾಕ್ಷಸರೂ, ವಿದ್ಯಾಧರರೂ, ಅಪ್ಸರರೂ, ಸಿದ್ಧರೂ ಮುಂತಾದವರು ಗಗನ ದಲ್ಲಿದ್ದುಕೊಂಡು ಅರ್ಜುನನ ಎದುರಿಗೇನೇ ಮಾರುತಿಯಮೇಲೆ ಪುಷ್ಪವೃಷ್ಟಿ ಯನ್ನು ಸುರಿಸಿದರು.

೨೫. ಕಪಿಯ ಈ ಕೆಲಸದಿಂದ ಅರ್ಜುನನು ದುಃಖಗೊಂಡವನಾಗಿ ಆ ಸಮುದ್ರದ ದಡದಲ್ಲಿಯೇ ಬೆಂಕಿಯಲ್ಲಿ ಬೀಳಲು ಸಿದ್ಧನಾದನು ಆಗ ಮಾರುತಿಯು ಬೇಡವೆಂದು ತಡೆದರೂ ಸುಮ್ಮನಾಗದೆ ಸಿದ್ಧವಾದನು.

ಏತಸ್ಮಿನ್ನಂತರೇ ಕೃಷ್ಣಸ್ತಂ ಪ್ರಾಹ ವಟುರೂಪಧೃತ್ ।
ಜ್ಞಾತ್ವಾರ್ಜುನಮುಖಾತ್ಸರ್ವಂ ಪೂರ್ವವೃತ್ತಂ ಪಣಾದಿಕಂ ॥ ೨೬ ॥

ಉಭಾಭ್ಯಾಂ ಯದ್ಯಚ್ಚರಿತಂ ಪೂರ್ವಂ ತಚ್ಚ ವೃಥಾ ಗತಂ ।
ಸಾಕ್ಷಿತ್ವೇನ ವಿನಾ ಕರ್ಮ ಸತ್ಯಂ ಮಿಥ್ಯಾ ನ ಬುಧ್ಯತೇ ॥ ೨೭ ॥

ಸಾಕ್ಷಿತ್ವೇನಾಧುನಾ ಮೇತ್ರ ಯುವಾಭ್ಯಾಂ ಕರ್ಮ ಪೂರ್ವವತ್ ।
ಕರ್ತವ್ಯಂ ತದಹಂ ದೃಷ್ಟ್ವಾ ಸತ್ಯಂ ಮಿಥ್ಯಾ ವದಾಮ್ಯಹಂ ॥ ೨೮ ॥

ತದ್ವಟೋರ್ವಚನಂ ಶ್ರುತ್ವಾ ದ್ವಾವೂಚತುಸ್ತಥೇತಿ ಚ ।
ತತಶ್ಚಕಾರಾರ್ಜುನಸ್ಸ ಶರಸೇತುಂ ಹಿ ಪೂರ್ವವತ್ ॥ ೨೯ ॥

ಸೇತೋರಂತರ್ಗತಂ ಚಕ್ರಂ ಶ್ರೀಕೃಷ್ಣಶ್ಚಾಕರೋತ್ತದಾ ।
ತತಸ್ಸ್ವಾಂಗುಷ್ಠಭಾರೇಣ ಕಪಿಸ್ಸೇತುಂ ಪ್ರಪೀಡಯತ್ ॥ ೩೦ ॥

---

೨೬. ಈ ಸಮಯದಲ್ಲಿ ಶ್ರೀಕೃಷ್ಣನು ಒಬ್ಬ ಬ್ರಹ್ಮಚಾರಿಯ ವೇಷವನ್ನು ಹಾಕಿಗೊಂಡು ಬಂದು ಈ ಅರ್ಜುನನನ್ನು ಕುರಿತು ಇದೇನೆಂದು ಕೇಳಲು ಅವನು ಎಲ್ಲವನ್ನೂ ಹೇಳಿದನು. ಆಗ ಆ ವಟುವು ಅರ್ಜುನನನ್ನು ಕುರಿತು ಇಂತೆಂದನು.

೨೭. ನೀವಿಬ್ಬರೂ ಹಿಂದೆ ಯಾವಯಾವ ಪ್ರತಿಜ್ಞೆಯನ್ನು ಮಾಡಿದಿರೋ ಅವೆಲ್ಲವೂ ಉಪಯೋಗವಿಲ್ಲದವುಗಳಾದುವು. ಸಾಕ್ಷಿಯಿಲ್ಲದಿದ್ದರೆ ಆ ಕೆಲಸವು ನಿಜವೇ ಸುಳ್ಳೇ ಎಂಬುದೇ ಗೊತ್ತಾಗುವುದಿಲ್ಲ.

೨೮. ನಾನು ಈಗ ಸಾಕ್ಷಿಯಾಗಿರುವೆನು. ನೀವಿಬ್ಬರೂ ಮೊದಲಿನಂತೆ ಮಾತನಾಡಿಕೊಂಡು ಕೆಲಸವನ್ನು ಮಾಡಿರಿ. ಅದನ್ನು ನಾನು ನೋಡಿ ಸರಿಯೋ ತಪ್ಪೋ ಎಂಬುದನ್ನು ಹೇಳುವೆನು.

೨೯. ಆ ಬ್ರಹ್ಮಚಾರಿಯ ಮಾತನ್ನು ಕೇಳಿ ಅವರಿಬ್ಬರೂ ಹಾಗೇ ಆಗಲೆಂದು ಒಪ್ಪಿಕೊಂಡರು. ಅನಂತರ ಅರ್ಜುನನು ಬಾಣಗಳಿಂದ ಮೊದಲಿನಂತೆ ಸೇತುವೆಯನ್ನು ಕಟ್ಟಿದನು.

೩೦. ಶ್ರೀಕೃಷ್ಣನು ತನ್ನ ಚಕ್ರವನ್ನು ಆ ಸೇತುವೆಯೊಳಗಿರುವಂತೆ ಮಾಡಿದನು. ಅನಂತರ ಆ ಕಪಿಯು ತನ್ನ ಅಂಗುಷ್ಠದ ಭಾರದಿಂದ ಆ ಸೇತುವೆಯನ್ನು ಅಮುಕಿದನು.

ಸೇತುಂ ದೃಢಂ ಕಪಿರ್ಜ್ಞಾತ್ವಾ ಪಾದಜಾನುಕರಾದಿಭಿಃ ।
ಬಲೇನ ಪೀಡಯಾಮಾಸ ಸ ಸೇತುಸ್ತೈಶ್ಚಚಾಲ ನ ॥ ೩೧ ॥

ತದಾ ತೂಷ್ಣೀಂ ಸ ಹನೂಮಾನ್ ಮಂತ್ರಯಾಮಾಸ ಚೇತಸಿ ।
ಪೂರ್ವಂ ಮಯಾಂಗುಷ್ಠಭರಾತ್ಸೇತುಶ್ಚಾಬ್ಧೌ ವಿಲೋಪಿತಃ ॥ ೩೨ ॥

ಹಸ್ತಾದಿಭಿಃ ಕಥಂ ನಾಯಮಿದಾನೀಂ ನ ವಿಲುಪ್ಯತೇ ।
ಕಾರಣಂ ವಟುರೇವಾತ್ರ ವಟುರ್ನಾಯಂ ಹರಿಸ್ಸ್ವಯಂ ॥ ೩೩ ॥

ಅಸ್ತೀತ್ಯಹಂ ವಿಜಾನಾಮಿ ಸ್ಮೃತಂ ಪೂರ್ವವರಾದಿಕಂ ।
ಮದ್ಗರ್ವಪರಿಹಾರೋದ್ಯ ಕೃಷ್ಣೇನಾನೇನ ಕರ್ಮಣಾ ॥ ೩೪ ॥

---

೩೧. ಆದಕ್ಕೆ ಆ ಸೇತುವೆಯು ಬಗ್ಗದಿರಲು ಹನುಮಂತನು ಸೇತುವೆಯು ಗಟ್ಟಿಯಾಗಿರುವುದೆಂದು ತಿಳಿದು ಕಾಲು, ಮಂಡಿ, ಕೈಗಳಿಂದಲೂ ತನ್ನ ಬಲವೆಲ್ಲ ವನ್ನು ಬಿಟ್ಟು ಅಮುಕಿದನು. ಆದರಿಂದಲೂ ಕೂಡ ಆ ಸೇತುವೆಯು ಅಲ್ಲಾ ಡಲೇ ಇಲ್ಲ.

೩೨. ಆಗ ಹನುಮಂತನು ಸುಮ್ಮನಾಗಿ ತನ್ನ ಮನಸ್ಸಿನಲ್ಲಿಯೇ ಯೋಚಿ ಸಿದನು. ನಾನು ಮೊದಲು ಅಂಗುಷ್ಠದ ಭಾರದಿಂದಲೇ ಈ ಸೇತುವೆಯನ್ನು ಮುರಿದು ಸಮುದ್ರದಲ್ಲಿ ಕೆಡವಿದೆನು.

೩೩. ಅಂತಹ ಸೇತುವೆಯು ಈಗ ನಾನು ಕೈಗಳಿಂದ ಬಡಿದಾಗ್ಯೂ ಮುರಿಯದಿರಲು ಕಾರಣವೇನು? ಇದಕ್ಕೆ ಬ್ರಹ್ಮಚಾರಿಯೇ ಕಾರಣವಾಗಿರ ಬೇಕು, ಇವನು ಬ್ರಹ್ಮಚಾರಿಯಲ್ಲ. ಆ ಪರಮಾತ್ಮನಾದ ಹರಿಯೇ ಆಗಿರಬೇಕು.

೩೪. ಖಂಡಿತವಾಗಿಯೂ ಹರಿಯೇ ಆಗಿರಬೇಕೆಂದು ನನಗೆ ಕಾಣುತ್ತದೆ. ಈಗ ಜ್ಞಾಪಕಕ್ಕೆ ಬಂದಿತು. ಪೂರ್ವದಲ್ಲಿ ಆ ಸ್ವಾಮಿಯು ನನಗೆ ವರವನ್ನು ಕೊಟ್ಟಿದ್ದನು. ಕೃಷ್ಣನು ಈ ರೀತಿ ರೂಪದಿಂದ ಬಂದು ನನ್ನ ಗರ್ವವನ್ನು ಪರಿ ಹರಿಸಿದನು.

ಕೃತೋಽಸ್ತ್ಯತ್ರ ಕೃಷ್ಣಸ್ಯಾಗ್ರೇ ಮನ್ಮರ್ಕಟಸುಪೌರುಷಂ ।
ಇತಿ ನಿಶ್ಚಿತ್ಯ ಮನಸಿ ಕಪಿಸ್ಸೋಽರ್ಜುನಮಬ್ರವೀತ್ ॥ ೩೫ ॥

ಜಿತಂ ತ್ವಯಾ ವಟೋರ್ಯೋರ್ಗಾತ್ತ್ರವ ಸಾಹಾಯ್ಯಮಾಚರೇ ।
ನಾಯಂ ವಟುಸ್ತ್ವಯಂ ಕೃಷ್ಣಃ ಸೇತುಚಕ್ರಪ್ರವೇಶಕೃತ್ ॥ ೩೬ ॥

ತ್ವತ್ಸಹಾಯಾರ್ಥಮಾಯಾತಸ್ಸತ್ಯಂ ಜ್ಞಾತೋ ಮಯಾರ್ಜುನ ।
ಅನೇನ ರಾಮರೂಪೇಣ ತ್ರೇತಾಯಾಂ ಮೇ ವರೋಽರ್ಪಿತಃ ॥ ೩೭ ॥

ದಾಸ್ಯಾಮಿ ದರ್ಶನಂ ತೇಽಹಂ ದ್ವಾಪರೇ ಕೃಷ್ಣರೂಪಧೃಕ್ ।
ತತ್ಸತ್ಯಂ ವಚನಂ ಚಾದ್ಯ ಕೃತಂ ತ್ವತ್ಸೇತುಹೇತುತಃ ॥ ೩೮ ॥

---

೩೫. ಶ್ರೀಕೃಷ್ಣನ ಎದುರಿಗೆ ಕಪಿಯಾದ ನನ್ನ ಪೌರುಷವು ಕಪಿಯ ಪೌರುಷದಂತೆ ವ್ಯರ್ಥವಾಯಿತು ಎಂಬುದಾಗಿ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು ಕಪಿಯು ಅರ್ಜುನನನ್ನು ಕುರಿತು ಇಂತೆಂದಿತು.

೩೬. ಎಲೈ ವೀರನೇ! ನೀನು ಈ ಬ್ರಹ್ಮಚಾರಿಯ ಸಹಾಯದಿಂದ ನನ್ನನ್ನು ಸೋಲಿಸಿದ್ದೀಯೆ. ನಿನಗೆ ನಾನು ಧ್ವಜದಲ್ಲಿದ್ದುಕೊಂಡು ಸಹಾಯವನ್ನು ಮಾಡುತ್ತೇನೆ. ಇವನು ವಟುವಲ್ಲ. ಇವನೇ ಕೃಷ್ಣನು. ತಾನು ಈ ಸೇತುವೆಯೊಳಗೆ ಚಕ್ರವನ್ನು ಸೇರಿಸಿರುವನು.

೩೭. ಎಲೈ ಅರ್ಜುನನೇ! ಈ ಕೃಷ್ಣನು ನಿನ್ನ ಸಹಾಯಕ್ಕೋಸ್ಕರ ಈಗ ಬಂದಿರುವನು. ನನಗೆ ತಿಳಿಯಿತು. ಈ ಸ್ವಾಮಿಯು ತ್ರೇತಾಯುಗದಲ್ಲಿ ರಾಮಾವತಾರದಿಂದಿದ್ದು ನನಗೆ ವರವನ್ನು ಕೊಟ್ಟನು.

೩೮. ಎಲೈ ಹನುಮಂತನೇ! ನಿನಗೆ ನಾನು ಕೃಷ್ಣನ ರೂಪದಿಂದ ದ್ವಾಪರಯುಗದಲ್ಲಿ ದರ್ಶನವನ್ನು ಕೊಡುತ್ತೇನೆ. ಎಂದು. ಆ ಸ್ವಾಮಿಯು ನಿನ್ನ ಸೇತುವೆಯನ್ನು ಕಾರಣವನ್ನಾಗಿ ಮಾಡಿಕೊಂಡು ನನಗೆ ದರ್ಶನವನ್ನು ಕೊಟ್ಟು ತನ್ನ ಮಾತನ್ನು ಸತ್ಯವನ್ನಾಗಿ ಮಾಡಿಕೊಂಡನು.

ಇತ್ಯರ್ಜುನಂ ಕಪಿರ್ಯಾವದಬ್ರವೀತ್ತಾವದಗ್ರತಃ ।
ವಟುರೇವಾಭವತ್ಕೃಷ್ಣಃ ಪೀತವಾಸಾ ಘನಪ್ರಭಃ ॥ ೩೯ ॥

ತದ್ದರ್ಶನೋದ್ಧರ್ವರೋಮಾ ತಂ ಪ್ರಣನಾಮಾಂಜನೀಸುತಃ ।
ಆಲಂಗಿತೋಪಿ ಕೃಷ್ಣೇನ ಸ ಮೇನೇ ಕೃತಕೃತ್ಯತಾಂ ॥ ೪೦ ॥

ಚಕ್ರೋ ಯಯೌ ಯಥಾಸ್ಥಾನಂ ಶ್ರೀಕೃಷ್ಣಸ್ಯಾಜ್ಞಯಾ ತದಾ ।
ಸಾಗರೇಣ ಸ್ವವೀಚೀಭಿಶ್ಶರಸೇತುರ್ವಿಲೋಪಿತಃ ॥ ೪೧ ॥

ತದಾರ್ಜುನೋ ಗರ್ವಹೀನೋ ಮೇನೇ ಕೃಷ್ಣೇನ ಜೀವಿತಃ ।
ಕೃಷ್ಣಸ್ತದಾರ್ಜುನಂ ಪ್ರಾಹ ತ್ವಯಾ ರಾಮೇಣ ಸ್ಪರ್ಧಿತಂ ॥ ೪೨ ॥

---

೩೯. ಹೀಗೆಂಬುದಾಗಿ ಕಪಿಯು ಅರ್ಜುನನಿಗೆ ಹೇಳುತ್ತಿರುವಷ್ಟರಲ್ಲಿಯೇ ಆ ವಟುವೇ ಕೃಷ್ಣನಾಗಿ ಪೀತಾಂಬರವನ್ನು ಧರಿಸಿ ಮೇಘಶ್ಯಾಮನಾಗಿ ನಿಂತು ಕೊಂಡನು.

೪೦. ಆ ಸ್ವಾಮಿಯನ್ನು ನೋಡಿದೊಡನೆಯೇ ಆಂಜನೇಯನಿಗೆ ರೋಮಾಂಚವೆದ್ದು ಆ ಸ್ವಾಮಿಗೆ ನಮಸ್ಕರಿಸಿದನು. ಕೃಷ್ಣನು ಒಡನೆಯೇ ಆ ಆಂಜನೇಯನನ್ನು ಆಲಂಗಿಸಿಕೊಂಡನು. ಆಗ ಆ ಆಂಜನೇಯನು ತಾನು ಕೃತಕೃತ್ಯನಾದೆನೆಂದು ತಿಳಿದುಕೊಂಡನು.

೪೧. ಅನಂತರದಲ್ಲಿ ಚಕ್ರವು ಶ್ರೀಕೃಷ್ಣನ ಅಪ್ಪಣೆಯಂತೆ ತನ್ನ ಸ್ಥಾನಕ್ಕೆ ಹೊರಟುಹೋಯಿತು. ಅನಂತರ ಸಮುದ್ರವು ತನ್ನ ಅಲೆಗಳಿಂದ ಆ ಶರಸೇತುವೆಯನ್ನು ನಾಶಮಾಡಿತು.

೪೨. ಅರ್ಜುನನು ಶ್ರೀಕೃಷ್ಣನಿಂದ ಜೀವವನ್ನು ಉಳಿಸಿಕೊಂಡವನಾಗಿ ಗರ್ವವನ್ನು ಬಿಟ್ಟು ಕೃಷ್ಣನಿಂದಲೇ ಬದುಕಿದೆನೆಂದು ತಿಳಿದುಕೊಂಡನು. ಆಗ ಕೃಷ್ಣನು ಅರ್ಜುನನನ್ನು ಕುರಿತು ಎಲೈ ಅರ್ಜುನನೇ ! ನೀನು ಶ್ರೀರಾಮನೊಡನೆ ಸ್ಪರ್ಧಿಸಿದಂತಾಯಿತು.

ಹನೂಮತಾ ಧನುರ್ವಿದ್ಯಾ ತವಾತೋತ್ರ ವೃಷಾ ಕೃತಾ ।
ಯತ್ಪ್ರತಾಪಾದಿತಿಗಿರಾ ತ್ವಯಾಪಿ ವಾಯುನಂದನ ॥ ೪೩ ॥

ರಾಮೇಣ ಸ್ಪರ್ಧಿತಂ ಯಸ್ಮಾತ್ತಸ್ಮಾದರ್ಜುನಸಂಜ್ಞಿತಂ ।
ಅತಃ ಪರಂ ವೀತಗರ್ವಸ್ತ್ವಂ ಮಾಂ ಭಜ ನಿರಂತರಂ ॥ ೪೪ ॥

ಇತ್ಯುಕ್ತ್ವಾ ಮಾರುತಿಂ ಪೃಷ್ಟ್ವಾರ್ಜುನೇನ ತತ್ಪುರಂ ಯಯೌ ।
ಅತಃ ಕಪಿಧ್ವಜಶ್ಚೇತಿ ಜನೈರರ್ಜುನ ಈರ್ಯತೇ ॥ ೪೫ ॥

ಇತಿ ಭಾವಿಕಥಾ ಪೃಷ್ಟಾ ತ್ವಯಾ ಸಾಪಿ ಮಯೋದಿತಾ ।
ಕಿಮಗ್ರೇ ಶ್ರೋತುಕಾಮೋಸಿ ತತ್ಪೃಚ್ಛಸ್ವ ವದಾಮಿ ತೇ ॥ ೪೬ ॥

॥ ವಿಷ್ಣುದಾಸ ಉವಾಚ ॥

ಗುರೋಧುನಾ ರಾಘವಸ್ಯ ವೈಕುಂಠಾರೋಹಣೋತ್ಸವಂ ।
ಮಾಂ ವದಸ್ವ ಸವಿಸ್ತಾರಂ ಯೇನಾಹಂ ತೋಷಮಾಪ್ನುಯಾಂ ॥ ೪೭ ॥

೪೩-೪೪. ಆದ್ದರಿಂದಲೇ ಹನುಮಂತನು ನಿನ್ನ ಧನುರ್ವಿದ್ಯೆಯನ್ನು ಆ ರಾಮನ ಪ್ರತಾಪದಿಂದ ವ್ಯರ್ಥವಾದುದನ್ನಾಗಿ ಮಾಡಿದನು. ಎಲೈ ವಾಯುನಂದನನೇ! ನೀನು ರಾಮನೊಡನೆ ಸ್ಪರ್ಧಿಸಿದಂತಾಯಿತು. ಆದ್ದರಿಂದಲೇ ಹನುಮಂತನು ನಿನ್ನ ಗರ್ವವನ್ನು ಮುರಿದನು. ಇನ್ನುಮೇಲೆ ನೀನು ಗರ್ವವನ್ನು ಬಿಟ್ಟು ನನ್ನನ್ನೇ ಯಾವಾಗಲೂ ಭಜಿಸು.

೪೫. ಹೀಗೆಂದು ಇಬ್ಬರಿಗೂ ಹೇಳಿ ಮಾರುತಿಗೆ ಹೋಗುತ್ತೇನೆಂದು ಹೇಳಿ ಕೃಷ್ಣನು ಅರ್ಜುನನೊಡನೆ ಅವನ ಪಟ್ಟಣಕ್ಕೆ ಹೋದನು. ಆದ್ಧರಿಂದಲೇ ಅರ್ಜುನನು ಕಪಿಧ್ವಜನು ಎಂದು ಎಲ್ಲರಿಂದಲೂ ಹೇಳಿಸಿಕೊಳ್ಳುತ್ತಾನೆ.

೪೬. ಎಲೈ ಶಿಷ್ಯನೇ! ನೀನು ಮುಂದಿನ ಕಥೆಯನ್ನು ಕೇಳಿದೆ. ಅದನ್ನು ಕೂಡ ನಿನಗೆ ಹೇಳಿದ್ದೇನೆ. ಇನ್ನೇನು ಬೇಕೋ ಅದೆಲ್ಲವನ್ನೂ ಕೇಳು. ಎಲ್ಲವನ್ನೂ ನಿನಗೆ ಹೇಳುತ್ತೇನೆ.

೪೭. ವಿಷ್ಣುದಾಸನು ಹೇಳಿದನು :—ಎಲೈ ಗುರುವೇ! ಈಗ ಶ್ರೀರಾಮನ ವೈಕುಂಠಾರೋಹಣೋತ್ಸವವನ್ನು ವಿಸ್ತಾರವಾಗಿ ನನಗೆ ಹೇಳು. ಅದರಿಂದ ನನಗೆ ಸಂತೋಷವುಂಟಾಗುತ್ತದೆ.

॥ ರಾಮದಾಸ ಉವಾಚ ॥

ಪೂರ್ಣಕಾಂಡಂ ತವಾದ್ಯಾಹಂ ವದಿಷ್ಯಾಮಿ ಶ್ರುಣುಷ್ವ ತತ್ ।
ಯಸ್ಮಿನ್ ಶ್ರೀರಾಮಚಂದ್ರಸ್ಯ ವೈಕುಂಠಾರೋಹಣೋತ್ಸವಃ ॥ ೪೮ ॥

ಇದಂ ಮನೋಹರಂ ಕಾಂಡಂ ಮಯಾ ತೇ ಸಮುದೀರಿತಂ ।
ಯೇ ಶೃಣ್ವಂತಿ ನರಾ ಭೂಮ್ಯಾಂ ತೇಷಾಂ ರಾಮೇ ರತಿರ್ಭವೇತ್ ॥ ೪೯ ॥

ಮನೋಭಿಲಷಿತಾನ್ ಕಾಮಾನ್ ತೇ ಲಭಂತಿ ನ ಸಂಶಯಃ ।
ಪುತ್ರಾರ್ಥೀ ಪ್ರಾಪ್ನುಯಾತ್ಪುತ್ರಂ ಧನಾರ್ಥೀ ಧನಮಾಪ್ನುಯಾತ್ ॥

ಇದಂ ರಮ್ಯಂ ಪವಿತ್ರಂ ಚ ಶ್ರವಣಾನ್ಮಂಗಳಪ್ರದಂ ।
ಪಠನೀಯಂ ಪ್ರಯತ್ನೇನ ರಾಮಸದ್ಭಕ್ತಿವರ್ಧನಂ ॥ ೫೧ ॥

---

೪೮. ರಾಮದಾಸನು ಹೇಳಿದನು :—ಎಲೈ ಶಿಷ್ಯನೇ! ನಿನಗೆ ನಾನು ಈಗ ಪೂರ್ಣಕಾಂಡವನ್ನು ಹೇಳುತ್ತೇನೆ. ಅದನ್ನು ಕೇಳು. ಆ ಕಾಂಡದಲ್ಲಿಯೇ ಶ್ರೀರಾಮಚಂದ್ರನ ವೈಕುಂಠಾರೋಹಣೋತ್ಸವವು ವಿವರಿಸಲ್ಪಟ್ಟಿದೆ.

೪೯. ಈ ಮನೋಹರಕಾಂಡವನ್ನು ನಾನು ನಿನಗೆ ಹೇಳಿದ್ದೇನೆ. ಇದನ್ನು ಭೂಮಿಯಲ್ಲಿ ಯಾರು ಕೇಳುವರೋ ಅವರಿಗೆ ರಾಮನಲ್ಲಿ ಭಕ್ತಿಯುಂಟಾಗುತ್ತದೆ.

೫೦. ಅವರು ಅವರ ಮನಸ್ಸಿನಲ್ಲಿರುವ ಇಷ್ಟವನ್ನು ಹೊಂದುತ್ತಾರೆ. ಸಂಶಯವಿಲ್ಲ. ಮಕ್ಕಳನ್ನು ಅಪೇಕ್ಷಿಸುವವನು ಮಕ್ಕಳನ್ನೂ, ಧನವನ್ನು ಅಪೇಕ್ಷಿಸುವವನು ಧನವನ್ನೂ ಹೊಂದುತ್ತಾನೆ.

೫೧. ಇದು ರಮ್ಯವೂ ಮನೋಹರವೂ ಆಗಿರುವುದು. ಕೇಳುವುದರಿಂದ ಮಂಗಳವನ್ನುಂಟುಮಾಡುತ್ತದೆ. ಇದನ್ನು ಪ್ರಯತ್ನಪಟ್ಟು ಓದಬೇಕು. ರಾಮನಲ್ಲಿ ಭಕ್ತಿಯನ್ನು ಹೆಚ್ಚಿಸುತ್ತದೆ.

ಆನಂದರಾಮಾಯಣಮಧ್ಯಸಂಸ್ಥಂ
ಮನೋಹರಂ ಕಾಂಡಮಿದಂ ವಿಚಿತ್ರಂ ।
ಪಠಂತಿ ಶೃಣ್ವಂತಿ ಗೃಣಂತಿ ಮರ್ತ್ಯಾ
ಸ್ತೇ ಸ್ವೀಯಕಾಮಾನಖಿಲಾನ್ ಲಭಂತೇ ॥ ೫೨ ॥

ಇದಂ ಪವಿತ್ರಂ ಪರಮಂ ವಿಚಿತ್ರಂ
ನಾನಾಚರಿತ್ರಂ ತ್ವತಿಪುಣ್ಯದಂ ಚ ।
ಸದಾ ನರೈಃ ಶ್ರಾವ್ಯಮಿದಂ ಶುಭಂ ಶ್ರೀ
ಸೀತಾಪತೇರ್ಭಕ್ತಿವಿವೃದ್ಧಿಕಾರಿ ॥ ೫೩ ॥

ಇತಿಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಮನೋಹರಕಾಂಡೇ ರಾಮದಾಸ ವಿಷ್ಣುದಾಸ ಸಂವಾದೇ ಹನೂಮತಾ ಶರಸೇತುಭಂಗೋ ನಾಮ ಅಷ್ಟಾದಶಸ್ಸರ್ಗಃ ಸಮಾಪ್ತಃ

ಇತಿ ಮನೋಹರಕಾಂಡ ಮಷ್ಟಮಂ ಸಂಪೂರ್ಣಂ
ಶ್ರೀರಾಮಚಂದ್ರಚರಣಾರವಿಂದಾರ್ಪಣಮಸ್ತು.

---

೫೨. ಆನಂದರಾಮಾಯಣದ ಮಧ್ಯದಲ್ಲಿರುವ ಈ ಮನೋಹಕಾಂಡವು ವಿಚಿತ್ರವಾದುದು. ಇದನ್ನು ಯಾರು ಓದುತ್ತಾರೆಯೋ ಅವರು ತಮ್ಮ ಇಷ್ಟಾರ್ಥಗಳೆಲ್ಲವನ್ನೂ ಹೊಂದುತ್ತಾರೆ.

೫೩. ಈ ಕಾಂಡವು ಪವಿತ್ರವಾದುದು. ಬಹು ವಿಚಿತ್ರವಾದುದು. ಬಗೆ ಬಗೆಯ ಕಥೆಯುಳ್ಳದ್ದು. ಪುಣ್ಯವನ್ನು ಕೊಡುತ್ತದೆ. ಇದನ್ನು ಯಾನಾಗಲೂ ನರರು ಕೇಳುತ್ತಿರಬೇಕು. ಶುಭವಾದುದು. ಸೀತಾಪತಿಯಲ್ಲಿ ಭಕ್ತಿಯು ಹೆಚ್ಚಲು ಕಾರಣವಾವುದು.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಆದಿಕಾವ್ಯವಾದ ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ರಾಮದಾಸ ವಿಷ್ಣುದಾಸ ಸಂವಾದದಲ್ಲಿ ಹನುಮಂತನು ಶರಸೇತುವನ್ನು ಭಂಗಮಾಡಿದನೆಂಬ ಹದಿನೆಂಟನೆಯ ಸರ್ಗವು ಮುಗಿದುದು.
ಇಂತು ಎಂಟನೆಯದಾದ ಶ್ರೀ ಮನೋಹರಕಾಂಡವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಹದಿನೆಂಟನೆಯ ಸರ್ಗದ ಸಾರಾಂಶವು.

ಅರ್ಜುನನಿಗೆ ಕಪಿಧ್ವಜನೆಂದು ಹೆಸರು ಬಂದಿರಲು ಕಾರಣವೇನು ಎಂದು ವಿಷ್ಣುದಾಸನು ರಾಮದಾಸನನ್ನು ಪ್ರಶ್ನಿಸಲು ಭವಿಷ್ಯತ್ಕಥೆಯಾದ ಆ ವಿಷಯವನ್ನು ಜ್ಞಾನದೃಷ್ಟಿಯಿಂದ ನೋಡಿ ಹೇಳುವನು.

ಒಂದು ಸಾರಿ ಅರ್ಜುನನು ಕೃಷ್ಣನನ್ನು ಬಿಟ್ಟು ತಾನೊಬ್ಬನೇ ಬೇಟೆಯಾಡಲು ಕಾಡಿಗೆ ಹೋದನು. ಮಧ್ಯಾಹ್ನದವರೆಗೂ ಬೇಟೆಯಾಡಿ ಅನಂತರ ಮಾಧ್ಯಾಹ್ನಿಕಾದಿ ನಿತ್ಯ ಕೃತ್ಯಗಳನ್ನು ಮಾಡಲು ಸಮೀಪದಲ್ಲಿದ್ದ ರಾಮೇಶ್ವರ ಸೇತುವಿನ ಬಳಿ ಇರುವ ಧನುಷ್ಕೋಟಿ ತೀರ್ಥದಲ್ಲಿ ಸ್ನಾನಮಾಡಿ ಆ ಸಮುದ್ರದ ತೀರದಲ್ಲಿಯೇ ಸಂಚರಿಸುತ್ತಿದ್ದನು. ಆಗ ಅವನಿಗೆ ಒಂದು ವಿಧವಾದ ಗರ್ವವು ಮೂಡಿತು. ಹೀಗೆ ಸಂಚರಿಸುತ್ತಿರುವಾಗಲೇ ಅಲ್ಲಿರುವ ಗುಡ್ಡದಮೇಲೆ ಕುಳಿತಿರುವ ಒಂದು ಕಪಿಯು ಅವನ ಕಣ್ಣಿಗೆ ಬಿದ್ದಿತು. ಆ ಕಪಿಯು ಎಡಬಿಡದೆ "ರಾಮ ರಾಮ" ಎಂದೆನ್ನುತ್ತ ರಾಮ ಜಪವನ್ನು ಮಾಡುತ್ತಿದ್ದಿತು. ಈ ಅರ್ಜುನನು ಅದರ ಬಳಿಗೆ ಹೋಗಿ ಎಲೈ ಕಪಿಯೇ! ನೀನಾರು? ಎಂದೆನ್ನಲು ಆ ಕಪಿಯು ನಗುತ್ತ ಅಯ್ಯಾ! ಯಾವನ ಪ್ರಭಾವದಿಂದ ಆ ಶ್ರೀರಾಮನು ಶತಯೋಜನ ವಿಸ್ತಾರವುಳ್ಳ ಈ ಸೇತುವೆಯನ್ನು ಸಮುದ್ರದಲ್ಲಿ ಕಲ್ಪಿಸಿದನೋ ಆ ವಾಯುಪುತ್ರನೇ ನಾನೆಂದು ತಿಳಿ ಎಂದಿತು.

ಕಪಿಯು ಹೇಳಿದ ಈ ಗರ್ವದ ಮಾತನ್ನು ಅರ್ಜುನನು ಕೇಳಿ ನಗುತ್ತ ಎಲೈ ಕಪಿಯೆ! ಈ ಸೇತುವೆಯನ್ನು ಕಟ್ಟುವುದರಲ್ಲಿ ಶ್ರೀರಾಮನು ವ್ಯರ್ಥವಾಗಿ ಶ್ರಮಪಟ್ಟನು. ಅವನು ಬಾಣಗಳಿಂದಲೇ ಸೇತುವೆಯನ್ನು ಕಟ್ಟಿ ತನ್ನ ಕೆಲಸವನ್ನು ಸಾಧಿಸಿಕೊಳ್ಳಬಹುದಾಗಿದ್ದಿತು, ಎಂದನು. ಅದನ್ನು ಕೇಳಿ ಕಪಿಯು ಅಯ್ಯಾ! ನನ್ನಂತಹ ಕಪಿಗಳ ಭಾರದಿಂದ ಶರಸೇತುವೆಯು ಬಗ್ಗೀತು, ಎಂದು ಹಾಗೆ ಮಾಡಿದನು ಎಂದಿತು. ಅದಕ್ಕೆ ಅರ್ಜುನನು "ಕಪಿಗಳ ಭಾರದಿಂದ

ಸೇತುವೆಯು ನೀರಿನಲ್ಲಿ ಮುಳುಗುವಂತಾದ ಪಕ್ಷದಲ್ಲಿ ಆ ಬಿಲ್ಲಾಳಿನ ಬಿಲ್ಲು ವಿದ್ಯೆಯು ವ್ಯರ್ಥವಾದುದು. ಎಂದನು. ಅಲ್ಲದೆ ಈಗ ನಾನು ಈ ಸಮುದ್ರದ ಮೇಲೆ ಶರಸೇತುವೆಯನ್ನು ಕಟ್ಟುತ್ತೇನೆ. ಆದರ ಮೇಲೆ ನೀನು ಬೇಕಾದಂತೆ ಕುಣಿ. ಆಗ ನನ್ನ ಧನುರ್ವಿದ್ಯೆಯು ಎಂತಹುದು ಎಂದು ನಿನಗೇ ಗೊತ್ತಾಗುತ್ತದೆ ಎಂದನು. ಆದಕ್ಕೆ ಮಾರುತಿಯು " ಅಯ್ಯಾ ನಾನು ಹೆಬ್ಬೆಟ್ಟಿನಿಂದ ಅಮುಕಿಯೇ ನಿನ್ನ ಆ ಶರಸೇತುವೆಯನ್ನು ಮುರಿದರೆ ಆಗ ನೀನೇನು ಮಾಡುತ್ತೀಯೆ? ಎಂದಿತು. ಅದಕ್ಕೆ ಅರ್ಜುನನು ನಿನ್ನ ಭಾರದಿಂದ ಶರಸೇತುವೆಯು ಮುರಿದರೆ ಆಗ ನಾನು ಅಗ್ನಿಪ್ರವೇಶವನ್ನು ಮಾಡುತ್ತೇನೆ. ನೀನು ಮುರಿಯದಿದ್ದರೆ ಏನು ಮಾಡುತ್ತೀಯೆ? ಪಣವನ್ನು ಕಟ್ಟು ಎಂದೆನ್ನಲು ಆ ಕಪಿಯು ನಾನು ನನ್ನ ಹೆಬ್ಬೆಟ್ಟಿನಿಂದಲೇ ನಿನ್ನ ಶರಸೇತುವೆಯನ್ನು ಮುರಿಯದಿದ್ದರೆ ನಿನ್ನ ಧ್ವಜದಲ್ಲಿದ್ದು ಕೊಂಡು ನಿನಗೆ ಸಹಾಯವನ್ನು ಮಾಡುತ್ತೇನೆ, ಎಂದಿತು.

ಆಗ ಅರ್ಜುನನು ಹಾಗೆಯೇ ಆಗಲೆಂದು ಹೇಳಿ ಧನುಸ್ಸಿಗೆ ಹೆದೆಯನ್ನೇರಿಸಿ ಠಂಕಾರಮಾಡಿ ಗಟ್ಟಿಯಾಗಿರುವಂತೆ ಶರಸೇತುವೆಯನ್ನು ರಾಮನು ಕಟ್ಟಿರುವಂತೆಯೇ ಆ ಸಾಗರದ ಮೇಲೆ ನೂರು ಯೋಜನಗಳ ಉದ್ದಕ್ಕೂ ಕಟ್ಟಿದನು. ಕಪಿಯು ಅದನ್ನು ನೋಡಿ ಹೆಬ್ಬೆಟ್ಟಿನಿಂದ ಅಮುಕಿಯೇ ಮುರಿದು ಬಿಟ್ಟಿತು. ಆಗ ದೇವತೆಗಳು ಆ ಕಪಿಯ ಬಲವನ್ನು ನೋಡಿ ಪುಷ್ಪವೃಷ್ಟಿಯನ್ನು ಸುರಿಸಿದರು.

ಅರ್ಜುನನು ಇದನ್ನು ನೋಡಿ ತನ್ನ ಪ್ರತಿಜ್ಞೆಯಂತೆ ನಡೆದುಕೊಳ್ಳಲು ಚಿತೆಯನ್ನು ಮಾಡಿದನು. ಕಪಿಯು ಅನೇಕ ಬಗೆಯಿಂದ ಸಮಾಧಾನ ಹೇಳಿದರೂ ಅರ್ಜುನನು ಕೇಳಲಿಲ್ಲ. ಇದನ್ನು ತಿಳಿದ ಶ್ರೀಕೃಷ್ಣನು ಬ್ರಹ್ಮಚಾರಿಯ ವೇಷವನ್ನು ಹಾಕಿಕೊಂಡು ಅಲ್ಲಿಗೆ ಬಂದನು. ಅರ್ಜುನನನ್ನು ಕೇಳಿ ಅಲ್ಲಿನ ವಿಷಯಗಳನ್ನು ತಿಳಿದುಕೊಂಡನು. ಆಗ ಬ್ರಹ್ಮಚಾರಿಯು ನೀವಿಬ್ಬರೂ ಮೊದಲು ಮಾಡಿಕೊಂಡ ಪಣವು ವ್ಯರ್ಥವು. ಸಾಕ್ಷಿಯಿಲ್ಲದ ಕೆಲಸವು ಸತ್ಯವಾದರೂ ಆದು ಸುಳ್ಳೆಂದು ಭಾವಿಸಬೇಕು. ಏಕೆಂದರೆ ಅದರಲ್ಲಿ ಒಳ್ಳೆಯದು ಕೆಟ್ಟದ್ದು ತಿಳಿಯುವುದಿಲ್ಲ. ಈಗ ನಾನು ಸಾಕ್ಷಿಯಾಗಿದ್ದೇನೆ. ನನ್ನ ಎದುರಿಗೆ ನೀವಿಬ್ಬರೂ ನಿಮ್ಮ ನಿಮ್ಮ ಕೆಲಸಗಳನ್ನು ಮಾಡಿರಿ. ಎನ್ನಲು ಅವರಿಬ್ಬರು ಹಾಗೆಯೇ ಆಗಲೆಂದು ಒಪ್ಪಿಕೊಂಡರು.

ಅಮೇಲೆ ಅರ್ಜುನನು ಶರಸೇತುವೆಯನ್ನು ಕಟ್ಟಿದನು. ಆಗ ಕೃಷ್ಣನು ತನ್ನ ಚಕ್ರವನ್ನು ಆ ಸೇತುವೆಯಲ್ಲಿ ಹುದುಗಿಸಿಟ್ಟನು. ಕಪಿಯು ಹಿಂದಿನಂತೆಯೇ

ತನ್ನ ಅಂಗುಷ್ಠದಿಂದ ಸೇತುವೆಯನ್ನು ಅಮುಕಿತು. ಆ ಸೇತುವೆಯು ಮುರಿಯದೆ ಗಟ್ಟಿಯಾಗಿರಲು ಅನಂತರ ಪಾದಗಳಿಂದಲೂ ಮಂಡಿಯಿಂದಲೂ ಕೊನೆಗೆ ಕೈಗಳಿಂದಲೂ ಕೂಡ ಬಹು ಬಲವಾಗಿ ಅಮುಕಿತು. ಆದರೂ ಕೂಡ ಆ ಸೇತುವೆಯು ಅಲ್ಲಾಡಲೇ ಇಲ್ಲ. ಆಗ ಆ ಕಪಿಯು ಮೊದಲು ನಾನು ಹೆಬ್ಬೆಟ್ಟನಿಂದ ಸುಲಭವಾಗಿಯೇ ಮುರಿದುಬಿಟ್ಟೆನು. ಈಗ ಕೈಗಳಿಂದಲೂ, ಅಮುಕಿ ನನ್ನ ಭಾರವನ್ನೆಲ್ಲಾ ಬಿಟ್ಟದ್ದರೂ ಮುರಿಯಲಿಲ್ಲ ಇದಕ್ಕೆ ಕಾರಣವು ಈ ಬ್ರಹ್ಮಚಾರಿಯೇ ಇರಬೇಕು, ಇವನು ಬ್ರಹ್ಮಚಾರಿಯಲ್ಲ, ಹರಿಯಾಗಿಯೇ ಇರಬೇಕು. ನನ್ನ ಗರ್ವವನ್ನು ನಾಶಮಾಡುವುದಕ್ಕೂ ಹಿಂದೆ ಕೊಟ್ಟಿದ್ದ ವರದಂತೆಯೂ ಬಂದಿರುವನು. ಇವನೆದುರಿಗೆ ನನ್ನ ಪೌರುಷವೆಲ್ಲಿ ನಡೆದೀತು ? ಎಂದು ಯೋಚಿಸಿ ಎಲೈ ಅರ್ಜುನನೇ ? ನೀನು ಈ ಬ್ರಹ್ಮಚಾರಿಯ ಅನುಗ್ರಹದಿಂದ ಗೆದ್ದೆ. ನಿನಗೆ ಸಹಾಯವನ್ನು ಮಾಡುತ್ತೇನೆ. ಇವನು ವಟುವಲ್ಲ. ಶ್ರೀಕೃಷ್ಣನೇ ಆಗಿರುವನು. ಇವನು ನಿನ್ನ ಸಹಾಯಕ್ಕೋಸ್ಕರ ಬಂದಿರುವನು. ಇದು ನಿಶ್ಚಯವು. ಇವನು ರಾಮಾವತಾರದಲ್ಲಿದ್ಧಾಗ ಎಲೈ ಹನುಮಂತನೇ ! ನಾನು ದ್ವಾಪರಯುಗದಲ್ಲಿ ಕೃಷ್ಣರೂಪದಿಂದ ದರ್ಶನವನ್ನು ಕೊಡುತ್ತೇನೆಂದು ಹೇಳಿದ್ದನು. ಅದರಿಂದ ಬಂದಿರುವನು ಎಂದನು. ಇಷ್ಟರಲ್ಲಿ ಆ ಕೃಷ್ಣನು ರಾಮರೂಪವನ್ನು ಹೊಂದಿದನು. ಆಗ ಮಾರುತಿಗೆ ಬಹು ಸಂತೋಷವಾಗಿ ದಂಡಪ್ರಣಾಮವನ್ನು ಮಾಡಿದನು. ಆಗ ಆ ರಾಮನು ಆಲಂಗನೆಮಾಡಿಕೊಳ್ಳಲು ಮಾರುತಿಯು ತಾನು ಕೃತಕೃತ್ಯನಾದೆನೆಂದು ತಿಳಿದುಕೊಂಡನು. ಮತ್ತು ಆವನ ಅಪ್ಪಣೆಯನ್ನು ಹೊಂದಿ ಹೊರಟು ಹೋದನು. ಅನಂತರ ಸಾಗರವು ಉಕ್ಕಿ ಆ ಶರಸೇತುವೆಯನ್ನು ಹಾಳುಮಾಡಿತು. ಅರ್ಜುನನೂ ಕೂಡ ಕೃಷ್ಣನಿಂದ ತಾನು ಬದುಕಿದೆನೆಂದು ತಿಳಿದು ಗರ್ವವನ್ನು ಬಿಟ್ಟನು. ಕೃಷ್ಣನು. ಎಲೈ ಅರ್ಜುನನೇ ! ನೀನು ಮಾರುತಿಯೊಡನೆ ಸ್ಪರ್ಧಿಸಿದಂತಾಗಲಿಲ್ಲ. ರಾಮನೊಡನೆ ಸ್ಪರ್ಧಿಸಿದಂತಾಯಿತು. ಆದ್ದರಿಂದಲೇ ನೀನು ಸೋತೆ. ಇನ್ನುಮೇಲಾದರೂ ಗರ್ವವನ್ನು ಬಿಟ್ಟು ನನ್ನನ್ನು ಸೇವಿಸು ಎಂದನು. ಇದರಿಂದ ಅರ್ಜುನನಿಗೆ ಕಪಿಧ್ವಜನೆಂದು ಹೆಸರು ಬಂದಿತೆಂದು ತಿಳಿ ಎಂದು ಆ ರಾಮದಾಸನು ಹೇಳಿದನು.

॥ ಶ್ರೀರಸ್ತು ॥

। ವಿಘ್ನಧ್ವಾಂತ ಪ್ರಭಾಕರಾಯ ಶ್ರೀಮಹಾಗಣಪತಯೇ ನಮಃ ।

ಶ್ರೀಮದಾದಿಕವಿ ವಾಲ್ಮೀಕಿವಿರಚಿತಂ

ಶ್ರೀಮದಾನಂದ ರಾಮಾಯಣಂ

॥ ಪೂರ್ಣಕಾಂಡಃ ॥

॥ ಪ್ರಥಮಃಸರ್ಗಃ ॥

॥ ರಾಮದಾಸ ಉವಾಚ ॥

ಅಥ ಶಾಸತಿ ರಾಜೇಂದ್ರೇ ರಾಮೇ ಸೀತಾಭಿರರಜಿತೇ।
ಸಭಾಯಾಮೇಕದಾ ದೂತಸ್ಸುಷೇಣಸ್ಯ ಗಜಾಹ್ವಯಾತ್ ॥ ೧ ॥

ಸಮಾಯಯೌ ಸವಿಕಲೋಕೇ ರಾಮಂ ನತ್ವಾಬ್ರವೀದ್ವಚಃ।
ರಾಮ ರಾಜೀವಪತ್ರಾಕ್ಷ ಸೋಮವಂಶೋದ್ಭವೈರ್ನೃಪೈಃ ॥ ೨ ॥

ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ

ಒಂದನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು—ಸೀತಾಮನೋಹರನಾದ ಶ್ರೀರಾಮನು ಪ್ರಜೆಗಳನ್ನು ನ್ಯಾಯದಿಂದ ಸಲಹುತ್ತ ರಾಜ್ಯವನ್ನು ಆಳುತ್ತಿರಲು ಇವನು ಸಭೆಯಲ್ಲಿ ಕುಳಿತಿರುವಾಗ ಒಂದುಸಾರಿ ಹಸ್ತಿನಾಪುರದಿಂದ ಸುಷೇಣನ ದೂತನು ಬಂದನು.

೨. ಆ ದೂತನು ಚಿಂತೆಗೊಂಡವನಾಗಿ ಸಭೆಗೆ ಬಂದು ಶ್ರೀರಾಮನಿಗೆ ನಮಸ್ಕರಿಸಿ ಇಂತೆಂದನು. ರಾಜೀವಲೋಚನನಾದ ಶ್ರೀರಾಮನೇ! ಚಂದ್ರವಂಶದ ರಾಜರುಗಳಿಂದ ಹಸ್ತಿನಾಪುರವು ಆವರಿಸಲ್ಪಟ್ಟಿದೆ.

ಸಂವೇಷ್ಟಿತಂ ಗಜಪುರಂ ನಲಾದ್ಯೈಶ್ಚಿರಜೀವಿಭಿಃ ।
ತದ್ದೂತವಚನಂ ಶ್ರುತ್ವಾ ರಾಘವೋಽತೀವವಿಸ್ಮಿತಃ ॥ ೩ ॥

ವಸಿಷ್ಠಮಾಹ ಮದ್ರಾಜ್ಯೇ ನ ಕದಾ ಪಾರ್ಥಿವೋತ್ತಮಾಃ ।
ಸಮಾಗತಾ ಮಯಾ ಯೋದ್ಧುಂ ಕಿಮಿದಾನೀಂ ಹಿ ಶ್ರೂಯತೇ ॥ ೪ ॥

ಕಿಂ ಕಾರಣಂ ಗುರೋ ಹ್ಯತ್ರ ವಿಚಾರಯ ಸವಿಸ್ತರಂ ।
ತದ್ರಾಮವಚನಂ ಶ್ರುತ್ವಾ ತಂ ಗುರುಃ ಪ್ರತ್ಯಭಾಷತ ॥ ೫ ॥

ಪ್ರಷ್ಟವ್ಯಮದ್ಯ ವಾಲ್ಮೀಕಿಂ ಯೇನ ತೇ ಚರಿತಂ ಕೃತಂ ।
ತಚ್ಛ್ರುತ್ವಾ ಲಕ್ಷ್ಮಣಂ ಪ್ರೇಷ್ಯ ಸಮಾಹೂಯಾಥ ತಂ ಮುನಿಂ ॥ ೬ ॥

---

೩. ಅವರೆಲ್ಲರೂ ನಳನೇ ಮುಂತಾದ ಚಿರಜೀವಿಗಳು. ಇದ್ದ ವಿಷಯವನ್ನು ಅರಿಕೆಮಾಡಿರುವೆನು. ಎಂದನು. ದೂತನ ಈ ಮಾತನ್ನು ಕೇಳಿ ಶ್ರೀರಾಮನು ಬಹುವಾಗಿ ಆಶ್ಚರ್ಯಗೊಂಡನು.

೪. ಒಡನೆಯೇ ವಸಿಷ್ಠನನ್ನು ಕುರಿತು ಎಲೈ ಗುರುವೇ! ಇದೇನು? ನನ್ನ ರಾಜ್ಯದಲ್ಲಿ ರಾಜರೊಬ್ಬರೂ ನನ್ನೊಡನೆ ಯುದ್ಧಮಾಡಲು ಯಾವಾಗಲೂ ಬಂದುವರಲ್ಲ. ಈವ್ಯಾಗ ಬಂದಿರುವರೆಂದು ತಿಳಿಯ ಬರುತ್ತಿರುವುದಲ್ಲ! ಕಾರಣವೇನು?

೫. ಎಲೈ ಗುರುವೇ! ಇದಕ್ಕೆ ಕಾರಣವೇನು? ಎಂಬುದನ್ನು ಸರಿಯಾಗಿ ವಿಚಾರಿಸು ಎಂದೆನ್ನಲು ವಸಿಷ್ಠನು ಶ್ರೀರಾಮನ ಮಾತನ್ನು ಕೇಳಿ ಇಂತೆಂದು ಉತ್ತರ ಹೇಳಿದನು.

೬. ಎಲೈ ರಾಮನೇ! ಈ ವಿಷಯದಲ್ಲಿ ನಿನ್ನ ಚರಿತ್ರೆಯನ್ನು ಮಾಡಿದ ಆ ವಾಲ್ಮೀಕಿಯನ್ನು ಕೇಳಬೇಕು. ಎಂದನು. ರಾಮನು ಒಡನೆಯೇ ಲಕ್ಷ್ಮಣನನ್ನು ವಾಲ್ಮೀಕಿಯ ಬಳಿಗೆ ಕಳುಹಿಸಿ ಅವನನ್ನು ಕರೆಸಿದನು.

ಸೀತಯಾ ಪೂಜನಂ ಕೃತ್ವಾ ರಾಮೋ ವೃತ್ತಂ ನ್ಯವೇದಯತ್ ।
ವಾಲ್ಮೀಕಿಸ್ತು ತದಾ ಪ್ರಾಹ ರಾಮಂ ಕಿಂಚಿದ್ವಿಹಸ್ಯ ಸಃ ॥ ೭ ॥

ಕಿಂ ತ್ವಂ ನ ವೇತ್ಸಿ ರಾಜೇಂದ್ರ ವಿನೋದಾನ್ಮಾಂ ತು ಪೃಚ್ಛಸಿ ।
ಶೃಣುಷ್ವ ತರ್ಹಿ ಮೇ ವಾಕ್ಯಂ ಸರ್ವೇ ಶೃಣ್ವಂತು ತೇ ಪ್ರಿಯಾಃ ॥ ೮ ॥

ಏಕಾದಶಸಹಸ್ರಾಣಿ ವತ್ಸರಾಣಿ ತಥಾ ಪುನಃ ।
ಏಕಾದಶಸಮಾಶ್ಚಾಪಿ ಮಾಸಾಸ್ತ್ವೇಕಾದಶೈವ ಹಿ ॥ ೯ ॥

ಏಕಾದಶದಿನಾನ್ಯತ್ರ ಘಟಿಕಾಶ್ಚಾಪಿ ತನ್ಮಿತಾಃ ।
ಏಕಾದಶಪಲಾನ್ಯೇವ ತೇ ರಾಜ್ಯಂ ನಿಶ್ಚಿತಂ ಮಯಾ ॥ ೧೦ ॥

ಶತಕೋಟಿಮಿತೇ ಕಾವ್ಯೇ ಪುರೈವ ತೇಽವತಾರತಃ ।
ತನ್ಮಧ್ಯೇತ್ರ ಹ್ಯತೀತಾನಿ ಸಹಸ್ರಾಣಿ ತಥಾ ಸಮಾಃ ॥ ೧೧ ॥

---

೭. ಆ ವಾಲ್ಮೀಕಿಯು ಬರಲು ಸೀತೆಯೊಡನೆ ರಾಮನು ಅವನನ್ನು ಪೂಜಿಸಿ ಅವನನ್ನು ಕರೆಸಿದ ವಿಷಯವನ್ನು ತಿಳಿಸಿದನು. ಆಗ ಆ ವಾಲ್ಮೀಕಿಯು ನಕ್ಕು ರಾಮನನ್ನು ಕುರಿತು ಇಂತೆಂದು ಹೇಳಿದನು.

೮. ಎಲೈ ರಾಜೇಂದ್ರನೇ! ನಿನಗೇನೂ ಗೊತ್ತಿಲ್ಲವೇ? ಹಾಸ್ಯಕ್ಕೋಸ್ಕರ ನನ್ನನ್ನು ಕೇಳುತ್ತಿರುವೆಯಲ್ಲ! ಆದರೂ ಹೇಳುತ್ತೇನೆ. ನನ್ನ ಮಾತನ್ನು ಕೇಳು. ನಿನ್ನಲ್ಲಿ ಆದರವುಳ್ಳವರೆಲ್ಲರೂ ಕೇಳಲಿ.

೯–೧೦. ನೀನು ಹನ್ನೊಂದುಸಾವಿರದ ಹನ್ನೊಂದು ವರ್ಷಗಳೂ ಹನ್ನೊಂದು ತಿಂಗಳೂ ಹನ್ನೊಂದು ದಿನವೂ ಹನ್ನೊಂದು ಗಂಟೆಗಳೂ ಹನ್ನೊಂದು ನಿಮಿಷಗಳೂ ರಾಜ್ಯಭಾರಮಾಡುತ್ತೀಯೆ ಎಂದು ನಾನು ನಿಶ್ಚಯಮಾಡಿದ್ದೇನೆ.

೧೧–೧೩. ಈ ವಿಷಯವನ್ನು ನೀನು ಅವತರಿಸುವುದಕ್ಕೆ ಮೊದಲೇನೇ ನಿನ್ನ ಸಂಬಂಧವಾಗಿ ಮಾಡಿದ ಶತಕೋಟಿರಾಮಾಯಣದಲ್ಲಿ ನಿರ್ಣಯಿಸಿರುವೆನು. ನಿನಗೆ ನಿಶ್ಚಿತವಾದ ಆ ದಿನಗಳಲ್ಲಿ ಆ ಹನ್ನೊಂದುಸಾವಿರ ವರ್ಷಗಳೂ ಕಳೆದು ಹೋದುವು. ಉಳಿದುವುಗಳು ಮಾಸದಿನ ಗಂಟೆ, ನಿಮಿಷಗಳೂ ಆಗಿವೆ. ಆದರೆ

ಅತೀತಾಃ ಶೇಷಭೂತಾಶ್ಚ ಮಾಸಾಶ್ಶೇಷಂ ದಿನಾದಿಕಂ ।
ಅಷ್ಟಾದಶದಿನೈರ್ನ್ಯೂನಮಗ್ರೇ ವರ್ಷಂ ಪ್ರಭೋತ್ರ ಯತ್ ॥ ೧೨ ॥

ಶೇಷಭೂತಂ ಸಂಗರೇ ತತ್ಪರಿಪೂರ್ಣಂ ಭವಿಷ್ಯತಿ ।
ಅಯಂ ಕಾಲೋವತಾರಸ್ಯ ಸಮಾಪ್ತೇಸ್ತೇ ಸಮಾಗತಃ ॥ ೧೩ ॥

ಗತ್ವಾ ಭಾಗೀರಥೀಂ ಪುಣ್ಯಾಂ ಪೂರ್ವಜೇನಾವನೀತಲಂ ।
ಪ್ರಾಪಿತಾಂ ತವ ರಾಜೇಂದ್ರ ತಸ್ಯಾಂ ಸ್ನಾತ್ವಾ ಯಥಾವಿಧಿ ॥ ೧೪ ॥

ಸ್ತುತೋ ಬ್ರಹ್ಮಾದಿಕೈಸ್ಸರ್ವೈಃ ಪದಂ ಸ್ವೀಯಂ ಗಮಿಷ್ಯತಿ ।
ತನ್ಮುನೇರ್ವಚನಂ ಶ್ರುತ್ವಾ ರಾಘವೋವಾಕ್ಯಮಬ್ರವೀತ್ ॥ ೧೫ ॥

ಏತಾವತ್ಕಾಲಪರ್ಯಂತಂ ನಲಾದ್ಯಾಃ ಕುತ್ರಸಂಸ್ಥಿತಾಃ ।
ಕುತೋಧುನಾ ಸಮಾಯಾತಾಸ್ತತ್ಸರ್ವಂ ವಿಸ್ತರಾದ್ವದ ॥ ೧೬ ॥

ನೀನು ಹದಿನೆಂಟು ದಿನಗಳು ಕಡಿಮೆಯಾಗಿ ಒಂದು ವರ್ಷಕಾಲ ರಾಜ್ಯವಾಳಬೇಕು. ಅಷ್ಟೇ ಮಿಕ್ಕಿರುವುದು.

೧೩. ನಿನಗೆ ಉಳಿದಿರುವ ಈ ಕಾಲವು ಯುದ್ಧಮಾಡುವುದರಲ್ಲಿ ತುಂಬಬೇಕು. ಅಲ್ಲಿಗೆ ನಿನ್ನ ಅವತಾರದ ಕಾಲವು ಸಮಾಪ್ತಿಯಾಗಬೇಕು. ಅದಕ್ಕೋಸ್ಕರಲೇ ಈ ಯುದ್ಧವು ಒದಗಿರುವುದು.

೧೪–೧೫ ನಿನ್ನ ಪೂರ್ವೀಕರು ಭೂಲೋಕಕ್ಕೆ ತಂದಂಥ ಪುಣ್ಯಕರವಾದ ಭಾಗೀರಥಿಯಲ್ಲಿ ಸ್ನಾನಮಾಡಿ ಅನಂತರ ಬ್ರಹ್ಮನೇ ಮುಂತಾದವರಿಂದ ಸ್ತುತಿಸಿಕೊಂಡು ನಿನ್ನ ಸ್ಥಾನವನ್ನು ಹೊಂದುತ್ತೀಯೆ. ಎಂದು ವಾಲ್ಮೀಕಿಯು ಹೇಳಲು ಅದನ್ನು ಕೇಳಿ ರಾಮನು ಇಂತೆಂದನು.

೧೬. ಎಲೈ ಋಷಿಯೇ! ಆ ನಲನೇ ಮುಂತಾದವರು ಇಷ್ಟು ದಿನಗಳವರೆಗೂ ಎಲ್ಲಿದ್ದರು ? ಅವರೆಲ್ಲರೂ ಈಗ ಎಲ್ಲಿಂದ ಬಂದರು ? ಅದೆಲ್ಲವನ್ನೂ ವಿಸ್ತಾರವಾಗಿ ತಿಳಿಸು.

ತದ್ರಾಮವಚನಂ ಶ್ರುತ್ವಾ ವಾಲ್ಮೀಕಿರ್ವಾಕ್ಯಮಬ್ರವೀತ್ ।

॥ ವಾಲ್ಮೀಕಿರುವಾಚ ॥

ಶೃಣು ರಾಮ ಮಹಾಬಾಹೋ ಸರ್ವಂ ತೇ ಕಥಯಾಮ್ಯಹಂ　　॥ ೧೭ ॥

ಅತ್ರಿರ್ಮುನಿಃ ಪುರಾ ರಾಮ ಪೂರ್ಣಿಮಾಯಾಂ ಕೃತೇ ಯುಗೇ ।
ವೈಶಾಖ್ಯಾಮೇಕದಾ ಸೋಮಂ ದೃಷ್ಟ್ವಾ ನಾರೀಮುಖೋಪಮಂ ॥

ಮುಮೋಚ ವೀರ್ಯಂ ಭೂಮ್ಯಾಂ ಸ ತಸ್ಮಾತ್ಪುತ್ರೋ ಬಭೂವಹ ।
ಸೋಮಸ್ಯ ದರ್ಶನಾಜ್ಜಾತಸ್ಸೋಮಾಖ್ಯಃ ಸ ಬಭೂವಹ　　॥ ೧೯ ॥

ಸೋರಣ್ಯೇ ಜಾಹ್ನವೀತೀರೇ ಚಕಾರ ತಪ ಉತ್ತಮಂ ।
ಏತಸ್ಮಿನ್ ಸಮಯೇ ತತ್ರ ಕಶ್ಚಿದ್ಧಸ್ತೀ ಸಮಾಯಯೌ　　॥ ೨೦ ॥

---

೧೭. ರಾಮನ ಈ ಮಾತನ್ನು ಕೇಳಿ ವಾಲ್ಮೀಕಿಯು ಇಂತೆಂದನು. ವಾಲ್ಮೀಕಿಯು ಹೇಳಿದನು–ಎಲೈ ಮಹಾಬಾಹುವಾದ ರಾಮನೇ! ಕೇಳು ಅದೆಲ್ಲವನ್ನೂ ವಿಸ್ತಾರವಾಗಿ ಹೇಳುತ್ತೇನೆ.

೧೮. ಪೂರ್ವದಲ್ಲಿ ಕೃತಯುಗದಲ್ಲಿ ಒಂದುಸಾರಿ ಅತ್ರಿಮಹರ್ಷಿಯು ವೈಶಾಖದ ಪೂರ್ಣಿಮೆಯ ಚಂದ್ರನನ್ನು ನೋಡಿದನು. ಅವನನ್ನು ನೋಡಿದರೆ ಹೆಂಗಸರ ಮುಖದಂತೆ ಸುಂದರನಾಗಿದ್ದದು.

೧೯. ಇದರಿಂದ ಅವನು ಕಾಮನಿಗೆ ಅಧೀನನಾಗಿ ವೀರ್ಯಸ್ಖಲನವಾಗಿ ಅದು ನೆಲದಮೇಲೆ ಬಿದ್ದಿತು. ಆ ನೆಲದಮೇಲೆ ಬಿದ್ದ ವೀರ್ಯದಿಂದಲೇ ಒಬ್ಬ ಮಗನು ಹುಟ್ಟಿದನು. ಸೋಮ ಎಂದರೆ ಚಂದ್ರನು. ಅವನ ದರ್ಶನದಿಂದ ಆ ಮಗನು ಹುಟ್ಟಿದುದರಿಂದ ಅವನಿಗೆ ಸೋಮ ಎಂದು ಹೆಸರಾಯಿತು.

೨೦. ಆ ಸೋಮನು ಗಂಗಾನದಿಯ ತೀರದಲ್ಲಿದ್ದುಕೊಂಡು ಬಲುಗ್ರವಾದ ತಪಸ್ಸನ್ನು ಮಾಡಿದನು. ಅವನು ತಪಸ್ಸು ಮಾಡುತ್ತಿದ್ದಾಗ ಅಲ್ಲಿಗೆ ಒಂದ್ಸ ಆನೆಯು ಬಂದಿತು.

ನಿಹತಃ ಪಕ್ಷಿಭಿಸ್ತತ್ರ ದೃಷ್ಟ್ವಾ ತತ್ಕೌತುಕಂ ಮಹತ್ ।
ಸೋಮೋ ವಿಚಾರಯಾಮಾಸ ಪಕ್ಷಿಭಿರ್ನಿಹತಃ ಕರೀ ॥ ೨೦ ॥

ಅಸ್ಯಾ ಭೂಮ್ಯಾಃ ಪ್ರಭಾವೋಽಯಂ ಪುರಂ ತತ್ರ ಚಕಾರ ಸಃ ।
ಹಸ್ತಿನಾಶಾತ್ಪುರಂ ಜಾತಂ ತಸ್ಮಾತ್ತದ್ಧಸ್ತಿನಾಪುರಂ ॥ ೨೧ ॥

ತತ್ರ ಪೌರೈಃ ಕೃತೋ ರಾಜಾ ಸೋಮ ಏವ ರಘೂತ್ತಮ ।
ತಸ್ಯ ಜಾತೋ ಬುಧಃ ಪುತ್ರಸ್ತಾವುಭೌ ಜಗತೀತಲಂ ॥ ೨೨ ॥

ಸದ್ವೀಪಂ ಸ್ವವಶಂ ಕೃತ್ವಾ ಸುರಲೋಕಂ ಪ್ರಜಗ್ಮತುಃ ।
ತತ್ರ ಜಿತ್ವಾ ಸುರಾನ್ ಸರ್ವಾನ್ ಸುರಸ್ತ್ರೀಭಿಶ್ಚ ಸಂಯುತೌ ॥ ೨೩ ॥

ಮುಕ್ತ್ವಾ ದೇವಾನ್ ಸ್ವರ್ಗಲೋಕೇ ನಿವಾಸಂ ಚಕ್ರತುರ್ಮುದಾ ।
ತಯೋರ್ದದೌ ವರಾನ್ ಬ್ರಹ್ಮಾ ಯುವಾಂ ಮದ್ವಂಶಸಂಭವೌ ॥ ೨೪ ॥

೨೦, ಅಲ್ಲಿಗೆ ಬಂದ ಆನೆಯನ್ನು ಅಲ್ಲಿದ್ದ ಪಕ್ಷಿಗಳು ಕೊಂದುಹಾಕಿದುವು. ಆ ಸೋಮನು ಈ ಆಶ್ಚರ್ಯವನ್ನು ನೋಡಿ ಆನೆಯನ್ನು ಪಕ್ಷಿಗಳು ಕೊಲ್ಲಲು ಕಾರಣವೇನೆಂದು ಮನಸ್ಸಿನಲ್ಲಿ ಯೋಚಿಸತೊಡಗಿದನು.

೨೧. ವಿಚಾರಮಾಡಿ ಕೊನೆಗೆ ಇದು ಈ ಭೂಮಿಯ ಪ್ರಭಾವವೆಂದು ತಿಳಿದು ಅಲ್ಲಿಯೇ ಬಂದು ಊರನ್ನು ನಿರ್ಮಿಸಿದನು. ಹಸ್ತಿ ಎಂದರೆ ಆನೆಯು. ಅಲ್ಲಿ ಹಸ್ತಿಯು ನಾಶವಾದುದರಿಂದ ಪುರವು ನಿರ್ಮಿತವಾಯಿತು. ಆದರಿಂದ ಅದಕ್ಕೆ ಹಸ್ತಿನಾವುರವೆಂದು ಹೆಸರು ಬಂದಿತು.

೨೨-೨೪. ಎಲೈ ರಘೂತ್ತಮನೇ ! ಆ ಪಟ್ಟಣಿಗರು ತಮ್ಮಗೆ ಆ ಸೋಮನೆಂಬುವನನ್ನೇ ರಾಜನನ್ನಾಗಿ ಮಾಡಿಕೊಂಡರು. ಅವನಿಗೆ ಬುಧನೆಂಬ ಮಗನೂ ಆದನು. ಆ ತಂದೆ ಮಕ್ಕಳಿಬ್ಬರೂ ದ್ವೀಪಗಳೊಡನೆ ಕೂಡಿದ ಈ ಜಗತ್ತನ್ನೇ ತಮ್ಮ ಸ್ವಾಧೀನವನ್ನಾಗಿ ಮಾಡಿಕೊಂಡು ದೇವಲೋಕಕ್ಕೆ ಹೊರಟು ಹೋದರು. ಅಲ್ಲಿಯೂ ಕೂಡ ದೇವತೆಗಳೆಲ್ಲರನ್ನೂ ಜಯಿಸಿ ಆ ದೇವತಾಸ್ತ್ರೀಯರೊಡನೆ ಸೇರಿ ರಮಿಸಿದರು. ಮತ್ತು ಆ ದೇವತೆಗಳನ್ನು ಓಡಿಸಿ ಅಲ್ಲಿಯೇ ವಾಸಿಸ ತೊಡಗಿದರು. ಆಗ ಬ್ರಹ್ಮನು ಆ ಸೋಮಬುಧರಿಗೆ ನೀವಿಬ್ಬರೂ ನನ್ನ ವಂಶದಲ್ಲಿ ಹುಟ್ಟಿದವರೆಂದು ಹೇಳಿ ವರವನ್ನು ಕೊಟ್ಟನು.

ಯುವಾಭ್ಯಾಂ ಮೋಚಿತಸ್ತ್ವದ್ಯ ದೇವಸಂಘುಯುತಸ್ತ್ವಹಂ ।
ಯುವಾಭ್ಯಾಂ ತರ್ಹ್ಯಹಂ ವಚ್ಮಿ ವರಾಂಚ್ಛೃಣುತ ಬಾಲಕಾ ॥ ೨೬ ॥

ಯುಷ್ಮದ್ವಂಶೇ ನೃಪಾಃ ಕೇಚಿದಗ್ರೇ ತ್ರಿಪುರುಷೋರ್ಧ್ವತಃ ।
ಅನ್ಯೈಃ ಪರಾಜಿತಾಸ್ಸಪ್ತಪುರುಷಾ ನ ಭವಂತಿ ಹಿ ॥ ೨೭ ॥

ಇತಿ ದತ್ವಾ ವರಂ ಬ್ರಹ್ಮಾ ಯಯೌ ನಿಜಪದಂ ಪ್ರತಿ ।
ತತಸ್ಸೋಮಾಯ ದೌಹಿತ್ರೀ ದತ್ತಾ ಪದ್ಮಾವತೀ ಶುಭಾ ॥ ೨೮ ॥

ಇಂದ್ರೇಣ ತತ್ರ ತೌ ಸೋಮಬುಧೌ ಸ್ವೈರಂ ಸ್ಥಿತೌ ಚಿರಂ ।
ಬುಧಸ್ಯ ತನಯೋ ಭೂಮ್ಯಾಂ ನಾಮ್ನಾ ಖ್ಯಾತಃ ಪುರೂರವಾಃ ॥ ೨೯ ॥

---

೨೬. ಎಲೈ ಸೋಮಬುಧರಿರಾ ! ನೀವಿಬ್ಬರೂ ನನ್ನ ವಂಶದಲ್ಲಿ ಹುಟ್ಟಿದವರು. ಸ್ವರ್ಗವನ್ನು ಜಯಿಸಿ ಆ ದೇವತೆಗಳೆಲ್ಲರನ್ನೂ ಬಂಧನದಿಂದ ಬಿಟ್ಟು ಬಿಟ್ಟು ಇರುವಿರಿ. ನಾನು ಈಗ ಈ ದೇವತೆಗಳ ಗುಂಪಿನೊಡನೆ ನಿಮ್ಮಲ್ಲಿಗೆ ಬಂದಿರುವೆನು. ನಾನು ಬಂದಿರುವ ವಿಷಯವನ್ನು ಕೇಳಿರಿ.

೨೭. ನಿನ್ನ ವಂಶದಲ್ಲಿ ಮೂರು ತಲೆಗಿಂತಲೂ ಅನಂತರದಲ್ಲಿ ಏಳುತಲೆ ಕಳೆಯುವರೆಗೂ ಇರುವ ರಾಜರು ಮತ್ತೊಬ್ಬರಿಂದಲೂ ಜಯಿಸಲು ಅಸಾಧ್ಯರಾಗಿ ಆಗುವರು.

೨೮. ಎಂಬುದಾಗಿ ಆ ಬ್ರಹ್ಮನು ವರವನ್ನು ಕೊಟ್ಟು ತನ್ನ ಸ್ಥಳವಾದ ಬ್ರಹ್ಮಲೋಕಕ್ಕೆ ಹೊರಟು ಹೋದನು. ಅನಂತರ ಇಂದ್ರನು ತನ್ನ ಮಗಳ ಮಗಳಾದ ಪದ್ಮಾವತಿಯನ್ನು ಸೋಮನಿಗೆ ಕೊಟ್ಟು ಮದುವೆಮಾಡಿದನು.

೨೯. ಅನಂತರ ಸೋಮಬುಧರು ಆ ಸ್ವರ್ಗದಲ್ಲಿ ಇಂದ್ರನೊಡನೆ ಬಹು ಕಾಲ ಸುಖವಾಗಿದ್ದರು. ಬುಧನ ಮಗನಾದ ಪುರೂರವನೆಂಬುವನು ಭೂಲೋಕ ದಲ್ಲಿ ಪ್ರಖ್ಯಾತನಾದನು.

ಚಕಾರ ರಾಜ್ಯಂ ಧರ್ಮೇಣ ತದಾ ತದ್ಧಸ್ತಿನಾ ಪುರೇ ।
ತಸ್ಯ ಪುತ್ರಶ್ಚ ಗವ್ಯೋಽಭೂದ್ಗವ್ಯಪುತ್ರೋಽಲ್ಪ ಉಚ್ಯತೇ ॥ ೩೦ ॥

ಅಲ್ಪಪುತ್ರೋ ನಲಶ್ಚೈವ ದಿಕ್ಪಾಲಾನ್ ಜೇತುಮುದ್ಯತಃ ।
ರಾಜ್ಯೇ ಪುರೂರವಾದೀಂಶ್ಚ ತ್ರೀನ್ ಸ್ಥಾಪ್ಯ ನಿಜಪೂರ್ವಜಾನ್ ॥ ೩೧ ॥

ಸಪ್ತದ್ವೀಪನೃಪೈರ್ಯುಕ್ತಃ ಪ್ರಯಯೌ ಮೇರುಮುನ್ನತಂ ।
ಆದೌ ಜಿತ್ವಾ ಸ ವಹ್ನಿಂ ಹಿ ಯಮಂ ಜಿತ್ವಾಥ ನೈಋತಿಂ ॥ ೩೨ ॥

ಪ್ರಯಯೌ ವರುಣಂ ಜೇತುಂ ರಾವಣಾದಿಭಿರನ್ವಿತಃ ।
ಏತಸ್ಮಿನ್ನಂತರೇ ರಾಮ ತೂರ್ಣಂ ಸೈನ್ಯೇನ ರಾವಣಃ ॥ ೩೩ ॥

---

೩೦. ಹಸ್ತಿನಾಪುರದಲ್ಲಿದ್ದುಕೊಂಡು ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತಿದ್ದನು. ಅವನಿಗೆ ಗವ್ಯನೆಂಬ ಮಗನಾದನು. ಆ ಗವ್ಯನಿಗೆ ಅಲ್ಪನೆಂಬ ಮಗನು ಹುಟ್ಟಿದನು.

೩೧. ಆ ಅಲ್ಪನಿಗೆ ನಳನೆಂಬ ಮಗನಾದನು. ಆ ನಳನು ದಿಕ್ಪಾಲಕರನ್ನು ಜಯಿಸಲು ಪ್ರಯತ್ನಪಡುತ್ತಿರುವನು. ತನ್ನ ರಾಜ್ಯದಲ್ಲಿ ಸೋಮಬುಧ ಪೂರೂರವರನ್ನು ಎಂದರೆ ಮೂರುಜನ ಹಿಂದಿನವರನ್ನು ಬಿಟ್ಟು ತಾನು ಲೋಕವನ್ನೇ ಜಯಿಸಲು ಹೊರಟಿರುವನು.

೩೨. ಅವನು ಸಪ್ತದ್ವೀಪಗಳ ರಾಜರನ್ನೂ ಸೇರಿಸಿಕೊಂಡು ಅವರೊಡಗೂಡಿ ಆ ಉನ್ನತವಾದ ಮೇರುಪರ್ವತಕ್ಕೆ ಹೋಗಿರುವನು. ಅಲ್ಲಿ ಮೊದಲು ಮೊದಲು ವಹ್ನಿಯನ್ನೂ ಅನಂತರ ಯಮನನ್ನೂ ಜಯಿಸಿದನು.

೩೩. ರಾವಣಾದಿಗಳಿಂದ ಕೂಡಿಕೊಂಡು ವರುಣನನ್ನು ಜಯಿಸಲು ಹೊರಟನು. ಇತ್ತ ರಾವಣನು ಆ ನಲನಿಗೆ ಹೇಳದೇನೆ ಸೈನ್ಯವನ್ನು ತೆಗೆದುಕೊಂಡು ಸ್ವರ್ಗಲೋಕಕ್ಕೆ ಹೋಗಿ ಅಲ್ಲಿ ಇಂದ್ರಾದಿ ದೇವತೆಗಳನ್ನು ಜಯಿಸಿ ಅವರೆಲ್ಲರನ್ನೂ ಸೆರೆಹಿಡಿದುಕೊಂಡು ಲಂಕೆಗೆ ಹೋದನು.

ಪ್ರಯಯೌ ನಾಕಲೋಕಂ ಹಿ ಸುರಾನಿಂದ್ರಾದಿಕಾನ್ ರಣೇ ।
ಜಿತ್ವಾ ನಿನಾಯ ಸ್ವಾಂ ಲಂಕಾಂ ಸೋಮೋ ಯುದ್ಧಾಯ ಚಾತ್ಮಜಃ ॥

ನಿರ್ಯಯೌ ಸುಹೃದಸ್ಸರ್ವಾನ್ ಸೇಂದ್ರಾನ್ಮೋಚಯಿತುಂ ಸುರಾನ್ ।
ತದಾ ನಿವಾರಯಾಮಾಸ ಬ್ರಹ್ಮಾ ಸೋಮಂ ತ್ವರಾನ್ವಿತಃ ॥ ೩೫ ॥

ವಿಷ್ಣುರ್ಭೂತ್ವಾ ನೃವೇಷೇಣ ರಾವಣಂ ಹಿ ಹನಿಷ್ಯತಿ ।
ತ್ವಂ ಮಾದ್ಯ ರಾವಣಂ ಯಾಹಿ ವರಮಸ್ಮೈ ಮಯಾರ್ಪಿತಃ ॥ ೩೬ ॥

ತದ್ಬ್ರಹ್ಮವಚನಂ ಶ್ರುತ್ವಾ ಯಯೌ ಸೋಮೋಮರಾವತೀಂ ।
ಭೂಮ್ಯಾಂ ನಲಸ್ತತೋ ಭೂತ್ವಾ ವರುಣಂ ಪವನಂ ತಥಾ ॥ ೩೭ ॥

ಜಿತ್ವಾ ಕುಬೇರಮೀಶಾನಂ ಕೃತಕಾರ್ಯಮಮನ್ಯತ ।
ಆತ್ಮಾನಂ ಚ ತತಃ ಸ್ವರ್ಗೇ ಚೇಂದ್ರಂ ಜೇತುಂ ಸಮುದ್ಯತಃ ॥ ೩೮ ॥

೩೪-೩೫. ಇದನ್ನು ನೋಡಿ ಸೋಮನು ತನ್ನ ಮಗನೊಡನೆಯೂ ಸ್ನೇಹಿತರೊಡನೆಯೂ ಯುದ್ಧಕ್ಕೆ ಹೊರಟು ರಾವಣನನ್ನು ಜಯಿಸಿ ಇಂದ್ರಾದಿಗಳನ್ನು ಬಿಡಿಸಬೇಕೆಂದು ಪ್ರಯತ್ನಪಟ್ಟನು. ಆಗ ಬ್ರಹ್ಮನು ಬೇಗನೆ ಬಂದು ಆ ಸೋಮನನ್ನು ತಡೆದುನಿಲ್ಲಿಸಿದನು

೩೬. ಎಲೈ ಸೋಮನೇ! ವಿಷ್ಣುವು ಮನುಷ್ಯರಲ್ಲಿ ಅವತರಿಸಿ ಆ ರಾವಣನನ್ನು ಕೊಲ್ಲುವನು. ನೀನು ಆ ರಾವಣನಮೇಲೆ ಯುದ್ಧಕ್ಕೆ ಹೋಗಬೇಡ ನಾನು ಆವನಿಗೆ ಆ ರೀತಿಯಾದ ವರವನ್ನು ಕೊಟ್ಟಿರುವೆನು.

೩೭-೩೮. ಬ್ರಹ್ಮನು ಇಂತು ಹೇಳಿದುದನ್ನು ಸೋಮನು ಕೇಳಿ ಅಮರಾವತಿಗೆ ಹೊರಟು ಹೋದನು. ಇತ್ತ ನಲನು, ವರುಣ, ವಾಯು, ಕುಬೇರ, ಈಶಾನ ಇವರನ್ನು ಜಯಿಸಿ ತನ್ನ ಶೌರ್ಯವು ಸಾರ್ಥಕವಾಯಿತೆಂದೂ ತನ್ನ ಕೆಲಸವು ಕೈಗೂಡಿತೆಂದೂ ತಿಳಿದನು. ಅನಂತರ ಸ್ವರ್ಗದಲ್ಲಿ ಇಂದ್ರನನ್ನು ಜಯಿಸಬೇಕೆಂದು ಪ್ರಯತ್ನಿಸಿದನು.

ಏವಂ ನಲೇನ ಭ್ರಮತಾ ಗತಂ ತಚ್ಚ ಕೃತಂ ಯುಗಂ ।
ತ್ರೇತಾಯುಗಸಮಾಪ್ತೌ ಸ ದದರ್ಶ ಸಕಲಂ ಬಲಂ ॥ ೩೯ ॥

ತತ್ರಾದೃಷ್ಟ್ವಾ ರಾವಣಂ ಸ ದೂತಾಚ್ಛ್ರುತ್ವಾವನೌ ಕ್ಷಿತಿ ।
ದೇವಾನ್ ಸ್ವವಶಗಾನ್ ಕೃತ್ವಾ ಲಂಕಾಂ ಸ್ವಾಂ ಸುಗತಃ ಪುರಾ ॥ ೪೦ ॥

ತತ್ರ ಮಾರ್ಗೇ ತು ಭ್ರಮತೋ ನಲಾಯ ನದ್ಯುಕಸ್ಸುತಃ ।
ಪುತ್ರಸ್ತಸ್ಯ ಜಾತೀಕರಸ್ತತ್ಸುತೋ ವಸುದಸ್ಸ್ಮೃತಃ ॥ ೪೧ ॥

ತಸ್ಯ ಪುತ್ರೋ ಲಘುಶ್ರುತಃ ಸುರಥಸ್ತತ್ಸುತಃ ಸ್ಮೃತಃ ।
ಅಜಮೀಢಸ್ತು ತತ್ಪುತ್ರಸ್ತ್ವೇವಂ ವಂಶೋಭವತ್ಪಥಿ ॥ ೪೨ ॥

---

೩೯. ಆ ನಲನು ಈ ರೀತಿಯಾಗಿ ಯುದ್ಧಕ್ಕೆ ಪ್ರಯತ್ನಪಟ್ಟು ಸುತ್ತುತ್ತಿರಲು ಕೃತಯುಗವೇ ಕಳೆದುಹೋಯಿತು. ಮತ್ತು ತ್ರೇತಾಯುಗವೂ ಕೊನೆಗಾಣುತ್ತ ಬಂದಿತು. ಆಗ ತನ್ನ ಸೈನ್ಯವನ್ನೆಲ್ಲಾ ನೋಡಿದನು.

೪೦ ಅದರಲ್ಲಿ ರಾವಣನನ್ನು ಕಾಣದಿರಲು ದೂತರನ್ನು ಕೇಳಲು ಅವರು ಆ ರಾವಣನು ದೇವತೆಗಳೆಲ್ಲರನ್ನೂ ಗೆದ್ದು ಅವರನ್ನು ತನ್ನ ಅಧೀನರನ್ನಾಗಿ ಮಾಡಿಕೊಂಡು ಭೂಮಿಯಲ್ಲಿರುವ ತನ್ನ ಲಂಕೆಗೆ ಪೂರ್ವದಲ್ಲಿಯೇ ಹೊರಟು ಹೋದನು ಎಂದರು.

೪೧. ನಲನು ಎಲ್ಲರನ್ನೂ ಜಯಿಸಲು ದಾರಿಯಲ್ಲಿ ಅಲೆದಾಡುತ್ತಿರುವಾಗ ಅವನಿಗೆ ನದ್ಯುಕನೆಂಬ ಮಗನು ಹುಟ್ಟಿದನು. ಆ ನದ್ಯುಕನಿಗೆ ಜಾತೀಕರನೆಂಬ ಮಗನಾದನು. ಆ ಜಾತೀಕರನಿಗೆ ವಸುದನೆಂಬುವನು ಹುಟ್ಟಿದನು.

೪೨. ಆ ವಸುದನಿಗೆ ಲಘುಶ್ರುತನೆಂಬ ಮಗನು ಹುಟ್ಟಿದನು. ಆ ಲಘುಶ್ರುತನಿಗೆ ಸುರಥನೆಂಬ ಮಗನು ಜನಿಸಿದನು. ಆ ಸುರಥನಿಗೆ ಅಜಮೀಢನೆಂಬ ಮಗನಾದನು. ಈ ರೀತಿಯಾಗಿ ಅವನಿಗೆ ದಾರಿಯಲ್ಲಿಯೇ ವಂಶವು ಬೆಳೆಯಿತು.

ತತಸ್ಸ ಮಂತ್ರಯಾಮಾಸ ನಲೋ ಮಂತ್ರಿಜನೈಸ್ಸಹ ।
ಕಿಮರ್ಥಮಿಂದ್ರಲೋಕಂ ತಂ ಗಂತವ್ಯಮಧುನಾ ಯದಿ ॥ ೪೩ ॥

ಭುವಿ ದೇವಾಸ್ಸಮಾನೀತಾಃ ಲಂಕಾಯಾಂ ರಾವಣೇನ ಹಿ ।
ಅಸ್ಮಾಕಂ ಸೇವಕಸ್ಸೋಽಸ್ತಿ ದಶಾಸ್ಯಃ ಕರಭಾರದಃ ॥ ೪೪ ॥

ನಿಜಂ ಪುರಂ ಪ್ರಗಂತವ್ಯಮಧುನಾ ಚಿರಕಾಲತಃ ।
ದಿಗಾಶ್ರಯಾದ್ವಯಂ ಸರ್ವೇ ವಿಜಿತಾಃ ಸ್ಮ ಚಿರಂ ತ್ವಿಹ ॥ ೪೫ ॥

ಪುರೂರವಾದಿಕಾಸ್ತೇ ನಃ ಪೂರ್ವಜಾಸ್ಸಂತಿ ವಾ ಮೃತಾಃ ।
ನಾಸ್ಮಾಭಿಶ್ಚಿರಕಾಲಂ ಹಿ ತದ್ವೃತ್ತಂ ಭ್ರಮತಃ ಶ್ರುತಂ ॥ ೪೬ ॥

---

೪೩. ಆಗ ನಲನು ಮಂತ್ರಿಗಳನ್ನು ಕರೆಸಿ ಅವರೊಡನೆ ಮಂತ್ರಾಲೋಚನೆಯನ್ನು ಮಾಡಿದನು. ನಾನು ಈಗ ಇಂದ್ರಲೋಕಕ್ಕೆ ಏತಕ್ಕೋಸ್ಕರ ಹೋಗಲಿ ?

೪೪. ರಾವಣನೇ ಆ ದೇವತೆಗಳನ್ನು ಜಯಿಸಿ ಭೂಲೋಕಕ್ಕೆ ತಂದಿದ್ದ ಮೇಲೆ ನಾವೇ ಅವರನ್ನು ಜಯಿಸಿದಂತಾಯಿತು. ರಾವಣನಾದರೋ ಕಾಣಿಕೆಗಳನ್ನು ಕೊಡುತ್ತಿರುವನು. ಆದ್ದರಿಂದ ಅಲ್ಲಿಗೆ ಹೋಗುವುದು ವ್ಯರ್ಥವು.

೪೫. ನಾವೆಲ್ಲರೂ ನಮ್ಮ ಪಟ್ಟಣಕ್ಕೆ ಹೋಗೋಣ. ನಾವಾದರೋ ಬಹು ಕಾಲದಿಂದಲೂ ದಿಕ್ಕು ದಿಕ್ಕನ್ನು ಸುತ್ತುತ್ತಾ ಯುದ್ಧಮಾಡುತ್ತಲೇ ಬಂದೆವು.

೪೬. ನಮ್ಮ ಪೂರ್ವೀಕರಾದ ಪುರೂರವಾದಿಗಳು ಜೀವದಿಂದಿರುವರೋ ಅಥವಾ ಸತ್ತುಹೋಗಿರುವರೋ ಅದೇ ತಿಳಿಯದಾಗಿದೆ. ನಾವು ಬಹು ಕಾಲದವರೆಗೂ ಯುದ್ಧಕ್ಕೋಸ್ಕರ ಅಲೆದಾಡುತ್ತಿರುವುದರಿಂದ ಅದು ನಮಗೆ ತಿಳಿಯಲೇ ಇಲ್ಲ.

ಅತಃ ಸ್ವೀಯಪುರಂ ಗತ್ವಾ ದ್ರಷ್ಟವ್ಯಾಸ್ತೇ ತ್ರಿಪೂರ್ವಜಾಃ ।
ಚೇತ್ಸೋಮಬುಧಯೋರ್ನಾಕಂ ಗಂತವ್ಯಂ ದರ್ಶನೇಚ್ಛಯಾ ॥ ೪೭ ॥

ತರ್ಹಿ ತಾಭ್ಯಾಂ ಯುತಾ ದೇವಾಃ ಕಿಂ ಜಿತಾ ರಾವಣೇನ ಹಿ ।
ಕಿಂ ತಾಭ್ಯಾಂ ರಹಿತಾ ದೇವಾ ಜಿತಾಶ್ಚೇತಿ ನ ವೇದ್ಮ್ಯಹಂ ॥ ೪೮ ॥

ಅತಸ್ತತ್ಸಕಲಂ ವೃತ್ತಂ ವಿದಿತಂ ಹಸ್ತಿನಾಪುರೇ ।
ಭವಿಷ್ಯತಿ ತತೋ ಯುದ್ಧಿ ಕರ್ತವ್ಯಂ ತತ್ಕರೋಮ್ಯಹಂ ॥ ೪೯ ॥

ಇತಿ ನಿಶ್ಚಿತ್ಯ ಸ ನಲಃ ಶನೈಸ್ಸ್ವನಗರಂ ಯಯೌ ।
ಏತಸ್ಮಿನ್ನಂತರೇ ರಾಮ ತ್ವಂ ಜಾತೋಸ್ಯವನೀತಲೇ ॥ ೫೦ ॥

---

೪೭. ಆದ್ದರಿಂದ ಈಗ ನಾವು ನಮ್ಮ ಪಟ್ಟಣಕ್ಕೆ ಹೋಗಿ ನಮ್ಮ ಆ ತ್ರಿಪುರುಷರನ್ನು ನೋಡಬೇಕು. ಆ ಸೋಮ ಬುಧರು ಸ್ವರ್ಗಕ್ಕೆ ಹೋಗಿದ್ದರೆ ಅವರನ್ನು ನೋಡುವುದಕ್ಕಾದರೂ ಸ್ವರ್ಗಕ್ಕೆ ಹೋದಲೇ ಬೇಕು.

೪೮. ಒಂದುವೇಳೆ ಆ ನಮ್ಮವರನ್ನೂ ದೇವತೆಗಳನ್ನೂ ಸೇರಿಸಿಕೊಂಡೇ ರಾವಣನು ಜಯಿಸಿರಬಹುದೋ ಏನೋ? ಅಥವಾ ಅವರನ್ನು ಬಿಟ್ಟು ಆ ದೇವತೆಗಳನ್ನು ಮಾತ್ರ ಜಯಿಸಿರುವನೋ ? ಇದು ನಮಗೆ ಗೊತ್ತಾಗಲೇ ಇಲ್ಲವು.

೪೯. ಆದ್ದರಿಂದ ಹಸ್ತಿನಾಪುರಕ್ಕೆ ಹೋಗಬೇಕು. ಹೋದರ ಅಲ್ಲಿ ಎಲ್ಲ ವಿಷಯಗಳೂ ತಿಳಿಯುತ್ತದೆ. ಅನಂತರ ಏನುಮಾಡಬೇಕೆಂಬುದನ್ನು ಯೋಚಿಸಿ ಅಂತೆಯೇ ಮಾಡೋಣ.

೫೦. ಎಂಬುದಾಗಿ ಆ ನಲನು ಯೋಚಿಸಿಕೊಂಡು ಮೆಲ್ಲಗೆ ತನ್ನ ಪಟ್ಟಣವಾದ ಹಸ್ತಿನಾಪುರಿಗೆ ಹೋದನು. ಎಲೈ ರಾಮನೇ! ಇಷ್ಟರೊಳಗೆ ನೀನು ಈ ಭೂಮಿಯಲ್ಲಿ ಅವತರಿಸಿದೆ.

ಹತ್ವಾ ತಂ ರಾವಣಂ ದೇವಾ ಮೋಚಿತಾಸ್ತೇ ದಿವಂ ಗತಾಃ ।
ಸಪ್ತದ್ವೀಪಾಂತರಸ್ಥಾ ಯೇ ನೃಪಾಸ್ತೇ ಸ್ವವಶೀಕೃತಾಃ ॥ ೫೧ ॥

ಪುರೂರವಾದಿಕಾಃ ಸ್ತ್ರೀಶ್ಚ ನಿಷ್ಕಾಸ್ಯಾತ್ರ ಗಜಾಹ್ವಯೇ ।
ಸುಷೇಣಃ ಸ್ಥಾಪಿತಃ ಪೂರ್ವಂ ವಾನರೈಸ್ಸಹಿತಸ್ತ್ವಯಾ ॥ ೫೨ ॥

ತತಃ ಪುರೂರವಾದ್ಯಾಸ್ತೇ ಸ್ವಕಾಲೇನ ಮೃತಾಸ್ತ್ವಿಹ ।
ಇದಾನೀಂ ತೇ ಸಮಾಯಾತಾಃ ಸೋಮವಂಶೋದ್ಭವಾ ನೃಪಾಃ ॥ ೫೩ ॥

ನಲಾದ್ಯಾಸ್ಸಪ್ತ ಸ್ವಪುರಂ ಸಪ್ತದ್ವೀಪನೃಪೈಸ್ಸಹ ।
ತ್ವಯಾ ಯೇ ತಸ್ಯ ವಶಗಾಃ ಕೃತಾ ದ್ವೀಪಾಂತರಸ್ಥಿತಾಃ ॥ ೫೪ ॥

---

೫೧. ನೀನು ಆ ರಾವಣನನ್ನು ಕೊಂದು ದೇವತೆಗಳನ್ನು ಬಂಧನದಿಂದ ಬಿಡಿಸಿದೆ. ದೇವತೆಗಳೆಲ್ಲರೂ ಸ್ವರ್ಗಕ್ಕೆ ಹೊರಟು ಹೋದರು. ಅಲ್ಲದೆ ನೀನು ಸಪ್ತದ್ವೀಪದಲ್ಲಿರುವ ರಾಜರೆಲ್ಲರನ್ನೂ ನಿನ್ನ ಅಧೀನರನ್ನಾಗಿ ಮಾಡಿಕೊಂಡಿದ್ದೀಯೆ.

೫೨. ಆ ಹಸ್ತಿನಾಪುರದಲ್ಲಿದ್ದ ಪುರೂರವನೇ ಮುಂತಾದವರನ್ನೂ ಅವರ ಹೆಂಗಸರನ್ನೂ ಅಲ್ಲಿಂದ ಓಡಿಸಿ ಸುಷೇಣನೆಂಬ ವಾನರ ಶ್ರೇಷ್ಠನನ್ನು ಕಪಿಗಳೊಡನೆ ಅಲ್ಲಿ ಇಟ್ಟಿದ್ದೀಯೆ.

೫೩. ಪುರೂರುವನೇ ಮುಂತಾದವರು ಅವರ ಆಯುಸ್ಸು ಕಳೆಯಲು ಅದರಂತೆಯೇ ಮೃತರಾದರು. ಈಗ ಆ ಸೋಮವಂಶದ ರಾಜರು ಆ ಹಸ್ತಿನಾವತಿಗೆ ಬಂದರು.

೫೪ ಆ ನಲನೇ ಮುಂತಾದ ಏಳುಜನರೂ ಸಪ್ತದ್ವೀಪದರಾಜರೊಡನೆ ಬಂದಿರುವರು. ಅಲ್ಲಿರತಕ್ಕ ಯಾವ ಯಾವ ರಾಜರನ್ನು ಆ ಸುಷೇಣನ ವಶಕ್ಕೆ ಸೇರಿಸಿದ್ದೀಯೋ ಅವರೆಲ್ಲರೂ ಈಗ ಆ ನಲನ ಜೊತೆಗೆ ಸೇರಿರುವರು.

ನೃಪಾಸ್ತೇಷಾಂ ಪೂರ್ವಜಾಶ್ಚ ಸ್ವಸೈನ್ಯೈಸ್ತೇ ನೃಪೋತ್ತಮಾಃ ।
ಬಲಿನಃ ಕೋಟಿಶಸ್ಸರ್ವೇ ಸಮಾಯಾತಾ ಗಜಾಹ್ವಯಂ ॥ ೫೫ ॥

ಭವಿಷ್ಯತಿ ತ್ವಯಾ ತೈಶ್ಚ ಸಂಗರಸ್ಸೋಮವಂಶಜೈಃ ।
ತದಾ ಬ್ರಹ್ಮಾಸುರೈರ್ಯುಕ್ತಸ್ಸಮಾಗತ್ಯ ತವಾಂತಿಕಂ ॥ ೫೬ ॥

ಪಾದಯೋಸ್ತೇ ಪ್ರಣಾಮಾಂಶ್ಚ ನಲಾದ್ಯೈಃ ಕಾರಯಿಷ್ಯತಿ ।
ಕೃತ್ವಾ ಕಃ ಪ್ರಾರ್ಥನಾಂ ತೇಪಿ ತ್ವಾಂ ವೈಕುಂಠಂ ಪ್ರಣೇಷ್ಯತಿ ॥ ೫೭ ॥

ಏವಂ ರಾಮ ಸವಿಸ್ತಾರಂ ತವಾಗ್ರೇ ಕಥಿತಂ ಮಯಾ ।
ಯತ್ಪೃಷ್ಟಂ ಮಾರ ತ್ವಯಾ ಪೂರ್ವಂ ನಲಾದೀನಾಂ ಕಥಾತಕಂ ॥ ೫೮ ॥

ವಿವಾಹಕಾಂಡಮಾರಭ್ಯ ರಮ್ಯಂ ರಾಮಾಯಣಂ ಶುಭಂ ।
ಸಮಗ್ರಂ ಹಿ ಮಯಾ ರಾಮ ಪುರಾ ನ ಶ್ರಾವಿತಂ ತವ ॥ ೫೯ ॥

---

೫೫. ನೀನು ಆ ಸುಷೇಣನ ಸ್ವಾಧೀನಮಾಡಿದ ಸಪ್ತದ್ವೀಪಾಂತರದ ರಾಜರ ಪೂರ್ವೀಕರೆಲ್ಲರೂ ಈಗ ಅಲ್ಲಿಗೆ ಅವರವರ ಸೈನ್ಯದೊಡಗೂಡಿ ಬಂದಿರುವರು. ಅವರೆಲ್ಲರೂ ಬಹು ಬಲಿಷ್ಠರು. ಕೋಟಿಸಂಖ್ಯೆಯ ರೀತಿಯಲ್ಲಿರುವರು. ಹಸ್ತಿನಾಪಟ್ಟಣದಲ್ಲಿದ್ದುಕೊಂಡಿರುವರು.

೫೬. ಆ ಚಂದ್ರವಂಶದ ರಾಜರುಗಳೊಡನೆ ಯುದ್ಧವು ನಡೆಯುತ್ತದೆ. ಆಗ ಬ್ರಹ್ಮನೇ ದೇವತೆಗಳೊಡನೆ ಕೂಡಿಕೊಂಡು ನಿನ್ನ ಬಳಿಗೆ ಬರುವನು.

೫೭. ಆ ಬ್ರಹ್ಮನು ನಲನೇ ಮುಂತಾದವರು ನಿನಗೆ ನಮಸ್ಕರಿಸುವಂತೆ ಮಾಡುತ್ತಾನೆ. ಆ ಬ್ರಹ್ಮನೂ ಕೂಡ ನಿನಗೆ ನಮಸ್ಕರಿಸಿ ಪ್ರಾರ್ಥನೆಯನ್ನು ಮಾಡಿಕೊಂಡು ವೈಕುಂಠಕ್ಕೆ ಕರೆದುಕೊಂಡು ಹೋಗುತ್ತಾನೆ.

೫೮. ಎಲೈ ರಾಮನೇ! ಈ ವಿಷಯವನ್ನು ನಿನಗೆ ವಿಸ್ತಾರವಾಗಿ ಹೇಳಿದ್ದೇನೆ. ನೀನು ಆ ನಲನೇ ಮುಂತಾದವರ ಚರಿತ್ರೆಯನ್ನು ಕೇಳಿದುದರಿಂದ ಹೇಳಬೇಕಾಯಿತು.

೫೯. ಎಲೈ ರಾಮನೇ! ವಿವಾಹಕಾಂಡವನ್ನು ಮೊದಲು ಮಾಡಿಕೊಂಡು ರಮ್ಯವಾದ ರಾಮಾಯಣವನ್ನು ಹಿಂದೆ ನಿನಗೆ ಹೇಳಲೇ ಇಲ್ಲ. ಅದನ್ನು ನಾನು ಸರಿಯಾದ ಕಾಲದಲ್ಲಿ ಹೇಳಬೇಕೆಂದೇ ಪ್ರತಿಜ್ಞೆಯನ್ನು ಮಾಡಿಕೊಂಡಿದ್ದೆ.

ಪುತ್ರಾಭ್ಯಾಮಧುನಾ ಸರ್ವಂ ಶೃಣುಷ್ವ ರಘುನಂದನ ।
ಇತ್ಯುಕ್ತ್ವಾ ಕುಶಲವಯೋಶ್ಚಕಾರಾಜ್ಞಾಂ ಮುನಿಸ್ತತಃ ॥ ೬೦ ॥

ವಿವಾಹಕಾಂಡಾತ್ಕಾಂಡಾನಿ ಚತ್ವಾರಿ ಜಗತುಶ್ಶಿಶೂ ।
ತತ್ಸರ್ವಂ ರಾಘವಶ್ಶ್ರುತ್ವಾ ಪರಂ ಮುದಮವಾಪ ಸಃ ॥ ೬೧ ॥

ವಿದುಸ್ಸರ್ವೇ ಜನಾಶ್ಚಾಪಿ ವೈಕುಂಠಾರೋಹಣಂ ಪ್ರಭೋಃ ॥ ೬೨ ॥

ಇತಿಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕಿಯೇ ಆದಿಕಾವ್ಯೇ ಪೂರ್ಣಕಾಂಡೇ ಸೋಮವಂಶನೃಪ
ಕಥಾನಕವಿಸ್ತಾರೋ ನಾಮ ಪ್ರಥಮಸ್ಸರ್ಗಃ ಸಮಾಪ್ತಃ

---

೬೦. ನಿನ್ನ ಮಕ್ಕಳಿಂದಲೇ ಈಗ ನೀನು ಎಲ್ಲವನ್ನೂ ಕೇಳು. ಅನಂತರ ಆ ವಾಲ್ಮೀಕಿಮುನಿಯು ಕುಶಲವರಿಗೆ ಹೇಳುವಂತೆ ಅಪ್ಪಣೆಮಾಡಿದನು.

೬೧ ಅನಂತರ ಆ ಕುಶಲವರು ವಿವಾಹಕಾಂಡಕ್ಕಿಂತ ಮುಂದಿನ ನಾಲ್ಕು ಕಾಂಡಗಳನ್ನೂ ಹೇಳಿದರು. ಅದೆಲ್ಲವನ್ನೂ ರಾಮನು ಕೇಳಿ ಬಹುವಾಗಿ ಸಂತೋಷ ಗೊಂಡನು,

೬೨. ಆ ವಿಷಯಗಳೆಲ್ಲವನ್ನೂ ಕೇಳಿ ಜನರು ಶ್ರೀರಾಮನು ವೈಕುಂಠಕ್ಕೆ ತೆರಳುವುದನ್ನು ತಿಳಿದುಕೊಂಡರು.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ
ಆದಿಕಾವ್ಯವಾದ ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ
ಸೋಮವಂಶಕರಾಜರ ಕಥೆಯನ್ನು ವಿಸ್ತಾರಪಡಿಸಿದ ಮೊದಲನೆಯ
ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ ಮೊದಲನೆಯ ಸರ್ಗದ ಸಾರಾಂಶವು

ಶ್ರೀರಾಮನು ಅಯೋಧ್ಯೆಯಲ್ಲಿ ರಾಜ್ಯಭಾರವಮಾಡುತ್ತಿರಲು ಹಸ್ತಿನಾಪುರವನ್ನಾಳುತ್ತಿದ್ದ ಸುಷೇಣನ ದೂತನು ಬಂದು ಸ್ವಾಮಿ ಚಂದ್ರವಂಶದ ರಾಜನಾದ ನಳನೆಂಬುವನು ಹಸ್ತಿನಾಪುರಕ್ಕೆ ಮುತ್ತಿಗೆ ಹಾಕಿರುವನು. ಇದನ್ನು ತಮಗೆ ತಿಳಿಸಿಸೆಂದು ನಮ್ಮ ಮಹಾರಾಜನು ಹೇಳಿದನೆಂದನು.

ಇದನ್ನು ಕೇಳಿದ ರಾಮನು ವಸಿಷ್ಠನನ್ನು ಕುರಿತು ಗುರುವರ್ಯರೆ! ನನ್ನ ರಾಜ್ಯದಲ್ಲಿ ರಾಜರಾರೂ ನನ್ನ ಮೇಲೆ ಯುದ್ಧಮಾಡಲು ಯಾವಾಗಲೂ ಬಂದಿರಲಿಲ್ಲ. ಈಗ ಹೀಗೆ ಬಂದಿರಲು ಕಾರಣವೇನು? ವಿಚಾರಿಸು ಎಂದನು.

ಆಗ ವಸಿಷ್ಠನು ಅಯ್ಯಾ! ನಿನ್ನ ಚರಿತ್ರೆಯೆಲ್ಲವನ್ನೂ ಪೂರ್ಣವಾಗಿ ಬರೆದಿರುವ ಆ ವಾಲ್ಮೀಕಿಯನ್ನು ಕೇಳಬೇಕು. ಎಂದನು.

ಒಡನೆಯೇ ರಾಮನು ಲಕ್ಷ್ಮಣನನ್ನು ಕಳುಹಿಸಿ ವಾಲ್ಮೀಕಿಯನ್ನು ಕರೆಸಿ ಅವನನ್ನು ಅರ್ಘ್ಯಾದಿಗಳಿಂದ ಪೂಜಿಸಿ ಪ್ರಾಪ್ತವಾಗಿರುವ ಸಂದರ್ಭವನ್ನು ತಿಳಿಸಿದನು.

ಆಗ ವಾಲ್ಮೀಕಿಯು ಎಲೈ ರಾಮನೇ! ನೀನು ಸರ್ವಜ್ಞನು. ತಮಾಷೆಗೋಸ್ಕರ ನನ್ನನ್ನು ಕೇಳುತ್ತಿದ್ದೀಯೆ. ಆದರೂ ಹೇಳುತ್ತೇನೆ. ಕೇಳು.

ಹನ್ನೊಂದುಸಾವಿರದ ಹನ್ನೊಂದುವರ್ಷ ಹನ್ನೊಂದುತಿಂಗಳು ಹನ್ನೊಂದು ದಿನ ಹನ್ನೊಂದು ಘಳಿಗೆ ಹನ್ನೊಂದುವಿಘಳಿಗೆಗಳ ಕಾಲ ನೀನು ರಾಜ್ಯಭಾರವನ್ನು ಮಾಡುತ್ತೀಯೇ ಎಂದು ನಾನು ನಿಶ್ಚಯಿಸಿದ್ದೇನೆ. ಮತ್ತು ನೂರುಕೋಟಿ ಗ್ರಂಥಗಳುಳ್ಳ ನಿನ್ನ ಕಥೆಯನ್ನು ನೀನು ಅವತರಿಸುವುದಕ್ಕೆ ಮುಂಚೆಯೇ ಬರೆದಿದ್ದೇನೆ ಇವುಗಳಲ್ಲಿ ನಾನು ನಿಶ್ಚಯಿಸಿರುವ ವರ್ಷಗಳು ಕಳೆದುಹೋದುವು.

ಇನ್ನು ಉಳಿದಿರುವುದು ಹದಿನೆಂಟು ದಿನಗಳು ಕಮ್ಮಿಯಾಗಿ ಒಂದು ವರ್ಷಕಾಲವು ಈ ಕಾಲವು ನೀನು ಯುದ್ಧಮಾಡುವುದರಲ್ಲಿ ಕಳೆಯುತ್ತದೆ. ಇಷ್ಟಕ್ಕೆ ನಿನ್ನ ಅವತಾರದ ಕಾಲವು ಮುಗಿಯುತ್ತದೆ. ಅನಂತರ ಭಾಗೀರಥಿಯಲ್ಲಿ ಸ್ನಾನಮಾಡಿ ಬ್ರಹ್ಮಾದಿಗಳಿಂದ ಸ್ತುತಿಸಿಕೊಳ್ಳುತ್ತಾ ನಿನ್ನ ಸ್ಥಾನವಾದ ವೈಕುಂಠಕ್ಕೆ ಹೋಗುತ್ತೀಯೆ. ಎನ್ನಲು ಇದನ್ನು ಕೇಳಿ ರಾಮನು ಎಲೈ ಮುನಿಯೇ! ಇಲ್ಲಿಯವರೆಗೂ ಆ ನಲಾದಿಗಳು ಎಲ್ಲಿದ್ದರು? ಎಂದನು. ಆಗ ವಾಲ್ಮೀಕಿಯು ಎಲೈ ರಾಮನೇ! ಅತ್ರಿಋಷಿಯು ಒಂದುಸಾರಿ ವೈಶಾಖಮಾಸದಲ್ಲಿ ಪೂರ್ಣಿಮೆಯಲ್ಲಿ ಷೋಡಶಕಲೆಗಳಿಂದಲೂ ಬೆಳಗುತ್ತಲಿರುವ ಚಂದ್ರನನ್ನು ನೋಡಿದನು. ಅವನು ಹೆಂಗಸಿನ ಮುಖದಂತೆ ಮನೋಹರಗಿದ್ದನು. ಇದರಿಂದ ಆ ಋಷಿಗೆ ವೀರ್ಯಸ್ಖಲನವಾಗಿ ಭೂಮಿಯಲ್ಲಿ ಬಿದ್ದಿತು ಸೋಮನನ್ನು ನೋಡಿದುದರಿಂದ ಹುಟ್ಟಿದನಾದ ಕಾರಣ ಅವನಿಗೂ ಸೋಮನೆಂದೇ ಹೆಸರಾಯಿತು. ಅವನು ಗಂಗೆಯ ದಡದಲ್ಲಿ ಉಗ್ರವಾದ ತಪಸ್ಸನ್ನು ಮಾಡಿದನು. ಹೀಗೆ ತಪಸ್ಸು ಮಾಡುತ್ತಿದ್ದಾಗ ಅಲ್ಲಿಗೆ ಒಂದು ಆನೆಯು ಬಂದಿತು. ಅದನ್ನು ಅಲ್ಲಿದ್ದ ಪಕ್ಷಿಗಳು ಕೊಂದುಬಿಟ್ಟುವು. ಈ ಆಶ್ಚರ್ಯವನ್ನು ಸೋಮನು ನೋಡಿ ಮನಸ್ಸಿನಲ್ಲಿ ಯೋಚಿಸುತ್ತ ಇದು ಈ ಭೂಮಿಯ ಪ್ರಭಾವವೆಂದು ತಿಳಿದುಕೊಂಡು ಅಲ್ಲಿ ಒಂದು ಊರನ್ನು ಕಟ್ಟಿದನು. ಅದಕ್ಕೆ ಹಸ್ತಿನಾಶಪುರವೆಂದು ಹೆಸರಿಟ್ಟನು. ಕೊನೆಗೆ ಅದು ಹಸ್ತಿನಾಪುರವಾಯಿತು ಅಲ್ಲಿರುವ ಜನರು ಆ ಸೋಮನನ್ನೇ ರಾಜನನ್ನಾಗಿ ಮಾಡಿಕೊಂಡರು. ಅವನಿಗೆ ಬುಧನೆಂಬ ಮಗನು ಹುಟ್ಟಿದನು. ತಂದೆಮಕ್ಕಳಿಬ್ಬರೂ ಎಲ್ಲರನ್ನೂ ಜಯಿಸಿ ಭೂಲೋಕವನ್ನೇ ತಮ್ಮ ಸ್ವಾಧೀನವನ್ನಾಗಿ ಮಾಡಿಕೊಂಡು ಸ್ವರ್ಗಲೋಕಕ್ಕೂ ಹೋಗಿ ಅಲ್ಲಿಯೂ ಎಲ್ಲರನ್ನೂ ಜಯಿಸಿದರು ಅನಂತರ ಭೂಮಿಗೆ ಬಂದು ವಾಸಮಾಡುತ್ತಿರಲು ಬ್ರಹ್ಮನು ಬಂದು ಅವರನ್ನು ಕುರಿತು ನೀವಿಬ್ಬರೂ ನನ್ನ ವಂಶದಲ್ಲಿ ಹುಟ್ಟಿದವರು. ನೀವು ದೇವತೆಗಳನ್ನು ಜಯಿಸಿ ಅವರೊಡನೆ ನನ್ನನ್ನೂ ಸೆರೆಹಿಡಿದು ಕೊನೆಗೆ ಬಿಟ್ಟುಬಿಟ್ಟಿದ್ದೀರಿ. ನಿಮ್ಮಿಂದ ಮುಂದೆ ಮೂರನೆಯ ತಲೆಯಿಂದ ಮೊದಲುಗೊಂಡು ಆದರ ಮುಂದಿನ ಏಳುತಲೆಗಳು ಕಳೆಯುವವರೆಗೂ ಅವರು ಮತ್ತೊಬ್ಬರಿಂದ ಜಿತರಾಗುವುದಿಲ್ಲ. ಎಂದು ವರವನ್ನು ಕೊಟ್ಟಿದ್ದೇನೆ. ಎಂದು ಹೇಳಿ ಆ ಬ್ರಹ್ಮನು ಹೊರಟು ಹೋದನು.

ಆಮೇಲೆ ಇಂದ್ರನು ತನ್ನ ಮಗಳ ಮಗಳಾದ ಪದ್ಮಾವತಿಯನ್ನು ಸೋಮನಿಗೆ ಕೊಟ್ಟು ಮದುವೆಮಾಡಿದನು ಕಾಲಾಂತರದಲ್ಲಿ ಬುಧನಿಗೆ ಪುರೂರವನೆಂಬ ಮಗನು ಹುಟ್ಟಿದನು. ಅವನು ರಾಜ್ಯವನ್ನು ಹೊಂದಿ ಧರ್ಮದಿಂದ

ಆಳಿದನು. ಆವನಿಗೆ ಗವ್ಯನೆಂಬ ಮಗಳೂ ಗವ್ಯನಿಗೆ ಅಲ್ಪನೆಂಬ ಮಗನೂ ಅಲ್ಪನಿಗೆ ನಳನೆಂಬ ಮಗನೂ ಆದರು. ಈ ನಳನು ಪುರೂರವಗವ್ಯ ಅಲ್ಪರನ್ನು ಊರಿನಲ್ಲಿ ಬಿಟ್ಟು ತಾನು ಎಲ್ಲರನ್ನೂ ಜಯಿಸಲು ಹೊರಟನು. ಕ್ರಮವಾಗಿ ದಿಕ್ಪಾಲಕರನ್ನು ಎಂದರೆ ವಹ್ನಿ ಯಮ ನಿರಋತಿಗಳನ್ನು ಜಯಿಸಿ ವರುಣನನ್ನು ಜಯಿಸಲು ಮುಂದುವರಿದನು. ಈ ನಳನ ಜೊತೆಯಲ್ಲಿ ರಾವಣನೂ ಸೈನ್ಯದೊಡನೆ ಅವನ ಸಹಾಯಕನಾಗಿ ಅನುಯಾಯಿಯಾಗಿ ಹೋಗಿದ್ದನು. ಈ ನಳನು ವರುಣನನ್ನು ಜಯಿಸಲು ಹೊರಟಾಗ ರಾವಣನು ಸೈನ್ಯಸಮೇತನಾಗಿ ಸ್ವರ್ಗಲೋಕಕ್ಕೆ ಹೋಗಿ ಇಂದ್ರನೇ ಮುಂತಾದ ದೇವತೆಗಳನ್ನು ಜಯಿಸಿ ಅವರನ್ನು ಲಂಕೆಗೆ ಸೆರೆಹಿಡಿದು ತಂದನು. ಇದನ್ನು ತಿಳಿದು ಸೋಮನು ಇಂದ್ರಾದಿಗಳನ್ನು ಬಿಡಿಸಲು ಸೈನ್ಯವನ್ನು ತೆಗೆದುಕೊಂಡು ಹೊರಟನು. ಆಗ ಬ್ರಹ್ಮನು ಬಂದು ಅವನನ್ನು ತಡೆದು ಎಲೈ ಸೋಮನೇ! ವಿಷ್ಣುವು ಮನುಷ್ಯಾವತಾರಮಾಡಿ ಆ ರಾವಣನನ್ನು ಕೊಲ್ಲುವನು. ನಾನು ಆ ರಾವಣನಿಗೆ ವರವನ್ನು ಕೊಟ್ಟಿದ್ದೇನೆ. ಆದ್ದರಿಂದ ನೀನು ಅವನಮೇಲೆ ದಂಡೆತ್ತಿ ಹೋಗಬೇಡವೆಂದನು. ಇದರಿಂದ ಸೋಮನು ತನ್ನ ಊರಾದ ಅಮರಾವತಿಗೆ ಹಿಂದಿರುಗಿದನು. ಇತ್ತ ನಲನು ಎಲ್ಲರನ್ನೂ ಜಯಿಸಿ ಇಂದ್ರನನ್ನು ಜಯಿಸಲು ಹೊರಟನು. ನಲನು ಹೀಗೆ ಸುತ್ತುತ್ತಿರುನಾಗ ಕೃತಯುಗವು ಕಳೆದುಹೋಯಿತು. ಕೊನೆಗೆ ತ್ರೇತಾಯುಗವೂ ಕಳೆಯುತ್ತ ಬಂದಿತು. ಈ ತ್ರೇತಾಯುಗದ ಕೊನೆಯಲ್ಲಿ ನಲನು ತಾನು ಜಯಿಸಿ ತನ್ನ ಜೊತೆಯಲ್ಲಿ ಬರುತ್ತಿದ್ದವರನ್ನು ವಿಮರ್ಶಿಸಿ ನೋಡಿದನು. ಅವರಲ್ಲಿ ರಾವಣನನ್ನು ಕಾಣದಿರಲು ದೂತರನ್ನು ಕೇಳಿದನು. ಅವರು ರಾವಣನು ದೇವತೆಗಳೆಲ್ಲರನ್ನೂ ಜಯಿಸಿ ಅವರನ್ನು ಅಧೀನರನ್ನಾಗಿ ಮಾಡಿಕೊಂಡು ತನ್ನ ಅಂಕೆಯಲ್ಲಿ ರಾಜ್ಯವಾಳುತ್ತಿರುವನು. ಎಂದರು. ಹೀಗೆ ಸುತ್ತುತ್ತಿರುವಾಗ ನಳನಿಗೆ ನದ್ಯುಕನೆಂಬ ಮಗನು ಹುಟ್ಟಿದನು. ಆ ನದ್ಯುಕನಿಗೆ ಜಾತೀಕರನೂ ಜಾತೀಕರನಿಗೆ ವಸುದನೂ ವಸುದನಿಗೆ ಲಘುಶ್ರುತನೂ ಅವನಿಗೆ ಸುಧನೂ ಅವನಿಗೆ ಅಜಮೀಢನೂ ಮಕ್ಕಳಾದರು ಈ ರೀತಿಯಾದ ವಂಶವು ದಾರಿಯಲ್ಲಿಯೇ ಬೆಳೆಯಿತು. ಆಗ ನಳನು ದೇವತೆಗಳನ್ನು ಸೇವಕನಾದ ರಾವಣನೇ ಜಯಿಸಿ ಭೂಲೋಕಕ್ಕೆ ತೆಗೆದುಕೊಂಡು ಹೋಗಿರುವುದರಿಂದ ತಾನು ಇಂದ್ರಲೋಕಕ್ಕೆ ಹೋಗುವುದು ಅನವಶ್ಯಕವೆಂದೂ ಅವನು ನನ್ನ ಪೂರ್ವಿಕರನ್ನು ಜೊತೆಮಾಡಿಕೊಂಡು ದೇವತೆಗಳನ್ನು ಜಯಿಸಿರುವನೋ ಇಲ್ಲವೆ ಇಲ್ಲವೊ ತಿಳಿಯದು. ಹಸ್ತಿನಾಪುರಿಗೆ ಹೋದರೆ ಎಲ್ಲವೂ ತಿಳಿಯುತ್ತದೆ ಅಲ್ಲಿಗೆ ಹೋದಮೇಲೆ ಸಮಯಬಂದಂತೆ ಮಾಡೋಣ ಎಂದುಕೊಂಡನು.

ಎಲೈ ರಾಮನೇ! ಇಷ್ಟರೊಳಗೆ ನೀನು ಹುಟ್ಟಿ ರಾವಣನನ್ನು ಕೊಂದು ದೇವತೆಗಳನ್ನು ಬಿಡಿಸಿದೆ ಅವರು ಸ್ವರ್ಗಕ್ಕೆ ಹೋದರು. ಅಲ್ಲದೆ ಸಪ್ತದ್ವೀಪಗಳ ರಾಜರನ್ನೂ ಸ್ವಾಧೀನರನ್ನಾಗಿ ಮಾಡಿಕೊಂಡೆ. ಮತ್ತು ಪುರೂರವನೇ ಮುಂತಾದವರನ್ನು ಓಡಿಸಿ ಅಲ್ಲಿ ಸುಷೇಣನನ್ನು ಇಟ್ಟಿದ್ದೀಯೆ. ಪುರೂರವಾದಿಗಳು ಕಾಲಾಂತರದಲ್ಲಿ ಮರಣಹೊಂದಿದರು. ಈಗ ಆ ಸೋಮವಂಶದ ರಾಜರು ಬಂದಿರುವರು. ಅವರೆಲ್ಲರೂ ಬಹು ಬಲಿಷ್ಠರು. ಅವರೊಡನೆ ಯುದ್ಧವು ನಡೆಯುತ್ತದೆ. ಆಗ ಬ್ರಹ್ಮನು ದೇವತೆಗಳೊಡನೆ ಅವರು ನಿನಗೆ ನಮಸ್ಕರಿಸುವಂತೆ ಮಾಡುವನು. ಮತ್ತು ಆ ಬ್ರಹ್ಮನು ನಿನ್ನನ್ನು ವೈಕುಂಠಕ್ಕೆ ಕರೆದುಕೊಂಡೂ ಹೋಗುವನು. ನೀನು ಕೇಳಿದ ವಿಷಯವೆಲ್ಲವನ್ನೂ ಹೇಳಿದ್ದೇನೆಂದು ಆ ವಾಲ್ಮೀಕಿಯು ಹೇಳಿದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಪೂರ್ಣಕಾಂಡೇ ದ್ವಿತೀಯಸ್ಸರ್ಗಃ

॥ ರಾಮದಾಸ ಉವಾಚ ॥

ಅಥ ರಾಮಸ್ತದಾ ಪ್ರಾಹ ವಾಲ್ಮೀಕಿಂ ಮುನಿಸತ್ತಮಂ ।
ಆಗಂತವ್ಯಂ ತ್ವಯಾ ತತ್ರ ಮುನಿಭಿಸ್ತು ಗಜಾಹ್ವಯಂ ॥ ೧ ॥

ತಥೇತಿ ಸ ಮುನಿಃ ಪ್ರಾಹ ರಾಘವಂ ಭಕ್ತವತ್ಸಲಂ ।
ತತಸ್ಸ ಲಕ್ಷ್ಮಣಂ ಶೀಘ್ರಂ ರಾಘವೋ ವಾಕ್ಯಮಬ್ರವೀತ್ ॥ ೨ ॥

ಪತ್ರಾಣಿ ಪ್ರೇಷಯಸ್ವಾದ್ಯ ಕುಮಾರಾನ್ ರಾಜ್ಯಸಂಸ್ಥಿತಾನ್ ।
ಸ್ವಸ್ವರಾಜ್ಯೇ ಮಂತ್ರಿಣಶ್ಚ ಕೃತ್ವಾತ್ರಾಗಮ್ಯತಾಂ ಬಲೈಃ ॥ ೩ ॥

ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ ಎರಡನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ಇದನ್ನು ಕೇಳಿ ಶ್ರೀರಾಮನು ಮುನಿಶ್ರೇಷ್ಠನಾದ ವಾಲ್ಮೀಕಿಯನ್ನು ಕುರಿತು ಇಂತೆಂದನು. ಎಲೈ ಮುನಿಯೇ ನೀನೂ ಕೂಡ ಮುನಿಗಳೊಡನೆ ಆ ಹಸ್ತಿನಾಪುರಕ್ಕೆ ಬರಬೇಕು.

೨. ಆ ಮುನಿಯೂ ಕೂಡ ಭಕ್ತವತ್ಸಲನಾದ ರಾಮನನ್ನು ಕುರಿತು ಅಂತೆಯೇ ಆಗಲೆಂದು ಹೇಳಿದನು. ರಾಮನು ಒಡನೆಯೇ ಲಕ್ಷ್ಮಣನನ್ನು ಕರೆದು ಇಂತೆಂದು ಅಪ್ಪಣೆಮಾಡಿದನು.

೩. ಎಲೈ ಲಕ್ಷ್ಮಣನೇ! ನಮ್ಮ ನಿಮ್ಮ ಮಕ್ಕಳೆಲ್ಲರಿಗೂ ಅವರು ಅವರವರ ರಾಜ್ಯದಲ್ಲಿ ಅವರವರ ಮಂತ್ರಿಗಳನ್ನು ಅಧಿಕಾರದಲ್ಲಿಟ್ಟು ಇಲ್ಲಿಗೆ ಸೈನ್ಯದೊಡನೆ ಬರಬೇಕೆಂಬುದಾಗಿ ಕಾಗದವನ್ನು ಬರೆದು ಕಳುಹಿಸು.

ಏವಮೇವ ಪ್ರಲೇಖ್ಯಾನಿ ಜಂಬೂದ್ವೀಪಪತೀನ್ ವರಾನ್ ।
ತಥಾ ದ್ವೀಪಪತೀಂಶ್ಚಾಪಿ ದೂತಾಸ್ತಾನ್ ತ್ವರಯಂ ತು ನಃ ॥ ೪ ॥

ತಥೇತಿ ಲಕ್ಷ್ಮಣಶ್ಚೋಕ್ತ್ವಾ ತಥಾ ಚಕ್ರೇ ಯಥೋದಿತಃ ।
ರಾಘವೇಣ ಸಭಾಮಧ್ಯೇ ವಾಲ್ಮೀಕಿಗುರುಸನ್ನಿಧೌ ॥ ೫ ॥

ತತಃ ಪ್ರಾಹ ಪುನಶ್ಶ್ರೀಮಾನ್ ರಾಘವೋ ಲಕ್ಷ್ಮಣಂ ಮುದಾ ।
ವಾಸೋಗೇಹಾನಿ ನೇಯಾನಿ ಬಹಿರದ್ಯ ರಘೂದ್ವಹ ॥ ೬ ॥

ಮುಹೂರ್ತೋ ವರ್ತತೇ ಶ್ವೋ ವೈ ಸೇನಾಂ ಚೋದಯ ಸಾದರಾತ್ ।
ಆಯುಧಾನ್ಯಥ ಯಂತ್ರಾಣಿ ಜೀರ್ಣಾನಿ ಚ ಬಹೂನಿ ಹಿ ॥ ೭ ॥

---

೪. ಅದೇ ರೀತಿಯಾಗಿ ಜಂಬೂದ್ವೀಪದಲ್ಲಿರುವ ರಾಜರುಗಳೆಲ್ಲರಿಗೂ ಕಾಗದವನ್ನು ಬರೆಯಬೇಕು. ಅಲ್ಲದೆ ಮಿಕ್ಕದ್ವೀಪದ ರಾಜರಿಗೂ ಅದೇ ರೀತಿಯಾಗಿ ಕಾಗದವವನ್ನು ಬರೆಯಬೇಕು. ನಮ್ಮ ದೂತರನ್ನು ಬೇಗನೆ ಕರೆಯಿಸು.

೫. ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ ರಾಮನು ಹೇಳಿದಂತೆಯೇ ಸಭೆಯಲ್ಲಿ ರಾಮನೆದುರಿಗೂ, ವಾಲ್ಮೀಕಿಯ ಎದುರಿಗೂ, ಗುರುವಿನ ಎದುರಿಗೂ, ಮಾಡಿದನು.

೬. ರಾಘವನು ಮತ್ತೆ ಲಕ್ಷ್ಮಣನನ್ನು ಕುರಿತು ಇಂತೆಂದನು. ಎಲೈ ಲಕ್ಷ್ಮಣನೇ! ಗುಡಾರಗಳನ್ನು ನಿರ್ಮಿಸಲು ಗುಡಾರದ ಬಟ್ಟೆಗಳನ್ನು ಹೊರಗೆ ತೆಗೆದುಕೊಂಡು ಹೋಗಲಿ.

೭ ನಾಳೆಯದಿನವೇ ಪ್ರಯಾಣಕ್ಕೆ ಒಳ್ಳೆಯ ಮುಹೂರ್ತವಿರುವುದು. ಜಾಗ್ರತೆಯಾಗಿ ಸೇನೆಗಳೆಲ್ಲವೂ ಹೊರಡುವಂತೆ ಅಪ್ಪಣೆಮಾಡು. ಆಯುಧಗಳನ್ನೂ, ಯಂತ್ರಗಳನ್ನೂ ಹೊರಗೆ ತೆಗೆಸು. ಹಳೆಯದಾಗಿರುವುದನ್ನೂ ಕೆಟ್ಟಿರುವುದನ್ನೂ ಸರಿಪಡಿಸು.

ಪೂರ್ವಜೈರ್ನಿಹಿತಾನ್ಯೇವ ಕೋಶಾಗಾರೇಷು ವೈ ಸದಾ ।
ತಾನಿ ನಿಷ್ಕಾಸನೀಯಾನಿ ತೇಷಾಂ ಕಾಲೋದ್ಯ ವರ್ತತೇ ॥ ೮ ॥

ಅಂತಃ ಪುರಾಣಿ ಸರ್ವಾಣಿ ಬಹಿರ್ನೇಯಾನಿ ಮೇಗ್ರತಃ ।
ಅಗ್ನಿಹೋತ್ರಂ ಪುರಸ್ಕೃತ್ಯ ಸೀತಾಪ್ಯಗ್ರೇನುಗಚ್ಛತು ॥ ೯ ॥

ಕೋಶಾಗಾರಾಣಿ ಸರ್ವಾಣಿ ಬಹಿರ್ನೇಯಾನಿ ವಾಹನೈಃ ।
ಹಸ್ತ್ಯಶ್ವರಥಪಾದಾತಾ ನೇಯಾಸ್ಸರ್ವೇ ಬಹಿಸ್ತ್ವಯಾ ॥ ೧೦ ॥

ಇತ್ಯಾಜ್ಞಾಪ್ಯ ರಘುಶ್ರೇಷ್ಠೋ ಲಕ್ಷ್ಮಣಂ ವಿನಯಾನ್ವಿತಂ ।
ಮಂತ್ರಿಣೋ ನೈಗಮಾಂಶ್ಚೈವ ವಸಿಷ್ಠಂ ಚೇದಮಬ್ರವೀತ್ ॥ ೧೧ ॥

---

೮. ಹಿಂದಿನವರು ನಿರ್ಮಿಸಿದ್ದ ಆ ಉತ್ತಮವಾದುವೆಲ್ಲವೂ ಆಯುಧದ ಮನೆಯಲ್ಲಿದ್ದುಕೊಂಡಿರುವುದು. ಅವೆಲ್ಲವನ್ನೂ ಹೊರಕ್ಕೆ ತೆಗೆಸು. ಅವುಗಳನ್ನು ಉಪಯೋಗಿಸುವುದಕ್ಕೆ ಈಗ ಕಾಲವು ಒದಗಿದೆ.

೯. ಅಂತಃಪುರದ ಹೆಂಗಸರೆಲ್ಲರನ್ನೂ ನನ್ನ ಎದುರಿಗೇಹೊರಕ್ಕೆ ಹೊರಡಿಸಿಕೊಂಡು ಬಾ. ಅಗ್ನಿಹೋತ್ರವನ್ನು ಮುಂದೆ ತೆಗೆದುಕೊಂಡು ಸೀತೆಯೇ ಮುಂದೆ ಹೊರಡಲಿ.

೧೦. ಭಂಡಾರವೆಲ್ಲವನ್ನೂ ಕೂಡ ವಾಹನಗಳಮೇಲೆ ಹೇರಿಕೊಂಡು ಹೊರಗೆ ತೆಗೆದುಕೊಂಡು ಬರಲಿ. ಆನೆ, ಕುದುರೆ, ರಥ, ಕಾಲಾಳುಗಳೆಲ್ಲವನ್ನೂ ಹೊರಗೆ ಹೊರಡಿಸು.

೧೧. ವಿನಯದಿಂದ ತಲೆತಗ್ಗಿಸಿಕೊಂಡು ಆಜ್ಞಾಧಾರಕನಾಗಿ ನಿಂತಿರುವ ಲಕ್ಷ್ಮಣನಿಗೆ ಇಂತೆಂದು ರಾಮನು ಅಪ್ಪಣೆಮಾಡಿ ಮಂತ್ರಿಗಳನ್ನೂ, ಪ್ರಜೆಗಳನ್ನೂ ವಸಿಷ್ಠರನ್ನೂ ಕುರಿತು ಇಂತೆಂದನು.

ಅಭಿಷೇಕ್ಷ್ಯಾಮಿ ಭರತಂ ಸಪ್ತದ್ವೀಪಪತೇಃ ಪದೇ |
ಲಕ್ಷ್ಮಣೋ ಮಾಂ ವಿನಾ ನೈವ ಭೂಮ್ಯಾಂ ವಾಸಂ ಕರಿಷ್ಯತಿ || ೧೨ ||

ಏವಂ ವದತಿ ರಾಜೇಂದ್ರೇ ಪೌರಾಸ್ತೇ ಭಯವಿಹ್ವಲಾಃ |
ದ್ರುಮಾ ಇವ ಛಿನ್ನಮೂಲಾ ದುಃಖಾರ್ತಾ ಪತಿತಾ ಭುವಿ || ೧೩ ||

ಮೂರ್ಛಿತೋ ಭರತಶ್ಚಾಪಿ ಶ್ರುತ್ವಾ ರಾಮಾಭಿಭಾಷಿತಂ |
ಗರ್ಹಯಾಮಾಸ ರಾಜ್ಯಂ ಸ ಪ್ರಾಹ ದುಃಖಾದ್ರಘೂತ್ತಮಂ || ೧೪ ||

ಸತ್ಯೇನ ತು ಶಪೇ ನಾಹಂ ತ್ವಾಂ ವಿನಾ ದಿವಿ ವಾ ಭುವಿ |
ಕಾಂಕ್ಷೇ ರಾಜ್ಯಂ ರಘುಶ್ರೇಷ್ಠ ಶಪೇ ತ್ವತ್ಪದಯೋಃ ಪ್ರಭೋ || ೧೫ ||

---

೧೨. ನಾನು ಭರತನನ್ನು ಸಪ್ತದ್ವೀಪಪತಿಯ ಸ್ಥಾನದಲ್ಲಿ ಅಭೀಷೇಕ ಮಾಡಬೇಕೆಂದು ಇದ್ದೇನೆ. ಈ ಲಕ್ಷ್ಮಣನು ನನ್ನನ್ನು ಬಿಟ್ಟು ಭೂಮಿಯಲ್ಲಿ ಖಂಡಿತವಾಗಿಯೂ ವಾಸಮಾಡಲಾರನು.

೧೩. ಶ್ರೀರಾಮನು ಇಂತೆಂದು ಹೇಳುತ್ತಿರಲಾಗಿ ಪೌರರೆಲ್ಲರೂ ಭಯದಿಂದ ಕೂಡಿಕೊಂಡು ಬೇರನ್ನು ಕಡಿದ ಮರದಂತೆ ಅವರೆಲ್ಲರೂ ತಲೆಕೆಳಗಾಗಿ ಕೆಳಗೆ ಬಿದ್ದು ಬಿಟ್ಟರು.

೧೪. ರಾಮನು ಹೇಳಿದುದನ್ನು ಕೇಳಿ ಭರತನೂ ಕೂಡ ಮೂರ್ಛೆಗೊಂಡನು. ಆ ಭರತನು ರಾಜ್ಯವನ್ನು ನಿಂದಿಸುತ್ತ ದುಃಖಗೊಂಡು ಶ್ರೀರಾಮನನ್ನು ಕುರಿತು ಇಂತೆಂದನು.

೧೫. ನಾನು ಸತ್ಯವಾಗಿ ಹೇಳುತ್ತೇನೆ. ಎಲೈ ರಾಮನೇ ! ನೀನಿಲ್ಲದಿದ್ದರೆ ನಾನು ಭೂಲೋಕದಲ್ಲಿ ಯಾಗಲಿ ಕೊನೆಗೆ ಸ್ವರ್ಗಲೋಕದಲ್ಲಿಯೇ ಆಗಲಿ ರಾಜ್ಯವನ್ನು ಅಪೇಕ್ಷಿಸುವುದಿಲ್ಲ. ನಿನ್ನ ಪಾದದ ಆಣೆಯಾಗಿ ಸತ್ಯವಾಗಿ ಹೇಳುತ್ತೇನೆ.

ಅಮುಂ ಯೋಗ್ಯಂ ವರಂ ರಾಜನ್ ಅಭಿಷಿಂಚಸ್ವ ರಾಘವ ।
ಅಯೋಧ್ಯಾಯಾಂ ಕುಶಂ ವೀರಂ ಸಪ್ತದ್ವೀಪಪತೇಃ ಪದೇ ॥ ೧೬ ॥

ಅಸ್ತ್ಯುತ್ತರಕುರುಷ್ವತ್ರ ಜಂಬೂದ್ವೀಪಪತೇಃ ಪದೇ ।
ಲವೋಽಭಿಷೇಚಿತಃ ಪೂರ್ವಂ ಸ ಏವ ತೇಷು ಗಚ್ಛತು ॥ ೧೭ ॥

ಭರತೇನೋದಿತಂ ಶ್ರುತ್ವಾ ಪತಿತಾಸ್ತಾಸ್ಸಮೀಕ್ಷ್ಯ ಚ ।
ಪ್ರಜಾ ವೈ ಭಯಸಂವಿಗ್ನಾ ರಾಮವಿಶ್ಲೇಷಕಾತರಾಃ ॥ ೧೮ ॥

ವಸಿಷ್ಠೋ ಭಗವಾನ್ ರಾಮಮುವಾಚ ಸದಯಂ ವಚಃ ।
ಪಶ್ಯತಾಮಾದರಾತ್ಸರ್ವಾಃ ಪತಿತಾ ಭೂತಲೇ ಪ್ರಜಾಃ ॥ ೧೯ ॥

ತಾಸಾಂ ಭಾವಾನುಗಂ ರಾಮ ಪ್ರಸಾದಂ ಕರ್ತುಮರ್ಹಸಿ ।
ಶ್ರುತ್ವಾ ವಸಿಷ್ಠವಚನಂ ತಾಸ್ಸಮುತ್ಥಾಪ್ಯ ಪೂಜ್ಯ ಚ ॥ ೨೦ ॥

---

೧೬. ಎಲೈ ವೀರನೇ! ವೀರನಾದ ಕುಶನನ್ನು ಅಯೋಧ್ಯೆಯಲ್ಲಿ ಸಪ್ತದ್ವೀಪಪತಿಯ ಸ್ಥಾನದಲ್ಲಿ ಅಭಿಷೇಕಮಾಡು. ಅದಕ್ಕೆ ಇವನೇ ಯೋಗ್ಯನು. ನನಗೆ ಬೇಡ.

೧೭. ಉತ್ತರ ಕುರು ದೇಶದಲ್ಲಿ ಸಪ್ತದ್ವೀಪತಿಯಾಗಿ ಲವನಿರುವನು. ಅವನಿಗೆ ಅಭಿಷೇಕವನ್ನು ಆಗಲೇ ಮಾಡಿದ್ದೀಯೆ. ಅವನು ಹಾಗೆಯೇ ಇರಲಿ.

೧೮-೧೯. ಭರತನು ಹೇಳಿದುದನ್ನು ಕೇಳಿ ಪ್ರಜೆಗಳು ರಾಮನ ಅಗಲು ವಿಕೆಯಿಂದ ದುಃಖಗೊಂಡಿರುವುದನ್ನು ನೋಡಿ ಪೂಜ್ಯನಾದ ವಸಿಷ್ಠನು ದಯೆಗೊಂಡವನಾಗಿ ರಾಮನನ್ನು ಕುರಿತು ಇಂತೆಂದನು. ಎಲೈ ರಾಮನೇ! ನಿನ್ನ ಆಗಲಿಕೆಯ ದುಃಖದಿಂದ ಮೂರ್ಛೆಗೊಂಡು ನೆಲದಮೇಲೆ ಬಿದ್ದಿರುವ ಈ ಪ್ರಜೆಗಳನ್ನು ನೋಡು.

೨೦. ಎಲೈ ರಾಮನೇ! ನೀನು ಅವರ ಅಭಿಪ್ರಾಯದಂತೆ ಅನುಗ್ರಹವನ್ನು ದಯವಿಟ್ಟು ಮಾಡಬೇಕು. ಎಂದೆನಲು ರಾಮನು ಆ ಪ್ರಜೆಗಳನ್ನು ಎಬ್ಬಿಸಿ ಅವರನ್ನು ಗೌರವಿಸಿದನು

ಸಸ್ನೇಹೋ ರಘುನಾಥಸ್ತಾಃ ಕಿಂಕರೋಮೀತಿ ಚಾಬ್ರವೀತ್ ।
ತತಃ ಪ್ರಾಂಜಲಯಃ ಪ್ರೋಚುಃ ಪ್ರಜಾ ಭಕ್ತ್ಯಾ ರಘೂದ್ವಹಂ ॥ ೨೧ ॥

ಗಂತುಮಿಚ್ಛಸಿ ವೈಕುಂಠಂ ತ್ವಮಸ್ಮಾಕಂ ನಯ ಪ್ರಭೋ ।
ಯತ್ರ ಗಚ್ಛಸಿ ತ್ವಂ ರಾಮ ಹ್ಯನುಗಚ್ಛಾಮಹೇ ವಯಂ ॥ ೨೨ ॥

ಅಸ್ಮಾಕಮೇಷಾ ಪರಮಾ ಪ್ರಾಪ್ತಿರ್ಧರ್ಮೋಽಯಮಕ್ಷಯಃ ।
ತವಾನುಗಮನೇ ರಾಮ ಹೃದ್ಗತಾ ನೋ ದೃಢಾ ಮತಿಃ ॥ ೨೩ ॥

ಪುತ್ರದಾರಾಭಿಸ್ಸಾರ್ಧಮನುಯಾಮೋದ್ಯ ಸರ್ವಥಾ ।
ತಪೋವನಂ ವಾ ಸ್ವರ್ಗಂ ವಾ ಪುರಂ ವಾ ರಘುನಂದನ ॥ ೨೪ ॥

---

೨೧. ಸ್ನೇಹದಿಂದ ಕೂಡಿದವನಾಗಿ ರಾಮನು ನಾನು ಈಗ ಏನುಮಾಡ ಬೇಕೆಂದು ಹೇಳುವಿ ಎಂದು ಕೇಳಿದನು. ಆಗ ಪ್ರಜೆಗಳು ಕೈಮುಗಿದುಕೊಂಡು ಭಕ್ತಿಯಿಂದ ಇಂತೆಂದರು.

೨೨. ಎಲೈ ರಾಮನೇ! ನೀನು ವೈಕುಂಠಕ್ಕೆ ಹೋಗುತ್ತೀಯಷ್ಟೆ! ನಾವೂ ನಿನ್ನ ಜೊತೆಯಲ್ಲಿ ಬರಬೇಕೆಂದು ಇಚ್ಛಿಸುತ್ತೇವೆ. ನಮ್ಮನ್ನೂ ನಿನ್ನ ಜೊತೆಯಲ್ಲಿ ಕರೆದುಕೊಂಡು ಹೋಗು.

೨೩. ನಿನ್ನನ್ನು ಅನುಸರಿಸುವುದೇ ಒಳ್ಳೆಯ ಗತಿಯೂ ನಾಶರಹಿತವಾದ ಧರ್ಮವೂ ಆಗಿರುವುದು. ಎಲೈ ರಾಮನೇ! ನಿನ್ನನ್ನು ಅನುಸರಿಸಿ ಹೋಗ ಬೇಕೆಂಬುದೇ ನಮ್ಮ ಮನಸ್ಸಿನ ದೃಢವಾದ ಇಚ್ಛೆಯಾಗಿರುವುದು.

೨೪. ನಾವೆಲ್ಲರೂ ನಮ್ಮ ಹೆಂಡಿರು ಮಕ್ಕಳೊಡನೆಯೂ ಪರಿವಾರ ದೊಡನೆಯೂ ಖಂಡಿತವಾಗಿಯೂ ನಿನ್ನನ್ನೇ ಅನುಸರಿಸಿ ಬರುತ್ತೇವೆ. ನೀನು ತಪೋವನಕ್ಕೆ ಬೇಕಾದರೂ ಹೋಗು. ವನಕ್ಕೆ ಬೇಕಾದರೂ ಹೋಗು. ಪಟ್ಟಣಕ್ಕೆ ಬೇಕಾದರೂ ಹೋಗು. ಸ್ವರ್ಗಕ್ಕೆ ಬೇಕಾದರೂ ಹೋಗು. ಅಲ್ಲಿಗೆ ನಾವೂ ಖಂಡಿತವಾಗಿಯೂ ಬರುತ್ತೇವೆ.

ಜ್ಞಾತ್ವಾ ತೇಷಾಂ ಮನೋದಾರ್ಢ್ಯಂ ಕಾರುಣ್ಯಾದ್ರಘುನಾಯಕಃ ।
ಭಕ್ತಂ ಪೌರಜನಂ ದೀನಂ ಬಾಢಮಿತ್ಯಬ್ರವೀದ್ವಚಃ ॥ ೨೫ ॥

ಕೃತ್ವೈವಂ ನಿಶ್ಚಯಂ ರಾಮಸ್ತಸ್ಮಿನ್ನೇವಾಹನಿ ಪ್ರಭುಃ ।
ಕುಶಂ ತಮಭಿಷೇಕ್ತುಂ ವೈ ಚೋದಯಾಮಾಸ ಲಕ್ಷ್ಮಣಂ ॥ ೨೬ ॥

ಸೌಮಿತ್ರಿಶ್ಚಾಪಿ ಗುರುಣಾ ವಿಪ್ರೈಃ ಪೌರಜನೈಸ್ತದಾ ।
ಶೋಭಯಿತ್ವಾ ಸ್ವನಗರೀಂ ಮುದಾ ತಮಭ್ಯಷೇಚಯತ್ ॥ ೨೭ ॥

ಅಭಿಷೇಕೇ ಕುಶಸ್ಯಾಸೀನ್ಮಹೋತ್ಸಾಹೋ ಗೃಹೇ ಗೃಹೇ ।
ರಾಮಾವರೋಧೇ ಸುಮಹಾನ್ ಸಮುತ್ಸಾಹಸ್ತದಾ ಭವತ್ ॥ ೨೮ ॥

---

೨೫ ಶ್ರೀರಾಮನು ಆ ಪ್ರಜೆಗಳ ಮನೋಧಾರ್ಢ್ಯವನ್ನು ನೋಡಿ ತಿಳಿದನು. ಆಗ ದಯೆಯಿಂದ ಭಕ್ತರಾಗಿಯೂ ದೀನರಾಗಿಯೂ ಇರುವ ಆ ಪೌರಜನರನ್ನು ನೋಡಿ ಹಾಗೆಯೇ ಆಗಲೆಂದು ಹೇಳಿದನು.

೨೬. ರಾಮನು ತಾನು ವೈಕುಂಠಕ್ಕೆ ಹೋಗಬೇಕೆಂದೂ ಪ್ರಜೆಗಳನ್ನು ತನ್ನೊಡನೆಯೇ ಕರೆದುಕೊಂಡು ಹೋಗಬೇಕೆಂದೂ ನಿಶ್ಚಯಿಸಿ ಆ ದಿನ ಹಗಲಿನಲ್ಲಿಯೇ ಆ ಅಯೋಧ್ಯೆಯಲ್ಲಿ ಕುಶನಿಗೆ ಪಟ್ಟಾಭಿಷೇಕಮಾಡಲು ಎಲ್ಲವನ್ನೂ ಸಿದ್ಧಪಡಿಸುವಂತೆ ಲಕ್ಷ್ಮಣನಿಗೆ ಹೇಳಿದನು.

೨೭ ಸೌಮಿತ್ರಿಯು ಒಡನೆಯೇ ಎಲ್ಲವನ್ನೂ ಸಿದ್ಧಪಡಿಸಿಕೊಂಡು ಪಟ್ಟಣವೆಲ್ಲವನ್ನೂ ಅಲಂಕಾರಮಾಡಿಸಿ ಗುರುವಿನಿಂದಲೂ ವಿಪ್ರರಿಂದಲೂ ಪೌರರಿಂದಲೂ ಕೂಡಿಕೊಂಡು ಸಂತೋಷದಿಂದ ಆ ಕುಶನಿಗೆ ಪಟ್ಟಾಭಿಷೇಕವನ್ನು ಮಾಡಿದನು.

೨೮. ಕುಶನಿಗೆ ಅಭಿಷೇಕಮಾಡುವುದನ್ನು ನೋಡಿ ಆ ಪಟ್ಟಣಿಗರು ಮನೆಮನೆಯಲ್ಲಿಯೂ ಸಂತೋಷದಿಂದ ಉತ್ಸವವನ್ನು ಆಚರಿಸಿದರು. ರಾಮನ ಅಂತಃಪುರದಲ್ಲಿ ಬಹುವಾದ ವಿಜೃಂಭಣೆಯು ನಡೆಯಿತು.

ತದಾ ಸಿಂಹಾಸನಾರೂಢಂ ಛತ್ರಚಾಮರಶೋಭಿತಂ ।
ಪ್ರಜಾಸ್ಸರ್ವಾಃ ಕುಶಪತಿಂ ಪ್ರಣಾಮಂ ಚಕ್ರುರಾದತಾತ್ ॥ ೨೯ ॥

ತದಾ ಕುಶೋ ನೃಪೋ ವಿಪ್ರೇ ಧನಂ ಬಹುತರಂ ದದೌ ।
ಪ್ರಜಾಸ್ತಂ ಪೂಜಯಾಮಾಸುರ್ವಸ್ತ್ರಾಲಂಕಾರವಾಹನೈಃ ॥ ೩೦ ॥

ತತಃ ಪ್ರಪೂಜಯತ್ಸರ್ವಾಃ ಪ್ರಜಾಸ್ಸ ಕುಶಭೂಪತಿಃ ।
ಭೋಜಯಾಮಾಸ ವಿಪ್ರೌಘಾನ್ ಕೋಟಿಶಸ್ಸಕುಶೇಶ್ವರಃ ॥ ೩೧ ॥

ಅಥ ರಾಮಾಜ್ಞಯಾ ಶೀಘ್ರಂ ಸೌಮಿತ್ರಿಸ್ಸೀತಯಾ ಸಹ ।
ಅಂತಃಪುರಾಣಿ ಸರ್ವಾಣಿ ನಿನಾಯ ನಗರಾದ್ಬಹಿಃ ॥ ೩೨ ॥

ನಾನಾವಾಹನಸಂಸ್ಥಾನಿ ನೃತ್ಯವಾದ್ಯಾದಿಮಂಗಳೈಃ ।
ತತೋ ರಾಮಸ್ಸ್ವಯಂ ಬಂಧುಪುತ್ರಾದ್ಯೈಸ್ಸರ್ವತೋ ತತಃ ॥ ೩೩ ॥

---

೨೯. ಕುಶನಿಗೆ ಅಭಿಷೇಕವಾಗಲು ಸಿಂಹಾಸನದಲ್ಲಿ ಮಂಡಿಸಿರುವ ಛತ್ರಚಾಮರಗಳಿಂದ ಶೋಭಿತನಾದ ಆ ಕುಶನನ್ನು ಎಲ್ಲಾ ಪ್ರಜೆಗಳೂ ಬಹು ಸಂತೋಷದಿಂದ ನಮಸ್ಕರಿಸಿದರು.

೩೦. ಆಗ ಕುಶನು ರಾಜನಾಗಿ ವಿಪ್ರರಿಗೆ ಬಹುವಾಗಿ ಧನವನ್ನು ಕೊಟ್ಟನು ಪ್ರಜೆಗಳೆಲ್ಲರೂ ವಸ್ತ್ರ ಅಲಂಕಾರ ವಾಹನಗಳನ್ನು ಕೊಟ್ಟು ಗೌರವಿಸಿದರು.

೩೧. ಆಮೇಲೆ ಆ ಕುಶನೂ ಕೂಡ ಆ ಪ್ರಜೆಗಳೆಲ್ಲರಿಗೂ ಬಹುಮಾನ ಗಳನ್ನು ಕೊಟ್ಟನು. ಕೋಟಿಸಂಖ್ಯೆಯಂತೆ ಬ್ರಾಹ್ಮಣರಿಗೆ ಭೋಜನಮಾಡಿಸಿದನು.

೩೨. ಅನಂತರ ಲಕ್ಷ್ಮಣನು ರಾಮನ ಅಪ್ಪಣೆಯಂತೆ ಬೇಗನೆ ಸೀತೆ ಯೊಡನೆ ಅಂತಃಪುರದ ಜನರೆಲ್ಲರನ್ನೂ ಪಟ್ಟಣದಿಂದ ಹೊರಗೆ ಕರೆದುಕೊಂಡು ಬಂದನು.

೩೩. ಅವರೆಲ್ಲರೂ ಬಗೆ ಬಗೆಯಾದ ವಾಹನಗಳಮೇಲೆ ಕುಳಿತಿದ್ದರು. ಅವರೆದುರಿಗೆ ನರ್ತಕಿಯರು ನರ್ತನವನ್ನು ಮಾಡುತ್ತಿದ್ದರು. ವಾದ್ಯಕಾರರು ವಾದ್ಯವನ್ನು ಊದುತ್ತಿದ್ದರು. ಅನಂತರ ರಾಮನ ಸುತ್ತಲೂ ತಮ್ಮಂದಿರೂ ಹೆಂಡತಿ ಮಕ್ಕಳೂ ಎಲ್ಲರೂ ಬಂದು ಸೇರಿದರು. ರಾಮನೂ ಅವರೊಡನೆ ಸೇರಿಕೊಂಡನು

ಮುನಿಭಿರ್ಜಯಶಬ್ದೈಶ್ಚ ಸ್ತುತೋ ಮಂಗಳನಿಸ್ಸ್ವನೈಃ ।
ಅಯೋಧ್ಯಾಯಾ ಬಹಿಃ ಪೌರೈರ್ಯಯೌ ಮಾಗಧಸಂಸ್ತುತಃ ॥ ೩೪ ॥

ರಥಾರೂಢಶ್ಚಾಮರಾದ್ಯೈರ್ವೀಜಿತಶ್ಚ ಶನೈರ್ಮುದಾ ।
ವಿವೇಶ ವಾಸೋಗೇಹಾನಿ ತದಾ ರಾಮೋ ಜನೈಸ್ಸಹ ॥ ೩೫ ॥

ನನೃತುರ್ವಾರನಾರ್ಯಶ್ಚ ತದಾ ಶ್ರೀರಾಘವಾಗ್ರತಃ ।
ತತಃ ಪೌರಾ ಸಾವರೋಧಾಶ್ಚಂಡಾಲಾಂತಾ ವಿನಿರ್ಯಯುಃ ॥ ೩೬ ॥

ನಿನ್ಯುಸ್ತೇ ಸಾರಮೇಯಾಂತಾನ್ ಪುರ್ಯಾಃ ಪೌರಾಶ್ಚತುಷ್ಪದಾನ್ ।
ನಾಸನ್ ಪಕ್ಷಿಕುಲಾಟಾದ್ಯಾಸ್ತತ್ಪುರ್ಯಾಂ ತೇ ಬಹಿರ್ಯಯುಃ ॥ ೩೭ ॥

---

೩೪. ಒಡನೆಯೇ ರಾಮನು ಅವರೊಡನೆ ಪ್ರಯಾಣವನ್ನು ಬೆಳೆಸಿದನು. ಆಗ ಮುನಿಗಳು ಜಯ ಜಯ ಎಂದು ಶಬ್ದವನ್ನು ಮಾಡುತ್ತಿದ್ದರು ವಾದ್ಯಕಾರರು ಮಂಗಳವಾದ್ಯವನ್ನು ಬಾಜಿಸುತ್ತಿದ್ದರು. ಹೊಗಳುಭಟರು ಹೊಗಳುತ್ತಿದ್ದರು.

೩೫. ಶ್ರೀರಾಮನು ರಥದಮೇಲೆ ಕುಳಿತು ಛತ್ರವನ್ನು ಹಿಡಿಸಿಕೊಂಡು ಚಾಮರಗಳಿಂದ ಬೀಸಿಸಿಕೊಳ್ಳುತ್ತ ಹೊರಗಡೆಯಲ್ಲಿ ಶಿಬಿರವನ್ನು ನಿಲ್ಲಿಸಿ ಅಲ್ಲಿ ಹಾಕಿದ್ದ ಡೇರೆಯೊಳಕ್ಕೆ ತನ್ನ ಜನರೊಡನೆ ಹೋಗಿ ಸೇರಿದನು.

೩೬. ಆಗ ಶ್ರೀರಾಮನೆದುರಿಗೆ ನರ್ತಕಿಯರು ಕುಣಿಯುತ್ತಿದ್ದರು. ಅವನ ಜೊತೆಯಲ್ಲಿ ಪೌರಜನರು ಉತ್ತಮರಿಂದ ಮೊದಲುಗೊಂಡು ನೀಚರುಗಳು ಕಡೆಯಾಗಿ ಎಲ್ಲರೂ ಅವನ ಜೊತೆಯಲ್ಲಿಯೇ ಹೊರಟರು.

೩೭. ಅವರೆಲ್ಲರೂ ಕೂಡ ತಮ್ಮ ತಮ್ಮ ಪ್ರಾಣಿಗಳನ್ನು ಗೋವಿನಿಂದ ಮೊದಲುಗೊಂಡು ನಾಯಿಯವರೆಗೂ ಕರೆದುಕೊಂಡು ಬಂದರು ಪಕ್ಷಿಗಳೂ ಕೂಡ ಆ ಪಟ್ಟಣದೊಳಗಿರದೆ ರಾಮನ ಜೊತೆಯಲ್ಲಿಯೇ ಹೊರಟು ಬಂದುವು.

ನಾಸೀತ್ಕೋಽಪಿ ತದಾ ಪುರ್ಯಾಂ ಜನಶೂನ್ಯಾ ಬಭೂವ ಸಾ ।
ಅಯೋಧ್ಯಾ ನಗರೀ ಪುಣ್ಯಾ ಗಜಭುಕ್ತಕಪಿತ್ಥವತ್ ॥ ೩೮ ॥

ಏತಸ್ಮಿನ್ನಂತರೇ ಸರ್ವೇ ದ್ವೀಪಾಂತರನಿವಾಸಿನಃ ।
ಜಬೂದ್ವೀಪಾಂತರಸ್ಥಾಶ್ಚ ಯಯುಸ್ಸೈನ್ಯೈರ್ನೃಪೋತ್ತಮಾಃ ॥ ೩೯ ॥

ಕೋಟಿಶೋ ರಾಘವಂ ನೇಮುಸ್ತತೋ ನೇಮುಃ ಕುಶೇಶ್ವರಃ ।
ಉಪಾಯನಾನಿ ರಾಮಾಯ ಕುಶಾಯ ಚ ಪೃಥಕ್ ಪೃಥಕ್ ॥ ೪೦ ॥

ದತ್ವಾ ಸಂಪೂಜಿತಾಸ್ತಾಭ್ಯಾಂ ತಸ್ಥುಸ್ಸರ್ವೇ ನೃಪೋತ್ತಮಾಃ ।
ತತೋಂಗದಶ್ಚಿತ್ರಕೇತುಃ ಪುಷ್ಕರಸ್ತಕ್ಷ ಏವ ಚ ॥ ೪೧ ॥

ಸುಬಾಹುರ್ಯೂಪಕೇತುಶ್ಚ ಯಯುಸ್ಸರ್ವೇ ನಿಜೈರ್ಬಲೈಃ ।
ಸಾವರೋಧಾಸ್ಸಪುತ್ರಾಶ್ಚ ಸಪೌತ್ರಾಸ್ತೇ ಸ್ನುಷಾದಿಭಿಃ ॥ ೪೨ ॥

---

೩೮. ಅಯೋಧ್ಯಾಪಟ್ಟಣದೊಳಗೆ ಒಂದು ಪ್ರಾಣಿಯೂ ನಿಲ್ಲಲೇ ಇಲ್ಲ. ಪಟ್ಟಣವೆಲ್ಲವೂ ಶೂನ್ಯವಾಗಿದ್ದಿತು. ಇದನ್ನು ನೋಡಿದರೆ ಆ ಅಯೋಧ್ಯೆಯು ಆನೆಯು ತಿಂದು ಅದರ ಲದ್ದಿಯಲ್ಲಿಬಿದ್ದ ಬೇಲದಹಣ್ಣಿನಂತೆ ಒಳಗೆ ಏನೂ ಇಲ್ಲದಿದ್ದಿತು.

೩೯-೪೦. ಇಷ್ಟರವೇಳೆಗೆ ಆಯಾ ದ್ವೀಪದಲ್ಲಿದ್ದವರೂ ಜಂಪೂದ್ವೀಪದಲ್ಲಿದ್ದವರೂ ಎಲ್ಲರೂ ಸೈನ್ಯದೊಡನೆ ಬಂದು ಸೇರಿದರು. ಅವರೆಲ್ಲರೂ ಕೋಟಿಗಟ್ಟಲೆಯಲ್ಲಿ ಬಂದು ಮೊದಲು ರಾಮನಿಗೆ ನಮಸ್ಕರಿಸಿ ಅನಂತರ ಕುಶೇಶ್ವರನಿಗೆ ನಮಸ್ಕರಿಸಿದರು. ಕಪ್ಪಕಾಣಿಕೆಗಳನ್ನು ರಾಮನಿಗೂ ಕುಶನಿಗೂ ಬೇರೆ ಬೇರೆಯಾಗಿ ಕೊಟ್ಟರು.

೪೧-೪೨. ಆ ರಾಜರೆಲ್ಲರೂ ಕಪ್ಪಕಾಣಿಕೆಗಳನ್ನು ಶ್ರೀರಾಮ ಕುಶರಿಗೆ ಕೊಟ್ಟು ಅವರಿಂದ ಗೌರವಿತರಾಗಿ ಅವರೊಡನೆಯೇ ಇದ್ದುಬಿಟ್ಟರು. ಅನಂತರ ಚಿತ್ರಕೇತು, ಪುಷ್ಕರ, ತಕ್ಷ, ಸುಬಾಹು, ಯೂಪಕೇತು, ಇವರೆಲ್ಲರೂ ತವ್ಮ ತಮ್ಮ ಸೈನ್ಯದೊಡನೆ ರಾಮನ ಬಳಿಗೆ ಬಂದರು. ಅಲ್ಲದೆ ತಾವು ಬರುವಾಗ, ಹೆಂಡತಿಯರು, ಮಕ್ಕಳು, ಮುಮ್ಮಕ್ಕಳು, ಸೊಸೆಯರು ಎಲ್ಲರನ್ನೂ ಕರೆದುಕೊಂಡು ಬಂದರು.

ಪ್ರಣೇಮೂ ರಾಘವಾದೀಂಶ್ಚ ಸೀತಾದೀಂಶ್ಚಾಪಿ ಸಾದರಾತ್ ।
ರಾಮೇಣಾಲಿಂಗಿತಾಸ್ಸರ್ವೇ ತಯಾ ತೇ ಭೋಜಿತಾ ಅಪಿ ॥ ೪೩ ॥

ತಸ್ಥುಸ್ಸರ್ವೇ ಸಭಾಯಾಂ ತೇ ಸ್ವಸ್ವಪೌರಜನೈಸ್ಸಹ ।
ತದಾಗತಾನ್ ನೃಪಾನ್ ಸರ್ವಾನ್ ರಾಮೋ ವೃತ್ತಂ ನ್ಯವೇದಯತ್ ॥ ೪೪ ॥

ಪುನಃ ಪಪ್ರಚ್ಛ ತಾನ್ ಸರ್ವಾನ್ ಸಂಸ್ಥಿತಾನ್ ರಘುನಂದನಃ ।
ಯುಷ್ಮಾಕಂ ಪೂರ್ವಜಾಸ್ಸರ್ವೇ ಸಮಾಯಾತಾ ಗಜಾಹ್ವಯೇ ॥ ೪೫ ॥

ಭವತಾಂ ರೋಚತೇ ಯುದ್ಧಂ ಯದಿ ತೈಃ ಪೂರ್ವಜೈಸ್ಸಹ ।
ಆಗಂತವ್ಯಂ ತರ್ಹಿ ಸರ್ವೈರ್ಮಯಾ ಸಹ ಗಜಾಹ್ವಯಂ ॥ ೪೬ ॥

---

೪೩. ಅವರೆಲ್ಲರೂ ರಾಮನೇ ಮುಂತಾದವರಿಗೆ ನಮಸ್ಕರಿಸಿ ಅಂತೆಯೇ ಸೀತೆ ಮುಂತಾದ ಹೆಂಗಸರಿಗೂ ನಮಸ್ಕರಿಸಿದರು. ರಾಮನು ಅವರ ನಮಸ್ಕಾರವನ್ನು ಸ್ವೀಕರಿಸಿ ಅವರನ್ನು ಆಲಿಂಗಿಸಿಕೊಂಡನು. ಸೀತೆಯು ಅವರ ನಮಸ್ಕಾರಗಳನ್ನು ಸ್ವೀಕರಿಸಿ ಅವರಿಗೆ ಭೋಜನಮಾಡಿಸಿದಳು.

೪೪. ಅನಂತರ ಅವರೆಲ್ಲರೂ ತಮ್ಮ ತಮ್ಮ ಪಟ್ಟಣಿಗರೊಡನೆ ಸಭೆಯಲ್ಲಿ ಕುಳಿತುಕೊಂಡರು. ಆಗ ಅಲ್ಲಿಗೆ ಬಂದ ರಾಜರೆಲ್ಲರನ್ನೂ ಉದ್ದೇಶಿಸಿ ರಾಮನು ಆಗಿನ ಸಂದರ್ಭದ ವಿಷಯಗಳನ್ನು ತಿಳಿಸಿದನು.

೪೫. ಅನಂತರ ಆ ರಾಮನು ಸಭೆಯಲ್ಲಿ ಕುಳಿತಿರುವ ಆ ರಾಜರನ್ನು ಕುರಿತು ಎಲೈ ರಾಜರಿರಾ ! ನಿಮ್ಮ ಪೂರ್ವೀಕರು ಆ ಹಸ್ತಿನಾಪಟ್ಟಣಕ್ಕೆ ಈಗ ಬಂದಿರುವರು. ಅವರೊಡನೆ ಯುದ್ಧಮಾಡಬೇಕು.

೪೬. ನಿಮಗೆ ಆ ಪೂರ್ವೀಕರೊಡನೆ ಯುದ್ಧಮಾಡಲು ಇಷ್ಟವಿದೆಯೇ ! ಹಾಗೆ ಯುದ್ಧಮಾಡಲು ಇಷ್ಟವಿದ್ದರೆ ನನ್ನೊಡನೆ ಹಸ್ತಿನಾಪಟ್ಟಣಕ್ಕೆ ಬನ್ನಿರಿ.

ನೋಚೇದ್ಭವದ್ಭಿರ್ಗಂತವ್ಯಂ ಇತ ಏವ ನಿಜಸ್ಥಲಂ ।
ನಿರ್ಬಂಧೋತ್ರ ನ ಮೇ ಜ್ಞೇಯಸ್ಸರ್ವೈಃ ಪಾರ್ಥಿವಸತ್ತಮೈಃ ॥ ೪೭ ॥

ಇತಿ ರಾಮವಚಃ ಶ್ರುತ್ವಾ ನೃಪಾ ರಾಘವಮಬ್ರುವನ್ ।
ರಾಮ ರಾಮ ಮಹಾವೀರ್ಯ ವಯಂ ಸರ್ವೇ ತವಾನುಗಾಃ ॥ ೪೮ ॥

ತ್ವಯೈವ ವರ್ಧಿತಾಸ್ಸರ್ವೇ ತವಾನ್ನೈಃ ಪೋಷಿತಾ ವಯಂ ।
ವೀರಾ ಕ್ಷತ್ರಿಯವಂಶೀಯಾ ರಣೇ ತಾತ ಪ್ರಹಾರಿಣಃ ॥ ೪೯ ॥

ತವಾಜ್ಞಯಾ ವಧಾಮೋಧ್ಯ ಪಿತೃಪುತ್ರಾನ್ ರಣಾಜಿರೇ ।
ನಾಸ್ಮಾಂಸ್ತ್ವಂ ವಿದ್ಧಿ ರಾಜೇಂದ್ರ ಸ್ವಾಮಿಕಾರ್ಯೇ ಪರಾಙ್ಮುಖಾನ್ ॥ ೫೦ ॥

---

೪೭. ಇಷ್ಟವಿಲ್ಲದಿದ್ದರೆ ನೀವುಗಳು ಇಲ್ಲಿಂದಲೇ ನಿಮ್ಮ ನಿಮ್ಮ ಪಟ್ಟಣಗಳಿಗೆ ಹೋಗಬಹುದು. ಇದರ ವಿಷಯದಲ್ಲಿ ನಾನು ನಿರ್ಬಂಧಪಡಿಸುವೆನೆಂದು ತಿಳಿಯಬೇಡಿರಿ. ನೀವೆಲ್ಲರೂ ಇದನ್ನು ಯೋಚಿಸಿ.

೪೮–೪೯. ರಾಮನು ಇಂತು ಹೇಳಿದುದನ್ನು ಆ ರಾಜರು ಕೇಳಿ ಮಹಾ ಬಲಶಾಲಿಯಾದ ಎಲೈ ರಾಮನೇ! ನಾವೆಲ್ಲರೂ ನಿನ್ನನ್ನು ಅನುಸರಿಸಿ ಇರುತ್ತಿರುವವರೇ ಹೊರತು ಬೇರೆಯಲ್ಲ. ನಿನ್ನಿಂದಲೇ ನಾವು ಮುಂದಕ್ಕೆ ಬಂದಿರುವೆವು. ನಿನ್ನ ಅನ್ನವನ್ನೇ ತಿಂದು ಬೆಳೆದವರು. ನಾವೆಲ್ಲರೂ ವೀರರು. ಕ್ಷತ್ರಿಯಕುಲದಲ್ಲಿ ಹುಟ್ಟಿದ್ದೇವೆ. ರಣದಲ್ಲಿ ಪರಾಕ್ರಮವನ್ನು ತೋರಿಸಿ ಯುದ್ಧಮಾಡತಕ್ಕವರು.

೫೦. ನಿನ್ನ ಅಪ್ಪಣೆಯಂತೆ ನಾವು ನಡೆದುಕೊಳ್ಳುತ್ತಾ ಯುದ್ಧರಂಗದಲ್ಲಿ ತಂದೆಯೆಂದಾಗಲಿ, ಮಗನೆಂದಾಗಲಿ, ನೋಡದೆ ಯುದ್ಧಮಾಡಿಕೊಳ್ಳುತ್ತೇವೆ. ಎಲೈ ರಾಜೇಂದ್ರನೇ! ನಾವು ಸ್ವಾಮಿಕಾರ್ಯದಲ್ಲಿ ಪರಾಙ್ಮುಖರೆಂದು ಎಂದಿಗೂ ತಿಳಿಯಬೇಡ.

ಇತಿ ತೇಷಾಂ ವಚಶ್ಶ್ರುತ್ವಾ ತಾನಾಲಿಂಗ್ಯ ಸ ರಾಘವಃ ।
ಸಂಪೂಜ್ಯಾಭರಣೈರ್ವಸ್ತ್ರೈಸ್ಸುಖಂ ಸುಷ್ವಾಪ ಸೀತಯಾ ॥ ೫೧ ॥

ತತಃ ಪ್ರಭಾತೇ ಶ್ರೀರಾಮೋ ಗತ್ವಾ ತಾಂ ಸರಯೂ ನದೀಂ ।
ಸ್ನಾತ್ವಾ ದಾನಾನಿ ವೈ ದತ್ವಾ ಸೀತಯಾ ವಿಧಿಪೂರ್ವಕಂ ॥ ೫೨ ॥

ನತ್ವಾ ತಾಂ ಶರಯೂಂ ಪುಣ್ಯಾಂ ಗಂತುಂ ಪಪ್ರಚ್ಛ ವೈ ಮುಹುಃ ।
ತದ್ರಾಮವಚನಂ ಶ್ರುತ್ವಾ ಶರಯೂ ರಾಮಮಬ್ರವೀತ್ ॥ ೫೩ ॥

ಏತಾವತ್ಕಾಲಪರ್ಯಂತಂ ಸ್ಥಿತಾ ತ್ವದ್ದರ್ಶನೇಚ್ಛಯಾ ।
ಅಹಮದ್ಯ ತ್ವಯಾ ರಾಮ ಯಾಸ್ಯಾಮಿ ತ್ವತ್ಪದಂ ತ್ವಿತಃ ॥ ೫೪ ॥

---

೫೧. ಆ ರಾಜರು ಹೀಗೆ ಹೇಳಿದುದನ್ನು ಕೇಳಿ ರಾಮನು ಅವರನ್ನು ಆಲಂಗಿಸಿಕೊಂಡು ಅವರಿಗೆ ಆಭರಣಗಳನ್ನೂ ವಸ್ತ್ರಗಳನ್ನೂ ಕೊಟ್ಟು ಗೌರವಿಸಿ ರಾತ್ರಿಯಲ್ಲಿ ಸೀತೆಯೊಡನೆ ಸುಖವಾಗಿ ಮಲಗಿದನು.

೫೨. ರಾಮನು ಬೆಳಗ್ಗೆ ಎದ್ದು ಸರಯೂ ನದಿಗೆ ಹೋಗಿ ಅಲ್ಲಿ ಸ್ನಾನವನ್ನು ಮಾಡಿಕೊಂಡು ಸೀತೆಯಿಂದ ಕೂಡಿಕೊಂಡು ಅನೇಕ ವಿಧವಾದ ದಾನಗಳನ್ನು ಮಾಡಿದನು.

೫೩. ಅನಂತರ ಆ ಪುಣ್ಯನದಿಯಾದ ಸರಯೂ ನದಿಯನ್ನು ನಮಸ್ಕರಿಸಿ ಹೋಗುತ್ತೇನೆಂದು ಆ ನದಿಯನ್ನು ಅನೇಕಬಾರಿ ಕೇಳಿದನು. ರಾಮನ ಆ ಮಾತನ್ನು ಕೇಳಿ ಸರಯೂನದಿಯು ಅವನನ್ನು ಕುರಿತು ಇಂತೆಂದಿತು.

೫೪. ಎಲೈ ರಾಮನೇ! ನಾನು ನಿನ್ನ ದರ್ಶನವನ್ನು ಮಾಡಬೇಕೆಂಬ ಇಚ್ಛೆಯಿಂದ ಇಷ್ಟು ದಿವಸಗಳವರೆಗೂ ಇಲ್ಲಿದ್ದೆನು. ಎಲೈ ರಾಮನೇ! ನಾನೂ ಇಲ್ಲಿಂದ ಹೊರಟು ನಿನ್ನ ಸ್ಥಳಕ್ಕೆ ಬರುತ್ತೇನೆ.

ತತ್ತಸ್ಯಾ ವಚನಂ ಶ್ರುತ್ವಾ ತಾಮಾಹ ರಾಘವಃ ಪುನಃ ।
ಯಾವತ್ಕಥಾ ಮಮ ಶುಭಾ ಸ್ಥಾಸ್ಯತ್ಯತ್ರಾಘನಾಶಿನೀ ॥ ೫೫ ॥

ತಾವತ್ತ್ವಂ ಮತ್ಸ್ವರೂಪಾತ್ರ ವಸ ಲೋಕಾಘನಾಶಿನೀ ।
ತಥೇತಿ ರಾಮವಚನಾದಂಶರೂಪಂ ನಿಧಾಯ ಸಾ ॥ ೫೬ ॥

ಸಾಕೇತೇತ್ರ ಪೂರ್ಣರೂಪಾ ಯಯೌ ರಾಮೇಣ ತತ್ಪದಂ ।
ಅಥ ರಾಮಶ್ಚರಯ್ವಾಸೌ ಪರಿಕ್ರಮ್ಯ ನಿಜಾಂ ಪುರೀಂ ॥ ೫೭ ॥

ಸಾಷ್ಟಾಂಗಂ ತಾಂ ನಮಸ್ಕೃತ್ಯ ಗಂತುಂ ಪಪ್ರಚ್ಛ ಪೂಜ್ಯ ತಾಂ ।
ಅಯೋಧ್ಯೇಂಬ ನಮಸ್ತೇಸ್ತು ತ್ವಯಾಹಂ ರಕ್ಷಿತಸ್ತ್ವಿಹ ॥ ೫೮ ॥

ಆಜ್ಞಾಂ ದದಸ್ವ ಪೃಚ್ಛಾಮಿ ಸ್ವಸ್ಥಲಂ ಗಂತುಮುದ್ಯತಃ ।
ಕ್ಷಮಸ್ವ ಮೇಪರಾಧಾಂಸ್ತ್ವಂ ಪುನರ್ದರ್ಶನಮಸ್ತು ತೇ ॥ ೫೯ ॥

---

೫೫. ರಾಮನು ಆ ಸರಯೂನದಿಯ ಮಾತನ್ನು ಕೇಳಿ ಅವಳನ್ನು ಕುರಿತು ಇಂತೆಂದನು. ಎಲೈ ನದಿಯೇ ಪಾಪನಾಶಕವಾದ ನನ್ನ ಕಥೆಯು ಭೂಲೋಕದಲ್ಲಿ ಎಲ್ಲಿಯವರೆಗೆ ಇರುವುದೋ ಅಲ್ಲಿಯವರೆಗೂ ನನ್ನ ಸ್ವರೂಪದಿಂದ ಇದ್ದುಕೊಂಡು ಈ ಲೋಕದಲ್ಲಿ ಜನಗಳ ಪಾಪಗಳನ್ನು ನಾಶಮಾಡುತ್ತಾ ಇರು.

೫೬. ರಾಮನ ಆ ಮಾತನ್ನು ಕೇಳಿ ಸರಯೂನದಿಯು ತನ್ನ ಅಂಶರೂಪವನ್ನು ಆ ಅಯೋಧ್ಯೆಯಲ್ಲಿಟ್ಟು ತನ್ನ ಪೂರ್ಣರೂಪದಿಂದ ಆ ಶ್ರೀರಾಮನ ಜೊತೆಯಲ್ಲಿಯೇ ಆ ವೈಕುಂಠಕ್ಕೆ ಹೊರಟು ಹೋಯಿತು

೫೭-೫೮. ಅನಂತರ ಶ್ರೀರಾಮನು ಸರಯೂನದಿಯನ್ನು ಜೊತೆಯಲ್ಲಿ ಕರೆದುಕೊಂಡು ತನ್ನ ರಾಜಧಾನಿಯಾದ ಆ ಅಯೋಧ್ಯೆಯನ್ನು ಪ್ರದಕ್ಷಿಣೆಮಾಡಿ ಪೂಜಿಸಿ ಸಾಷ್ಟಾಂಗವಾಗಿ ನಮಸ್ಕರಿಸಿ ಅಮ್ಮ! ತಾಯಿಯಾದ ಅಯೋಧ್ಯೆಯೇ! ನಿನಗೆ ನಮಸ್ಕಾರವು. ಇಲ್ಲಿ ನೀನು ನನ್ನನ್ನು ಇಷ್ಟುದಿನಗಳವರೆಗೆ ರಕ್ಷಿಸಿದೆ.

೫೯. ನಾನು ನನ್ನ ಸ್ಥಳಕ್ಕೆ ಹೋಗಲು ಸಿದ್ಧನಾಗಿದ್ದೇನೆ. ಅಪ್ಪಣೆಯನ್ನು ಕೊಡು. ನಾನು ಮಾಡಿರತಕ್ಕ ತಪ್ಪುಗಳೆಲ್ಲವನ್ನೂ ಕ್ಷಮಿಸು. ಮತ್ತೆ ನನಗೆ ನಿನ್ನ ದರ್ಶನವಾಗಲಿ

ಇತಿ ರಾಮವಚಶ್ಶ್ರುತ್ವಾ ಪುರೀ ರಾಘವಮಬ್ರವೀತ್ ।
ಏತಾವತ್ಕಾಲಪರ್ಯಂತಂ ಸ್ಥಿತಾ ತ್ವದ್ದರ್ಶನೇಚ್ಛಯಾ ॥ ೬೦ ॥

ಯಾಸ್ಯೇ ತ್ವಯಾ ಸಮಂ ರ್ಥಾ ನ ಸೋಢುಂ ತ್ವದ್ವಿರಹಂ ತ್ವಹಂ ।
ಸ ತಸ್ಯಾ ವಚನಂ ಶ್ರುತ್ವಾ ಪುರೀಮಾಹ ರಘೂತ್ತಮಃ ॥ ೬೧ ॥

ಯಾವತ್ಕಥಾ ಮಮ ಶುಭಾ ಸ್ಥಾಸ್ಯತ್ಯತ್ರಾಘನಾಶಿನೀ ।
ತಾವತ್ತ್ವಮಂಶರೂಪೇಣ ವಸಾತ್ರ ಮೃನ್ಮಯೀ ಚಿರಂ ॥ ೬೨ ॥

ತಥೇತಿ ರಾಮವಚನಾದಂಶರೂಪಾತ್ರ ಮೃನ್ಮಯೀ ।
ಅಯೋಧ್ಯಾ ಸಂಸ್ಥಿತಾ ದಿವ್ಯಾ ಹೈಮಾ ರಾಮೇಣ ಸಾ ಯಯೌ ॥ ೬೩ ॥

---

೬೦. ರಾಮನು ಇಂತು ಹೇಳಿದುದನ್ನು ಆ ಅಯೋಧ್ಯೆಯು ಕೇಳಿ ಅದು ರಾಮನನ್ನು ಕುರಿತು ಇಂತೆಂದು ಹೇಳಿತು. ಎಲೈ ಶ್ರೀರಾಮನೇ ! ನಾನು ನಿನ್ನ ದರ್ಶನದ ಇಚ್ಛೆಯಿಂದ ಇಷ್ಟುಕಾಲದವರೆಗೂ ಇಲ್ಲಿದ್ದೆನು.

೬೧. ಎಲೈ ರಾಮನೇ ! ನಿನ್ನ ವಿರಹವನ್ನು ಸಹಿಸಲಾರೆನು. ಆದ್ದರಿಂದಲೇ ನಿನ್ನ ಜೊತೆಯಲ್ಲಿ ನಾನು ಬಂದುಬಿಡುತ್ತೇನೆ. ಎನ್ನಲು ರಾಮನು ಆ ಪಟ್ಟಣದ ಮಾತನ್ನು ಕೇಳಿ ಇಂತೆಂದನು.

೬೨. ಎಲೈ ಪಟ್ಟಣವೇ ! ಪಾಪನಾಶಕವಾದ ನನ್ನ ಕಥೆಯು ಈ ಲೋಕದಲ್ಲಿ ಎಲ್ಲಿಯುವರೆಗೂ ಇರುವುದೋ ಅಲ್ಲಿಯುವರೆಗೂ ನೀನು ಮಣ್ಣಿನ ರೂಪಳಾಗಿ ಅಂಶರೂಪದಿಂದ ಈ ಜಾಗದಲ್ಲಿರು.

೬೩. ಇಂತೆನ್ನಲು ಆ ಪಟ್ಟಣವು ರಾಮನ ಈ ಮಾತನ್ನು ಕೇಳಿ ಹಾಗೆಯೇ ಆಗಲೆಂದು ಹೇಳಿ ತನ್ನ ಅಂಶರೂಪದಿಂದ ಮಣ್ಣಿನ ವಿಕಾರವಾಗಿ ಇಲ್ಲಿಯೇ ನಿಂತಿತು ಮತ್ತು ಚಿನ್ನದ ರೂಪಿನಿಂದಿದ್ದ ಆ ಅಯೋಧ್ಯೆಯು ಶ್ರೀರಾಮನ ಜೊತೆಯಲ್ಲಿಯೇ ಹೋಯಿತು.

ಅಯೋಧ್ಯಯಾ ಶರಯ್ವಾಪಿ ರಾಮಸ್ಸೇನಾಸ್ಥಲಂ ಯಯೌ।
ಅಯೋಧ್ಯಾಯಾಸ್ಸರಯ್ವಾಪಿ ಪ್ರಭಾವೌ ನ ಗತೌ ಕ್ಷಿತಿ ॥ ೬೪ ॥

ಅಥ ಸೀತಾ ಮಹಾನಾಗೀಮಾರುರೋಹ ಸಖೀಜನೈಃ।
ಪೃಥಗ್ನಾಗೀಷೂರ್ಮಿಳಾದ್ಯಾಸ್ತಾಸ್ಸಮಾರುರುಹುಸ್ತದಾ ॥ ೬೫ ॥

ಅಥ ರಾಮೋ ಮುದಾ ವೇಗಾತ್ಸಮಾರುಹ್ಯ ಗಜೋಪರಿ।
ಉವಾಚ ಲಕ್ಷ್ಮಣಂ ವಾಕ್ಯಂ ಪುಷ್ಪಕೇ ಸಕಲಾನ್ ಜನಾನ್ ॥ ೬೬ ॥

ಪೌರಾನಾರೋಹಯಸ್ವ ತ್ವಂ ಸ್ವಬಂಧುಭ್ಯಾಂ ಸುತಾದಿಭಿಃ।
ನಾಗಾರೂಢೈಃ ಪೃಥಕ್ ಶೀಘ್ರಂ ಸಮಾರುಹ್ಯ ಗಜೋಪರಿ ॥ ೬೭ ॥

ಅನುಗಚ್ಛಸ್ವ ಮತ್ಪೃಷ್ಠೇ ಲಕ್ಷ್ಮಣಸ್ಸ ತಥಾಕರೋತ್।
ಅಥ ಸರ್ವೇ ನೃಪತಯೋ ನಾನಾಯಾನೇಷು ಸಂಸ್ಥಿತಾನ್ ॥ ೬೮ ॥

---

೬೪. ರಾಮನು ಅಯೋಧ್ಯೆಯೊಡನೆಯೂ, ಸರಯೂನದಿಯೊಡನೆಯೂ, ಕೂಡಿಕೊಂಡು ಸೇನೆಯು ಪಾಳೆಯುವನ್ನು ಬಿಟ್ಟಿದ್ದ ಜಾಗಕ್ಕೆ ಹೋದನು. ಆದರೂ ಆ ಅಯೋಧ್ಯೆಯು ಮತ್ತು ಸರಯೂನದಿಯು ಪ್ರಭಾವವು ಇಲ್ಲಿಂದ ಹೋಗಲಿಲ್ಲ. ಅದು ಇದ್ದೇ ಇರುವುದು.

೬೫. ಇತ್ತ ಸೀತೆಯು ತನ್ನ ಸಖಿಯರೊಡನೆ ಬಂದು ದೊಡ್ಡ ಹೆಣ್ಣಾನೆಯ ಮೇಲೆ ಹತ್ತಿ ಕುಳಿತಳು. ಊರ್ಮಿಳೆಯೇ ಮುಂತಾದವರಾದ ಅಂತಃಪುರದ ಸ್ತ್ರೀಯರೂ ಬೇರೆ ಬೇರೆಯಾಗಿ ಒಂದೊಂದು ಹೆಣ್ಣಾನೆಗಳಮೇಲೆ ಕುಳಿತರು.

೬೬-೬೭. ರಾಮನೂ ಕೂಡ ಸಂತೋಷದಿಂದ ಆನೆಯನ್ನು ಹತ್ತಿ ಕುಳಿತನು. ಲಕ್ಷ್ಮಣನನ್ನು ಕರೆದು ಎಲೈ ಲಕ್ಷ್ಮಣನೇ, ಪಟ್ಟಣಿಗರೇ ಮುಂತಾದ ಎಲ್ಲಾ ಜನರನ್ನೂ ಪುಷ್ಪಕವಿಮಾನದಲ್ಲಿ ಕೂರಿಸು. ನೀನೂ ಕೂಡ ತಮ್ಮಂದಿರೊಡನೆಯೂ ಮಕ್ಕಳೊಡನೆಯೂ ಬೇರೆ ಬೇರೆಯಾಗಿ ಆನೆಗಳನ್ನು ಬೇಗನೆ ಹತ್ತಿಬನ್ನಿರಿ.

೬೮. ನಿಮ್ಮ ವಾಹನಗಳೆಲ್ಲವೂ ನನ್ನನ್ನೇ ಅನುಸರಿಸಿ ಬರಲಿ. ಎಂದೆನ್ನಲು ಲಕ್ಷ್ಮಣನು ಹಾಗೆಯೇ ಮಾಡಿದನು. ಇತ್ತ ಎಲ್ಲಾ ರಾಜರೂ ಬಗೆ ಬಗೆಯ ಯಾನಗಳಲ್ಲಿ ಕುಳಿತರು. ಮತ್ತು ತಮ್ಮ ತಮ್ಮ ಸೈನ್ಯಗಳಿಂದ ಕೂಡಿಕೊಂಡು ಶ್ರೀರಾಮನ ಅಕ್ಕಪಕ್ಕಗಳಲ್ಲಿ ಹೊರಟರು.

ಯಯುಸ್ಸ್ವಸ್ವಬಲೈರ್ಯುಕ್ತಾಸ್ತ್ವಗ್ರೇಷ್ಟಂ ಶ್ರೀರಾಮಪಾರ್ಶ್ವಗಾಃ ।
ಯಯಾವಗ್ರೇ ತ್ವಗ್ರಸರೋ ರಜ್ಜುಕುದ್ದಾಲಧಾರಿಭಿಃ ॥ ೬೯ ॥

ದೃಷತ್ಕಾರಕಕ್ಷಕೈಶ್ಚ ಕುಠಾರಟಂಕಿಪಾಣಿಭಿಃ ।
ತತೋ ಯಯೌ ಮಹಾನಾಗಃ ಪತಾಕಧ್ವಜಶೋಭಿತಃ ॥ ೭೦ ॥

ತತೋ ಯಯುರ್ಯಂತ್ರಹಸ್ತಾ ನಾನಾವಾಹನಸಂಸ್ಥಿತಾಃ ।
ತತೋ ಯಯುಶ್ಶತಘ್ನೀಭಿಃ ಪೂರಿತಾಃ ಶಕಟಾಃ ಶುಭಾಃ ॥ ೭೧ ॥

ತತೋಽಶ್ವಸಂಸ್ಥಾ ವಾದ್ಯಾನಿ ವಾದಯಂತೋ ಯಯುರ್ಭಟಾಃ ।
ತತೋಽಶ್ವಸಂಸ್ಥಾಶ್ಶತಶೋ ಯಯುಸ್ತೇ ವೇತ್ರಪಾಣಯಃ ॥ ೭೨ ॥

ತತೋ ಯಯುರ್ಮಾಗಧಾದ್ಯಾ ವಂದಿನೋಽಯಾನಸಂಸ್ಥಿತಾಃ ।
ತತೋಽನಟಾಶ್ಚಾರಣಾಶ್ಚ ಯಾನಸ್ಥಾಸು ವಿಭೂಷಿತಾಃ ॥ ೭೩ ॥

೬೯-೭೦. ಮುಂದಾಳಾಗಿ ಹೋಗತಕ್ಕವನು ಹಗ್ಗ, ಗುದ್ದಲಿ, ಕಲ್ಲು ಕುಟುಕರು, ಕೆತ್ತನೆಯುವರು, ಕೊಡಲಿಯುವರು, ಕಲ್ಲನ್ನು ಒಡೆಯುವವರು ಇವರೊಡನೆ ಹೊರಟನು. ಅವನಹಿಂದೆ ಪತಾಕೆಧ್ವಜಗಳಿಂದ ಅಲಂಕೃತವಾದ ಆನೆಯು ಹೊರಟಿತು.

೭೧. ಅನಂತರ ಯಂತ್ರಗಳನ್ನು ಹಿಡಿದಿದ್ದವರು ಅನೇಕವಾಗಿ ಬಗೆ ಬಗೆಯ ವಾಹನಗಳಲ್ಲಿ ಕುಳಿತು ಅವರ ಹಿಂದೆ ಹೊರಟರು. ಅವುಗಳ ಹಿಂದೆ ಫಿರಂಗಿಗಳನ್ನು ಹೇರಿದ ಬಂಡಿಗಳು ಹೊರಟವು.

೭೨. ಅವರಹಿಂದೆ ವಾದ್ಯಗಾರರು ಕುದುರೆಯ ಮೇಲೆ ಕುಳಿತು ವಾದ್ಯವನ್ನು ಬಾಜಿಸುತ್ತ ಹೊರಟರು. ಅನಂತರ ಅನೇಕ ಕುದುರೆಯ ಸವಾರರು ಕುದುರೆಯಮೇಲೆ ಕುಳಿತು ಹೊರಟರು.

೭೩. ಅವರಹಿಂದೆ ಹೊಗಳುಭಟರು ರಥದಲ್ಲಿ ಕುಳಿತು ಹೊರಟರು. ಅವರಹಿಂದೆ ನಟರೂ, ಚಾರಣರೂ, ಅಲಂಕೃತರಾಗಿ ರಥದಲ್ಲಿ ಕುಳಿತು ಹೊರಟರು.

ತತೋ ಯಯುರ್ಭೂಷಿತಾಸ್ತೇ ಶ್ರೀರಾಮಸ್ಯ ತುರಂಗಮಾಃ ।
ತತಃ ಪುರುಷವದ್ವೇಷಾ ಬಿಭ್ರಂತ್ಯಃ ಪ್ರಮದೋತ್ತಮಾಃ ॥ ೭೪ ॥

ಯಯುಸ್ತರುಣ್ಯಶ್ಚ ತತಶ್ಶಸ್ತ್ರಹಸ್ತಾಸ್ಸುಭೂಷಿತಾಃ ।
ಗೋಪಿತಾಸ್ಯಾಃ ಕಂಚುಕಿನ್ಯಸ್ತುರಂಗಾದಿಷು ಸಂಸ್ಥಿತಾಃ ॥ ೭೫ ॥

ತತೋ ಯಯುರ್ದಂಡಹಸ್ತಾ ದಾಸೀಪುತ್ರಾಸ್ಸುಭೂಷಿತಾಃ ।
ತತೋ ಯಯೌ ರಾಮಚಂದ್ರಸ್ತತ್ಪೃಷ್ಠೇ ಲಕ್ಷ್ಮಣೋ ಯಯೌ ॥

ತತ್ಪೃಷ್ಠೇ ಭರತಶ್ಚಾಪಿ ಶತ್ರುಘ್ನಶ್ಚ ತತೋ ಯಯೌ ।
ತತಃ ಕುಶೋ ಲವಶ್ಚಾಥ ತತಸ್ತೋಽಪ್ಯಂಗದೋ ಯಯೌ ॥ ೭೭ ॥

ಯಯೌ ತತಶ್ಚಿತ್ರಕೇತುಃ ಪುಷ್ಕರಶ್ಚ ತತೋ ಯಯೌ ।
ತತಸ್ತಕ್ಷಃ ಸುಬಾಹುಶ್ಚ ಯೂಪಕೇತುಸ್ತತೋ ಯಯೌ ॥ ೭೮ ॥

---

೭೪. ಅವುಗಳ ಹಿಂದೆ ರಾಮನೂ ಕುದುರೆಗಳೂ ಅಲಂಕೃತರಾಗಿ ಹೊರಟರು. ಅವುಗಳ ಹಿಂದೆ ಹೆಂಗಸರು, ಪುರುಷರ ವೇಶವನ್ನು ಧರಿಸಿ ಹೊರಟರು.

೭೫. ಅವರು ತರುಣಿಯರಾಗಿದ್ದರು. ಕೈಯ್ಯಲ್ಲಿ ಶಸ್ತ್ರಗಳನ್ನು ಹಿಡಿದಿದ್ದರು. ಭೂಷಿತರಾಗಿದ್ದರು. ಅವರ ಹಿಂದೆ ಕಂಚುಕಿಯರು ಮುಖಕ್ಕೆ ಬುರುಕಿಯನ್ನು ಹಾಕಿಕೊಂಡು ಕುದುರೆಯಮೇಲೆ ಕುಳಿತು ಹೊರಟರು.

೭೬. ಅವರಹಿಂದೆ ದಾಸಿಯರೂ ಮಕ್ಕಳೂ ಹೊರಟರು. ಅವರಹಿಂದೆ ರಾಮಚಂದ್ರನು ಹೊರಟನು. ಅವನಹಿಂದೆ ಲಕ್ಷ್ಮಣನು ಹೊರಟನು.

೭೭. ಅವನ ಹಿಂದೆ ಭರತನು ಹೊರಟನು. ಅವನ ಹಿಂದೆ ಶತ್ರುಘ್ನನು ಹೊರಟನು. ಅವನಹಿಂದೆ ಕುಶನು. ಅವನ ಹಿಂದೆ ಲವನು ಹೊರಟನು ಅವನ ಹಿಂದೆ ಅಂಗದನು ಹೊರಟನು.

೭೮. ಅವನಹಿಂದೆ ಚಿತ್ರಕೇತುವು ಹೊರಟನು. ಅವನಹಿಂದೆ ಪುಷ್ಕರನು ಹೊರಟನು. ಅವನಹಿಂದೆ ತಕ್ಷನೂ, ಅವನ ಹಿಂದೆ ಸುಬಾಹುವೂ ಅವನ ಹಿಂದೆ ಯೂಪಕೇತುವೂ ಹೊರಟರು.

ತತಸ್ಸೀತಾ ಯಯೌ ಶೀಘ್ರಮೂರ್ಮಿಲಾ ಚ ತತಃ ಪರಂ |
ಮಾಂಡವೀ ಶ್ರುತಕೀರ್ತಿಶ್ಚ ಸ್ನುಷಾಸ್ಸರ್ವಾಃ ಕ್ರಮಾದ್ಯಯುಃ || ೮೯ ||

ತತಸ್ತೇ ಮಂತ್ರಿಣಸ್ಸರ್ವೇ ಶಿಬಿಕಾಸಂಸ್ಥಿತಾ ಯಯುಃ |
ತತೋ ಯಯುರ್ವಾನರಾಶ್ಚ ಕೋಟಿಶಃ ಪರ್ವತೋಪಮಾಃ || ೯೦ ||

ತತೋ ಯಯುರ್ನೃಪಾಸ್ಸರ್ವೇ ಕೋಟಿಶೋ ವಾರಣಸ್ಥಿತಾಃ |
ತತೋ ನೃಪಾಣಾಂ ಸೈನ್ಯಾನಿ ಯಯುರ್ವಾಜಿಸ್ಥಿತಾನಿ ಹಿ || ೯೧ ||

ಯಯುಸ್ತತಸ್ತೇ ಯಂತ್ರಾಣಾಂ ಶಕಟಾಃ ಕೋಟಿಶೋ ವರಾಃ |
ಶತಘ್ನಿ ಖಡ್ಗಚರ್ಮಾದಿಪೂರಿತಾಶ್ಶಕಟಾಸ್ತದಾ || ೯೨ ||

ತತೋ ವಾರಣಮುಖ್ಯಾಶ್ಚ ನವವಾದ್ಯಸಮನ್ವಿತಾಃ |
ತತಶ್ಚೋಷ್ಟ್ರಾಸ್ಸುವರ್ಣಾನಾಂ ತತಃ ಪೃಷ್ಠಸರಾದಯಃ || ೯೩ ||

---

೮೯. ಅವನಹಿಂದೆ ಸೀತೆಯು ಹೊರಟಳು. ಅವಳಹಿಂದೆ ಊರ್ಮಿಳೆಯು ಹೊರಟಳು. ಅವಳಹಿಂದೆ ಮಾಂಡವಿಯೂ ಅವಳಹಿಂದೆ ಶ್ರುತಕೀರ್ತಿಯೂ ಅವಳಹಿಂದೆ ಸೊಸೆಯರೂ ಕ್ರಮವಾಗಿ ಹೊರಟರು.

೯೦. ಅವರಹಿಂದೆ ಮಂತ್ರಿಗಳು ಪಲ್ಲಕ್ಕಿಯಲ್ಲಿ ಕುಳಿತು ಹೊರಟರು. ಅವರಹಿಂದೆ ಪರ್ವತದಂತಿದ್ದ ಕಪಿಗಳು ಕೋಟಿಗಟ್ಟಲೆಯಲ್ಲಿ ಹೊರಟವು.

೯೧. ಅವರಹಿಂದೆ ರಾಜರೆಲ್ಲರೂ ಆನೆಯಮೇಲೆ ಕುಳಿತು ಕೋಟಿಗಟ್ಟಲೆಯಲ್ಲಿ ಹೊರಟರು. ಅವರಹಿಂದೆ ಅವರ ಸೈನ್ಯಗಳು ಕುದುರೆಯಮೇಲೆ ಕುಳಿತು ಹೊರಟವು.

೯೨. ಅವುಗಳಹಿಂದೆ ಅವರವರ ಯಂತ್ರಗಳನ್ನು ಕೋಟಿಗಟ್ಟಲೆಯಲ್ಲಿ ಗಾಡಿಗಳಮೇಲೆ ಹೇರಿಕೊಂಡು ಹೊರಟರು ಅವರಹಿಂದೆ ಖಡ್ಗ, ಚರ್ಮ, ಮುಂತಾದುವುಗಳಿಂದ ತುಂಬಿದ ಗಾಡಿಗಳು ಹೊರಟವು.

೯೩. ಅವುಗಳ ಹಿಂದೆ ಉತ್ತಮವಾದ ಆನೆಗಳಮೇಲೆ ನವವಾದ್ಯಗಳನ್ನು ಬಾಜಿಸುತ್ತ ಹೊರಟರು. ಅವುಗಳ ಹಿಂದೆ ಸುವರ್ಣವನ್ನು ಹೇರಿದ ಒಂಟೆಗಳು ಹೊರಟವು. ಅನಂತರ ಅವುಗಳ ಹಿಂದೆ ಸೈನ್ಯದ ಹಿಂಬಾಲಕರು ಹೊರಟರು.

ಏವಂ ರಾಮಶ್ಶನೈರ್ಮಾರ್ಗೇ ಚಾಮರಾದ್ಯೈಸ್ಸುವೀಜಿತಃ ।
ಸೀತಯಾ ಜಾಲರಂಧ್ರೈಶ್ಚ ವೀಕ್ಷಿತಶ್ಚ ಮುಹುರ್ಮುಹುಃ ॥ ೮೪ ॥

ಯಯೌ ಶನೈಶ್ಶನೈಃ ಶ್ರೀಮಾನ್ ಸ್ತುತೋ ಮಾಗಧವಂದಿಭಿಃ ।
ಪಶ್ಯನ್ನೃತ್ಯಾನ್ಯಪ್ಸರಸಾಂ ಶೃಣ್ವನ್ ಸ ಗಾಯನಾನ್ಯಪಿ ॥ ೮೫ ॥

ಸೇನಾನಿವೇಶಸ್ಥಾನಾನಾಂ ಯಾತ್ರಾಕಾಂಡೇ ಯಥೋದಿತಾ ।
ಮಯಾ ಪೂರ್ವಂ ಸುರಚನಾ ತದ್ವದಾಸೀತ್ಪುನಸ್ತ್ವಿಹ ॥ ೮೬ ॥

ಇತಿಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕಿಯೇ ಆದಿಕಾವ್ಯೇ ಪೂರ್ಣಕಾಂಡೇ ರಾಮದಾಸ
ವಿಷ್ಣುದಾಸ ಸಂವಾದೇ ರಾಮಪ್ರಸ್ಥಾನಂ ನಾಮ
ದ್ವಿತೀಯಸ್ಸರ್ಗಃ ಸಮಾಪ್ತಃ

---

೮೪. ಈ ರೀತಿಯಾಗಿ ರಾಮನು ಚಾಮರದಿಂದ ಬೀಸಿಸಿಕೊಳ್ಳುತ್ತ ಸೀತೆಯು ಜಾಲರಂಧ್ರದಿಂದ ಪದೇ ಪದೇ ನೋಡುತ್ತಿರಲು ದಾರಿಯಲ್ಲಿ ಹೊರಟನು.

೮೫. ದಾರಿಯಲ್ಲಿ ಸ್ತುತಿಪಾಠಕರು ಸ್ತುತಿಸುತ್ತಿದ್ದರು. ಅದನ್ನು ಕೇಳುತ್ತಿದ್ದನು. ನರ್ತಕಿಯರು ಕುಣಿಯುತ್ತಿದ್ದರು. ಅದನ್ನು ನೋಡುತ್ತಿದ್ದನು. ಗಾಯಕರು ಹಾಡುತ್ತಿದ್ದರು. ಅದನ್ನು ಕೇಳುತ್ತಿದ್ದನು. ಈ ರೀತಿಯಾಗಿ ಶ್ರೀರಾಮನು ಹೊರಟನು.

೮೬. ಯಾತ್ರಾಕಾಂಡದಲ್ಲಿ ಸೇನಾನಿವೇಶಸ್ಥಾನವು ಹೇಗೆ ವರ್ಣಿತವಾಯಿತೋ ಅಂತೆಯೇ ಈಗಲೂ ಕೂಡ ಅವುಗಳ ರಚನೆಯು ಉತ್ತಮ ರೀತಿಯಿಂದ ಕೂಡಿದ್ದಿತು.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ
ಆದಿಕಾವ್ಯವಾದ ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ
ರಾಮದಾಸ ವಿಷ್ಣುದಾಸರ ಸಂವಾದದಲ್ಲಿ ಶ್ರೀರಾಮಪ್ರಸ್ಥಾನವೆಂಬ
ಎರಡನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ ಎರಡನೆಯ ಸರ್ಗದ ಸಾರಾಂಶವು

ಶ್ರೀರಾಮನು ವಾಲ್ಮೀಕಿಯನ್ನು ಹಸ್ತಿನಾಪುರಕ್ಕೆ ಬರಬೇಕೆಂದು ಕೇಳಿಕೊಳ್ಳಲು ಅವನು ಆಗಲೆಂದನು. ರಾಮನ ಅಪ್ಪಣೆಯಂತೆ ಲಕ್ಷ್ಮಣನು ತಮ್ಮ ಮಕ್ಕಳಿಗೆ ಕಾಗದವನ್ನು ಬರೆದು ಕಳುಹಿಸಿದನು. ಮತ್ತು ಸಪ್ತದ್ವೀಪಗಳ ರಾಜರನ್ನೂ ಕರೆಸಿದನು.

ಆಗ ರಾಘವನು ಸಭೆಯಲ್ಲಿ ಎಲ್ಲರನ್ನೂ ಬರಮಾಡಿಕೊಂಡು ಅವರೆದುರಿಗೆ ಲಕ್ಷ್ಮಣನನ್ನು ಕುರಿತು ನಾವು ಹಸ್ತಿನಾಪುರಕ್ಕೆ ಹೋಗಬೇಕಾಗಿರುವುದರಿಂದ ಎಲ್ಲವನ್ನೂ ಸಿದ್ಧಪಡಿಸು. ನಾಳೆಯೇ ದಿವಸವು ಚೆನ್ನಾಗಿದೆ ಎಂದು ಅಪ್ಪಣೆ ಮಾಡಿದನು.

ಮತ್ತು ಅಯೋಧ್ಯೆಯಲ್ಲಿ ರಾಜ್ಯವಾಳಲು ಭರತ, ಶತ್ರುಘ್ನ, ಲಕ್ಷ್ಮಣರು, ರಾಮನ ವಿರಹದಿಂದ ಒಪ್ಪದಿರಲು ಕುಶನಿಗೆ ಪಟ್ಟಾಭಿಷೇಕವನ್ನು ಮಾಡಿದನು. ಪ್ರಜೆಗಳೆಲ್ಲರೂ ಆ ರಾಮನ ಹಿಂದೆ ಹೋಗಬೇಕೆಂದು ಕೇಳಿಕೊಂಡರು. ರಾಮನು ಮೂರನೆಯ ದಿನವೇ ಪ್ರಯಾಣಮಾಡಿದನು. ರಾಜರೆಲ್ಲರೂ ಹಸ್ತಿನಾಪುರದ ರಾಜರೊಡನೆ ಯುದ್ಧಮಾಡುತ್ತೇವೆಂದು ಹೇಳಿ ಹೊರಟರು ಇಂತು ಎಲ್ಲರೊಡನೆಯೂ ರಾಮನು ಕ್ರಮ ಕ್ರಮವಾಗಿ ಪ್ರಯಾಣ ಮಾಡಿದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಪೂರ್ಣಕಾಂಡೇ ತೃತೀಯಸ್ಸರ್ಗಃ

॥ ರಾಮದಾಸ ಉವಾಚ ॥

ಅಥ ರಾಮಶ್ಶನೈರ್ಮಾರ್ಗೇ ನಾನಾದೇಶಾನ್ವಿಲಂಘ್ಯ ಚ ।
ಏಕಾದಶದಿನೈಃ ಪ್ರಾಪ್ಯ ಸೇನಯಾ ತದ್ಗಜಾಹ್ವಯಂ ॥ ೧ ॥

ರಾಮಮಾಗತಮಾಜ್ಞಾಯ ಸುಷೇಣೋ ವೇಗವತ್ತರಃ ।
ಪ್ರತ್ಯುದ್ಯಯೌ ಸ್ವಕರಿಭಿರ್ವಿಂಶಲ್ಲಕ್ಷಸಮನ್ವಿತೈಃ ॥ ೨ ॥

ನತ್ವಾ ರಾಮಂ ಚ ಸೀತಾಂ ಚ ಸರ್ವಂ ವೃತ್ತಂ ನ್ಯವೇದಯತ್ ।
ರಾಮ ರಾಮ ಮಹಾಬಾಹೋ ಪ್ರತಾಪಾತ್ತವ ವೈ ಮಯಾ ॥ ೩ ॥

ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ ಮೂರನೆಯ ಸರ್ಗವು

೧. ರಾಮದಾಸನು ಹೇಳಿದನು–ಇಂತು ಹೊರಟ ರಾಮನು ಮಾರ್ಗದಲ್ಲಿ ನಾನಾ ದೇಶಗಳನ್ನು ದಾಟಿ ಹನ್ನೊಂದನೆಯ ದಿನದಲ್ಲಿ ಸೇನೆಯೊಡನೆ ಆ ಹಸ್ತಿನಾಪುರವನ್ನು ಹೊಂದಿದನು.

೨. ರಾಮನು ಬಂದುದನ್ನು ತಿಳಿದು ಅಲ್ಲಿ ಪಟ್ಟಾಭಿಷಕ್ತನಾಗಿದ್ದ ಸುಷೇಣನು ಬೇಗನೆ ತನ್ನ ಇಪ್ಪತ್ತನಾಲ್ಕುಲಕ್ಷ ಆನೆಗಳನ್ನು ತೆಗೆದುಕೊಂಡು ಬಂದು ಆ ರಾಮನನ್ನು ಎದುರುಗೊಂಡನು.

೩. ಬಂದು ರಾಮನಿಗೂ, ಸೀತೆಗೂ, ನಮಸ್ಕರಿಸಿ ಅಲ್ಲಿನ ವಿಷಯ ಗಳೆಲ್ಲವನ್ನೂ ವಿಜ್ಞಾಪಿಸಿಕೊಂಡನು. ಎಲೈ ಮಹಾಬಾಹುವಾದ ರಾಮನೇ ! ನಿನ್ನ ಪ್ರತಾಪದ ಬಲದಿಂದ ನಾನು ಅವರೊಡನೆ ಯುದ್ಧಕ್ಕೆ ನಿಂತೆನು.

ಚತುರ್ದಶದಿನಂ ಯುದ್ಧಂ ಕೃತಮೇಭಿಸ್ಸುದುಷ್ಕರಂ ।
ಅಧುನಾ ತ್ವಂ ಸಮಾಯಾತಃ ಕ್ವ ತೇ ಸ್ಥಾಸ್ಯಂತಿ ಭೂತಲೇ ॥ ೪ ॥

ಸುಷೇಣಸ್ಯ ವಚಶ್ಶ್ರುತ್ವಾ ತಮಾಶ್ವಾಶ್ವಾಸಯತ್ಪ್ರಭುಃ ।
ಅಥ ರಾಮಸ್ಸಜಾಹ್ನವ್ಯಾಶ್ಚೋತ್ತರೇ ಪರಮೇ ತಟೇ ॥ ೫ ॥

ಸೇನಾನಿವೇಶಮಕರೋದ್ದದರ್ಶ ರಿಪುವಾಹಿನೀಂ ।
ತಾಂ ನಿಶಾಂ ಸಮತಿಕ್ರಮ್ಯ ದ್ವಿತೀಯೇ ದಿವಸೇ ತತಃ ॥ ೬ ॥

ಚೋದಯಾಮಾಸ ಯುದ್ಧಾಯ ವಾನರಾನ್ರಘುನಂದನಃ ।
ತತಸ್ತೇ ವಾನರಾಸ್ಸರ್ವೇ ಜಾಹ್ನವ್ಯಾಮವಪ್ಲುತ್ಯ ಚ ॥ ೭ ॥

ರಾಮಂ ಸೀತಾಂ ನಮಸ್ಕೃತ್ಯ ನಿರ್ಯಯುಸ್ಸಮರಂ ಮುದಾ ।
ತತಸ್ತೇ ವಾನರಾಶ್ಚಕ್ರುಸ್ಸಿಂಹನಾದಾನ್ ಭಯಂಕರಾನ್ ॥ ೮ ॥

---

೪. ಹೀಗೆ ಯುದ್ಧಕ್ಕೆ ನಿಂತು ಹದಿನಾಲ್ಕುದಿನಗಳವರೆಗೂ ಬಹು ಕ್ರೂರವಾಗಿ ಯುದ್ಧವನ್ನು ಮಾಡಿದೆನು, ಈಗಲಾದರೋ ನೀನೂ ಬಂದಿದ್ದೀಯೆ. ಅವರು ಈ ಭೂಮಿಯಲ್ಲಿ ಎಲ್ಲಿ ನಿಂತಾರು ?

೫-೬. ಸುಷೇಣನು ಹೇಳಿದುದನ್ನು ಕೇಳಿ ರಾಮನು ಅವನಿಗೆ ಸಮಾಧಾನವನ್ನು ಹೇಳಿದನು. ಮತ್ತು ಆ ರಾಮನು ಅಲ್ಲಿ ಹರಿಯುತ್ತಿರುವ ಗಂಗಾನದಿಯ ಉತ್ತರದಡದಲ್ಲಿ ತನ್ನ ಸೈನ್ಯವನ್ನು ನಿಲ್ಲಿಸಿ ಅಲ್ಲಿಯೇ ಬಿಡಾರವನ್ನು ಮಾಡಿ ಶತ್ರುಗಳ ಸೈನ್ಯವೆಲ್ಲವನ್ನೂ ನೋಡಿದನು. ಆ ದಿನವೆಲ್ಲವೂ ಸುಮ್ಮನಿದ್ದು ಆ ರಾತ್ರಿಯನ್ನು ಕಳೆದನು.

೭. ಮಾರನೆಯದಿವಸ ರಾಮನು ಕಪಿಗಳ ಸೈನ್ಯವನ್ನು ಯುದ್ಧಕ್ಕೆ ಹೊರಡಿಸಿದನು. ಆಗ ಆ ಕಪಿಗಳೆಲ್ಲರೂ ಗಂಗೆಯಲ್ಲಿ ಸ್ನಾನಮಾಡಿ ರಾಮ ಮತ್ತು ಸೀತೆಯರಿಗೆ ನಮಸ್ಕರಿಸಿ ಯುದ್ಧಕ್ಕೆ ಹೊರಟರು.

೮. ಯುದ್ಧಕ್ಕೆ ಹೊರಟ ಈ ಕಪಿಗಳು ಕಿರುಚುತ್ತ ಕೂಗುತ್ತ ನೆಗೆಯುತ್ತ ಕುಣಿಯುತ್ತ ಹೊರಟು ಸಂತೋಷದಿಂದ ಸಿಂಹನಾದವನ್ನು ಮಾಡುತ್ತಲಿದ್ದುವು.

ವಾದಯಾಮಾಸುರ್ವಾದ್ಯಾನಿ ದುದ್ರುವುಶ್ಶತ್ರುವಾಹಿನೀಂ ।
ನಲಾದ್ಯಾಸ್ತೇಽಪಿ ಶ್ರೀರಾಮಸೇನಾಂ ದೃಷ್ಟ್ವಾತಿವಿಸ್ಮಿತಾಃ ॥ ೯ ॥

ಚಕಿತಾಭಯಸಂಭೀತಾಶ್ಚ ನಿರ್ಯಯುಸ್ಸಂಗರಂ ಜವಾತ್ ।
ತತಸ್ತೇ ವಾನರಸ್ಸರ್ವೇ ಗಂಗಾಮುಲ್ಲಂಘ್ಯ ವೇಗತಃ ॥ ೧೦ ॥

ದೃಷದ್ಭಿಃ ಪರ್ವತೈರ್ವೃಕ್ಷೈಃ ಶಿಲಾಭಿರ್ಮುಷ್ಟಿಭಿಃ ಪದೈಃ ।
ನಿಜಘ್ನುಶ್ಶತ್ರುವೀರಾಂಸ್ತೈಃ ಕೀರ್ತಯಂತೋ ರಘೂತ್ತಮಂ ॥ ೧೧ ॥

ನಲವೀರಾಶ್ಚ ತೇ ಸರ್ವೇ ಶಸ್ತ್ರೈಸ್ತೀಕ್ಷ್ಣೈಃ ಕಪೀಶ್ವರಾನ್ ।
ನಿಜಘ್ನುಸ್ಸಮರೇ ವೇಗಾದ್ಬಭೂವ ತುಮುಲೋ ರಣಃ ॥ ೧೨ ॥

ಅಥ ತೈರ್ವಾನರೈಸ್ಸರ್ವೈಃ ಬಲಾದ್ವೃಕ್ಷೈಃ ಪ್ರಪೀಡಿತಾಃ ।
ಪರಾಙ್ಮುಖಾಃ ಕೃತಾಸ್ಸರ್ವೇ ರಣಾತ್ತೇ ನಲಸೈನಿಕಾಃ ॥ ೧೩ ॥

---

೯. ವಾದ್ಯಗಳನ್ನು ಬಾರಿಸಿದುವು. ಹೀಗೆ ಮಾಡುತ್ತ ಶತ್ರುಸೈನ್ಯಗಳ ಮೇಲೆ ಬಿದ್ದುವು. ಆ ನಲನೇ ಮುಂತಾದವರು ಶ್ರೀರಾಮನ ಸೇನೆಯನ್ನು ನೋಡಿ ಬಹು ಆಶ್ಚರ್ಯಗೊಂಡರು.

೧೦-೧೧ ಚಕಿತರಾಗಿ ಭಯವನ್ನು ಹೊಂದಿದರು. ಮತ್ತು ಯುದ್ಧಕೋಸ್ಕರ ಮುಂದುವರಿದು ಹೊರಟರು. ಅನಂತರ ಆ ಕಪಿಸೇನೆಗಳು ಬೇಗನೆ ಗಂಗೆಯನ್ನು ದಾಟಿಬಂದು ಕಲ್ಲುಗಳಿಂದಲೂ, ಬೆಟ್ಟಗಳಿಂದಲೂ, ಮರಗಳಿಂದಲೂ ಹೊಡೆಯಲು ಮೊದಲಿಟ್ಟರು. ರಘುಪತಿಗೆ ಜಯವಾಗಲಿ ಎಂದು ಕೂಗುತ್ತಿದ್ದರು.

೧೨. ನಳನ ಕಡೆಯ ವೀರರೂ ಕೂಡ ಹರಿತವಾದ ಶಸ್ತ್ರಗಳಿಂದ ಕಪೀಶ್ವರರನನ್ನು ಹೊಡೆದರು. ಹೀಗೆ ಒಬ್ಬರಿಗೊಬ್ಬರು ಹೊಡೆದಾಡುತ್ತಿರಲು ತುಮುಲಯುದ್ಧವು ಪ್ರಾರಂಭವಾಯಿತು.

೧೩. ಕೊನೆಗೆ ಕಪಿಗಳ ಕೈಯಿಂದ ಮರಗಳಿಂದಲೂ, ಕಲ್ಲುಗಳಿಂದಲೂ, ಹೊಡೆತವನ್ನು ತಡೆಯಲಾರದೆ ಆ ನಳನ ಸೈನಿಕರು ಪರಾಙ್ಮುಖರಾದರು.

ತಾನ್ ದೃಷ್ಟ್ವಾ ತೇ ನಲಾದ್ಯಾಶ್ಚ ರಣಾದ್ವೀರಾನ್ ಪರಾಙ್ಮುಖಾನ್ ।
ನಿಹತಾನ್ ಕಪಿವೀರೈಶ್ಚ ಚೋದಯನ್ನೃಪತೀಂಸ್ತದಾ ॥ ೧೪ ॥

ತತಸ್ತೇ ಪಾರ್ಥಿವಾಸ್ಸರ್ವೇ ಜಂಬೂದ್ವೀಪನಿವಾಸಿನಃ ।
ತಥಾ ದ್ವೀಪಾಂತರೋದ್ಭೂತಾ ಯೇ ವೃದ್ಧಾಶ್ಚ ಪುರೋದಿತಾಃ ॥ ೧೫ ॥

ಯಯುರ್ಯುದ್ಧಾಯ ಸನ್ನದ್ಧಾ ನಾನಾವಾಹನಸಂಸ್ಥಿತಾಃ ।
ತಾನ್ ಸರ್ವಾನಾಗತಾನ್ ದೃಷ್ಟ್ವಾ ಯಯುಃ ಶ್ರೀರಾಮಸೈನಿಕಾಃ ॥ ೧೬ ॥

ಜಂಬೂದ್ವೀಪಾಂತರಸ್ಥಾಶ್ಚ ತಥಾ ದ್ವೀಪಾಂತರಸ್ಥಿತಾಃ ।
ಯುವಾನಶ್ಚ ನೃಪಾಸ್ಸರ್ವೇ ನಾನಾವಾಹನಸಂಸ್ಥಿತಾಃ ॥ ೧೭ ॥

ಸುಗ್ರೀವಶ್ಚಾಂಗದಶ್ಚಾಪಿ ಹನೂಮಾಂಶ್ಚ ವಿಭೀಷಣಃ ।
ಜಾಂಬವಾಂಶ್ಚ ಸುಷೇಣಶ್ಚ ಸಂಪಾತಿರ್ಮಕರಧ್ವಜಃ ॥ ೧೮ ॥

---

೧೪. ತಮ್ಮ ವೀರರು ರಣದಿಂದ ಪರಾಙ್ಮುಖರಾಗಿ ಓಡುತ್ತಿದ್ದುದನ್ನು ನಲಾದಿಗಳು ನೋಡಿದರು. ಕಪಿವೀರರಿಂದ ಅವರಿಗೆ ಬಹುವಾಗಿ ಪೆಟ್ಟುಬಿದ್ದಿರುವುದನ್ನು ನೋಡಿದರು. ಅನಂತರ ರಾಜರುಗಳನ್ನೇ ಯುದ್ಧಕ್ಕೆ ಹೊರಡಿಸಿದರು.

೧೫. ಅನಂತರ ಜಂಬೂದ್ವೀಪನಿವಾಸಿಗಳಾದ ಆ ರಾಜರೆಲ್ಲರೂ ಮತ್ತು ಬೇರೆ ದ್ವೀಪಗಳ ರಾಜರೆಲ್ಲರೂ ಕೂಡ ಹಿಂದೆ ನಾವು ಹೇಳಿದಂತೆ ವೃದ್ಧರಾದ ರಾಜರೆಲ್ಲರೂ ಯುದ್ಧಕ್ಕೆ ಸಿದ್ಧರಾಗಿ ಹೊರಟರು

೧೬. ಬಗೆ ಬಗೆಯ ವಾಹನಗಳನ್ನು ತರಿಸಿ ಅವುಗಳಲ್ಲಿ ಕುಳಿತರು. ಹೋಗಿ ಆ ಕಪಿಸೈನ್ಯವನ್ನು ಎದುರಿಸಿದರು. ಅವರು ಬಂದುದನ್ನು ನೋಡಿ ಶ್ರೀರಾಮನ ಸೈನಿಕರು ತಾವೂ ಯುದ್ಧಕ್ಕೆ ಸಿದ್ಧರಾಗಿ ಹೊರಟರು.

೧೭. ಆ ಜಂಬೂದ್ವೀಪನಿವಾಸಿಗಳೂ ಅಂತೆಯೇ ಬೇರೆಯ ದ್ವೀಪಗಳ ರಾಜರೂ ಕೂಡ ಎಲ್ಲರೂ ಇನ್ನೂ ಯುವಕರಾಗಿ ಯುದ್ಧದಲ್ಲಿ ಉತ್ಸಾಹಿಗಳಾಗಿರುವರು. ತಮಗೆ ಬೇಕಾದ ವಾಹನಗಳಲ್ಲಿ ಕುಳಿತು ಇರುವರು.

೧೮-೧೯. ಇತ್ತ ಸುಗ್ರೀವ, ಅಂಗದ, ಹನುಮಂತ, ವಿಭೀಷಣ, ಜಾಂಬವಂತ, ಸುಷೇಣ, ಸಂಪಾತಿ, ಮಕರಧ್ವಜ, ಗುಹ, ಭೂರಿಕೀರ್ತಿ,

ಗುಹಕೋ ಭೂರಿಕೀರ್ತಿಶ್ಚ ಕಂಬುಕಂಠಃ ಪ್ರತಾಪವಾನ್ ।
ತಥಾನ್ಯೇ ಜನಕಾದ್ಯಾಶ್ಚ ಯಯುಸ್ಸಂಗ್ರಾಮಭೂತಲಂ || ೧೯ ||

ತದೋಭಯೋರ್ಮಹಾನಾಸೀತ್ ಸೈನ್ಯಯೋರ್ವೀರನಿಸ್ಸ್ವನಃ ।
ನವವಾದ್ಯಾನಿ ವೈ ನೇದುರುಭಯೋಸ್ಸೈನ್ಯಯೋಃ ಪೃಥಕ್ || ೨೦ ||

ತದಾ ಬ್ರಹ್ಮಾದಯೋ ದೇವಾಶ್ಶಿವೇನ ಸಹಿತಾಶ್ಚ ಖೇ ।
ಸಬುಧೇನಾಥ ಸೋಮೇನ ದೇವೇಂದ್ರೇಣ ಯುತಾ ಮುದಾ || ೨೧ ||

ನಾನಾವಿಮಾನವರಾರೂಢಾ ದದೃಶುರ್ಯುದ್ಧಕೌತುಕಂ ।
ಅಥ ಚಂದ್ರಾದಯೋ ದೇವಾಶ್ಚಕ್ರುರ್ಮಂತ್ರಂ ಪರಸ್ಪರಂ || ೨೨ ||

ಮಹಾಭಯಂ ಸಮುತ್ಪನ್ನಂ ಪ್ರಳಯೋತ್ರ ಭವಿಷ್ಯತಿ ।
ಬ್ರಹ್ಮದತ್ತವರಾಶ್ಚೈತೇ ಸೋಮವಂಶೋದ್ಭವಾ ನೃಪಾಃ || ೨೩ ||

ಕಂಬುಕಂಠ, ಇನ್ನೂ ಉಳಿದ ಜನಕನೇ ಮುಂತಾದವರು ಯುದ್ಧಭೂಮಿಗೆ ಹೊರಟರು.

೨೦. ಎರಡು ಕಡೆಯಿಂದಲೂ ಬಂದುಸೇರಿದ ಸೇನೆಗಳು ಬಹುವಾಗಿಯೂ ಭಯಂಕರವಾಗಿಯೂ, ಸಿಂಹನಾದವನ್ನು ಮಾಡಲು ಮೊದಲಿಟ್ಟುವು. ಎರಡು ಸೈನ್ಯಗಳೂ ಹೊಸ ಹೊಸದಾಗಿ ವಾದ್ಯಗಳನ್ನು ಬಾರಿಸಲು ಮೊದಲುಮಾಡಿದುವು.

೨೧. ಆಗ ಬ್ರಹ್ಮನೇ ಮುಂತಾದ ದೇವತೆಗಳು ಶಿವನೊಡನೆ ಅಂತರಿಕ್ಷದಲ್ಲಿ ನಿಂತರು. ಸೋಮನೂ, ಬುಧನೂ, ದೇವೇಂದ್ರನೂ, ಯುದ್ಧವನ್ನು ನೋಡಲು ಬಂದು ಅಂತರಿಕ್ಷದಲ್ಲಿ ನಿಂತರು.

೨೨. ಇವರೆಲ್ಲರೂ ವಿಧ ವಿಧ ವಿಮಾನಗಳಲ್ಲಿ ಕುಳಿತು ಯುದ್ಧವನ್ನು ಸಂತೋಷದಿಂದ ನೋಡುತ್ತಿದ್ದರು. ಆಗ ಚಂದ್ರನೇ ಮುಂತಾದ ದೇವತೆಗಳು ಒಬ್ಬರಿಗೊಬ್ಬರು ಸೇರಿ ಇಂತೆಂದು ಯೋಚಿಸಿದರು.

೨೩. ಈಗ ಮಹಾ ಭಯವೇ ಬಂದು ಬಿಟ್ಟಿತು. ಪ್ರಳಯಕಾಲವು ಬಂದಿತು. ಪ್ರಳಯವೇ ಉಂಟಾಗುತ್ತದೆ. ಈ ಸೋಮವಂಶದ ರಾಜರಿಗೆ ಬ್ರಹ್ಮನು ವರವನ್ನು ಕೊಟ್ಟಿರುವನು.

ರಾಮೋ ವಿಷ್ಣುರಯಂ ಸಾಕ್ಷಾತ್ಕಥಂ ಜಯಪರಾಜಯೌ ।
ಭವಿಷ್ಯತಃ ಕಥಂ ಯುದ್ಧಾನ್ನಿವೃತ್ತಿರುಭಯೋರಪಿ ॥ ೨೪ ॥

ಭವಿಷ್ಯತಿ ಕ ಉಪಾಯಃ ಕಾರ್ಯೋ ಯುದ್ಧನಿವಾರಣೇ ।
ತದಾ ಬ್ರಹ್ಮಾ ಸುರಾನಾಹ ಕಿಂಚಿದ್ದೃಷ್ಟ್ವಾ ವಯಂ ರಣಂ ॥ ೨೫ ॥

ಕರಿಷ್ಯಾಮಸ್ತಯೋಸ್ಸಖ್ಯಂ ರಾಮಸೋಮಜಯೋಸ್ತ್ವಿಹ ।
ಇತ್ಯುಕ್ತ್ವಾ ಸಕಲೈರ್ವೇಧಾ ದದರ್ಶ ರಣಕೌತುಕಂ ॥ ೨೬ ॥

ತತೋಭಯೋಸ್ಸೈನ್ಯಯೋಶ್ಚ ಬಭೂವುರ್ಯಂತ್ರನಿಸ್ವನಾಃ ।
ಯಂತ್ರೋತ್ಥವಹ್ನಿಜ್ವಾಲಾಭಿರ್ವ್ಯಾಪ್ತಾ ದಶದಿಶೋಭವನ್ ॥ ೨೭ ॥

ಯಂತ್ರೋತ್ಥನಾನಾಘುಟಿಕಾಭಿರ್ಜಘ್ನುಸ್ತೇ ಪರಸ್ಪರಂ ।
ಶತಘ್ನೀಭಿಸ್ತಥಾ ಜಘ್ನುಶ್ಶಕಟಸ್ಥಾಭಿರಾದರಾತ್ ॥ ೨೮ ॥

---

೨೪. ಈ ಶ್ರೀರಾಮನಾದರೋ ಸಾಕ್ಷಾನ್ಮಹಾವಿಷ್ಣುವೇ ಆಗಿರುವನು. ಇವರುಗಳಿಗೆ ಯಾರಿಗೆ ಜಯವಾಗುವುದು? ಅಥವಾ ಯಾರಿಗೆ ಪರಾಜಯ ವಾಗುವುದು ? ಆಗುವುದು ತಾನೆ ಹೇಗೆ? ಇವರಿಬ್ಬರೂ ಯುದ್ಧದಿಂದ ತಾನೇ ಹೇಗೆ ಹಿಂದಿರುಗಿಯಾರು ?

೨೫-೨೬. ಇವರಿಬ್ಬರಿಗೂ ಯುದ್ಧವನ್ನು ನಿಲ್ಲಿಸಲು ಏನು ಉಪಾಯವನ್ನು ಮಾಡಬೇಕು ? ಎಂದು ಯೋಚಿಸುತ್ತಿರಲು ಆಗ ಬ್ರಹ್ಮನು ದೇವತೆಗಳನ್ನು ಕುರಿತು ಎಲೈ ದೇವತೆಗಳಿರಾ ! ಇವರಿಗೆ ಯುದ್ಧವು ಪ್ರಾರಂಭವಾಗಲಿ, ಸ್ವಲ್ಪಕಾಲ ಯುದ್ಧವನ್ನು ನೋಡೋಣ. ಅನಂತರ ಇವರಿಬ್ಬರಿಗೂ ಸ್ನೇಹವನ್ನು ಮಾಡಿ ಸೋಣ. ಎಂದು ಹೇಳಿ ಆ ಬ್ರಹ್ಮನು ಇವರ ಯುದ್ಧ ಕೌಶಲವನ್ನು ನೋಡುತ್ತ ನಿಂತನು.

೨೭. ಆಗ ಎರಡು ಸೈನ್ಯಗಳವರೂ ಯಂತ್ರದಿಂದ ಯುದ್ಧಮಾಡಲು ಮೊದಲುಮಾಡಿ ಅವುಗಳ ಧ್ವನಿಯು ಬಹುವಾಯಿತು ಆ ಯಂತ್ರಗಳಿಂದ ಹೊರಟ ಬೆಂಕಿಯ ಜ್ವಾಲೆಯು ಹತ್ತು ದಿಕ್ಕುಗಳನ್ನೂ ಆವರಿಸಿಕೊಂಡಿತು.

೨೮. ಯಂತ್ರದಿಂದ ಹೊರಟ ಬಗೆ ಬಗೆಯ ಗುಂಡುಗಳು ಅವರನ್ನು ಕೊಲ್ಲುತ್ತ ಬಂದುವು. ಫಿರಂಗಿಗಳಿಂದಲೂ ಒಬ್ಬರನ್ನೊಬ್ಬರು ಕೊಲ್ಲುತ್ತ ಬಂದರು ಅವುಗಳನ್ನು ಗಾಡಿಯಲ್ಲಿಟ್ಟುಕೊಂಡು ಎತ್ತಬೇಕಾದ ರತ್ತ ತಿರುಗಿಸುತ್ತ, ಬೇಕಾದ ಕಡೆಗೆ ತೆಗೆದುಕೊಂಡು ಹೋಗುತ್ತ ಅವುಗಳಿಂದ ಕೊಲ್ಲುತ್ತ ಬಂದರು.

ತಥಾ ವೀರಾ ನಿಜಘ್ನುಸ್ತೇ ಬಾಣೈಃ ಖಡ್ಗೈಃ ಪರಶ್ವಧೈಃ ।
ಪರಸ್ಪರಂ ತೋಮರೈಶ್ಚ ಭಿಂದಿವಾಲೈಶ್ಚ ಮುದ್ಗರೈಃ ॥ ೨೯ ॥

ಪರಿಘೈಶ್ಚಕ್ರಬಾಣೈಶ್ಚ ಕುಂತೈಶ್ಶೂಲೈಶ್ಚ ಪಟ್ಟಿಶೈಃ ।
ತದಾ ಜಘಾನ ಪಿತರಂ ಪುತ್ರಃ ಪುತ್ರಂ ತಥಾ ಪಿತಾ ॥ ೩೦ ॥

ಪಿತಾಮಹಾಸ್ತಥಾ ಪೌತ್ರಂ ಪೌತ್ರಶ್ಚಾಪಿ ಪಿತಾಮಹಂ ।
ಅನ್ಯೋಽನ್ಯಂ ಕುಲಜಾತ್ಯಾಖ್ಯಾದಿಕಂ ಸಂಶ್ರಾವ್ಯ ವೈ ಮುಹುಃ ॥ ೩೧ ॥

ತಥಾ ರಣೇ ಪ್ರಪೌತ್ರಾಯ ಜಘಾನ ಪ್ರಪಿತಾಮಹಃ ।
ತದಾ ಬಾಣೈಃ ಪ್ರಪೌತ್ರೋಽಪಿ ಜಘಾನ ಪ್ರಪಿತಾಮಹಂ ॥ ೩೨ ॥

ಮಾತಾಮಹಂ ತು ದೌಹಿತ್ರಸ್ತದಾ ಬಾಣೈಃ ಪ್ರತಾಡಯತ್ ।
ತಥಾ ಮಾತಾಮಹಶ್ಚಾಪಿ ದೌಹಿತ್ರಾಯ ರಣೇಽಹನತ್ ॥ ೩೩ ॥

೨೯-೩೧. ಅಂತೆಯೇ ವೀರರೂ ಕೂಡ ತಮ್ಮ ಹರಿತವಾದ ಖಡ್ಗಗಳಿಂದಲೂ ಬಾಣಗಳಿಂದಲೂ ಕೊಡಲಿಗಳಿಂದಲೂ, ತೋಮರಗಳಿಂದಲೂ ಭಿಂದಿವಾಲಗಳಿಂದಲೂ, ಮುದ್ಗರಗಳಿಂದಲೂ, ಪರಿಘಗಳಿಂದಲೂ, ಚಕ್ರಬಾಣಗಳಿಂದಲೂ, ಕುಂತ ಶೂಲ, ಪಟ್ಟಿಶಗಳಿಂದಲೂ ಹೋರಾಡುತ್ತ ಬಂದರು. ಆ ಕಾಲದಲ್ಲಿ ತಂದೆಯು ಮಗನಮೇಲೆ ಯುದ್ಧಮಾಡುತ್ತಲೂ, ಮಗನು ತಂದೆಯ ಮೇಲೆ ಯುದ್ಧಮಾಡುತ್ತಲೂ, ಹೊಡೆಯುತ್ತಲೂ ಬಂದರು. ಅಂತೆಯೇ ತಾತನು ಮೊಮ್ಮಗನನ್ನೂ, ಮೊಮ್ಮಗನು ತಾತನನ್ನು ಅವರವರ ಕುಲವನ್ನೂ ಹೇಳುತ್ತಾ ಬಾಣಗಳಿಂದ ಹೊಡೆಯುತ್ತ ಬಂದರು.

೩೨. ಅಂತೆಯೇ ತಾತನ ತಂದೆಯು, ಮೊಮ್ಮಗನೊಡನೆಯೂ, ಮೊಮ್ಮಗನ ಮಗನು ತಾತನ ತಂದೆಯೊಡನೆಯೂ ಬಾಣಗಳಿಂದ ಹೊಡೆದಾಡಿದರು.

೩೩. ಮಾತಾಮಹನು ದೌಹಿತ್ರನನ್ನೂ, ದೌಹಿತ್ರನು ಮಾತಾಮಹನನ್ನೂ ಬಾಣಗಳಿಂದ ಹೊಡೆಯುತ್ತ ಆ ರಣದಲ್ಲಿ ಹೊಡೆದಾಡಿದರು.

ಏವಂ ಪರಸ್ಪರಂ ಚಾಸೀದ್ಯುದ್ಧಂ ತಲ್ಲೋಮಹರ್ಷಣಂ ।
ತತ್ರ ಯೋ ಯೋ ಹತಾ ವೀರಾಸ್ಸಂಗರೇ ರಾಮಸೇವಕಾಃ ॥ ೩೪ ॥

ತಾನ್ ಸರ್ವಾನ್ ಜೀವಯಾಮಾಸ ತದಾ ಪವನನಂದನಃ ।
ದ್ರೋಣಾಚಲೌಷಧೀಭಿಶ್ಚ ವಾರಂ ವಾರಂ ಸ್ವಸೈನಿಕಾನ್ ॥ ೩೫ ॥

ರಿಪುಸೈನ್ಯೇ ಮೃತಾ ಯೇ ಯೇ ತೇ ಮೃತಾ ಏವ ನೋತ್ಥಿತಾಃ ।
ಏವಂ ತದಾ ಸೋಮವಂಶನೃಪಾಸ್ತೇ ಕ್ಷೀಣತಾಂ ಯಯುಃ ॥ ೩೬ ॥

ತದಾ ಲೋಹಿತಪೂರಾ ಸಾ ಬಭೂವ ಸುರನಿಮ್ನಗಾ ।
ಅರ್ಕಪದ್ಮಮಿತಾ ಸೇನಾ ನಲಾದೀನಾಂ ತದಾ ರಣೇ ॥ ೩೭ ॥

ನಿಪಾತಿತಾ ರಾಘುವೀಯೈರ್ನೃಪೈಃ ಸಾ ಪರಸಂಗರೈಃ ।
ಏವಂ ಬಭೂವ ಸಮರಃ ಷಣ್ಮಾಸಂ ಹಸ್ತಿನಾಪುರೇ ॥ ೩೮ ॥

೩೪–೩೫. ಈ ರೀತಿಯಾಗಿ ಯುದ್ಧವು ನಡೆಯುತ್ತ ಕ್ರೂರವಾಗಿ ರೋಮಾಂಚಕರವಾಗಿದ್ದಿತು. ಆ ಯುದ್ಧದಲ್ಲಿ ರಾಮನ ಸೇವಕರು ಯಾರು ಯಾರು ಸತ್ತರೋ ಅವರೆಲ್ಲರನ್ನೂ ಹನುಮಂತನು ದ್ರೋಣಾಚಲದಿಂದ ಔಷಧಿಯನ್ನು ತಂದು ತಂದು ಬದುಕಿಸುತ್ತಿದ್ದನು.

೩೬. ಶತ್ರುಗಳ ಸೈನ್ಯದಲ್ಲಿ ಸತ್ತವರು ಅಂತೆಯೇ ಸತ್ತುಹೋಗುತ್ತಿದ್ದರು. ಏಳುತ್ತಲೇ ಇರಲಿಲ್ಲ. ಈ ರೀತಿಯಾಗಿ ಸೋಮವಂಶದರಾಜರು ನಾಶವಾಗುತ್ತ ಬಂದರು.

೩೭–೩೮. ಆ ರಣರಂಗದಲ್ಲಿ ನಡೆದ ಯುದ್ಧದಿಂದ ಹರಿದರಕ್ತವು ಗಂಗಾ ನದಿಯಲ್ಲಿ ಸೇರಿ ಆ ನೀರೆಲ್ಲವೂ ರಕ್ತಮಯವಾಯಿತು ನಲನದೂ ಮತ್ತು ಅವನ ಸಾಮಂತರಾಜರ ಸೇನೆಯೂ ಕೂಡಿ ಹನ್ನೆರಡು ಪದ್ಮಗಳಷ್ಟು ಇದ್ದಿತು. ಇವೆಲ್ಲವನ್ನೂ ಶ್ರೀರಾಮನ ಸೈನಿಕರು ಯುದ್ಧದಲ್ಲಿ ಕೊಂದುಹಾಕಿದರು. ಈ ರೀತಿಯಾಗಿ ಯುದ್ಧವು ಆ ಹಸ್ತಿನಾಪುರದಲ್ಲಿ ಆರುತಿಂಗಳವರೆಗೆ ನಡೆಯಿತು.

ತತಸ್ತೇ ಸೋಮವಂಶಸ್ಥಾ ನೃಪಾಃ ಕಿಂಚಿದ್ಬಲೈರ್ಯುತಾಃ |
ವಿಷಣ್ಣಾ ವಿಗತೋತ್ಸಾಹಾ ನಿರ್ಯಯುಃ ಸಂಗರಂ ಸ್ವಯಂ || ೩೯ ||

ತಾನಾಗತಾಂಸ್ತದಾ ವೀಕ್ಷ್ಯ ಕುಶಾದ್ಯಾ ಬಾಲಕಾಶ್ಚ ತೇ |
ರಾಮಾದೀನಾಂ ಯಯುಸ್ತ್ವಗ್ರೇ ರಥಸ್ಥಾ ರಣಭೂತಲಂ || ೪೦ ||

ನಲಂ ಯಯೌ ಕುಶಶ್ಶೀಘ್ರಂ ನದ್ಯುಕಂ ಸ ಯಯೌ ಲವಃ |
ಜಾತೀಕರಮಂಗದಶ್ಚ ತಥಾ ಚ ವಸುದಂ ನೃಪಂ || ೪೧ ||

ಚಿತ್ರಕೇತುರ್ಯಯೌ ಶೀಘ್ರಂ ತಥಾ ಲಘುಶ್ರುತಂ ನೃಪಂ |
ಯಯೌ ಸುಪುಷ್ಕರಃ ಶೀಘ್ರಂ ತಕ್ಷಕಃ ಸುರಥಂ ಯಯೌ || ೪೨ ||

ಅಜಮೀಢಂ ಸುಬಾಹುಶ್ಚ ಯೂಪಕೇತುರ್ಯಯೌ ಬಲಂ |
ಯೂಪಕೇತುರ್ಹಿ ತತ್ಸೈನ್ಯಂ ಚಕಾರಾಗೋಚರಂ ಶರೈಃ || ೪೩ ||

---

೩೯. ಅನಂತರ ಈ ಸೋಮವಂಶದವರ ಸೈನ್ಯವು ಸ್ವಲ್ಪವೇ ಉಳಿದುಕೊಂಡಿತು. ಇದರಿಂದ ಅವರು ದುಃಖಿತರಾಗಿ ಉತ್ಸಾಹವನ್ನು ತೊರೆದರು. ಇದರಿಂದ ಬೇಸರಬಂದು ತಾವಾಗಿಯೇ ಯುದ್ಧಕ್ಕೆ ಹೊರಟರು.

೪೦. ಆ ನಲಾದಿಗಳು ಬಂದುದನ್ನು ನೋಡಿ ಕುಶನೇ ಮುಂತಾದ ಬಾಲಕರು ತಾವೂ ಯುದ್ಧಕ್ಕೆ ಹೊರಟರು. ಮುಂದೆ ಕುಶಾದಿಗಳೂ ಅವರ ಹಿಂದೆ ರಾಮನೂ ಅವನ ತಮ್ಮಂದಿರೂ ಹೊರಟರು.

೪೧-೪೩. ಕುಶನು ನಳನನ್ನು ಎದುರಿಸಿದನು. ನದ್ಯುಕನನ್ನು ಲವನು ಎದುರಿಸಿದನು. ಜಾತೀಕರನನ್ನು ಅಂಗದನೂ, ವಸುದನನ್ನು ಚಿತ್ರಕೇತುವೂ, ಲಘುಶ್ರುತನನ್ನು ಪುಷ್ಕರನೂ, ಸುರಥನನ್ನು ತಕ್ಷಕನೂ, ಅಜಮೀಢನನ್ನು ಸುಬಾಹುವೂ ಸೈನ್ಯವನ್ನು ಯೂಪಕೇತುವೂ ಎದುರಿಸಿದರು ಯೂಪಕೇತುವು ಆ ಸೈನ್ಯವೆಲ್ಲವನ್ನೂ ಕ್ಷಣಕಾಲದಲ್ಲಿ ಕಣ್ಣಿಗೆ ಕಾಣದಂತೆ ಮಾಡಿದನು.

ವಾಯವ್ಯಾಸ್ತ್ರೇಣ ಚಿಕ್ಷೇಪ ಲವಸ್ತಲ್ಲವಣಾಂಭಸಿ ।
ತದಾ ತೇ ಸಪ್ತವೀರಾಶ್ಚ ನೀಲಾದ್ಯಾಃ ಪರ್ವತಾ ಇವ ॥ ೪೪ ॥

ಯುಯುಧೂ ರಘುವೀರಸ್ಯ ಬಾಲಕೈಸ್ಸಹ ಸಂಗರೇ ।
ನ ವಿರೇಜುರ್ಬಲೈರ್ಹೀನಾ ಸ್ಕಂಧಹೀನನ ಗೋಪಮಾಃ ॥ ೪೫ ॥

ಕುಶೋ ವಿವ್ಯಾಧ ಬಾಣೈಸ್ತಂ ನಲಂ ಸಂಗ್ರಾಮಮೂರ್ಧನಿ ।
ತದಾ ನಲಃ ಪ್ರಭಿನ್ನಾಂಗಃ ಸ್ವಬಾಣೈಸ್ತಂ ವ್ಯತರ್ಜಯತ್ ॥ ೪೬ ॥

ತತಃ ಕುಶಃ ಸ್ವಬಾಣೌಘೈರ್ನಲಸ್ಯಾಶ್ವಾನ್ ಧ್ವಜಂ ಧನುಃ ।
ಛತ್ರಂ ಸಾರಥಿನಂ ಛಿತ್ವಾ ನಲಂ ಬಾಣೈರತಾಡಯತ್ ॥ ೪೭ ॥

ನದ್ಯುಕಂ ಚಾಪಿ ವಿವ್ಯಾಧ ಸ್ವಬಾಣೌಘೈರ್ಲವಸ್ತದಾ ।
ನದ್ಯುಕಶ್ಚ ಲವಂ ಬಾಣೈಸ್ತದಾ ವ್ಯಾಕುಲಮಾತನೋತ್ ॥ ೪೮ ॥

೪೪-೪೫. ಲವನು ವಾಯುವ್ಯಾಸ್ತ್ರವನ್ನು ಹೂಡಿ ಆ ಸೈನ್ಯವೆಲ್ಲವನ್ನೂ ಲವಣಸಮುದ್ರದಲ್ಲಿ ಬೀಳುವಂತೆ ಎಸೆದನು. ಆಗ ಆ ನಲನೇ ಮುಂತಾದ ಏಳುಜನ ವೀರರು ಪರ್ವತಗಳಂತೆ ಅಚಲರಾಗಿ ಆ ರಾಮನ ಮಕ್ಕಳಸಂಗಡ ಯುದ್ಧಮಾಡಿದರು. ಅವರಿಗೆ ಸೈನ್ಯವು ನಷ್ಟವಾದುದರಿಂದ ಕೊಂಬೆಗಳಿಲ್ಲದ ಮರಗಳಂತಾಗಿ ಶೋಭಿಸದಿದ್ದರು.

೪೬. ಕುಶನು ಬಾಣಗಳನ್ನು ಬಿಟ್ಟು ನಲನನ್ನು ಹೊಡೆದನು. ಇದರಿಂದ ನಲನಿಗೆ ನೋವಾಗಿ ಆ ನಲನು ಕುಶನಮೇಲೆ ಬಾಣಗಳನ್ನು ಬಿಟ್ಟು ನೋಯಿಸಿದನು.

೪೭. ಅನಂತರ ಕುಶನು ಬಾಣಗಳನ್ನು ಬಿಟ್ಟು ಆ ನಲನ ಕುದುರೆಗಳನ್ನೂ ಧ್ವಜವನ್ನೂ, ಧನುಸ್ಸನ್ನೂ, ಛತ್ರವನ್ನೂ, ಸಾರಥಿಯನ್ನೂ, ನಾಶಮಾಡಿ ಆ ನಲನನ್ನು ಬಹುವಾಗಿ ಹೊಡೆದನು.

೪೮-೪೯. ಲವನು ಸದ್ಯುಕನನ್ನು ಬಾಣಗಳಿಂದ ಹೊಡೆದನು ನದ್ಯುಕನು ಬಾಣಗಳಿಂದ ಆ ಲವನನ್ನೂ ಬಹುವಾಗಿ ಹೊಡೆದನು. ಆಗ ಲವನು

ನದ್ಯುಕಂ ನಿಜಬಾಣೌಘೈಶ್ಚಕಾರ ವಿರಥಂ ಲವಃ ।
ಏವಂ ಜಾತೀಕರಂ ಬಾಣೈರಂಗದಸ್ಸಂಪ್ರತಾಡಯತ್ ॥ ೪೯ ॥

ಪ್ರತಾಡಯಜ್ಜಾತೀಕರಃ ಪರಿಘೇಣಾಂಗದಂ ತದಾ ।
ತತೋ ಜಾತೀಕರಂ ಬಾಣೈರಂಗದೋಽಪಾತಯದ್ಭುವಿ ॥ ೫೦ ॥

ಚಿತ್ರಕೇತುಸ್ಸ್ವಬಾಣೌಘೈಃ ಕ್ರೋಶೇನ ವಸುದಂ ನೃಪಂ ।
ಚಿಕ್ಷೇಪ ಸ್ಯಂದನಾದ್ವೇಗಾತ್ತದದ್ಭುತಮಿವಾಭವತ್ ॥ ೫೧ ॥

ತಥಾ ಲಘುಶ್ರುತೋ ಬಾಣೈರ್ಹೃದಿ ವಿದ್ಧ್ವಾಥ ಪುಷ್ಕರಂ ।
ತದಾ ಸ ಪುಷ್ಕರಃ ಕ್ರೋಧಾದ್ಬಾಣೈರ್ಲಘುಶ್ರುತಂ ರಥೇ ॥ ೫೨ ॥

ಭಿತ್ತಿಚಿತ್ರೋಪಮಂ ಕೃತ್ವಾ ನಾದಯಾಮಾಸ ದುಂದುಭಿಂ ।
ಸುರಥಶ್ಚಾಪಿ ತತ್ಕ್ಷಣಂ ಸ ವವರ್ಷ ಶರವೃಷ್ಟಿಭಿಃ ॥ ೫೩ ॥

ಬಾಣಗಳನ್ನು ಬಿಟ್ಟು ನದ್ಯುಕನನ್ನು ವಿರಥನನ್ನಾಗಿ ಮಾಡಿದನು. ಇದೇ ರೀತಿಯಾಗಿ ಅಂಗದನು ಜಾತೀಕರನನ್ನೂ ಬಾಣಗಳಿಂದ ಹೊಡೆದನು.

೫೦. ಒಡನೆಯೇ ಜಾತೀಕರನು ಪರಿಘವನ್ನು ತೆಗೆದುಕೊಂಡು ಅಂಗದನನ್ನು ಹೊಡೆದನು. ಆಗ ಅಂಗದನು ಬಾಣಗಳನ್ನು ಬಿಟ್ಟು ಆ ಜಾತೀಕರನನ್ನು ನೆಲದ ಮೇಲೆ ಬೀಳಿಸಿದನು.

೫೧. ಚಿತ್ರಕೇತುವು ಬಾಣಗಳನ್ನು ಬಿಟ್ಟು ವಸುದನನ್ನು ಒಂದು ಕ್ರೋಶದ ದೂರಕ್ಕೆ ಎಸೆದನು. ಇದು ಬಹು ವಿಚಿತ್ರವಾಗಿದ್ದಿತು.

೫೨–೫೩. ಲಘುಶ್ರುತನು ಬಾಣಗಳಿಂದ ಪುಷ್ಕರನನ್ನು ಎದೆಯಮೇಲೆ ಹೊಡೆದನು. ಪುಷ್ಕರನು ಆ ಲಘುಶ್ರುತನಮೇಲೆ ಬಾಣಗಳನ್ನು ಬಿಟ್ಟು ಅವನನ್ನು ರಥದಲ್ಲಿ ಬೊಂಬೆಯು ಕುಳಿತಿರುವಂತೆ ಮಾಡಿಬಿಟ್ಟನು. ಆ ಸಂತೋಷಕ್ಕೆ ದುಂದುಭಿಯನ್ನು ಹೊಡೆಸಿದನು. ಸುರಥನು ತಕ್ಷನಮೇಲೆ ಬಾಣಗಳ ಮಳೆಯನ್ನೇ ಕರೆದನು.

ತತಸ್ತು ಕ್ಷಃ ಸ್ವಬಾಣೌಘೈಸ್ಸುರಥಂ ಗಗನಾಂಗಣೇ ।
ಸರಥಂ ಭ್ರಾಮಯಾಮಾಸ ಶುಷ್ಕಪರ್ಣಂ ಯಥಾ ಮರುತ್ ॥ ೫೪ ॥

ಅಜಮೀಢಸ್ತದಾ ಸರ್ವಾನ್ ಪೂರ್ವಜಾನ್ ವ್ಯಾಕುಲೀಕೃತಾನ್ ।
ವೀಕ್ಷ್ಯ ರಾಮಾತ್ಮಜಾದ್ಯೈಸ್ತೈರ್ವವರ್ಷ ಶರವೃಷ್ಟಿಭಿಃ ॥ ೫೫ ॥

ಸುಬಾಹುಸ್ತಂ ಸ್ವಬಾಣೌಘೈಶ್ಚಕಾರ ವಿರಥಂ ತದಾ ।
ಅಜಮೀಢಸ್ತತೋನ್ಯೇ ಸ ರಥೇ ಸ್ಥಿತ್ವಾ ಯಯೌ ಪುನಃ ॥ ೫೬ ॥

ಮುಮೋಚ ಪವನಾಸ್ತ್ರಂ ಸ ಕುಶಾದೀನಾಂ ವಧೇ ಕ್ರುಧಾ ।
ತಂ ದೃಷ್ಟ್ವಾ ಯೂಪಕೇತುಸ್ತಂ ಪನ್ನಗಾಸ್ತ್ರಂ ಮುಮೋಚ ಸಃ ॥ ೫೭ ॥

ತದಾ ತೇ ಕೋಟಿಶಸ್ಸರ್ಪಾಃ ಪ್ರಪಿಬುಃ ಕಂಪನಂ ಕ್ಷಣಾತ್ ।
ರಥಸ್ಥಸ್ಸ ನಲಸ್ಸರ್ಪಾನ್ ದೃಷ್ಟ್ವಾ ಗರುಡಮುತ್ತಮಂ ॥ ೫೮ ॥

---

೫೪. ತಕ್ಷನು ಆ ಸುರಥನಮೇಲೆ ಬಾಣವನ್ನು ಬಿಟ್ಟು ಅವನನ್ನು ರಥನ ಸಂಗಡಲೇ ಅಂತರಿಕ್ಷಕ್ಕೆ ಎಸೆದು ಅಲ್ಲಿ ಒಣಗಿದ ತರಗೆಲೆಯು ಸುತ್ತುವಂತೆ ಗಿರ್ರನೆ ತಿರುಗಿಸಿದನು.

೫೫. ಅಜಮೀಢನು ತನ್ನ ತಂದೆ ತಾತ ಮುತ್ತಾತಂದಿರು ರಾಮನ ಮಕ್ಕಳಿಂದ ತೊಂದರೆಪಡುತ್ತಿರುವುದನ್ನು ನೋಡಿ ಆ ವೀರರಮೇಲೆ ಬಾಣದ ಮಳೆಯನ್ನೇ ಸುರಿಸಿದನು.

೫೬. ಆಗ ಸುಬಾಹುವು ಬಾಣಗಳನ್ನು ಬಿಟ್ಟು ಆ ಅಜಮೀಢನ ರಥವನ್ನು ನಾಶಮಾಡಿದನು. ಅಜಮೀಢನು ಒಡನೆಯೇ ಮತ್ತೊಂದು ರಥದ ಮೇಲೆ ಕುಳಿತು ಯುದ್ಧಕ್ಕೆ ಬಂದನು.

೫೭. ಒಡನೆಯೇ ಕೋಪಗೊಂಡು ಲವನೇ ಮುಂತಾದವರನ್ನು ಕೊಲ್ಲಲು ವಾಯುವ್ಯಾಸ್ತ್ರವನ್ನು ಬಿಟ್ಟನು. ಇದನ್ನು ಯೂಪಕೇತುವು ನೋಡಿ ಸರ್ಪಾಸ್ತ್ರವನ್ನು ಬಿಟ್ಟನು.

೫೮. ಆದರಿಂದ ಕೋಟಿಸಂಖ್ಯೆಯಲ್ಲಿ ಸರ್ಪಗಳು ಹೊರಟು ಆ ಗಾಳಿಯನ್ನೆಲ್ಲಾ ಕುಡಿದುಬಿಟ್ಟುವು. ರಥದಲ್ಲಿ ಕುಳಿತಿದ್ದ ನಲನು ಆ ಸರ್ಪಗಳನ್ನು ನೋಡಿ ಗಾರುಡಾಸ್ತ್ರವನ್ನು ಬಿಟ್ಟನು.

ಮುಮೋಚ ಪನ್ನಗಾಸ್ತ್ರಸ್ಯ ನಿವೃತ್ತ್ಯರ್ಥಂ ತದಾಸ್ತ್ರವಿತ್ ।
ತದಾ ಕುಶಃ ಪ್ರಮುಮೋಚ ರಾಕ್ಷಸಾಸ್ತ್ರಂ ಭಯಾವಹಂ ॥ ೫೯ ॥

ನದ್ಯುಕಶ್ಚ ತದಾ ವೇಗಾದ್ವಹ್ನ್ಯಸ್ತ್ರಂ ತಂ ಮುಮೋಚ ಸಃ ।
ತದಾ ಕ್ರೋಧಾಲ್ಲವಶ್ಚಾಪಿ ಮೇಘಾಸ್ತ್ರಂ ತಂ ವ್ಯಸರ್ಜಯತ್ ॥ ೬೦ ॥

ತದಾ ಲಘುಶ್ರುತಶ್ಚಾಪಿ ಪವನಾಸ್ತ್ರಂ ಮುಮೋಚ ಸಃ ।
ತದಾ ಸ ಹನುಮಾನ್ ಶೀಘ್ರಂ ವ್ಯಾದಾಯ ವಿಕಟಾನನಂ ॥ ೬೧ ॥

ಪ್ರಪಿಬನ್ಮಾರುತಂ ವೇಗಾನ್ನನಾದ ಜಲದಸ್ವನಃ ।
ಏವಂ ತಚ್ಚ ಮಹದ್ಯುದ್ಧಂ ಪುಷ್ಪಕಾರಾಮಸಂಸ್ಥಿತೌ ॥ ೬೨ ॥

ಸೀತಾರಾಮೌ ಮುದಾ ಯುಕ್ತೌ ಲಕ್ಷ್ಮಣಾದ್ಯೈರ್ದದರ್ಶತುಃ ।
ಏವಂ ಯುದ್ಧಂ ಪಂಚಮಾಸಾನ್ ಸೈಕಾದಶದಿನಾನ್ಯಭೂತ್ ॥ ೬೩ ॥

---

೫೯. ಗರುಡನು ಆ ಸರ್ಪಗಳೆಲ್ಲವನ್ನೂ ತಿನ್ನಲೆಂಬ ಉದ್ದೇಶದಿಂದ ನಲನು ಗಾರುಡಾಸ್ತ್ರವನ್ನು ಬಿಡಲು ಕುಶನು ಇದನ್ನು ನೋಡಿ ಭಯಂಕರವಾದ ರಾಕ್ಷಸಾಸ್ತ್ರವನ್ನು ಬಿಟ್ಟನು.

೬೦. ಇದನ್ನು ನೋಡಿ ನದ್ಯುಕನು ಆ ರಾಕ್ಷಸಾಸ್ತ್ರದ ನಿವೃತ್ತಿಗೋಸ್ಕರ ಆಗ್ನೇಯಾಸ್ತ್ರವನ್ನು ಬಿಟ್ಟನು. ಇದರಿಂದ ಲವನಿಗೆ ಕೋಪಬಂದು ಆ ಆಗ್ನೇಯಾಸ್ತ್ರದಮೇಲೆ ಮೇಘಾಸ್ತ್ರವನ್ನು ಬಿಟ್ಟನು.

೬೧-೬೨. ಇದನ್ನು ನೋಡಿ ಲಘುಶ್ರುತನು ಆ ಮೇಘಗಳಮೇಲೆ ವಾಯುವ್ಯಾಸ್ತ್ರವನ್ನು ಪ್ರಯೋಗಿಸಿದನು. ಇದನ್ನು ವಾಯುನಂದನನಾದ ಹನುಮಂತನು ನೋಡಿ ತನ್ನ ಬಾಯನ್ನು ಹೆದರಿಕೆಯಾಗುವಂತೆ ತೆಗೆದುಕೊಂಡು ಆ ಗಾಳಿಯೆಲ್ಲವನ್ನು ಕುಡಿದು ಮೇಘದಂತೆ ಗರ್ಜಿಸಿದನು.

೬೩. ಈ ರೀತಿಯಾಗಿ ಯುದ್ಧವು ನಡೆಯುತ್ತಿರಲು ಸೀತಾರಾಮರು ಪುಷ್ಪಕಾರಾಮದಲ್ಲಿ ಸುಖವಾಗಿ ಕುಳಿತುಕೊಂಡು ಲಕ್ಷ್ಮಣನೇ ಮುಂತಾದವರುಗಳೊಡನೆ ನೋಡುತ್ತಿದ್ದರು. ಈ ರೀತಿಯಾಗಿ ಯುದ್ಧವು ಐದುತಿಂಗಳೂ ಹನ್ನೊಂದು ದಿನಗಳೂ ನಡೆಯಿತು.

ಏಕಾದಶೇ ದಿನೇ ಮಾರ್ಗೇ ಗತಾಸ್ತೇಽಸ್ಮಿನ್ ಸಮೀರಿತಾಃ ।
ಏವಮೇಕಾದಶೈರ್ಮಾಸೈರೇಕಾದಶದಿನೈರಪಿ ॥ ೬೪ ॥

ತ್ರೇತಾಯುಗಭವೈರ್ದಿವ್ಯೈಸ್ಸಮಾಪ್ತಿಸ್ಸಂಗರಸ್ಯ ಚ ।
ಅದೃಷ್ಟ್ವಾ ಸ ಕುಶೋ ವೇಗಾದ್ಬ್ರಹ್ಮಾಸ್ತ್ರಂ ಸಂದಧೇ ತದಾ ॥ ೬೫ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ಆದಿಕಾವ್ಯೇ ಪೂರ್ಣಕಾಂಡೇ ರಾಮದಾಸ
ವಿಷ್ಣುದಾಸ ಸಂವಾದೇ ಸೋಮವಂಶೋದ್ಭವನೃಪಾಣಾಂ
ಯುದ್ಧವರ್ಣನಂ ನಾಮ ತೃತೀಯಸ್ಸರ್ಗಃ ಸಮಾಪ್ತಃ

೬೪-೬೫. ಹಿಂದಿನ ದಿನಗಳೂ, ಈಗಿನ ದಿನಗಳೂ, ಕೂಡಿ ಹನ್ನೊಂದು ತಿಂಗಳೂ, ಹನ್ನೊಂದು ದಿನಗಳೂ ಕಳೆದುವು. ತ್ರೇತಾಯುಗದಲ್ಲಿ ಈ ರೀತಿಯಾಗಿ ಕಳೆಯಲು ಯುದ್ಧಕ್ಕೆ ಪರಿಸಮಾಪ್ತಿಯಾಯಿತು. ಆಗ ಕುಶನು ಈ ಲಘು ಶ್ರುತಾದಿಗಳಮೇಲೆ ಬಿಟ್ಟ ಬಾಣಗಳು ಮಾರ್ಗದಲ್ಲಿಯೇ ಕಾಣದಂತಾಗಲು ಇದನ್ನು ಲವನು ನೋಡಿ ಕೋಪಗೊಂಡು ಬೇಗನೆ ಬ್ರಹ್ಮಾಸ್ತ್ರವನ್ನು ಹೂಡಿದನು.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗಗವಾದ
ಆದಿಕಾವ್ಯವಾದ ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ
ರಾಮದಾಸ ವಿಷ್ಣುದಾಸರ ಸಂವಾದದಲ್ಲಿ ಸೂರ್ಯವಂಶ ಚಂದ್ರವಂಶ
ದಲ್ಲಿ ಹುಟ್ಟಿದ ರಾಜರ ಯುದ್ಧವರ್ಣನವೆಂಬ ಮೂರನೆಯ
ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ ಮೂರನೆಯ ಸರ್ಗದ ಸಾರಾಂಶವು.

ಅಯೋಧ್ಯೆಯಿಂದ ಪ್ರಯಾಣಮಾಡಿದ ಶ್ರೀರಾಮನು ಹನ್ನೊಂದು ದಿನಗಳಲ್ಲಿ ಹಸ್ತಿನಾಪುರಕ್ಕೆ ಹೋದನು. ರಾಮನು ಬಂದುದನ್ನು ಕೇಳಿ ಸುಷೇಣನು ಬಂದು ಎದುರುಗೊಂಡನು. ಮತ್ತು ಎಲೈ ರಾಮನೇ! ನಿನ್ನ ಅನುಗ್ರಹದಿಂದ ಹದಿನಾಲ್ಕು ದಿನಗಳಿಂದಲೂ ಇವರೊಡನೆ ದುಷ್ಕರವಾದ ಯುದ್ಧವನ್ನು ಮಾಡಿದೆನು. ನಿನ್ನ ಮುಂದೆ ಇವರೆಲ್ಲಿ ಯುದ್ಧಕ್ಕೆ ನಿಂತಾರು! ಎಂದನು. ರಾಮನು ಜಾಹ್ನವಿಯ ಉತ್ತರದಡದಲ್ಲಿ ಪಾಳೆಯವನ್ನು ಬಿಟ್ಟು ರಿಪುಸೈನ್ಯವನ್ನು ನೋಡಿದನು. ಆದಿನರಾತ್ರಿಯನ್ನು ಕಳೆದು ಮಾರನೆಯ ದಿನ ಯುದ್ಧಕ್ಕೆ ಮೊದಲುಮಾಡಿದನು. ನಳನೇ ಮುಂತಾದವರೂ ಶತ್ರುಸೈನ್ಯವನ್ನು ನೋಡಿ ಹೆದರಿದವರಾಗಿ ಯುದ್ಧಕ್ಕೆ ಹೊರಟರು. ಆಗ ಇಬ್ಬರಿಗೂ ಘೋರವಾದ ಯುದ್ಧವು ನಡೆಯಿತು. ನಲನ ಸೈನಿಕರು ಸೋತರು. ಆಗ ನಲನೂ ತನ್ನ ಕಡೆಯ ಹಿಂದಿನ ವೀರರೂ ಯುದ್ಧಕ್ಕೆ ಹೊರಡಲು ಸುಗ್ರೀವನೇ ಮುಂತಾದವರೂ ಹೊರಟರು. ಇಬ್ಬರಿಗೂ ಯುದ್ಧವು ಮೊದಲಾಯಿತು.

ಬ್ರಹ್ಮನೂ ಸೋಮಬುಧರೂ ಇಂದ್ರನೂ ಆಕಾಶದಲ್ಲಿ ನಿಂತು ಈ ಯುದ್ಧದ ಕೌತುಕವನ್ನು ನೋಡುತ್ತಿದ್ದರು. ನಲಾದಿಗಳಿಗೆ ಬ್ರಹ್ಮನ ವರವುಂಟು ರಾಮನ್ ಸ್ವಯಂವಿಷ್ಣುನೇ ಆಗಿರುವನು. ಸೋಲುಗೆಲ್ಲುಗಳ ಸ್ಥಿತಿಯು ಹೇಳಲಾಗುವುದಿಲ್ಲ. ಎಂದೆನ್ನುತ್ತಾ ಸ್ವಲ್ಪಹೊತ್ತು ರಣವನ್ನು ನೋಡಿದರು. ಇಷ್ಟರವೇಳೆಗೆ ಆರುತಿಂಗಳಾಯಿತು. ಅನಂತರ ನಲಾದಿಗಳು ಮತ್ತಷ್ಟು ಸೈನ್ಯವನ್ನು ಸೇರಿಸಿಕೊಂಡು ಹೋಗಲು ಕುಶನೇ ಮುಂತಾದ ಬಾಲಕರು ಅವರನ್ನು ಎದುರಿಸಿದರು.

ರಾಮನ ಮಕ್ಕಳೂ ಅವನ ತಮ್ಮಂದಿರ ಮಕ್ಕಳೂ ನಲಾದಿಗಳೊಡನೆ ಅಸ್ತ್ರಪ್ರತ್ಯಾಸ್ತ್ರಗಳಿಂದ ಕೂಡಿದ ಮಹಾ ಯುದ್ಧವನ್ನು ಮಾಡಿದರು. ಈ ಯುದ್ಧವೂ ಐದುತಿಂಗಳೂ ಹನ್ನೊಂದು ದಿನಗಳೂ ನಡೆಯಿತು. ಒಟ್ಟಿನಲ್ಲಿ ವಾಲ್ಮೀಕಿಯು ಹೇಳಿದಂತೆ ಹನ್ನೊಂದು ತಿಂಗಳೂ ಹನ್ನೊಂದು ದಿನವೂ ಕಳೆದುವು. ಆಗ ಯುದ್ಧವು ಮುಗಿಯಿತು.

—o—o—

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಪೂರ್ಣಕಾಂಡೇ ಚತುರ್ಥಸ್ಸರ್ಗಃ

॥ ಶ್ರೀರಾಮದಾಸ ಉವಾಚ ॥

ಬ್ರಹ್ಮಾಸ್ತ್ರಂ ಸಂದಧಾನಂ ತಂ ದೃಷ್ಟ್ವಾ ವೇಧಾಸ್ಸುರೈಸ್ಸಹ ।
ಸೋಮೇನ ಚ ಬುಧೇನಾಪಿ ವಿಮಾನೇನ ಯಯೌ ಭುವಂ ॥ ೧ ॥

ವಿಮಾನಾದವರುಹ್ಯಾಥ ತದಾ ಬ್ರಹ್ಮಾ ಕುಶಂ ಯಯೌ ।
ಕುಶಂ ತಂ ಪ್ರಾರ್ಥಯಾಮಾಸ ಮಾ ತ್ವಮಸ್ತ್ರಂ ವಿಸರ್ಜಯ ॥ ೨ ॥

ಪಾಲಯಸ್ವ ವಚೋ ಮೇದ್ಯ ನಾಕೇ ಸೋಮಾಯ ವೈ ಮಯಾ ।
ದ್ವಾಪರಾಂತೇ ವರೋ ದತ್ತಸ್ತ್ವಜೇಯಾಶ್ಚ ರಣಾಜಿರೇ ॥ ೩ ॥

ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ ನಾಲ್ಕನೆಯ ಸರ್ಗವು

—೦—೦—

೧. ಶ್ರೀರಾಮದಾಸನು ಹೇಳಿದನು--ಈ ಕುಶನು ಬ್ರಹ್ಮಾಸ್ತ್ರವನ್ನು ಹೂಡುತ್ತಿರುವುದನ್ನು ಬ್ರಹ್ಮನು ನೋಡಿ ತಾನು ದೇವತೆಗಳನ್ನೂ ಸೋಮನನ್ನೂ ಬುಧನನ್ನೂ ಕರೆದುಕೊಂಡು ವಿಮಾನದಲ್ಲಿ ಕುಳಿತು ಭೂಮಿಗೆ ಬಂದನು.

೨. ಒಡನೆಯೇ ವಿಮಾನದಿಂದ ಇಳಿದು ನೆಲದಮೇಲಕ್ಕೆ ಬಂದು ಕುಶನ ಬಳಿಗೆ ಆ ಬ್ರಹ್ಮನು ಹೋದನು. ಕುಶನನ್ನು ಕುರಿತು ಎಲೈ ಕುಶನೇ ! ನೀನು ಬ್ರಹ್ಮಾಸ್ತ್ರವನ್ನು ಬಿಡಬೇಡ.

೩-೪. ನನ್ನ ಮಾತನ್ನು ಗೌರವಿಸಿ ಕೇಳು. ಪೂರ್ವದಲ್ಲಿ ನಲಾದಿಗಳು ಸ್ವರ್ಗಕ್ಕೆ ಬಂದಿದ್ದಾಗ ದ್ವಾಪರಾಂತ್ಯದಲ್ಲಿ ನೀವು ಅಜೇಯರಾಗಿರಿ. ನಿಮ್ಮ

ಭವಿಷ್ಯಂತಿ ನಲಾದ್ಯಾಶ್ಚ ಸರ್ವೇ ಯುಷ್ಮತ್ಕುಲೋದ್ಭವಾಃ ।
ಪುರಾ ತ್ವಿತಿ ಸುರಾಗ್ರೇ ಹಿ ಕಸ್ಮಿಂಶ್ಚಿತ್ಕಾರಣಾಂತರೇ ॥ ೪ ॥

ಅತಸ್ತ್ವಂ ಕುಶ ಮಾಸ್ತ್ರಂ ಮೇ ನಲಾದ್ಯೇಷು ವಿಸರ್ಜಯ ।
ತದ್ಬ್ರಹ್ಮವಚನಂ ಶ್ರುತ್ವಾ ಕುಶೋ ವಾಕ್ಯಮಥಾಬ್ರವೀತ್ ॥ ೫ ॥

ಅಧುನಾ ಕ್ಷಣಮಾತ್ರೇಣ ಸರ್ವಾನ್ ದಗ್ಧಾನ್ ಕರೋಮ್ಯಹಂ ।
ನೋ ಚೇತ್ಕಥಯ ರಾಮಾಯ ತಸ್ಯಾಜ್ಞಾಂ ಮಾನಯಾಮ್ಯಹಂ ॥ ೬ ॥

ಯದಾ ತ್ವಯಾ ವರೋ ದತ್ತಸ್ತದಾ ಕಿಂ ವಿದಿತಂ ತವ ।
ನಾಸೀಚ್ಛ್ರೀರಾಮಸಾಮರ್ಥ್ಯಂ ಹ್ಯಧುನಾ ಪ್ರಾರ್ಥ್ಯಸೇ ಮುಧಾ ॥ ೭ ॥

ತ್ವಯಿ ಚೇದ್ವರ್ತತೇ ಕಿಂಚಿತ್ಸಾರಂ ಕರ್ತುಂ ರಣಂ ಮಯಾ ।
ತರ್ಹಿ ಕುರುಷ್ವ ಸಾಹಾಯ್ಯಂ ನಳಾದೀನಾಂ ಸುರೈರ್ಯುತಃ ॥ ೮ ॥

ವಂಶದವರು ಅಜೇಯರಾಗಿರಲಿ ಎಂದ ಯಾವುದೋ ಒಂದು ಕಾರಣಕ್ಕೋಸ್ಕರ ವರವನ್ನು ಕೊಟ್ಟಿರುವೆನು.

೫. ಆದ್ದರಿಂದ ಈ ಬ್ರಹ್ಮಾಸ್ತ್ರವನ್ನು ಆ ನಲಾದಿಗಳಮೇಲೆ ಬಿಡಬೇಡ ಎಂದು ಹೇಳಲು ಬ್ರಹ್ಮನ ಈ ಮಾತನ್ನು ಕೇಳಿ ಕುಶನು ಅವನನ್ನು ಕುರಿತು ಇಂತೆಂದನು

೬ ಎಲೈ ಬ್ರಹ್ಮನೇ! ಈಗಲೇ ಇವರೆಲ್ಲರನ್ನೂ ಕ್ಷಣಕಾಲದಲ್ಲಿಯೇ ಸುಟ್ಟುಹಾಕಿಬಿಡುವೆನು. ನಾನು ನಿನ್ನ ಮಾತನ್ನು ಮನ್ನಿಸುವುದಿಲ್ಲ. ಇದನ್ನು ಶ್ರೀರಾಮನಿಗೆ ಹೇಳು. ನಾನು ಆ ಶ್ರೀರಾಮನ ಮಾತನ್ನು ಗೌರವಿಸುವೆನೇ ಹೊರತು ನಿನ್ನ ಮಾತನ್ನು ಗೌರವಿಸುವಂತಿಲ್ಲ.

೭. ನೀನು ಅವರಿಗೆ ವರವನ್ನು ಕೊಟ್ಟಾಗ ನಿನಗೆ ಭೂಮಿಯಲ್ಲಿ ರಾಮನಿರುವನು, ಅವನ ಸಾಮರ್ಥ್ಯವು ಇರುವುದು, ಎಂದು ಗೊತ್ತಾಗಲಿಲ್ಲವೇ ? ಈಗ ಬಂದು ನನ್ನನ್ನು ಪ್ರಾರ್ಥಿಸಿಕೊಳ್ಳುತ್ತಿರುವೆಯಲ್ಲ !

೮. ನಿನ್ನಲ್ಲಿ ಏನಾದರೂ ಶಕ್ತಿಯಿದ್ದರೆ ಆ ನಲನೇ ಮುಂತಾದವರಿಗೆ ಸಹಾಯಮಾಡು. ಅವರು ನನ್ನೊಡನೆ ಯುದ್ಧಮಾಡಲಿ. ದೇವತೆಗಳನ್ನು ಅವರಕಡೆಗೆ ಸೇರಿ ಯುದ್ಧಮಾಡುವಂತೆ ಹೇಳು. ನೀನೂ ಸೇರಿಕೋ.

ತ್ವಯಾ ರಣೇ ಸಂಗರೋದ್ಯಮನು ಪಶ್ಯತು ರಾಘವಃ |
ಸೀತಾಪಿ ಪುಷ್ಪಕಾಸೀನಾ ಜಾಲರಂಧ್ರೈಶ್ಚ ಪಶ್ಯತು || ೯ ||

ಏವಂ ಕುಶಸ್ಯ ವಚನಂ ಶ್ರುತ್ವಾ ಲಜ್ಜಾಯುತೋ ವಿಧಿಃ |
ಸೋಮೇನಾಥ ಬುಧೇನಾಪಿ ನಲಾದ್ಯಾನ್ ಪ್ರಾಹ ವೇಗತಃ || ೧೦ ||

ರೇ ರೇ ಮೂಢಾಃ ಶೃಣುಧ್ವಂ ಮೇ ವಚನಂ ಹಿ ಗತಾಯುಷಃ |
ಸಾಕ್ಷಾನ್ನಾರಾಯಣಂ ರಾಮಂ ಯೂಯಂ ಯೋದ್ಧುಂ ಸಮುದ್ಯತಾಃ ||

ಕೇನೇಯಂ ಶಿಕ್ಷಿತಾ ಬುದ್ಧಿ ಸರ್ವೇಷಾಂ ಘಾತಕಾರಿಣೀ |
ಗಚ್ಛಧ್ವಂ ಶರಣಂ ರಾಮಂ ನೋ ಚೇದ್ಯೂಯಂ ಮರಿಷ್ಯಥ || ೧೨ ||

ಮಮಾಯಂ ಜನಕಸ್ಸಾಕ್ಷಾದ್ರಾಮೋ ವಿಷ್ಣುರ್ನ ಸಂಶಯಃ |
ಇತಿ ಧಿಕ್ಕೃತ್ಯ ತಾನ್ ವೇಧಾಃ ಕುಶಂ ವಚನಮಬ್ರವೀತ್ || ೧೩ ||

---

೯. ನಿನ್ನೊಡನೆ ನಾನು ಯುದ್ಧಮಾಡುವುದನ್ನು ಆ ರಾಮನು ಚೆನ್ನಾಗಿ ನೋಡಲಿ. ಸೀತೆಯೂ ಕೂಡ ಪುಷ್ಪಕವಿಮಾನದಲ್ಲಿ ಕುಳಿತು ಜಾಲರಂಧ್ರಗಳಿಂದ ನನ್ನ ಪರಾಕ್ರಮವನ್ನು ನೋಡಲಿ.

೧೦ ಕುಶನು ಹೀಗೆ ಹೇಳುತ್ತಿರುವುದನ್ನು ಕೇಳಿ ಬ್ರಹ್ಮನಿಗೆ ಬಹು ನಾಚಿಕೆಯಾಯಿತು. ಆಗ ಸೋಮನನ್ನೂ, ಬುಧನನ್ನೂ ಜೊತೆಯಲ್ಲಿ ಕರೆದುಕೊಂಡು ಆ ನಲಾದಿಗಳ ಬಳಿಗೆ ಹೋದನು.

೧೧ ಎಲೈ ಮೂಢರಾದ ಆಯುಸ್ಸು ಕ್ಷೀಣರಾದ ನಳಾದಿಗಳಿರ! ನೀವು ನನ್ನ ಮಾತನ್ನು ಕೇಳಿರಿ. ಶ್ರೀರಾಮನು ಸಾಕ್ಷಾನ್ನಾರಾಯಣನು. ಅವನೊಡನೆ ಯುದ್ಧಮಾಡಲು ನೀವು ಪ್ರಯತ್ನಪಟ್ಟಿದ್ದೀರಿ.

೧೨. ನೀವು ನಾಶವಾಗುವುದಿರಲಿ, ಎಲ್ಲರನ್ನೂ ನಾಶಮಾಡುವ ಈ ಬುದ್ಧಿಯನ್ನು ನಿಮಗೆ ಯಾರು ಕಲಿಸಿದರು? ಆ ಶ್ರೀರಾಮನನ್ನು ಬೇಗನೆ ಹೋಗಿ ಶರಣುಹೊಂದಿರಿ. ಇಲ್ಲದಿದ್ದರೆ ನೀವು ಸಾಯುತ್ತೀರಿ.

೧೩. ಈ ಶ್ರೀರಾಮನು ನನ್ನ ತಂದೆಯಾದ ಸಾಕ್ಷಾನ್ನಾರಾಯಣನು. ಇದರಲ್ಲಿ ಸಂಶಯವಿಲ್ಲ. ಹೀಗೆಂಬುದಾಗಿ ಆ ನಲಾದಿಗಳನ್ನು ತಿರಸ್ಕರಿಸಿ ನಿಂದಿಸಿ ಆ ಬ್ರಹ್ಮನು ಕುಶನನ್ನು ಕುರಿತು ಇಂತೆಂದನು.

ಯಾವದ್ಯಾಸ್ಯಾಮ್ಯಹಂ ರಾಮಾತ್ಪುನಸ್ತ್ವಂ ಕುಶಬಾಲಕ ।
ತಾವಚ್ಚೇನ್ಮೋಕ್ಷ್ಯಸೇ ಬಾಣಂ ತರ್ಹಿ ಮಾಂ ಹತವಾನಸಿ ॥ ೧೪ ॥

ಇತ್ಯುಕ್ತ್ವಾ ತಂ ಕುಶಂ ವೇಧಾ ನಲಾದ್ಯೈಃ ಪರಿವೇಷ್ಟಿತಃ ।
ಯಯೌ ರಾಮಂ ಸುರೈರ್ಯುಕ್ತಃ ಪುರಸ್ಕೃತ್ಯವೃಷಧ್ವಜಂ ॥ ೧೫ ॥

ಶಿವಮಾಗತಮಾಜ್ಞಾಯ ಪುಷ್ಪಕಾದ್ರಘುನಂದನಃ ।
ಪ್ರತ್ಯುದ್ಗಮ್ಯ ಶಿವಂ ನತ್ವಾ ಪ್ರಣನಾಮ ತತೋ ವಿಧಿಂ ॥ ೧೬ ॥

ತತಸ್ತಾನ್ ಪೂಜಯಾಮಾಸ ಶಿವಾದೀನ್ ರಘುನಂದನಃ ।
ತತಸ್ಸಭಾಯಾಂ ರಾಮಾಯ ತಿಷ್ಠನ್ ವೇಧಾ ನಲಾದಿಭಿಃ ॥ ೧೭ ॥

ಪ್ರಣಾಮಾನ್ ಕಾರಯಾಮಾಸ ಸೋಮೇನ ಚ ಬುಧೇನ ಚ ।
ತತಸ್ತಾನ್ ಸಹಸೋತ್ಥಾಯ ರಾಮಚಂದ್ರಃ ಕರೇಣ ಹಿ ॥ ೧೮ ॥

---

೧೪. ಎಲೈ ಬಾಲಕನಾದ ಕುಶನೇ! ನಾನು ನಿಮ್ಮ ರಾಮನ ಬಳಿಗೆ ಹೋಗುತ್ತೇನೆ. ಅಲ್ಲಿಗೆ ಹೋಗಿ ಅಲ್ಲಿಂದ ಬರುವವರೆಗೂ ನೀನು ಈ ಬ್ರಹ್ಮಾಸ್ತ್ರವನ್ನು ಬಿಡಕೂಡದು. ಹಾಗೆ ಬಿಟ್ಟರೆ ನೀನು ನನ್ನನ್ನು ಕೊಂದಂತೆ ಆಗುವುದು.

೧೫. ಎಂಬುದಾಗಿ ಆ ಬ್ರಹ್ಮನು ಲವನಿಗೆ ಹೇಳಿ ನಳಾದಿಗಳನ್ನು ಕರೆದುಕೊಂಡು ದೇವತೆಗಳೊಡನೆ ಶಿವನನ್ನು ಮುಂದುಮಾಡಿಕೊಂಡು ಆ ರಾಮನ ಬಳಿಗೆ ಹೋದನು.

೧೬. ಶಿವನು ಬಂದುದನ್ನು ನೋಡಿ ಶ್ರೀರಾಮನು ಪುಷ್ಪಕದಿಂದಿಳಿದು ಆ ಶಿವನನ್ನು ಎದುರುಗೊಂಡು ನಮಸ್ಕರಿಸಿ ಅನಂತರ ಬ್ರಹ್ಮನಿಗೂ ನಮಸ್ಕರಿಸಿದನು.

೧೭. ಅನಂತರ ಆ ರಾಮನು ಶಿವನೇ ಮುಂತಾದ ದೇವತೆಗಳಿಗೆ ಪೂಜೆ ಮಾಡಿದನು. ಅನಂತರ ಎಲ್ಲರೂ ಸಭೆಯಲ್ಲಿ ಕುಳಿತರು. ಆಗ ಬ್ರಹ್ಮನು ನಲಾದಿಗಳ ಕೈಯಿಂದ ಆ ರಾಮನಿಗೆ ನಮಸ್ಕಾರಮಾಡಿಸಿದನು.

೧೮. ಆ ನಲನ ಪೂರ್ವಿಕರಾದ ಸೋಮನೂ ಬುಧನೂ ಕೂಡ ಆ ರಾಮನಿಗೆ ನಮಸ್ಕರಿಸಿದ್ದರು. ಆಗ ರಾಮನು ಬೇಗನೆ ಎದ್ದು ಬೆರಳಿನಿಂದ ಅವರನ್ನು ತೋರಿಸುತ್ತ ಅವರವರ ಹೆಸರಗಳನ್ನು ಕೇಳಿದನು.

ಶ್ರುತ್ವಾ ತೇಷಾಂ ಹಿ ನಾಮಾನಿ ವಿಧೇರಾಸ್ಯಾತ್ಪೃಥಕ್ ಪೃಥಕ್ ।
ತತಃ ಪಪ್ರಚ್ಛ ವೇಗೇನ ಬ್ರಹ್ಮಾಣಂ ಪುರತಃ ಸ್ಥಿತಂ ॥ ೧೯ ॥

ಸರ್ವೇ ಕಿಮರ್ಥಮಾನೀತಾಸ್ತ್ವತ್ತ್ರೈತೇ ಸೋಮವಂಶಜಾಃ ।
ವದ ತ್ವಂ ಕಾರಣಂ ಶೀಘ್ರಂ ಸತ್ಯಮೇವ ಮಮಾಗ್ರತಃ ॥ ೨೦ ॥

ತದ್ರಾಮವಚನಂ ಶ್ರುತ್ವಾ ರಾಮಂ ವೇಧಾ ವಚೋಽಬ್ರವೀತ್ ।
ರಾಮ ರಾಮ ಮಹಾಬಾಹೋ ಪಾಲಯಸ್ವಾದ್ಯ ಮೇ ವಚಃ ॥ ೨೧ ॥

ರಕ್ಷಸ್ವೈತಾನ್ನೃಪಾನದ್ಯ ವರದಾನಾನ್ಮಮ ಪ್ರಭೋ ।
ದ್ವಾಪರಾಂತಮಜೇಯತ್ವಂ ದತ್ತಮಸ್ತಿ ಮಯಾ ಪುರಾ ॥ ೨೨ ॥

ಮಮಾಸ್ತ್ರಂ ಸಂದಧಾನಂ ತಂ ನಿವಾರಯ ಕುಶಂ ಸುತಂ ।
ಇತಿ ತದ್ವಚನಂ ಶ್ರುತ್ವಾ ವಿಹಸ್ಯ ರಘುನಾಯಕಃ ॥ ೨೩ ॥

---

೧೯. ಬ್ರಹ್ಮನು ಅವರವರ ಹೆಸರನ್ನು ಬೇರೆ ಬೇರೆಯಾಗಿ ಹೇಳಿದನು. ಅನಂತರ ಅವಸರದಿಂದ ಬ್ರಹ್ಮನನ್ನು ಕುರಿತು ಇಂತೆಂದು ಕೇಳಿದನು.

೨೦. ಇವರೆಲ್ಲರೂ ಚಂದ್ರವಂಶದವರು. ಇವರನ್ನು ಇಲ್ಲಿಗೇಕೆ ಕರೆದು ಕೊಂಡು ಬಂದೆ ? ಇದಕ್ಕೆ ಸತ್ಯವಾದ ಕಾರಣವನ್ನು ಬೇಗನೆ ಹೇಳು.

೨೧. ರಾಮನು ಇಂತೆಂದುದನ್ನು ಕೇಳಿ ಬ್ರಹ್ಮನು ರಾಮನನ್ನು ಕುರಿತು ಇಂತೆಂದನು. ಎಲೈ ಮಹಾಬಾಹುವಾದ ರಾಮನೇ! ನನ್ನ ಮಾತನ್ನು ಈಗ ಸುಳ್ಳಾಗದಂತೆ ಮಾಡಿ ಕಾಪಾಡು.

೨೨. ನಾನು ಇವರಿಗೆ ವರವನ್ನು ಕೊಟ್ಟಿರುವೆನು ಆ ವರವು ನಾಶವಾಗ ದಂತೆ ಈ ರಾಜರನ್ನು ಈಗ ಕಾಪಾಡು. ಇವರಿಗೆ ದ್ವಾಪರಾಂತದವರೆಗೂ ಅಜೇಯರಾಗಿರಲೆಂದು ಪೂರ್ವದಲ್ಲಿ ವರವನ್ನು ಕೊಟ್ಟಿರುವೆನು.

೨೩. ಇವರಮೇಲೆ ಬ್ರಹ್ಮಾಸ್ತ್ರವನ್ನು ಬಿಡಲು ಉದ್ಯುಕ್ತನಾಗಿರುವ ನಿನ್ನ ಮಗನಾದ ಕುಶನನ್ನು ನಿವಾರಣೆಮಾಡು. ಎಂಬದಾಗಿ ಬ್ರಹ್ಮನು ಹೇಳಲು ಶ್ರೀರಾಮ ನಕ್ಕನು.

ಸಭಾಯಾಮಾಹ ಬ್ರಹ್ಮಾಣಮಜೇಯತ್ವಂ ತ್ವಯೋದಿತಂ ।
ಕ್ವ ಗತಂ ಚಾದ್ಯ ಸಮರಾತ್ಕಿಮರ್ಥಮಿಹ ಚಾಗತಾಃ ॥ ೨೪ ॥

ತದ್ರಾಮವಚನಂ ಶ್ರುತ್ವಾ ರಾಮಂ ಪ್ರಾಹ ವಿಧಿಃ ಪುನಃ ।
ಸರ್ವೇಷಾಂ ಪುರತೋ ಮೇಽಸ್ತಿ ಬಲಂ ನ ಹಿ ತವಾಗ್ರತಃ ॥ ೨೫ ॥

ತ್ವಂ ತು ಮೇ ಜನಕಸ್ಸಾಕ್ಷಾದತಸ್ತ್ವಾಂ ಪ್ರಾರ್ಥಯಾಮ್ಯಹಂ ।
ತತೋ ರಾಮಃ ಪುನಃ ಪ್ರಾಹ ವಿಹಸ್ಯ ಚತುರಾನನಂ ॥ ೨೬ ॥

ನ ಶ್ರೋಷ್ಯತಿ ವಚೋ ಮೇಽದ್ಯ ಕುಶೋಽಯಂ ಯೌವನಸ್ಥಿತಃ ।
ಪ್ರಾಯಃ ಕುಮಾರಾ ವೃದ್ಧಾನಾಂ ವಾಕ್ಯಮಗ್ರೇ ಭಜಂತಿ ನ ॥ ೨೭ ॥

---

೨೪. ಹಾಗೆ ನಗುತ್ತ ಸಭೆಯಲ್ಲಿ ಬ್ರಹ್ಮನನ್ನು ಕುರಿತು ಎಲೈ ಬ್ರಹ್ಮನೇ! ನೀನು ಅವರಿಗೆ ಅಜೇಯತ್ವವನ್ನು [ಸೋಲದಿರುವಿಕೆಯನ್ನು] ಕೊಟ್ಟಿದ್ದೀಯೆ. ಆ ಅಜೇಯತ್ವವು ಈಗ ಎಲ್ಲಿ ಹೋಯಿತು? ಯುದ್ಧದಿಂದ ಇಲ್ಲಿಗೆ ಈಗ ಏತಕ್ಕೆ ಬಂದಿರಿ? ಎಂಬುದಾಗಿ ಕೇಳಿದನು.

೨೫. ರಾಮನು ಇಂತೆಂದುದನ್ನು ಕೇಳಿ ಬ್ರಹ್ಮನು ಅವನನ್ನು ಕುರಿತು ಇಂತೆಂದನು. ನನ್ನ ಬಲವು ಎಲ್ಲರಮೇಲೆಯೂ ನಡೆಯುತ್ತದೆ. ಆದರೆ ನಿನ್ನ ಮುಂದೆ ಆ ನನ್ನ ಬಲವೇನೂ ನಡೆಯುವುದಿಲ್ಲ.

೨೬. ನೀನಾದರೋ ನನಗೆ ಪ್ರತ್ಯಕ್ಷತಂದೆಯು. ಆದ್ದರಿಂದಲೇ ನಾನು ನಿನ್ನನ್ನು ಕೇಳಿಕೊಳ್ಳುತ್ತೇನೆ. ಇಂತೆಂದ ಬ್ರಹ್ಮನ ಮಾತನ್ನು ಕೇಳಿ ರಾಮನು ಮತ್ತೆ ಅವನನ್ನು ಕುರಿತು ಇಂತೆಂದನು.

೨೭. ಎಲೈ ಬ್ರಹ್ಮನೇ! ಕುಶನು ಒಳ್ಳೆಯ ಯೌವನದಲ್ಲಿರುವನು. ಈಗ ನನ್ನ ಮಾತನ್ನು ಅವನು ಕೇಳುವುದಿಲ್ಲ. ಯೌವನಸ್ಥರಾದ ಮಕ್ಕಳು ಮುದುಕರ ಮಾತನ್ನು ಮೊದಲು ಕೇಳುವುದೇ ಇಲ್ಲ.

ಅನ್ಯಚ್ಚಾಪಿ ಶೃಣುಷ್ವ ತ್ವಂ ಯಚ್ಛಾಸ್ತ್ರೇಪ್ಯುಚ್ಯತೇ ವಚಃ ।
ಲಾಲಯೇತ್ಪಂಚವರ್ಷಾಣಿ ದಶವರ್ಷಾಣಿ ತಾಡಯೇತ್ ॥ ೨೮ ॥

ಪ್ರಾಪ್ತೇತು ಷೋಡಶೇ ವರ್ಷೇ ಪುತ್ರಂ ಮಿತ್ರವದಾಚರೇತ್ ।
ಅತಸ್ತೇ ಬಾಲಕಾಸ್ಸರ್ವೇ ಕುಶಾದ್ಯಾಸ್ಸ್ವಾರ್ಥತತ್ಪರಾಃ ॥ ೨೯ ॥

ನ ಶ್ರೋಷ್ಯಂತಿ ವಚೋ ಮೇದ್ಯ ತಾನ್ ಗತ್ವಾ ಪ್ರಾರ್ಥಯಸ್ವ ಹಿ ।
ತತಃ ಪ್ರಾಹ ಪುನರ್ಬ್ರಹ್ಮಾ ರಣಕ್ರೋಧಾತ್ಕುಶೋ ಮಯಾ ॥ ೩೦ ॥

ವಾಕ್ಯಂ ರಮ್ಯಂ ಮಂಜುಳಂ ಚ ನೈವಾದ್ಯ ವದತಿ ಪ್ರಭೋ ।
ತತಃ ಪ್ರಾಹ ವಿಧಿಂ ರಾಮಃ ಪುನರ್ವಾಕ್ಯಂ ವಿನೋದಯನ್ ॥ ೩೧ ॥

---

೨೮. ಇದೂ ಅಲ್ಲದೆ ಶಾಸ್ತ್ರದಲ್ಲಿ ಹೇಳಿರುವ ಈ ಮಾತನ್ನು ನೀನು ಕೇಳಬೇಕು. ಮಕ್ಕಳನ್ನು ಐದುವರ್ಷಗಳಾಗುವವರೆಗೂ ಲಾಲನೆ ಮಾಡಬೇಕು. ಅನಂತರ ಹತ್ತುವರ್ಷಗಳು ಎಂದರೆ ಹದಿನೈದು ವರ್ಷಗಳವರೆಗೂ ಹೊಡೆದು ಬುದ್ಧಿ ಕಲಿಸಬೇಕು.

೨೯. ಹದಿನಾರು ವರ್ಷವಾದಮೇಲೆ ಅವನು ಮಗನಾದರೂ ಅವನನ್ನು ಮಿತ್ರನಂತೆ ಗೌರವಿಸಬೇಕು. ಆದ್ದರಿಂದ ಈಗ ಆ ಕುಶಾದಿ ಬಾಲಕರು ಎಲ್ಲರೂ ಸ್ವಾರ್ಥದಲ್ಲಿ ಆಸಕ್ತರಾಗಿದ್ದಾರೆ.

೩೦. ಅವರು ಈಗ ನನ್ನ ಮಾತನ್ನು ಕೇಳುವುದಿಲ್ಲ. ನೀನೇ ಅವರ ಬಳಿಗೆ ಹೋಗಿ ಕೇಳಿಕೋ. ರಾಮನ ಈ ಮಾತನ್ನು ಕೇಳಿ ಬ್ರಹ್ಮನು ಮತ್ತೆ ಇಂತೆಂದನು.

೩೧. ಎಲೈ ರಾಮನೇ! ಕುಶನು ರಣದಕೋಪದಿಂದ ನನ್ನೊಡನೆ ರಮ್ಯವಾದ ಒಳ್ಳೆಯ ಮಾತನ್ನು ಆಡುವುದೇ ಇಲ್ಲ. ಎಂದೆನ್ನಲು ರಾಮನು ಮತ್ತೆ ಆ ಬ್ರಹ್ಮನನ್ನು ಹಾಸ್ಯಮಾಡುತ್ತ ಇಂತೆಂದನು

ವಿಧೇ ತ್ವಂ ಗಚ್ಛ ವಾಲ್ಮೀಕಿಂ ಸ ತ್ವಾಂ ಯುಕ್ತಿಂ ವದಿಷ್ಯತಿ ।
ತತಸ್ಸ ರಾಮವಾಕ್ಯೇನ ವಾಲ್ಮೀಕಿಂ ಪುಷ್ಪಕೇ ಸ್ಥಿತಂ ॥ ೩೨ ॥

ಮುನಿಭಿರ್ಮುನಿಶಾಲಾಯಾಮೂರ್ಧ್ವಗಂ ಸರ್ವೈಸ್ಸ್ಥಿತಂ ವಿಧಿಃ ।
ನಲಾದ್ಯೈಸ್ಸಹಿತೋ ಗತ್ವಾ ವೃತ್ತಂ ಸರ್ವಂ ನ್ಯವೇದಯತ್ ॥ ೩೩ ॥

ವಿಧಿಮಾಹಾಥವಾಲ್ಮೀಕಿಃ ಜ್ಞಾತ್ವಾ ರಾಮಮನೋಗತಂ ।
ಸ್ತ್ರೀಲಬ್ಧಜೀವಿತಾಶ್ಚೈತೇ ಭವಂತು ಸುಖಿನಸ್ತ್ವಿತಿ ॥ ೩೪ ॥

ನಳಾದೀನಾಂ ಸ್ತ್ರಿಯಃ ಸರ್ವಾಃ ಪ್ರಾರ್ಥಯಂತು ವಿದೇಹಜಾಂ ।
ಕುಶೋಪಿ ಜಾನಕೀವಾಕ್ಯಾಚ್ಛಾಂತಿಮೇಷ್ಯತಿ ಬಾಲಕಃ ॥ ೩೫ ॥

ತಥೇತಿ ತೇ ನಲಾದ್ಯಾಶ್ಚ ದೂತಾನ್ ಪ್ರೇಷ್ಯಾಥ ಸಾದರಂ ।
ಆನೀಯ ಸ್ವಕಳತ್ರಾಣಿ ಶತಶಸ್ತು ತದಾ ಜವಾತ್ ॥ ೩೬ ॥

---

೩೨. ಎಲೈ ವಿಧಿಯೇ ! ನೀನು ವಾಲ್ಮೀಕಿಯ ಬಳಿಗೆ ಹೋಗು. ಅವನು ನಿನಗೆ ಯುಕ್ತಿಯನ್ನು ಹೇಳಿಕೊಡುವನು. ಅನಂತರ ವಿಧಿಯು ಪುಷ್ಪಕದಲ್ಲಿದ್ದ ವಾಲ್ಮೀಕಿಯರ ಬಳಿಗೆ ರಾಮನ ಮಾತಿನಂತೆ ಹೊರಟನು.

೩೩. ಆ ವಾಲ್ಮೀಕಿಯು ಮುನಿಗಳೊಡನೆ ಪುಷ್ಪಕದ ಮೇಲುಭಾಗದಲ್ಲಿರುವ ಮುನಿಶಾಲೆಯಲ್ಲಿದ್ದನು. ಈ ಬ್ರಹ್ಮನು ನಲಾದಿಗಳೊಡನೆ ಅಲ್ಲಿಗೆ ಹೋಗಿ ವಿಷಯಗಳೆಲ್ಲವನ್ನೂ ವಿವರಿಸಿದನು.

೩೪. ವಾಲ್ಮೀಕಿಯು ರಾಮನ ಮನಸ್ಸಿನಲ್ಲಿರುವುದನ್ನು ತಿಳಿದು ಇವರೆಲ್ಲರೂ ಹೆಂಗಸಿನಿಂದ ಬದುಕಿದವರಾಗಲಿ ಮತ್ತು ಸುಖಿಗಳಾಗಲಿ ಎಂದುಕೊಂಡು ಬ್ರಹ್ಮನನ್ನು ಕುರಿತು ಇಂತೆಂದನು.

೩೫. ವಾಲ್ಮೀಕಿಯು ಎಲೈ ಬ್ರಹ್ಮನೇ ! ನಲನೇ ಮುಂತಾದವರ ಹೆಂಡತಿಯರೆಲ್ಲರೂ ಸೀತೆಯ ಬಳಿಗೆ ಹೋಗಿ ಕೇಳಿಕೊಳ್ಳಲಿ. ಆಗ ಜಾನಕಿಯು ಕುಶನಿಗೆ ಹೇಳಿದರೆ ಅವನು ಶಾಂತನಾಗುವನು.

೩೬. ಆಗ ನಲಾದಿಗಳು ಹಾಗೆಯೇ ಆಗಲೆಂದು ತಮ್ಮ ತಮ್ಮ ದೂತರನ್ನು ಕಳುಹಿಸಿ ತಮ್ಮ ತಮ್ಮ ಹೆಂಡತಿಯರನ್ನು ಕರೆಸಿದರು. ಅವರೆಲ್ಲರೂ ಆ ದೂತರ ಜೊತೆಯಲ್ಲಿ ಸಾವಿರಗಟ್ಟಲೆಯಲ್ಲಿ ಬೇಗನೆ ಬಂದರು.

ಜಾನಕೀಂ ಪ್ರೇಷಯಾಮಾಸುಸ್ತಾಸ್ಸರ್ವಾ ಪಾರ್ಥಿವಸ್ತ್ರಿಯಃ ।
ಉಪಾಯನಾನಿ ಸಂಗೃಹ್ಯ ಜಾನಕೀಂ ಪ್ರಯಯುರ್ಜವಾತ್ ॥ ೩೭ ॥

ದದೃಶುರ್ಜಾನಕೀಂ ನಾರೀಶಾಲಾಯಾಂ ಸ್ವಸಖೀವೃತಾಂ ।
ಸ್ನುಷಾಭಿಸ್ಸೇವಿತಪದಾಂ ಪರ್ಯಂಕೇ ನಿದ್ರಿತಾಂ ಮುದಾ ॥ ೩೮ ॥

ತಾಃ ಸ್ತ್ರೀಃ ಸಮಾಗತಾಸ್ಸೀತಾ ದೃಷ್ಟ್ವಾ ಚಾಮರವೀಜಿತಾ ।
ಮಂಚಕಾದವರುಹ್ಯಾಥ ಧೃತಪಾರ್ಶ್ವೋಪಬರ್ಹಣಾ ॥ ೩೯ ॥

ಸ್ವಪೃಷ್ಠೇ ಮಂಚಕಂ ಕೃತ್ವಾ ಸಂಸ್ಥಿತಾಸೀತ್ಸಖೀವೃತಾ ।
ಸ್ನುಷಾಭಿರ್ವೀಜಿತಾಂ ರಮ್ಯಾಂ ಪ್ರಣೇಮುಸ್ತಾಂ ಪರಸ್ತ್ರಿಯಃ ॥ ೪೦ ॥

---

೩೭. ನಲಾದಿಗಳೂ ಬ್ರಹ್ಮನೂ ಅವರೆಲ್ಲರನ್ನೂ ಜಾನಕಿಯ ಬಳಿಗೆ ಕಳುಹಿಸಿದರು. ಆ ಹೆಂಗಸರೆಲ್ಲರೂ ಕಾಣಿಕೆಯನ್ನು ತೆಗೆದುಕೊಂಡು ಆ ಜಾನಕಿಯ ಬಳಿಗೆ ಹೋದರು.

೩೮. ನಾರೀಶಾಲೆಯಲ್ಲಿ ತನ್ನ ಸಖಿಯರೊಡನೆ ಇರುವ ಸೀತೆಯನ್ನು ಅವರೆಲ್ಲರೂ ನೋಡಿದರು. ಅವಳು ಮಂಚದಮೇಲೆ ಮಲಗಿದ್ದಳು. ಸೊಸೆಯರು ಆಕೆಯ ಕಾಲುಗಳನ್ನು ಒತ್ತುತ್ತಿದ್ದರು.

೩೯. ಚಾಮರದಿಂದ ಬೀಸಿಸಿಕೊಂಡು ಮಂಚದಮೇಲೆ ಮಲಗಿದ್ದ ಆ ಸೀತೆಯು ಈ ಹೆಂಗಸರು ಬಂದುದನ್ನು ನೋಡಿ ಮಂಚದಿಂದ ಇಳಿದು ಮುಗ್ಗುಲಿನ ಕೈಕಟ್ಟುಗಳನ್ನು ಹಿಡಿದುಕೊಂಡಳು.

೪೦. ಮತ್ತು ಮಂಚವನ್ನು ಬೆನ್ನಿನಿಂದ ಒರಗಿಸಿಕೊಂಡು ಸಖಿಯರನ್ನು ಸುತ್ತಲೂ ನಿಲ್ಲಿಸಿಕೊಂಡಳು. ಮತ್ತು ಸೊಸೆಯರು ಚಾಮರವನ್ನು ಬೀಸುತ್ತಿದ್ದರು. ಇದು ಬಹು ಮನೋಹರವಾಗಿದ್ದಿತು. ಇಂತಹ ಸೀತೆಯನ್ನು ಅವರು ನೋಡಿ ಆಗ ನಮಸ್ಕರಿಸಿದರು.

ತಾಸಾಂ ಸೀಮಂತರತ್ನೌಘಪ್ರಭಯಾ ಪಾದಪಂಕಜೇ ।
ವಿರೇಜತುಸ್ತೇ ಸೀತಾಯಾಶ್ಚಿತ್ರರಾಗವಿಚಿತ್ರಿತೇ ॥ ೪೧ ॥

ಉಪಾಯನಾನಿ ಸಂಗೃಹ್ಯತಾಭ್ಯಸ್ಸಾ ಜನಕಾತ್ಮಜಾ ।
ಸಮಾಲಿಂಗ್ಯ ನಿವೇಶ್ಯಾಥ ತಾಃ ಪ್ರಾಹ ಸುಸ್ವರಂ ವಚಃ ॥ ೪೨ ॥

ಕಿಮರ್ಥಮಾಗತಾ ಯೂಯಂ ಮಾ ಭೇತವ್ಯಮಿತಃ ಪರಂ ।
ಕಥಯಧ್ವಂ ಸ್ವೀಯಮಿಷ್ಟಂ ಯತ್ತದ್ಯೋದ್ಯ ಕರೋಮ್ಯಹಂ ॥ ೪೩ ॥

ತದಾ ತಾಃ ಕಥಯಾಮಾಸುಃ ಸರ್ವಂ ವೃತ್ತಂ ಸವಿಸ್ತರಂ ।
ದೇಹಿ ಕಂಕಣದಾನಾನಿ ಕುಶಂ ಯುದ್ಧಾನ್ನಿವಾರಯ ॥ ೪೪ ॥

---

೪೧. ಅವರು ನಮಸ್ಕಾರಮಾಡುತ್ತಿರಲು ಅವರ ತಲೆಯಮೇಲೆ ಬೈತಲೆಯಮೇಲೆ ಇರುವ ರತ್ನಗಳು ಆ ಸೀತೆಯ ಕಾಲುಗಳಮೇಲೆ ಪ್ರಕಾಶಿಸಲು ಆ ಕಾಲು ಚಿತ್ರ ಚಿತ್ರವಾದ ಬಣ್ಣಗಳನ್ನು ಲೇಪಿಸಿದಂತೆ ಕಂಡುಬಂದಿತು.

೪೨. ಆ ಜನಕಾತ್ಮಜೆಯು ಅವರುಗಳು ಒಪ್ಪಿಸಿದ ಕಪ್ಪವನ್ನು ತೆಗೆದುಕೊಂಡು ಅವರನ್ನು ಆಲಂಗಿಸಿಕೊಂಡು ಹತ್ತಿರದಲ್ಲಿಯೇ ಕೂರಿಸಿಕೊಂಡು ಅವರನ್ನು ಕುರಿತು ಸುಸ್ವರದಿಂದ ಇಂತೆಂದಳು.

೪೩. ಅಮ್ಮಾ! ನೀವುಗಳು ಇಲ್ಲಿಗೆ ಏತಕ್ಕೆ ಬಂದಿರಿ? ಹೇಳಿರಿ. ಇನ್ನು ಮೇಲೆ ನೀವು ಯಾವ ವಿಷಯದಲ್ಲಿಯೂ ಹೆದರಬೇಡಿರಿ. ನಿಮ್ಮ ಮನಸ್ಸಿನಲ್ಲಿ ಇರುವ ಇಷ್ಟವೇನೆಂಬುದನ್ನು ಹೇಳಿರಿ. ಇಮಗೆ ನಮ್ಮಿಂದ ಏನು ಆಗಬೇಕು? ಅದನ್ನು ಮಾಡಿಕೊಡುತ್ತೇನೆ.

೪೪. ಸೀತೆಯು ಇಂತೆನ್ನಲು ಆವರೆಲ್ಲರೂ ಎಲ್ಲಾ ವಿಷಯಗಳನ್ನೂ ವಿಸ್ತಾರವಾಗಿ ಹೇಳಿದರು. ಅಮ್ಮ! ನಮಗೆ ಕಂಕಣದಾನವನ್ನು ಮಾಡು. ನಿನ್ನ ಮಗನಾದ ಕುಶನನ್ನು ಯುದ್ಧದಿಂದ ನಿವಾರಣೆಮಾಡು.

ತಥೇತಿ ಜಾನಕೀ ಚೋಕ್ತ್ವಾ ಜ್ಞಾತ್ವಾ ರಾಮಮನೋಗತಂ ।
ನಾರೀಹಸ್ತಾನ್ಮೋಚನೀಯಾಶ್ಚೈತೇ ನಿರ್ಜರವತ್ತ್ವಿತಿ ॥ ೪೫ ॥

ಆರುಹ್ಯ ಶಿಬಿಕಾಯಾಂ ಸಾ ತಾಭಿರ್ಯುಕ್ತಾ ಕುಶಂ ಯಯೌ ।
ತದಾ ತಂ ಸಾಂತ್ವಯಾಮಾಸ ಕ್ರೋಧಂ ತ್ಯಜ ಕುಶಾಧುನಾ ॥ ೪೬ ॥

ನಿವರ್ತಸ್ವ ರಣಾದದ್ಯ ಶೃಣು ಮೇ ವಚನಂ ಶಿಶೋ ।
ತಥೇತಿ ಜನನೀವಾಕ್ಯಾದ್ವಿಹಸ್ಯಾಥ ಕುಶಸ್ತದಾ ॥ ೪೭ ॥

ಮಾತ್ರಾ ತೈರ್ಬಂಧುಭಿರ್ಯುಕ್ತಃ ಸೇನಯಾ ಸಂನ್ಯವರ್ತತ ।
ಪುಷ್ಪಕಂ ಪ್ರಯಯೌ ಸೀತಾ ನೃಪಸ್ತ್ರೀಪರಿವೇಷ್ಟಿತಾ ॥ ೪೮ ॥

ಕುಶಾದ್ಯಾಸ್ತೇ ಕುಮಾರಾಶ್ಚ ಸಭಾಯಾಂ ರಾಘವಂ ಯಯುಃ ।
ತತೋ ವಾಲ್ಮೀಕಿನಾ ಬ್ರಹ್ಮಾ ನಲಾದ್ಯೈಸ್ಸಹಿತಸ್ತದಾ ॥ ೪೯ ॥

---

೪೫. ಆಗ ಜಾನಕಿಯು ಅವರಿಗೆ ಹಾಗೆಯೇ ಆಗಲೆಂದು ಹೇಳಿ ರಾಮನು ಹೆಂಗಸರ ಕೈಯಿಂದ ಇವರ ಮೋಚನೆಯಾಗಬೇಕೆಂದು ತಿಳಿದಿರುವನು ಎಂದು ಆತನ ಮನೋಗತವನ್ನು ತಿಳಿದುಕೊಂಡಳು.

೪೬-೪೭. ಒಡನೆಯೇ ತಾನು ಪಲ್ಲಕ್ಕಿಯಲ್ಲಿ ಕುಳಿತುಕೊಂಡು ಅವರನ್ನೂ ಕರೆದುಕೊಂಡು ಕುಶನ ಬಳಿಗೆ ಹೋದಳು ಅಲ್ಲಿ ಕುಶನನ್ನು ಕುರಿತು ಎಲೈ ಕುಶನೇ! ಈಗ ಕೋಪವನ್ನು ಬಿಟ್ಟುಬಿಡು. ಯುದ್ಧದಿಂದ ಹಿಂದಿರುಗು. ಯುದ್ಧವನ್ನು ಮಾಡಬೇಡ ನನ್ನ ಮಾತನ್ನು ಕೇಳು. ನೀನು ಇನ್ನೂ ಹುಡುಗನು ಎಂಬುದಾಗಿ ಸಮಾಧಾನಪಡಿಸಿದಳು. ಆ ಕುಶನು ತಾಯಿಯ ಮಾತನ್ನು ಕೇಳಿ ನಕ್ಕು ಹಾಗೆಯೇ ಆಗಲೆಂದನು.

೪೮. ಒಡನೆಯೇ ಸೇನೆಗಳನ್ನು ಯುದ್ಧದಿಂದ ಹಿಂದಿರುಗಿಸಿ ತನ್ನ ತಮ್ಮಂದಿರನ್ನೂ ಯುದ್ಧದಿಂದ ಬರಮಾಡಿಕೊಂಡು ಅವರೆಲ್ಲರನ್ನು ಕರೆದುಕೊಂಡು ಹಿಂದಿರುಗಿದನು. ಸೀತೆಯು ಆ ರಾಜಪತ್ನಿಯರೊಡನೆ ಪುಷ್ಪಕವಿಮಾನಕ್ಕೆ ಹೊರಟು ಹೋದಳು.

೪೯-೫೦. ಇತ್ತ ಕುಶನೇ ಮುಂತಾದ ಅವನ ಜೊತೆಯವರೆಲ್ಲರೂ ಸಭೆಯಲ್ಲಿದ್ದ ಶ್ರೀರಾಮನ ಬಳಿಗೆ ಹೋದರು. ಇತ್ತ ಬ್ರಹ್ಮನು ವಾಲ್ಮೀಕಿಯೇ

ಸನಿರ್ಜರಸ್ಸಭಾಂ ಗತ್ವಾ ತಸ್ಥೌ ಶ್ರೀರಾಘವಾಗ್ರತಃ ।
ಕುಶಾದ್ಯಾಸ್ತೇಽಪಿ ಶ್ರೀರಾಮಂ ಪ್ರಣಮ್ಯ ತಸ್ಯ ಸನ್ನಿಧೌ ॥ ೫೦ ॥

ತಸ್ಥುಃ ತೇನಾಲಿಂಗಿತಾಶ್ಚ ಸ್ತ್ರೀಭಿರ್ನೀರಾಜಿತಾ ಅಪಿ ।
ತದಾ ರಾಮೋಽಬ್ರವೀದ್ವಾಕ್ಯಂ ಬ್ರಹ್ಮಾಣಂ ಸದಸಿ ಸ್ಥಿತಂ ॥ ೫೧ ॥

ರಣಾನ್ನಿವರ್ತಿತಾ ಬಾಲಾಃ ಕಿಮಗ್ರೇ ತವ ವಾಂಛಿತಂ ।
ನ ಮೇ ರಾಜ್ಯೇ ಛತ್ರಪತಿರ್ದ್ವಿತೀಯೋಽತ್ರ ಭವಿಷ್ಯತಿ ॥ ೫೨ ॥

ಕರಣೀಯಂ ನಳಾದ್ಯೈಃ ಕಿಂ ತದ್ವದಸ್ವ ಸವಿಸ್ತರಂ ।
ತದಾಸನಾದುತ್ಥಿತಸ್ಸ ವೇಧಾ ರಾಮಾಗ್ರತಃ ಸ್ಥಿತಃ ॥ ೫೩ ॥

ಉವಾಚ ಮಧುರಂ ವಾಕ್ಯಂ ಸಭಾಯಾಂ ರಘುನಂದನಂ ।
ರಾಮ ರಾಮ ಮಹಾಬಾಹೋ ಭೂಭಾರಶ್ಚ ತ್ವಯಾ ಹೃತಃ ॥ ೫೪ ॥

ಮುಂತಾದ ಋಷಿಗಳೊಡನೆಯೂ, ನಲನೇ ಮುಂತಾದ ರಾಜರೊಡನೆಯೂ ದೇವತೆಗಳೊಡನೆಯೂ ಸಭೆಗೆ ಬಂದು ಆ ಶ್ರೀರಾಮನ ಎದುರಿಗೆ ಕುಳಿತನು. ಕುಶಾದಿಗಳೂ ಕೂಡ ಆ ಶ್ರೀರಾಮನಿಗೆ ನಮಸ್ಕರಿಸಿ ಅವನ ಬಳಿಯಲ್ಲಿ ಕುಳಿತರು.

೫೧. ಆಗ ಮುತ್ತೈದೆಯರು ಆ ಕುಶಾದಿಗಳಿಗೆ ಆರತಿಯನ್ನು ಎತ್ತಿದರು. ರಾಮನು ಅವರನ್ನು ಆಲಂಗಿಸಿಕೊಂಡನು. ಆಗ ಸಭೆಯಲ್ಲಿ ಕುಳಿತು ಕೊಂಡಿರುವ ಬ್ರಹ್ಮನನ್ನು ಕುರಿತು ಶ್ರೀರಾಮನು ಇಂತೆಂದನು.

೫೨. ಎಲೈ ಬ್ರಹ್ಮನೇ! ಯುದ್ಧವನ್ನು ನಿಲ್ಲಿಸಿ ಹುಡುಗರನ್ನು ಬರುವಂತೆ ಮಾಡಿದೆನು. ಮುಂದೆ ನಿನ್ನ ಅಪೇಕ್ಷೆಯೇನಿದೆ? ಹೇಳು. ನನ್ನ ರಾಜ್ಯದಲ್ಲಿ ಚಕ್ರವರ್ತಿಯು ಒಬ್ಬನಿರಬೇಕೇ ಹೊರತು ಎರಡನೆಯವನಿರಕೂಡದು.

೫೩. ಆದ್ದರಿಂದ ಈ ನಳನೇ ಮುಂತಾದವರು ಏನುಮಾಡಬೇಕು? ಅದೆಲ್ಲವನ್ನೂ ವಿಸ್ತಾರವಾಗಿ ನನಗೆ ಹೇಳು. ಒಡನೆಯೇ ಬ್ರಹ್ಮನು ತಾನು ತನ್ನ ಪೀಠದಿಂದೆದ್ದು ರಾಮನಮುಂದೆ ಹೋಗಿ ನಿಂತುಕೊಂಡನು.

೫೪-೫೫. ಎಲೈ ಸ್ವಾಮಿಯೇ! ನೀನು ಬಹುಕಾಲ ರಾಜ್ಯಭಾರವನ್ನು ಈ ಲೋಕದಲ್ಲಿ ಮಾಡಿದೆ. ಇಲ್ಲಿ ಮಾಡಿದ ಪ್ರಜಾಪಾಲನೆಯು ಸಾಕು. ಇನ್ನುಮೇಲೆ ವೈಕುಂಠವನ್ನು ಹೊಂದಿ ಅಲ್ಲಿ ಜನಗಳನ್ನು ಕಾಪಾಡು. ನನ್ನ

ಚಿರಕಾಲಂ ಕೃತಂ ರಾಜ್ಯಂ ವೈಕುಂಠಂ ಪಾಲಯಾಧುನಾ ।
ಕುರು ಸತ್ಯಂ ವಚೋ ಮೇದ್ಯ ದದಸ್ವ ಹಸ್ತಿನಾಪುರಂ ॥ ೫೫ ॥

ನಲಾದಿಭ್ಯಸ್ತ್ವಯೋಧ್ಯಾಯಾಂ ಕುಶೋ ರಾಜ್ಯಂ ಪ್ರಶಾಸತು ।
ತದಾ ರಾಮೋ ವಿಧಿಂ ಪ್ರಾಹ ಮಮಾಪ್ಯೇತತ್ತು ರೋಚತೇ ॥ ೫೬ ॥

ವೈಕುಂಠಂ ಶ್ವೋ ಗಮಿಷ್ಯಾಮಿ ಸೀತಯಾ ಬಂಧುಭಿರ್ಯುತಃ ।
ದಶಸಹಸ್ರಾಣಿ ವರ್ಷಾಣಿ ಪ್ರೋಕ್ತಮಾಯುರ್ಯುಗೇತ್ರ ಹಿ ॥ ೫೭ ॥

ತನ್ಮಯಾ ಸ್ವೀಯಸಾಮರ್ಥ್ಯಾತ್ಕೃತಮತ್ರ ವಿಧೇ ವೃಷಾ ।
ಏಕಾದಶಸಹಸ್ರಾಣಿ ಸಮಾಸ್ತ್ವೇಕದಶೈವ ತು ॥ ೫೮ ॥

ತಥೈಕಾದಶಮಾಸಾಶ್ಚ ಗತಾ ಮೇ ದಿವಸಾ ಅಪಿ ।
ಶೇಷಮಾಯುಶ್ಚ ಕಿಂಚಿನ್ಮೇ ತಚ್ಛ್ವಃ ಪೂರ್ಣಂ ಭವಿಷ್ಯತಿ ॥ ೫೯ ॥

ಮಾತನ್ನು ಸುಳ್ಳನ್ನಾಗಿಮಾಡದೆ ಸತ್ಯವನ್ನಾಗಿ ಮಾಡು. ನಲಾದಿಗಳಿಗೆ ಈ ಹಸ್ತಿನಾಪುರವನ್ನು ಕೊಟ್ಟುಬಿಡು.

೫೬. ನಿನ್ನ ಈ ಕುಶನು ಅಯೋಧ್ಯೆಯಲ್ಲಿ ರಾಜ್ಯಭಾರಮಾಡಲಿ. ಎಂದು ಹೇಳಿದನು. ಇದನ್ನು ಶ್ರೀರಾಮನು ಕೇಳಿ ಎಲೈ ಬ್ರಹ್ಮನೇ ! ನನಗೂ ಕೂಡ ಅದೇ ಚೆನ್ನಾಗಿರುವಂತೆ ಕಾಣುತ್ತಿದೆ.

೫೭. ನಾನೂ ಕೂಡ ಸೀತೆಯೊಡನೆಯೂ ತಮ್ಮಂದಿರೊಡನೆಯೂ ಕೂಡಿಕೊಂಡು ನಾಳೆಯದಿನ ವೈಕುಂಠಕ್ಕೆ ಹೋಗುತ್ತೇನೆ. ಈ ಯುಗದಲ್ಲಿ ಮನುಷ್ಯನಾಗಿ ಹುಟ್ಟಿದವನಿಗೆ ಹತ್ತುಸಾವಿರವರ್ಷಗಳ ಆಯುಸ್ಸು ಎಂಬುದಾಗಿ ನಿರ್ಧರಿಸಲ್ಪಟ್ಟಿದೆ

೫೮-೫೯. ಎಲೈ ವಿಧಿಯೇ ! ನಾನು ನನ್ನ ಸಾಮರ್ಥ್ಯದಿಂದ ಆ ಹತ್ತುಸಾವಿರವರ್ಷಗಳನ್ನು ಸುಳ್ಳಾಗುವಂತೆ ಮಾಡಿ ಹನ್ನೊಂದುಸಾವಿರವರ್ಷ ಹನ್ನೊಂದುತಿಂಗಳು ಅಂತೆಯೇ ಹನ್ನೊಂದು ದಿನಗಳೂ ಇದ್ದುಬಿಟ್ಟೆನು. ಇನ್ನು ನನಗೆ ಸ್ವಲ್ಪ ಆಯುಸ್ಸು ಉಳಿದಿದೆ, ಅದು ನಾಳೆಗೆ ಪೂರ್ಣವಾಗುತ್ತದೆ.

ದ್ವಾದಶಾಯಾಂ ಘಟಿಕಾಯಾಂ ಸೋಽಹಂ ವೈಕುಂಠಮಾಶ್ರಯೇ ।
ತತೋ ವಿಧಿಂ ಕುಶಃ ಪ್ರಾಹ ನಲಾದ್ಯಾ ಯದಿ ಮಾಂ ವಿಧೇ ॥ ೬೦ ॥

ದಾಸ್ಯಂತಿ ಕರಭಾರಂ ಮೇ ತರ್ಹಿ ತಿಷ್ಠಂತು ಚಾತ್ರ ತೇ ।
ಮದಾಜ್ಞಾಂ ಪಾಲಯಂತ್ವೇತೇ ತವ ವಾಕ್ಯಾತ್ಸುರಕ್ಷಿತಾಃ ॥ ೬೧ ॥

ಛತ್ರಹೀನಾಸ್ಸುಖಂ ತ್ವದ್ಯ ವಸಂತು ಹಸ್ತಿನಾಪುರೇ ।
ತದ್ವಾಕ್ಯಂ ಸ ವಿಧಿಃ ಶ್ರುತ್ವಾ ಪುನಃ ಪ್ರಾಹ ಕುಶಂ ಪ್ರತಿ ॥ ೬೨ ॥

ಛತ್ರಮಾಜ್ಞಾಪಯಸ್ವೈತಾನ್ ತವಾಜ್ಞಾವಶವರ್ತಿನಃ ।
ದಾಸ್ಯಂತಿ ಕರಭಾರಂ ತ್ವಾಂ ಮಮ ವಾಕ್ಯಂ ಹಿ ಪಾಲಯ ॥ ೬೩ ॥

ತಥೇತಿ ಸ ಕುಶಃ ಪ್ರಾಹ ವಿಧಿಂ ಕಿಂಚಿತ್ಸ್ಮಿತಾನನಃ ।
ಅಥ ತೇ ಸೋಮವಂಶಸ್ಥಾ ನೃಪಾಸ್ಸರ್ವೇ ವಿಧಿಂ ತದಾ ॥ ೬೪ ॥

೬೦-೬೧. ನಾಳೆ ಹನ್ನೆರಡನೆಗಳಿಗೆಗೆ ಸರಿಯಾಗಿ ನಾನು ವೈಕುಂಠಕ್ಕೆ ಹೋಗುತ್ತೇನೆ ಎಂದನು. ಅನಂತರ ಕುಶನು ಬ್ರಹ್ಮನನ್ನು ಕುರಿತು ಎಲೈ ಪಿತಾಮಹನೇ! ಈ ನಲಾದಿಗಳು ನನಗೆ ಕಪ್ಪಕಾಣಿಕೆಗಳನ್ನು ಕೊಡಬೇಕು. ಹಾಗೆಕೊಡಲು ಒಪ್ಪಿದರೆ ಅವರು ಇಲ್ಲಿದ್ದುಕೊಂಡು ರಾಜ್ಯಭಾರವನ್ನು ಮಾಡಲಿ. ಇವರು ನನ್ನ ಅಪ್ಪಣೆಯಂತಿರಬೇಕು. ನಿನ್ನ ಮಾತಿನಂತೆ ಇವರನ್ನು ಕಾಪಾಡಿದ್ದೇನೆ.

೬೨. ಅವರು ಛತ್ರಿಯನ್ನು ಹಿಡಿಸಿಕೊಳ್ಳಕೂಡದು ಆ ರೀತಿಯಿರುವುದಾದರೆ ಅವರು ಈ ಹಸ್ತಿನಾಪುರದಲ್ಲಿ ವಾಸಮಾಡಲಿ ಎಂದನು. ಈ ಮಾತನ್ನು ಬ್ರಹ್ಮನು ಕೇಳಿ ಕುಶನನ್ನು ಕುರಿತು ಮತ್ತೆ ಇಂತೆಂದನು.

೬೩. ಎಲೈ ಕುಶನೇ! ಇವರು ನಿನ್ನ ಅಪ್ಪಣೆಯನ್ನು ಪಾಲಿಸುತ್ತಲೇ ರಾಜ್ಯಭಾರವನ್ನು ಮಾಡುವರು. ರಾಜರಿಗೆ ಛತ್ರವಿಲ್ಲದೆ ಇರಬಾರದು. ಆದ್ದರಿಂದ ಇವರು ಛತ್ರವನ್ನು ಹಿಡಿಸಿಕೊಳ್ಳಲಿ. ಅಪ್ಪಣೆಯನ್ನು ಕೊಡು. ಅವರು ನಿನಗೆ ಕಪ್ಪಕಾಣಿಕೆಗಳನ್ನು ಕೊಡುವರು. ಈಗ ನನ್ನ ಮಾತನ್ನು ಕಾಪಾಡು

೬೪. ಆ ಮಾತನ್ನು ಕೇಳಿ ಕುಶನು ಬ್ರಹ್ಮನನ್ನು ಕುರಿತು ನಗುತ್ತ ಹಾಗೆಯೇ ಆಗಲಿ ಎಂದನು. ಆಗ ಆ ಸೋಮವಂಶದ ರಾಜರೆಲ್ಲರೂ ಬ್ರಹ್ಮನನ್ನು ಕುರಿತು ಇಂತೆಂದರು.

ಪ್ರೋಚುರ್ವಯಂ ತ್ವಯಾ ಸ್ತ್ರೀಭಿರ್ದಿವಂ ಯಾಸ್ಯಾಮಹೇದ್ಯ ವೈ ।
ಅಜಮೀಢೋದ್ಯ ನೃಪತಿರ್ಭವತ್ವತ್ರ ಗಜಾಹ್ವಯೇ ॥ ೬೫ ॥

ತಥೇತಿ ತಾನ್ ವಿಧಿಶ್ಚೋಕ್ತ್ವಾ ಸಭಾಯಾಂ ಸಮುಪಾವಿಶತ್ ।
ಅಥ ಬ್ರಹ್ಮಾಜಮೀಢಾಯ ಬ್ರಾಹ್ಮಣೈರಭಿಷಿಚ್ಯ ಚ ।
ಗಜಾಹ್ವಯೇ ತಂ ರಾಜಾನಂ ಚಕಾರ ರಾಘವಾಜ್ಞಯಾ ॥ ೬೬ ॥

ಇತಿಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ಆದಿಕಾವ್ಯೇ ಪೂರ್ಣಕಾಂಡೇ ಸೋಮವಂಶ
ಸೂರ್ಯವಂಶಜಯೋರ್ಮೈತ್ರೀಕರಣಂ ನಾಮ
ಚತುರ್ಥಸ್ಸರ್ಗಃ ಸಮಾಪ್ತಃ

---

೬೫. ಎಲೈ ಬ್ರಹ್ಮನೇ! ನಾವು ನಮ್ಮ ಹೆಂಡತಿಯರೊಡನೆ ಕೂಡಿಕೊಂಡು ನಿನ್ನ ಜೊತೆಯಲ್ಲಿಯೇ ಸ್ವರ್ಗಕ್ಕೆ ಬಂದು ಬಿಡುತ್ತೇವೆ. ಈ ಹಸ್ತಿನಾಪುರದಲ್ಲಿ ಅಜಮೀಢನಿಗೆ ಪಟ್ಟವನ್ನು ಕಟ್ಟುತ್ತೇವೆ. ಅವನೇ ಇಲ್ಲಿ ರಾಜನಾಗಿದ್ದುಕೊಂಡಿರಲಿ. ಎಂದರು.

೬೬. ಬ್ರಹ್ಮನು ಇದನ್ನು ಕೇಳಿ ಹಾಗೆಯೇ ಆಗಲೆಂದು ಒಪ್ಪಿಕೊಂಡನು. ರಾಮನ ಮುಂದೆ ಸಭೆಯಲ್ಲಿ ಕುಳಿತುಕೊಂಡನು. ಬ್ರಹ್ಮನು ಆ ಅಜಮೀಢನಿಗೆಆ ಹಸ್ತಿನಾಪುರದ ರಾಜ್ಯದಲ್ಲಿ ಬ್ರಾಹ್ಮಣರ ಕೈಯಿಂದ ಅಭಿಷೇಕವನ್ನು ಮಾಡಿಸಿದನು. ರಾಮನ ಅಪ್ಪಣೆಯಮೇರೆಗೆ ಆ ಹಸ್ತಿನಾಪುರದಲ್ಲಿ ರಾಜ್ಯವಾಳುವಂತೆ ರಾಜನನ್ನಾಗಿ ಮಾಡಿದನು.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ
ಆದಿಕಾವ್ಯವಾದ ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ
ಸೋಮವಂಶ ಸೂರ್ಯವಂಶದವರಿಗೆ ಸ್ನೇಹ ಬೆಳೆಯಿತೆಂಬ
ನಾಲ್ಕನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ ನಾಲ್ಕನೆಯ ಸರ್ಗದ ಸಾರಾಂಶವು

ನಳಾದಿಗಳನ್ನು ಕೊಲ್ಲಲು ಕುಶನು ಬ್ರಹ್ಮಾಸ್ತ್ರವನ್ನು ತೊಡಲು ಉದ್ಯೋಗಿಸಿದನು. ಅದನ್ನು ಬ್ರಹ್ಮನು ತಿಳಿದು ಒಡನೆಯೇ ಅವನ ಬಳಿಗೆ ಬಂದನು. ಎಲೈ ಕುಶನೇ! ನಾನು ಪೂರ್ವದಲ್ಲಿ ಇವರಿಗೆ ವರವನ್ನುಕೊಟ್ಟಿದ್ದೇನೆ. ಇದುವರಿಗೆ ಮಾಡಿದ ಯುದ್ಧವೇ ಸಾಕು. ಬ್ರಹ್ಮಾಸ್ತ್ರವನ್ನು ತೊಡಬೇಡ ಎಂದನು. ಆದಕ್ಕೆ ಕುಶನು ಬೇಗನೆ ಹೋಗಿ ರಾಮುನಿಗೆ ಹೇಳ. ಅವನಿಂದ ಅಪ್ಪಣೆಯನ್ನು ತಂದರೆ ಸುಮ್ಮನಾಗುವೆನು. ಇಲ್ಲದಿದ್ದರೆ ಇದೇ ಬ್ರಹ್ಮಾಸ್ತ್ರದಿಂದ ಅವರನ್ನು ಕೊಲ್ಲುವೆನು. ಎನ್ನಲು ಬ್ರಹ್ಮನು ಸೋಮುನನ್ನೂ ಬುಧನನ್ನೂ ಜೊತೆಯಲ್ಲಿ ಕರೆದುಕೊಂಡು ರಾಮುನ ಬಳಿಗೆ ಹೋಗಿ ಹೇಳಲು ರಾಮನು ವಾಲ್ಮೀಕಿಯನ್ನು ಕೇಳೆಂದನು. ಅಂತೆಯೇ ವಿಮಾನದಲ್ಲಿದ್ದ ವಾಲ್ಮೀಕಿಯ ಬಳಿಗೆ ಹೋಗಿ ಕೇಳಲು ಅವನು ರಾಮುನ ಅಭಿಪ್ರಾಯವನ್ನು ತಿಳಿದು ಬ್ರಹ್ಮನನ್ನು ಕುರಿತು ಈ ನಲಾದಿಗಳ ಹೆಂಗಸರು ಸೀತೆಯನ್ನು ಕೇಳಿಕೊಳ್ಳಲಿ ಎಂದನು.

ಅನಂತರ ನಳಾದಿಗಳ ಹೆಂಡಿರು ಸೀತೆಯ ಬಳಿಗೆ ಹೋಗಿ ತಮ್ಮ ಮಾಂಗಲ್ಯವನ್ನು ಉಳಿಸಬೇಕೆಂದು ಕೇಳಿಕೊಳ್ಳಲು ಸೀತೆಯು ಕುಶನಿಗೆ ಹೇಳಿ ಕಳುಹಿಸಿ ಯುದ್ಧವನ್ನು ನಿಲ್ಲಿಸಿದಳು.

ಅನಂತರ ರಾಮುನು ಅಜಮೀಢನೆಂಬುವನನ್ನು ಹಸ್ತಿನಾಪುರದಲ್ಲಿಟ್ಟು ಅವನು ಕುಶನಿಗೆ ಕಪ್ಪವನ್ನು ಕೊಡುವಂತೆ ನಿಯಮಿಸಿ ಬ್ರಹ್ಮನ ಪ್ರಾರ್ಥನೆಯಂತೆ ತಾನು ವೈಕುಂಠಕ್ಕೆ ಮಾರನೆಯ ದಿನ ಹೊರಡುವುದಾಗಿ ನಿಶ್ಚಯಿಸಿದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಪೂರ್ಣಕಾಂಡೇ ಪಂಚಮಸ್ಸರ್ಗಃ

॥ ಶ್ರೀರಾಮದಾಸ ಉವಾಚ ॥

ಅಥ ರಾಮಂ ಸುಷೇಣಶ್ಚ ಸುಗ್ರೀವಶ್ಚ ವಿಭೀಷಣಃ ।
ವಾನರಾ ಪ್ರಾರ್ಥಯಾಮಾಸುಃ ವಯಂ ರಾಮ ತ್ವಯಾ ದಿವಂ ॥ ೧ ॥

ಯಾಸ್ಯಾಮೋ ನಾತ್ರ ಜೀವಾಮಸ್ತ್ವಯಾ ರಾಮ ವಿನಾ ಭುವಿ ।
ದದಸ್ವಾಜ್ಞಾಂ ತ್ವಯಾ ಗಂತುಂ ತದಾಹ ರಾಘವೋಽಪಿ ಸಃ ॥ ೨ ॥

ವಿಭೀಷಣ ತ್ವಯಾ ಸ್ಥೇಯಂ ಲಂಕಾಯಾಂ ಮಮ ವಾಕ್ಯತಃ ।
ಪ್ರಚರಿಷ್ಯತಿ ಯಾವನ್ಮೇ ರಾಮನಾಮಾವನೀತಲೇ ॥ ೩ ॥

ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ ಐದನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು—ಅನಂತರ ಸುಷೇಣನೂ ಸುಗ್ರೀವನೂ ವಿಭೀಷಣನೂ ಮಿಕ್ಕವಾನರರೆಲ್ಲರೂ ಕೂಡ ರಾಮನನ್ನು ಕುರಿತು ಎಲೈ ರಾಮನೇ ! ನಾವೆಲ್ಲರೂ ಕೂಡ ನಿನ್ನೊಡನೆ ವೈಕುಂಠಕ್ಕೆ ಬರುತ್ತೇವೆ.

೨. ನಿನ್ನನ್ನು ಬಿಟ್ಟು ನಾವು ಈ ಭೂಲೋಕದಲ್ಲಿ ಜೀವಿಸಲಾರೆವು. ನಿನ್ನೊಡನೆ ಬರಲು ನಮಗೆ ಅಪ್ಪಣೆಯನ್ನು ಕೊಡು. ಎಂದರು. ಆಗ ಶ್ರೀರಾಮನು ಅವರನ್ನು ಕುರಿತು ಇಂತೆಂದನು.

೩. ಎಲೈ ವಿಭೀಷಣನೇ ! ನೀನು ನನ್ನ ಮಾತಿನಂತೆ ಈ ಲಂಕೆಯಲ್ಲಿಯೇ ಇದ್ದುಕೊಂಡಿರಬೇಕು. ನನ್ನ ರಾಮನಾಮವು ಈ ಭೂಮಿಯಲ್ಲಿ ಎಲ್ಲಿಯವರೆಗೆ ಇದ್ದುಕೊಂಡಿರುವುದೋ ಅಲ್ಲಿಯವರೆಗೂ ಇರು.

ತ್ವಂ ಗಚ್ಛಾದ್ಯೈವ ಮೇ ವಾಕ್ಯಾತ್ತಥೇತಿ ಸ ವಿಭೀಷಣಃ ।
ನತ್ವಾ ರಾಮಂ ಯಯೌ ಲಂಕಾಂ ರಾಘವೇಣಾತಿಮಾನಿತಃ ॥ ೪ ॥

ತತಃ ಪ್ರಾಹ ಜಾಂಬವಂತಂ ರಾಘವಃ ಪುರತಃ ಸ್ಥಿತಂ ।
ಹೇ ಜಾಂಬವನ್ ತ್ವಯಾ ಸ್ಥೇಯಂ ಯಾವದ್ಭೂಮ್ಯಾಂ ಕಥಾ ಮಮ ॥

ಪ್ರಚರಿಷ್ಯತಿ ತಾವಚ್ಚ ದ್ವಾಪರಾಂತೇ ಪುನರ್ಮಮ ।
ಭವಿಷ್ಯತಿ ದರ್ಶನಂ ತೇ ಗಚ್ಛಾದ್ಯೈವ ಸುಖಂ ವಸ ॥ ೬ ॥

ತ್ವಯಾ ಕೃತಂ ಯತ್ಸಾಹಾಯ್ಯಂ ಲಂಕಾಯಾಂ ಮೇ ವನೇಪಿ ಚ ।
ಅತಸ್ತ್ವಂ ಶ್ವಶುರೋ ಭೂತ್ವಾ ದ್ವಾಪರೇ ಖ್ಯಾತಿಮೇಷ್ಯಸಿ ॥ ೭ ॥

ತಥೇತಿ ರಾಮವಚನಾದ್ರಾಮಂ ಸೀತಾಂ ಪ್ರಣಮ್ಯ ಸಃ ।
ಜಾಂಬವಾನ್ನಿರ್ಯಯೌ ಶೀಘ್ರಂ ರಾಘವೇಣಾತಿಪೂಜಿತಃ ॥ ೮ ॥

---

೪. ನೀನು ನನ್ನ ಅಪ್ಪಣೆಯಂತೆ ಈಗಲೇ ಹೋಗು ಎಂದೆನಲು ವಿಭೀಷಣನು ಹಾಗೆಯೇ ಆಗಲೆಂದು ಹೇಳಿ ಆ ರಾಮನಿಗೆ ನಮಸ್ಕರಿಸಿದನು. ರಾಮನು ಅವನಿಗೆ ಯೋಗ್ಯವಾಗಿ ಗೌರವಿಸಲು ಅಲ್ಲಿಂದ ಹೊರಟು ಹೋದನು.

೫. ಆಮೇಲೆ ಶ್ರೀರಾಮನು ಜಾಂಬವಂತನನ್ನು ಕುರಿತು ಎಲೈ ಜಾಂಬವನೇ! ನೀನು ನನ್ನ ಕಥೆಯು ಭೂಮಿಯಲ್ಲಿ ಪ್ರಚಾರದಲ್ಲಿರುವವರೆಗೆ ನೀನು ಭೂಮಿಯಲ್ಲಿರಬೇಕು.

೬-೭. ದ್ವಾಪರಯುಗದ ಕೊನೆಯಲ್ಲಿ ನಿನಗೆ ದರ್ಶನವನ್ನು ಕೊಡುತ್ತೇನೆ. ಈಗ ಹೊರಟು ಹೋಗಿ ಸುಖವಾಗಿ ವಾಸಮಾಡು. ನೀನು ನನಗೆ ಲಂಕೆಯಲ್ಲಿಯೂ ವನದಲ್ಲಿಯೂ ಬಹುವಾಗಿ ಸಹಾಯವನ್ನು ಮಾಡಿದ್ದೀಯೆ. ಆದ್ದರಿಂದ ನೀನು ನನಗೆ ಹೆಣ್ಣುಕೊಟ್ಟ ಮಾವನಾಗಿ ದ್ವಾಪರಯುಗದಲ್ಲಿ ಪ್ರಸಿದ್ಧನಾಗುತ್ತೀಯೆ.

೮. ಆ ಜಾಂಬವನು ಹಾಗೆಯೇ ಆಗಲೆಂದು ಹೇಳಿ ರಾಮನನ್ನೂ ಸೀತೆಯನ್ನೂ ನಮಸ್ಕರಿಸಿದನು. ರಾಮನು ಅವನನ್ನು ಬಹುಮಾನಗಳಿಂದ ಗೌರವಿಸಲು ಅನಂತರ ಆವನು ಹೊರಟು ಹೋದನು

ರಾಮಃ ಪ್ರಾಹ ಹನೂಮಂತಂ ವತ್ಸ ತಿಷ್ಠ ಯಥಾಸುಖಂ ।
ಯದಾ ಸೇತೌ ಪಣಸ್ತೇ ಹಿ ದ್ವಾಪರಾಂತೇಽರ್ಜುನೇನ ವೈ ॥ ೯ ॥

ಭವಿಷ್ಯತಿ ಶರೈಸ್ಸೇತುಂ ಕರ್ತುಂ ಮೇ ದರ್ಶನಂ ತದಾ ।
ತ್ವಂ ಭವಿಷ್ಯಸಿ ಗಚ್ಛಾದ್ಯ ಸುಖಂ ವಸ ಭಜಸ್ವ ಮಾಂ ॥ ೧೦ ॥

ತದ್ರಾಮವಚನಂ ಶ್ರುತ್ವಾ ನತ್ವಾ ರಾಮಂ ಚ ಲಕ್ಷ್ಮಣಂ ।
ಸೀತಾಂ ಪ್ರಣಮ್ಯ ಹನುಮಾನ್ ಗಮನಾಯೋಪಚಕ್ರಮೇ ॥ ೧೧ ॥

ತತೋ ರಾಮೋ ನಿಜಾತ್ಕಂಠಾನ್ನವರತ್ನವಿಭೂಷಿತಂ ।
ಹಾರಂ ದದೌ ತಥಾ ಸೀತಾ ತಂ ದದೌ ಬಾಹುಭೂಷಣೇ ॥ ೧೨ ॥

ತತೋ ನತ್ವಾ ರಾಮಚಂದ್ರಂ ಸಾರ್ದ್ರನೇತ್ರಸ್ಸ ಮಾರುತಿಃ ।
ಪರಿಕ್ರಮ್ಯ ಯಯೌ ವೇಗಾತ್ತಪ್ತುಂ ತುಹಿನಪರ್ವತಂ ॥ ೧೩ ॥

---

೯. ಅನಂತರ ರಾಮನು ಹನುಮಂತನನ್ನು ನೋಡಿ ಎಲೈ ವತ್ಸನೇ! ಈ ಭೂಲೋಕದಲ್ಲಿ ಸುಖವಾಗಿರು. ದ್ವಾಪರಯುಗದ ಕಡೆಯಲ್ಲಿ ನಿನಗೂ ಅರ್ಜುನನಿಗೂ ಪಣವು ಉಂಟಾಗುತ್ತದೆ.

೧೦. ಆ ಅರ್ಜುನನು ಬಾಣಗಳಿಂದ ಸೇತುವೆಯನ್ನು ಕಟ್ಟುತ್ತಾನೆ, ಆಗ ನಾನು ನಿನಗೆ ದರ್ಶನವನ್ನು ಕೊಡುತ್ತೇನೆ. ಈಗ ಹೊರಟು ಹೋಗು. ಸುಖವಾಗಿದ್ದುಕೊಂಡು ನನ್ನನ್ನು ಭಜಿಸುತ್ತಿರು.

೧೧. ಹನುಮಂತನು ಈ ಮಾತನ್ನು ಕೇಳಿ ಹಾಗೇ ಆಗಲೆಂದು ರಾಮನನ್ನೂ ಲಕ್ಷ್ಮಣನನ್ನೂ ನಮಸ್ಕರಿಸಿ ಸೀತೆಗೂ ನಮಸ್ಕರಿಸಿ ಪ್ರಯಾಣಕ್ಕೆ ಸಿದ್ಧನಾದನು.

೧೨. ಆಗ ರಾಮನು ತನ್ನ ಕತ್ತಿನಿಂದ ನವರತ್ನಗಳಿಂದ ಕೂಡಿದ ಹಾರವನ್ನು ಆತನಿಗೆ ಕೊಟ್ಟನು. ಅನಂತರ ಸೀತೆಯು ತನ್ನ ತೋಳುಗಳಿಂದ ಬಂದಿಗಳನ್ನು ತೆಗೆದು ತಾನೂ ಆತನಿಗೆ ಕೊಟ್ಟಳು.

೧೩. ಅದನ್ನೂ ತೆಗೆದುಕೊಂಡು ಆ ಮಾರುತಿಯು ಕಣ್ಣಿನಲ್ಲಿ ನೀರನ್ನು ಸುರಿಸುತ್ತಾ ರಾಮಚಂದ್ರನಿಗೆ ನಮಸ್ಕರಿಸಿ ತಾನು ತಪಸ್ಸನ್ನು ಮಾಡಲು ಹಿಮವತ್ಪರ್ವತಕ್ಕೆ ಹೋದನು.

ತತೋಂಗದಂ ರಾಮಚಂದ್ರಃ ಪೂಜ್ಯ ವಸ್ತ್ರಾದಿಮಂಡನೈಃ ।
ಪ್ರೇಷಯಾಮಾಸ ಕಿಷ್ಕಿಂಧಾಂ ಶೃಂಗಬೇರಂ ತು ಗೂಹಕಂ ॥ ೧೪ ॥

ಪಾತಾಳಂ ಪ್ರೇಷಯಾಮಾಸ ರಾಘವೋ ಮಕರಧ್ವಜಂ ।
ವಸ್ತ್ರಾದಿಭಿಸ್ತೋಷಯಿತ್ವಾ ಸುಹೃದಃ ಸ್ವಸ್ಥಲಾನಿ ಹಿ ॥ ೧೫ ॥

ತತೋ ರಾಮಸ್ಸಮಾಹೂಯ ಯೂಪಕೇತುಂ ಮಹಾಮನಾಃ ।
ವಸ್ತ್ರಾದಿಭಿಸ್ತೋಷಯಿತ್ವಾ ವಿದಿಶಾನಗಂ ಪ್ರತಿ ॥ ೧೬ ॥

ಪ್ರೇಷಯಾಮಾಸ ಸೈನ್ಯೇನ ಸೋಪಿ ನತ್ವಾ ರಘೂತ್ತಮಂ ।
ಜಾನಕೀಂ ಚ ಯಯೌ ವೇಗಾತ್ಸ್ತ್ರೀಪುತ್ರೈಃ ಪರಿವಾರಿತಃ ॥ ೧೭ ॥

ಏವಂ ರಾಮಃ ಸುಬಾಹುಂ ತಂ ಮಥುರಾಂ ಪ್ರೇಷಯತ್ತದಾ ।
ಏವಂ ರಾಮಃ ಪುಷ್ಕರಂ ಚ ಪ್ರೇಷಯಾಮಾಸ ಬಾಲಕಂ ॥ ೧೮ ॥

---

೧೪. ಅನಂತರ ರಾಮಚಂದ್ರನು ಅಂಗದನನ್ನೂ ವಸ್ತ್ರಭೂಷಣಗಳಿಂದ ಸನ್ಮಾನಿಸಿ ಕಿಷ್ಕಿಂಧೆಗೆ ಕಳುಹಿಸಿದನು. ಗುಹನಿಗೂ ಬಹುಮಾನಗಳನ್ನು ಕೊಟ್ಟು ಶೃಂಗಬೇರಪುರಕ್ಕೆ ಕಳುಹಿಸಿದನು.

೧೫. ರಾಮನು ಮಕರಧ್ವಜನನ್ನು ಕರೆದು ಅವನಿಗೆ ಅನೇಕ ರೀತಿಗಳಲ್ಲಿ ಸತ್ಕರಿಸಿ ಪಾತಾಳಲೋಕಕ್ಕೆ ಕಳುಹಿಸಿಕೊಟ್ಟನು. ಆನಂತರ ಇನ್ನೂ ಅನೇಕರಾದ ಸ್ನೇಹಿತರನ್ನೂ ಕರೆದು ಅವರವರನ್ನು ಅವರವರಿಗೆ ತಕ್ಕಂತೆ ಸನ್ಮಾನಿಸಿ ಅವರವರ ಸ್ಥಳಕ್ಕೆ ಕಳುಹಿಸಿದನು.

೧೬. ಆಮೇಲೆ ಉದಾರಮನಸ್ಸುಳ್ಳ ರಾಮಚಂದ್ರನು ಯೂಪಕೇತುವನ್ನು ಕರೆದು ಅವನಿಗೆ ವಸ್ತ್ರಭೂಷಣಗಳನ್ನು ಕೊಟ್ಟು ಗೌರವಿಸಿ ವಿದಿಶಾನಗರಕ್ಕೆ ಕಳುಹಿಸಿದನು.

೧೭. ಆ ಯೂಪಕೇತುವು ರಾಮನನ್ನೂ ಜಾನಕಿಯನ್ನೂ ನಮಸ್ಕರಿಸಿ ಹೆಂಡತಿ ಮಕ್ಕಳನ್ನು ಕರೆದುಕೊಂಡು ಸೈನ್ಯದೊಡನೆ ಹೊರಟು ಹೋದನು.

೧೮-೨೦. ಇದೇ ರೀತಿಯಾಗಿ ರಾಮನು ಸುಬಾಹುವನ್ನು ಕರೆದು ಅವನನ್ನೂ ಗೌರವಿಸಿ ಮಥುರೆಗೆ ಕಳುಹಿಸಿದನು. ಇದೇ ರೀತಿಯಾಗಿ ಪುಷ್ಕರನನ್ನು

ಸೈನ್ಯೇನ ಪುಷ್ಕರಾವತ್ಯಾಂ ತಕ್ಷಂ ತಕ್ಷಶಿಲಾಹ್ವಯೇ।
ತತೋಽಂಗದಂ ಗಜಾಶ್ವಂ ತಂ ಪ್ರೇಷಯಾಮಾಸ ರಾಘವಃ ॥ ೧೯ ॥

ಧನರತ್ನಂ ಚಿತ್ರಕೇತುಂ ಸ್ತ್ರೀಪುತ್ರಬಲವಾಹನೈಃ।
ಪ್ರೇಷಯಾಮಾಸ ಶ್ರೀರಾಮಃ ತೋಷಿತಂ ವಸನಾದಿಭಿಃ ॥ ೨೦ ॥

ತತೋ ಲವಂ ಸಮಾಹೂಯ ಸಸೀತೋ ರಘುನಂದನಃ।
ವಸ್ತ್ರಾಲಂಕಾರಯಾನಾದ್ಯೈಸ್ತೋಷ್ಯ ಸ್ತ್ರೀಪುತ್ರಸಂಯುತಂ ॥ ೨೧ ॥

ಉತ್ತರೇಷು ಕುರುಷ್ವತ್ರ ಪ್ರೇಷಯಾಮಾಸ ಸೇನಯಾ।
ಕಾಮಧೇನುಂ ದದೌ ಸೀತಾ ಲವಾಯ ವ್ರಜತೇ ಮುದಾ ॥ ೨೨ ॥

ತತಃ ಕುಶಂ ಸಮಾಹೂಯ ರಾಮಃ ಸ್ತ್ರೀಪುತ್ರಸಂಯುತಂ।
ಪ್ರೇಷಯಾಮಾಸ ಸಾಕೇತಂ ಸೈನ್ಯೇನ ಪಾರ್ಥಿವೈರ್ಯುತಂ ॥ ೨೩ ॥

ಗೌರವಿಸಿ ಪುಷ್ಕರಾವತಿಗೂ ತಕ್ಷನನ್ನು ಗೌರವಿಸಿ ತಕ್ಷಶಿಲೆಗೂ ಕಳುಹಿಸಿದನು. ಇದೇ ರೀತಿಯಾಗಿ ಗೌರವಿಸಿ ಅಂಗದ, ಗಜಾಶ್ವ, ಧನರತ್ನ, ಚಿತ್ರಕೇತುಗಳನ್ನೂ ಅವರವರ ಹೆಂಡತಿ ಮಕ್ಕಳೊಡನೆಯೂ ಸೈನ್ಯಗಳೊಡನೆಯೂ ಅವರವರ ಸ್ಥಳಗಳಿಗೆ ಕಳುಹಿಸಿದನು.

೨೧–೨೨. ಆನಂತರ ಲವನನ್ನು ಕರೆದು ವಸ್ತ್ರಭೂಷಣ ಯಾನ ಮುಂತಾದುವುಗಳನ್ನು ಕೊಟ್ಟು ಸಂತೋಷಪಡಿಸಿ ಹೆಂಡತಿ ಮಕ್ಕಳೊಡನೆಯೂ ಸೈನ್ಯದೊಡನೆಯೂ ಉತ್ತರಕುರುವಿಗೆ ಕಳುಹಿಸಿದನು. ಆ ಲವನಿಗೆ ಸೀತೆಯು ಕಾಮಧೇನುವನ್ನು ಕೊಟ್ಟು ಕಳುಹಿಸಿದಳು.

೨೩. ಅನಂತರ ಕುಶನನ್ನು ಕರೆದು ವಸ್ತ್ರಭೂಷಣಾದಿಗಳನ್ನು ಕೊಟ್ಟು ಹೆಂಡತಿ ಮಕ್ಕಳೊಡನೆಯೂ ಸಾಮಂತರಾಜರೊಡನೆಯೂ ಅಯೋಧ್ಯೆಗೆ ಕಳುಹಿಸಿದನು.

ದತ್ವಾ ಸ್ವೀಯಾನಿ ಶಸ್ತ್ರಾಣಿ ಕೋದಂಡಂಚಮಹೋಜ್ಜ್ವಲಂ ।
ನಾನಾಯಾನಾನಿ ವಸ್ತ್ರಾಣಿ ರಾಮಶ್ಚಿಂತಾಮಣಿಂ ದದೌ ॥ ೨೪ ॥

ಸಸ್ತ್ರೀಪುತ್ರಂ ಕುಶಂ ತೋಷ್ಯ ರಾಘವೋ ವಾಕ್ಯಮಬ್ರವೀತ್ ।
ವತ್ಸ ಗಚ್ಛ ಸುಖಂ ತಿಷ್ಠ ಭೂಮಿಂ ಧರ್ಮೇಣ ಪಾಲಯ ॥ ೨೫ ॥

ಜಂಬೂದ್ವೀಪನೃಪಾನ್ ಸರ್ವಾಂಸ್ತಥಾ ದ್ವೀಪಾಂತರಸ್ಥಿತಾನ್ ।
ಸರ್ವಾನೇತಾನ್ ಪಾಲಯಸ್ವ ಪುತ್ರವತ್ಕುಶಬಾಲಕ ॥ ೨೬ ॥

ಇತ್ಯುಕ್ತ್ವಾ ತಾನ್ನೃಪಾನ್ ಪ್ರಾಹ ಯುಷ್ಮಾಭಿಃ ಕುಶಬಾಲಕಃ ।
ಮತ್ಸ್ಥಾನೇ ಮಾನನೀಯೋಯಂ ರಕ್ಷಣೀಯಸ್ತ್ವಹರ್ನಿಶಂ ॥ ೨೭ ॥

ತದ್ರಾಮವಚನಂ ಶ್ರುತ್ವಾ ನೃಪಾಃ ಪ್ರೋಚೂ ರಘೂತ್ತಮಂ ।
ತ್ವತ್ತೇಜಃಪೂರಿತೋ ಬಾಲಸ್ತತ್ತೋಸ್ಮಾಕಂ ಶತಾಧಿಕಃ ॥ ೨೮ ॥

---

೨೪. ಆ ರಾಮನು ಕುಶನಿಗೆ ತನ್ನ ಶಸ್ತ್ರಗಳನ್ನೂ ಕೋದಂಡವನ್ನೂ ಬಗೆ ಬಗೆಯ ಯಾನಗಳನ್ನೂ ಕೊಟ್ಟನು. ಅಲ್ಲದೆ ವಸ್ತ್ರಗಳನ್ನೂ ಕೊಟ್ಟು ಚಿಂತಾಮಣಿ ಯೆಂಬ ರತ್ನವನ್ನೂ ಕೊಟ್ಟನು.

೨೫. ಇಂತು ಶ್ರೀರಾಮನು ಕುಶನನ್ನೂ ಅವನ ಹೆಂಡತಿ ಮಕ್ಕಳನ್ನೂ ಸಂತೋಷಪಡಿಸಿ ಇಂತೆಂದು ಹೇಳಿದನು. ಎಲೈ ವತ್ಸನೇ ! ಹೋಗು. ಸುಖವಾಗಿರು. ಭೂಮಿಯನ್ನು ಧರ್ಮದಿಂದ ಪಾಲಿಸು.

೨೬. ಎಲೈ ಬಾಲಕನಾದ ಕುಶನೇ ! ಜಂಪೂದ್ವೀಪದ ರಾಜರನ್ನೂ ಮಿಕ್ಕದ್ವೀಪದ ರಾಜರನ್ನೂ ಎಲ್ಲರನ್ನೂ ಕೂಡ ಮಕ್ಕಳಂತೆ ನೋಡಿಕೊಂಡು ಕಾಪಾಡುತ್ತಿರು.

೨೭. ಎಂಬುದಾಗಿ ರಾಮನು ಆ ಕುಶನಿಗೆ ಹೇಳಿ ಆ ರಾಜರನ್ನು ಕುರಿತು ಎಲೈ ರಾಜರಿರಾ ! ನೀವೆಲ್ಲರೂ ಈ ಕುಶಬಾಲಕನನ್ನು ನನ್ನ ಸಂಸ್ಥಾನದಲ್ಲಿಟ್ಟು ಕೊಂಡು ಗೌರವಿಸುತ್ತಿರುವುದಲ್ಲದೆ ಹಗಲೂ ರಾತ್ರಿಯೂ ಇವನಿಗೆ ತೊಂದರೆ ಬರದಂತೆ ರಕ್ಷಿಸಿರಿ.

೨೮. ರಾಮನು ಇಂತು ಹೇಳಿದುದನ್ನು ಕೇಳಿ ಆ ರಾಜರು ರಾಮನನ್ನು ಕುರಿತು ಇಂತೆಂದರು. ಎಲೈ ರಾಮನೇ ! ಈ ಬಾಲಕನು ನಿನ್ನ ತೇಜಸ್ಸಿನಿಂದಲೇ ತುಂಬಿರುವನು. ನಮಗೆ ಇವನು ನಿನಗಿಂತಲೂ ನೂರರಷ್ಟು ಹೆಚ್ಚಿನವನಾಗಿದ್ದಾನೆ.

ಅಸ್ತ್ಯೇವ ನಾತ್ರ ಸಂದೇಹಃ ಸತ್ಯಂ ವಿದ್ಧಿ ರಘೂತ್ತಮ |
ಯಥಾ ತ್ವಯಾ ಪಾಲಿತಾಸ್ಮೋ ವಯಂ ತದ್ವತ್ಕುಶೋಽಪ್ಯಯಂ ॥

ರಕ್ಷಿಷ್ಯತಿ ಸದಾಸ್ಮಾಕಂ ದೃಷ್ಟೋ ಬಾಲಪರಾಕ್ರಮಃ |
ಇತ್ಯುಕ್ತ್ವಾ ರಾಘವಂ ನತ್ವಾ ಸರ್ವೇ ತೇ ಪಾರ್ಥಿವೋತ್ತಮಾಃ ॥ ೩೦ ॥

ರಾಮೇಣ ಪೂಜಿತಾಸ್ಸಮ್ಯಕ್ ವಸ್ತ್ರಾಲಂಕಾರವಾಹನೈಃ |
ಯಯುಃ ಕುಶಂ ಪುರಸ್ಕೃತ್ಯ ಸ್ವಸ್ವಸೈನ್ಯಸಮನ್ವಿತಾಃ ॥ ೩೧ ॥

ಕುಶೋಽಪಿ ರಾಘವಂ ನತ್ವಾ ಮೂರ್ಧ್ನಿ ಸೀತಾವಘ್ರಾಪಿತಃ |
ವಸಿಷ್ಠೇನ ರಥೇ ಸ್ಥಿತ್ವಾ ಪುರೀಂ ಗಂತುಂ ಪ್ರಚಕ್ರಮೇ ॥ ೩೨ ॥

ತದಾ ರಾಮಸ್ತಂ ರಜಕಂ ಮಂಥರಾಂ ಪ್ರೇಷಯತ್ಪುರೀಂ |
ಕುಶೇನ ಸಹ ವೇಗೇನ ಸಮಾಹೂಯಾಥ ಸಾದರಂ ॥ ೩೩ ॥

---

೨೯ ಇದರಲ್ಲಿ ಸಂದೇಹವೇ ಇರುವುದಿಲ್ಲ. ಇದು ಸತ್ಯವೆಂದು ತಿಳಿ ನೀನು ನಮ್ಮನ್ನು ಹೇಗೆ ಕಾಪಾಡಿದೆಯೋ ಹಾಗೆಯೇ ಈ ಕುಶನೂ ಕೂಡ ನಮ್ಮನ್ನು ಕಾಪಾಡುವನು.

೩೦–೩೧. ಇವನು ಬಾಲನಾದರೂ ಇವನ ಪರಾಕ್ರಮವನ್ನು ನೋಡಿದೆವು ಎಂಬುದಾಗಿ ಹೇಳಿ ಶ್ರೀರಾಮನಿಗೆ ನಮಸ್ಕರಿಸಿ ಆ ರಾಜರೆಲ್ಲರೂ ರಾಮನಿಂದ ಗೌರವಿತರಾಗಿ ಕುಶನನ್ನು ಮುಂದುಮಾಡಿಕೊಂಡು ತಮ್ಮ ತಮ್ಮ ಸ್ಥಳಗಳಿಗೆ ಹೋದರು.

೩೨. ಕುಶನು ರಾಮನಿಗೆ ನಮಸ್ಕರಿಸಿದನು. ಸೀತೆಗೂ ನಮಸ್ಕರಿಸಿದನು. ಅವರಿಬ್ಬರೂ ಆ ಕುಶನನ್ನು ಆಲಿಂಗಿಸಿಕೊಂಡರು. ತಲೆಯನ್ನು ಸ್ನೇಹದಿಂದ ಮೂಸಿನೋಡಿದರು. ತಾನು ವಸಿಷ್ಠನೊಡನೆ ರಥದಲ್ಲಿ ಕುಳಿತು ಪಟ್ಟಣಕ್ಕೆ ಹೋಗಲು ಸಿದ್ಧನಾದನು.

೩೩–೩೪ ಆನಂತರ ಶ್ರೀರಾಮನು ಮಂಥರೆಯನ್ನೂ ಅಗಸನನ್ನೂ ಕರೆಸಿ ಅವರನ್ನು ಗೌರವಿಸಿ ಕುಶನೊಡನೆ. ಕಳುಹಿಸಿದನು ಮತ್ತು ಕುಶನಿಗೆ ಎಲೈ ಕುಶನೇ ! ಹಿಂದಿನ ವೈರವನ್ನು ಜ್ಞಾಪಿಸಿಕೊಂಡು ಇವರನ್ನು ಕೀಳುಗಾಣಬೇಡ.

ಪೂರ್ವವೈರಮನುಸ್ಮೃತ್ಯ ಸಾಭ್ರಂ ಯಾತಾವುಧರ್ಮಿಣೌ ।
ಕೃಷ್ಣಾವತಾರೇ ತಾವೇವ ರಜಕೋ ರಜಕೋಭವೇತ್ ॥ ೩೪ ॥

ಮಂಥರಾ ಪೂತನಾ ಚೈವ ಹತೌ ತೌ ಪೂರ್ವವೈರತಃ ।
ತತಃ ಕುಶಸ್ಸಾರ್ದ್ರನೇತ್ರಃ ಪಶ್ಯನ್ ರಾಮಂ ಚ ಜಾನಕೀಂ ॥ ೩೫ ॥

ಪರಿವೃತ್ಯ ಮುಖಂ ಪೃಷ್ಠೇ ವಾರಂ ವಾರಂ ರಥೇ ಸ್ಥಿತಃ ।
ಗಚ್ಛ ಗಚ್ಛೇತಿ ರಾಮೇಣ ಸೀತಯಾಪಿ ನಿಜೈಃ ಕರೈಃ ॥ ೩೬ ॥

ಸೂಚಿತಸ್ಸನ್ಯಯೌ ಸೈನ್ಯೈರ್ವೇಷ್ಟಿತಸ್ಸ್ವಪುರೀಂ ಪ್ರತಿ ।
ದದರ್ಶ ನಗರೀಂ ಶೂನ್ಯಾಂ ಶ್ರೀರಾಮವಿರಹಾತುರಾಂ ॥ ೩೭ ॥

ಗತ್ವಾ ಪುರ್ಯಾಂ ಮಹೋತ್ಸಾಹೈರ್ನಿಜಸಿಂಹಾಸನಸ್ಥಿತಃ ।
ಪೂಜ್ಯ ಸರ್ವಾನ್ ಪಾರ್ಥಿವಾಂಶ್ಚ ಸಮಾಲಿಂಗ್ಯ ವ್ಯಸರ್ಜಯತ್ ॥ ೩೮ ॥

ತೊಂದರೆಪಡಿಸಬೇಡ. ನಾನು ಕೃಷ್ಣಾವತಾರಮಾಡುವಾಗ ಈ ಅಗಸನು ಅಗಸನಾಗಿಯೇ ಹುಟ್ಟುವನು.

೩೫. ಮಂಥರೆಯು ಪೂತನಿಯಾಗಿ ಹುಟ್ಟುವಳು. ಆಗ ಅವರು ಈ ಪೂರ್ವವೈರದಿಂದಲೇ ಹತರಾಗುವರು ಎಂದು ಹೇಳಿಕಳುಹಿಸಿ ಕೊಟ್ಟನು. ಅನಂತರ ಕುಶನು ಕಣ್ಣೀರನ್ನು ಸುರಿಸುತ್ತ ರಾಮನನ್ನೂ ಜಾನಕಿಯನ್ನೂ ನೋಡುತ್ತಾ ಹೊರಟನು.

೩೬. ಪ್ರಯಾಣಮಾಡಿ ಹೋಗುತ್ತಿದ್ದು ಮತ್ತೆ ಮತ್ತೆ ಹಿಂದಿರುಗಿ ಅವರ ಮುಖವನ್ನೇ ನೋಡುತ್ತಾ ರಥದಲ್ಲಿ ಕುಳಿತು ಹೋಗುತ್ತಿದ್ದನು. ಆಗ ಸೀತೆಯೂ ರಾಮನೂ ಹೋಗು ಹೋಗು ಎಂಬದಾಗಿ ಕೈಗಳನ್ನು ಬೀಸಿ ಸೂಚಿಸುತ್ತಿದ್ದರು.

೩೭. ಈ ರೀತಿಯಾಗಿ ಸೂಚಿಸುತ್ತಿರಲು ಅವನು ಸೈನ್ಯದೊಡನೆ ಕೂಡಿಕೊಂಡು ತನ್ನ ಪಟ್ಟಣಕ್ಕೆ ಹೋದನು. ಆ ಪಟ್ಟಣವು ಜನಗಳಿಲ್ಲದೆ ಶೂನ್ಯವಾಗಿದ್ದಿತು. ಶ್ರೀರಾಮನ ವಿರಹದಿಂದ ದುಃಖಪಡುತ್ತಿದ್ದಿತು.

೩೮. ತಾನು ಬಹುವಾದ ಉತ್ಸಾಹದಿಂದ ಹೋಗಿ ಸಿಂಹಾಸನದಲ್ಲಿ ಕುಳಿತನು. ಅನಂತರ ತನ್ನ ಜೊತೆಯಲ್ಲಿ ಬಂದಿದ್ದ ರಾಜರನ್ನೆಲ್ಲಾ ಗೌರವಿಸಿ ಅವರನ್ನು ಆಲಂಗಿಸಿಕೊಂಡು ಅವರವರ ಸ್ಥಳಗಳಿಗೆ ಕಳುಹಿಸಿ ಕೊಟ್ಟನು.

ತೇಽಪಿ ನತ್ವಾ ಕುಶಂ ಸ್ವಂ ಸ್ವಂ ಸ್ಥಲಂ ಜಗ್ಮುರ್ನೃಪೋತ್ತಮಾಃ ।
ಕರಭಾರಂ ದದುಸ್ತಸ್ಮೈ ತದಾಜ್ಞಾವಶವರ್ತಿನಃ ॥ ೩೯ ॥

ಮಂಥರಾರಜಕೌ ದೃಷ್ಟ್ವಾ ತೌ ದೈವಾತ್ಪುರ್ಯಾ ಬಹಿರ್ಮೃತೌ ।
ಪ್ರಾಪತುರ್ಜನ್ಮ ಸಾಕೇತೇ ಮೃತಾನಾಂ ನ ಪುನರ್ಭವಃ ॥ ೪೦ ॥

ಅಥ ರಾಮೋಽಬ್ರವೀತ್ಸರ್ವಾನ್ ವಾನರಾನ್ ಜಾಹ್ನವೀತಟೇ ।
ಮದರ್ಥಂ ಭ್ರಮಿತಾಸ್ಸರ್ವೇ ಯೂಯಂ ವಾನರಸತ್ತಮಾಃ ॥ ೪೧ ॥

ದ್ವಾಪರಾಗ್ರೇ ಪುನಸ್ಸರ್ವೇ ವ್ರಜೇ ಗೋಪಾ ಭವಿಷ್ಯಥ ।
ಯುಷ್ಮಾಭಿಸ್ಸಹಿತಃ ಪ್ರೀತ್ಯಾ ಕರಿಷ್ಯಾಮ್ಯಶನಾದಿಕಂ ॥ ೪೨ ॥

ತದಾಬ್ರವೀತ್ಸ ಸೌಮಿತ್ರಂ ರಾಮಃ ಪ್ರೀತ್ಯಾ ಪುರಃ ಸ್ಥಿತಂ ।
ಮದರ್ಥಂ ಶ್ರಮಃ ಕೃತಃ ಪೂರ್ವಂ ಸೇವಾಯಾಂ ಮಮ ದಂಡಕೇ ॥ ೪೩ ॥

---

೩೯. ಆ ನೃಪೋತ್ತಮರೂ ಕುಶನಿಗೆ ನಮಸ್ಕರಿಸಿ ತಮ್ಮ ತಮ್ಮ ಸ್ಥಳಗಳಿಗೆ ಹೊರಟು ಹೋದರು. ಅನಂತರ ಆ ಕುಶನ ಅಪ್ಪಣೆಯಂತೆ ನಡೆದು ಕೊಳ್ಳುತ್ತ ಆವನಿಗೆ ಕಪ್ಪಕಾಣಿಕೆಗಳನ್ನು ಕೊಡುತ್ತಿದ್ದರು.

೪೦. ಕುಶನ ಜೊತೆಯಲ್ಲಿಯೇ ಹೋಗುತ್ತಿದ್ದ ಆ ಅಗಸಮಂಥರೆಯರು ಅಕಸ್ಮಾತ್ತಾಗಿ ಆ ಅಯೋಧ್ಯೆಯ ಹೊರಗಡೆಯಲ್ಲಿಯೇ ಸತ್ತುಹೋದರು. ಏತಕ್ಕೆಂದರೆ ಅಯೋಧ್ಯೆಯಲ್ಲಿ ಸತ್ತವರಿಗೆ ಜನ್ಮವು ಬರುವುದೇ ಇಲ್ಲ.

೪೧. ರಾಮನು ಆ ಜಾಹ್ನವಿಯ ದಡದಲ್ಲಿದ್ದುಕೊಂಡು ಕಪಿಗಳೆಲ್ಲರನ್ನೂ ಕರೆದು ಎಲೈ ಕಪಿಶ್ರೇಷ್ಠರಿರಾ! ನೀವೆಲ್ಲರೂ ನನಗೋಸ್ಕರವಾಗಿ ಬಹುವಾಗಿ ತೊಂದರೆ ಪಟ್ಟಿರಿ.

೪೨. ನೀವು ಮತ್ತೆ ದ್ವಾಪರಯುಗದ ಕೊನೆಯಲ್ಲಿ ಗೊಲ್ಲರದೊಡ್ಡಿಯಲ್ಲಿ ಗೋಪರಾಗಿ ಜನ್ಮವೆತ್ತಿರಿ. ಆಗ ನಿಮ್ಮಗಳೊಡನೆ ಕುಳಿತುಕೊಂಡು ಪ್ರೀತಿಯಿಂದ ಭೋಜನ ಮುಂತಾದುವನ್ನು ಮಾಡುತ್ತೇನೆ. ಎಂದನು.

೪೩. ಅನಂತರ ಎದುರಿಗೆ ನಿಂತಿರುವ ಸೌಮಿತ್ರಿಯನ್ನು ಕುರಿತು ಪ್ರೀತಿಯಿಂದ ಇಂತೆಂದನು. ಎಲೈ ಸೌಮಿತ್ರಿಯೇ! ದಂಡಕಾರಣ್ಯದಲ್ಲಿ ನನ್ನ ಸೇವೆಯನ್ನು ಮಾಡುತ್ತ ಬಹುವಾಗಿ ಶ್ರಮಪಟ್ಟಿರುವೆ.

ಭವ ತ್ವಂ ದ್ವಾಪರೇ ಜ್ಯೇಷ್ಠಸ್ತೇ ಶುಶ್ರೂಷಾಂ ಕರೋಮ್ಯಹಂ ।
ತತಸ್ತಾನ್ ರಾಘವಃ ಪ್ರಾಹ ಋಕ್ಷಾನ್ ಪೌರಾನ್ ಕಪೀನಪಿ ॥ ೪೪ ॥

ಸರ್ವಾನೇವ ಮಯಾ ಸಾರ್ಧಂ ಪ್ರಯಾತೇತಿ ದಯಾನ್ವಿತಃ ।
ತತೋ ದದೌ ಕಲ್ಪವೃಕ್ಷಪಾರಿಜಾತೌ ಸುರಾಧಿಪಂ ॥ ೪೫ ॥

ತತಸ್ತಂ ಪುಷ್ಪಕಂ ಪ್ರಾಹ ಕುಬೇರಂ ವಹ ಸಾದರಂ ।
ಗಚ್ಛಾದ್ಯೈವ ತಥೇತ್ಯುಕ್ತ್ವಾ ರಾಮಂ ನತ್ವಾ ತು ಪುಷ್ಪಕಂ ॥ ೪೬ ॥

ಸೀತಾಂ ದೃಷ್ಟ್ವಾ ಯಯೌ ಶೀಘ್ರಂ ರಾಘವೇಣಾತಿಮಾನಿತಂ ।
ತತಃ ಪ್ರಾಹ ರಘುಶ್ರೇಷ್ಠಶ್ಚೋರ್ಮಿಲಾಂ ಮಾಂಡವೀಂ ತಥಾ ॥ ೪೭ ॥

ಶ್ರುತಕೀರ್ತಿಂ ಸಮಾಹೂಯ ವಾಲ್ಮೀಕಿಂ ಮುನಿಮಗ್ರತಃ ।
ಯುಷ್ಮಾಭಿರ್ಭರ್ತೃದೇಹೈಶ್ಚ ನಿಜದೇಹಾನಿ ವೇಗತಃ ॥ ೪೮ ॥

---

೪೪. ಆದ್ದರಿಂದ ದ್ವಾಪರಯುಗದಲ್ಲಿ ನನಗಿಂತಲೂ ನೀನು ಮೊದಲು ಹುಟ್ಟಿ ಅಣ್ಣನಾಗು. ಆಗ ನಿನ್ನ ಸೇವೆಯನ್ನು ನಾನು ಮಾಡುತ್ತೇನೆ. ಅನಂತರ ಶ್ರೀರಾಮನು ಅಲ್ಲಿದ್ದ ಪಟ್ಟಣಿಗರನ್ನೂ ಕಪಿಗಳನ್ನೂ ಕರಡಿಗಳನ್ನೂ ಕುರಿತು ಇಂತೆಂದನು.

೪೫. ನೀವೆಲ್ಲರೂ ಕೂಡ ನನ್ನೊಡನೆ ಹೊರಡಿರಿ ಎಂದು ಹೇಳಿ ಕಲ್ಪವೃಕ್ಷ, ಪಾರಿಜಾತಗಳನ್ನು ದೇವೇಂದ್ರನಿಗೆ ಕೊಟ್ಟು ಬಿಟ್ಟನು.

೪೬. ಅನಂತರ ಪುಷ್ಪಕವೇ ! ನೀನು ಕುಬೇರನ ಬಳಿಯಲ್ಲಿದ್ದುಕೊಂಡು ಅವನನ್ನು ಸುತ್ತಾಡಿಸುತ್ತ ಸುಖಪಡಿಸು. ಹೋಗು. ಎಂದೆನ್ನಲು ಪುಷ್ಪಕವು ಹಾಗೆಯೇ ಆಗಲೆಂದು ಹೇಳಿ ಅವನಿಗೆ ನಮಸ್ಕರಿಸಿತು.

೪೭. ಸೀತೆಯನ್ನು ನೋಡಿ ಆಕೆಗೂ ನಮಸ್ಕರಿಸಿ ರಾಮನಿಂದ ಗೌರವವನ್ನು ಹೊಂದಿ ಹೊರಟು ಹೋಯಿತು. ಆನಂತರ ಶ್ರೀರಾಮನು ಮಾಂಡವಿಯನ್ನು ಊರ್ಮಿಳೆಯನ್ನೂ ಕರೆದನು.

೪೮-೪೯. ಮತ್ತು ಶ್ರುತಕೀರ್ತಿಯನ್ನೂ ಕರೆದು ಅವರನ್ನು ಆ ವಾಲ್ಮೀಕಿಯು ಎದುರಿಗೆ ನಿಲ್ಲಿಸಿಕೊಂಡು ನೀವೆಲ್ಲರೂ ನಾಳೆಯದಿವಸ ವಾಲ್ಮೀಕಿಯ ಎದುರಿಗೆ ನಿಮ್ಮ ನಿಮ್ಮ ದೇಹವನ್ನು ನಿಮ್ಮ ಗಂಡಂದಿರ

ಸ್ವೇಗ್ನೌ ದಗ್ಧ್ವಾ ಸ್ವರ್ಗಲೋಕಂ ಗಂತವ್ಯಂ ಮಮ ವಾಕ್ಯತಃ ।
ತಥೇತಿ ರಾಘವಂ ಪ್ರೋಚುಸ್ತದಾ ತಾಶ್ಚೋರ್ಮಿಲಿಕಾದಿಕಾಃ ॥ ೪೯ ॥

ರಾಮಂ ನತ್ವಾ ಯಯುಃ ಸರ್ವಾಸ್ಸ ಸ್ವಂ ತದ್ವಸನಂ ಗೃಹಂ ।
ಅಥ ರಾಮೋಽಪಿ ತಾಂ ರಾತ್ರಿಂ ಸೀತಯಾ ರುಕ್ಮಮಂಚಕೇ ॥ ೫೦ ॥

ನಿನಾಯ ಶಂಕರಾದ್ಯಾಸ್ತೇ ಸುರಾಸ್ತತ್ರ ಮುನೀಶ್ವರೈಃ ।
ಸ್ವಸ್ವಪತ್ನ್ಯಾ ಲಕ್ಷ್ಮಣಾದ್ಯಾಶ್ಚಕ್ರುಃ ಕ್ರೀಡಾ ಯಥಾಸುಖಂ ॥ ೫೧ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ಆದಿಕಾವ್ಯೇ ಪೂರ್ಣಕಾಂಡೇ ಸರ್ವೇಷಾಂವಿಸರ್ಜನಂ
ನಾಮ ಪಂಚಮಸ್ಸರ್ಗಃ ಸಮಾಪ್ತಃ

ದೇಹಗಳೊಡನೆ ಸುಟ್ಟುಕೊಂಡು ಸ್ವರ್ಗಲೋಕವನ್ನು ಹೊಂದಬೇಕು. ನನ್ನ ಮಾತನ್ನು ನಿರ್ಲಕ್ಷಿಸಬೇಡಿರಿ. ಎಂದನು. ಆಗ ಆ ಊರ್ಮಿಳೆಯೇ ಮುಂತಾದವರು ಹಾಗೆಯೇ ಆಗಲೆಂದು ಆ ರಾಮನಿಗೆ ಹೇಳಿದರು.

೫೦. ಅನಂತರ ಆ ರಾಮನಿಗೆ ನಮಸ್ಕರಿಸಿ ಅವರೆಲ್ಲರೂ ಅವರವರ ಡೇರೆಯ ಮನೆಗಳಿಗೆ ಹೊರಟು ಹೋದರು. ಅನಂತರ ಶ್ರೀರಾಮನು ಆ ರಾತ್ರಿಯನ್ನು ಚಿನ್ನದ ಮಂಚದಮೇಲೆ ಸೀತೆಯೊಡನೆ ಮಲಗಿಕೊಂಡು ಕಳೆದನು.

೫೧. ಶಂಕರನೇ ಮುಂತಾದ ದೇವತೆಗಳೂ ಮುನೀಶ್ವರರೂ ಆ ರಾತ್ರಿಯನ್ನು ಅಲ್ಲಿಯೇ ಕಳೆದರು. ಲಕ್ಷ್ಮಣನೇ ಮುಂತಾದವರು ಅವರವರ ಹೆಂಡಿರೊಂದಿಗೆ ಸುಖವಾಗಿ ಕ್ರೀಡಿಸಿಕೊಂಡು ಆ ರಾತ್ರಿಯನ್ನು ಕಳೆದರು.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ
ಆದಿಕಾವ್ಯವಾದ ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ
ಎಲ್ಲರನ್ನೂ ಕಳುಹಿಸಿದುದು ಎಂಬ ಐದನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ ಐದನೆಯ ಸರ್ಗದ ಸಾರಾಂಶವು.

ಸುಷೇಣ ಸುಗ್ರೀವ ವಿಭೀಷಣರೂ ಎಲ್ಲಾ ವಾನರರೂ ರಾಮನನ್ನು ಕುರಿತು ನಾವೂ ನಿನ್ನೊಡನೆ ಸ್ವರ್ಗಕ್ಕೆ ಬರುತ್ತೇವೆ ಎನ್ನಲು ರಾಮನು ಎಲೈ ವಿಭೀಷಣನೇ ! ನನ್ನ ಕಥೆಯು ಪ್ರಪಂಚದಲ್ಲಿ ಪ್ರಖ್ಯಾತವಾಗಿರುವವರೆಗೂ ನೀನು ನನ್ನ ಮಾತಿನಂತೆ ಭೂಲೋಕದಲ್ಲಿರಬೇಕೆಂದು ಹೇಳಿ ಗೌರವಿಸಿ ಕಳುಹಿಸಿದನು. ಜಾಂಬವಂತನನ್ನು ನೀನು ಭೂಲೋಕದಲ್ಲಿರಬೇಕು. ದ್ವಾಪರಯುಗದ ಕೊನೆಯಲ್ಲಿ ನಿನಗೆ ನಾನು ದರ್ಶನವನ್ನು ಕೊಡುತ್ತೇನೆ. ನೀನು ನನಗೆ ಈಗ ಮಾಡಿದ ಸಹಾಯಕ್ಕೋಸ್ಕರ ಆಗ ನನಗೆ ಮಾವನಾಗಿ ಖ್ಯಾತನಾಗುತ್ತೀಯೆ. ಎನ್ನಲು ಅವನೂ ನಮಸ್ಕರಿಸಿ ಹೊರಟು ಹೋದನು. ಹನುಮಂತನನ್ನು ಕುರಿತು ಅಯ್ಯಾ ! ನೀನು ಭೂಮಿಯಲ್ಲಿ ಸುಖವಾಗಿರು. ನೀನು ದ್ವಾಪರದ ಕೊನೆಯಲ್ಲಿ ಅರ್ಜುನನೊಡನೆ ಶರಸೇತುವಿನ ವಿಷಯದಲ್ಲಿ ಪಣವನ್ನು ಕಟ್ಟುತ್ತೀಯೆ. ಆಗ ನಾನು ನಿನಗೆ ದರ್ಶನವನ್ನು ಕೊಡುತ್ತೇನೆ. ಎಂದು ಹೇಳಿ ಹಾರವನ್ನು ಕೊಟ್ಟನು ಸೀತೆಯು ಎರಡು ಬಂದಿಗಳನ್ನು ಕೊಟ್ಟಳು. ಅನಂತರ ಅವರಿಗೆ ನಮಸ್ಕರಿಸಿ ತಪಸ್ಸಿಗೋಸ್ಕರ ಹಿಮವತ್ಪರ್ವತಕ್ಕೆ ಹೊರಟು ಹೋದನು. ಅಂತೆಯೇ ಮಿಕ್ಕವರಿಗೂ ಯಥೋಚಿತವಾದ ಮಾತಿನಿಂದ ಸಮಾಧಾನಪಡಿಸಿ ಕಳುಹಿಸಿದನು. ಅಂತೆಯೇ ಯೂಪಕೇತುವನ್ನು ವಿದಿಶಾನಗರಕ್ಕೂ ಸುಬಾಹುವನ್ನು ಮಥುರೆಗೂ ಪುಷ್ಕರನನ್ನು ಪುಷ್ಕರಾವತಿಗೂ ತಕ್ಷನನ್ನು ತಕ್ಷಶಿಲೆಗೂ ಲವನನ್ನು ಉತ್ತರ ಕುರುವಿಗೂ ಕಳುಹಿಸಿದನು. ಸೀತೆಯು ಲವನಿಗೆ ಕಾಮಧೇನುವನ್ನು ಕೊಟ್ಟಳು. ಕುಶನೂ ಉತ್ತರಕುರುವಿಗೆ ಹೋದನು.

ಆ ಅಗಸನನ್ನೂ ಮಂಥರೆಯನ್ನೂ ಗೌರವಿಸಿ ಕುಶನೊಡನೆಯೇ ಕಳುಹಿಸಿದನು. ಇವರು ಪೂರ್ವವೈರವನ್ನು ಸ್ಮರಿಸಿಕೊಂಡು ರಾಮನೊಡನೆ ಸ್ವರ್ಗಕ್ಕೆ ಹೋಗಲೇ ಇಲ್ಲ. ಅನಂತರ ಕೃಷ್ಣಾವತಾರದಲ್ಲಿ ಅಗಸನು ಅಗಸನಾಗಿಯೂ ಮಂಥರೆಯು ಪೂತನೆಯಾಗಿಯೂ ಹುಟ್ಟಿದರು. ಕುಶನೊಡನೆ ಹೋದ ಅಗಸನೂ ಮಂಥರೆಯೂ ಅಯೋಧ್ಯೆಗೆ ಹೋಗದೆ ಹೊರಗೇ ಸತ್ತರು. ಏಕೆಂದರೆ

ಅಯೋಧ್ಯೆಯಲ್ಲಿ ಸತ್ತರೆ ಪುನರ್ಜನ್ಮವಿಲ್ಲ. ಅನಂತರ ರಾಮನು ಕಪಿಗಳನ್ನು ನೋಡಿ ನೀವೆಲ್ಲರೂ ನನ್ನೊಡನೆ ಬಹು ಕಷ್ಟಪಟ್ಟದ್ದೀರಿ. ಕೃಷ್ಣಾವತಾರದಲ್ಲಿ ಗೋಪರಾಗಿ ಹುಟ್ಟಿ ಎಂದನು. ಲಕ್ಷ್ಮಣನನ್ನು ಕುರಿತು ನೀನು ನನಗೆ ಅಣ್ಣನಾಗಿ ಹುಟ್ಟಿ ಸೇವೆಯನ್ನು ತೆಗೆದುಕೋ ಎಂದನು. ಹೀಗೆ ಎಲ್ಲರಿಗೂ ಮಾಡಬೇಕಾದುದನ್ನು ಮಾಡಿ ಹೇಳಬೇಕಾದುದನ್ನು ಹೇಳಿ ಆದಿನದ ರಾತ್ರಿಯನ್ನು ಅಲ್ಲಿಯೇ ಡೇರೆಯಲ್ಲಿದ್ದು ಕಳೆದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಪೂರ್ಣಕಾಂಡೇ ಷಷ್ಠಸ್ಸರ್ಗಃ

॥ ಶ್ರೀರಾಮದಾಸ ಉವಾಚ ॥

ಅಥ ರಾಮಸ್ಸಮುತ್ಥಾಯ ಪ್ರಭಾತೇ ಸೀತಯಾ ಸಹ |
ಅಜಮೀಢಂ ಸಮಾಹೂಯ ಮಂಜುಳಂ ವಾಕ್ಯಮಬ್ರವೀತ್ ॥ ೧ ॥

ಅದ್ಯಾಹಂ ಸೀತಯಾ ಸ್ವೀಯಂ ಪದಂ ಗಚ್ಛಾಮಿ ಬಂಧುಭಿಃ |
ವಾನರೈಸ್ಸಕಲೈಃ ಪೌರೈಸ್ತ್ವಯಾ ಶೇಷಂ ತು ಯಜ್ಜಡಂ ॥ ೨ ॥

ವಸ್ತ್ರಗೃಹಾದಿಕಂ ಸರ್ವಂ ಪ್ರೇಷಣೀಯಂ ಕುಶಂ ಪ್ರತಿ |
ಯಚ್ಚರಂ ಕೀಟಿಕಾಂತಂ ತನ್ಮಯಾ ಯಾಸ್ಯತಿ ವೈ ದಿವಂ ॥ ೩ ॥

ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ ಆರನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು—ಅನಂತರ ಶ್ರೀರಾಮನು ಬೆಳಗ್ಗೆ ಸೀತೆಯೊಡನೆ ಎದ್ದು ಅಜಮೀಢನನ್ನು ಕರೆದು ಉತ್ತಮವಾದ ಈ ಮಾತನ್ನು ಹೇಳಿದನು.

೨. ಎಲೈ ಅಜಮೀಢನೇ ! ಇಂದು ನಾನು ಸೀತೆಯೊಡನೆಯೂ ನನ್ನ ತಮ್ಮಂದಿರೊಡನೆಯೂ ನನ್ನ ಜಾಗಕ್ಕೆ ಹೋಗುತ್ತೇನೆ. ವಾನರರೂ ಪೌರರೂ ಎಲ್ಲರೂ ನನ್ನ ಸಂಗಡಲೇ ಬರುವರು.

೩. ಅನಂತರ ಈಡೇರಿ ಮುಂತಾದ ಜಡವಾದ ಪದಾರ್ಥಗಳನ್ನು ಕುಶನಿಗೆ ಕಳುಹಿಸು. ಸಂಚರಿಸುವ ಕೀಟವೇ ಮೊದಲುಗೊಂಡು ಮನುಷ್ಯರ ವರೆಗೂ ಇರುವ ಈ ಪ್ರಾಣಿಗಳೆಲ್ಲವೂ ನನ್ನೊಡನೆ ಸ್ವರ್ಗಕ್ಕೆ ಬರುತ್ತವೆ.

ಅತಸ್ತ್ವಂ ತಂ ಕುಶಂ ಗತ್ವಾ ಸರ್ವಂ ವೃತ್ತಂ ನಿವೇದಯ ।
ಕರೋತ್ವುತ್ತರಕಾರ್ಯಾಣಿ ಕುಶೋಽಸ್ಮಾಕಂ ಸವಿಸ್ತರಂ ॥ ೪ ॥

ಮಾ ಕರೋತು ಕುಶೋಽಸ್ಮಾಕಂ ಖೇದಂ ತಂ ತ್ವಂ ನಿವಾರಯ ।
ಇತಿ ರಾಮವಚಃ ಶ್ರುತ್ವಾ ಸಾಶ್ರುನೇತ್ರಸ್ತಥೇತಿ ಸಃ ॥ ೫ ॥

ಅಜಮೀಢಸ್ತದಾ ಪ್ರಾಹ ನನಾಮ ರಘುನಾಯಕಂ ।
ಅಥ ರಾಮಶ್ಶನೈಃ ಪೌರೈಸ್ಸ್ನಾತ್ವಾ ಭಾಗೀರಥೀಜಲೇ ॥ ೬ ॥

ಕೃತ್ವಾ ನಿತ್ಯವಿಧಿಂ ಪೂರ್ವಂ ಹುತ್ವಾ ವಹ್ನಿಂ ಸವಿಸ್ತರಂ ।
ದದೌ ದಾನಾನ್ಯನೇಕಾನಿ ಗಂಗಾಸೈಕತಸಂಸ್ಥಿತಃ ॥ ೭ ॥

ತತಃ ಪ್ರಾಸ್ಥಾನಿಕಂ ಕರ್ಮ ಚಕಾರ ಸ ಯಥಾವಿಧಿ ।
ವಹ್ನಿಂ ವಿಸರ್ಜಯಾಮಾಸ ವೈಕುಂಠಂ ಪ್ರತಿ ರಾಘವಃ ॥ ೮ ॥

---

೪. ಅನಂತರ ನೀನು ಕುಶನ ಬಳಿಗೆ ಹೋಗಿ ಎಲ್ಲ ವಿಷಯಗಳನ್ನೂ ತಿಳಿಸು. ಆ ಕುಶನು ನಮ್ಮಗಳಿಗೆಲ್ಲಾ ವಿಸ್ತಾರವಾಗಿ ಉತ್ತರಕ್ರಿಯೆಗಳನ್ನು ಮಾಡಲಿ.

೫. ಆ ಕುಶನು ನಮಗೋಸ್ಕರವಾಗಿ ದುಃಖಪಡಬೇಕಾದ್ದಿಲ್ಲ. ಹಾಗೆ ದುಃಖಪಟ್ಟರೆ ಅವನನ್ನು ದುಃಖಪಡದಂತೆ ನೀನು ತಡೆಯಬೇಕು. ಎಂಬುದಾಗಿ ಹೇಳಿದನು. ಆ ಅಜಮೀಢನು ಹಾಗೇ ಆಗಲೆಂದು ಹೇಳಿ ಕಣ್ಣಿನಲ್ಲಿ ದುಃಖದಿಂದ ನೀರನ್ನು ತುಂಬಿಕೊಂಡನು.

೬. ಅಜಮೀಢನು ಹಾಗೇ ಆಗಲೆಂದು ಹೇಳಿ ಆ ರಘುನಾಯಕನಿಗೆ ನಮಸ್ಕರಿಸಿದನು. ಅನಂತರ ರಾಮನು ಪಟ್ಟಣಿಗರೊಂದಿಗೆ ಆ ಭಾಗೀರಥಿಯ ನೀರಿನಲ್ಲಿ ಸ್ನಾನಮಾಡಿದನು.

೭ ನಿತ್ಯಕರ್ಮಗಳನ್ನೆಲ್ಲಾ ಮಾಡಿಕೊಂಡನು. ಅಗ್ನಿಯಲ್ಲಿ ಔಪಾಸನವನ್ನು ಮಾಡಿದನು. ಆ ಗಂಗೆಯ ಮರಳಿನಮೇಲಿದ್ದುಕೊಂಡೇ ಅನೇಕ ರೀತಿಯಾದ ದಾನಗಳನ್ನು ಕೊಟ್ಟನು.

೮ ಅನಂತರ ವಿಧಿವತ್ತಾಗಿ ಪ್ರಯಾಣದ ಕೆಲಸಗಳೆಲ್ಲವನ್ನೂ ಮಾಡಿಕೊಂಡನು. ಅಗ್ನಿಯನ್ನು ವಿಸರ್ಜಿಸಿ ವೈಕುಂಠಕ್ಕೆ ಕಳುಹಿಸಿದನು.

ತದಾ ರಾಮಸ್ಯ ಪದ್ಮಾ ಸಾ ಗತಾ ದಕ್ಷಿಣಹಸ್ತತಃ |
ಮೂರ್ತಿರೂಪಧರಾ ವೇದಾ ವೈಕುಂಠಮಾಯಯುಸ್ತದಾ ॥ ೯ ॥

ತ್ರಿಪದಾ ಪ್ರಣವೇನೈವ ಶ್ರೀರಾಮಾಸ್ಯಾದ್ವಿನಿರ್ಗತಾ |
ನತ್ವಾ ರಾಮಂ ಯಯೌ ಶಾಂತಿಃ ಕ್ಷಮಾ ಮೇಧಾ ಧೃತಿರ್ದಯಾ ॥ ೧೦ ॥

ತೇಜೋ ಬಲಂ ಯಶಸ್ಸ್ವರ್ಗಂ ಯಯೌ ಸರ್ವಂ ತದಾ ಪುರಃ |
ತತಃ ಪೌರಾ ವಾನರಾಶ್ಚ ಸರ್ವೇ ಭಾಗೀರಥೀಜಲೇ ॥ ೧೧ ॥

ಸ್ನಾತ್ವಾ ನಿರುಧ್ಯ ವಾಯೂಂಶ್ಚ ನಿಜದೇಹಾನಿ ತತ್ಯಜುಃ |
ಅಥ ರಾಮೋ ಮುದಾ ಗಂಗಾಂ ಸ್ಪೃಷ್ಟ್ವಾ ದರ್ಭಾಸನೋಪರಿ ॥ ೧೨ ॥

ದರ್ಭಪಾಣಿಃ ಸ್ಥಿತಸ್ತೂಷ್ಣೀಮುತ್ತರಾಭಿಮುಖಃ ಸ್ತ್ರಿಯಾ |
ತಾವತ್ಸರ್ವೇ ದದೃಶುಸ್ತೇ ದೇವಾ ವಿಷ್ಣುಂ ಪುರಃ ಸ್ಥಿತಂ ॥ ೧೩ ॥

---

೯. ಆಗ ರಾಮನ ಬಲಗೈಯ್ಯಲ್ಲಿದ್ದ ಪದ್ಮವು ಮೂರ್ತೀಭವಿಸಿ ಹೊರಟು ಹೋಯಿತು. ವೇದಗಳು ಮೂರ್ತಿಯನ್ನು ಹೊಂದಿ ವೈಕುಂಠಕ್ಕೆ ಹೋದುವು.

೧೦-೧೧. ಗಾಯತ್ರಿಯು ಓಂಕಾರದೊಡನೆ ಶ್ರೀರಾಮನ ಬಾಯಿಂದ ಹೊರಟಿತು. ಶಾಂತಿ, ಕ್ಷಮೆ, ಮೇಧೆ, ಧೃತಿ, ದಯೆ, ತೇಜಸ್ಸು, ಬಲ, ಯಶಸ್ಸು, ಇವೆಲ್ಲವೂ ರಾಮನಿಗೆ ನಮಸ್ಕರಿಸಿ ಎಲ್ಲರ ಮುಂದೆಯೂ ಹೊರಟವು. ಅನಂತರ ಪೌರರೂ, ವಾನರರೂ ಭಾಗೀರಥಿಯ ನೀರಿನಲ್ಲಿ ಸ್ನಾನಮಾಡಿದರು.

೧೨. ಅನಂತರ ಪ್ರಾಣಾಯಾಮದಿಂದ ವಾಯುವನ್ನು ನಿರೋಧಿಸಿ ತಮ್ಮ ತಮ್ಮ ದೇಹವನ್ನು ಬಿಟ್ಟು ಬಿಟ್ಟರು. ಅನಂತರ ಶ್ರೀರಾಮನು ಗಂಗೆಯಲ್ಲಿ ಆಚಮನಮಾಡಿ ದರ್ಭಾಸನದಲ್ಲಿ ಕುಳಿತನು.

೧೩. ದರ್ಭೆಯನ್ನು ಕೈಯ್ಯಲ್ಲಿ ಹಿಡಿದುಕೊಂಡು ಉತ್ತರಾಭಿಮುಖವಾಗಿ ಹೆಂಡತಿಯನ್ನು ಜೊತೆಯಲ್ಲಿ ಕೂರಿಸಿಕೊಂಡು ಕುಳಿತನು. ಇಷ್ಟರಲ್ಲಿ ಎಲ್ಲರೂ ವಿಷ್ಣುವು ಮುಂದೆ ನಿಂತಿರುವುದನ್ನು ನೋಡಿದರು.

ಚತುರ್ಭುಜಂ ನೀಲಕಾಂತಿಂ ಪೀತಕೌಶೇಯಧಾರಿಣಂ ।
ಕೌಸ್ತುಭಾಂಕಿತಹೃದ್ದೇಶಂ ಶ್ರೀವತ್ಸಾಂಕೋಪಶೋಭಿತಂ ॥ ೧೪ ॥

ಸೀತಾ ಬಭೂವ ಸಾ ಲಕ್ಷ್ಮೀರ್ವಿಷ್ಣುವಾಮಾಂಗಸಂಸ್ಥಿತಾ ।
ಶೇಷೋ ಬಭೂವ ಸೌಮಿತ್ರಿಃ ಫಣಾಭಿರತಿಭಾಸುರಃ ॥ ೧೫ ॥

ಶಂಖೋ ಬಭೂವ ಭರತಃ ಶ್ರೀವಿಷ್ಣೋಸ್ಸವ್ಯಸತ್ಕರೇ ।
ವಾಮೇ ಕರೇ ಬಭೂವಾಥ ಶತ್ರುಘ್ನಶ್ಚ ಸುದರ್ಶನಂ ॥ ೧೬ ॥

ದೇವೇಷು ವಿವಿಶುಃ ಸರ್ವೇ ವಾನರಾಸ್ತೇ ಕ್ಷಣಾತ್ತದಾ ।
ಚಾಂಡಾಲಕ್ರಿಮಿಕೀಟಾಂತಾ ಅಯೋಧ್ಯಾಪುರವಾಸಿನಃ ॥ ೧೭ ॥

ಪ್ರಾಪುಸ್ತೇ ದಿವ್ಯದೇಹಾನಿ ವಿಮಾನೇ ಸಂಸ್ಥಿತಾ ಬಭುಃ ।
ತದಾ ನಿನೇದುರ್ವಾದ್ಯಾನಿ ದೇವಾನಾಂ ಗಗನಾಂಗಣೇ ॥ ೧೮ ॥

---

೧೪. ಅವನಿಗೆ ನಾಲ್ಕು ತೋಳುಗಳಿದ್ದುವು. ನೀಲಮೇಘದಂತಿದ್ದನು. ಹೊಂಬಣ್ಣದ ರೇಷ್ಮೆಯ ಬಟ್ಟೆಯನ್ನು ಧರಿಸಿದ್ದನು. ಹೃದಯಪ್ರವೇಶದಲ್ಲಿ ಕೌಸ್ತುಭವಿದ್ದಿತು. ಶ್ರೀವತ್ಸವೆಂಬ ಮಚ್ಚೆಯು ಶೋಭಾಯಮಾನವಾಗಿ ಕಾಣಿಸುತ್ತಲಿದ್ದಿತು.

೧೫. ಸೀತೆಯು ಲಕ್ಷ್ಮಿಯಾಗಿ ಆ ವಿಷ್ಣುವಿನ ಎಡಗಡೆಯಲ್ಲಿ ನಿಂತಳು. ಸೌಮಿತ್ರಿಯು ಆದಿಶೇಷನಾದನು. ಅವನಲ್ಲಿ ಹೆಡೆಗಳು ಬಹು ಮನೋಹರವಾಗಿ ಕಂಡು ಬಂದುವು.

೧೬. ಭರತನು ಆ ಸ್ವಾಮಿಯ ಶಂಖವಾಗಿ ಆದನು. ಆ ಶಂಖವು ಆ ವಿಷ್ಣುವಿನ ಬಲಗೈಯ್ಯನ್ನು ಸೇರಿತು. ಶತ್ರುಘ್ನನು ಸುದರ್ಶನಚಕ್ರವಾಗಿ ಆ ಸ್ವಾಮಿಯ ಎಡದ ಕೈಯ್ಯನ್ನು ಹೊಂದಿದನು.

೧೭–೧೮. ಅಲ್ಲಿದ್ದ ಕಪಿಗಳೆಲ್ಲರೂ ಕ್ಷಣಕಾಲದಲ್ಲಿ ಆಯಾ ದೇವತೆಗಳಲ್ಲಿ ಸೇರಿಹೋದರು. ಚಂಡಾಲ ಮೊದಲುಗೊಂಡು ಕ್ರಿಮಿಕೀಟಗಳೂ ಅಯೋಧ್ಯೆಯ ವಾಸಿಗಳೂ ಕೂಡ ದಿವ್ಯವಾದ ದೇಹವನ್ನು ಹೊಂದಿ ವಿಮಾನದಲ್ಲಿ ಕುಳಿತು ಶೋಭಿಸಿದರು. ಆಗ ಅಂತರಿಕ್ಷದಲ್ಲಿ ದೇವದುಂದುಭಿಗಳು ಮೊಳಗಿದುವು.

ವವರ್ಷುರ್ದೇವಪತ್ನ್ಯಶ್ಚ ಪುಷ್ಪವೃಷ್ಟಿಭಿರಾದರಾತ್ ।
ನನೃತುರ್ವೈ ಹ್ಯಪ್ಸರಸೋ ಜಗುರ್ಗಂಧರ್ವಕಿನ್ನರಾಃ ॥ ೧೯ ॥

ಪ್ರಣನಾಮ ತದಾ ತಾರ್ಕ್ಷ್ಯಃ ಶ್ರೀವಿಷ್ಣುಂ ರವಿಭಾಸುರಂ ।
ದೇಹಾನಿ ಮುಮುಚುಸ್ಸರ್ವೇ ಸ್ತ್ರೀಭಿಸ್ಸೋಮಾದಿಕಾಶ್ಚ ತೇ ॥ ೨೦ ॥

ಪತಿದೇಹಾನಿ ಚಾಲಿಂಗ್ಯ ತದಾ ತಾ ಊರ್ಮಿಲಾದಿಕಾಃ ।
ದೇಹಾನ್ಯಗ್ನೌ ತ್ಯಜುಸ್ಸರ್ವಾ ರಮ್ಯೇ ಭಾಗೀರಥೀತಟೇ ॥ ೨೧ ॥

ಅಥ ತಾ ದೇವಪತ್ನ್ಯಶ್ಚ ರತ್ನದೀಪೈಸ್ಸಹಸ್ರಶಃ ।
ವಿಷ್ಣುಂ ನೀರಾಜಯಾಮಾಸುರ್ಲಕ್ಷ್ಮ್ಯಾಯುಕ್ತಂ ಮಹಾಭುಜಂ ॥ ೨೨ ॥

ವಿಷ್ಣುಸ್ತತೋಽಬ್ರವೀದ್ವಾಕ್ಯಂ ವೇಧಸಂ ಮಂಜುಲಂ ಶನೈಃ ।
ಅಯೋಧ್ಯಾವಾಸಿನಸ್ಸರ್ವೇ ತಿರ್ಯಗ್ಜಾತ್ಯಾದಯಶ್ಶುಭಾಃ ॥ ೨೩ ॥

---

೧೯. ದೇವತಾಸ್ತ್ರೀಯರು ಅಂತರಿಕ್ಷದಲ್ಲಿದ್ದುಕೊಂಡು ಪ್ರೀತಿಯಿಂದ ಹೂಮಳೆಯನ್ನು ಸುರಿಸಿದರು. ಅಪ್ಸರಸ್ತ್ರೀಯರು ಕುಣಿದರು. ಗಂಧರ್ವರೂ ಕಿನ್ನರರೂ ಗಾನಮಾಡಿದರು.

೨೦. ಆಗ ಸೂರ್ಯನಂತೆ ಪ್ರಕಾಶಮಾನವಾದ ಶ್ರೀವಿಷ್ಣುವಿಗೆ ಗರುಡನು ನಮಸ್ಕರಿಸಿದನು. ಆ ಸೋಮನೇ ಮುಂತಾದವರು ಅವರವರ ಹೆಂಡತಿಯರೊಡನೆ ಈ ದೇಹವನ್ನು ಬಿಟ್ಟು ಬಿಟ್ಟರು.

೨೧. ಊರ್ಮಿಲೆಯೇ ಮುಂತಾದವರು ಅವರವರ ಗಂಡಂದಿರ ದೇಹವನ್ನು ಆಲಂಗಿಸಿಕೊಂಡು ಆ ಗಂಗಾನದಿಯ ದಡದಲ್ಲಿ ಅಗ್ನಿಯಲ್ಲಿ ತಮ್ಮ ತಮ್ಮ ದೇಹಗಳನ್ನು ಬಿಟ್ಟು ಬಿಟ್ಟರು.

೨೨. ಲಕ್ಷ್ಮಿಯಿಂದ ಕೂಡಿರುವ ಆ ವಿಷ್ಣುವಿಗೆ ದೇವತಾಸ್ತ್ರೀಯರು ರತ್ನದ ದೀಪಗಳಿಂದ ಅನೇಕಸಾರಿ ಆರತಿಯನ್ನು ಎತ್ತಿದರು.

೨೩-೨೪. ಆಗ ವಿಷ್ಣುವು ಬ್ರಹ್ಮನನ್ನು ಕುರಿತು ಒಳ್ಳೆಯ ಮಾತಿನಿಂದ ಇಂತೆಂದನು. ಎಲೈ ಬ್ರಹ್ಮನೇ ! ಅಯೋಧ್ಯಾವಾಸಿಗಳಾದ ಸಕಲಪ್ರಾಣಿಗಳೂ

ಏತೇ ಸಮಾಗತಾ ಬ್ರಹ್ಮಂಸ್ತೇಷಾಂ ಸ್ಥಾನಂ ವದಾಧುನಾ ।
ತದ್ವಿಷ್ಣೋರ್ವಚನಂ ಶ್ರುತ್ವಾ ತದಾ ಬ್ರಹ್ಮಾಬ್ರವೀದ್ವಚಃ ॥ ೨೪ ॥

ಮಲ್ಲೋಕಾದುಪರಿಷ್ಟಾಂಶ್ಚ ಲೋಕಾನ್ಸಾಂತಾನಿಕಾನ್ ಶುಭಾನ್ ।
ಏತೇ ಯಾಂತು ಜನಾಸ್ಸರ್ವೇ ತ್ವದ್ದರ್ಶನಮಹೋಜ್ಜ್ವಲಾಃ ॥ ೨೫ ॥

ತತಃ ಪ್ರಾಹ ಮುನಿರ್ವಿಷ್ಣುರಯೋಧ್ಯಾಯಾಂ ಮೃತಾಶ್ಚ ಯೇ ।
ಅಗ್ರೇ ತೇಪಿ ಸಮಾಯಾಂತು ಲೋಕಾನ್ಸಾಂತಾನಿಕಾಂಛುಭಾನ್ ॥ ೨೬ ॥

ತಥೇತಿ ಸ ವಿಧಿಃ ಪ್ರಾಹ ಮಹಾವಿಷ್ಣುಂ ಮುದಾನ್ವಿತಃ ।
ತತಸ್ತೇ ದಿವ್ಯದೇಹಾಶ್ಚ ಸಾಕೇತಪುರವಾಸಿನಃ ॥ ೨೭ ॥

ನಾನಾವಿಮಾನಸಂಸ್ಥಾಶ್ಚ ದಿವ್ಯವಸ್ತ್ರವಿಭೂಷಿತಾಃ ।
ದಿವ್ಯಾಲಂಕಾರಸಂಯುಕ್ತಾ ಹ್ಯಪ್ಸರೋಭಿರ್ವಿಲೇಪಿತಾಃ ॥ ೨೮ ॥

ಇಲ್ಲಿಗೆ ಬಂದು ಬಿಟ್ಟಿವೆ. ಇವುಗಳು ಇರುವುದಕ್ಕೆ ಸ್ಥಾನವನ್ನು ತೋರಿಸು. ಎನ್ನಲು ವಿಷ್ಣುವಿನ ಈ ಮಾತನ್ನು ಕೇಳಿ ಬ್ರಹ್ಮನು ಇಂತೆಂದನು.

೨೫. ಎಲೈ ಸ್ವಾಮಿಯೇ! ನನ್ನ ಲೋಕಕ್ಕಿಂತಲೂ ಮೇಲುಗಡೆ ಸಾಂತಾನಿಕಲೋಕವಿರುವುದು. ಇವರೆಲ್ಲರೂ ನಿನ್ನ ದರ್ಶನದಿಂದ ಬಹು ಪುಣ್ಯವಂತರಾಗಿರುವರು. ಅಲ್ಲಿಗೆ ಹೋಗಲಿ.

೨೬. ಅನಂತರ ವಿಷ್ಣುವು ಎಲೈ ಬ್ರಹ್ಮನೇ! ಇನ್ನು ಮೇಲೆ ಅಯೋಧ್ಯೆಯಲ್ಲಿ ಸಾಯುವವರೆಲ್ಲರೂ ಇಲ್ಲಿಗೆ ಬರಲಿ ಎಂದನು.

೨೭. ಅದಕ್ಕೆ ಬ್ರಹ್ಮನು ಹಾಗೆಯೇ ಆಗಲಿ ಎಂದು ವಿಷ್ಣುವಿಗೆ ಸಂತೋಷದಿಂದ ಹೇಳಿದನು. ಒಡನೆಯೇ ಆ ಅಯೋಧ್ಯೆಯಲ್ಲಿದ್ದ ಪ್ರಾಣಿಗಳೆಲ್ಲರಿಗೂ ದಿವ್ಯದೇಹವು ಬಂದು ಬಿಟ್ಟಿತು.

೨೮. ಬಗೆ ಬಗೆಯ ವಿಮಾನಗಳಲ್ಲಿ ಕುಳಿತರು. ವಸ್ತ್ರಭೂಷಣಗಳಿಂದ ಅಲಂಕೃತರಾದರು. ಇವರನ್ನು ದಿವ್ಯಾಲಂಕಾರವನ್ನು ಧರಿಸಿದ ಅಪ್ಸರಸ್ತ್ರೀಯರು ಸೇವಿಸುತ್ತಿದ್ದರು.

ನಾನಾಸುಗಂಧಗಂಧಾದ್ಯೈರ್ದಿವ್ಯಚಾಮರವಿಜಿತಾಃ ।
ವಿರೇಜುರ್ಗಗನೇ ಚಂದ್ರವದನಾ ರವಿಭಾಸುರಾಃ ॥ ೨೯ ॥

ತತೋ ಬ್ರಹ್ಮಾದಯೋ ದೇವಾ ಪ್ರಣೇಮುರ್ವಿಷ್ಣುಮಾದರಾತ್ ।
ತುಷ್ಟುವುರ್ವಿವಿಧೈಃ ಸ್ತೋತ್ರೈರ್ವೇದಘೋಷೈರ್ಮುನೀಶ್ವರಾಃ ॥ ೩೦ ॥

ತದಾ ತುಷ್ಟಾವ ಶಂಭುಸ್ತಂ ವಿಷ್ಣುಂ ತ್ರೈಲೋಕ್ಯಪಾಲಕಂ ।
ವನಮಾಲಾಂ ದಧಾನಂ ತಂ ದಿವ್ಯಚಂದನಚರ್ಚಿತಂ ॥ ೩೧ ॥

॥ ಶಂಭುರುವಾಚ ॥

ಶ್ರೀಶಿವಕೃತಅಷ್ಟೋತ್ತರಶತನಾಮ
ನವರತ್ನಮಾಲಿಕಾಸ್ತುತಿಃ

ರಾಘವಂ ಕರುಣಾಕರಂ ಭವನಾಶನಂ ದುರಿತಾಪಹಂ ।
ಮಾಧವಂ ಖಗಗಾಮಿನಂ ಜಲರೂಪಿಣಂ ಪರಮೇಶ್ವರಮ್ ॥
ಪಾಲಕಂ ಜನತಾರಕಂ ಭವಹಾರಕಂ ರಿಪುಮಾರಕಂ ।
ತ್ವಾಂ ಭಜೇ ಜಗದೀಶ್ವರಂ ನರರೂಪಿಣಂ ರಘುನಂದನ ॥ ೩೨ ॥

---

೨೯. ಅನೇಕ ಬಗೆಯಾದ ಸುಗಂಧವನ್ನು ತೊಡೆಸಿಕೊಂಡರು. ದಿವ್ಯವಾದ ಚಾಮರವನ್ನು ಬೀಸಿಸಿಕೊಳ್ಳುತ್ತಿದ್ದರು. ಮುಖಗಳು ಚಂದ್ರನಂತೆ ಪ್ರಕಾಶವಾಗಿ ದೇಹವು ಸೂರ್ಯನಂತೆ ಪ್ರಕಾಶಮಾನವಾಯಿತು.

೩೦. ಅನಂತರ ಬ್ರಹ್ಮನೇ ಮುಂತಾದವರು ಆ ವಿಷ್ಣುವಿಗೆ ನಮಸ್ಕರಿಸಿದರು ಮುನೀಶ್ವರರು ವೇದಘೋಷಗಳಿಂದ ಆ ಸ್ವಾಮಿಯನ್ನು ಸ್ತುತಿಸಿದರು.

೩೧. ಅನಂತರ ಶಂಭುವು ತ್ರೈಲೋಕ್ಯಪಾಲಕನಾದ ವನಮಾಲೆಯೆಂಬ ಹಾರವನ್ನು ಹಾಕಿಕೊಂಡಿರುವ ದಿವ್ಯವಾದ ಚಂದನವನ್ನು ಪೂಸಿಕೊಂಡಿರುವ ಆ ವಿಷ್ಣುವನ್ನು ಸ್ತುತಿಸಿದನು.

ಶಂಭುವು ಹೇಳಿದನು

ಶ್ರೀ ಶಿವನು ಸ್ತುತಿಸಿದ ನೂರೆಂಟು ನಾಮಗಳು ನವತರತ್ನಮಾಲೆಯ ಸ್ತುತಿಯು.

೩೨. ರಘುಕುಲದಲ್ಲಿ ಹುಟ್ಟಿದ, ಕರುಣಾಕರನಾದ, ಜನನ ಮರಣಗಳನ್ನು ತಪ್ಪಿಸುವ, ಪಾಪನಾಶಕನಾದ, ಲಕ್ಷ್ಮೀಪತಿಯಾದ ಜಲರೂಪಿಯಾದ, ಶ್ರೀ ಪರಮೇಶ್ವರನಾದ ಜನರನ್ನು ಕಾಪಾಡುವ, ಜನರನ್ನು ಪಾಪದಿಂದ ಬಿಡುಗಡೆ ಮಾಡುವ ಸಂಸಾರದಿಂದ ದಾಟಿಸುವ, ಶತ್ರುನಾಶಕನಾದ, ಜಗದೀಶ್ವರನಾದ, ರಘುನಂದನನಾಗಿ ನರರೂಪವನ್ನು ಹೊಂದಿರುವ ನಿನ್ನನ್ನು ನಮಸ್ಕರಿಸುತ್ತೇನೆ.

ಭೂಧವಂ ವನಮಾಲಿನಂ ಘನರೂಪಿಣಂ ಧರಣೀಧರಂ ।
ಶ್ರೀಹರಿಂ ತ್ರಿಗುಣಾತ್ಮಕಂ ತುಲಸೀಧವಂ ರಘುನಂದನಮ್ ॥
ಶ್ರೀಕರಂ ಶರಣಪ್ರದಂ ಮಧುಮಾರಕಂ ಮಧುರಸ್ವರಂ ।
ತ್ವಾಂ ಭಜೇ ಜಗದೀಶ್ವರಂ ನರರೂಪಿಣಂ ರಘುನಂದನಮ್ ॥ ೩೩ ॥

ವಿಠ್ಠಲಂ ಮಧುರಾಸ್ಥಿತಂ ರಜಕಾಂತಕಂ ಗಜಮಾರಕಂ ।
ಮನ್ನತಂ ಬಕಮಾರಕಂ ವೃಕಘಾತಕಂ ತುರಗಾರ್ದನಂ ॥
ನಂದಜಂ ವಸುದೇವಜಂ ಬಲಿಯಜ್ಞಗಂ ಸುರಪಾಲಕಂ ।
ತ್ವಾಂ ಭಜೇ ಜಗದೀಶ್ವರಂ ನರರೂಪಿಣಂ ರಘುನಂದನಮ್ ॥ ೩೪ ॥

ಕೇಶವಂ ಕಪಿವೇಷ್ಟಿತಂ ಕಪಿಮಾರಕಂ ಮೃಗಮರ್ದಿನಂ ।
ಸುಂದರಂ ದ್ವಿಜಪಾಲಕಂ ದಿತಿಜಾರ್ದನಂ ದನುಜಾರ್ದನಮ್ ।
ಬಾಲಕಂ ಖರಮರ್ದಿನಂ ಋಷಿಪೂಜಿತಂ ಮುನಿಚಿಂತಿತಂ ।
ತ್ವಾಂ ಭಜೇ ಜಗದೀಶ್ವರಂ ನರರೂಪಿಣಂ ರಘುನಂದನಮ್ ॥ ೩೫ ॥

---

೩೩. ಭೂದೇವಿಗೆ ಒಡೆಯನಾದ, ವನಮಾಲೆಯನ್ನು ಧರಿಸಿರುವ, ಮೇಘಶ್ಯಾಮನಾದ, ಭೂಮಿಯನ್ನು ಧರಿಸಿರುವ, ಶ್ರೀಹರಿಯಾದ, ಸತ್ವ ರಜಸ್ತಮೋಗುಣರೂಪಿಯಾದ ತುಲಸಿಗೆ ಪತಿಯಾದ, ರಘುನಂದನನಾದ, ಸಂಪತ್ತನ್ನು ಕೊಡುವ, ಶರಣಾಗತರಕ್ಷಕನಾದ, ಮಧುವೆಂಬ ರಾಕ್ಷಸನನ್ನು ಕೊಂದ, ಮಧುರಸ್ವರವುಳ್ಳ, ರಘುನಂದನನಾಗಿ, ನರರೂಪವನ್ನು ಹೊಂದಿರುವ ನಿನ್ನನ್ನು ನಮಸ್ಕರಿಸುತ್ತೇನೆ.

೩೪. ವಿಠ್ಠಲನಾದ, ಮಧುರಾವಾಸಿಯಾದ, ರಜಕನನ್ನು ನಾಶಮಾಡಿದ, ಆನೆಯನ್ನು ಕೊಂದ ಬಕಾಸುರನನ್ನು ಕೊಂದ, ವೃಕಾಸುರನನ್ನು ಕೊಂದ, ತುರಗವನ್ನು ಮಥಿಸಿದ, ನಂದಗೋಪನ ಮಗನಾದ, ವಸುದೇವನ ಮಗನಾದ, ಬಲಿಯಜ್ಞಕ್ಕೆ ಹೋಗಿದ್ದ, ಸುರರನ್ನು ಕಾಪಾಡಿದ, ರಘುನಂದನನಾದ ನರರೂಪವನ್ನು ಹೊಂದಿದ ನಿನ್ನನ್ನು ನಮಸ್ಕರಿಸುತ್ತೇನೆ.

೩೫. ಕೇಶವನಾದ, ಕಪಿಗಳಿಂದ ಕೂಡಿದ, ವಾಲಿಯನ್ನು ಕೊಂದ, ಜಿಂಕೆಯ ರೂಪನಾದ, ಮರೀಚನನ್ನು ಕೊಂದ, ಸುಂದರನಾದ, ಬ್ರಾಹ್ಮಣರನ್ನು ರಕ್ಷಿಸಿದ ರಾಕ್ಷಸರನ್ನು ಕೊಂದ, ದನುಜರನ್ನು ನಾಶಮಾಡಿದ, ಬಾಲಕನಾದ, ಖರನನ್ನು ಕೊಂದ, ಋಷಿಗಳಿಂದ ಪೂಜಿತನಾದ, ಮುನಿಗಳು ಧ್ಯಾನಿಸುತ್ತಿರುವ ರಘುನಂದನನಾಗಿ ನರರೂಪವನ್ನು ಹೊಂದಿದ ನಿನ್ನನ್ನು ನಮಸ್ಕರಿಸುತ್ತೇನೆ.

ಶಂಕರಂ ಜಲಶಾಯಿನಂ ಕುಶಬಾಲಕಂ ರಥವಾಹನಂ ।
ಸರಯೂನತಂ ಪ್ರಿಯಪುಷ್ಪಕಂ ಪ್ರಿಯಭೂಸುರಂ ಲವಬಾಲಕಂ ॥
ಶ್ರೀಧರಂ ಮಧುಸೂದನಂ ಭರತಾಗ್ರಜಂ ಗರುಡಧ್ವಜಂ ।
ತ್ವಾಂ ಭಜೇ ಜಗದೀಶ್ವರಂ ನರರೂಪಿಣಂ ರಘುನಂದನಮ್ ॥ ೩೬ ॥

ಗೋಪ್ರಿಯಂ ಗುರುಪುತ್ರದಂವದತಾಂವರಂಕರುಣಾನಿಧಿಂ ।
ಭಕ್ತಿಪಂ ಜನತೋಷದಂ ಸುರಪೂಜಿತಂ ಶ್ರುತಿಭಿಃ ಸ್ತುತಂ ॥
ಭಕ್ತಿದಂ ಜನಮುಕ್ತಿದಂ ಜನರಂಜನಂ ನೃಪನಂದನಂ ।
ತ್ವಾಂ ಭಜೇ ಜಗದೀಶ್ವರಂ ನರರೂಪಿಣಂ ರಘುನಂದನಂ ॥ ೩೭ ॥

ಚಿದ್ಘನಂ ಚಿರಜೀವಿನಂ ಮಣಿಮಾಲಿನಂ ವರದೋನ್ಮುಖಂ ।
ಶ್ರೀಧರಂ ಧೃತಿದಾಯಕಂ ಬಲವರ್ಧನಂ ಗತಿದಾಯಕಂ ॥
ಶಾಂತಿದಂ ಜನತಾರಕಂ ಶರಧಾರಿಣಂ ಗಜಗಾಮಿನಂ ।
ತ್ವಾಂ ಭಜೇ ಜಗದೀಶ್ವರಂ ನರರೂಪಿಣಂ ರಘುನಂದನಂ ॥ ೩೮ ॥

---

೩೬. ಸೌಖ್ಯವನ್ನುಂಟುಮಾಡುವ, ನೀರಿನಲ್ಲಿ ಮಲಗಿರುವ, ಕುಶನನ್ನೇ ಮಗನನ್ನಾಗಿ ಹೊಂದಿದ ರಥದಲ್ಲಿ ಕುಳಿತುಕೊಳುವ, ಹೊಸಮನುಷ್ಯನಾದ, ಪುಷ್ಪಕವಿಮಾನದಲ್ಲಿ ಪ್ರೀತಿಯುಳ್ಳ, ಬ್ರಾಹ್ಮಣರಲ್ಲಿ ಭಕ್ತಿಯುಳ್ಳ, ಲವನನ್ನೇ ಮಗನನ್ನಾಗಿ ಉಳ್ಳ, ಲಕ್ಷ್ಮಿಯನ್ನು ಧರಿಸಿರುವ, ಮಧುವನ್ನು ನಾಶಮಾಡಿರುವ, ಭರತನ ಅಣ್ಣನಾದ, ಗರುಡನು ಧ್ವಜದಲ್ಲಿ ಇರುವ, ರಘುನಂದನನಾಗಿ ನರರೂಪದಲ್ಲಿ ಹುಟ್ಟಿರುವ, ನಿನ್ನನ್ನು ಭಜಿಸುತ್ತೇನೆ.

೩೭. ಗೋವುಗಳಲ್ಲಿ ಪ್ರೀತಿಯುಳ್ಳ, ಗುರುವಿಗೆ ಮಗನನ್ನು ತಂದುಕೊಟ್ಟ, ವಾಚಾಳಿಯಾದ, ಕರುಣಾನಿಧಿಯಾದ ಭಕ್ತರನ್ನು ಕಾಪಾಡುವ, ಜನರಿಗೆ ಸಂತೋಷವನ್ನುಂಟುಮಾಡುವ ದೇವತೆಗಳಿಂದ ಪೂಜೆಯನ್ನು ಹೊಂದುವ, ಶ್ರುತಿಗಳಿಂದ ಹೊಗಳಿಸಿಕೊಳ್ಳುವ, ಭಕ್ತಿಯನ್ನು ಕೊಡುವ ಜನರಿಗೆ ಮುಕ್ತಿಯನ್ನು ಕೊಡುವ ಜನರನ್ನು ರಂಜಿಸಿರುವ, ರಾಜಪುತ್ರನಾದ ರಘುವಿನನಂದನನಾಗಿ ನರನ ರೂಪದಿಂದ ಅವತರಿಸಿರುವ ನಿನ್ನನ್ನು ಭಜಸುತ್ತೇನೆ

೩೮. ಚಿತ್‌ಸ್ವರೂಪನಾದ, ಚಿರಂಜೀವಿಯಾದ, ಮಣಿಮಾಲಿಕೆಯನ್ನು ಹಾಕಿಕೊಂಡಿರುವ ವರವನ್ನು ಕೊಡುವುದರಲ್ಲಿ ಪ್ರಸನ್ನನಾಗಿರುವ ಶ್ರೀಯನ್ನು ಧರಿಸಿರುವ ಧೈರ್ಯವನ್ನು ಕೊಡುವ ಬಲವನ್ನು ಹೆಚ್ಚಿಸುವ ಸದ್ಗತಿಯನ್ನು ಕೊಡುವ ಶಾಂತಿಯನ್ನು ಕೊಡುವ ಜನರನ್ನು ಸಂಸಾರದಿಂದ ಪಾರುಮಾಡುವ ಬಾಣವನ್ನು ಧರಿಸಿರುವ ಗಜದಂತೆ ಗಮನವುಳ್ಳ ರಘುನಂದನನಾಗಿ ನರರೂಪವನ್ನು ಹೊಂದಿರುವ ಸ್ವಾಮಿಯನ್ನು ಭಜಿಸುತ್ತೇನೆ.

ಶಾರ್ಙ್ಗಿಣಂ ಕಮಲಾನನಂ ಕಮಲಾದೃಶಂ ಪದಪಂಕಜಂ ।
ಶ್ಯಾಮಲಂ ರವಿಭಾಸುರಂ ಶಶಿಸೌಖ್ಯದಂ ಕರುಣಾರ್ಣವಂ ॥
ಸತ್ಪತಿಂ ನೃಪಪಾಲಕಂ ನೃಪವಂದಿತಂ ನೃಪತಿಪ್ರಿಯಂ ।
ತ್ವಾಂ ಭಜೇ ಜಗದೀಶ್ವರಂ ನರರೂಪಿಣಂ ರಘುನಂದನಂ ॥ ೩೯ ॥

ನಿರ್ಗುಣಂ ಸಗುಣಾತ್ಮಕಂ ನೃಪಮಂಡನಂ ಮತಿವರ್ಧನಂ ।
ಅಚ್ಯುತಂ ಪುರುಷೋತ್ತಮಂ ಪರಮೇಷ್ಠಿನಂ ಸ್ಮಿತಭಾಷಿಣಂ ॥
ಈಶ್ವರಂ ಹನುಮನ್ನತಂ ಕಮಲಾಧಿಕಂ ಜನಸಾಕ್ಷಿಣಂ ।
ತ್ವಾಂ ಭಜೇ ಜಗದೀಶ್ವರಂ ನರರೂಪಿಣಂ ರಘುನಂದನಂ ॥ ೪೦ ॥

ಈಶ್ವರೋಕ್ತಮೇತದುತ್ತಮಮಾದರಾಚ್ಛತನಾಮಕಂ ।
ಯಃ ಪಠೇದ್ಭುವಿ ಮಾನವಸ್ತವಭಕ್ತಿಮಾಂಸ್ತಪನೋದಯೇ ॥
ತ್ವತ್ಪದಂ ನಿಜಬಂಧುದಾರಸುತೈರ್ಯುತಶ್ಚಿರಮೇತ್ಯ ಸೋ ।
ಸೋಽಸ್ತು ತೇ ಪದಸೇವನೇ ಬಹುತತ್ಪರೋ ಮಮ ವಾಕ್ಯತಃ ॥ ೪೧ ॥

---

೩೯. ಶಾರ್ಙ್ಗವೆಂಬ ಧನುಸ್ಸನ್ನು ಧರಿಸಿರುವ, ಕಮಲದಂತೆ ಮುಖವುಳ್ಳ, ಕಮಲಾಕ್ಷನಾದ, ಕಮಲದಂತೆ ಕಾಲುಗಳುಳ್ಳ, ಶ್ಯಾಮವರ್ಣಕ್ಕೆ ಇರುವ, ಸೂರ್ಯನಂತೆ ಪ್ರಕಾಶಮಾನನಾದ, ಚಂದ್ರನಂತೆ ಸುಖವನ್ನು ಕೊಡುವ, ಕೃಪಾಶಾಲಿಯಾದ, ಒಳ್ಳೆಯ ರಾಜನಾದ, ರಾಜರಿಗೆ ಅಧಿರಾಜನಾದ, ರಾಜರಿಂದ ನಮಸ್ಕೃತನಾದ, ರಾಜರಿಗೆ ಪ್ರೀತಿಪಾತ್ರನಾದ, ರಘುನಂದನನಾಗಿಯೇ, ನರರೂಪದಲ್ಲಿ ಅವತರಿಸಿರುವ ಸ್ವಾಮಿಯನ್ನು ಭಜಿಸುತ್ತೇನೆ.

೪೦. ನಿರ್ಗುಣನಾದ, ಗುಣಗಳನ್ನು ಹೊಂದಿರುವ, ರಾಜಶ್ರೇಷ್ಠನಾದ, ಬುದ್ಧಿಯನ್ನು ಹೆಚ್ಚಿಸುವ, ಅಚ್ಯುತನಾದ, ಪುರುಷೋತ್ತಮನಾದ, ಪರಮೇಷ್ಠಿಯಾದ, ನಗುಮುಖವುಳ್ಳ, ಈಶ್ವರನಾದ, ಹನುಮಂತನಿಂದ ನಮಸ್ಕಾರವನ್ನು ಹೊಂದುವ, ಲಕ್ಷ್ಮೀಪತಿಯಾದ, ಜನಕ್ಕೆ ಸಾಕ್ಷಿಯಾಗಿರುವ, ರಘುನಂದನನಾಗಿ ನರರೂಪದಲ್ಲಿ ಅವತರಿಸಿರುವ ನಿನ್ನನ್ನು ಭಜಿಸುತ್ತೇನೆ.

೪೧. ಈಶ್ವರನು ಹೇಳಿದ ಈ ನೂರಾರು ನಾಮಗಳನ್ನು ಯಾವನು ಲೋಕದಲ್ಲಿ ಪ್ರಾತಃಕಾಲದಲ್ಲಿ ಭಕ್ತಿಯಿಂದ ಹೇಳುವನೋ ಅವನು ಆ ಸ್ವಾಮಿಯ ಸ್ಥಾನವನ್ನು ಹೊಂದುತ್ತಾನೆ. ಮತ್ತು ಅವನಿಗೆ ನನ್ನ ಪ್ರಾರ್ಥನೆಯಂತೆ ಭಕ್ತಿಯೂ ಹುಟ್ಟುತ್ತದೆ.

ಇತಿ ಸ್ತುತ್ವಾ ಮಹಾವಿಷ್ಣುಂ ಪ್ರೋವಾಚ ಗಿರಿಜಾಪತಿಃ ।
ಆರುಹಸ್ವ ರಮಾನಾಥ ಗರುಡೋಪರಿ ವೇಗತಃ ॥ ೪೨ ॥

ವೈಕುಂಠಾರೋಹಣಸ್ಯಾಯಂ ಕಾಲೋ ವಾಲ್ಮೀಕಿನಾ ಕೃತಃ ।
ಏಕಾದಶಸಹಸ್ರಾಶ್ಚ ಸಮಾಸ್ತ್ವೇಕಾದಶೈವ ಚ ॥ ೪೩ ॥

ತಥೈಕಾದಶಮಾಸಾಶ್ಚ ದಿನಾನ್ಯೇಕಾದಶೈವ ಚ ।
ತಥೈಕಾದಶಘಟಿಕಾಃ ಪಲಾನ್ಯೇಕಾದಶೈವ ಚ ॥ ೪೪ ॥

ಗತಾನಿ ತೇತ್ರ ಭೂಮ್ಯಾಂ ಹಿ ಜನ್ಮಾದಾರಭ್ಯ ರಾಘವ ।
ವಸಂತಪಂಚಮೀನಾಮ್ನೀ ತಿಥಿಶ್ಚೈತ್ರಾಸಿತಾದ್ಯ ಹಿ ॥ ೪೫ ॥

ಪುಣ್ಯೇಹ್ನಿ ಸ್ವಪದಂ ಗಂತುಂ ತ್ವರಾಂ ಕುರು ರಮೇಶ್ವರ ।
ತದಾ ವಿಹಸ್ಯ ಶ್ರೀವಿಷ್ಣುರ್ವಾಲ್ಮೀಕಿಂ ಮುನಿಪುಂಗವಂ ॥ ೪೬ ॥

---

೪೨. ಆ ಶಿವನು ಹೀಗೆ ಸ್ತುತಿಸಿ ಎಲೈ ಸ್ವಾಮಿಯೇ ! ಬೇಗನೆ ಗರುಡನ ಮೇಲಕ್ಕೆ ಹತ್ತಿ ಕುಳಿತುಕೋ ಎಂಬದಾಗಿ ವಿಷ್ಣುವಿಗೆ ಹೇಳಿದನು.

೪೩-೪೪. ವೈಕುಂಠಾರೋಹಣವನ್ನು ಮಾಡಲು ಇದೇ ಕಾಲವೆಂಬುದಾಗಿ ವಾಲ್ಮೀಕಿಯು ನಿರ್ದೇಶಮಾಡಿರುವನು. ಹನ್ನೊಂದುಸಾವಿರದ ಹನ್ನೊಂದು ವರ್ಷಗಳೂ, ಹನ್ನೊಂದು ತಿಂಗಳೂ, ಹನ್ನೊಂದುದಿನವೂ ಅಂತೆಯೇ ಹನ್ನೊಂದು ಗಳಿಗೆಯೂ, ಹನ್ನೊಂದು ವಿಘಳಿಗೆಯೂ ಕೂಡ ಈ ಭೂಮಿಯಲ್ಲಿ ಕಳೆದು ಇರುವುದು.

೪೫. ಎಲೈ ರಾಘವನೇ ! ನೀನು ಹುಟ್ಟಿದ ಮೊದಲುಗೊಂಡು ಭೂಮಿಯಲ್ಲಿ ನಿನಗೆ ಕಾಲವು ಈ ರೀತಿಯಾಗಿ ಕಳೆದಿರುವುದು. ಈದಿನ ಚೈತ್ರಶುಕ್ಲದ ವಸಂತ ಪಂಚಮೀ ಎಂಬ ಹೆಸರುಳ್ಳ ತಿಥಿಯಾಗಿರುವುದು.

೪೬. ಪುಣ್ಯದಿವಸದಲ್ಲಿ ವೈಕುಂಠಕ್ಕೆ ಹೋಗಲು ಬೇಗನೆ ಹೊರಡು ಎಂದು ಶಿವನು ಹೇಳಿದ ಮಾತನ್ನು ಕೇಳಿ ಮಹಾವಿಷ್ಣುವು ನಗುತ್ತ ವಾಲ್ಮೀಕಿಯನ್ನು ಕರೆದು ಆಲಿಂಗಿಸಿಕೊಂಡನು.

ಸಮಾಲಿಂಗ್ಯ ಮುನೀನ್ ಸ್ಪೃಷ್ಟ್ವಾ ತಸ್ಥೌ ಸ ಗರುಡೋಪರಿ ।
ಧ್ವನತ್ಸು ದೇವವಾದ್ಯೇಷು ಸ್ತುವತ್ಸು ನಾರದಾದಿಷು ॥ ೪೭ ॥

ಪುಷ್ಪೈರ್ವರ್ಷತ್ಸು ದೇವೇಷು ಪ್ರನರ್ತತ್ಸ್ವಪ್ಸರಸ್ಸು ಚ ।
ನಾನಾವಿಮಾನಜಾಲೈಶ್ಚ ಸರ್ವತ್ರ ಪರಿವೇಷ್ಟಿತಂ ॥ ೪೮ ॥

ಯಯೌ ವಿಷ್ಣುಸ್ಸ ವೈಕುಂಠಂ ಲೋಕಾನ್ ಪಶ್ಯನ್ ಶನೈಶ್ಶನೈಃ ।
ವೈಕುಂಠೇ ಸ್ವಪದೇ ಸ್ಥಿತ್ವಾ ವಿಸಸರ್ಜ ಶಿವಾದಿಕಾನ್ ॥ ೪೯ ॥

ತಸ್ಥೌ ಲಕ್ಷ್ಮ್ಯಾನಂದಮಯಃ ಪರಿಪೂರ್ಣಮನೋರಥಃ ।
ಖಗೇಂದ್ರಸೇವಿತಪದಶ್ಶೇಷತಲ್ಪವಿಭೂಷಿತಃ ॥ ೫೦ ॥

ಅಯೋಧ್ಯಾವಾಸಿನಸ್ಸರ್ವೇ ಯಯುಸ್ಸಾಂತಾನಿಕಂ ಪದಂ ।
ತತಸ್ತೇ ಮುನಯಸ್ಸರ್ವೇ ಯಯುಃ ಸ್ವಂ ಸ್ವಂ ಸ್ಥಲಂ ಪ್ರತಿ ॥ ೫೧ ॥

---

೪೭. ಅನಂತರ ಮುನಿಗಳೆಲ್ಲರಿಗೂ ಹೊರಡುತ್ತೇನೆಂದು ಹೇಳಿ ಗರುಡನ ಮೇಲೆ ಕುಳಿತನು. ಆಗ ದೇವ ದುಂದುಭಿಗಳು ಮೊಳಗುತ್ತಿದ್ದುವು. ನಾರದಾದಿಗಳು ಸ್ತುತಿಸುತ್ತಿದ್ದರು.

೪೮. ದೇವತೆಗಳು ಪುಷ್ಪವೃಷ್ಟಿಯನ್ನು ಸುರಿಸುತ್ತಿದ್ದರು. ಅಪ್ಸರಸ್ತ್ರೀಯರು ನರ್ತನಮಾಡುತ್ತಿದ್ದರು. ಅವನ ವಿಮಾನದ ಸುತ್ತಲೂ ಅನೇಕ ವಿಮಾನಗಳು ಬಂದು ಸುತ್ತುವರಿದುಕೊಂಡುವು.

೪೯. ಆ ಶ್ರೀ ಮಹಾವಿಷ್ಣುವು ಜನಗಳನ್ನು ನಿಧಾನವಾಗಿ ಎಲ್ಲಾ ಕಡೆಯಲ್ಲಿಯೂ ನೋಡುತ್ತಾ ವೈಕುಂಠಕ್ಕೆ ಹೊರಟನು. ವೈಕುಂಠಕ್ಕೆ ಹೋಗಿ ತನ್ನ ಸ್ಥಾನದಲ್ಲಿ ಕುಳಿತುಕೊಂಡು ಅನಂತರ ಶಿವನೇ ಮುಂತಾದವರನ್ನು ಕಳುಹಿಸಿಬಿಟ್ಟನು.

೫೦. ಪರಿಪೂರ್ಣಮನೋರಥವುಳ್ಳವನಾಗಿ ಆ ವೈಕುಂಠದಲ್ಲಿ ಲಕ್ಷ್ಮಿಯೊಡನೆ ಶೇಷನ ಶೈಯ್ಯೆಯಲ್ಲಿ ಮಲಗಿಕೊಂಡು ಗರುಡನಿಂದ ಪಾದಸೇವೆಯನ್ನು ಮಾಡಿಸಿಕೊಳ್ಳುತ್ತ ಇದ್ದನು.

೫೧ ಅಯೋಧ್ಯೆಯಲ್ಲಿನ ಪ್ರಾಣಿಗಳೆಲ್ಲವೂ ಸಾಂತಾನಿಕನೆಂಬ ಸ್ಥಾನವನ್ನು ಹೊಂದಿದುವು. ಇತ್ತ ಮುನಿಗಳೂ ಕೂಡ ತಮ್ಮ ತಮ್ಮ ಸ್ಥಾನಗಳಿಗೆ ಹೊರಟು ಹೋದರು.

ರಾಮವಾಕ್ಯಾತ್ಸೋಽಜಮೀಢಃ ಸ್ವಾಂತ್ವಯಾಮಾಸ ತಂ ಕುಶಂ।
ಸ್ವರ್ಗಾರೋಹಣವಿಸ್ತಾರಂ ಕಥಯಾಮಾಸ ತಂ ಕುಶಂ ॥ ೫೨ ॥

ಕುಶೇನ ಮಾನಿತಸ್ಸೋಽಪಿ ಯಯೌ ಸ್ವೀಯಂ ಗಜಾಹ್ವಯಂ।
ಲಬ್ಧ್ವಾ ಕುಮುದ್ವತೀಂ ತಸ್ಯಾಂ ಕುಶಃ ಪುತ್ರಾನ್ ಸ ನಿರ್ಮಮೇ ॥ ೫೩ ॥

ಏವಂ ಶ್ರೀರಘುರಾಮಸ್ಯ ಸ್ವರ್ಗಾರೋಹಣಕೌತುಕಂ।
ಯೇ ಶೃಣ್ವಂತಿ ನರಾ ಭಕ್ತ್ಯಾ ತೇಽಪಿ ಸ್ವರ್ಗಂ ಪ್ರಯಾಂತಿ ಹಿ ॥ ೫೪ ॥

ವೈಕುಂಠಾರೋಹಣಾಧ್ಯಾಯಮಿಮಂ ನಿತ್ಯಂ ಪಠೇತ್ತು ಯಃ।
ಸೋಽಂತೇ ಗಚ್ಛತಿ ವೈಕುಂಠಂ ರಾಮಚಂದ್ರಪ್ರಸಾದತಃ ॥ ೫೫ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಪೂರ್ಣಕಾಂಡೇ ಶ್ರೀರಾಮ ವೈಕುಂಠಾರೋಹಣಂ ನಾಮ ಷಷ್ಠಸ್ಸರ್ಗಃ ಸಮಾಪ್ತಃ

---

೫೨. ಅಜಮೀಢನು ಶ್ರೀರಾಮನ ಮಾತಿನಂತೆ ಕುಶನನ್ನು ಸಮಾಧಾನಪಡಿಸಿದನು. ಅಲ್ಲದೆ ಸ್ವರ್ಗಾರೋಹಣವನ್ನು ಶ್ರೀರಾಮನು ಮಾಡಿದ ವಿಷಯವನ್ನು ಆ ಕುಶನಿಗೆ ವಿಸ್ತಾರವಾಗಿ ಹೇಳಿದನು.

೫೩. ಕುಶನು ಆ ಅಜಮೀಢನಿಗೆ ಗೌರವಿಸಿ ಹಸ್ತಿನಾಪುರಕ್ಕೆ ಕಳುಹಿಸಿದನು. ಅನಂತರ ಆ ಕುಶನು ಕುಮುದ್ವತಿಯಲ್ಲಿ ಸುಖಿಸುತ್ತಿರಲು ಅವಳಲ್ಲಿ ಅನೇಕ ಜನ ಮಕ್ಕಳಾದರು.

೫೪. ಈ ರೀತಿಯಾದ ಶ್ರೀರಾಮನ ಸ್ವರ್ಗಾರೋಹಣ ಚರಿತ್ರೆಯನ್ನು ಯಾರು ಕೇಳುವರೋ ಅವರೂ ಕೂಡ ಸ್ವರ್ಗವನ್ನು ಹೊಂದುತ್ತಾರೆ.

೫೫. ಈ ವೈಕುಂಠಾಧ್ಯಾಯವನ್ನು ನಿತ್ಯವೂ ಯಾವನು ಓದುತ್ತಾನೆಯೋ ಅವನು ಶ್ರೀರಾಮಚಂದ್ರನ ಪ್ರಭಾವದಿಂದ ಇಹದಲ್ಲಿ ಸುಖಿಸುತ್ತಿದ್ದು ಕೊನೆಯಲ್ಲಿ ವೈಕುಂಠವನ್ನು ಹೊಂದುತ್ತಾನೆ.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಆದಿಕಾವ್ಯವಾದ ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ ಶ್ರೀರಾಮನ ವೈಕುಂಠಾರೋಹಣ ಎಂಬ ಆರನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ ಆರನೆಯ ಸರ್ಗದ ಸಾರಾಂಶವು.

ಬೆಳಗಾಗುತ್ತಲೂ ರಾಮನು ಅಜಮೀಢನನ್ನು ಕುರಿತು ಅಯ್ಯಾ ! ನಾನು ಸೀತೆಯೊಡನೆ ವೈಕುಂಠಕ್ಕೆ ಹೋಗುತ್ತೇನೆ. ಇಲ್ಲಿ ನಾನು ಬಿಟ್ಟುಹೋಗುವುದನ್ನೆಲ್ಲಾ ಕುಶನಿಗೆ ಕಳುಹಿಸಿಕೊಡು. ಪ್ರಾಣವಿರುವ ಚರಪದಾರ್ಥವೆಲ್ಲವೂ ನನ್ನೊಡನೆ ಬರುತ್ತದೆ. ಅನಂತರ ಕುಶನಿಗೆ ನನ್ನ ವಿಷಯವನ್ನು ಹೇಳು. ಅವನು ಉತ್ತರ ಕ್ರಿಯೆಗಳನ್ನು ಮಾಡಲಿ. ಅವನು ದುಃಖಪಡದಂತೆ ಹೇಳು. ಎನ್ನಲು ಅವನು ಒಪ್ಪಿಕೊಂಡನು.

ಬೆಳಗ್ಗೆದ್ದು ರಾಮನು ಸ್ನಾನಾಹ್ನಿಕಗಳನ್ನು ಮಾಡಿಕೊಂಡು ದಾನಾದಿಗಳನ್ನು ಮಾಡಿ ಪ್ರಾಸ್ಥಾನಿಕಕರ್ಮವನ್ನು ಮಾಡಿದನು. ಆಗ ಅವನನ್ನು ಹೊಂದಿಕೊಂಡಿದ್ದ ಶಾಂತಿ, ಕ್ಷಮಾ ಮೇಧ ಮುಂತಾದುವು ಬಿಟ್ಟು ವೈಕುಂಠಕ್ಕೆ ಹೊರಟುಹೋದುವು. ವಾನರರೆಲ್ಲರೂ ಗಂಗೆಯಲ್ಲಿ ಮಿಂದು ವಾಯುವನ್ನು ಪ್ರಾಣಾಯಾಮವಿಧಿಯಿಂದ ನಿರೋಧಿಸಿ ಆ ದೇಹಗಳನ್ನು ಬಿಟ್ಟು ಬಿಟ್ಟರು. ಶ್ರೀರಾಮನು ಸ್ನಾನಮಾಡಿ ದರ್ಭಾಸನದಲ್ಲಿ ಕುಳಿತನು. ಒಡನೆಯೇ ಚತುರ್ಭುಜನಾದ ವಿಷ್ಣುವಾದುದಲ್ಲದೆ ಸೀತೆಯು ಲಕ್ಷ್ಮಿಯಾದಳು. ಸೌಮಿತ್ರಿಯು ಶೇಷನಾಗಿಯೂ ಭರತನು ಶಂಖವಾಗಿಯೂ ಶತ್ರುಘ್ನನು ಸುದರ್ಶನವಾಗಿಯೂ ಆದರು. ಆ ರಾಮನೊಡನೆ ಬಂದಿದ್ದ ಎಲ್ಲಾ ಪ್ರಾಣಿಗಳೂ ಮುಕ್ತಿಯನ್ನು ಹೊಂದಿ ವೈಕುಂಠಕ್ಕೆ ಹೋಗಲು ವಿಮಾನದಲ್ಲಿ ಕುಳಿತರು. ಊರ್ಮಿಲೆಯೇ ಮುಂತಾದವರೂ ಪತಿಯರ ದೇಹವನ್ನು ಆಲಿಂಗಿಸಿಕೊಂಡು ಸಹಗಮನಮಾಡಿದರು. ಒಟ್ಟಿನಲ್ಲಿ ಅಯೋಧ್ಯಾವಾಸಿಗಳೆಲ್ಲರೂ ವೈಕುಂಠಕ್ಕೆ ಪ್ರಯಾಣಮಾಡಿದರು.

ಅಜಮೀಢನು ಹಿಂದಕ್ಕೆ, ಹೋಗಿ ರಾಮನ ಮಾತಿನಂತೆ ಕುಶನಿಗೆ ರಾಮನ ನಿರ್ಯಾಣವನ್ನು ಹೇಳಿದನು. ಕುಶನೂ ಕೂಡ ಶ್ರೀರಾಮನಿಗೆ ಉತ್ತರ ಕ್ರಿಯಾದಿಗಳನ್ನು ಮಾಡಿ ಕುಮುದ್ವತಿಯೊಡನೆ ಸುಖದಿಂದಿರುತ್ತ ಮಕ್ಕಳನ್ನು ಪಡೆದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಪೂರ್ಣಕಾಂಡೇ ಸಪ್ತಮಸ್ಸರ್ಗಃ

॥ ಶ್ರೀರಾಮದಾಸ ಉವಾಚ ॥

ಏವಂ ತ್ವಯಾ ಯಥಾಪೃಷ್ಟಂ ಸ್ವರ್ಗಾರೋಹಣಮಂಗಳಂ ।
ಶ್ರೀರಾಮಸ್ಯ ಮಯಾ ಚೈತತ್ತ್ವದಗ್ರೇದ್ಯ ನಿವೇದಿತಂ ॥ ೧ ॥

ಕಿಮನ್ಯಚ್ಛ್ರೋತುಮಿಚ್ಛಾಸ್ತಿ ತಾಂ ತ್ವಂ ವದ ವದಾಮ್ಯಹಂ ।
ಇತಿ ತೀರ್ಥವಚಃ ಶ್ರುತ್ವಾ ವಿಷ್ಣುದಾಸಸ್ತಮಬ್ರವೀತ್ ॥ ೨ ॥

॥ ವಿಷ್ಣುದಾಸ ಉವಾಚ ॥

ಕುಶಾಂತಸ್ಸೂರ್ಯವಂಶೋತ್ರ ಗುರೋ ಪೂರ್ವಂ ತ್ವಯೇರಿತಃ ।
ಕುಶಾಗ್ರೇ ಶ್ರೋತುಮಿಚ್ಛಾಮಿ ಸೂರ್ಯವಂಶಂ ಸವಿಸ್ತರಂ ॥ ೩ ॥

ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ ಏಳನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು--ಎಲೈ ಶಿಷ್ಯನೇ ! ನೀನು ಸ್ವರ್ಗಾರೋಹಣ ಕೌತುಕವನ್ನು ಕೇಳಿದೆಯಷ್ಟೆ ! ಅದೆಲ್ಲವನ್ನೂ ಅಂತೆಯೇ ವರ್ಣಿಸಿದ್ದೇನೆ.

೨. ಇನ್ನು ಯಾವುದನ್ನು ಕೇಳಬೇಕೆಂದು ಇದ್ದೀಯೆ ? ಅದನ್ನು ಕೇಳು. ಹೇಳುತ್ತೇನೆ. ಹೀಗೆಂಬುದಾಗಿ ಹೇಳಿದ ಗುರುವಿನ ಮಾತನ್ನು ಕೇಳಿ ಶಿಷ್ಯನು. ಇಂತೆಂದು ಹೇಳಿದನು.

೩. ವಿಷ್ಣುದಾಸನು ಹೇಳಿದನು--ಎಲೈ ಗುರುವೇ ! ಕುಶನ ತಲೆಯ ವರೆಗೂ ಸೂರ್ಯವಂಶವನ್ನು ನೀನು ಹೇಳಿದೆ. ಕುಶನ ಅನಂತರದಲ್ಲಿ ಆ ಸೂರ್ಯವಂಶವು ಬೆಳೆದ ರೀತಿಯನ್ನು ವಿಸ್ತಾರವಾಗಿ ತಿಳಿಸು.

॥ ಶ್ರೀರಾಮದಾಸ ಉವಾಚ ॥

ವಿಷ್ಣುರಾರಭ್ಯ ಕಥಿತಾ ಏಕಷಷ್ಟಿತಮಾಃ ಪುರಾ ।
ಏಕಷಷ್ಟಿನೃಪಾ ಅಗ್ರೇ ತಾನ್ ವದಾಮಿ ಸವಿಸ್ತರಂ ॥ ೪ ॥

ಶ್ರೀರಾಮಸ್ಯ ಕುಶಃ ಪುತ್ರೋಽತಿಥಿಃ ಪುತ್ರಃ ಕುಶಸ್ಯ ಸಃ ।
ನಿಷಧಸ್ತ್ವತಿಥೇಃ ಪುತ್ರೋ ನಿಷಧಸ್ಯಾತ್ಮಜೋ ನಭಃ ॥ ೫ ॥

ನಭಾಜ್ಜಾತೋ ಪುಂಡರೀಕಃ ಕ್ಷೇಮಧನ್ವಾ ತು ತತ್ಸುತಃ ।
ದೇವಾನೀಕಸ್ತತ್ಸುತೋಽಭೂದ್ದೇವಾನೀಕಸುತೋ ಮಹಾನ್ ॥ ೬ ॥

ಅಹೀನಃ ಪ್ರೋಚ್ಯತೇ ಸದ್ಭಿಃ ಪಾರ್‍ಯಾತ್ರಸ್ತತ್ಸುತಃ ಸ್ಮೃತಃ ।
ಪಾರ್‍ಯಾತ್ರಸ್ಯ ಬಲಃ ಪುತ್ರೋ ಸ್ಥಲಃ ಪುತ್ರೋ ಬಲಸ್ಯ ಹಿ ॥ ೭ ॥

ಸ್ಥಲಸ್ಯ ವಜ್ರನಾಭಸ್ತು ಖಗಣಸ್ತಸ್ಯ ಕೀರ್ತ್ಯತೇ ।
ಖಗಣಾದ್ವಿಧೃತಿರ್ಜಾತೋ ವಿಧೃತೇಸ್ತನಯಶ್ಶುಭಃ ॥ ೮ ॥

---

೪. ಶ್ರೀರಾಮದಾಸನು ಹೇಳಿದನು--ಎಲೈ ಶಿಷ್ಯನೇ ! ರಾಮಾವತಾರವನ್ನು ಮೊದಲುಮಾಡಿ ಶ್ರೀ ವಿಷ್ಣುವಿನಿಂದ ಹಿಂದಕ್ಕೆ ಅರವತ್ತೊಂದು ತಲೆಗಳವರೆಗೂ ಅವರ ವಂಶವನ್ನು ನಿನಗೆ ಹೇಳಿದ್ದೇನೆ. ಮುಂದೆ ಉಂಟಾಗುವ ಅರವತ್ತೊಂದು ತಲೆಗಳವರೆಗೂ ಹೇಳುತ್ತೇನೆ. ಕೇಳು.

೫. ಶ್ರೀರಾಮನ ಮಗನು ಕುಶನು. ಕುಶನಿಗೆ ಅತಿಥಿ ಎಂಬವನು ಮಗನು. ಅತಿಥಿಗೆ ನಿಷಧನೆಂಬುವನು. ನಿಷಧನಿಗೆ ನಭನೆಂಬುವನು ಮಗನು.

೬-೭. ನಭನಿಗೆ ಪುಂಡರೀಕನೆಂಬುವನು ಮಗನು. ಪುಂಡರೀಕನಿಗೆ ಕ್ಷೇಮಧನ್ವನೆಂಬುವನು ಮಗನು. ಆ ಕ್ಷೇಮಧನ್ವನಿಗೆ ದೇವಾನೀಕನೆಂಬುವನು ಮಗನು. ದೇವಾನೀಕನಿಗೆ ಅಹೀನನೆಂಬುವನು ಮಗನು. ಆಹೀನನಿಗೆ ಪಾರ್‍ಯಾತ್ರನೆಂಬುವನು ಮಗನು. ಪಾರಿಯಾತ್ರನಿಗೆ ಬಲನೆಂಬುವನು ಮಗನು. ಬಲನಿಗೆ ಸ್ಥಳನೆಂಬುವನು ಮಗನು.

೮. ಆ ಸ್ಥಳನಿಗೆ ವಜ್ರನಾಭನು ಮಗನು. ವಜ್ರನಾಭನಿಗೆ ಖಗಣನೆಂಬುವನು ಮಗನು. ಖಗಣನಿಗೆ ವಿಧೃತಿಯು ಮಗನು. ವಿಧೃತಿಯ ಮಗನು ಶುಭನು.

ಜಾತೋ ಹಿರಣ್ಯನಾಭಸ್ತು ತಸ್ಯ ಪುಷ್ಪಃ ಪ್ರಕೀರ್ತ್ಯತೇ ।
ಪುಷ್ಪಾತ್ಸ ಧ್ರುವಸಂಧಿಸ್ತು ಧ್ರುವಸಂಧೇಸ್ಸುದರ್ಶನಃ ॥ ೯ ॥

ಸುದರ್ಶನಾದಗ್ನಿವರ್ಣಸ್ತಸ್ಮಾಚ್ಛೀಘ್ರಃ ಪ್ರಕೀರ್ತ್ಯತೇ ।
ಶೀಘ್ರಾಜ್ಜಾತೋ ಮರುಃ ಪುತ್ರೋ ಮರೋಃ ಪ್ರಸುಶ್ರುತಸ್ಸುತಃ ॥

ಪ್ರಸುಶ್ರುತಸ್ಯ ಸಂಧಿರ್ಹಿ ಸಂಧೇಃ ಪುತ್ರಸ್ತು ಮರ್ಷಣಃ ।
ಮರ್ಷಣಸ್ಯ ಸಹಸ್ವಾಂಶ್ಚ ವಿಶ್ವಾಹಶ್ಚ ತತ್ಸುತಃ ॥ ೧೧ ॥

ತಸ್ಮಾತ್ಪ್ರಸೇನಜಿತ್ಪ್ರೋಕ್ತಃ ತಸ್ಮಾಜ್ಜಾತಸ್ತು ತಕ್ಷಕಃ ।
ಬೃಹದ್ಬಲಸ್ತಕ್ಷಕಾಚ್ಚ ತಸ್ಮಾಜ್ಜಾತೋ ಬೃಹದ್ರಣಃ ॥ ೧೨ ॥

ತಸ್ಮಾದುರುಕ್ರಿಯಃ ಪ್ರೋಕ್ತೋ ವತ್ಸವೃದ್ಧಸ್ತು ತತ್ಸುತಃ ।
ವತ್ಸವೃದ್ಧಸ್ಯ ವ್ಯೋಮಸ್ತು ವ್ಯೋಮಾದ್ಭಾನುಃ ಪ್ರಕೀರ್ತ್ಯತೇ ॥ ೧೩ ॥

---

೯. ಶುಭನಿಗೆ ಹಿರಣ್ಯನೆಂಬುವನು ಮಗನು. ಹಿರಣ್ಯನಾಭನಿಗೆ ಪುಷ್ಪನೆಂಬುವನು ಮಗನು. ಪುಷ್ಪನಿಗೆ ಧ್ರುವಸುಧಿಂಯು ಮಗನು ಧ್ರುವಸಂಧಿಗ ಸುದರ್ಶನನು ಮಗನು.

೧೦. ಸುದರ್ಶನನಿಗೆ ಅಗ್ನಿವರ್ಣನು ಮಗನು. ಅಗ್ನಿವರ್ಣನಿಗೆ ಶೀಘ್ರನೆಂಬುವನು ಮಗನು. ಶೀಘ್ರನಿಗೆ ಮರುವೆಂಬುವನು ಮಗನು. ಮರುವಿಗೆ ಪ್ರಸುಶ್ರುತನೆಂಬುವನು ಮಗನು.

೧೧. ಪ್ರಸುಶ್ರುತನಿಗೆ ಸಂಧಿಯೆಂಬುವನು ಮಗನು. ಸಂಧಿಗೆ ಮರ್ಷಣನೆಂಬುವನು ಮಗನು. ಮರ್ಷಣನಿಗೆ ಸಹಸ್ವಂತನು ಮಗನು. ಸಹಸ್ವಂತನಿಗೆ ವಿಶ್ವವಾಹನನು ಮಗನು.

೧೨. ವಿಶ್ವವಾಹನನಿಗೆ ಪ್ರಸೇನಜಿತ್ತುಯೆಂಬುವನು ಮಗನು. ಆ ಪ್ರಸೇನಜಿತ್ತುವಿಗೆ ತಕ್ಷಕನೆಂಬುವನು ಮಗನು. ತಕ್ಷಕನಿಗೆ ಬೃಹದ್ಬಲನೆಂಬುವನು ಮಗನು. ಬೃಹದ್ಬಲನಿಗೆ ಬೃಹದ್ರಣನೆಂಬುವನು ಮಗನು.

೧೩. ಬೃಹದ್ರಣನಿಗೆ ಉರುಕ್ರಿಯನು ಮಗನು. ಉರುಕ್ರಿಯನಿಗೆ ವತ್ಸವೃದ್ಧನೆಂಬುವನು ಮಗನು. ಆ ವತ್ಸವೃದ್ಧನಿಗೆ ವ್ಯೋಮನೆಂಬುವನೂ ವ್ಯೋಮನಿಗೆ ಭಾನುವೆಂಬುವನೂ ಮಕ್ಕಳು.

ಭಾನೋಃ ಪುತ್ರೋ ದಿವಾಕೆಸ್ತು ಸಹದೇವಶ್ಚ ತತ್ಸುತಃ ।
ಸಹದೇವಾತ್ಮಜೋ ವೀರೋ ವೀರಸ್ಯ ತನಯಶ್ಶುಭಃ ॥ ೧೪ ॥

ಬೃಹದಶ್ವ ಇತಿ ಖ್ಯಾತಸ್ತಸ್ಯ ಪುತ್ರಸ್ತು ಭಾನುಮಾನ್ ।
ಭಾನುಮತಃ ಪ್ರತೀಕಾಶಃ ಸ್ಸುಪ್ರತೀಕಶ್ಚ ತತ್ಸುತಃ ॥ ೧೫ ॥

ಸುಪ್ರತೀಕಸ್ಯ ಪುತ್ರೋಽಭೂನ್ಮರುದೇವ ಇತಿ ಸ್ಮೃತಃ ।
ಮರುದೇವಾತ್ಸುನಕ್ಷತ್ರಸ್ಸುನಕ್ಷತ್ರಾಚ್ಚ ಪುಷ್ಕರಃ ॥ ೧೬ ॥

ಪುಷ್ಕರಸ್ಯಾಂತರಿಕ್ಷಶ್ಚ ಸುತಪಾ ಅಂತರಿಕ್ಷಜಃ ।
ಸುತಪಾತನಯೋ ಮಿತ್ರೋ ಮಿತ್ರಜಿತ್ತತ್ಸುತಶ್ಶುಭಃ ॥ ೧೭ ॥

ಬ್ರಹದ್ರಾಜ ಇತಿ ಖ್ಯಾತಸ್ತಸ್ಯ ಬರ್ಹಿಸ್ಸ್ಮೃತೋ ಬುಧೈಃ ।
ಬರ್ಹೇಃ ಕೃತಂಜಯಃ ಪುತ್ರಸ್ತಸ್ಯ ಪುತ್ರೋ ರಣಂಜಯಃ ॥ ೧೮ ॥

---

೧೪. ಭಾನುವಿಗೆ ದಿವಾಕನೆಂಬುವನು ಮಗನು. ದಿವಾಕನಿಗೆ ಸಹದೇವನೆಂಬುವನು ಮಗನು. ಸಹದೇವನಿಗೆ ವೀರನೆಂಬುವನು ಮಗನು. ವೀರನಿಗೆ ಶುಭನೆಂಬುವನು ಮಗನು.

೧೫. ಆ ಶುಭನಿಗೆ ಬೃಹದಶ್ವನು ಮಗನು. ಬೃಹದಶ್ವನಿಗೆ ಭಾನುಮಂತನು ಮಗನು. ಭಾನುಮಂತನಿಗೆ ಪ್ರತೀಕಾಶನು ಮಗನು. ಆ ಪ್ರತೀಕಾಶನಿಗೆ ಸುಪ್ರತೀಕನೆಂಬುವನು ಮಗನು.

೧೬–೧೭. ಸುಪ್ರತೀಕನಿಗೆ ಮರುದೇವನು ಮಗನು. ಮರುದೇವನಿಗೆ ಸುನಕ್ಷತ್ರನು ಮಗನು. ಸುನಕ್ಷತ್ರನಿಗೆ ಪುಷ್ಕರನು ಮಗನು. ಪುಷ್ಕರನಿಗೆ ಅಂತರಿಕ್ಷನು ಮಗನು. ಅಂತರಿಕ್ಷನಿಗೆ ಸುತಪನೆಂಬುವನು. ಸುತಪನಿಗೆ ಮಿತ್ರನು ಮಗನು. ಮಿತ್ರನಿಗೆ ಮಿತ್ರಜಿತ್ ಎಂಬುವನು ಮಗನು.

೧೮. ಮಿತ್ರಜಿತನಿಗೆ ಬೃಹದ್ರಾಜನು ಮಗನು. ಬೃಹದ್ರಾಜನಿಗೆ ಬರ್ಹಿ ಎಂಬುವನು ಮಗನು. ಬರ್ಹಿಗೆ ಕೃತಂಜಯನು ಮಗನು. ಕೃತಂಜಯನಿಗೆ ರಣಂಜಯನು ಮಗನು

ರಣಂಜಯಾತ್ಸಂಜಯಸ್ತು ಸಂಜಯಾಚ್ಛಾಕ್ಯ ಉಚ್ಯತೇ ।
ಶಾಕ್ಯಪುತ್ರಸ್ತು ಶುದ್ಧೋದಶ್ಶುದ್ಧೋದಾಲ್ಲಾಂಗಲಸ್ಸ್ಮೃತಃ ॥ ೧೯ ॥

ಲಾಂಗಲಸ್ಯ ಪ್ರಸೇನಜಿತ್ತಸ್ಯ ಪುತ್ರಸ್ತು ಕ್ಷುದ್ರಕಃ ।
ಕ್ಷುದ್ರಕಾದ್ರಣಕಃ ಪ್ರೋಕ್ತೋ ರಣಕಾತ್ಸುರಥಃ ಸ್ಮೃತಃ ॥ ೨೦ ॥

ಸುರಥಾತ್ತನಯೋ ಜಾತಸ್ತನಯಸ್ಯ ಸುತೋ ಮಹಾನ್ ।
ನಾಮ್ನಾ ಸುಮಿತ್ರಃ ಪರಮಃ ಪೂರ್ಣೋ ವಂಶಸ್ತತಃ ಪರಂ ॥ ೨೧ ॥

ಪೂರ್ವಂಪ್ರೋಕ್ತೋ ಮರುರಿತಿ ನಾಮ್ನಾ ಯೋ ನೃಪತಿರ್ಮಯಾ ।
ಕಲಾಪಗ್ರಾಮಮಾಶ್ರಿತ್ಯ ಹಿಮಾದ್ರೌ ಬದ್ರಿಕಾಶ್ರಮೇ ॥ ೨೨ ॥

ತತ್ತಪಶ್ಚಿರಕಾಲಂ ಹಿ ಕರೋತ್ಯತ್ರ ಸಮಾಧಿಮಾನ್ ।
ಕೃತೇ ಯುಗೇ ಪುನಃ ಪ್ರಾಪ್ತೇಸೂರ್ಯವಂಶಂ ಕರಿಷ್ಯತಿ ॥ ೨೩ ॥

---

೧೯. ರಣಂಜಯನಿಗೆ ಸಂಜಯನು ಮಗನು. ಸಂಜಯನಿಗೆ ಶಾಕ್ಯನು ಶಾಕ್ಯಪುತ್ರನು ಶುದ್ಧೋಧನು. ಶುದ್ಧೋದನಿಗೆ ಲಾಂಗಲನು ಮಗನು.

೨೦. ಲಾಂಗಲನಿಗೆ ಪ್ರಸೇನಜಿತ್ತೆಂಬುವನು ಮಗನು. ಆ ಪ್ರಸೇನಜಿತ್ತಿಗೆ ಕ್ಷುದ್ರಕನೆಂಬುವನು ಮಗನು. ಕ್ಷುದ್ರಕನಿಗೆ ರಣಕನೆಂಬುವನು ಮಗನು. ರಣಕನಿಗೆ ಸುರಥನು ಮಗನು.

೨೧. ಸುರಥನಿಗೆ ತನಯನು ಮಗನು. ತನಯನಿಗೆ ಸುಮಿತ್ರನು ಮಗನು. ಅಲ್ಲಿಗೆ ಅವನ ವಂಶವು ಪೂರ್ತಿಯಾಯಿತು.

೨೨. ಇವರ ಪೂರ್ವಿಕನು ಮರುವು ಎಂದು ನಾನು ಹೇಳಿದೆನಷ್ಟೆ. ಅವನು ಹಿಮವತ್ಪರ್ವತದ ತಪ್ಪಲಲ್ಲಿರುವ ಕಲಾಪಗ್ರಾಮದಲ್ಲಿ ಬದರಿಕಾಶ್ರಮದಲ್ಲಿ ತಪಸ್ಸನ್ನು ಮಾಡುವನು.

೨೩. ಅವನು ಬಹುಕಾಲದವರೆಗೆ ಸಮಾಧಿಯಲ್ಲಿದ್ದುಕೊಂಡು ತಪಸ್ಸನ್ನು ಮಾಡುತ್ತಲೇ ಇರುವನು. ಮತ್ತೆ ಕೃತಯುಗವು ಬಂದಮೇಲೆ ಸೂರ್ಯವಂಶವನ್ನು ಪುನಃಸೃಷ್ಟಿಸುವನು.

ಏವಂ ಮಯಾ ಸಮಾಖ್ಯಾತಸ್ಸೂರ್ಯವಂಶೋ ಮನೋರಮಃ ।
ವಿಷ್ಣೋರಾರಭ್ಯ ಕಥಿತಾ ಏಕಷಷ್ಟಿತಮಾ ಮಯಾ ॥ ೨೪ ॥

ಏಕಷಷ್ಟಿತಮಾ ಅಗ್ರೇ ಮಧ್ಯೇ ರಾಮೋ ವಿರಾಜತೇ ।
ತ್ರಯೋವಿಂಶೋತ್ತರಶತಾಶ್ಚೈವಂ ವಿಷ್ಣೋರ್ವಂಶೋದಿತಾಃ ॥ ೨೫ ॥

ಏವಂ ಯಥಾ ತ್ವಯಾ ಪೃಷ್ಟಂ ಶಿಷ್ಯ ವಂಶಾನುಕೀರ್ತನಂ ।
ತನ್ಮಯಾ ಕಥಿತಂ ಸರ್ವಂ ಶ್ರವಣಾತ್ಪುಣ್ಯವರ್ಧನಂ ॥ ೨೬ ॥

॥ ವಿಷ್ಣುದಾಸ ಉವಾಚ ॥

ಗುರೋ ಮಯಾ ಶ್ರುತಂ ಕಸ್ಯ ಚಿನ್ಮುನೇರ್ಮುಖತಃ ಪುರಾ ।
ರಾಮಾಯಣಂ ಸವಿಸ್ತಾರಂ ತಚ್ಚೇದಂ ನೈವ ಭಾಸತೇ ॥ ೨೭ ॥

---

೨೪. ಈ ರೀತಿಯಾಗಿ ಮನೋರಮವಾದ ಸೂರ್ಯವಂಶವನ್ನು ನಿನಗೆ ಹೇಳಿದ್ದೇನೆ. ವಿಷ್ಣುವಿನಿಂದ ಮೊದಲುಮಾಡಿಕೊಂಡು ಅವನಿಂದ ಹಿಂದಕ್ಕೆ ಅರವತ್ತೊಂದು ತಲೆಯನ್ನೂ ಮುಂದಕ್ಕೆ ಅರವತ್ತೊಂದು ತಲೆಯನ್ನೂ ಹೇಳಿರುವೆನು.

೨೫. ಈ ಹಿಂದಿನ ಅರವತ್ತೊಂದು ಜನರ ಮುಂದಿನ ಅರವತ್ತೊಂದು ಜನರ ಮಧ್ಯದಲ್ಲಿ ಈ ಶ್ರೀರಾಮನು ವಿರಾಜಿಸುತ್ತಿರುವನು. ಒಟ್ಟು ಇವರ ವಂಶದವರು ಒಂದುನೂರ ಇಪ್ಪತ್ತಮೂರು ಜನರೆಂದು ತಿಳಿದುಕೋ. ಈ ರೀತಿಯಾಗಿ ಇವರು ಪ್ರಕಾಶಿಸಬೇಕು.

೨೬. ಎಲೈ ಶಿಷ್ಯನೇ ! ನೀನು ಕೇಳಿದ ರೀತಿಯಲ್ಲಿ ಆ ರಾಮನ ವಂಶದ ಪರಂಪರೆಯನ್ನು ನಿನಗೆ ವಿಸ್ತಾರವಾಗಿ ಹೇಳಿದ್ದೆನೆ. ಇದನ್ನು ಓದುವುದರಿಂದಲೂ ಕೇಳುವುದರಿಂದಲೂ ಪುಣ್ಯವು ಹೆಚ್ಚುತ್ತದೆ.

೨೭. ವಿಷ್ಣುದಾಸನು ಹೇಳಿದನು–ಎಲೈ ಗುರುವೇ ! ನಾನು ಹಿಂದೆ ಒಬ್ಬ ಮುನಿಯ ಬಾಯಿಂದ ರಾಮಾಯಣವನ್ನು ಕೇಳಿದ್ದೇನು. ಆ ರಾಮಾಯಣವು ಈಗ ಜ್ಞಾಪಕಕ್ಕೆ ಬರುವುದೇ ಇಲ್ಲ. ಅದು ಇದರಲ್ಲಿ ಹೇಳಿದ್ದರೆ ಜ್ಞಾಪಕಕ್ಕೆ ಬರುತ್ತಿದ್ದಿತು.

ತಸ್ಮಾದತ್ರಾಂತರಂ ಪ್ರೋಕ್ತಂ ತ್ವಯಾ ಸರ್ವತ್ರ ಮಾಂ ಗುರೋ ।
ಸಂದೇಹೋನೇನ ಮೇ ಜಾತಸ್ತತ್ವಂ ಛೇತ್ತುಮಿಹಾರ್ಹಸಿ ॥ ೨೮ ॥

॥ ರಾಮದಾಸ ಉವಾಚ ॥

ಪುನಃ ಪುನಃ ಕಲ್ಪಭೇದಾ ಜ್ಞಾತಾಃ ಶ್ರೀರಾಘವಸ್ಯ ಚ ।
ಅವತಾರಾಃ ಕೋಟಿಶೋತ್ರ ತೇಷು ಭೇದಃ ಕ್ವಚಿತ್ಕ್ವಚಿತ್ ॥ ೨೯ ॥

ಕೃತೋಸ್ತಿ ರಾಘವೇಣೈವ ನ ಸರ್ವೇ ಸದೃಶಾಃ ಕೃತಾಃ ।
ರಾಮಾಯಣಾನ್ಯಪಿ ತಥಾ ಪುರಾ ವಾಲ್ಮೀಕಿನೈವ ಹಿ ॥ ೩೦ ॥

ಅನೇಕಾನ್ಯಂತರೇಣೈವ ಕೀರ್ತಿತಾನಿ ಸವಿಸ್ತರಾತ್ ।
ಶತಕೋಟಿಮಿತಾ ತೇಷಾಂ ಸರ್ವೇಷಾಂ ಗಣನಾ ಕೃತಾ ॥ ೩೧ ॥

---

೨೮. ನೀನು ಹೇಳಿದುದಕ್ಕೂ ಆಗ ಕೇಳಿದುದಕ್ಕೂ ಬಹುವಾದ ವ್ಯತ್ಯಾಸ ವಿರುವುದು. ಒಂದೊಂದು ಜಾಗದಲ್ಲಿ ಮಾತ್ರ ಈ ವ್ಯತ್ಯಾಸಗಳು ಕಂಡುಬರುತ್ತಿಲ್ಲ. ಅನೇಕ ಸ್ಥಳಗಳಲ್ಲಿ ಕಂಡುಬರುತ್ತಿವೆ. ಇದರಿಂದ ನನಗೆ ಬಹುವಾದ ಸಂದೇಹವು ಉಂಟಾಗಿದೆ. ಈ ಸಂದೇಹವನ್ನು ನೀನು ಪರಿಹರಿಸು.

೨೯. ರಾಮದಾಸನು ಹೇಳಿದನು–ಈ ಶ್ರೀರಾಮನ ಅವತಾರವು ಕಲ್ಪ ಕಲ್ಪಗಳಲ್ಲಿಯೂ ಆಗುತ್ತಲೇ ಇರುವುದು. ಇಂತಹ ಅವತಾರಗಳು ಕೋಟಿ ಗಟ್ಟಲೆಯಲ್ಲಿ ಆಗಿವೆ. ಇವುಗಳಲ್ಲಿ ಒಂದೊಂದರಲ್ಲಿಯೂ ಸ್ವಲ್ಪ ಸ್ವಲ್ಪ ಭೇದಗಳಿರುತ್ತವೆ.

೩೦. ಆ ರಾಮನು ತನ್ನ ಅವತಾರಗಳಲ್ಲಿ ಎಲ್ಲದರಲ್ಲಿಯೂ ಒಂದೇ ರೀತಿಯಾಗಿ ಕೆಲಸಗಳನ್ನು ಮಾಡದೆ ವ್ಯತ್ಯಾಸವಾಗಿ ಮಾಡಿರುವನು. ಪೂರ್ವದಲ್ಲಿ ವಾಲ್ಮೀಕಿಯು ಕೂಡ ಆಗಾಗ ಆಯಾ ರಾಮಾಯಣಗಳನ್ನು ಅದರಂತೆಯೇ ರಚಿಸಿರುವನು.

೩೧. ಆಯಾಯಾ ರಾಮಾಯಣಗಳನ್ನು ವ್ಯತ್ಯಾಸವಾಗಿಯೇ ಆ ಋಷಿಯು ಬರೆದಿರುವನಷ್ಟೇ. ಅವೆಲ್ಲವನ್ನೂ ಸೇರಿಸಿಕೊಂಡೇ ನೂರುಕೋಟಿ ರಾಮಾಯಣಗಳೆಂದು ನಾನು ಲೆಕ್ಕವನ್ನು ಹಾಕಿರುವೆನು.

ತಸ್ಮಾತ್ತ್ವಯಾ ನ ಸಂದೇಹಃ ಕಾರ್ಯ ಶ್ಶಿಷ್ಯಾತ್ರ ಚುದ್ಧಿವರ್ಮ |
ಯನ್ಮಯಾ ಕಥಿತಂ ತೇಽಹಿ ತತ್ತಥ್ಯಂ ವಿದ್ಧಿ ನಾನ್ಯಥಾ ॥ ೩೨ ॥

ಭಾಗಾದ್ಭರತಖಂಡಾಂತರ್ಗತಾದ್ರಾಮಾಯಣಾತ್ಪುರಾ |
ನಾರದಾದಿಪುರಾಣಾನಿ ವ್ಯಾಸೇನಾತ್ರ ಕೃತಾನಿ ಹಿ ॥ ೩೩ ॥

ತೇಷು ಮತ್ಕಥಿತಂ ಚೇದಂ ಸಮ್ಯಗ್ವಿಸ್ತಾರಿತಂ ದ್ವಿಜ |
ತವ ಜಾತೋಽ ಯಥಾ ಶಿಷ್ಯ ಸಂದೇಹೋತ್ರ ಕಥಾಂತರಾತ್ ॥ ೩೪ ॥

ಭವಿಷ್ಯತಿ ತಥಾನ್ಯೇಷಾಮಗ್ರೇ ಯದಿ ಕದಾ ಕ್ವಚಿತ್ |
ನಾರದಾದಿಪುರಾಣೇಷು ದರ್ಶನೀಯಂ ಹಿ ತೈರ್ಜನೈಃ ॥ ೩೫ ॥

---

೩೨. ಆದ್ದರಿಂದ ಎಲೈ ಬುದ್ಧಿವಂತನೇ ! ಈ ವಿಷಯದಲ್ಲಿ ನೀನು ಸಂದೇಹ ಪಡಬೇಡ. ಈ ರಾಮನ ವಿಷಯದಲ್ಲಿ ಯಾವು ಯಾವುದನ್ನು ಹೇಳಿರುವೆನೋ ಅವನ್ನು ವ್ಯತ್ಯಾಸವಾಗಿ ತಿಳಿಯಲೇ ಬೇಡ.

೩೩. ಇವುಗಳಲ್ಲಿ ಭರತಖಂಡದಲ್ಲಿ ಪ್ರಚಾರದಲ್ಲಿದ್ದ ರಾಮಾಯಣದ ಭಾಗಗಳನ್ನು ತೆಗೆದುಕೊಂಡು ವ್ಯಾಸನು ನಾರದಾದಿ ಪುರಾಣಗಳನ್ನು ಬರೆದಿರುವನು.

೩೪. ಅವುಗಳಲ್ಲಿ ನಾನು ಹೇಳಿರುವ ಭಾಗವನ್ನೇ ತೆಗೆದು ವಿಸ್ತಾರವಾಗಿ ಹೇಳಿದ್ದಾನೆ. ಅವುಗಳಲ್ಲಿ ಬೇರೆ ಕಥೆಯನ್ನು ಸೇರಿಸಿ ಹೇಳಿರುವುದರಿಂದ ನಿನಗೆ ಸಂದೇಹವು ಬಂದಿದೆ. ಇದು ಸಹಜವಾದುದು.

೩೫. ಇದೇ ರೀತಿ ಮುಂದೆಯೂ ಕೂಡ ಜನರಿಗೆ ಸಂದೇಹವು ಬರುವುದು. ಒಂದುವೇಳೆ ಹಾಗೇನಾದರೂ ಬಂದರೆ ಅವುಗಳನ್ನು ನಾರದಾದಿ ಪುರಾಣಗಳಲ್ಲಿ ನೋಡಿ ತಿಳಿದುಕೊಳ್ಳಬೇಕು.

ದೃಷ್ಟ್ವಾ ಮದುಕ್ತಂ ಸರ್ವೇಷು ಪುರಾಣಾದಿಷು ಪಂಡಿತೈಃ ।
ತ್ಯಕ್ತವ್ಯಾಃ ಸ್ವೀಯಸಂದೇಹಾಃ ಸತ್ಯಂ ಜ್ಞೇಯಂ ಮಯೇರಿತಂ ॥ ೩೭ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ಆದಿಕಾವ್ಯೇ ಪೂರ್ಣಕಾಂಡೇ ಸೂರ್ಯವಂಶ
ವರ್ಣನಂ ನಾಮ ಸಪ್ತಮಸ್ಸರ್ಗಃ ಸಮಾಪ್ತಃ

---

೩೭. ನಾನು ಹೇಳಿರುವುದೇನೋ ಸತ್ಯವಾದ ಮಾತು. ನಾನು ಹೇಳಿರುವ ವಿಷಯವನ್ನು ಎಲ್ಲಾ ಪುರಾಣಗಳಲ್ಲಿಯೂ ನೋಡಿ ಸಂದೇಹವನ್ನು ನಿವೃತ್ತಿಮಾಡಿಕೊಳ್ಳಬೇಕು.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ
ಆದಿಕಾವ್ಯವಾದ ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ
ಸೂರ್ಯವಂಶವರ್ಣನವೆಂಬ ಏಳನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ ಏಳನೆಯ ಸರ್ಗದ ಸಾರಾಂಶವು.

ವಿಷ್ಣುವಿನಿಂದ ಮೊದಲುಗೊಂಡು ಸೂರ್ಯವಂಶದ ಅರವತ್ತು ಜನ ರಾಜರನ್ನು ಹೇಳಿ ಮುಂದಿನ ಅರವತ್ತೊಂದು ಜನ ರಾಜರನ್ನೂ ಹೇಳುತ್ತಾನೆ. ಮುಂದಿನ ಅರವತ್ತೊಂದು ಜನರ ಮಧ್ಯದಲ್ಲಿ ಶ್ರೀರಾಮನು ಅವತರಿಸಿದುದು. ಶ್ರೀರಾಮನು ಅನೇಕಬಾರಿ ಅವತರಿಸಿರುವುದರಿಂದ ರಾಮಾಯಣಗಳು ಅನೇಕ ಬಗೆಯಾಗಿವೆ. ಅವುಗಳಲ್ಲಿಯೂ ಸ್ವಲ್ಪ ಸ್ವಲ್ಪ ವ್ಯತ್ಯಾಸವು ಕಂಡುಬರುವುದು. ಈ ವ್ಯತ್ಯಾಸದಿಂದ ರಾಮಾಯಣವನ್ನು ಸುಳ್ಳೆಂದು ಹೇಳಬಾರದು. ಇದೇ ವಿಷಯವನ್ನು ನಾರದಾದಿ ಪುರಾಣಗಳಲ್ಲಿ ವಿಸ್ತರಿಸಿದೆ. ಅಲ್ಲಿ ನೋಡಿದರೆ ಸಂದೇಹವು ಪೂರ್ತಿನಿವಾರಣೆಯಾಗುವುದು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಪೂರ್ಣಕಾಂಡೇ ಅಷ್ಟಮಸ್ಸರ್ಗಃ

॥ ವಿಷ್ಣುದಾಸ ಉವಾಚ ॥

ಗುರೋಽಧುನಾ ವದಸ್ವ ತ್ವಂ ಯನ್ಮಯಾ ಪೃಚ್ಛ್ಯತೇ ತವ ।
ಅನುಕ್ರಮಣಿಕಾ ಸರ್ಗಂ ತಥಾ ಪಾಠಾದಿಭಿಃ ಫಲಂ ॥ ೧ ॥

ಕಾಂಡಸಂಖ್ಯಾಂ ಸರ್ಗಸಂಖ್ಯಾಂ ಶ್ಲೋಕಸಂಖ್ಯಾಂ ಸವಿಸ್ತರಾಂ ।
ಉದ್ಯಾಪನಂ ಗ್ರಂಥದಾನಂ ಫಲಂ ವೈ ಶಕುನೇಕ್ಷಣಂ ॥ ೨ ॥

ಅನುಷ್ಠಾನವಿಧಾನಂ ಚ ಶ್ರೋತುಂ ಕಾಲವಿನಿರ್ಣಯಂ ।
ಕಾಂಡಾನಾಂ ಚ ಪೃಥಕ್ ಸಂಖ್ಯಾಂ ಸರ್ವಂ ತ್ವಂ ವಕ್ತುಮರ್ಹಸಿ ॥ ೩ ॥

ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ ಎಂಟನೆಯ ಸರ್ಗವು

೧. ವಿಷ್ಣುದಾಸನು ಹೇಳಿದನು-ಎಲೈ ಗುರುವೇ ! ನಾನು ಕೇಳುವುದನ್ನು ಈಗ ನನಗೆ ವಿಸ್ತಾರವಾಗಿ ಹೇಳು. ಅನುಕ್ರಮಣಿಕೆಯ ವಿಷಯದ ಸರ್ಗವನ್ನೂ ಇದನ್ನು ಓದುವುದರಿಂದ ಬರುವ ಫಲವನ್ನೂ ತಿಳಿಸು.

೨. ಕಾಂಡ ಸಂಖ್ಯೆಯನ್ನೂ ಸರ್ಗ ಸಂಖ್ಯೆಯನ್ನೂ ಶ್ಲೋಕ ಸಂಖ್ಯೆಯನ್ನೂ ವಿಸ್ತಾರವಾಗಿ ಹೇಳು. ಇದರ ಉದ್ಯಾಪನೆಯನ್ನೂ ಗ್ರಂಥದಾನದ ವಿಷಯವನ್ನು ಅದರ ಫಲವನ್ನೂ ಶಕುನದ ದರ್ಶನವನ್ನೂ ಹೇಳು.

೩. ಇದನ್ನು ಯಾವಾಗಮಾಡಬೇಕು ? ಹೇಗೆ ಎಂಬುದನ್ನೂ ಕೇಳುವ ಕಾಲವನ್ನೂ, ಕಾಂಡಗಳ ಸಂಖ್ಯೆಯನ್ನೂ ಇವೆಲ್ಲವನ್ನೂ ನೀನು ಹೇಳು.

॥ ಶ್ರೀರಾಮದಾಸ ಉವಾಚ ॥

ಅನುಕ್ರಮಣಿಕಾಸರ್ಗಃ ಪ್ರೋಚ್ಯತೇಽಯಂ ಮಯಾಧುನಾ ।
ಯಸ್ಯ ಸಂಶ್ರವಣಾತ್ಪ್ರೋಕ್ತಂ ಸರ್ವಗ್ರಂಥಫಲಂ ಶುಭಂ ॥ ೧ ॥

ಸರ್ಗೇಽತ್ರ ಪ್ರಥಮೋ ಪ್ರೋಕ್ತಂ ಕೌಸಲ್ಯಾಯಾಃ ಸ್ವಯಂವರಂ ।
ರಾಮಾದೀನಾಂ ಸುಜನ್ಮಾನಿ ದ್ವಿತೀಯೇ ಕೀರ್ತನಾನಿ ಹಿ ॥ ೨ ॥

ಸೀತಾಸ್ವಯಂವರಂ ಪ್ರೋಕ್ತಂ ತೃತೀಯೇ ಮಿಥಿಲಾಪುರೀ ।
ವೃಂದಾಶಾಪಾದಿಕಥನಂ ಚತುರ್ಥೇ ಮುದ್ಗಲೇನ ಹಿ ॥ ೩ ॥

ದಶರಥಪೂರ್ವಜನ್ಮ ಕೈಕೇಯ್ಯಾಶ್ಚಾಪಿ ಪಂಚಮೇ ।
ವನಪ್ರಯಾಣಂ ರಾಮಸ್ಯ ಪ್ರೋಕ್ತಂ ಷಷ್ಠೇ ಸವಿಸ್ತರಂ ॥ ೪ ॥

---

೧ ಶ್ರೀರಾಮದಾಸನು ಹೇಳಿದನು--ಎಲೈ ಶಿಷ್ಯನೇ ! ಈಗ ನಾನು ಅನುಕ್ರಮಣಿಕಾಧ್ಯಾಯವನ್ನು ಹೇಳುತ್ತೇನೆ. ಇದನ್ನು ಕೇಳುವುದರಿಂದಲೇ ಎಲ್ಲ ಗ್ರಂಥವನ್ನೂ ಕೇಳಿದ ಫಲವು ಬರುತ್ತದೆ.

೨. ಇಲ್ಲಿ ಮೊದಲನೆಯ ಸರ್ಗದಲ್ಲಿ ಕೌಸಲ್ಯೆಯ ಸ್ವಯಂವರವನ್ನು ಹೇಳಿದ್ದೇನೆ. ಎರಡನೆಯ ಸರ್ಗದಲ್ಲಿ ರಾಮಾದಿಗಳು ಜನ್ಮತಾಳಿದುದನ್ನು ಹೇಳಿದ್ದೇನೆ.

೩. ಮೂರನೆಯ ಸರ್ಗದಲ್ಲಿ ಮಿಥಿಲಾಪಟ್ಟಣದಲ್ಲಿ ಸೀತೆಗೆ ಸ್ವಯಂವರವಾದ ವಿಷಯವನ್ನು ಹೇಳಿದ್ದೇನೆ. ನಾಲ್ಕನೆಯ ಸರ್ಗದಲ್ಲಿ ಮುದ್ಗಲನಿಂದ ವೃಂದೆಗೆ ಶಾಪಬಂದುದನ್ನು ಹೇಳಿದ್ದೇನೆ.

೪ ಐದನೆಯ ಸರ್ಗದಲ್ಲಿ ದಶರಥನ ಪೂರ್ವಜನ್ಮವನ್ನೂ ಕೈಕೆಯಿಯ ಪೂರ್ವಜನ್ಮವನ್ನೂ ಆರನೆಯದರಲ್ಲಿ ರಾಮನು ಕಾಡಿಗೆಹೋದುದನ್ನೂ ವಿಸ್ತರಿಸಿದೆ.

ವಿರಾಧಖಗಮಾರೀಚವಧಾದಿಸಪ್ತಮೋಽಕಥಿ ।
ಕಿಷ್ಕಿಂಧಾಯಾಂ ವಾಲಿಘಾತೋ ರಾಘವೇಣಾಷ್ಟಮೋ ಕೃತಃ ॥ ೮ ॥

ನವಮೋ ಜಾನಕೀಶುದ್ಧಿರ್ಲಂಕಾ ದಗ್ಧಾ ಹನೂಮತಾ ।
ದಶಮೋ ಸೇತುಮಾಹಾತ್ಮ್ಯಂ ಕಾಶೀವಿಶ್ವೇಶ್ವರಾಗಮಃ ॥ ೯ ॥

ಏಕಾದಶೇ ರಾವಣಾದಿವಧಾಃ ಪ್ರೋಕ್ತಾಶ್ಚ ರಾಘವಾತ್ ।
ಸೀತಯಾ ಸ್ವಪುರೀಂ ಗತ್ವಾ ದ್ವಾದಶೇಽಭೂನ್ನೃಪೋ ವಿಭುಃ ॥ ೧೦ ॥

ತ್ರಯೋದಶೇ ರಾಘವಸ್ಯ ವಿಕ್ರಮಶ್ಚ ಹನೂಮತಃ ।
ಸಮಾಪ್ತಂ ಸಾರಕಾಂಡಂ ಹಿ ಯಾತ್ರಾಕಾಂಡಮುದೀರ್ಯತೇ ॥ ೧೧ ॥

---

೮. ಏಳನೆಯ ಸರ್ಗದಲ್ಲಿ ವಿರಾಧಖಗಮಾರೀಚರ ವಧೆಯನ್ನು ಹೇಳಿದೆ. ಎಂಟನೆಯ ಸರ್ಗದಲ್ಲಿ ಕಿಷ್ಕಿಂಧೆಯಲ್ಲಿ ರಾಮನು ವಾಲಿಯನ್ನು ಕೊಂದ ವಿಷಯವನ್ನು ಹೇಳಿದ್ದೇನೆ.

೯. ಒಂಭತ್ತನೆಯ ಸರ್ಗದಲ್ಲಿ ಜಾನಕಿಯ ಸುದ್ದಿಯನ್ನು ತಿಳಿಯುವುದು ವಿಸ್ತರಿಸಿದೆ ಮತ್ತು ಹನುಮಂತನು ಲಂಕೆಯನ್ನು ನಾಶಮಾಡಿದುದನ್ನು ಹೇಳಿದೆ. ಹತ್ತನೆಯ ಸರ್ಗದಲ್ಲಿ ಸೇತುವೆಯ ಮಹಿಮೆಯನ್ನೂ ಕಾಶೀವಿಶ್ವೇಶ್ವರನು ಅಲ್ಲಿಗೆ ಬಂದುದನ್ನೂ ವಿಸ್ತರಿಸಿದ್ದೇನೆ.

೧೦. ಹನ್ನೊಂದನೆಯ ಸರ್ಗದಲ್ಲಿ ರಾಮನು ರಾವಣಾದಿಗಳನ್ನು ಕೊಂದುದನ್ನು ಹೇಳಿದೆ. ಹನ್ನೆರಡನೆಯ ಸರ್ಗದಲ್ಲಿ ರಾಮನು ಸೀತೆಯೊಡನೆ ಅಯೋಧ್ಯೆಗೆ ಹೋಗಿ ಅಲ್ಲಿ ಪಟ್ಟಾಭಿಷಕ್ತನಾದ ವಿಷಯವನ್ನು ವಿಸ್ತರಿಸಿದ್ದೇನೆ.

೧೧. ಹದಿಮೂರನೆಯ ಸರ್ಗದಲ್ಲಿ ರಾಮನ ಮತ್ತು ಹನುಮಂತನ ಪರಾಕ್ರಮಗಳನ್ನು ವರ್ಣಿಸಿದೆ. ಇವೆಲ್ಲವೂ ಸಾರಕಾಂಡದಲ್ಲಿ ಹೇಳಿರುವ ವಿಷಯಗಳಾದವು. ಇನ್ನುಮೇಲೆ ಯಾತ್ರಾಕಾಂಡದ ವಿಷಯವನ್ನು ಹೇಳುತ್ತೇನೆ.

ವಾಲ್ಮೀಕಾತ್ಪ್ರಥಮೇ ಸರ್ಗೇ ಶ್ಲೋಕೋತ್ಪತ್ತಿಃ ಪ್ರಕೀರ್ತಿತಾ ।
ರಾಮಾಯಣವಿಭಾಗೋಽತ್ರ ದ್ವಿತೀಯೇ ಸಮುದಾಹೃತಃ ॥ ೧೨ ॥

ತೃತೀಯೇ ಸೀತಯಾ ರಾಮೋ ಯಾತ್ರಾರ್ಥಂ ಪ್ರಾರ್ಥಿತೋ ಮುದಾ ।
ಚತುರ್ಥೇ ರಾಮಚಂದ್ರಸ್ಯ ಪ್ರಸ್ಥಾನಂ ಜಾಹ್ನವೀಂ ಪ್ರತಿ ॥ ೧೩ ॥

ಪಂಚಮೇ ಮುನಿವಾಕ್ಯೇನ ಯಾತ್ರಾಂ ಗಂತುಂ ವಿನಿಶ್ಚಯಃ ।
ಷಷ್ಠೇ ಪ್ರೋಕ್ತಾ ಪೂರ್ವದೇಶಯಾತ್ರಾ ತತ್ರ ಸವಿಸ್ತರಾ ॥ ೧೪ ॥

ಪ್ರೋಕ್ತಾ ದಕ್ಷಿಣತೀರ್ಥಾನಾಂ ಯಾತ್ರಾ ರಾಮಸ್ಯ ಸಪ್ತಮೇ ।
ತೀರ್ಥಾಟನಂ ಪಶ್ಚಿಮಾಯಾಮಷ್ಟಮೇ ರಾಘವಸ್ಯ ಚ ॥ ೧೫ ॥

---

೧೨. ಮೊದಲನೆಯ ಸರ್ಗದಲ್ಲಿ ವಾಲ್ಮೀಕಿಯಿಂದ ಶ್ಲೋಕವು ಹೇಗೆ ಉತ್ಪತ್ತಿಯಾಯಿತು. ಎಂಬುದು ವಿವರಿಸಲ್ಪಟ್ಟಿದೆ. ಎರಡನೆಯ ಸರ್ಗದಲ್ಲಿ ರಾಮಾಯಣ ವಿಭಾಗವನ್ನು ಹೇಳಿದ್ದೇನೆ.

೧೩. ಮೂರನೆಯ ಸರ್ಗದಲ್ಲಿ ಸೀತೆಯು ರಾಮನನ್ನು ಕುರಿತು ಯಾತ್ರೆಗೆ ತಾನೂ ಬರಬೇಕೆಂದು ಕೇಳುವುದು. ನಾಲ್ಕನೆಯ ಸರ್ಗದಲ್ಲಿ ರಾಮಚಂದ್ರನು ಗಂಗೆಯನ್ನು ಕುರಿತು ಹೋಗುವುದು ವರ್ಣಿತವಾಗಿದೆ.

೧೪. ಐದನೆಯ ಸರ್ಗಗಲ್ಲಿ ಋಷಿಯ ಮಾತಿನಂತೆ ರಾಮನು ಯಾತ್ರೆಗೆ ಹೊರಡಲು ನಿಶ್ಚಯಿಸಿದನು. ಆರನೆಯ ಸರ್ಗದಲ್ಲಿ ಪೂರ್ವದೇಶದ ಯಾತ್ರೆಯನ್ನು ವಿಸ್ತರಿಸಲಾಯಿತು.

೧೫. ಏಳನೆಯ ಸರ್ಗದಲ್ಲಿ ಶ್ರೀರಾಮನು ದಕ್ಷಿಣದೇಶದಲ್ಲಿ ತೀರ್ಥಯಾತ್ರೆಯನ್ನು ಮಾಡಿದ ವಿಷಯವನ್ನು ವಿಸ್ತರಿಸಿದೆ. ಎಂಟನೆಯ ಸರ್ಗದಲ್ಲಿ ರಾಮನ ಪಶ್ಚಿಮದೇಶದ ಯಾತ್ರೆಯು ವಿವರಿಸಲ್ಪಟ್ಟಿದೆ.

ಯಾತ್ರೋತ್ತರಪ್ರದೇಶಸ್ಯ ರಾಮಸ್ಯ ನವಮೇಕಥಿ ।
ಯಾತ್ರಾಕಾಂಡಂ ಸಮಾಪ್ತಂ ತು ಯಾಗಕಾಂಡಮುದೀರ್ಯತೇ ॥ ೧೬ ॥

ಸರ್ಗೇತ್ರ ಪ್ರಥಮೇ ಪ್ರಾಹ ಯಜ್ಞೋಪಕರಣಂ ಗುರುಃ ।
ದ್ವಿತೀಯೇ ರಾಮಚಂದ್ರಸ್ಯ ಯಾಗಾರಂಭೋತ್ರ ವರ್ಣಿತಃ ॥ ೧೭ ॥

ಪೃಥ್ವೀಪ ದಕ್ಷಿಣಾ ಪ್ರೋಕ್ತಾ ತೃತೀಯೇಽಶ್ವರವಾಜಿನಃ ।
ಕುಂಭೋದರಸ್ಯ ರಾಮಸ್ಯ ಸಂವಾದೋತ್ರ ಚತುರ್ಥಕೇ ॥ ೧೮ ॥

ಪಂಚಮೇ ರಾಮನಾಮ್ನಾಂ ವೈ ಹ್ಯಷ್ಟೋತ್ತರಶತಂ ಶುಭಂ ।
ಷಷ್ಠೇಽಹ್ನಿಕಂ ಹಿ ಸರ್ವೇಷಾಂ ವಾಜಿಮೇಧೇ ಪ್ರಕೀರ್ತಿತಂ ॥ ೧೯ ॥

ಧ್ವಜಾರೋಪವಿಧಾನಂ ಚ ಸಪ್ತಮೇ ಸಮುದಾಹೃತಂ ।
ಅಷ್ಟಮೇಽವಭೃತಸ್ನಾನಂ ರಾಘವಸ್ಯಾತ್ರ ವರ್ಣಿತಂ ॥ ೨೦ ॥

---

೧೬. ಒಂಭತ್ತನೆಯ ಸರ್ಗದಲ್ಲಿ ಶ್ರೀರಾಮನು ಉತ್ತರದೇಶದಲ್ಲಿ ಯಾತ್ರೆಯನ್ನು ಮಾಡಿದ ವಿಷಯವನ್ನು ವಿವರಿಸಿದೆ. ಇಲ್ಲಿಗೆ ಯಾತ್ರಾಕಾಂಡವು ಮುಗಿಯಿತು. ಇನ್ನು ಮೇಲೆ ಯಾಗಕಾಂಡದ ವಿಷಯವನ್ನು ಹೇಳುತ್ತೇನೆ.

೧೭. ಮೊದಲನೆಯ ಸರ್ಗದಲ್ಲಿ ಗುರುವಾದ ವಸಿಷ್ಠನು ಯಜ್ಞದ ಉಪಕರಣಗಳನ್ನು ತಿಳಿಸುವುದು. ಎರಡನೆಯ ಸರ್ಗದಲ್ಲಿ ರಾಮನು ಯಾಗಕ್ಕೆ ಪ್ರಾರಂಭಮಾಡಿದ ವಿಷಯವು ವಿವರಿಸಲ್ಪಟ್ಟಿದೆ.

೧೮. ಮೂರನೆಯ ಸರ್ಗದಲ್ಲಿ ಯಾಗದ ಕುದುರೆಯು ಭೂಮಿಯನ್ನು ಸುತ್ತಿದುದನ್ನು ವರ್ಣಿಸಿದೆ. ನಾಲ್ಕನೆಯ ಸರ್ಗದಲ್ಲಿ ರಾಮನಿಗೂ ಅಗಸ್ತ್ಯನಿಗೂ ನಡೆದ ಸಂವಾದವನ್ನು ವಿವರಿಸಿದೆ.

೧೯. ಐದನೆಯ ಸರ್ಗದಲ್ಲಿ ಶ್ರೀರಾಮನ ಅಷ್ಟೋತ್ತರಗಳನ್ನು ಹೇಳಿದ್ದೇನೆ. ಆರನೆಯ ಸರ್ಗದಲ್ಲಿ ಅಶ್ವಮೇಧದ ಯಾಗದ ಕೆಲಸಗಳನ್ನು ವಿವರಿಸಿದೆ.

೨೦. ಏಳನೆಯ ಸರ್ಗದಲ್ಲಿ ಧ್ವಜಾರೋಹಣದ ವಿಷಯವನ್ನು ಹೇಳಿದೆ. ಎಂಟನೆಯ ಸರ್ಗದಲ್ಲಿ ಯಾಗದ ಸಮಾಪ್ತಿಯನ್ನುಂಟುಮಾಡುವ ಅವಭೃತ ಸ್ನಾನವನ್ನು ವಿವರಿಸಿದೆ.

ನವಮೇ ವಾಜಿಮೇಧಸ್ಯ ಸಮಾಪ್ತಿಃ ಕೀರ್ತಿತಾತ್ರ ಸಾ ।
ಯಾಗಕಾಂಡಂ ಸಮಾಪ್ತಂ ಹಿ ವಿಲಾಸಾಖ್ಯಮುದೀರ್ಯತೇ ॥ ೨೧ ॥

ಪ್ರಥಮೇ ರಘುವೀರಸ್ಯ ಸ್ತವರಾಜೋತ್ರ ಕೀರ್ತಿತಃ ।
ದ್ವಿತೀಯೇ ರತಿಶಾಲಾಯಾ ಜಾನಕ್ಯಾಶ್ಚಾಪಿ ವರ್ಣನಂ ॥ ೨೨ ॥

ತೃತೀಯೇ ರಾಘವೇಣೋಕ್ತಂ ದೇಹರಾಮಾಯಣಂ ಸ್ತ್ರಿಯೈ ।
ದಿನಚರ್ಯಾ ಭೂಷಣಾನಿ ಜಾನಕ್ಯಾಶ್ಚ ಚತುರ್ಥಕೇ ॥ ೨೩ ॥

ಜಲಯಂತ್ರಗತಾಕ್ರೀಡಾ ಪಂಚಮೇ ಶೇಷಮಾಹ್ನಿಕಂ ।
ದ್ವಿಜಸ್ಯ ಪತ್ನ್ಯೈ ಪ್ರಾಸಾದೇ ಷಷ್ಠೇಲಂಕಾರಮಂಡನಂ ॥ ೨೪ ॥

ಮೂರ್ತೀನಾಂ ಸಪ್ತಮೇ ದಾನಂ ದೇವಸ್ತ್ರೀಣಾಂ ವರಾಸ್ತಥಾ ।
ಗುಣವತ್ಯಾ ಪಿಂಗಲಾಯಾ ವರದಾನಮಥಾಷ್ಟಮೇ ॥ ೨೫ ॥

---

೨೧. ಒಂಭತ್ತನೆಯ ಸರ್ಗದಲ್ಲಿ ಅಶ್ವಮೇಧವು ಪೂರ್ತಿಗೊಂಡ ಬಗೆಯನ್ನು ವಿವರಿಸಿದೆ ಇಲ್ಲಿಗೆ ಯಾಗಕಾಂಡವು ಮುಗಿಯಿತು. ಮುಂದೆ ವಿಲಾಸಕಾಂಡದ ಅನುಕ್ರಮಣಿಕೆಯನ್ನು ಹೇಳುತ್ತೇನೆ.

೨೨ ಮೊದಲನೆಯ ಸರ್ಗದಲ್ಲಿ ಶ್ರೀರಾಮನ ಸ್ತವರಾಜನನ್ನು ಹೇಳಿದ್ದೇನೆ ಎರಡನೆಯ ಸರ್ಗದಲ್ಲಿ ರತಿಶಾಲೆಯ ವರ್ಣನೆಯನ್ನೂ ಜಾನಕಿಯ ವರ್ಣನೆಯನ್ನೂ ಹೇಳಿದ್ದೇನೆ.

೨೩. ಮೂರನೆಯ ಸರ್ಗದಲ್ಲಿ ಶ್ರೀರಾಮನು ದೇಹ ರಾಮಾಯಣವನ್ನು ಹೆಂಗಸಿಗೆ ಉಪದೇಶಿಸಿರುವನು. ನಾಲ್ಕನೆಯ ಸರ್ಗದಲ್ಲಿ ಸೀತೆಯ ದಿನಚರಿ ಕಥೆಯೂ ಆಕೆಯ ಭೂಷಣಗಳೂ ಉಕ್ತವಾಗಿವೆ

೨೪. ಐದನೆಯ ಸರ್ಗದಲ್ಲಿ ಜಲಯಂತ್ರದ ಕೆಳಗೆ ಕುಳಿತು ಕ್ರೀಡಿಸುವಿಕೆಯನ್ನೂ ಆಹ್ನಿಕಕೃತ್ಯವನ್ನೂ ವಿವರಿಸಿದೆ ಆರನೆಯ ಸರ್ಗದಲ್ಲಿ ಬ್ರಾಹ್ಮಣನ ಹೆಂಡತಿಗೆ ಅಲಂಕಾರಗಳನ್ನು ದಾನಮಾಡಿರುವುದನ್ನು ಹೇಳಿರುವುದು.

೨೫. ಏಳನೆಯ ಸರ್ಗದಲ್ಲಿ ಮೂರ್ತಿಗಳ ದಾನವನ್ನೂ, ದೇವಸ್ತ್ರೀಯರ ವಿಷಯವನ್ನೂ, ವರಗಳನ್ನೂ ವಿಸ್ತರಿಸಿದೆ. ಎಂಟನೆಯ ಸರ್ಗದಲ್ಲಿ ಗುಣವತಿಯಾದ ಪಿಂಗಳೆಗೆ ವರವನ್ನು ಕೊಟ್ಟಿರುವುದನ್ನು ವಿವರಿಸಿದೆ.

ಕುರುಕ್ಷೇತ್ರಸ್ಯ ಯಾತ್ರಾಯಾಂ ನವಮೇ ಜಾನಕೀಜಯಃ ।
ವಿಲಾಸಾಖ್ಯಂ ಸಮಾಪ್ತಂ ಹಿ ಜನ್ಮಕಾಂಡಮುದೀರ್ಯತೇ ॥ ೨೬ ॥

ಆರಾಮೇ ದೋಹದ ಕ್ರೀಡಾ ಸೀತಾಯಾಃ ಪ್ರಥಮೇಕಥಿ ।
ದ್ವಿತೀಯೇ ವಿವಿಧಾಃ ಕ್ರೀಡಾಸ್ಸೀಮಂತೋನ್ನಯನೋತ್ಸವಃ ॥ ೨೭ ॥

ರಜಕಸ್ಯೋದಿತಂ ಶ್ರುತ್ವಾ ಸೀತಾತ್ಯಾಗಸ್ತೃತೀಯಕೇ ।
ಜನ್ಮಕರ್ಮ ಚತುರ್ಥೇತ್ರ ಕುಶಸ್ಯಾಥ ಲವಸ್ಯ ಚ ॥ ೨೮ ॥

ಸರ್ಗೇತ್ರ ಪಂಚಮೇ ಪ್ರೋಕ್ತಾ ರಾಮರಕ್ಷಾ ಸುಖಾವಹಾ ।
ಷಷ್ಠೇ ಲವಸ್ಯ ಕಮಲಹರಣೇ ಜಯ ಈರಿತಃ ॥ ೨೯ ॥

ಯುದ್ಧಾದಿಕೌತುಕಂ ಪ್ರೋಕ್ತಂ ಪುತ್ರಯೋಸ್ಸಪ್ತಮೇ ವಿಭೋಃ ।
ಸೀತಾದಿವ್ಯಂ ಚ ತಲ್ಲಾಭೋಷ್ಟಮೇ ಪ್ರೋಕ್ತೋತ್ರ ಮಂಡಪೇ ॥ ೩೦ ॥

---

೨೬. ಒಂಭತ್ತನೆಯ ಸರ್ಗದಲ್ಲಿ ಕುರುಕ್ಷೇತ್ರದ ಯಾತ್ರೆಯನ್ನೂ ಜಾನಕಿಗೆ ಜಯವನ್ನೂ ಹೇಳಿದೆ ಇಲ್ಲಿಗೆ ವಿಲಾಸಕಾಂಡವು ಮುಗಿಯಿತು. ಇನ್ನು ಜನ್ಮಕಾಂಡವನ್ನು ಹೇಳುತ್ತೇನೆ.

೨೭. ಮೊದಲನೆಯ ಸರ್ಗದಲ್ಲಿ ಸೀತೆಯು ಉಪವನದಲ್ಲಿ ಬಸುರಿನ ಬಯಕೆಯಿಂದ ರಮಿಸುವುದನ್ನು ಹೇಳಿದೆ. ಎರಡನೆಯ ಸರ್ಗದಲ್ಲಿ ಅನೇಕ ಬಗೆಯಾದ ಕ್ರೀಡೆಗಳನ್ನೂ, ಸೀಮಂತವಾಗುವಿಕೆಯನ್ನೂ ಹೇಳಿದೆ.

೨೮. ಮೂರನೆಯ ಸರ್ಗದಲ್ಲಿ ಅಗಸನ ಮಾತನ್ನು ಕೇಳಿ ಅದರಿಂದ ಸೀತೆಯನ್ನು ಬಿಟ್ಟು ಬಿಡುವಿಕೆಯನ್ನು ಹೇಳಿದೆ. ನಾಲ್ಕನೆಯ ಸರ್ಗದಲ್ಲಿ ಕುಶಲವರ ಜನ್ಮವನ್ನೂ ಅವರ ನಾಮಕರಣಾದಿಗಳನ್ನೂ ಹೇಳಿರುವುದು.

೨೯. ಐದನೆಯ ಸರ್ಗದಲ್ಲಿ ಸುಖವನ್ನುಂಟುಮಾಡುವ ರಾಮರಕ್ಷಾ ಸ್ತೋತ್ರವನ್ನು ಹೇಳಿದ್ದೇನೆ. ಆರನೆಯ ಸರ್ಗದಲ್ಲಿ ಲವನು ಕಮಲಗಳನ್ನು ತರಲು ಹೋಗಿ ಶತ್ರುಗಳನ್ನು ಜಯಿಸಿರುವುದನ್ನು ಹೇಳಿದೆ.

೩೦. ಏಳನೆಯ ಸರ್ಗದಲ್ಲಿ ಕುಶಲವರ ಯುದ್ಧ ಕೌತುಕವನ್ನು ವಿವರಿಸಿದೆ. ಎಂಟನೆಯ ಸರ್ಗದಲ್ಲಿ ಸೀತೆಯು ತನ್ನ ಪಾತಿವ್ರತ್ಯವನ್ನು ತೋರಿಸುವಿಕೆಯೂ ಅವಳನ್ನು ಶ್ರೀರಾಮನು ಹೊಂದುವಿಕೆಯೂ ಹೇಳಲ್ಪಟ್ಟಿದೆ.

ಜನ್ಮೋಪನಯನಾದೀನಿ ಬಾಲಾನಾಂ ನವಮೇಽಕಥಿ ।
ಜನ್ಮಕಾಂಡಂ ಸಮಾಪ್ತಂ ಹಿ ವಿವಾಹಾಖ್ಯಮುದೀರ್ಯತೇ ॥ ೩೧ ॥

ಸ್ವಯಂವರಾರ್ಥಂ ಗಮನಂ ರಾಮಸ್ಯ ಪ್ರಥಮೇಽಕಥಿ ।
ಸ್ವಯಂವರಂ ಚಂಪಿಕಾಯಾ ದ್ವಿತೀಯೇ ಸಮುದಾಹೃತಂ ॥ ೩೨ ॥

ಸ್ವಯಂವರಂ ಸುಮತ್ಯಾಶ್ಚ ತೃತೀಯೇ ಪರಿಕೀರ್ತಿತಂ ।
ಕುಶಸ್ಯಾಥ ಲವಸ್ಯಾಪಿ ವಿವಾಹೌ ದ್ವೌ ಚತುರ್ಥಕೇ ॥ ೩೩ ॥

ಗಂಧರ್ವನಾಗಕನ್ಯಾನಾಂ ಮೋಚನಂ ಪಂಚಮೇಽಕಥಿ ।
ಷಷ್ಠೇ ತಾಸಾಂ ವಿವಾಹಾನಾಂ ನಿಶ್ಚಯಸ್ಸಮುದಾಹೃತಃ ॥ ೩೪ ॥

ವಿವಾಹಾ ದ್ವಾದಶಪ್ರೋಕ್ತಾಸ್ಸರ್ವಾಸಾಂ ಸಪ್ತಮೇಽತ್ರ ಹಿ ।
ಅಷ್ಟಮೇ ಯೂಪಕೇತೋಶ್ಚ ವರ್ಣಿತೋಽತ್ರ ಪರಾಕ್ರಮಃ ॥ ೩೫ ॥

---

೩೧. ಒಂಭತ್ತನೆಯ ಸರ್ಗದಲ್ಲಿ ಬಾಲಕರಜನ್ಮ ಅವರಿಗೆ ಉಪನಯನ ಮುಂತಾದುವುಗಳನ್ನು ಹೇಳಿದ್ದೇನೆ. ಇಲ್ಲಿಗೆ ಜನ್ಮಕಾಂಡವು ಮುಗಿದುದು ಆನಂತರ ವಿಲಾಸಕಾಂಡವನ್ನು ಹೇಳುತ್ತೇನೆ.

೩೨. ಮೊದಲನೆಯ ಸರ್ಗದಲ್ಲಿ ರಾಮನು ಸ್ವಯಂವರಕ್ಕೋಸ್ಕರ ಮಕ್ಕಳ ಜೊತೆಯಲ್ಲಿ ಹೋಗುವಿಕೆಯನ್ನು ಹೇಳಿದ್ದೇನೆ. ಎರಡನೆಯ ಸರ್ಗದಲ್ಲಿ ಚಂಪಿಕೆಯ ವಿವಾಹವನ್ನು ಹೇಳಿದ್ದೇನೆ.

೩೩. ಮೂರನೆಯ ಸರ್ಗದಲ್ಲಿ ಸುಮತಿಯ ಸ್ವಯಂವರವನ್ನು ವಿವರಿಸಿದ್ದೇನೆ. ನಾಲ್ಕನೆಯ ಸರ್ಗದಲ್ಲಿ ಲವಕುಶರ ವಿವಾಹದ ವಿಷಯವನ್ನು ವರ್ಣಿಸಿದ್ದೇನೆ.

೩೪. ಐದನೆಯ ಸರ್ಗದಲ್ಲಿ ಗಂಧರ್ವನಾಗ ಕನ್ಯೆಯರ ಬಂಧನದ ಮುಕ್ತಿಯನ್ನು ವಿವರಿಸಿದೆ. ಆರನೆಯ ಸರ್ಗದಲ್ಲಿ ಅವರ ವಿವಾಹದ ನಿಶ್ಚಯವನ್ನು ವರ್ಣಿಸಿದೆ.

೩೫. ಏಳನೆಯ ಸರ್ಗದಲ್ಲಿ ಹನ್ನೆರಡು ಬಗೆಯ ವಿವಾಹಗಳನ್ನು ವರ್ಣಿಸಿದೆ. ಎಂಟನೆಯ ಸರ್ಗದಲ್ಲಿ ಯೂಪಕೇತುವಿನ ಪರಾಕ್ರಮವನ್ನು ವರ್ಣಿಸಿದೆ.

ಪ್ರೋಕ್ತೋ ಮದನಸುಂದರ್ಯಾ ವಿವಾಹೋ ನವಮೋ ಮಹಾನ್ ।
ಪೂರ್ಣಂ ವಿವಾಹಕಾಂಡಂ ಚ ರಾಜ್ಯಕಾಂಡಮುದೀರ್ಯತೇ ॥ ೩೬ ॥

ರಾಮನಾಮಸಹಸ್ರಂ ಚ ಸರ್ಗೇ ಪ್ರಾಥಮಿಕೇ ಕಥಿ ।
ದ್ವಿತೀಯೇತ್ರ ಸಮಾನೀತೌ ರಾಮೇಣ ಸುರಪಾದಪೌ ॥ ೩೭ ॥

ರಾಮಕೃಷ್ಣೋಪಾಸಕಯೋಸ್ಸಂವಾದಶ್ಚ ತೃತೀಯಕೇ ।
ಶತಸ್ತ್ರೀಣಾಂ ಚ ನಿದ್ರಾಯಾ ವರದಾನಂ ತಥಾ ಪುನಃ ॥ ೩೮ ॥

ರಾಮವಿಶ್ಲೇಷವಿರಹಸ್ಸೀತಾಯಾ ಪಂಚಮೇ ಕಥಿ ।
ಮೂಲಕಾಸುರಘಾತಶ್ಚ ಷಷ್ಠೇ ರಾಜ್ಯಾನಿ ವೈ ಪೃಥಕ್ ॥ ೩೯ ॥

---

೩೬. ಒಂಭತ್ತನೆಯ ಸರ್ಗದಲ್ಲಿ ಮದನ ಸುಂದರಿಯ ವಿವಾಹವನ್ನು ವರ್ಣಿಸಿದೆ. ಇಲ್ಲಿಗೆ ವಿವಾಹಕಾಂಡವು ಮುಗಿದುದು. ಮುಂದೆ ರಾಜ್ಯಕಾಂಡವನ್ನು ಹೇಳುತ್ತೇನೆ.

೩೭. ಮೊದಲನೆಯ ಸರ್ಗದಲ್ಲಿ ರಾಮನಾಮದ ಸಾವಿರಗಳನ್ನು ಹೇಳಿದ್ದೇನೆ. ಎರಡನೆಯ ಸರ್ಗದಲ್ಲಿ ರಾಮನು ದೇವಲೋಕದಿಂದ ಕಲ್ಪವೃಕ್ಷ, ಪಾರಿಜಾತಗಳನ್ನು ತಂದಿರುವುದನ್ನು ವಿವರಿಸಿದೆ.

೩೮. ಮೂರನೆಯ ಸರ್ಗದಲ್ಲಿ ರಾಮೋಪಾಸಕನಿಗೂ ಕೃಷ್ಣೋಪಾಸಕನಿಗೂ ನಡೆದ ಸಂವಾದವನ್ನು ವಿವರಿಸಿದೆ. ನಾಲ್ಕನೆಯ ಸರ್ಗದಲ್ಲಿ ರಾಮನು ನಿರ್ದಿಸುತ್ತಿದ್ದಾಗ ನೂರುಜನ ಹೆಂಗಸರು ಬರಲು ಅವರಿಗೆ ರಾಮನು ವರವನ್ನು ಕೊಟ್ಟಿದನ್ನು ವಿವರಿಸಿದೆ.

೩೯. ಐದನೆಯ ಸರ್ಗದಲ್ಲಿ ಸೀತೆಗೆ ರಾಮನ ವಿರಹದಿಂದ ಉಂಟಾದ ದುಃಖವನ್ನು ಹೇಳಿದೆ. ಆರನೆಯ ಸರ್ಗದಲ್ಲಿ ಮೂಲಕಾಸುರನ ಹನನವನ್ನೂ ಮಕ್ಕಳಿಗೆ ರಾಜ್ಯವಿಭಾಗವನ್ನೂ ಹೇಳಿದೆ.

ಜಯೋ ಭರತಖಂಡಸ್ಯ ರಾಮೇಣ ಸಪ್ತಮೋ ಕೃತಃ ।
ಜಂಬೂದ್ವೀಪಜಯಃ ಪ್ರೋಕ್ತೋಷ್ಟಮೋ ರಾಮಸ್ಯ ವಿಸ್ತರಾತ್ ॥ ೪೦ ॥

ಷಡ್ದ್ವೀಪಾನಾಂ ಜಯಃ ಪ್ರೋಕ್ತೋ ನವಮೋ ರಾಘವಸ್ಯ ಚ ।
ಯತಿಶೂದ್ರಗೃಧ್ರಶಿಕ್ಷಾ ರಾಮೇಣ ದಶಮೋ ಕೃತಾ ॥ ೪೧ ॥

ಚತುಃಸ್ತ್ರೀಣಾಂ ವರದಾನಂ ರಾಮೇಣೈಕಾದಶೇ ಕೃತಂ ।
ಸ್ತ್ರೀಷೋಡಶಸಹಸ್ರಾಣಾಂ ದ್ವಾದಶೇತ್ರ ವರಾರ್ಪಣಂ ॥ ೪೨ ॥

ಅಶ್ವತ್ಥಹಸಿತಂ ಹಾಸ್ಯಮುಕ್ತಿರಾಜ್ಞಾ ತ್ರಯೋದಶೇ ।
ಚತುರ್ದಶೇ ವಾಲ್ಮೀಕಿನಾ ಸ್ವಜನ್ಮತ್ರಯಮೀರಿತಂ ॥ ೪೩ ॥

ಪಂಚದಶೇ ರಾಮರಾಜ್ಯವರ್ಣನಂ ವಿಸ್ತರಾತ್ಕೃತಂ ।
ವರ್ಣಿತಾ ರಾಜನೀತಿಃ ಶ್ರೀರಾಘವೇಣಾತ್ರ ಷೋಡಶೇ ॥ ೪೪ ॥

---

೪೦. ಏಳನೆಯ ಸರ್ಗದಲ್ಲಿ ಶ್ರೀರಾಮನು ಭರತಖಂಡದ ಜಯಕ್ಕೋಸ್ಕರ ಹೊರಟು ಜಯ ಹೊಂದಿರುವುದನ್ನು ವಿವರಿಸಿದೆ. ಎಂಟನೆಯ ಸರ್ಗದಲ್ಲಿ ಜಂಬೂದ್ವೀಪದ ಜಯವನ್ನು ಹೇಳಿದೆ.

೪೧. ಒಂಭತ್ತನೆಯ ಸರ್ಗದಲ್ಲಿ ಆರುದ್ವೀಪಗಳ ಜಯವನ್ನು ವಿವರಿಸಿದೆ. ಹತ್ತನೆಯ ಸರ್ಗದಲ್ಲಿ ಯತಿ, ಶೂದ್ರ, ಹದ್ದು, ಇವರುಗಳಿಗೆ ಶಿಕ್ಷೆಯನ್ನು ರಾಮನು ವಿಧಿಸಿರುವುದನ್ನು ವಿವರಿಸಿದ್ದಾನೆ.

೪೨. ಹನ್ನೊಂದನೆಯ ಸರ್ಗದಲ್ಲಿ ನಾಲ್ಕುಜನ ಹೆಂಗಸರಿಗೆ ವರದಾನದ ವಿಷಯವನ್ನು ವಿವರಿಸಿದೆ. ಹನ್ನೆರಡನೆಯ ಸರ್ಗದಲ್ಲಿ ಹದಿನಾರು ಸಾವಿರಜನ ಹೆಂಗಸರಿಗೆ ವರವನ್ನು ಕೊಟ್ಟಿರುವುದನ್ನು ವಿವರಿಸಿದೆ.

೪೩. ಹದಿಮೂರನೆಯ ಸರ್ಗದಲ್ಲಿ ಅರಳಿಮರವು ನಕ್ಕುದನ್ನೂ ಇದರಿಂದ ಹಾಸ್ಯವನ್ನು ಮಾಡಬಹುದೆಂದು ಆಜ್ಞೆ ಮಾಡಿದುದನ್ನೂ ವಿವರಿಸಿದೆ. ಹದಿನಾಲ್ಕನೆಯ ಸರ್ಗದಲ್ಲಿ ವಾಲ್ಮೀಕಿಯು ಮೂರುಜನ್ಮಗಳನ್ನು ಹೊಂದಿದುದನ್ನು ವಿವರಿಸಿದೆ.

೪೪. ಹದಿನೈದನೆಯ ಸರ್ಗದಲ್ಲಿ ರಾಮರಾಜ್ಯದ ವರ್ಣನೆಯನ್ನು ವಿಸ್ತರಿಸಿದೆ. ಹದಿನಾರನೆಯ ಸರ್ಗದಲ್ಲಿ ರಾಮನು ರಾಜನೀತಿಯನ್ನು ವರ್ಣಿಸಿರುವುದನ್ನು ವಿಸ್ತರಿಸಿದೆ

ಸಪ್ತದಶೇತ್ರ ಕಥಿತಂ ಕುಶಕನ್ಯಾಸ್ವಯಂವರಂ ।
ಅಷ್ಟಾದಶೇ ರಾಮನಾಥಪುರಂ ದತ್ತಂ ದ್ವಿಜನ್ಮನಾಂ ॥ ೪೫ ॥

ಏಕೋನವಿಂಶೇ ರಾಮಸ್ಯ ದಿನಚರ್ಯೇರಿತಾ ಶುಭಾ ।
ರಾಜ್ಞಾಂ ವಿಂಶೇವತಾರೇಷು ಶ್ರೇಷ್ಠಃ ಪ್ರೋಕ್ತಸ್ತ್ವಯಂ ಮಹಾನ್ ॥

ಏಕವಿಂಶೇ ರಾಘವೇಣ ದಾಸ್ಯೈ ದತ್ತೋ ವರೋ ಮುದಾ ।
ಸೀತಯಾ ತುಲಸೀಪತ್ರಂ ದ್ವಾವಿಂಶೇ ಸಂಧಿತಂ ಶುಭಂ ॥ ೪೭ ॥

ತ್ರಯೋವಿಂಶೇ ಸ್ಮೃತಾನಂದರಾಮಾಯಣಫಲಶ್ರುತಿಃ ।
ಚತುರ್ವಿಂಶೇ ಯಮಶಿಕ್ಷಾ ಧರ್ಮಶಿಕ್ಷಾ ಚ ಭೂತಲೇ ॥ ೪೮ ॥

ರಾಜ್ಯಕಾಂಡಂ ಸಮಾಪ್ತಂ ಹಿ ಮನೋಹರಮುದೀರ್ಯತೇ ।
ಸರ್ಗೇತ್ರ ಪ್ರಥಮೇ ಪ್ರೋಕ್ತಂ ಲಘುರಾಮಾಯಣಂ ಶುಭಂ ॥ ೪೯ ॥

---

೪೫. ಹದಿನೇಳನೆಯ ಸರ್ಗದಲ್ಲಿ ಕುಶನ ಮಗಳ ಸ್ವಯಂವರವನ್ನು ವರ್ಣಿಸಿದೆ. ಹದಿನೆಂಟನೆಯ ಸರ್ಗದಲ್ಲಿ ರಾಮನು ರಾಮನಾಥಪುರವನ್ನು ಬ್ರಾಹ್ಮಣರಿಗೆ ದಾನಮಾಡಿದುದನ್ನು ವರ್ಣಿಸಿದೆ.

೪೬. ಹತ್ತೊಂಭತ್ತನೆಯ ಸರ್ಗದಲ್ಲಿ ರಾಮದಾಸನಿಗೆ ವರವನ್ನು ಕೊಟ್ಟ ವಿಷಯವು ವಿವರಿಸಲ್ಪಟ್ಟಿರುವುದು. ಇಪ್ಪತ್ತನೆಯ ಸರ್ಗದಲ್ಲಿ ಅವತಾರಗಳಲ್ಲಿ ಈ ರಾಮಾವತಾರವು ಶ್ರೇಷ್ಠವೆಂಬುದನ್ನು ವಿವರಿಸಿದೆ.

೪೭. ಇಪ್ಪತ್ತೊಂದನೆಯ ಸರ್ಗದಲ್ಲಿ ರಾಮದಾಸನು ವರವನ್ನು ಕೊಟ್ಟ ವಿಷಯವು ವಿವರಿಸಲ್ಪಟ್ಟಿರುವುದು. ಇಪ್ಪತ್ತೆರಡನೆಯ ಸರ್ಗದಲ್ಲಿ ಸೀತೆಯು ತುಲಸಿ ಪತ್ರವನ್ನು ಗಿಡಕ್ಕೆ ಸೇರಿಸಿದ ವಿಷಯವನ್ನು ವಿವರಿಸಿದೆ.

೪೮. ಇಪ್ಪತ್ತಮೂರನೆಯ ಸರ್ಗದಲ್ಲಿ ಆನಂದರಾಮಾಯಣದ ಫಲ ಶ್ರುತಿಯು ಹೇಳಲ್ಪಟ್ಟಿದೆ. ಇಪ್ಪತ್ತನಾಲ್ಕನೆಯ ಸರ್ಗದಲ್ಲಿ ಯಮಶಿಕ್ಷೆಯನ್ನು ಭೂಮಿಯಲ್ಲಿ ಪ್ರಚುರಪಡಿಸಿದೆ.

೪೯. ಇಲ್ಲಿಗೆ ರಾಜ್ಯಕಾಂಡದ ವಿಷಯಾನುಕ್ರಮಣಿಕೆಯು ಸಮಾಪ್ತ ವಾಯಿತು. ಮುಂದೆ ಮನೋಹರಕಾಂಡದ ವಿಷಯವನ್ನು ಹೇಳುತ್ತೇನೆ. ಮೊದಲನೆಯ ಸರ್ಗದಲ್ಲಿ ಶುಭವಾದ ಲಘುರಾಮಾಯಣವನ್ನು ಹೇಳಿದ್ದಾನೆ.

ನಾಗರಾಣಾಂ ಚ ಮಾತೄಣಾಮುಪದೇಶಂ ದ್ವಿತೀಯಕೇ ।
ರಾಮಪೂಜೋಪಾಸನಾನಿ ವಿಸ್ತಾರಶ್ಚ ತೃತೀಯಕೇ ॥ ೫೦ ॥

ರಾಮತೋಭದ್ರವಿಸ್ತಾರಶ್ಚ ಚತುರ್ಥೇ ಸಮುದೀರಿತಃ ।
ರಾಮಲಿಂಗತೋಭದ್ರಾಣಾಂ ಭೇದಾಃ ಪ್ರೋಕ್ತಾಶ್ಚ ಪಂಚಮೇ ॥

ನವಮೀವ್ರತವಿಸ್ತಾರಃ ಷಷ್ಠೇ ಪ್ರೋಕ್ತಾ ಚ ತತ್ಕಥಾ ।
ಶ್ರೀರಾಮನಾಮ್ನಾಂ ಲಕ್ಷಸ್ಯೋದ್ಯಾಪನಾದೀನಿ ಸಪ್ತಮೇ ॥ ೫೨ ॥

ವೇದಾದೀನಾಂ ಹಿ ಸರ್ವೇಷಾಮಷ್ಟಮೇ ಫಲಮೀರಿತಂ ।
ಸಾರ್ಧಮಾಸದ್ವಯೀ ಪೂಜಾ ಕಥಿತಾ ನವಮೇ ವಿಭೋಃ ॥ ೫೩ ॥

ದಶಮೇ ಚೈತ್ರಮಾಸಸ್ಯ ಮಹಿಮಾ ಸಮುದೀರಿತಃ ।
ಏಕಾದಶೇ ಮಧುಸ್ನಾನಾತ್ಸರ್ವೇಷಾಂ ಗತಿರೀರಿತಾ ॥ ೫೪ ॥

---

೫೦. ಎರಡನೆಯ ಸರ್ಗದಲ್ಲಿ ಪಟ್ಟಣದ ಜನಗಳಿಗೂ ತಾಯಿಯರಿಗೂ ರಾಮನು ಉಪದೇಶಮಾಡಿದ ವಿಷಯವನ್ನು ಹೇಳಿದೆ. ಮೂರನೆಯ ಸರ್ಗದಲ್ಲಿ ರಾಮಪೂಜೆ ಮತ್ತು ರಾಮೋಪಾಸನೆಗಳನ್ನು ವಿಸ್ತರಿಸಿದೆ.

೫೧. ನಾಲ್ಕನೆಯ ಸರ್ಗದಲ್ಲಿ ರಾಮತೋಭದ್ರದ ವಿಸ್ತಾರವು ಹೇಳಲ್ಪಟ್ಟಿದೆ. ಐದನೆಯ ಸರ್ಗದಲ್ಲಿ ರಾಮತೋಭದ್ರ ಲಿಂಗತೋಭದ್ರಗಳಿಗೆ ಭೇದವನ್ನು ವಿವರಿಸಿದೆ.

೫೨. ಆರನೆಯ ಸರ್ಗದಲ್ಲಿ ನವಮಿಯ ವ್ರತದ ವಿಸ್ತಾರವು ಹೇಳಲ್ಪಟ್ಟಿದೆ ಮತ್ತು ನವಮಿಯ ವ್ರತಕಥೆಯೂ ಕೂಡ ಹೇಳಲ್ಪಟ್ಟಿದೆ. ಏಳನೆಯ ಸರ್ಗದಲ್ಲಿ ಶ್ರೀರಾಮನಾಮದ ಲಕ್ಷೋದ್ಯಾಪನ ವಿಧಿಯನ್ನು ಹೇಳಿದೆ.

೫೩. ಎಂಟನೆಯ ಸರ್ಗದಲ್ಲಿ ವೇದಗಳಿಗೆ ಫಲವನ್ನು ಹೇಳಿದೆ. ಒಂಭತ್ತನೆಯ ಸರ್ಗದಲ್ಲಿ ಶ್ರೀರಾಮನ ಎರಡೂವರೆತಿಂಗಳ ಪೂಜೆಯನ್ನು ಹೇಳಿದ್ದೇನೆ.

೫೪. ಹತ್ತನೆಯ ಸರ್ಗದಲ್ಲಿ ಚೈತ್ರಮಾಸದ ಮಹಿಮೆಯನ್ನು ಹೇಳಿದ್ದೇನೆ. ಹನ್ನೊಂದನೆಯ ಸರ್ಗದಲ್ಲಿ ಚೈತ್ರಸ್ನಾನದಿಂದ ಎಲ್ಲರಿಗೂ ಮೋಕ್ಷವು ಸಿಕ್ಕುವುದೆಂಬ ವಿಷಯವನ್ನು ಹೇಳಿದ್ದೇನೆ.

ಅದ್ವೈತಂ ದರ್ಶಿತಂ ರಾಜ್ಞಾ ದ್ವಾದಶೇ ಸ್ತ್ರೀಕದಂಬಕಂ ।
ವಾಯುಪುತ್ರಸ್ಯ ರಾಮಸ್ಯ ಕವಚೇ ದ್ವೇತ್ರಯೋದಶೇ ॥ ೫೫ ॥

ಸೀತಾಯಾಃ ಕವಚಾದೀನಿ ಪ್ರೋಕ್ತಾನ್ಯತ್ರ ಚತುರ್ದಶೇ ।
ಪಂಚದಶೇ ಕವಚಾನಿ ತದ್ಬಂಧೂನಾಂ ಸ್ಮೃತಾನಿ ಹಿ ॥ ೫೬ ॥

ವ್ರತಂ ಹನೂಮತಃ ಪ್ರೋಕ್ತಂ ಪತಾಕಾಖ್ಯಂ ಹಿ ಷೋಡಶೇ ।
ಪ್ರೋಕ್ತಂ ಸಪ್ತದಶೇ ಸಾರರಾಮಾಯಣಮನುತ್ತಮಂ ॥ ೫೭ ॥

ಅಷ್ಟಾದಶೇ ಶರಸೇತೋಃ ಖಂಡನಂ ಚ ಹನೂಮತಾ ।
ಜಾತಂ ಮನೋಹರಕಾಂಡಂ ಪೂರ್ಣಕಾಂಡಮಥೋಚ್ಯತೇ ॥ ೫೮ ॥

---

೫೫. ಹನ್ನೆರಡನೆಯ ಸರ್ಗದಲ್ಲಿ ರಾಮನು ಅದ್ವೈತವನ್ನು ಪ್ರದರ್ಶಿಸಿದನು. ಮತ್ತು ಹೆಂಗಸರು ಗುಂಪುಕಟ್ಟಿಕೊಂಡು ಬಂದುದನ್ನು ಹೇಳಿದೆ. ಹದಿಮೂರನೆಯ ಸರ್ಗದಲ್ಲಿ ಹನುಮಂತನ ಕವಚವನ್ನೂ ರಾಮನ ಕವಚವನ್ನೂ ಹೇಳಿದ್ದೇನೆ.

೫೬. ಹದಿನಾಲ್ಕನೆಯ ಸರ್ಗದಲ್ಲಿ ಸೀತೆಯೇ ಮೊದಲಾದವರ ಕವಚಗಳು ಹೇಳಲ್ಪಟ್ಟವೆ. ಹದಿನೈದನೆಯ ಸರ್ಗದಲ್ಲಿ ರಾಮನ ಬಂಧುಗಳ ಕವಚವನ್ನು ಹೇಳಿದ್ದೇನೆ.

೫೭. ಹದಿನಾರನೆಯ ಸರ್ಗದಲ್ಲಿ ಹನುಮಂತನ ವ್ರತವನ್ನೂ ಪತಾಕಾರೋಪವಿಧಿಯನ್ನೂ ಹೇಳಿದ್ದೇನೆ. ಹದಿನೇಳನೆಯ ಸರ್ಗದಲ್ಲಿ ಉತ್ತಮವಾದ ಸಾರರಾಮಾಯಣವನ್ನು ವಿವರಿಸಿದ್ದೇನೆ.

೫೮. ಹದಿನೆಂಟನೆಯ ಸರ್ಗದಲ್ಲಿ ಶರಸೇತುವನ್ನು ಹನುಮಂತನು ಖಂಡಿಸಿದ ವಿಷಯವನ್ನು ತಿಳಿಸಿದೆ. ಇಲ್ಲಿಗೆ ಮನೋಹರಕಾಂಡವು ಮುಗಿಯಿತು. ಮುಂದೆ ಪೂರ್ಣಕಾಂಡದ ವಿಷಯವನ್ನು ಹೇಳುತ್ತೇನೆ.

ವಾಲ್ಮೀಕಿನಾ ಸೋಮವಂಶವಿಸ್ತಾರಃ ಪ್ರಥಮೇಕಥಿ ।
ರಾಮಚಂದ್ರಸ್ಯ ಪ್ರಸ್ಥಾನಂ ದ್ವಿತೀಯೇ ಹಸ್ತಿನಾಪುರಂ ॥ ೫೯ ॥

ಸೂರ್ಯಸೋಮವಂಶಜಯೋರ್ಯುದ್ಧಂ ಪ್ರೋಕ್ತಂ ತೃತೀಯಕೇ ।
ಸೋಮಸೂರ್ಯವಂಶಜಯೋಃ ಮೈತ್ರೀಕೀ ಚ ಚತುರ್ಥಕೇ ॥ ೬೦ ॥

ಕುಶಾದೀನಾಂ ರಾಘವೇಣ ಪಂಚಮೇತ್ರ ವಿಸರ್ಜನಂ ।
ವೈಕುಂಠಾರೋಹಣಂ ಷಷ್ಠೇ ಗಂಗಾಯಾಂ ರಾಘವಸ್ಯ ಚ ॥ ೬೧ ॥

ಸಪ್ತಮೇ ಸೂರ್ಯವಂಶೀಯನೃಪಾಣಾಂ ವರ್ಣನಂ ಕೃತಂ ।
ಅನುಕ್ರಮಣಿಕಾಸರ್ಗಃ ಪ್ರೋಕ್ತೋಯಮಷ್ಟಮೇ ಮಹಾನ್ ॥ ೬೨ ॥

ಗ್ರಂಥಶ್ರುತಿಫಲಾದೀನಿ ನವಮೇ ಕೀರ್ತಿತಾನಿ ಹಿ ।
ನವಸರ್ಗೈಃ ಪೂರ್ಣಕಾಂಡಂ ಸಂಪೂರ್ಣಂ ನವಮಂ ತ್ವಿದಂ ॥ ೬೩ ॥

---

೫೯. ಮೊದಲನೆಯ ಸರ್ಗದಲ್ಲಿ ವಾಲ್ಮೀಕಿಯು ಸೋಮವಂಶವನ್ನು ವಿಸ್ತಾರವಾಗಿ ಹೇಳಿರುವ ವಿಷಯವು ಉಕ್ತವಾಗಿದೆ. ಎರಡನೆಯ ಸರ್ಗದಲ್ಲಿ ರಾಮಚಂದ್ರನು ಹಸ್ತಿನಾಪುರಕ್ಕೆ ಹೋದ ವಿಷಯವು ಹೇಳಲ್ಪಟ್ಟಿದೆ.

೬೦. ಮೂರನೆಯ ಸರ್ಗದಲ್ಲಿ ಚಂದ್ರವಂಶ ಸೂರ್ಯವಂಶದವರಿಗೆ ಯುದ್ಧವು ನಡೆದುದನ್ನು ವಿಸ್ತರಿಸಿದೆ. ನಾಲ್ಕನೆಯ ಸರ್ಗದಲ್ಲಿ ಸೋಮವಂಶ ಸೂರ್ಯವಂಶದವರಿಗೆ ಸ್ನೇಹವು ಬೆಳೆದ ವಿಷಯವನ್ನು ವಿವರಿಸಿದೆ.

೬೧. ಐದನೆಯ ಸರ್ಗದಲ್ಲಿ ರಾಮನು ಕುಶನೇ ಮುಂತಾದವರನ್ನು ಅವರವರ ಸ್ಥಳಗಳಿಗೆ ಕಳುಹಿಸಿದ ವಿಚಾರವು ಉಕ್ತವಾಗಿದೆ. ಆರನೆಯ ಸರ್ಗದಲ್ಲಿ ಶ್ರೀರಾಮನು ಗಂಗೆಯ ಮರಳಿನಲ್ಲಿ ವೈಕುಂಠಕ್ಕೆ ಹೋದ ವಿಷಯವನ್ನು ವಿವರಿಸಿದೆ.

೬೨. ಏಳನೆಯ ಸರ್ಗದಲ್ಲಿ ಸೂರ್ಯವಂಶದ ರಾಜರನ್ನು ವರ್ಣಿಸಿರುವುದು. ಎಂಟನೆಯ ಸರ್ಗದಲ್ಲಿ ದೊಡ್ಡದಾಗಿ ಅನುಕ್ರಮಣಿಕಾಧ್ಯಾಯವನ್ನು ಹೇಳಿದೆ.

೬೩. ಒಂಭತ್ತನೆಯ ಸರ್ಗದಲ್ಲಿ ಗ್ರಂಥವನ್ನು ಕೇಳಿದುದರ ಓದಿದುದರ ಫಲವನ್ನು ಹೇಳಿದೆ. ಒಂಭತ್ತು ಸರ್ಗಗಳಿಂದಲೇ ಈ ಪೂರ್ಣಕಾಂಡವು ಮುಗಿದುದು.

ಅನುಕ್ರಮಣಿಕಾ ಚೇಯಂ ಮಯಾ ಶಿಷ್ಯ ಪ್ರವರ್ಣಿತಾ ।
ಅಸ್ಯಾಃ ಶ್ರವಣಮಾತ್ರೇಣ ರಾಮಾಯಣಶ್ರುತೇಃ ಫಲಂ ॥ ೬೪ ॥

ರಾಮಾಯಣಪುಸ್ತಕಸ್ಯ ನಿತ್ಯಂ ಕಾರ್ಯಂ ಪ್ರಪೂಜನಂ ।
ವಿಶೇಷಂ ಪೂಜನಸ್ಯಾಪಿ ವದಾಮಿ ಶಿಷ್ಯ ತಂ ಶೃಣು ॥ ೬೫ ॥

ಸಾರಕಾಂಡಂ ವಿಭೋಃ ಸ್ಥಾನೇ ಲಕ್ಷ್ಮಣೇಯೋ ದ್ವಿತೀಯಕಂ ।
ನವಾಯತನರೀತ್ಯೇತ್ಥಂ ಶೇಷಾಣಿ ಸ್ಥಾಪಯೇತ್ಕ್ರಮಾತ್ ॥ ೬೬ ॥

ಸಪ್ತಕಾಂಡಾನಿ ವಿಧಿವತ್ತೇಷಾಂ ಪೂಜನಮಾಚರೇತ್ ।
ಅಥ ವಾ ರಾಜ್ಯಕಾಂಡಸ್ಯ ಪೂರ್ವಾರ್ಧಂ ರಾಮ ಸತ್ಸ್ಥಲೇ ॥ ೬೭ ॥

ರಾಜ್ಯಕಾಂಡಸ್ಯೋತ್ತರಾರ್ಧಂ ಸೀತಾಸ್ಥಾನೇ ನ್ಯವೇಶಯತ್ ।
ಲಕ್ಷ್ಮಣೇಯೋ ಸಾರಕಾಂಡಂ ಶೇಷಾಣ್ಯಗ್ರೇ ಕ್ರಮೇಣ ತು ॥ ೬೮ ॥

---

೬೪. ಎಲೈ ಶಿಷ್ಯನೇ! ಈ ಅನುಕ್ರಮಣಿಕೆಯನ್ನು ನಾನು ನಿನಗೆ ಹೇಳಿದ್ದೇನೆ. ಇದನ್ನು ಕೇಳಿದುದರಿಂದಲೇ ರಾಮಾಯಣವನ್ನು ಕೇಳಿದುದರ ಫಲವು ಬರುತ್ತದೆ.

೬೫. ರಾಮಾಯಣ ಪುಸ್ತಕಕ್ಕೆ ನಿತ್ಯವೂ ಪೂಜೆಯನ್ನು ಮಾಡಬೇಕು. ಈ ರಾಮಾಯಣ ಪುಸ್ತಕಕ್ಕೆ ವಿಶೇಷ ಪೂಜೆಯನ್ನು ಹೇಳುತ್ತೇನೆ. ಕೇಳು.

೬೬. ಈ ರಾಮಾಯಣದ ಸಾರಕಾಂಡವನ್ನು ರಾಮನ ಸ್ಥಳದಲ್ಲಿಯೂ ಎರಡನೆಯ ಕಾಂಡವನ್ನು ಲಕ್ಷ್ಮಣನ ಸ್ಥಾನದಲ್ಲಿಯೂ ಈ ರೀತಿಯಾಗಿ ನವಾಯತನ ರೀತಿಯಲ್ಲಿ ನವಕಾಂಡಗಳನ್ನು ಇಡಬೇಕು.

೬೭–೬೮. ಏಳು ಕಾಂಡಗಳನ್ನೂ ಇಟ್ಟು ಕ್ರಮವಾಗಿ ಪೂಜೆಮಾಡಬಹುದು ಅದಿಲ್ಲದಿದ್ದರೆ ರಾಜ್ಯಕಾಂಡದ ಪೂರ್ವಾರ್ಧವನ್ನು ರಾಮನ ಸ್ಥಳದಲ್ಲಿಟ್ಟು ರಾಜ್ಯಕಾಂಡದ ಉತ್ತರಾರ್ಧವನ್ನು ಸೀತಾಸ್ಥಾನದಲ್ಲಿಡಬೇಕು. ಲಕ್ಷ್ಮಣನ ಸ್ಥಾನದಲ್ಲಿ ಸಾರಕಾಂಡವನ್ನೂ ಮುಂದಿನವುಗಳನ್ನು ಭರತ, ಶತ್ರುಘ್ನಾದಿಗಳ ಸ್ಥಾನದಲ್ಲಿ ಕ್ರಮದಿಂದ ಇಡಬೇಕು.

ಏವಂ ಸಂಸ್ಥಾಪ್ಯ ಕಾಂಡಾನಿ ತೇಷಾಂ ಪೂಜನಮಾಚರೇತ್ ।
ನವಾಯತನಪೂಜಾಯಾಃ ಫಲಮೇತೇನ ಕೀರ್ತಿತಂ ॥ ೬೯ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ಆದಿಕಾವ್ಯೇ ಪೂರ್ಣಕಾಂಡೇ ಅನುಕ್ರಮಣಿಕಾ
ನಾಮ ಅಷ್ಟಮಸ್ಸರ್ಗಃ ಸಮಾಪ್ತಃ

---

೬೯. ಈ ರೀತಿಯಾಗಿ ಕಾಂಡಗಳನ್ನಿಟ್ಟು ಆ ಕಾಂಡಗಳನ್ನು ಪೂಜಿಸಬೇಕು. ಈ ರೀತಿಯಾಗಿಟ್ಟು ಪೂಜಿಸಿದರೆ ನವಾಯತನ ಪೂಜೆಯು ಫಲವು ಬರುತ್ತದೆ.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ
ಆದಿಕಾವ್ಯವಾದ ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ
ಅನುಕ್ರಮಣಿಕೆಯು ಉಕ್ತಿಯೆಂಬ ಎಂಟನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ ಎಂಟನೆಯ ಸರ್ಗದ ಸಾರಾಂಶವು.

ಇದು ಅನುಕ್ರಮಣಿಕಾ ಸರ್ಗವು. ಇದರಲ್ಲಿ ಒಂದೊಂದು ಕಾಂಡವನ್ನೂ ತೆಗೆದುಕೊಂಡು ಅದರಲ್ಲಿರುವ ಒಂದೊಂದು ಸರ್ಗದಲ್ಲಿಯೂ ಇಂತಹ ವಿಷಯಗಳು ಬರುತ್ತವೆಂದು ಸೂಕ್ಷ್ಮವಾಗಿ ವಿವರಿಸುತ್ತಾನೆ. ಅನುಕ್ರಮಣಿಕಾ ಸರ್ಗವೇ ಬಹು ಪುಣ್ಯಪ್ರದವೆಂದೂ ವಿವರಿಸುತ್ತಾನೆ.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಪೂರ್ಣಕಾಂಡೇ ನವಮಸ್ಸರ್ಗಃ

॥ ಶ್ರೀರಾಮದಾಸ ಉವಾಚ ॥

ಸಾರಂ ಯಾತ್ರಾಖ್ಯಂ ಯಾಗಾಖ್ಯಂ ವಿಲಾಸಾಖ್ಯಂ ತು ಜನ್ಮಕಂ ।
ವಿವಾಹಾಖ್ಯಂ ಹಿ ರಾಜ್ಯಾಖ್ಯಂ ಶ್ರೀಮನೋಹರಪೂರ್ಣಕೇ ॥ ೧ ॥

ಕಾಂಡಾನ್ಯನುಕ್ರಮೇಣೈವಾನಂದರಾಮಾಯಣೇ ನವ ।
ತ್ರಯೋದಶಂ ಸಾರಕಾಂಡೇ ಸರ್ಗಾ ವಾಲ್ಮೀಕಿನೇರಿತಾಃ ॥ ೨ ॥

ಯಾತ್ರಾಕಾಂಡೇ ನವ ಜ್ಞೇಯಾ ಯಾಗಕಾಂಡೇಪಿ ವೈ ನವ ।
ನವ ಜ್ಞೇಯಾ ವಿಲಾಸಾಖ್ಯೇ ಜನ್ಮಕಾಂಡೇಪಿ ವೈ ನವ ॥ ೩ ॥

ಶ್ರೀಮದಾನಂದರಾಮಾಯಣದ ಪೂರ್ಣಕಾಂಡದಲ್ಲಿ ಒಂಭತ್ತನೆಯ ಸರ್ಗವು

೧-೨. ಶ್ರೀರಾಮದಾಸನು ಹೇಳಿದನು–ಸಾರಕಾಂಡ, ಯಾತ್ರಾಕಾಂಡ, ಯಾಗಕಾಂಡ, ವಿಲಾಸಕಾಂಡ, ಜನ್ಮಕಾಂಡ, ವಿವಾಹಕಾಂಡ, ರಾಜ್ಯಕಾಂಡ, ಮನೋಹರಕಾಂಡ, ಪೂರ್ಣಕಾಂಡ, ಈ ರೀತಿಯಾಗಿ ಕ್ರಮವಾಗಿ ಈ ಆನಂದ ರಾಮಾಯಣದಲ್ಲಿ ಒಂಭತ್ತುಕಾಂಡಗಳಿವೆ. ಸಾರಕಾಂಡದಲ್ಲಿ ಹದಿಮೂರು ಸರ್ಗಗಳಿವೆ.

೩. ಯಾತ್ರಾಕಾಂಡದಲ್ಲಿ ಒಂಭತ್ತು ಸರ್ಗಗಳೂ, ಕಾಗಕಾಂಡದಲ್ಲಿ ಒಂಭತ್ತು ಸರ್ಗಗಳೂ ಇವೆ. ವಿಲಾಸಕಾಂಡದಲ್ಲಿ ಒಂಭತ್ತು ಸರ್ಗಗಳೂ ಜನ್ಮಕಾಂಡಸಲ್ಲಿಯೂ ಒಂಭತ್ತು ಸರ್ಗಗಳೂ ಇವೆ.

ನವ ಜ್ಞೇಯಾ ವಿವಾಹಾಖ್ಯೇ ಚತುರ್ವಿಂಶಾಶ್ಚ ರಾಜ್ಯಕೇ ।
ಮನೋಹರಾಖ್ಯೇ ಜ್ಞಾತವ್ಯಾಸ್ಸರ್ಗಾ ಅಷ್ಟಾದಶಾತ್ರ ವೈ ॥ ೪ ॥

ಪೂರ್ಣಕಾಂಡೇ ನವ ಜ್ಞೇಯಾಸ್ಸರ್ಗಾಃ ಪಾಪಹರಾ ನೃಣಾಂ ।
ಏವಂ ನವೋತ್ತರಶತಂ ಸರ್ಗಾಃ ಜ್ಞೇಯಾಶ್ಶುಭಾವಹಾಃ ॥ ೫ ॥

ಸಾರಕಾಂಡೇ ಪಂಚವಿಂಶಚ್ಛತಂ ಶ್ಲೋಕಾಸ್ಸತ್ರಿಂಶಕಾಃ ।
ಯಾತ್ರಾಕಾಂಡೇ ಸಪ್ತಶತಂ ಪಂಚತ್ರಿಂಶೋತ್ತರಂ ಸ್ಮೃತಾಃ ॥ ೬ ॥

ಯಾಗಕಾಂಡೇ ಷಟ್‌ಶತಂ ಚ ಪಂಚವಿಂಶೋತ್ತರಂ ಶುಭಾಃ ।
ವಿಲಾಸಾಖ್ಯೇ ಷಟ್‌ಶತಂ ಚ ಸಾಷ್ಟಸಪ್ತತಿ ಸಂಸ್ಮೃತಾಃ ॥ ೭ ॥

ಜನ್ಮಕಾಂಡೇ ಹ್ಯಷ್ಟಶತಂ ಸದ್ವಿಶ್ಲೋಕಾಃ ಪ್ರಕೀರ್ತಿತಾಃ ।
ವಿವಾಹಾಖ್ಯೇ ಪಂಚಶತಂ ಕೀರ್ತಿತಾಃ ಸತ್ರ್ಯಶೀತಯಃ ॥ ೮ ॥

---

೪. ವಿವಾಹಕಾಂಡದಲ್ಲಿ ಒಂಭತ್ತು ಸರ್ಗಗಳೂ, ರಾಜ್ಯಕಾಂಡದಲ್ಲಿ ಇಪ್ಪತ್ತನಾಲ್ಕು ಸರ್ಗಗಳೂ, ಮನೋಹರಕಾಂಡದಲ್ಲಿ ಹದಿನೆಂಟು ಸರ್ಗಗಳೂ ಇರುವುವು.

೫. ಪೂರ್ಣಕಾಂಡದಲ್ಲಿ ಒಂಭತ್ತು ಸರ್ಗಗಳೂ ಇರುವುವು. ಈ ರೀತಿಯಾಗಿ ಒಟ್ಟಿನಲ್ಲಿ ಒಂಭತ್ತು ಕಾಂಡಗಳಿಂದಲೂ ಒಂದನೂರಒಂಭತ್ತು ಸರ್ಗಗಳಿರುವುವು. ಇವೆಲ್ಲವೂ ಶುಭಕರಗಳು.

೬. ಸಾರಕಾಂಡದಲ್ಲಿ ಎರಡುಸಾವಿರದ ಐದನೂರ ಮೂವತ್ತೈದು ಶ್ಲೋಕಗಳು ಇರುವುದು.

೭. ಯಾಗಕಾಂಡದಲ್ಲಿ ಆರನೂರ ಇಪ್ಪತ್ತೈದು ಶ್ಲೋಕಗಳಿರುವುವು. ವಿಲಾಸಕಾಂಡದಲ್ಲಿ ಆರನೂರ ಎಪ್ಪತ್ತೆಂಟು ಶ್ಲೋಕಗಳಿರುವುವು.

೮. ಜನ್ಮಕಾಂಡದಲ್ಲಿ ಎಂಟನೂರ ಎರಡು ಶ್ಲೋಕಗಳಿರುವುವು. ವಿವಾಹ ಕಾಂಡದಲ್ಲಿ ಐದನೂರ ಎಂಭತ್ತಮೂರು ಶ್ಲೋಕಗಳಿರುವುವು.

ಸದ್ವಾವಿಂಶಾ ರಾಜ್ಯಕಾಂಡೇ ಸಷಡ್ವಿಂಶಚ್ಛತಂ ಸ್ಮೃತಾಃ ।
ಏಕತ್ರಿಂಶಚ್ಛತಂ ಶ್ಲೋಕಾಃ ಪ್ರೋಕ್ತಾಃ ಕಾಂಡೇ ಮನೋಹರೇ ॥ ೯ ॥

ಪೂರ್ಣಕಾಂಡೇ ಪಂಚಶತಂ ಸಪ್ತಸಪ್ತತಿ ಮಿಶ್ರಿತಾಃ ।
ಆನಂದರಾಮಚರಿತೇ ಸಹಸ್ರಾಣಿ ಹಿ ದ್ವಾದಶೇ ॥ ೧೦ ॥

ದ್ವೇ ಶತೇ ಚ ದ್ವಿಪಂಚಾಶಚ್ಛ್ಲೋಕಾ ಜ್ಞೇಯಾ ಮನೀಷಿಭಿಃ ।
ಏವಂ ಶಿಷ್ಯ ಮಯಾ ಪ್ರೋಕ್ತಂ ಯಥಾ ಪೃಷ್ಟಂ ತ್ವಯಾ ಪುರಾ ॥

ರಾಮಸ್ಯ ತೋಷಚರಿತಂ ಶ್ರವಣಾತ್ಪಾತಕಾಪಹಂ ।
ಪೂರ್ಣಕಾಂಡಮಿದಂ ಜ್ಞೇಯಂ ಶ್ರವಣಾತ್ಪುಣ್ಯವರ್ಧನಂ ॥ ೧೨ ॥

ಸಾರಕಾಂಡಶ್ರವಾದೇವ ಸಂಸಾರಾನ್ಮುಚ್ಯತೇ ನರಃ ।
ಯಾತ್ರಾಕಾಂಡೇನ ಯಾತ್ರಾಣಾಂ ಲಭ್ಯತೇ ಮಾನವೈಃ ಫಲಂ ॥ ೧೩ ॥

---

೯. ರಾಜ್ಯಕಾಂಡದಲ್ಲಿ ಎರಡುಸಾವಿರದ ಆರನೂರಇಪ್ಪತ್ತೆರಡು ಶ್ಲೋಕಗಳಿರುವುವು. ಮನೋಹರಕಾಂಡದಲ್ಲಿ ಮೂರುಸಾವಿರದ ಒಂದನೂರು ಶ್ಲೋಕಗಳಿರುವುವು.

೧೦-೧೧. ಪೂರ್ಣಕಾಂಡದಲ್ಲಿ ಐದನೂರ ಎಪ್ಪತ್ತೇಳು ಶ್ಲೋಕಗಳಿರುವುವು. ಈ ರೀತಿಯಾಗಿ ಈ ಆನಂದರಾಮಾಯಣದಲ್ಲಿ ಒಟ್ಟಿಗೆ ಹನ್ನೆರಡು ಸಾವಿರದ ಇನ್ನೂರಐವತ್ತೇಳು ಶ್ಲೋಕಗಳಿರುವುವು. ಎಂದು ತಿಳಿಯಬೇಕು. ಎಲೈ ಶಿಷ್ಯನೇ! ನೀನು ಹಿಂದೆ ಕೇಳಿದಂತೆ ಎಲ್ಲವನ್ನೂ ವಿವರವಾಗಿ ಹೇಳಿರುವೆನು.

೧೨. ಈ ಆನಂದರಾಮಾಯಣವು ರಾಮನಿಗೆ ಸಂತೋಷವನ್ನುಂಟುಮಾಡುತ್ತದೆ. ಕೇಳುವುದರಿಂದ ಪಾಪವು ನಾಶವಾಗುತ್ತದೆ. ಪೂರ್ಣಕಾಂಡವನ್ನು ಕೇಳುವುದರಿಂದ ಪುಣ್ಯವು ಹೆಚ್ಚುತ್ತದೆ.

೧೩. ಸಾರಕಾಂಡವನ್ನು ಕೇಳುವುದರಿಂದ ಮನುಷ್ಯನಿಗೆ ಸಂಸಾರಬಂಧನವು ಬಿಡುತ್ತದೆ. ಯಾತ್ರಾಕಾಂಡವನ್ನು ಕೇಳುವುದರಿಂದ ಮನುಷ್ಯನಿಗೆ ಯಾತ್ರೆಗಳನ್ನೆಲ್ಲಾ ಮಾಡಿದ ಫಲವು ಬರುತ್ತದೆ.

ಯಾಗಕಾಂಡೇನ ಯಜ್ಞಾನಾಂ ಲಭ್ಯತೇ ಫಲಮುತ್ತಮಂ ।
ವಿಲಾಸಕಾಂಡಶ್ರವಣಾದಪ್ಸರೋಭಿರ್ವಿನೋದತೇ ॥ ೧೪ ॥

ಜನ್ಮಕಾಂಡೇನ ಪ್ರಾಪ್ನೋತಿ ನರಃ ಪುತ್ರಾದಿಸಂತತಿಂ ।
ವಿವಾಹಕಾಂಡಶ್ರವಣಾದ್ರಮ್ಯಾ ಸ್ತ್ರೀ ಲಭ್ಯತೇ ಭುವಿ ॥ ೧೫ ॥

ರಾಜ್ಯಕಾಂಡೇನ ರಾಜ್ಯಂ ಹಿ ಮಾನವೈರ್ಭುವಿ ಲಭ್ಯತೇ ।
ಕಾಂಡಂ ಮನೋಹರಂ ಶ್ರುತ್ವಾ ಲಭ್ಯತೇ ಮನಸೇಪ್ಸಿತಂ ॥ ೧೬ ॥

ಪೂರ್ಣಕಾಂಡಶ್ರವಾದೇವ ವಿಷ್ಣೋಃ ಪೂರ್ಣಪದಂ ಲಭೇತ್ ।
ಸರ್ವಂ ವಿಸ್ತರತಃ ಶ್ರುತ್ವಾನಂದರಾಮಾಯಣಂ ತ್ವಿದಂ ॥ ೧೭ ॥

ಸಚ್ಚಿದಾನಂದರೂಪೇ ಸ ಲೀನೋ ಭವತಿ ಮಾನವಃ ।
ರಾಮಾಯಣಂ ನರೈಶ್ಶ್ರುತ್ವಾ ಕಾರ್ಯಮುದ್ಯಾಪನಂ ನರೈಃ ॥ ೧೮ ॥

---

೧೪ ಯಾಗಕಾಂಡವನ್ನು ಕೇಳುವುದರಿಂದ ಮನುಷ್ಯರಿಗೆ ಯಾಗವನ್ನು ಮಾಡಿದ ಫಲವು ಬರುತ್ತದೆ. ವಿಲಾಸಕಾಂಡವನ್ನು ಕೇಳುವುದರಿಂದ ಅಪ್ಸರ ಸ್ತ್ರೀಯರೊಡನೆ ಸುಖಿಸುತ್ತಾನೆ.

೧೫. ಜನ್ಮಕಾಂಡವನ್ನು ಕೇಳಿದರೆ ಮಕ್ಕಳು ಮೊಮ್ಮಕ್ಕಳು ಮುಂತಾದ ಸಂತತಿಯು ಬೆಳೆಯುತ್ತದೆ. ವಿವಾಹಕಾಂಡವನ್ನು ಕೇಳುವುದರಿಂದ ಈ ಲೋಕದಲ್ಲಿ ಉತ್ತಮಳಾದ ಹೆಂಡತಿಯು ಸಿಕ್ಕುತ್ತಾಳೆಂದು ತಿಳಿಯಬೇಕು.

೧೬. ರಾಜ್ಯಕಾಂಡವನ್ನು ಕೇಳಿದರೆ ಒಳ್ಳೆಯ ರಾಜ್ಯವು ಸಿಕ್ಕುತ್ತದೆ. ಮನೋಹರಕಾಂಡವನ್ನು ಕೇಳಿದರೆ ಇಷ್ಟಾರ್ಥಗಳು ಲಭಿಸುತ್ತವೆ.

೧೭–೧೮. ಪೂರ್ಣಕಾಂಡವನ್ನು ಕೇಳಿದರೆ ವಿಷ್ಣುವಿನ ಪೂರ್ಣವಾದ ವೈಕುಂಠವನ್ನು ಹೊಂದುತ್ತಾನೆ. ಈ ಆನಂದರಾಮಾಯಣವನ್ನು ಪೂರ್ಣವಾಗಿ ಕೇಳಿದರೆ ಸಚ್ಚಿದಾನಂದರೂಪಸ್ವಾಮಿಯಲ್ಲಿ ಐಕ್ಯನಾಗುತ್ತಾನೆ. ಮನುಷ್ಯನು ಈ ರಾಮಾಯಣವನ್ನು ಕೇಳಿದಮೇಲೆ ಉದ್ಯಾಪನೆಯನ್ನು ಮಾಡಬೇಕು.

ರಾಮಾಯಣೇ ಶ್ರುತೇ ದದ್ಯಾದ್ರಥಂ ಹೇಮಮಯಂ ಸುಧೀಃ ।
ಚತುರ್ಭಿರ್ವಾಜಿಭಿರ್ಯುಕ್ತಂ ತಥಾ ಕ್ಷೌಮಪತಾಕಯಾ ॥ ೧೯ ॥

ಯಂತ್ರೈಶ್ಚೈವ ಸಮಾಯುಕ್ತಂ ಕಿಂಕಿಣೀನಾದನಾದಿತಂ ।
ಸಂಪಾದಿತೇಽಸ್ಯ ಸಮ್ಯಗ್ವೈ ಧೇನುಂ ದದ್ಯಾತ್ಪಯಸ್ವಿನೀಂ ॥ ೨೦ ॥

ಬ್ರಾಹ್ಮಣಾನ್ಭೋಜಯೇತ್ಪಶ್ಚಾಚ್ಛತಮಷ್ಟೋತ್ತರಂ ಸುಧೀಃ ।
ಏವಂ ಕೃತೇ ವಿಧಾನೇ ತನ್ಮಹಾಕಾವ್ಯಂ ಫಲಪ್ರದಂ ॥ ೨೧ ॥

ರಾಮಾಯಣಂ ಭವೇನ್ನ್ಯೂನಂ ನಾತ್ರ ಕಾರ್ಯಾ ವಿಚಾರಣಾ ।
ಯಸ್ಮಿನ್ ರಾಮಸ್ಯ ಸಂಸ್ಥಾನಂ ರಾಮಾಯಣಮಥೋಚ್ಯತೇ ॥ ೨೨ ॥

ನರಃ ಪ್ರಾತಸ್ಸಮುತ್ಥಾಯಾನಂದರಾಮಾಯಣಂ ಪಠೇತ್ ।
ಯಸ್ಸ ಕಾಮಾನವಾಪ್ನೋತಿ ಸಕಲಾನ್ ದಿವಿ ದುರ್ಲಭಾನ್ ॥ ೨೩ ॥

---

೧೯. ಆನಂದರಾಮಾಯಣವನ್ನು ಕೇಳಿದರೆ ಚಿನ್ನದಲ್ಲಿ ಮಾಡಿದ ರಥವನ್ನು ದಾನಮಾಡಬೇಕು. ಅದಕ್ಕೆ ನಾಲ್ಕು ಕುದುರೆಗಳಿರಬೇಕು. ರೇಷ್ಮೆಯ ಬಟ್ಟೆಯ ಪತಾಕೆಯನ್ನು ಕಟ್ಟಿರಬೇಕು.

೨೦. ಅವುಗಳಿಗೆ ಅನುಕೂಲವಾದ ಯಂತ್ರಗಳಿರಬೇಕು. ಗೆಜ್ಜೆಗಳನ್ನು ಕಟ್ಟಿರಬೇಕು ಒಂದು ಕರೆಯುವ ಹಸುವನ್ನೂ ಕರುವನ್ನೂ ದಾನಮಾಡಬೇಕು.

೨೧. ಅನಂತರದಲ್ಲಿ ನೂರೆಂಟುಜನ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಬೇಕು. ಈ ರೀತಿಯಾಗಿ ಮಾಡಿ ಮುಗಿಸಿದರೆ ಈ ಮಹಾ ಕಾವ್ಯವು ಫಲವನ್ನು ಕೊಡುತ್ತದೆ.

೨೨. ಆಗ ಈ ರಾಮಾಯಣವು ಖಂಡಿತವಾಗಿಯೂ ಫಲವನ್ನು ಕೊಡುತ್ತದೆ. ಸಂದೇಹ ಪಡಬೇಕಾದುದಿಲ್ಲ. ಯಾವ ಕಾವ್ಯದಲ್ಲಿ ರಾಮನ ಚರಿತ್ರೆಯಿರುವುದೋ ಅದು ರಾಮಾಯಣವನ್ನೆನಿಸಿ ಕೊಳ್ಳುತ್ತದೆ.

೨೩. ಮನುಷ್ಯನು ಬೆಳಗ್ಗೆ ಎದ್ದು ಆನಂದರಾಮಾಯಣವನ್ನು ಓದಬೇಕು. ಅಂತಹವನು ಸ್ವರ್ಗದಲ್ಲಿ ಉತ್ತಮೋತ್ತಮವಾದ ಭೋಗಗಳನ್ನು ಅನುಭವಿಸುವನು.

ಚೈತ್ರಮಾಸೇ ಸಿತೇ ಪಕ್ಷೇ ನವಮ್ಯಾಂ ರಾಮಜನ್ಮನಿ ।
ಶತಮಾಷಸುವರ್ಣೇನ ವಾಯುಪುತ್ರಂ ವಿಧಾಯ ಚ ॥ ೨೪ ॥

ಏಕವಿಂಶತಿಮಾಷೈರ್ವಾ ಯಥಾ ಶಕ್ತ್ಯಾಥವಾ ನರೈಃ ।
ವಾಯುಪುತ್ರಂ ಸಂವಿಧಾಯಾನಂದರಾಮಾಯಣಂ ತ್ವಿದಂ ॥ ೨೫ ॥

ಮೂಲ್ಯದ್ವಾರಾ ಲಿಖಿತ್ವಾನ್ಯೈರ್ಲಿಖಿತ್ವಾ ವಾ ಸ್ವಹಸ್ತತಃ ।
ತತ್ಪುನಶ್ಚಿತ್ರರಂಗಾದ್ಯೈರ್ಭೂಷಿತಂ ಸುವಿಶೋಧಿತಂ ॥ ೨೬ ॥

ವೇಷ್ಟಿತಂ ಪಟ್ಟಕೂಲಾದ್ಯೈಸ್ತತಸ್ತತ್ಪುಸ್ತಕಂ ಶುಭಂ ।
ಸ್ಕಂಧೇ ಶ್ರೀಮಾರುತೇಃ ಸ್ಥಾಪ್ಯ ಪೂಜಿತಂ ದಕ್ಷಿಣಾನ್ವಿತಂ ॥ ೨೭ ॥

ಮಧ್ಯಾಹ್ನೇ ಬ್ರಾಹ್ಮಣಂ ಪೂಜ್ಯ ನಾನಾಶಾಸ್ತ್ರವಿಶಾರದಂ ।
ತಸ್ಮೈ ದೇಯಂ ಪುಸ್ತಕಂ ತದ್ವಾಯುಪುತ್ರಸಮನ್ವಿತಂ । ॥ ೨೮ ॥

---

೨೪. ಚೈತ್ರಶುದ್ಧ ನವಮಿಯ ದಿನ ರಾಮಜನ್ಮವು ಆ ದಿನ ನೂರು ಮಾಷಗಳ ತೂಕದಲ್ಲಿ ಹನುಮಂತನ ಒಂದು ಪ್ರತಿಮೆಯನ್ನು ಮಾಡಿಸಬೇಕು ಅದಿಲ್ಲದಿದ್ದರೆ ಇಪ್ಪತ್ತೊಂದು ಮಾಷಗಳಿಂದಲಾದರೂ ಮಾಡಿಸಬೇಕು. ಅದೂ ಆಗದಿದ್ದರೆ ಕೈಲಾಗದಷ್ಟಕ್ಕೆ ಮಾಡಿಸಬಹುದು.

೨೫. ಈ ಆನಂದರಾಮಾಯಣವನ್ನು ಮತ್ತೊಬ್ಬನಿಗೆ ಹಣಕೊಟ್ಟು ಬರೆಯಿಸಬೇಕು. ಇಲ್ಲದಿದ್ದರೆ ತಾನೇ ಬರೆಯಬಹುದು. ಅದರಲ್ಲಿ ಚಿತ್ರ ಮುಂತಾದುವುಗಳನ್ನು ರಚಿಸಬೇಕು. ಆ ಚಿತ್ರಕ್ಕೆ ಬಣ್ಣವನ್ನು ಹಾಕಿಸಬೇಕು.

೨೬–೨೭. ಅದನ್ನು ರೇಷ್ಮೆಯ ಬಟ್ಟೆಯಿಂದ ಸುತ್ತಿಕಟ್ಟಿರಬೇಕು. ಆ ಪುಸ್ತಕವನ್ನು ಹನುಂತನ ಪ್ರತಿಮೆಯ ಹೆಗಲಿನಮೇಲೆ ಇಡಬೇಕು. ಅದನ್ನು ಪೂಜಿಸಿ ದಕ್ಷಿಣೆಯನ್ನಿಡಬೇಕು.

೨೮. ಅನೇಕ ಶಾಸ್ತ್ರಗಳಲ್ಲಿ ಪಂಡಿತನಾದ ಬ್ರಾಹ್ಮಣನನ್ನು ಮಧ್ಯಾಹ್ನದಲ್ಲಿ ಕೂರಿಸಿ ಪೂಜಿಸಬೇಕು. ಅವನಿಗೆ ಆ ವಾಯುಪುತ್ರನ ಪ್ರತಿಮೆಯೊಡನೆ ಆ ರಾಮಾಯಣವನ್ನೂ ದಕ್ಷಿಣೆಯನ್ನೂ ಕೊಡಬೇಕು.

ಏವಂ ಯಃ ಕುರುತೇ ದಾನಂ ತಸ್ಯ ಪುಣ್ಯಂ ವದಾಮ್ಯಹಂ ।
ಕೋಟಿಭಾರಸುವರ್ಣಸ್ಯ ಕುರುಕ್ಷೇತ್ರೇ ರವಿಗ್ರಹೇ ॥ ೨೯ ॥

ದಾನೇನ ಪುಣ್ಯಂ ಯತ್ಪ್ರೋಕ್ತಂ ತಸ್ಮಾದೇತಚ್ಛತಾಧಿಕಂ ।
ಅಕ್ಷರಾಣ್ಯತ್ರ ಯಾವಂತಿ ಸಂತಿ ಹ್ಯಾನಂದಸಂಜ್ಞಕೇ ॥ ೩೦ ॥

ತಾವದ್ಯುಗಸಹಸ್ರಾಣಿ ವೈಕುಂಠೇ ಮೋದತೇ ನರಃ ।
ಸಪ್ತಜನ್ಮ ಭವೇದ್ವಿಪ್ರಸ್ತತೋತ್ರ ವೇದಪಾರಗಃ ॥ ೩೧ ॥

ಧನ್ಯಂ ಪವಿತ್ರಮಾನಂದದಾಯಕಂ ಚ ಮನೋಹರಂ ।
ಆನಂದಸಂಜ್ಞಕಂ ರಾಮಚರಿತಂ ಪುಣ್ಯವರ್ಧನಂ ॥ ೩೨ ॥

ರಾಮಾಯಣಮಿದಂ ಪುಣ್ಯಂ ಯೇ ಶೃಣ್ವಂತಿ ನರೋತ್ತಮಾಃ ।
ಪುತ್ರೈಃ ಪೌತ್ರೈಸ್ಸುಹೃದ್ಭಿಶ್ಚ ನ ವಿಯೋಗಂ ಲಭಂತಿ ತೇ ॥ ೩೩ ॥

---

೨೯. ಹೀಗೆ ದಾನಮಾಡಿದವನಿಗೆ ಬರುವ ಪುಣ್ಯವನ್ನು ಹೇಳುತ್ತೇನೆ. ಕೇಳು. ಸೂರ್ಯಗ್ರಹಣ ಕಾಲದಲ್ಲಿ ಕುರುಕ್ಷೇತ್ರದಲ್ಲಿ ಕೋಟಿಮಣ ಚಿನ್ನವನ್ನು ದಾನಮಾಡಿದರೆ ಯಾವ ಪುಣ್ಯಬರುವುದೋ ಅದಕ್ಕಿಂತಲೂ ನೂರರಷ್ಟು ಹೆಚ್ಚು ಪುಣ್ಯಬರುವುದು.

೩೦–೩೧. ಈ ಆನಂದರಾಮಾಯಣದಲ್ಲಿ ಎಷ್ಟು ಅಕ್ಷರಗಳಿವೆಯೋ ಅಷ್ಟು ಸಂಖ್ಯೆಯ ಯುಗಗಳ ಕಾಲದವರೆಗೆ ಅವನು ವೈಕುಂಠದಲ್ಲಿ ಸುಖಿಸುತ್ತಾನೆ. ಏಳುಜನ್ಮಗಳವರೆಗೂ ವೇದಪಾರಗನಾದ ವಿಪ್ರನಾಗಿ ಹುಟ್ಟುವನು.

೩೨. ಈ ಆನಂದರಾಮಾಯಣವು ಮನೋಹರವು. ಪವಿತ್ರವು. ಆನಂದಕರವು. ಪುಣ್ಯವನ್ನು ಹೆಚ್ಚಿಸುವುದು.

೩೩. ಪುಣ್ಯಕರವಾದ ಈ ರಾಮಾಯಣವನ್ನು ಯಾರು ಕೇಳುವರೋ ಅವರು ಪುತ್ರರು ಬಂಧುಗಳೊಡನೆ ವಿಯೋಗವನ್ನು ಹೊಂದುವುದೇ ಇಲ್ಲವು.

ರಾಮಾಯಣಮಿದಂ ಯೇಽತ್ರ ಭಕ್ತ್ಯಾ ಶೃಣ್ವಂತಿ ಮಾನವಾಃ ।
ತೇಷಾಂ ಸ್ತ್ರೀಭಿರ್ವಿಯೋಗೋಽತ್ರ ನ ಕದಾಪಿ ಹಿ ಜಾಯತೇ ॥ ೩೪ ॥

ಆನಂದಸಂಜ್ಞಕಂ ಪುಣ್ಯಂ ಯಾಃ ಶೃಣ್ವಂತ್ಯತ್ರ ವೈ ಸ್ತ್ರಿಯಃ ।
ಸ್ವಭರ್ತೃಭಿರ್ವಿಯೋಗಂ ತಾ ನ ಗಚ್ಛಂತಿ ಯಥಾ ರಮಾ ॥ ೩೫ ॥

ಗ್ರಾಮಂ ದೇಶಾಂತರಂ ತೀರ್ಥಂ ಯೇ ಗತಾಶ್ಚ ಚಿರಂ ನರಾಃ ।
ತೇಷಾಮಾಗಮನಾರ್ಥಂ ಹಿ ಪಠನೀಯಮಿದಂ ಸದಾ ॥ ೩೬ ॥

ಯೇಷಾಂ ಭಾವೀನಿ ಕಾರ್ಯಾಣಿ ಲಬ್ಧುಂ ತ್ವರಯತೇ ಮನಃ ।
ಆನಂದಸಂಜ್ಞಿಕಂ ತೈಸ್ತು ಪಠನೀಯಂ ಪ್ರಯತ್ನತಃ ॥ ೩೭ ॥

ಪ್ರಥಮೇ ದಿವಸೇ ಕಾಂಡಮೇಕಮೇವ ಪಠೇಚ್ಛುಭಂ ।
ಪ್ರಥಮಂ ಚ ದ್ವಿತೀಯಂ ಚ ದ್ವಿತೀಯೇ ದಿವಸೇ ಪಠೇತ್ ॥ ೩೮ ॥

ಏವಂ ಕ್ರಮೇಣ ಕಾಂಡಾನಾಂ ವೃದ್ಧಿಃ ಕಾರ್ಯಾ ದಿನೇ ದಿನೇ ।
ನವಕಾಂಡಾನಿ ನವಮೇ ದಿವಸೇ ಸಂಪಠೇನ್ನರಃ ॥ ೩೯ ॥

೩೪-೩೫. ಈ ರಾಮಾಯಣವನ್ನು ಭಕ್ತಿಯಿಂದ ಕೇಳಿದ ನರರು ತಮ್ಮ ಹೆಂಡತಿಯರಿಂದ ವಿಯೋಗವನ್ನು ಹೊಂದುವುದೇ ಇಲ್ಲವು. ಈ ಆನಂದ ರಾಮಾಯಣವನ್ನು ಕೇಳಿದ ಹೆಂಗಸರು ಯಾವಾಗಲೂ ಅವರ ಗಂಡಂದಿರಿಂದ ವಿಯೋಗವನ್ನು ಹೊಂದುವುದೇ ಇಲ್ಲವು.

೩೬. ಯಾರು ಬೇರೆ ಗ್ರಾಮಕ್ಕಾಗಲೀ, ತೀರ್ಥಕ್ಕಾಗಲೀ, ದೇಶಕ್ಕಾಗಲೀ, ಹೋಗಿ ಬಹುಕಾಲ ಬಾರದಿರುವರೋ ಅವರು ಬೇಗನೆ ಬರಬೇಕಾದರೆ ಈ ರಾಮಾಯಣವನ್ನು ಓದಬೇಕು.

೩೭. ಯಾರಾದರೂ ತಮಗೆ ಬೇಕಾದ ಕೆಲಸಗಳನ್ನು ಕೈಗೂಡಿಸಿಕೊಳ್ಳ ಬೇಕಾದರೆ ಈ ರಾಮಾಯಣವನ್ನು ಪಾರಾಯಣ ಮಾಡಬೇಕು.

೩೮. ಮೊದಲನೆಯ ದಿವಸ ಒಂದು ಕಾಂಡವನ್ನು ಓದಬೇಕು. ಎರಡನೆಯ ದಿನದಲ್ಲಿ ಒಂದನೆಯದನ್ನೂ ಎರಡನೆಯದನ್ನೂ ಓದಬೇಕು.

೩೯. ಈ ರೀತಿಯಾಗಿ ದಿನದಿನಕ್ಕೂ ಒಂದೊಂದು ಕಾಂಡವನ್ನು ಹೆಚ್ಚಿಸಿ ಕೊಂಡು ಹೋಗುತ್ತಿರಬೇಕು. ಒಂಭತ್ತನೆಯ ದಿವಸ ಓಂಭತ್ತು ಕಾಂಡಗಳನ್ನೂ ಪಾರಾಯಣಮಾಡಬೇಕು.

ಅಷ್ಟಕಾಂಡಾನಿ ದಶಮೇ ಕ್ಷಯಸ್ತ್ವೇಕೇನ ವೈ ಕ್ರಮಾತ್ ।
ಸಪ್ತದಶದಿನೈರ್ಜ್ಞೇಯಮನುಷ್ಠಾನಮಿದಂ ಮಹತ್ ॥ ೪೦ ॥
ಅಥವಾ ಕ್ರಮೇಣ ಕಾಂಡಾನಿ ಪ್ರಥಮಂ ಪ್ರಥಮೇ ಪಠೇತ್ ।
ದ್ವಿತೀಯಂ ಚ ದ್ವಿತೀಯೇಽಹ್ನಿ ನವಮಂ ನವಮೇ ದಿನೇ ॥ ೪೧ ॥
ಅಷ್ಟಮಂ ದಶಮೇ ಪ್ರೋಕ್ತಂ ಕ್ಷಯಃ ಕಾರ್ಯಃ ಕ್ರಮೇಣ ಹಿ ।
ಸಪ್ತದಶದಿನೈರೇತದನುಷ್ಠಾನಂ ಸುಖಾವಹಂ ॥ ೪೨ ॥
ಅಥವಾ ಪೃಥಕ್ಕಾಂಡೇಷು ಸರ್ಗವೃದ್ಧಿಕ್ಷಯಃ ಕ್ರಮಾತ್ ।
ಏವಮೇಕದಿನನ್ಯೂನಷಣ್ಮಾಸೈಶ್ಚರೇದ್ವ್ರತಂ ॥ ೪೩ ॥
ದಿನಸಂಖ್ಯಾ ॥ ೨೦೯ ॥
ಅಥವಾ ಪ್ರಥಮೇ ಸರ್ಗಸ್ತ್ವೇಕ ಏವ ಪಠೇನ್ನರಃ ।
ದ್ವೌ ಸರ್ಗೌ ಚ ದ್ವಿತೀಯೇಽಹ್ನಿ ವೃದ್ಧಿಸ್ತ್ವೇವಂ ಕ್ರಮೇಣ ಹಿ ॥ ೪೪ ॥

---

೪೦. ಹತ್ತನೆಯ ದಿವಸ ಎಂಟು ಕಾಂಡಗಳನ್ನು ಓದಬೇಕು. ಈ ರೀತಿಯಾಗಿ ಒಂದೊಂದು ಕಾಂಡವನ್ನೂ ಕೊನೆಯಿಂದ ಕಡಿಮೆಮಾಡಿಕೊಂಡು ಬರಬೇಕು. ಹೀಗೆ ಮಾಡುವುದಕ್ಕೆ ಹದಿನೇಳು ದಿನಗಳು ಬೇಕಾಗುವುದು.

೪೧. ಆ ಕ್ರಮವಲ್ಲದೆ ಮತ್ತೊಂದು ಕ್ರಮವು ಇರುವುದು. ಮೊದಲನೆಯ ದಿವಸ ಮೊದಲನೆಯ ಕಾಂಡವನ್ನೂ ಎರಡನೆಯ ದಿವಸ ಎರಡನೆಯ ಕಾಂಡವನ್ನೂ ಒಂಭತ್ತನೆಯ ದಿನ ಒಂಭತ್ತನೆಯ ಕಾಂಡವನ್ನೂ ಓದಬೇಕು.

೪೨. ಹತ್ತನೆಯ ದಿವಸ ಎಂಟನೆಯ ಕಾಂಡವನ್ನೂ ಓದಬೇಕು. ಈ ರೀತಿಯಾಗಿ ಒಂದೊಂದನ್ನು ಕಡಿಮೆಮಾಡಿಕೊಂಡು ಓದಬೇಕು. ಹೀಗೆ ಹದಿನೇಳು ದಿನಗಳಲ್ಲಿ ಮುಗಿಸಬೇಕು. ಇದು ಮೇಲಿನ ಪಾರಾಯಣಕ್ಕಿಂತಲೂ ಕೊಂಚ ಸುಲಭವಾಗಿ ಇರುವುದು.

೪೩. ಇಲ್ಲದಿದ್ದರೆ ಒಂದೊಂದು ಕಾಂಡದಲ್ಲಿಯೂ ದಿನ ದಿನಕ್ಕೂ ಒಂದೊಂದು ಸರ್ಗದಂತೆ ಓದುತ್ತ ಹೋಗಿ ಮುಗಿದಮೇಲೆ ಕೊನೆಯಿಂದ ಹಿಂದಕ್ಕೆ ಓದುತ್ತ ಬಂದು ಕಡಿಮೆಯನ್ನು ಮಾಡಿಕೊಳ್ಳಬೇಕು. ಈ ರೀತಿಯಾಗಿ ಒಂದು ದಿನ ಕಡಿಮೆಯಾಗಿ ಏಳುತಿಂಗಳಗಳವರೆಗೆ ವ್ರತವನ್ನು ಮಾಡಬೇಕು. ದಿನ ಸಂಖ್ಯೆಯು ಇನ್ನೂರಒಂಭತ್ತಾಗುತ್ತದೆ.

೪೪. ಅಥವಾ ಮೊದಲನೆಯ ದಿನದಲ್ಲಿ ಒಂದೇ ಸರ್ಗವನ್ನು ಓದಬೇಕು. ಎರಡನೆಯ ದಿನ ಎರಡು ಸರ್ಗಗಳು. ಈ ರೀತಿಯಾಗಿ ಹೆಚ್ಚಿಸಿಕೊಳ್ಳಬೇಕು.

ನವೋತ್ತರಶತೇ ಪ್ರಾಪ್ತೇ ದಿನೇ ಕೃತ್ಸ್ನಂ ತ್ವಿದಂ ಪಠೇತ್ ।
ಪುನಃ ಕ್ಷಯೋಽನುಕ್ರಮತಸ್ತ್ವೇವಂ ಸಪ್ತದಿನೋತ್ತರೈಃ ॥ ೪೫ ॥
ಸಪ್ತಮಾಸೈರನುಷ್ಠಾನಂ ಜ್ಞೇಯಂ ಕಾರ್ಯೈಕಸಾಧನಂ ।
ದಿನಸಂಖ್ಯಾ ॥ ೨೧೭ ॥
ಅಥವಾ ಪ್ರಥಮೇ ಚಾಹ್ನಿ ಸರ್ಗಂ ಪ್ರಾಥಮಿಕಂ ಪಠೇತ್ ॥ ೪೬ ॥
ದ್ವಿತೀಯೇಽಹ್ನಿ ದ್ವಿತೀಯಂ ಚ ತೃತೀಯೇಽಹ್ನಿ ತೃತೀಯಕಂ ।
ನವೋತ್ತರಶತೇ ಪ್ರಾಪ್ತೇ ದಿನೇ ಚ ಚರಮಂ ಪಠೇತ್ ॥ ೪೭ ॥
ದಶೋತ್ತರಶತೇ ಪ್ರಾಪ್ತೇ ಹ್ಯಷ್ಟೋತ್ತರಶತಾಭಿದಂ ।
ಪಠೇತ್ಸರ್ಗಂ ಕ್ರಮೇಣೈವ ಶಿಷ್ಯ ಸಪ್ತದಿನೋತ್ತರೈಃ ॥ ೪೮ ॥
ಸಪ್ತಮಾಸೈರನುಷ್ಠಾನಂ ಜ್ಞೇಯಂ ಸಾಧಾರಣಂ ನೃಣಾಂ ।
ಪಂಚಾನುಷ್ಠಾನಭೇದಾಶ್ಚ ಮಯ್ಯೈವಂ ಪರಿಕೀರ್ತಿತಾಃ ॥ ೪೯ ॥
ಅನುಷ್ಠಾನಸಮಾಪ್ತೌ ಹಿ ಹೋಮಃ ಕಾರ್ಯೋ ಯಥಾವಿಧಿ ।
ಪೃಥಕ್‌ಶ್ಲೋಕಂ ಸಮುಚ್ಚಾರ್ಯ ಸ್ವಾಹಾಂತಂ ಪಾಯಸೈಃ ಫಲೈಃ ॥ ೫೦ ॥

---

೪೫. ನೂರಒಂಭತ್ತನೆಯ ಸರ್ಗವು ಬಂದಮೇಲೆ ಪೂರ್ತಿಯಾಗಿ ಒದಬೇಕು. ಮತ್ತೆ ಒಂದೊಂದನ್ನಾಗಿ ಕೊನೆಯಿಂದ ಬಿಡುತ್ತ ಬರಬೇಕು. ಇದಕ್ಕೆ ಇನ್ನೂರ ಹದಿನೇಳುದಿನಗಳಾಗುವುವು.

೪೬. ಅಥವಾ ಮೊದಲನೆಯ ದಿವಸ ಮೊದಲನೆಯ ಸರ್ಗವನ್ನು ಓದಬೇಕು. ಎರಡನೆಯ ದಿವಸ ಎರಡನೆಯ ಸರ್ಗವನ್ನು ಓದಬೇಕು. ಮೂರನೆಯ ದಿವಸ ಮೂರನೆಯ ಸರ್ಗವನ್ನು ಓದಬೇಕು. ನೂರಒಂಭತ್ತನೆಯ ದಿನ ಬಂದಾಗ ಕೊನೆಯದನ್ನು ಓದಬೇಕು.

೪೭–೪೯. ನೂರಹತ್ತನೆಯ ದಿವಸ ನೂರ ಎಂಟನೆಯ ಸರ್ಗವನ್ನು ಓದಬೇಕು. ಹೀಗೆ ಓದಿದರೆ ಏಳು ತಿಂಗಳಮೇಲೆ ಏಳು ದಿನಗಳು ಬೇಕಾಗುವುದು. ಇದು ಜನರಿಗೆ ಆಚರಿಸಲು ಸಾಧ್ಯವಾಗುವುದು. ಈ ರೀತಿಯಾಗಿ ಇದನ್ನು ಐದು ಬಗೆಯಾಗಿ ಆಚರಿಸಬಹುದು. ಈ ರೀತಿಯಾದ ಭೇದಗಳನ್ನು ಹೇಳಿದ್ದೇನೆ.

೫೦. ಅನುಷ್ಠಾನವು ಪೂರ್ತಿಯಾದಮೇಲೆ ಕ್ರಮವಾಗಿ ಹೋಮಮಾಡಬೇಕು. ಒಂದೊಂದು ಶ್ಲೋಕವನ್ನೂ ಹೇಳುತ್ತ ಕೊನೆಯಲ್ಲಿ ಸ್ವಾಹಾಎಂದು ಹೇಳಿ ಪಾಯಸದಿಂದಲೋ ಫಲದಿಂದಲೋ ಹೋಮಮಾಡಬೇಕು.

ನವಾನ್ನೇನಾಥವಾ ಕಾರ್ಯೋ ಹೋಮೋ ದ್ವಿಜವರೈಸ್ಸಹ ।
ಬ್ರಾಹ್ಮಣಾನ್ಭೋಜಯೇತ್ತತ್ರ ತದನುಷ್ಠಾನದಿನೈರ್ಮಿತಾನ್ ॥ ೫೧ ॥

ಏತತ್ಪ್ರಾತಸ್ಸಮುತ್ಥಾಯಾನಂದರಾಮಾಯಣಂ ಶುಭಂ ।
ಯೇ ಪಠಂತಿ ನರಾ ಭಕ್ತ್ಯಾ ತೇ ಸುಖಂ ಪ್ರಾಪ್ನುವಂತಿ ಹಿ ॥ ೫೨ ॥

ದ್ವಾದಶ್ಯಾಮಪಿ ಚೇತ್ತದ್ವೈ ಪಠನೀಯಂ ಪ್ರಯತ್ನತಃ ।
ಪಾರಾಯಣಂ ನವದಿನೈಃ ಕಾರ್ಯಮಸ್ಯ ಸುಖಾವಹಂ ॥ ೫೩ ॥

ಕಾಂಡಂ ಸರ್ಗೋಽಥವಾ ಶ್ಲೋಕಸ್ತ್ವಾನಂದಾಖ್ಯಸ್ಯ ಪ್ರತ್ಯಹಂ ।
ನ ನರಾಃ ಕೀರ್ತಯಂತ್ಯತ್ರ ತೇಷಾಂ ಜನ್ಮ ನಿರರ್ಥಕಂ ॥ ೫೪ ॥

ಪುತ್ರಾರ್ಥಂ ರತಿಶಾಲಾಯಾಂ ಶೃಣೋತಿ ಪುರುಷಃ ಸ್ತ್ರಿಯಾ ।
ನಿಶಾಯಾಂ ಶಯನಾರೂಢೋ ಪುತ್ರೀಂ ಪುತ್ರಮವಾಪ್ನುಯಾತ್ ॥

---

೫೧. ಇಲ್ಲದಿದ್ದರೆ ನವಾನ್ನಗಳಿಂದ ಹೋಮವನ್ನು ಮಾಡಬೇಕು. ತಾನು ಅನುಷ್ಠಾನಮಾಡಿದ ದಿನಗಳಿಗನುಗುಣವಾಗಿ ಬ್ರಾಹ್ಮಣರನ್ನು ಭೋಜನ ಮಾಡಿಸಬೇಕು.

೫೨. ಈ ಆನಂದರಾಮಾಯಣವನ್ನು ಬೆಳಗ್ಗೆ ಎದ್ದು ಯಾರು ಪಾರಾಯಣ ಮಾಡುವರೋ ಅವರು ಉತ್ತಮವಾದ ಸುಖವನ್ನು ಹೊಂದುವರು.

೫೩. ದ್ವಾದಶಿಯು ದಿವಸ ಪ್ರಯತ್ನಪಟ್ಟು ಓದಲೇ ಬೇಕು. ಒಂಭತ್ತು ದಿನಗಳಲ್ಲಿ ಪಾರಾಯಣವನ್ನು ಮಾಡಿದರೆ ಬಹು ಸುಖವುಂಟು.

೫೪. ಆನಂದರಾಮಾಯಣವನ್ನು ಕಾಂಡವನ್ನಾಗಲಿ, ಅಥವ ಸರ್ಗವನ್ನಾಗಲಿ, ಅಥವಾ ಶ್ಲೋಕವನ್ನಾಗಲಿ, ಪ್ರತಿದಿನವೂ ಓದಬೇಕು. ಅವರ ಜನ್ಮವು ನಿರರ್ಥಕವಾಗುವುದಿಲ್ಲವೆಂದು ಜನರು ಹೇಳುತ್ತಾರೆ. ಖಂಡಿತವಾಗಿಯೂ ಸಾರ್ಥಕವಾಗುತ್ತದೆ.

೫೫. ಮಕ್ಕಳಿಲ್ಲದವರು ಗಂಡ ಹೆಂಡರಿಬ್ಬರೂ ರತಿಶಾಲೆಯಲ್ಲಿ ರಾತ್ರಿಯಲ್ಲಿ ಹಾಸಿಗೆಯಮೇಲೆ ಕುಳಿತುಕೊಂಡು ಆನಂದರಾಮಾಯಣವನ್ನು ಕೇಳಬೇಕು. ಮಕ್ಕಳಿಲ್ಲದ ಬಂಜೆಯಾಗಿದ್ದರೂ ಮಕ್ಕಳನ್ನು ಪಡೆಯುತ್ತಾರೆ.

ಶ್ರೀಮದಾನಂದರಾಮಾಯಣದಲ್ಲಿ ಶುಭಾಶುಭಗಳನ್ನು ನೋಡುವ ಕ್ರಮ.

ರಾಮನ ವಾಯುತನದ ರೀತಿಯಲ್ಲಿ ಭತ್ತವನ್ನು ಒಂಭತ್ತು ರಾಶಿಯನ್ನಾಗಿ ಇಡಬೇಕು. ಅದರಲ್ಲಿ ರಾಮಧ್ಯಾನವನ್ನು ಮಾಡಿ ಕೆಲಸವನ್ನು ಸ್ಮರಿಸಿಕೊಳ್ಳ ಬೇಕು. ನಾಲ್ಕು ಅಡಕೆಗಳನ್ನು ತೆಗೆದುಕೊಂಡು ತನಗೆ ಬೇಕಾದ ರಾಶಿಗಳಲ್ಲಿ ಆ ಅಡಕೆಗಳನ್ನು ಇಡಬೇಕು. ಅದರಲ್ಲಿ ಮೊದಲು ಹಾಕಿದ ಅಡಕೆಯ ರಾಶಿಯನ್ನು ತೆಗೆದುಕೊಳ್ಳಬೇಕು. ಆ ರಾಶಿಯ ಧಾನ್ಯವನ್ನು ಒಂಭತ್ತು ಒಂಭತ್ತಾಗಿ ಎಣಿಸಿ ಉಳಿದುದನ್ನು ಇಟ್ಟುಕೊಳ್ಳಬೇಕು. ಅದೇ ಕಾಂಡದ ಸಂಖ್ಯೆಯಾಗುವುದು. ಒಂದುಳಿದರೆ ಒಂದನೇ ಕಾಂಡವು. ಎರಡುಳಿದರೆ ಎರಡನೆಯ ಕಾಂಡವು. ಮೂರುಳಿದರೆ ಮೂರನೇ ಕಾಂಡವು. ಇದೇ ರೀತಿ ತಿಳಿಯಬೇಕು.

ಎರಡನೆಯ ಬಾರಿ ಅಡಕೆಯನ್ನಿಟ್ಟ ರಾಶಿಯನ್ನು ತೆಗೆದುಕೊಂಡು ಅದನ್ನು ಎಣಿಸಬೇಕು. ಹಿಂದೆ ಎಣಿಸಿದ ಕಾಳಿನಲ್ಲಿ ಒಂದು ಕಾಂಡದಲ್ಲಿ ಎಷ್ಟು ಸರ್ಗಗಳಿವೆ ಎಂಬುದನ್ನು ನೋಡಿಕೊಂಡು ಆ ಸರ್ಗಗಳ ಸಂಖ್ಯೆಯಷ್ಟನ್ನು ಬೇರೆ ಬೇರೆಯಾಗಿ ತೆಗೆದಿಡಬೇಕು ಶೇಷವಾದರೆ ಆ ಶೇಶದ ಸರ್ಗವೆಂದು ತಿಳಿಯಬೇಕು. ನಾಲ್ಕುಳಿದರೆ ನಾಲ್ಕನೆಯ ಸರ್ಗವು. ಎಂಟುಳಿದರೆ ಎಂಟನೆಯ ಸರ್ಗವು. ಎಂದು ತಿಳಿಯಬೇಕು. ಅಂತೆಯೇ ಮೂರನೆಯ ಅಡಕೆಯನ್ನಿಟ್ಟ ರಾಶಿಯನ್ನು ತೆಗೆದುಕೊಳ್ಳಬೇಕು ಅದನ್ನು ಹತ್ತರಿಂದ ಭಾಗಿಸಬೇಕು. ಉಳಿದುದು ಎಷ್ಟನೆಯ ಹತ್ತು ಅನಂತರ ಎಷ್ಟು ಶೇಷವೋ ಅಷ್ಟು ಹತ್ತರ ಶ್ಲೋಕವೆಂದು ತಿಳಿದುಕೊಳ್ಳಬೇಕು. ನಾಲ್ಕನೆಯ ಅಡಕೆಯನ್ನಿಟ್ಟಿರುವ ರಾಶಿಯನ್ನು ತೆಗೆದು ಕೊಳ್ಳಬೇಕು. ಅದನ್ನು ಹತ್ತರಿಂದ ಭಾಗಿಸಬೇಕು. ಶೇಷವಾದುದನ್ನು ಅಷ್ಟನೆಯ ಶ್ಲೋಕವೆಂದು ತಿಳಿಯಬೇಕು. ಅದೇ ಪ್ರಶ್ನೆಯ ಉತ್ತರದ ಶ್ಲೋಕವು. ಅದರಲ್ಲಿ ಪೂರ್ವಾರ್ಧವನ್ನು ನೋಡಿ ಶುಭಾ ಶುಭಗಳನ್ನು ತಿಳಿದುಕೊಳ್ಳಬೇಕು. ಆ ಶ್ಲೋಕದ ಪೂರ್ವಾರ್ಧದ ಕೊನೆಯಲ್ಲಿ ವಿಸರ್ಗವಿರಬಾರದು. ಐದನೆಯ ಅಕ್ಷರವು. ತ, ಥ, ದ, ಧ, ನ. ಗಳಾಗಿರಬಾರದು. ಕ್ರಿಯಾಪದವು ಲಿಙ್, ಲಿಟ್ ಆಗಿರಬಾರದು. ಹೀಗಿದ್ದರೆ ಅದು ಪ್ರಶಸ್ತವು. ಹೀಗೆ ಶುಭಾ ಶುಭಗಳನ್ನು ತಿಳಿಯಬೇಕು. ಸರ್ಗದ ಕೊನೆಯ ಶ್ಲೋಕವು ಬಂದರೆ ವಿಪರೀತ ಎಂದರೆ ವ್ಯತ್ಯಾಸವಾದ ಫಲವು ಎಂದು ತಿಳಿಯಬೇಕು.

ನವರಾಶಿಷು ವ್ರೀಹೀಣಾಂ ಧ್ಯಾತ್ವಾ ಕಾರ್ಯಂ ತು ವಿನ್ಯಸೇತ್ ।
ಪೂಗೀಫಲಾನಿ ಚತ್ವಾರಿ ಪೂರ್ವೇಣ ಕಾಂಡಮುಚ್ಯತೇ ॥ ೫೬ ॥

ದ್ವಿತೀಯೇನ ಹಿ ಸರ್ಗಸ್ತು ತೃತೀಯೇನ ಫಲೇನ ಹಿ ।
ದಶಕೋಸ್ಯ ಚ ವಿಜ್ಞೇಯಶ್ಚತುರ್ಥೇನ ಫಲೇನ ಚ ॥ ೫೭ ॥

ಶ್ಲೋಕೋ ಜ್ಞೇಯಃ ಪೂರ್ವರಾಶೇ ಸ್ಸರ್ವೇಷಾಂ ಗಣನೇರಿತಾ ।
ಸರ್ವತ್ರಾಂತ್ಯೇನ ಶ್ಲೋಕೇನ ವಿಪರೀತಂ ಫಲಂ ಸ್ಮೃತಂ ॥ ೫೮ ॥

ಏವಂ ಸರ್ವೈರ್ದರ್ಶನೀಯಶ್ಶಕುನಶ್ಚ ಶುಭೋಶುಭಃ ।
ಏವಂ ಶಿಷ್ಯ ತ್ವಯಾ ಯದ್ಯತ್ಪೃಷ್ಟಂ ತತ್ತನ್ಮಯೋದಿತಂ ॥ ೫೯ ॥

ಆನಂದರಾಮಾಯಣಮುತ್ತಮಂ
ನವೋತ್ತರಂ ಸರ್ಗಶತಂ ಮಯೇರಿತಂ ।
ಕಾಂಡಾನಿ ಯಸ್ಮಿನ್ನವ ಕೀರ್ತಿತಾನಿ ತೇ
ಹೇ ವಿಷ್ಣುದಾಸಾಘಹರಂ ಮನೋಹರಂ ॥ ೬೦ ॥

---

೫೬. ಭತ್ತವನ್ನು ಒಂಭತ್ತು ರಾಶಿಗಳಾಗಿ ಇಟ್ಟು ಕಾರ್ಯವನ್ನು ಧ್ಯಾಸಿಸಿ ಕೊಳ್ಳಬೇಕು. ಅವುಗಳಲ್ಲಿ ನಾಲ್ಕರಮೇಲೆ ನಾಲ್ಕು ಅಡಕೆಗಳನ್ನಿಡಬೇಕು. ಮೊದಲನೆಯದು ಕಾಂಡದ ಸಂಖ್ಯೆಯದು.

೫೭. ಎರಡನೆಯದು ಗರ್ಗಸಂಖ್ಯೆಯದು ಮೂರನೆಯದು ದಶಕದ ಫಲಸಂಖ್ಯೆಯದು. ನಾಲ್ಕನೆಯದು ಶ್ಲೋಕದ ಫಲದ ಸಂಖ್ಯೆಯದು.

೫೮. ಶ್ಲೋಕದ ಪೂರ್ವಾರ್ಧವೇ ನಮಗೆ ಶುಭಾ ಶುಭಕ್ಕೆ ಬೇಕಾದು ದೆಂದು ತಿಳಿಯಬೇಕು. ಎಲ್ಲಕ್ಕೂ ಹತ್ತು ಹತ್ತರಂತೆ ಸಂಖ್ಯೆಯಿರುವುದು ಸರ್ಗದ ಕೊನೆಯ ಶ್ಲೋಕವು ವಿಪರೀತ ಫಲವನ್ನು ಕೊಡುತ್ತದೆ. ಎಂದು ತಿಳಿಯಬೇಕು.

೫೯. ಈ ರೀತಿಯಾಗಿ ಎಲ್ಲರೂ ಕೂಡ ಇದರಲ್ಲಿ ಶುಭಾ ಶುಭಗಳನ್ನು ತಿಳಿಯಬೇಕು ಎಲೈ ಶಿಷ್ಯನೇ! ಈ ರೀತಿಯಾಗಿ ನೀನು ಕೇಳಿದ ವಿಷಯಗಳೆಲ್ಲವನ್ನೂ ಹೇಳಿರುವೆನು.

೬೦. ಈ ಆನಂದರಾಮಾಯಣವು ಬಹು ಉತ್ತಮವಾದುದು. ಇದರಲ್ಲಿ ನೂರಒಂಭತ್ತು ಸರ್ಗಗಳನ್ನು ಹೇಳಿದ್ದೇನೆ. ಕಾಂಡಗಳು ಒಂಭತ್ತು ಸಂಖ್ಯೆಯಿವೆ ಇವು ಪಾಪನಾಶಕವಾಗಿ ಮನೋಹರವಾಗಿದೆ.

ದಿನೇ ದಿನೇ ಪಾಪಚಯಮ್ ಪ್ರಕುರ್ವನ್ನರಃ
ಪಠೇತ್ ಶ್ಲೋಕಮಪೀಹ ಭಕ್ತ್ಯಾ ।
ವಿಮುಕ್ತಸರ್ವಾಘಚಯಃ ಪ್ರಯಾತಿ
ರಾಮಸ್ಯ ಸಾಲೋಕ್ಯಮನನ್ಯಲಭ್ಯಂ ॥ ೬೧ ॥

ಆನಂದರಾಮಾಯಣಮೇತದುತ್ತಮಂ
ಮೇ ರಾಮದಾಸಸ್ಯ ಮುಖೇನ ಕೀರ್ತಿತಂ ।
ಶ್ರೀರಾಘವೇಣೈವ ಜನಾಘನಾಶನಂ
ನಾನಾಚರಿತ್ರೈರ್ವರಕೌತುಕೈರ್ಯುತಂ ॥ ೬೨ ॥

ಧನ್ಯಸ್ಸ ವಾಲ್ಮೀಕಿಮುನಿಃ ಕವೀಶ್ವರೋ
ರಾಮಾಯಣಂ ವೈ ಶತಕೋಟಿಸಂಮಿತಂ ।
ಕೃತಂ ಪುರಾ ಯೇನ ಸವಿಸ್ತರಂ ಶುಭಂ
ಯಸ್ಮಾಚ್ಚ ಸಾರಂ ಕಥಿತಂ ಮಯಾ ತವ ॥ ೬೩ ॥

ಆನಂದರಾಮಾಯಣಮೇತದುತ್ತಮಂ
ಶ್ರೀಜಾನಕೀಕ್ರೀಡನಕೌತುಕೈರ್ಯುತಂ ।
ಶೃಣ್ವಂತಿ ಗಾಯಂತಿ ಪಠಂತಿ ವಾ ಪರಮ್
ಕುರ್ವಂತಿ ಪಾರಾಯಣಮಾದರಾಚ್ಚ ಯೇ ॥ ೬೪ ॥

---

೬೧. ಆನಂದರಾಮಾಯಣವನ್ನು ಭಕ್ತಿಯಿಂದ ಪಾರಾಯಣಮಾಡಿದರೆ ಪ್ರತಿದಿನದಲ್ಲಿಯೂ ಪಾಪಗಳನ್ನು ನಾಶಮಾಡುತ್ತದೆ. ಈ ಪಾಪಗಳೆಲ್ಲವೂ ಹೋದಮೇಲೆ ಇತರರಿಂದ ಹೊಂದಲ ಸಾಧ್ಯವಾದ ಶ್ರೀರಾಮನ ಸಾಲೋಕ್ಯವನ್ನು ಹೊಂದುತ್ತಾನೆ.

೬೨. ಈ ಉತ್ತಮವಾದ ಆನಂದರಾಮಾಯಣವನ್ನು ರಾಮದಾಸನಾದ ನಾನು ನಿನಗೆ ಹೇಳಿದ್ದೇನೆ. ಅದನ್ನು ಶ್ರೀರಾಮನೇ ನನಗೆ ಹೇಳಿರುವನು. ಇದು ಅನೇಕ ಬಗೆಯ ಚರಿತ್ರೆಯಿಂದ ಕೂಡಿಕೊಂಡು ಮನೋಹರವಾಗಿರುವುದು.

೬೩. ಶತಕೋಟಿ ಸಂಖ್ಯೆಯುಳ್ಳ ರಾಮಾಯಣವನ್ನು ರಚಿಸಿರುವ ಆ ವಾಲ್ಮೀಕಿಯು ಬಹು ಧನ್ಯನು ಆ ವಾಲ್ಮೀಕಿಯು ಪೂರ್ವದಲ್ಲಿ ರಚಿಸಿದ ಶತಕೋಟಿರಾಮಾಯಣದ ಸಾರವನ್ನು ತೆಗೆದುಕೊಂಡೇ ನಾನು ಈ ಸಾರ ರಾಮಾಯಣವನ್ನು ಹೇಳಿರುವೆನು.

೬೪–೬೫. ಈ ಉತ್ತಮವಾದ ಆನಂದರಾಮಾಯಣವು ಜಾನಕಿಯ ಕ್ರೀಡೆಗಳಿಂದ ಕೂಡಿ ಮನೋಹರವಾಗಿರುವುದು. ಇದನ್ನು ಹೇಳಿದರೂ,

ಲಭಂತಿ ಪುತ್ರಾನತಿಬುದ್ಧಿಮತ್ತರಾನ್
ಸ್ತ್ರೀಶ್ಚಾಪಿ ಪೌತ್ರಾನ್ ಪರಮಾನ್ ಮನೋಹರಾನ್ ।
ಧನಾನಿ ಧಾನ್ಯಾನಿ ಪಶೂಂಶ್ಚ ಮಾನವಾಃ
ಶ್ರೀರಾಮಚಂದ್ರಸ್ಯ ಪದಂ ಪ್ರಯಾಂತಿ ತೇ ॥ ೬೫ ॥

ಆನಂದಸಂಜ್ಞಂ ಪಠತಶ್ಚ ನಿತ್ಯಂ
ಶ್ರೋತುಶ್ಚ ಭಕ್ತ್ಯಾ ಲಿಖಿತುಶ್ಚ ರಾಮಃ ।
ಅತಿಪ್ರಸನ್ನಶ್ಚ ಸದಾ ಸಮೀಪೇ
ಸೀತಾಸಮೇತಃ ಶ್ರಿಯಮಾತನೋತಿ ॥ ೬೬ ॥

ಆನಂದರಾಮಾಯಣಜಾಹ್ನವೀಯಂ
ಪಾಪಾಪಹಂತ್ರೀಮಲಿನಸ್ಯ ಜಂತೋಃ ।
ಆನಂದರಾಮಾಯಣಕಾಮಧೇನು
ಸ್ತ್ವಿಯಂ ಜನಾನಾಮತಿಕಾಮದೋಗ್ಧ್ರೀ ॥ ೬೭ ॥

ಕೇಳಿದರೂ, ಓದಿದರೂ, ಗಾನಮಾಡಿದರೂ, ಪಾರಾಯಣಮಾಡಿದರೂ, ಅವರು ಬುದ್ಧಿವಂತರಾದ ಮಕ್ಕಳನ್ನು ಹೊಂದುವರು ಉತ್ತಮರಾದ ಹೆಂಗಸರನ್ನು ಹೊಂದುವರು. ಮನೋಹರವಾದ ಮೊಮ್ಮಕ್ಕಳನ್ನು ಹೊಂದುವರು. ಧನ, ಧಾನ್ಯ, ಪಶು, ಇವುಗಳನ್ನು ಹೊಂದಿ ಕೊನೆಯಲ್ಲಿ ಶ್ರೀರಾಮಚಂದ್ರನ ಪದವನ್ನು ಹೊಂದುವರು.

೬೬ ಈ ಆನಂದರಾಮಾಯಣವನ್ನು ನಿತ್ಯವೂ ಓದಿದರೂ, ಕೇಳಿದರೂ, ಬರೆದರೂ, ಅವರಿಗೆ ಶ್ರೀರಾಮನು ಬಹು ಪ್ರಸನ್ನನಾಗಿ ಸೀತಾಸಮೇತನಾಗಿ ಅವನ ಬಳಿಯಲ್ಲಿಯೇ ಇರುತ್ತ ಒಳ್ಳೆಯದನ್ನೇ ಮಾಡುತ್ತಿರುವನು.

೬೭. ಈ ಆನಂದರಾಮಾಯಣವೆಂಬ ಗಂಗೆಯು ಪಾಪವೆಂಬ ಕೊಳೆಯುಳ್ಳವನ ಕೊಳೆಯನ್ನು ನಾಶಮಾಡುತ್ತದೆ. ಈ ಆನಂದರಾಮಾಯಣವೆಂಬ ಕಾಮಧೇನುವು ಜನಗಳಿಗೆ ಇಷ್ಟಾರ್ಥವನ್ನು ಕೊಡುತ್ತದೆ.

ರಾಮಾಯಣಂ ಜನಮನೋಹರಮಾದಿಕಾವ್ಯಂ
ಬ್ರಹ್ಮಾದಿಭಿಸ್ಸುರವರೈರಪಿ ಸಂಸ್ತುತಂ ಚ ।
ಶ್ರದ್ಧಾನ್ವಿತಃ ಪಠತಿ ಯಶ್ಶೃಣುಯಾತ್ಸ ನಿತ್ಯಂ
ವಿಷ್ಣೋಃ ಪ್ರಯಾತಿ ಸದನಂ ಸ ವಿಶುದ್ಧದೇಹಃ ॥ ೬೮ ॥

ನವೋತ್ತರಶತೈಸ್ಸರ್ಗೈ ರಾಮಕೀರ್ತನಮಾಲಿಕಾಂ ।
ಕೃತ್ವಾ ಕಂಠೇ ಸುಖಂ ತಿಷ್ಠ ಶಿಷ್ಯೇಮಾಂ ತ್ವಂ ಮಯೋದಿತಾಂ ॥ ೬೯ ॥

॥ ಶ್ರೀ ಶಿವ ಉವಾಚ ॥

ಆನಂದರಾಮಚರಿತಮಿದಂ ಸ್ವೀಯಗುರೋರ್ಮುಖಾತ್ ।
ಶ್ರುತ್ವಾ ಸ ವಿಷ್ಣುದಾಸಸ್ತಂ ನನಾಮಾರ್ಚ್ಯ ಪುನಃ ಪುನಃ ॥ ೭೦ ॥

ರಾಮದಾಸಃ ಸ್ವಶಿಷ್ಯಾಯಾನಂದರಾಮಾಯಣಂ ಪ್ರಿಯೇ ।
ಏವಮುಕ್ತ್ವಾ ಮುನಿಸ್ಸಂಧ್ಯಾಂ ಕರ್ತುಂ ಗೋದಾಂ ಗಮಿಷ್ಯತಿ ॥ ೭೧ ॥

---

೬೮. ಈ ಆನಂದರಾಮಾಯಣವು ಜನಗಳಿಗೆ ಮನೋಹರವಾದುದು. ಆದಿಕಾವ್ಯವಾಗಿರುವುದು. ಬ್ರಹ್ಮನೇ ಮುಂತಾದ ದೇವತಾಶ್ರೇಷ್ಠರಿಂದ ಸ್ತುತಿಸಲ್ಪಟ್ಟಿರುವುದು. ಆದ್ದರಿಂದ ಇದನ್ನು ಯಾವನು ಪಠಿಸುವನೋ ಅವನು ಶುದ್ಧವಾದ ದೇಹವುಳ್ಳವನಾಗಿ ವಿಷ್ಣುವಿನ ಪದವಾದ ವೈಕುಂಠವನ್ನು ಹೊಂದುವನು.

೬೯. ನೂರಒಂಭತ್ತು ಸರ್ಗಗಳಿಂದ ಕೂಡಿರುವ ಈರಾಮ ಕೀರ್ತನ ಮಾಲಿಕೆಯನ್ನು ಕತ್ತಿನಲ್ಲಿ ಧರಿಸಿಕೊಂಡು ಎಲೈ ಶಿಷ್ಯನೇ! ಸುಖವಾಗಿದ್ದುಕೊಂಡಿರು. ಇದನ್ನು ನಾನು ನಿನಗೆ ಹೇಳಿರುವೆನು.

೭೦. ಶ್ರೀ ಶಿವನು ಹೇಳಿದನು-ಈ ಆನಂದರಾಮಾಯಣವನ್ನು ಶ್ರೀರಾಮದಾಸನ ಮುಖದಿಂದ ವಿಷ್ಣುದಾಸನು ಕೇಳಿ ಆ ರಾಮದಾಸನಿಗೆ ಪೂಜೆಮಾಡಿ ಅನೇಕಬಾರಿ ನಮಸ್ಕರಿಸುವನು.

೭೧. ಎಲೈ ಪಾರ್ವತಿಯೇ! ರಾಮದಾಸನು ತನ್ನ ಶಿಷ್ಯನಿಗೆ ಈ ರೀತಿಯಾಗಿ ಆನಂದರಾಮಾಯಣವನ್ನು ಹೇಳಿ ಸಂಧ್ಯಾವಂದನೆಯನ್ನು ಮಾಡಲು ಗೋದಾವರಿಗೆ ಹೋಗುವನು.

ಏವಂ ದೇವಿ ತವಾಗ್ರೇದ್ಯ ಮಯಾಪಿ ಪರಿಕೀರ್ತಿತಂ ।
ಆನಂದರಾಮಚರಿತಂ ಶ್ರವಣಾತ್ಪುಣ್ಯವರ್ಧನಂ ॥ ೭೨ ॥

ರಾಮಕೀರ್ತನಮಾಲಾಯಾಂ ಮೇರುಸ್ಥಾನೇ ತ್ವಯಂ ಮಹಾನ್ ।
ಸರ್ಗೋ ಮಯಾ ತೇ ಕಥಿತಃ ಶ್ರವಣಾನ್ಮಂಗಳಪ್ರದಃ ॥ ೭೩ ॥

॥ ಶ್ರೀ ಪಾರ್ವತ್ಯುವಾಚ ॥

ಯದಾ ವಾಲ್ಮೀಕಿನಾ ದೇವ ಕೃತಂ ರಾಮಾಯಣಂ ವರಂ ।
ತದಾ ಕ್ವ ರಾಮದಾಸಸ್ಸ ಸಂವಾದೋಽಸ್ಮಿಂಸ್ತ್ವಯಾಕಥಿ ॥ ೭೪ ॥

ಕ್ವ ತದಾ ವಿಷ್ಣುದಾಸೋಪಿ ಸಂಶಯೋ ಮೇಽತ್ರ ಜಾಯತೇ ।

॥ ಶ್ರೀ ಶಿವ ಉವಾಚ ॥

ತ್ರೈಕಾಲಿಕಜ್ಞಾನದೃಷ್ಟ್ಯಾ ಮುನಿನಾತ್ರ ಕಥಾಂತರೇ ॥ ೭೫ ॥

---

೭೨. ಎಲೈ ದೇವಿಯೇ ಈ ರೀತಿಯಾಗಿ ಈ ರಾಮಾಯಣವನ್ನು ನಿನ್ನೆದುರಿಗೆ ಹೇಳಿರುವೆನು. ಇದನ್ನು ಕೇಳುವುದರಿಂದ ಪುಣ್ಯವು ಹೆಚ್ಚುತ್ತದೆ.

೭೩. ಶ್ರೀರಾಮನ ಕೀರ್ತನೆಯ ಮಾಲಿಕೆಗಳರೂಪದಲ್ಲಿ ಈ ಆನಂದ ರಾಮಾಯಣವು ಇರುತ್ತದೆ. ಅವುಗಳಲ್ಲಿ ಈ ಆನಂದರಾಮಾಯಣದ ಈ ಸರ್ಗವು ಮೇರುವಿನಸ್ಥಾನದಲ್ಲಿದೆ [ಮೇರುವೆಂದರೆ ಮಾಲೆಯಲ್ಲಿ ಹಾಕಿರುವ ನಾಯಕ ಮಣಿ] ಇದನ್ನು ಕೇಳಿದರೆ ಬಹುವಾಗಿ ಮಂಗಳವು ಉಂಟಾಗುತ್ತದೆ.

೭೪ ಶ್ರೀ ಪಾರ್ವತಿಯು ಹೇಳಿದಳು—ಎಲೈ ನಾಥನೇ ! ಈ ರಾಮಾಯಣ ವನ್ನು ವಾಲ್ಮೀಕಿಯು ಹಿಂದೆ ಮಾಡಿದನಷ್ಟೆ ! ಆಗ ಈ ರಾಮದಾಸ ವಿಷ್ಣುದಾಸರೆಲ್ಲಿದ್ದರು. ನೀನು ಈ ರಾಮಾಯಣದಲ್ಲಿ ಅವರ ಸಂವಾದವನ್ನು ಹೇಳಿರುತ್ತೀಯಲ್ಲ ?

೭೫. ಈ ವಿಷಯದಲ್ಲಿ ನನಗೆ ಬಹುವಾದ ಸಂಶಯವು ಉಂಟಾಗಿರುವುದು. ಶ್ರೀ ಶಿವನು ಹೇಳಿದನು-ಎಲೈ ಪ್ರಿಯಳೇ ! ಆ ವಾಲ್ಮೀಕಿಗೆ ಭೂತ, ಭವಿಷ್ಯದ್ವರ್ತಮಾನಕಾಲಗಳ ಜ್ಞಾನವುಂಟು. ಆದ್ದರಿಂದ ಅವನು ಇದನ್ನು ಸೇರಿಸಿ ಹೇಳಿರುವನು.

ಉಭಯೋರ್ಭಾವಿಸಂವಾದಸ್ತೋಽಪಿ ಪೂರ್ವಂ ಪ್ರವರ್ಣಿತಃ ।
ಯಥಾ ರಾಮಸ್ಯ ಚರಿತಂ ರಾಮಾತ್ಪೂರ್ವಂ ಪ್ರವರ್ಣಿತಂ ॥ ೭೬ ॥

ಸಂದೇಹೋಽತ್ರ ತ್ವಯಾ ನೈವ ಕಾರ್ಯಃ ಪರ್ವತಕನ್ಯಕೇ ।
ರಾಮದಾಸಮುಖೇನೈತದ್ರಾಘವೇಣೈವ ವರ್ಣಿತಂ ॥ ೭೭ ॥

ಆನಂದರಾಮಾಯಣಮಾದರೇಣ
ಶ್ರೀರಾಮಚಂದ್ರೇಣ ಮುನೇರ್ಮುಖೇನ ।
ತದ್ರಾಮದಾಸಸ್ಯ ಮುದೈವ ಪ್ರೋಕ್ತಂ
ಭಕ್ತಿಪ್ರದಂ ಮುಕ್ತಿದಮೇತದತ್ರ ॥ ೭೮ ॥

ಆನಂದರಾಮಾಯಣಮಾದರೇಣ
ಪುತ್ರೇ ಪ್ರಜಾತೇ ಪಠನೀಯಮೇತತ್ ।
ವಿವಾಹಕಾಲೇ ವ್ರತಬಂಧಕಾಲೇ
ಶ್ರಾದ್ಧೇ ಪಠೇತ್ಪರ್ವಣಿ ಮಂಗಳೇ ಚ ॥ ೭೯ ॥

---

೭೬. ಆದ್ದರಿಂದಲೇ ಈ ಗುರುಶಿಷ್ಯರಿಬ್ಬರಿಗೂ ನಡೆಯುವ ಸಂವಾದವನ್ನು ಹೇಳಿರುವೆನು. ಆ ಜ್ಞಾನದೃಷ್ಟಿಯಿಂದಲೇ ರಾಮನಚರಿತ್ರೆಯನ್ನು ರಾಮನು ಹುಟ್ಟುವುದಕ್ಕೆ ಮೊದಲೇ ಹೇಳಿರುವನಲ್ಲವೆ.

೭೭. ಎಲೈ ಪಾರ್ವತಿಯೇ! ಈ ವಿಷಯದಲ್ಲಿ ನೀನು ಸಂದೇಹವನ್ನು ಪಡಬೇಡ. ಇದನ್ನು ರಾಮನೇ ರಾಮದಾಸನ ಬಾಯಿಂದಹೇಳಿರುವನು.

೭೮. ಈ ಆನಂದರಾಮಾಯಣವನ್ನು ಶ್ರೀ ರಾಮಚಂದ್ರನೇ ಮುನಿಯ ಮುಖದಿಂದ ಹೇಳಿರುವನು. ಇದು ಜನರಿಗೆ ಭಕ್ತಿಯನ್ನೂ ಕೊಡುತ್ತದೆ. ಮುಕ್ತಿಯನ್ನೂ ಕೊಡುತ್ತದೆ

೭೯. ಈ ಆನಂದರಾಮಾಯಣವನ್ನು ಮಗನು ಹುಟ್ಟಿದಾಗ ಭಕ್ತಿಯಿಂದ ಓದಬೇಕು. ವಿವಾಹಕಾಲದಲ್ಲಿಯೂ, ಪರ್ವಕಾಲದಲ್ಲಿಯೂ, ಮಂಗಳಕಾಲ ದಲ್ಲಿಯೂ ಭಕ್ತಿಯಿಂದ ಓದಬೇಕು.

ಆನಂದರಾಮಾಯಣಮಾದರೇಣ
ಕಾರಾಗೃಹಸ್ಥಸ್ಯ ವಿಮುಕ್ತಿಕಾಮಾತ್ ।
ಉತ್ಪಾತಶಾಂತ್ಯೈ ಭಯನಾಶನಾಯ
ಪ್ರಭೋಃ ಕೃಪಾರ್ಥಂ ಪಠನೀಯಮೇತತ್ ॥ ೮೦ ॥

ಆನಂದರಾಮಾಯಣಮಾದರೇಣ
ಶೃಣೋತಿ ವಾ ಶ್ರಾವಯತೇ ಚ ಭಕ್ತ್ಯಾ ।
ಸ್ವಕೀಯಕಾಮಾನಖಿಲಾನವಾಪ್ಯ
ವೈಕುಂಠಲೋಕಂ ಖಲು ಗಚ್ಛತಿ ಸ್ವೈಃ ॥ ೮೧ ॥

ಆನಂದರಾಮಾಯಣತೋಽಧಿಕಾನಿ
ನ ಸಂತಿ ತೀರ್ಥಾನಿ ಹರೇಃ ಸ್ಥಲಾನಿ ।
ಕ್ಷೇತ್ರಾಣಿ ದಾನಾನ್ಯಪಿ ಪುಣ್ಯದಾನಿ
ತಥಾ ಪುರಾಣಾನ್ಯಥ ಕೀರ್ತಿತಾನಿ ॥ ೮೨ ॥

---

೮೦. ಕಾರಾಗೃಹದಲ್ಲಿ ಇರುವವನು. ಬಿಡುಗಡೆಯನ್ನು ಹೊಂದಬೇಕಾದರೆ ಈ ಆನಂದರಾಮಾಯಣವನ್ನು ಪಾರಾಯಣಮಾಡಬೇಕು. ಉತ್ಪಾತಗಳ ಶಾಂತಿಗೂ, ಭಯಬಂದಾಗ, ಅದು ಹೋಗವುದಕ್ಕೂ ಪ್ರಭುಗಳ ದಯೆಯು ಉಂಟಾಗುವುದಕ್ಕೂ ಇದನ್ನು ಓದಬೇಕು.

೮೧. ಈ ಆನಂದರಾಮಾಯಣವನ್ನು ಯಾವನು ಭಕ್ತಿಯಿಂದ ಓದುವನೋ ಅಥವಾ ಕೇಳುವನೋ ಅಥವಾ ಹೇಳಿಸುವನೋ, ಅವನು ತನ್ನ ಇಷ್ಟಾರ್ಥವನ್ನು ಹೊಂದಿ ಕೊನೆಗೆ ವೈಕುಂಠವನ್ನು ಹೊಂದುವನು.

೮೨. ಆನಂದರಾಮಾಯಣವನ್ನು ಓದುವುದಕ್ಕಿಂತಲೂ ಹರಿಯ ಪುಣ್ಯಸ್ಥಳಗಳು ಬೇರೆ ಇಲ್ಲವೇ ಇಲ್ಲ. ಕ್ಷೇತ್ರಗಳೂ ಇಲ್ಲ ಪುಣ್ಯವನ್ನು ಕೊಡುವ ದಾನಗಳೂ ಇಲ್ಲ. ಇದಕ್ಕಿಂತಲೂ ಪುಣ್ಯಕರವಾದ ಕೀರ್ತನೆಗಳೂ ಇಲ್ಲ

ಆನಂದರಾಮಾಯಣಮೇತದುತ್ತಮಂ
ಪ್ರೋಕ್ತಂ ಮಯಾ ತೇ ಗಿರಿಜೇ ಸವಿಸ್ತರಂ ।
ತ್ವಂ ಚಿಂತಯಸ್ವಾಘಹರಂ ನಿರಂತರಂ
ಮನೋಹರಂ ಲಪ್ಸ್ಯಸಿ ರಾಘವೇ ಮತಿಂ ॥ ೬೩ ॥

ರಾಮೋ ಹತ್ವಾ ದಶಾಸ್ಯಂ ದ್ವಿಜವಚನಗುರುತ್ವೇನ ಯಾತ್ರಾಶ್ಚ ಯಜ್ಞಾ
ಕೃತ್ವಾತ್ವ ಭುಕ್ತ್ವಾತಿಭೋಗಾನವನಿತಲವಿಶಂತೀಂ ಗೃಹೀತ್ವಾಥ ಸೀತಾಂ ।
ಲಬ್ಧ್ವಾತ್ವ ನಾನಾಸ್ನುಷಾಸ್ತ್ವಾಸ್ತ್ವವನಿತಲಗತಾನ್ಪಾರ್ಥಿವಾದೀಂಶ್ಚ ಜಿತ್ವಾ
ಕೃತ್ವಾ ನಾನೋಪದೇಶಾನ್ ಗಜಪುರನಿಕಟೇ ಸ್ವೀಯಲೋಕಂ ಜಗಾಮ ॥

ವಾಮೇ ಭೂಮಿಸುತಾ ಪುರಸ್ತು ಹನುಮಾನ್ ಪೃಷ್ಠೇ ಸುಮಿತ್ರಾಸುತ
ಶ್ಶತ್ರುಘ್ನೋ ಭರತಶ್ಚ ಪಾರ್ಶ್ವದಳಯೋರ್ವಾಯವ್ಯಕೋಣಾದಿಷು ।
ಸುಗ್ರೀವಶ್ಚ ವಿಭೀಷಣಶ್ಚ ಯುವರಾಟ್ ತಾರಾಸುತೋ ಜಾಂಬವಾನ್
ಮಧ್ಯೇ ನೀಲಸರೋಜಕೋಮಲರುಚಿಂ ರಾಮಂ ಭಜೇ ಶ್ಯಾಮಲಂ ॥

---

೬೩. ಎಲೈ ಗಿರಿಜೆಯೆ ! ಉತ್ತಮವಾದ ಈ ಆನಂದರಾಮಾಯಣವನ್ನು ನಿನಗೆ ನಾನು ಹೇಳಿರುವೆನು. ಪಾಪನಾಶಕವಾದ ಇದನ್ನು ನೀನುಯಾವಾಗಲೂ ಸ್ಮರಿಸುತ್ತಿರು. ಆ ರೀತಿಯಾಗಿ ಚಿಂತಿಸಿದರೆ ರಾಘವನಲ್ಲಿ ಭಕ್ತಿಯನ್ನು ಹೊಂದುತ್ತೀಯೆ. ಇಷ್ಟಾರ್ಥಗಳೂ ಲಭಿಸುತ್ತವೆ.

೬೪. ರಾಮನು ರಾವಣನನ್ನು ಕೊಂದು ಬ್ರಾಹ್ಮಣನ ಮಾತಿನಲ್ಲಿ ಗೌರವವನ್ನು ಇಟ್ಟು ಯಾತ್ರೆಗಳನ್ನೂ, ಯಜ್ಞಗಳನ್ನೂಮಾಡಿ ಭೋಗಗಳನ್ನು ಭೋಗಿಸಿ ಭೂಮಿಯೊಳಕ್ಕೆ ಹೋಗುತ್ತಿದ್ದ ಸೀತೆಯನ್ನು ಹೊಂದಿ ಅವಳೊಡನೆ ಸುಖವಾಗಿದ್ದು ಅನೇಕ ಜನಸೊಸೆಯರನ್ನು ಹೊಂದಿ ಭೂಲೋಕದಲ್ಲಿದ್ದ ರಾಜರೆಲ್ಲರನ್ನೂ ಜಯಿಸಿ ಎಲ್ಲರಿಗೂ ವಿಧ ವಿಧವಾಗಿ ಉಪದೇಶಗಳನ್ನು ಮಾಡಿ ಹಸ್ತಿನಾಪುರದ ಬಳಿಯಲ್ಲಿ ವೈಕುಂಠಕ್ಕೆ ಪ್ರಯಾಣಮಾಡಿದನು.

೬೫. ಎಡಗಡೆಯಲ್ಲಿ ಸೀತೆಯನ್ನೂ ಎದುರಿನಲ್ಲಿ ಹನುಮಂತನನ್ನೂ ಹಿಂದುಗಡೆಯಲ್ಲಿ ಲಕ್ಷ್ಮಣನನ್ನೂ, ಅಕ್ಕಪಕ್ಕಗಳಲ್ಲಿ ಭರತಶತ್ರುಘ್ನರನ್ನೂ, ವಾಯವ್ಯಾದಿಮೂಲೆಗಳಲ್ಲಿ ಸುಗ್ರೀವ, ವಿಭೀಷಣ, ಅಂಗದ, ಜಾಂಬವಂತರನ್ನೂಕುಳ್ಳಿರಿಸಿ ಕೊಂಡು ನೈದಿಲೆಯಂತೆ ನೀಲನಾದ ತಾನು ಮಧ್ಯದಲ್ಲಿ ಕುಳಿತುಕೊಂಡಿರುವ ಮನೋಹರನಾದ ಶ್ರೀ ರಾಮನನ್ನು ಧ್ಯಾನಿಸುತ್ತೇನೆ.

ಆನಂದರಾಮಾಯಣಹಾರಕೋಪಮಂ
ಯೇ ಪೂರ್ಣಕಾಂಡಂ ಚರಮಂ ನರೋತ್ತಮಾಃ ।
ಪಠಂತಿ ಶೃಣ್ವಂತಿ ಹರೇಃ ಪರಂ ಪದಂ
ಗಚ್ಛಂತಿ ಪೂರ್ಣೇಪ್ಸಿತಮಾಲಭಂತಿ ತೇ || ೮೬ ||

ಆನಂದರಾಮಾಯಣಮೇತದುತ್ತಮಂ
ಜಪ್ಯಂ ಪವಿತ್ರಂ ಶೃವಣೀಯಮಾದರಾತ್ ।
ಯನ್ಮಂಗಳಾನಾಮಪಿ ಮಂಗಳಪ್ರದಂ
ಸ್ಮರಾಮಿ ನಿತ್ಯಂ ಪ್ರಣಮಾಮಿ ಸಾದರಾತ್ || ೮೭ ||

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಪೂರ್ಣಕಾಂಡೇ ಪಾರ್ವತೀ ಪರಮೇಶ್ವರ ಸಂವಾದೇ ತಥಾ ರಾಮದಾಸ ವಿಷ್ಣುದಾಸ ಸಂವಾದೇ ಗ್ರಂಥಫಲ ಸ್ರುತಿರ್ನಾಮ ನವಮಸ್ಸರ್ಗಃ ಸಮಾಪ್ತಃ

ಇತಿ ಪೂರ್ಣಕಾಂಡಂ ನವಮಂ ಸಂಪೂರ್ಣಂ

---

೮೬. ಆನಂದರಾಮಾಯಣಕ್ಕೆ ಸುವರ್ಣದಂತಿರುವ ಈ ಕೊನೆಯದಾದ ಪೂರ್ಣಕಾಂಡವನ್ನು ಯಾರುಹೇಳುವರೋ ಅಥವಾ ಕೇಳುವರೋ ಅವರು ತಮ್ಮ ಇಷ್ಟಾರ್ಥಗಳನ್ನೂ ಹೊಂದಿ ಕೊನೆಗೆ ಹರಿಯ ಪರಮಪದವನ್ನು ಹೊಂದುವರು.

೮೭ ಈ ಆನಂದರಾಮಾಯಣವು ಉತ್ತಮವಾದುದು. ಇದನ್ನು ಜಪಿಸಬೇಕು. ಪವಿತ್ರವಾದುದು. ಆದರಿಂದ ಕೇಳಬೇಕು ಇದು ಮಂಗಳವಸ್ತುಗಳೊಳಗೆಲ್ಲಾ ಮಂಗಳವನ್ನು ಉಂಟುಮಾಡತಕ್ಕದ್ದು. ಇದನ್ನು ಯಾವಾಗಲೂ ಸ್ಮರಿಸುತ್ತೇನೆ ಮತ್ತು ಭಕ್ತಿಯಿಂದ ನಮಸ್ಕರಿಸುತ್ತೇನೆ.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಆದಿಕಾವ್ಯವಾದ ಶ್ರೀಮದಾನಂದರಾಮಾಯಣದಲ್ಲಿ ಪೂರ್ಣಕಾಂಡದಲ್ಲಿ ಪಾರ್ವತೀ ಪರಮೇಶ್ವರ ಸಂವಾದದಲ್ಲಿ ಅಂತೆಯೇ ಶ್ರೀರಾಮದಾಸ ವಿಷ್ಣುದಾಸರ ಸಂವಾದದಲ್ಲಿ ಗ್ರಂಥಫಲಶ್ರುತಿಯೆಂಬ ಒಂಬತ್ತನೆಯ ಸರ್ಗವು ಮುಗಿದುದು.

ಒಂಭತ್ತನೆಯದಾದ ಪೂರ್ಣಕಾಂಡವು ಸಂಪೂರ್ಣವು.







ಮೈಸೂರು ಶಿವರಾಂಪೇಟೆಯಲ್ಲಿರುವ ಶ್ರೀ ಹನುಮಾನ್ ಪವರ್ ಪ್ರೆಸ್ಸಿನಲ್ಲಿ
ಪ್ರೊಪ್ರೈಟರ್ ಎನ್. ನಾರಾಯಣರಾಜುರವರಿಂದ ಮುದ್ರಿಸಲ್ಪಟ್ಟಿತು. 14-9-50.